# ಶ್ರೀ ಆಂಜನೇಯಸ್ವಾಮಿಯ ಜನ್ಮಸ್ಥಾನ
# ಅಂಜನಾದ್ರಿ - ತಿರುಮಲೆ

## ಪೌರಾಣಿಕ–ವಾಙ್ಮಯ–ಶಾಸನ–ಚಾರಿತ್ರಿಕ ಆಧಾರ ಸಹಿತ ನಿರೂಪಣೆ



TIRUMALA TIRUPATI DEVASTHANAMS
श्रीनिवासो विजयते

ತಿರುಮಲ ತಿರುಪತಿ ದೇವಸ್ಥಾನಗಳು 2022

# SRI ANJANEYASWAMY JANMASTHALA, ANJANADRI - TIRUMALA

**Telugu Original Edited by - Prof. V. Muralidhara Sharma**
Vice-Chancellor, National Sanskrit University, Tirupati &
President, Pandita Parishad

**Kannada Editor - Pandith Anand Tirthacharya Pagadala,**
Specil Officer, Dasasahitya Project, T.T.D

**Translators - Cuddapah Raghothama Rao**
**B. Padmaja**

# ಶ್ರೀ ಆಂಜನೇಯಸ್ವಾಮಿ ಜನ್ಮಸ್ಥಳ, ಅಂಜನಾದ್ರಿ – ತಿರುಮಲ (ಕನ್ನಡ ಅನುವಾದ)

**ತೆಲುಗು ಗ್ರಂಥ ಸಂಪಾದಕರು – ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ**
ಅಧ್ಯಕ್ಷರು ಪಂಡಿತಪರಿಷತ್ತು
ಕುಲಪತಿ, ರಾಷ್ಟ್ರೀಯ ಸಂಸ್ಕೃತ ವಿದ್ಯಾಲಯ, ತಿರುಪತಿ

**ಕನ್ನಡ ಗ್ರಂಥ ಸಂಪಾದಕರು – ಪಂಡಿತ ಆನಂದತೀರ್ಥಾಚಾರ್ಯ ಪಗಡಾಲ**
ವಿಶೇಷಾಧಿಕಾರಿಗಳು – ದಾಸಸಾಹಿತ್ಯ ಪ್ರಾಜೇಕ್ಟ್
ತಿರಮಲ ತಿರುಪತಿ ದೇವಸ್ಥಾನಗಳು

**ಅನುವಾದಕರು – ಕಡಪ ರಘೋತ್ತಮ ರಾವ್**
**ಬಿ. ಪದ್ಮಜ**

Copies :

Price : **ಅಮೂಲ್ಯ**

Published by
**Dr. K.S. Jawahar Reddy,** I.A.S.,
Executive Officer,
Tirumala Tirupati Devasthanams,
TIRUPATI - 517 507

Printed at : T.T.D. Press, Tirupati

# ತಿರುಮಲ ತಿರುಪತಿ ದೇವಸ್ಥಾನಗಳು

## ಆಂಜನೇಯಸ್ವಾಮಿ ಜನ್ಮಸ್ಥಳ ನಿರ್ಧಾರಣೆಗೆ ನಿಯೋಜಿಸಿರುವ ಪಂಡಿತ ಪರಿಷತ್

1. **ಅಧ್ಯಕ್ಷರು** – ಆಚಾರ್ಯ ವಿರಿವೆಂಟಿ ಮುರಳೀಧರ ಶರ್ಮ. ಶಿಕ್ಷಾಶಾಸ್ತ್ರ-ವ್ಯಾಕರಣ-ವಿಜ್ಞಾನ-ಇತಿಹಾಸ ಕುಲಪತಿ. ರಾಷ್ಟ್ರಿಯ ಸಂಸ್ಕೃತ ವಿಶ್ವವಿದ್ಯಾಲಯ. ಸಂಶೋಧನಾ ನಿಪುಣರು

**ಸದಸ್ಯರು**

1. **ಆಚಾರ್ಯ ಜಾನಮದ್ದಿ ರಾಮಕೃಷ್ಣಶಾಸ್ತ್ರಿ**
ಗ್ರಂಥ ರಚನಾಕಾರರು, ಪುರಾಣ ವಾಙ್ಮಯ ಪರಿಶೋಧಕರು
ನಿವೃತ್ತ ವ್ಯಾಕರಣ ಆಚಾರ್ಯರು.
ರಾಷ್ಟ್ರಿಯ ಸಂಸ್ಕೃತ ವಿಶ್ವವಿದ್ಯಾಲಯ.
ತಿರುಪತಿ.
2. **ಆಚಾರ್ಯ ರಾಣಿ ಸದಾಶಿವಮೂರ್ತಿ.**
ಸಂಸ್ಕೃತಸಾಹಿತ್ಯ ವಿಜ್ಞಾನಶಾಸ್ತ್ರ ನಿಪುಣರು
ಡೀನ್. ಅಕಾಡೆಮಿಕ್ ಅಫೇರ್ಸ್ .
ರಾಷ್ಟ್ರಿಯ ಸಂಸ್ಕೃತ ವಿಶ್ವವಿದ್ಯಾಲಯ.
ತಿರುಪತಿ.
3. **ಆಚಾರ್ಯ ಶಂಕರನಾರಾಯಣನ್**
"ತಾಮ್ರಶಾಸನ ನಾಯಕ" ಅವಾರ್ಡ್ ವಿಜೇತರು
ಸಾಹಿತ್ಯಶಾಸ್ತ್ರ ಅಧ್ಯಾಪಕರು. ಚೋಳ ಹಿಸ್ಟಾರಿಕಲ್ ರೀಸೆರ್ಚ್ ಸೆಂಟರ್.
ರಾಷ್ಟ್ರಿಯ ಸಂಸ್ಕೃತ ವಿಶ್ವವಿದ್ಯಾಲಯ, ತಂಜಾವೂರು.
ತಿರುಪತಿ.
4. **ಶ್ರೀ ವಿಜಯಕುಮಾರ ಜಾದವ್**
ನಿವೃತ್ತ ಸಂಚಾಲಕರು.
ಆಂಧ್ರಪ್ರದೇಶ ರಾಜ್ಯ ಪುರಾತತ್ವ ಮತ್ತು ಪ್ರದರ್ಶನ ಶಾಖೆಯ ನಿವೃತ್ತ ಕಾರ್ಯದರ್ಶಿ
5. **ಡಾ. ಆಕೆಳ್ಳ ವಿಭೀಷಣ ಶರ್ಮ**
ವಿಶೇಷ ಅಧಿಕಾರಿ, ಉನ್ನತ ವೇದಾಧ್ಯಯನ ಸಂಸ್ಥೆ.
ಅನ್ನಮಾಚಾರ್ಯ ಪ್ರಾಜೆಕ್ಟ್ ಡೈರೆಕ್ಟರ್ (ಇಂಛಾರ್ಜ್)
ತಿರುಮಲ ತಿರುಪತಿ ದೇವಸ್ಥಾನಗಳು. ತಿರುಪತಿ.

# ಪರಿವಿಡಿ

| | | |
|---|---|---|
| ನಿವೇದನೆ | – ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು | VI |
| ಮುನ್ನುಡಿ | – ಡಾ.ಕೆ.ಎಸ್. ಜವಹರ್ ರೆಡ್ಡಿಯವರು | VII |
| ಅಂಜನಾನಂದನಂ ವಂದೇ | – ಶ್ರೀ ಎ.ವಿ.ಧರ್ಮಾರೆಡ್ಡಿಯವರು | X |
| ಜಗದ್ಗುರು ಶ್ರೀರಾಮಭದ್ರಾಚಾರ್ಯ ಅವರ ದಿವ್ಯಸಂದೇಶ | | XIII-XV |
| ಶ್ರೀಶ್ರೀಶ್ರೀ ಸಿದ್ಧೇಶ್ವರಾನಂದ ಭಾರತೀಮಹಾಸ್ವಾಮಿಯವರ ದಿವ್ಯಸಂದೇಶ | | XVII |
| ಮಾತಾಜೀ ಶ್ರೀರಮ್ಯಾನಂದ ಭಾರತೀಸ್ವಾಮಿಯವರ ದಿವ್ಯಸಂದೇಶ | | XX |
| ಪೂಜ್ಯ ಶ್ರೀ ವಿದ್ಯಾಸ್ವರೂಪಾನಂದಸ್ವಾಮಿಯವರ ದಿವ್ಯಸಂದೇಶ | | XXIV |
| ಪೂಜ್ಯ ಶ್ರೀ ಪೆದ್ದ ಜೀಯರ್ ಸ್ವಾಮಿ ತಿರುಮಲ ತಿರುಪತಿ ದೇವಸ್ಥಾನಗಳು ಅವರ ದಿವ್ಯಸಂದೇಶ | | XXVI |
| ಪೂಜ್ಯ ಶ್ರೀ ಚಿನ್ನ ಜೀಯರ್ ತಿರುಮಲ ತಿರುಪತಿ ದೇವಸ್ಥಾನಗಳು ಅವರ ದಿವ್ಯಸಂದೇಶ | | XXIX |
| ಪೂಜ್ಯ ಶ್ರೀ ಮತ್ ಶ್ರೀ ವೆನ್ ಶಠಗೋಪ ಶ್ರೀ ರಂಗನಾಥಯತೀಂದ್ರ ಮಹಾದೇಶಿಕ ಸ್ವಾಮಿ ಅಹೋಬಿಲರವರ ಸಂದೇಶ | | XXXI |
| ಯತಿರಾಜ ಜೀಯರ್ ಸ್ವಾಮಿ ಶ್ರೀಯದುಗಿರಿ ಯತಿರಾಜ ಮಠ ಮೇಲುಕೋಟೆಯವರ ಸಂದೇಶ | | XXXII |
| 1008 ಶ್ರೀ ಶ್ರೀಮತ್ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ದಿವ್ಯಸಂದೇಶ | | XXXIII |
| 1008 ಶ್ರೀ ಶ್ರೀವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ದಿವ್ಯಸಂದೇಶ | | XXXV |
| 1008 ಶ್ರೀ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯಸಂದೇಶ | | XXXVI |
| 1008 ಶ್ರೀ ಶ್ರೀವಿದ್ಯೇಶತೀರ್ಥ ಶ್ರೀಪಾದಂಗಳವರ ದಿವ್ಯಸಂದೇಶ | | XL |
| 1008 ಶ್ರೀ ಶ್ರೀಸುಜಯನಿಧಿತೀರ್ಥ ಶ್ರೀಪಾದಂಗಳವರ ದಿವ್ಯಸಂದೇಶ | | XLII |
| ಜಗದ್ಗುರು ಶ್ರೀರಾಮಭದ್ರಾಚಾರ್ಯ ಅವರ ದಿವ್ಯಸಂದೇಶ | | XLIV |
| ವಿಶಾಖ ಶಾರದಾ ಪೀಠಾಧಿಪತಿಗಳು ಶ್ರೀಶ್ರೀಶ್ರೀ ಸ್ವರೂಪಾನಂದೇಂದ್ರ ಸ್ವಾಮಿಗಳ ಸಂದೇಶ | | LII |
| ವಿಶಾಖ ಶಾರದಾ ಪೀಠ ಉತ್ತರಾಧಿಕಾರಿಗಳು ಶ್ರೀಶ್ರೀಶ್ರೀ ಸ್ವಾತ್ಮಾನಂದೇಂದ್ರಸ್ವಾಮಿಗಳ ಸಂದೇಶ | | LIV |
| ಶ್ರೀ ಅಯೋಧ್ಯಾಸ್ವಾಮಿಗಳ ಅವರ ಸಂದೇಶ | | LV |
| ಶ್ರೀ ಕೋಟೇಶ್ವರ ಶರ್ಮ, ವಿಶ್ವ ಹಿಂದೂ ಪರಿಷತ್, ಅವರ ಸಂದೇಶ | | XIX |
| ಉಪೋದ್ಘಾತ | | LXIII |

| | | |
|---|---|---|
| 1. ಪುರಾಣಗಳ ಪ್ರಾಚೀನತೆ ಮತ್ತು ಅವುಗಳ ಪ್ರಾಮಾಣಿಕತೆ | – ಆಚಾರ್ಯ ವಿರಿವೆಂಟಿ ಮುರಳಿಧರಶರ್ಮ | 1 |
| 2. ಶ್ರೀಶಾಂಕರಭಾಷ್ಯದಲ್ಲಿ ಪುರಾಣೇತಿಹಾಸವಚನಗಳು | – ಆಚಾರ್ಯ ಜಾನುಮದ್ದಿ ರಾಮಕೃಷ್ಣಶಾಸ್ತ್ರಿ | 20 |
| 3. ಶ್ರೀ ವೇಂಕಟಾಚಲಮಾಹಾತ್ಮೆಯ ರುಜುವಾತುಗಳು | – ಡಾ॥ ಸಮುದ್ರಾಲ ವೇಂಕಟರಂಗ ರಾಮಾನುಜಾಚಾರ್ಯರು | 42 |
| 4. ಶ್ರೀವೇಂಕಟಾಚಲಮಾಹಾತ್ಮೆ –ಮತ್ತೆ ಕೆಲವು ವಿಶೇಷತೆಗಳು | – ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ | 51 |
| 5. ಶ್ರೀವೇಂಕಟಾಚಲೇತಿಹಾಸಮಾಲ–ಶ್ರೀವೇಂಕಟೇಶ್ವರತತ್ತ್ವ | – ಶ್ರೀ. ಈ.ಎ. ಸಿಂಗರಾಚಾರ್ಯರು | 56 |
| 6. ಪೌರಾಣಿಕ ಪ್ರಮಾಣಗಳು | – ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ<br>– ಆಚಾರ್ಯ ರಾಣಿ ಸದಾಶಿವಮೂರ್ತಿ | 61 |
| 7. ಹನುಮಂತನ ಜನ್ಮಸ್ಥಳ ತಿರುಮಲೆ (ಭೂಗೋಳ ಪ್ರಮಾಣಗಳೊಂದಿಗೆ) | – ಆಚಾರ್ಯ ರಾಣಿ ಸದಾಶಿವಮೂರ್ತಿ | 93 |
| 8. ತಿರುಮಲೆ ಬೆಟ್ಟಗಳು–ಅಂಜನಾದ್ರಿ ಪುರಾತತತ್ತ್ವ ಸಂಶೋಧನೆ | – ಶ್ರೀವಿಜಯ್ ಕುಮಾರ್ ಜಾದವ್ | 105 |
| 9. ಶ್ರೀಹರಿಯ ಭಕ್ತಿರಚನೆಗಳಲ್ಲಿ ಅಂಜನಾದ್ರಿ | – ಆಕೆಳ್ಳ ವಿಭೀಷಣಶರ್ಮ | 116 |
| 10. ವಾಙ್ಮಯ ಪ್ರಮಾಣಗಳು | – ಆಚಾರ್ಯ ಶಂಕರನಾರಾಯಣನ್ | 124 |
| 11. ವೈಷ್ಣವಸಾಹಿತ್ಯದಲ್ಲಿ ತಿರುಮಲೆ–ಅಂಜನಾದ್ರಿ | – ಆಚಾರ್ಯ ಚಕ್ರವರ್ತಿ ರಂಗನಾಥನ್ | 137 |
| 12. ಸಪ್ತಗಿರಿಗಳಲ್ಲಿ ಅಂಜನಾದ್ರಿಯ ಪ್ರಾಮುಖ್ಯತೆ | – ಅರ್ಚಕಂ ರಾಮಕೃಷ್ಣ ದೀಕ್ಷಿತುಲು | 147 |
| 13. ಹನುಮಂತನ ಜನ್ಮಸ್ಥಳದ ವಿಷಯದಲ್ಲಿ ವಿಭಿನ್ನ ಶ್ರುತಿಗಳು | | 156 |
| 14. ಆಂಜನೇಯನ ಚರಿತ್ರೆಯಲ್ಲಿನ ಕೆಲವು ಮುಖ್ಯ ಕ್ಷೇತ್ರಗಳು | – ಆಚಾರ್ಯ ರಾಣಿ ಸದಾಶಿವಮೂರ್ತಿ | 160 |
| 15. ಹನುಮಂತನ ಜನ್ಮ ಸ್ಥಳದ ವಿಷಯದಲ್ಲಿ ಕೆಲವು ಪ್ರಶ್ನೋತ್ತರಗಳು | | 177 |
| (ಅ) ಅನುಬಂಧ–1. ಸವಾಲ್ – ಏ–ಜವಾಬ್ | | 180 |
| (ಆ) ಅನುಬಂಧ–2 | | 184 |
| 15. ಪರಿಶೀಲಿಸಿರುವ ಗ್ರಂಥಗಳು | | 204 |
| ಕಾರ್ಯಕ್ರಮದ ಚಿತ್ರಮಾಲಿಕೆ | | 214 |

**Y.V. SUBBA REDDY**
**Ex-M.P.**
**CHAIRMAN**
T.T.DEVASTHANAMS BOARD

Cell : 98490 00916
Office : 0877-2263640
P.A. : 95055 59559 / 94911 94916
Res : 0864511111
e-mail : yvsubbareddymp@gmail.com
Office : Swarna Tirumala Rest House,
T.T.D., Tirumala.
Res. : House # 12, Rainbow Villas,
Navodaya Colony, Tadepalli,
AMARAVATHI - 522 501

# ತಿರುಮಲ ತಿರುಪತಿ ದೇವಸ್ಥಾನಗಳು

## ನಿವೇದನೆ

ಕಲಿಯುಗದಲ್ಲಿ ಶ್ರಿಮಹಾವಿಷ್ಣುವಿನ ಪ್ರತ್ಯಕ್ಷ ರೂಪ ಶ್ರೀವೇಂಕಟೇಶ್ವರಸ್ವಾಮಿ. ಶ್ರೀನಿವಾಸನು ತನ್ನೆಡೆಗೆ ಭಕ್ತಿಯಿಂದ ಬರುವ ಭಕ್ತರನ್ನು ವ್ಯತ್ಯಾಸವಿಲ್ಲದೇ ಎಲ್ಲರನ್ನೂ ರಕ್ಷಿಸುವಂತಹ ಕರುಣಾಮಯನು. ತಿರುಮಲೆಯ ದಿವ್ಯಕ್ಷೇತ್ರ ಎಷ್ಟೋ ಮಹಾನುಭಾವರ ಜನ್ಮಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ತ್ರೇತಾಯುಗದಲ್ಲಿ ತಿರುಮಲೆಯ ದಿವ್ಯಕ್ಷೇತ್ರದಲ್ಲಿ ಆಕಾಶಗಂಗೆಯು ಪ್ರವಹಿಸುತ್ತಿರುವ ಪುಣ್ಯಪ್ರದೇಶದಲ್ಲಿ ಅಂಜನಾದೇವಿಯ ತಪಃಫಲವಾಗಿ ಶ್ರೀಆಂಜನೇಯನು ಜನ್ಮಿಸಿದನೆಂದು, ಆದ್ದರಿಂದಲೇ ಆ ಪ್ರದೇಶಕ್ಕೆ ಅಂಜನಾದ್ರಿ ಎಂಬ ಹೆಸರು ಬಂದಿದೆ ಎಂಬ ಸತ್ಯವನ್ನು ವೇದವ್ಯಾಸರು ನಮಗೆ ಪ್ರಸಾದಿಸಿದ ಪುರಾಣಗಳಲ್ಲಿ ಉಲ್ಲೇಖಿಸಿದ್ದಾರೆ. ಅವುಗಳ ಸಂಕಲನ ರೂಪವನ್ನು ಭಗವದ್ರಾಮಾನುಜರು ಪುರಾವೆಗಳೊಂದಿಗೆ "ಶ್ರೀವೇಂಕಟಾಚಲಮಾಹಾತ್ಮ್ಯಂ"ಎಂಬ ಗ್ರಂಥದಲ್ಲಿ ಪ್ರಮಾಣಗಳೊಂದಿಗೆ ದೃಢಪಡಿಸಿದ್ದಾರೆ.

ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳವೆಂದು ಶ್ರೀಹರಿಯ ಭಕ್ತರೆಲ್ಲರಿಗೂ ಪೌರಾಣಿಕ–ವಾಙ್ಮಯ–ಶಾಸನ–ಚಾರಿತ್ರಕ ಆಧಾರಗಳೊಂದಿಗೆ ನಿರೂಪಿಸುತ್ತಿರುವ ಕೈಹೊತ್ತಿಗೆ ಈ **"ಶ್ರೀ ಆಂಜನೇಯಸ್ವಾಮಿಯ ಜನ್ಮಸ್ಥಳ ಅಂಜನಾದ್ರಿ –ತಿರುಮಲ"**. ತಿರುಮಲ ತಿರುಪತಿ ದೇವಸ್ಥಾನದ ಮಹಾನ್ ಪಂಡಿತರು, ಪೀಠಾಧಿಪತಿಗಳ ಅಭಿಪ್ರಾಯಗಳೊಂದಿಗೆ, ಅವರು ರಚಿಸಿರುವ ಪ್ರಬಂಧಗಳೊಂದಿಗೆ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದೇವೆ.

ಇದರಲ್ಲಿ ನೀಡಲಾಗಿರುವ ಸಂಶೋಧನಾಂಶಗಳನ್ನು ಶ್ರಿಹನುಮ ಕ್ಷೇತ್ರದ ಬಗೆಗೆ, ಶ್ರೀವೇಂಕಟೇಶ್ವರಸ್ವಾಮಿಯ ಮೇಲಿನ ವಿಶ್ವಾಸ, ಶ್ರದ್ಧಾಭಕ್ತಿಗಳನ್ನು, ದಾಸ್ಯಭಾವವನ್ನು ಮತ್ತಷ್ಟು ವರ್ಧಿಸುತ್ತವೆ ಎಂದು ಆಶಿಸುತ್ತಿದ್ದೇನೆ.

ಸದಾ ಶ್ರೀಶ್ರೀನಿವಾಸನ ಸೇವೆಯಲ್ಲಿ,

**ವೈವಿ.ಸುಬ್ಬಾರೆಡ್ಡಿ.**

**ಡಾ ॥ ಕೆ. ಎಸ್. ಜವಹರ್ ರೆಡ್ಡಿ, ಐ ಎ ಎಸ್**
**ಕಾರ್ಯನಿರ್ವಹಣಾಧಿಕಾರಿ**

ತಿರುಮಲ ತಿರುಪತಿ ದೇವಸ್ಥಾಗಳು
ಕೆ. ಟಿ. ರೋಡ್ ತಿರುಪತಿ – 517507

# ಮುನ್ನುಡಿ

**ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಂ ಅರೋಗತ।**
**ಅಜಾಡ್ಯಂ ವಾಕ್ಪಟುತ್ವಂ ಚ ಹನುಮತ್ ಸ್ಮರಣಾತ್ ಭವೇತ್ ॥**

ಹನುಮಂತನ ಸ್ಮರಣೆಮಾತ್ರದಿಂದಲೇ ಬುದ್ಧಿ, ಬಲ, ಯಶಸ್ಸು, ಧೈರ್ಯ, ನಿರ್ಭಯತೆ, ಆರೋಗ್ಯ, ಚೈತನ್ಯತೆ, ವಾಕ್ಪಟುತ್ವ ಇವೆಲ್ಲವೂ ನಮ್ಮದಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ.

"ವೇದಗಳೇ ಶಿಲೆಗಳಾಗಿ ನೆಲೆಸಿದೆ ಈ ಬೆಟ್ಟ" ಎಂದು ಅನ್ನಮಾಚಾರ್ಯರು ಕೀರ್ತಿಸಿರುವಂತೆ ತಿರುಮಲ ಅತ್ಯಂತ ಪವಿತ್ರವಾದ ಬೆಟ್ಟ. ಇಲ್ಲಿರುವ ಪ್ರತಿಯೊಂದು ಗಿಡಮರಗಳು, ಕಲ್ಲುಗಳು, ಅಷ್ಟೇ ಏಕೆ ಪ್ರತಿ ಅಣು, ರೇಣು, ತೃಣಗಳೆಲ್ಲವೂ ಭಗವಂತನ ಸ್ವರೂಪಗಳೇ ಆಗಿವೆ.

ತಿರುಮಲೆಯ ಸಪ್ತಗಿರಿಗಳಿಗೆ ಕೃತ–ತ್ರೇತ–ದ್ವಾಪರ–ಕಲಿಯುಗಗಳಲ್ಲಿ ಬಗೆಬಗೆಯ ಹೆಸರುಗಳು ಇರುವಂತೆ ನಮಗೆ ವೇಂಕಟಾಚಲ ಮಾಹಾತ್ಮೆಯಂತಹಾ ಗ್ರಂಥಗಳ ಮೂಲಕ ತಿಳಿದುಬರುತ್ತದೆ. ಕೃತಯುಗದಲ್ಲಿ ವೃಷಾದ್ರಿ ಎಂದು, ತ್ರೇತಾಯುಗದಲ್ಲಿ ಅಂಜನಾದ್ರಿ ಎಂದು, ದ್ವಾಪರಯುಗದಲ್ಲಿ ಶೇಷಶೈಲವೆಂದು, ಕಲಿಯುಗದಲ್ಲಿ ವೇಂಕಟಾದ್ರಿ ಎಂದು ಹೆಸರಾಯಿತೆಂದು ಭವಿಷ್ಯೋತ್ತರ ಪುರಾಣದಲ್ಲಿ ಉಲ್ಲೇಖಿಸಿದ್ದಾರೆ.

ತ್ರೇತಾಯುಗದಲ್ಲಿ ಆಂಜನೇಯನು ಈ ಗಿರಿಯಲ್ಲೇ ಜನ್ಮಿಸಿದ್ದರಿಂದ ಈ ಬೆಟ್ಟಕ್ಕೆ ಅಂಜನಾದ್ರಿ ಎಂದು ಹೆಸರು ಬಂದಿದೆ.

2019 ರಲ್ಲಿ ನಾನು ಭಗವಂತನ ಅನುಗ್ರಹದಿಂದ ತಿ.ತಿ.ದೇ ಕಾರ್ಯನಿರ್ವಾಹಣಾಧಿಕಾರಿಯಾಗಿ ಜವಾಬ್ದಾರಿಯನ್ನು ವಹಿಸಿಕೊಂಡ ಮೊಟ್ಟಮೊದಲು ನನಗೆ ಫೋನ್ ಮೂಲಕ ಒಂದು ಸಮಾಚಾರ ಬಂತು. ಅದರಲ್ಲಿ ಒಬ್ಬ ಅಜ್ಞಾತ ವ್ಯಕ್ತಿ ಹನುಮಂತನ ನಿಜವಾದ ಸ್ಥಳ ಅಂಜನಾದ್ರಿ ಎಂದು ಈ ವಿಷಯವನ್ನು ಪ್ರಪಂಚಕ್ಕೆ ತಿಳಿಯಪಡಿಸುವ ಜವಾಬ್ದಾರಿ ಕಾರ್ಯನಿರ್ವಹಣಾಧಿಕಾರಿಯಾಗಿ ನಿಮಗೆ ಇದೆ ಎಂದು ತಿಳಿಸಿದರು. ಅದು ಭಗವತ್ಸಂಕಲ್ಪ ಇರಬಹುದು. ಆಗಲೇ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಆಲಯ ನಿರ್ಮಾಣ ಮುಂದುವರೆಯುತ್ತಿತ್ತು. ಶ್ರೀಹನುಮತ್ ಜನ್ಮಭೂಮಿಯನ್ನು ಪ್ರಪಂಚಕ್ಕೆ ತಿಳಿಯಪಡಿಸುವ ಹೊಣೆಯನ್ನು ಪರಮಾತ್ಮನು ನನಗೆ ಒಪ್ಪಿಸಿದ್ದಾನೆಂದು ನಾನು ಭಾವಿಸಿದೆ. ಮರುದಿನ ಈ ವಿಷಯವನ್ನು ತಿ.ತಿ.ದೆ ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರಿ ಎ.ವಿ.ಧರ್ಮಾರೆಡ್ಡಿಯವರ ಜೊತೆ, ಅಂದಿನ ಅನ್ನಮಾಚಾರ್ಯ ಪ್ರಾಜೆಕ್ಟ್ ಡೈರೆಕ್ಟರ್ ಅವರೊಂದಿಗೆ ಚರ್ಚಿಸಲಾಯಿತು. ಅನ್ನಮಾಚಾರ್ಯ ಪ್ರಾಜೆಕ್ಟ್ ಡೈರೆಕ್ಟರ್ ಅವರು ಈ ವಿಷಯವನ್ನು ತಾನೂ ಕೆಲವು ಪುರಾಣಗಳಲ್ಲಿ ಓದಿರುವುದಾಗಿ ಇದನ್ನು ನಿರೂಪಿಸುವುದಕ್ಕಾಗಿ ಕೆಲವು ಪಂಡಿತರೊಂದಿಗೆ ಒಂದು ಪಂಡಿತ ಸಂಶೋಧನಾ ಮಂಡಲಿಯನ್ನು ಏರ್ಪಾಟು ಮಾಡೋಣವೆಂದು ಸಲಹೆ ನೀಡಿದರು.

ನಂತರ ಪ್ರಮುಖ ಉಪನ್ಯಾಸಕರಾದ ಶ್ರೀ ಆಕೆಳ್ಳ ವಿಭೀಷಣ ಶರ್ಮ ಅವರ ಸಹಕಾರದೊಂದಿಗೆ ಅಂದಿನ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಉಪಕುಲಪತಿಯಾದ ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ ಅವರ ಅಧ್ಯಕ್ಷತೆಯಲ್ಲಿ , ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಆಚಾರ್ಯರಾದ ಡಾ॥ ಜಾನಮದ್ದಿ ರಾಮಕೃಷ್ಣ ಶಾಸ್ತ್ರಿ, ಡಾ॥ ರಾಣಿ ಸದಾಶಿವಮೂರ್ತಿ, ಆಚಾರ್ಯ ಶಂಕರನಾರಾಯಣನ್, ಆಂಧ್ರಪ್ರದೇಶ್ ರಾಜ್ಯ ಪ್ರಾಚ್ಯ ಪ್ರದರ್ಶನ ಶಾಲೆಯ ನಿವೃತ್ತ ಉಪಸಂಚಾಲಕರಾದ ಶ್ರೀ ವಿಜಯಕುಮಾರ್ ಜಾದವ್, ತಿ.ತಿ.ದೇ ಉನ್ನತ ವೇದಾಧ್ಯಯನ ಸಂಸ್ಥೆಯ ಪ್ರತ್ಯೇಕಾಧಿಕಾರಿ ಡಾ॥ ಆಕೆಳ್ಳ ವಿಭೀಷಣ ಶರ್ಮ ಅವರೊಂದಿಗೆ ಒಂದು ಪಂಡಿತ ಮಂಡಲಿಯನ್ನು ಏರ್ಪಡಿಸಿ, ಹನುಮಂತನ ಜನ್ಮ ಭೂಮಿಯನ್ನು ನಿರ್ಧರಿಸುವ ಜವಾಬ್ದಾರಿಯನ್ನು ವಹಿಸಲಾಯಿತು.

ಪಂಡಿತ ಸಂಶೋಧನಾ ಮಂಡಲಿಯ ಸದಸ್ಯರು ಮೂರು ತಿಂಗಳಕಾಲ ಪೌರಾಣಿಕ, ಚಾರಿತ್ರಿಕ, ಭೌಗೋಳಿಕ, ಶಾಸನ ಆಧಾರಗಳನ್ನು ಪರಿಶೀಲಿಸಿ, ತಿರುಮಲೆಯಲ್ಲಿ ಆಕಾಶಗಂಗ ತೀರ್ಥ ಇರುವ ಪ್ರದೇಶವಾದ ಅಂಜನಾದ್ರಿ ಹನುಮಂತನು ಹುಟ್ಟಿದ ಸ್ಥಳವೆಂದು ನಿರ್ಧರಿಸುತ್ತಾ ತಮ್ಮ ಅಭಿಪ್ರಾಯಗಳನ್ನು, ಅದಕ್ಕೆ ಸರಿಯಾದ ಆಧಾರಗಳನ್ನು ಜೊತೆಮಾಡಿ ನಿವೇದಿಕೆಯನ್ನು ಸಮರ್ಪಿಸಿದರು.

ಈ ವಿಷಯವನ್ನು ಪ್ರಪಂಚಕ್ಕೆ ತಿಳಿಯಪಡಿಸುವ ಪ್ರತಿಪಾದನೆಯನ್ನು ಶ್ರೀಪ್ಲವನಾಮಸಂವತ್ಸರ ಯುಗಾದಿಯಂದು ಪ್ರಕಟಿಸಿದರೆ ಚೆನ್ನಾಗಿರುತ್ತದೆಂದು ಭಾವಿಸಿ ಹನುಮಂತನ ಜನ್ಮ ಸ್ಥಳದ ನಿರ್ಧಾರವನ್ನು ಆಧಾರಗಳೊಂದಿಗೆ ಇರುವ ಒಂದು ಚಿಕ್ಕ ಕೈಪಿಡಿಯನ್ನು ಮುದ್ರಿಸಿದೆವು.

ನಮ್ಮ ಸಂಕಲ್ಪವು ಒಂದಾದರೆ ಭಗವಂತನ ಸಂಕಲ್ಪವು ಬೇರೆ ಇರುತ್ತದೆ. ಈ ಹನುಮಂತನ ಜನ್ಮಭೂಮಿಯ ಪ್ರತಿಪಾದನೆ ಯುಗಾದಿಯಿಂದ ಹನುಮಂತನ ಸ್ವಾಮಿಯಾದ ಶ್ರೀರಾಮಚಂದ್ರನ ಜನ್ಮದಿನವಾದ ಶ್ರೀರಾಮನವಮಿಯಂದು ತಿರುಮಲೆಯ ನಾದನೀರಾಜನ ಮಂಟಪದ ಮೇಲೆ ಪ್ರಕಟಿಸುವುದಕ್ಕೆ ಏರ್ಪಾಟುಗಳು ನಡೆದುವು. ಅಕಸ್ಮಾತ್ತಾಗಿ ತಿರುಮಲೆಯ ಶ್ರೀನಿವಾಸನ ದರ್ಶನಾರ್ಥವಾಗಿ ತಮಿಳುನಾಡಿನ ಗವರ್ನರ್ ಮಾನ್ಯಶ್ರೀ ಬನ್ವರ್ ಲಾಲ್ ಪುರೋಹಿತ್ ಅವರು ಬಂದರು. ಅವರಿಗೆ ಈ ಪ್ರಕಟಣೆಯ ವಿಷಯವನ್ನು ತಿಳಿಸುತ್ತಲೇ ತಾವೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇವೆಂದು ಉತ್ಸಾಹದಿಂದ ಮುಂದೆಬಂದರು.

21–04–2021 ಶ್ರೀರಾಮನವಮಿಯಂದು ತಮಿಳುನಾಡಿನ ರಾಜ್ಯಪಾಲರಾದ ಮಾನ್ಯಶ್ರೀ ಬನ್ವರ್ ಲಾಲ್ ಪುರೋಹಿತ್, ಹನುಮಂತನ ಜನ್ಮಭೂಮಿಯ ನಿರ್ಧಾರವನ್ನು ಪಂಡಿತ ಸಂಶೋಧಕ ಮಂಡಲಿಯ ಸದಸ್ಯರೊಂದಿಗೆ ಸೇರಿ, ತಿರುಮಲೆಯ ಶ್ರೀಹರಿಯ ಸನ್ನಿಧಾನದಲ್ಲಿ ನಾದನೀರಾಜನ ಮಂಟಪ ವೇದಿಕೆಯಲ್ಲಿ ಸಾವಿರಾರು ಜನ ಭಕ್ತರು, ವಿವಿಧ ಪತ್ರಕರ್ತರು, ಪ್ರಸಾರಮಾಧ್ಯಮಗಳ ಸಮಕ್ಷಮದಲ್ಲಿ "ಹನುಮಂತನ ಜನ್ಮಸ್ಥಳ ತಿರುಮಲೆಯಲ್ಲಿ ಆಕಾಶಗಂಗೆ ನೆಲೆಸಿರುವ ಅಂಜನಾದ್ರಿಯೇ"ಎಂದು ವಿವಿಧ ಆಧಾರಗಳೊಂದಿಗೆ ಪ್ರತಿಪಾದಿಸಲಾಯಿತು. ಯಾರಿಗಾದರೂ ಅಭ್ಯಂತರಗಳು ಇದ್ದರೇ ತಿಳಿಸಬೇಕೆಂದು ಕೋರಲಾಯಿತು.

ಆದರೆ ಹನುಮಂತನ ಜನ್ಮಭೂಮಿ ತಿರುಮಲೆಯ ಆಕಾಶಗಂಗೆ ಎಂದು ಪ್ರತಿಪಾದನೆ ಈಗ ಯಾಕೆ ಬಂತೆಂದು ಕೆಲವರು ವಾದಿಸಿದರು. ಅದಕ್ಕೆ ಉತ್ತರವೆಂದರೆ ಭಗವಂತನ ಸಂಕಲ್ಪ ಎಂದು ಹೇಳಬಲ್ಲೆ. ಚರವಾಣಿ ಸಮಾಚಾರ ರೂಪದಲ್ಲಿ ನನ್ನನ್ನು ಪ್ರೇರೇಪಿಸಿದ್ದು, ಬಹುಶಃ ಹನುಮಂತ ತನ್ನ ಪ್ರಭುವಾದ ಶ್ರೀರಾಮಚಂದ್ರನ ಜನ್ಮಭೂಮಿಯ ನಿರ್ಧಾರ ನಡೆದ ನಂತರವೇ ತನ್ನ ಜನ್ಮಭೂಮಿಯ ನಿರ್ಧಾರಣೆ ನಡೆಯಲಿ ಎಂದು ಸಂಕಲ್ಪಿಸಿದಂತಿದೆ.

2021 ಜುಲೈ 30, 31 ತಾರೀಖುಗಳಲ್ಲಿ ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದವರ ಮುಂದಾಳುತ್ವದಲ್ಲಿ "ಹನುಮಜ್ಜನ್ಮಭೂಮಿ ನಿಜ ನಿರ್ಧಾರಣೆ" ಎನ್ನುವ ಅಂಶದ ಬಗೆಗೆ ಒಂದು ಅಂತರ್ಜಾಲ ಸದಸ್ಸು (ವೆಬಿನಾರ್) ಏರ್ಪಾಟು ಮಾಡಲಾಗಿತ್ತು. ಆ ಸದಸ್ಸಿನಲ್ಲಿ ಪ್ರಪಂಚದ ನಾಲ್ಕೂ ಮೂಲೆಗಳಿಂದ ಅನೇಕ ಪಂಡಿತರು, ಪೀಠಾಧಿಪತಿಗಳು ಪಾಲ್ಗೊಂಡಿದ್ದರು. ಚಿತ್ರಕೂಟ ಜಗದ್ಗುರು ಶ್ರೀರಾಮಭದ್ರಾಚಾರ್ಯರು ಈ ಸದಸ್ಸನ್ನು ಉದ್ದೇಶಿಸಿ ಮಂಗಳಾಶಾಸನವನ್ನು ಹೇಳುತ್ತಾ –"ನಾನು ಮಾತ್ರಾ ಸಂಪೂರ್ಣ ನಂಬಿಕೆಯಿಂದ

ತಿರುಮಲೆಯ ಬೆಟ್ಟದಲ್ಲೇ ಆಂಜನೇಯನು ಹುಟ್ಟಿದ ಎಂದು ಒಪ್ಪುತ್ತಿದ್ದೇನೆ. ವಾಯುಪುರಾಣ ಮುಂತಾದ ಪುರಾಣಗಳಲ್ಲಿ ಆ ವಿಷಯವನ್ನು ಸ್ಪಷ್ಟವಾಗಿ ತಿಳಿಸುತ್ತಿವೆ"ಎಂದು ಹೇಳಿದರು. ಕೆಲವರು ಅಭ್ಯಂತರವನ್ನು ವ್ಯಕ್ತಪಡಿಸಿದರೂ ಅದಕ್ಕೆ ಸರಿಯಾದ ಆಧಾರಗಳು ಇಲ್ಲದಿರುವುದರಿಂದ ವಾದಕ್ಕೆ ನಿಲ್ಲದಾಯಿತು. ತಿರುಮಲೆಯ ಆಕಾಶಗಂಗಾತೀರ್ಥದಲ್ಲಿರುವ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ ಎಂದು ನಿರ್ಧಾರವಾಗಿದೆ.

ನಾದನೀರಾಜನ ವೇದಿಕೆಯಲ್ಲಿ ಆ ದಿನ ಪ್ರಕಟಿಸಿದ ರೀತಿಯಲ್ಲೆ ತಿರುಮಲೆಯ ಆಕಾಶಗಂಗಾ ತೀರ್ಥದಲ್ಲಿ ನೆಲೆಸಿರುವ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳವೆಂದು ನಿರ್ಧಾರಮಾಡುತ್ತಾ ಈಗ ಈ ಪುಸ್ತಕವನ್ನು ಆಧಾರಪೂರ್ವಕವಾಗಿ ವಿವಿಧ ಪುರಾವೆಗಳೊಂದಿಗೆ ತಿ.ತಿ.ದೇ ಮುದ್ರಣ ಮಾಡುತ್ತಿದೆ. ಇದರಲ್ಲಿ ವಿವಿಧ ಪೀಠಾಧಿಪತಿಗಳು, ಮಠಾಧಿಪತಿಗಳು ತಮ್ಮ ಮಂಗಳಾಶಾಸನಗಳ ಮೂಲಕ ಹನುಮಂತನ ಜನ್ಮಸ್ಥಳ ತಿರುಮಲೆಯ ಅಂಜನಾದ್ರಿ ಎಂದು ದೃಢಪಡಿಸಿದ್ದಾರೆ.

ಹನುಮಂತನ ಜನ್ಮಸ್ಥಳವಾದ ಆಕಾಶಗಂಗೆಯಲ್ಲಿ ನೆಲೆಸಿರುವ ಅಂಜನಾದ್ರಿಯಲ್ಲಿ ಆಲಯವನ್ನು ನಿರ್ಮಾಣ ಮಾಡುವ ಸಲುವಾಗಿ ಫೆಬ್ರವರಿ 16, 2022ರಂದು ವೇದಪಂಡಿತರು ನಿರ್ಧರಿಸಿದ ಪ್ರಕಾರ ಶಂಕುಸ್ಥಾಪನೆಯನ್ನು ಮಾಡಿ ಭೂಮಿಪೂಜೆಯನ್ನು ಮಾಡಲಾಗಿದೆ.

ಹನುಮಂತನ ಜನ್ಮಸ್ಥಳದ ನಿರ್ಧಾರದ ಕಾರ್ಯಕ್ರಮದ ತಮ್ಮ ಕರ್ತವ್ಯವನ್ನು ಪಂಡಿತ ಸಂಶೋಧನಾ ಮಂಡಲಿಯ ಸದಸ್ಯರಿಗೆ ತಿ.ತಿ.ದೇ ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಎ.ವಿ.ಧರ್ಮಾರೆಡ್ಡಿಯವರಿಗೆ, ಸಹಕಾರವನ್ನು ನೀಡಿದ ಸಿಬ್ಬಂದಿಯವರಿಗೆ, ಆಧಾರಗಳನ್ನು ಒದಗಿಸುವುದರಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಧನ್ಯವಾದಗಳನ್ನು ತಿಳಿಸುತ್ತಾ, ಎಲ್ಲರಿಗೂ ಶ್ರೀವೇಂಕಟೇಶ್ವರನು ತನ್ನ ಕೃಪಾಶೀರ್ವಾದವನ್ನು ನೀಡಿ ಹರಸಲಿ ಎಂದು ದೇವದೇವನಲ್ಲಿ ಪ್ರಾರ್ಥಿಸುತ್ತಿದ್ದೇನೆ.

ಇಂತಿ

ಶ್ರೀವೇಂಕಟೇಶ್ವರ ಪಾದಪದ್ಮಗಳ ಆರಾಧಕ

**ಡಾ॥ ಕೆ.ಎಸ್.ಜವಹರ್ ರೆಡ್ಡಿ,**

**ಕಾರ್ಯನಿರ್ವಹಣಾಧಿಕಾರಿ. ತಿ.ತಿ.ದೇ**

**ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್**
ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ

## ಅಂಜನಾನಂದನಂ ವಂದೇ

ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ಶ್ರೀವೇಂಕಟೇಶ್ವರಸ್ವಾಮಿಯ ನಿವಾಸವಾದ ತಿರುಮಲೆಯ ಗಿರಿಯಲ್ಲಿರುವ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳವೆಂದು ಹಲವು ಪುರಾಣಗಳಲ್ಲಿ ಎಂದೋ ತಿಳಿಸಿದ್ದರೂ, ಅವರ ಜನ್ಮಸ್ಥಳದ ವಿಷಯದ ಬಗೆಗೆ ಜನಸಾಮನ್ಯರಲ್ಲಿ ಇಲ್ಲಿಯವರೆಗೂ ಹೆಚ್ಚಿಗೆ ಪ್ರಚಾರವಿಲ್ಲದಿರುವುದೂ, ಈಗ ಈ ವಿಷಯ ಹೊರಬರುತ್ತಿರುವುದರ ಹಿಂದೆ ಆಂಜನೇಯನ ಸಂಕಲ್ಪವೇ ಕಾರಣವೆಂದು ಇತ್ತೀಚೆಗೆ ನಡೆದ ಪರಿಣಾಮಗಳ ಮೂಲಕ ತಿಳಿದುಬರುತ್ತಿದೆ.

ಈ ವಿಷಯದ ಬಗೆಗೆ ಸಿಂಹಾವಲೋಕನ ಮಾಡಿದಾಗ ಪಂಡಿತಪರಿಷತ್ತಿನ ಮೂಲಕ ಸಮರ್ಪಿಸಲ್ಪಟ್ಟ ನಿವೇದಿಕೆಯ ಆಧಾರದ ಮೇಲೆ ಹನುಮಂತನ ಜನ್ಮಸ್ಥಳದ ವಿಷಯದ ಬಗೆಗೆ ಪುರಾಣಕಾಲದಲ್ಲೇ ಪ್ರಸ್ತಾವಿಸಲಾಗಿದೆ ಎಂದು ತಿಳಿದುಬರುತ್ತಿದೆ. ಆದರೂ ತನ್ನ ಪ್ರಭುವಾದ ಶ್ರೀರಾಮನ ಆಲಯದ ನಿರ್ಮಾಣದ ಸಿದ್ಧತೆಗಳು ನಡೆದ ಬಳಿಕ ತನ್ನ ಜನ್ಮಸ್ಥಾನದ ರಹಸ್ಯವನ್ನು ಲೋಕಕ್ಕೆ ತಿಳಿಸಬೇಕೆಂದು ಆಂಜನೇಯಸ್ವಾಮಿಯ ಸಂಕಲ್ಪವೇ ಇರಬೇಕು. ರಾಮ ಜನ್ಮಭೂಮಿಯ ಬಗೆಗೆ ಉಚ್ಚನ್ಯಾಯಾಲಯವು ತೀರ್ಪು ನೀಡಿದ ನಂತರ, ಅದರ ಅನುಸಾರವಾಗಿ ಭಾರತದ ಪ್ರಧಾನಮಂತ್ರಿಯವರ ಮೂಲಕ ಶ್ರೀರಾಮಾಲಯ ನಿರ್ಮಾಣಕ್ಕೆ 2020 ಆಗಸ್ಟು 5ನೆಯ ತಾರೀಖಿನಂದು ಶಂಕುಸ್ಥಾಪನೆ ನಡೆದದ್ದು, ನಂತರವೇ ಆಂಜನೇಯನ ಜನ್ಮಸ್ಥಳದ ಬಗೆಗೆ ಒಂದು ನಿರ್ಧಾರಕ್ಕೆ ಬರುವುದಕ್ಕೆ ಸಂಕಲ್ಪ ನಡೆಯಿತು.

ಇದು ಹೀಗಿರುವಾಗ, ತಿರುಮಲೆಯ ಚರಿತ್ರೆಯಲ್ಲಿ ಮೊಟ್ಟಮೊದಲಬಾರಿಗೆ ಶ್ರೀಶ್ರೀನಿವಾಸನ ಸನ್ನಿಧಾನದಲ್ಲಿ ತಿರುಮಲೆಯ ನಾದ ನೀರಾಜನ ಮಂಟಪದಲ್ಲಿ 11.06.2020 ರಿಂದ ಸುಂದರಕಾಂಡದಲ್ಲಿನ ಪ್ರತಿಯೊಂದು ಶ್ಲೋಕದ ಪಾರಾಯಣ, ಅರ್ಥ ತಾತ್ಪರ್ಯಗಳೊಂದಿಗೆ ಪ್ರವಚನ ಕಾರ್ಯಕ್ರಮವನ್ನು ಅಡ್ಡಿಆತಂಕಗಳಿಲ್ಲದೇ ನಿರ್ವಹಿಸಲಾಯಿತು. ಶ್ರೀಮದ್ರಾಮಾಯಣದಲ್ಲಿರುವ ಎಲ್ಲಾ ಕಾಂಡಗಳಿಗಿಂತಲೂ ಸುಂದರಕಾಂಡ ಅತ್ಯಂತ ವಿಶಿಷ್ಟತೆಯನ್ನು ಹೊಂದಿದೆ. ಅದರಲ್ಲಿ ಹನುಮಂತನ ವೈಶಿಷ್ಟ್ಯತೆಯನ್ನು ತಿಳಿಯಪಡಿಸುವುದೇ ಸುಂದರಕಾಂಡದ ಮುಖ್ಯ ಉದ್ದೇಶವೆಂದು ಎಲ್ಲರಿಗು ತಿಳಿದಿರುವ ವಿಷಯವೇ ಆಗಿದೆ. ಆ ಪಾರಾಯಣ ಕಾರ್ಯಕ್ರಮ ನಡೆದ ಕೆಲದಿನಗಳಲ್ಲೇ ಡಾ॥ಕೆ.ಎಸ್.ಜವಹರ್ ರೆಡ್ಡಿಯವರಿಗೆ ಹನುಮಂತನ ಜನ್ಮಸ್ಥಳದ ಬಗೆಗೆ ತಿಳಿದುಕೊಳ್ಳಬೇಕೆಂದು ಯೋಚನೆ ಉಂಟಾಗಿದ್ದು, ನುರಿತ ಪಂಡಿತ ಪರಿಷತ್ತನ್ನು ಏರ್ಪಾಟು ಮಾಡಿ, ಅದಕ್ಕೆ ಸರಿಯಾದ ಆಧಾರಗಳನ್ನು ಶೇಖರಿಸುವ ಜವಾಬ್ದಾರಿಯನ್ನು ನನಗೆ ವಹಿಸಿದ್ದು, ಅವರ ಆದೇಶದ ಮೇರೆಗೆ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಯವರನ್ನು ನಾನು ಭೇಟಿಯಾಗಿದ್ದು, ಅವರು ಈ ಬೃಹತ್ಕಾರ್ಯಕ್ರಮವನ್ನು ನಡೆಸಿಕೊಡುವುದಕ್ಕೆ ಮುಂದಕ್ಕೆ ಬಂದಿದ್ದು, ಅವರ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ಏರ್ಪಾಟು ಮಾಡಿದ್ದು, ತಿರುಮಲೆಯೇ ಆಂಜನೇಯಸ್ವಾಮಿಯ ಜನ್ಮಸ್ಥಳವೆಂದು ಆ ಕಮಿಟಿ ನೀಡಿದ ಆಧಾರಗಳಿಂದ ನಿರ್ಧರಿಸಿ, ತಮ್ಮ ಪ್ರಾಥಮಿಕ ನಿವೇದಿಕೆಯನ್ನು ಶ್ರೀರಾಮನವಮಿಯಂದು(21–04–2021) ನಾದನೀರಾಜನದ ವೇದಿಕೆಯಲ್ಲಿ ಸಭಾಮುಖವಾಗಿ ತಮಿಳುನಾಡು ರಾಜ್ಯಪಾಲರಾದ ಶ್ರೀಭನ್ವರೀಲಾಲ್ ಪುರೋಹಿತ್ ಅವರ ಸಮಕ್ಷಮದಲ್ಲಿ ಪ್ರಕಟಿಸಿದ್ದು, ಈ ಅಭಿಪ್ರಾಯದ ಬಗೆಗೆ ಯಾರಿಗಾದರೂ ಏನಾದರೂ ಸಂದೇಹವು ಉಂಟಾದರೆ ಸಾಕ್ಷ್ಯಾಧಾರಗಳಿಂದ ತಿಳಿಸಬೇಕೆಂದು ಪತ್ರಿಕೆಯ ಮೂಲಕ ತಿಳಿಸಿದ್ದು, ಇವೆಲ್ಲವೂ ಸರಸರನೆ ನಡೆದುಹೋಯಿತು. ಈ ಪರಿಣಾಮಗಳೆಲ್ಲವನ್ನೂ ನೋಡುತ್ತಿದ್ದರೆ ಇದು ಕೇವಲ ಆಂಜನೇಯನ ಸಂಕಲ್ಪ ಮತ್ತು ಆತನ ಅನುಗ್ರಹದಿಂದ ಮಾತ್ರ ಸಾಧ್ಯವಾಗಿದೆ ಎಂದು ನನ್ನ ವಿಶ್ವಾಸ. ಸುಂದರಕಾಂಡ, ಪ್ರವಚನವನ್ನು ನೀಡಿದ ಡಾಕ್ಟರ್ ಆಕೆಳ್ಳ ವಿಭೀಷಣ ಶರ್ಮಾವರು, ಆಂಜನೇಯನ

ಉಪಾಸಕರಾದ ಆಚಾರ್ಯ ಮುರಳಿಧರ ಶರ್ಮ ಅವರು, ಹೀಗೆ ಆಂಜನೇಯಸ್ವಾಮಿಯವರ ಅನುಗ್ರಹಕ್ಕೆ ಪಾತ್ರರಾಗವುದಕ್ಕೆ ಯಾವುದೋ ಒಂದು ರೀತಿಯಲ್ಲಿ ಅವಕಾಶವನ್ನು ಹೊಂದಿದವರೇ ಈ ಕಮಿಟಿ ಸದಸ್ಯರಾಗಿರುವುದು, ಅವರುಗಳ ಮೂಲಕ ಹನುಮಂತನ ಜನ್ಮಸ್ಥಳ ನಿರ್ಧಾರ ಮಾಡುವುದು, ಆಂಜನೇಯನು ತಮ್ಮ ಕೆಲಸವನ್ನು ಸ್ವತಹಾ ಪೂರ್ಣಮಾಡಿಕೊಂಡಿರುವದಕ್ಕೆ ನಿದರ್ಶನವಾಗಿದೆ.

ಅದೇ ರೀತಿ ತಿ.ತಿ.ದೇ ಷೋಡಶದಿನ ಸುಂದರಕಾಂಡ ಪಾರಾಯಣ ಕಾರ್ಯಕ್ರಮವನ್ನು "ರಾಘವೋ ವಿಜಯಂ ದದ್ಯಾತ್ ಮಮ ಸೀತಾಪತಿಃ ಪ್ರಭುಃ", "ರಾಘವಸ್ಯ ಪದದ್ವಂದ್ವಂ ದದ್ಯಾದಮಿತವೈಭವಮ್"ಎಂಬ ಮಂತ್ರರೂಪ ವಾಕ್ಯಗಳನ್ನು ಅನುಸರಿಸಿ ಸಂಖ್ಯಾಶಾಸ್ತ್ರಗಳ ಅನುಗುಣವಾಗಿ ಎರಡು ಪರ್ಯಾಯಗಳನ್ನು ನಿರ್ವಹಿಸಲಾಯಿತು. ಹೇಗೆ ಆಂಜನೇಯನು ವಿಜಯವಂತವಾಗಿ ಲಂಕೆಗೆ ಪ್ರಯಾಣ ಮಾಡಿ, ಸೀತೆಯ ಸುಳಿವನ್ನು ತಿಳಿದುಕೊಂಡು ಶ್ರೀರಾಮನಿಗೆ ವಿವರಗಳನ್ನು ತಿಳಿಸಿದನೆಂದು ಸುಂದರಕಾಂಡವು ತಿಳಿಯಪಡಿಸುತ್ತದೋ, ಅದೇ ಕ್ರಮದಲ್ಲಿ ಪಂಡಿತ ಪರಿಷತ್ತಿನಡಿಯಲ್ಲಿ ಧರ್ಮಗಿರಿಯಲ್ಲಿ ತಾರೀಖು 31.05.2021 ಅಂದು ಸುಮಾರು ಹದಿನೆಂಟು ಗಂಟೆಗಳ ಕಾಲ ಸುಂದರಕಾಂಡ ಪಾರಾಯಣವನ್ನೂ ತಿ.ತಿ.ದೇ ನಿರ್ವಹಿಸಿದೆ. ಕರೋನಾ ಕಾರಣದಿಂದಾಗಿ ಇಡೀ ಪ್ರಪಂಚವೇ ಅಲ್ಲಕಲ್ಲೋಲ ಪರಿಸ್ಥಿತಿಯಲ್ಲಿ ಇದ್ದರೂ ಈ ಕಾರ್ಯಕ್ರಮಗಳೆಲ್ಲಾ ನಿರ್ವಿರಾಮವಾಗಿ ನಡೆಯುತ್ತಿದೆ ಎಂದರೆ ಅದಕ್ಕೆ ಕಾರಣ ಆಂಜನೇಯಸ್ವಾಮಿಯ ಪರಿಪೂರ್ಣ ಅನುಗ್ರಹವೆಂದು ನಿಸ್ಸಂಶಯವಾಗಿ ಹೇಳಬಹುದು.

ಭಗವದ್ರಾಮಾನುಜರು ಪುರಾಣ ಭಾಗಗಳನ್ನು ಸ್ವೀಕರಿಸಿ ಒಂದು ಕ್ರಮಪದ್ಧತಿಯಲ್ಲಿ ಯಾದವರಾಜನ ಸಭೆಯಲ್ಲಿ ಉಲ್ಲೇಖಿಸಿದರೆಂದು, ಈ ಪುರಾಣಭಾಗಗಳೆಲ್ಲವೂ "ಶ್ರೀ ವೇಂಕಟಾಚಲ ಮಾಹಾತ್ಮ್ಯಂ"ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ ಎಂದು ಅನಂತಾಚಾರ್ಯರು ಇತಿಹಾಸ ಮಾಲಾ ಗ್ರಂಥದಲ್ಲಿ ವಿವರಿಸಿದಂತೆ ಹಲುವುಕಡೆ ತಿಳಿಸಿದ್ದಾರೆ. ಆದ್ದರಿಂದ ಭಾರತೀಯ ಸಂಸ್ಕೃತಿಗೆ ಆಧಾರವಾದ ಪುರಾಣಗಳನ್ನು ನಂಬಿ, ತಿರುಮಲೆಯ ಕ್ಷೇತ್ರವೇ ಹನುಮಂತನ ಜನ್ಮಸ್ಥಾನವೆಂದು ಉಲ್ಲೇಖಿಸಿರುವ ಪುರಾಣವಚನಗಳನ್ನು ಒಪ್ಪಬೇಕಾದ ಅಗತ್ಯವಿದೆ. ಈ ಅಭಿಪ್ರಾಯದಿಂದ ವೆಬಿನಾರ್ ನಲ್ಲಿ ಪಾಲ್ಗೊಂಡ ಪೀಠಾಧಿಪತಿಗಳು, ಮಠಾಧಿಪತಿಗಳು, ಪಂಡಿತರು, ವಿಶ್ಲೇಷಕರು, ಮೊದಲಾದವರು ಏಕೀಭವಿಸಿರುವುದು ವಿಶೇಷವಾಗಿದೆ.

ಕಮಿಟಿಯು ನಿರ್ವಹಿಸಿದ ಪ್ರತೀ ಸಮಾವೇಶದಲ್ಲಿ ನಾನು ಪಾಲ್ಗೊಂಡು ದಿಶಾನಿರ್ದೇಶನಗಳನ್ನು ಮಾಡುವ ಮೂಲಕ, ಸದಸ್ಯರು ಕೇಳಿದ ಸೌಕರ್ಯಗಳನ್ನು ಕಲ್ಪಿಸುವ ಮೂಲಕ, ಶ್ರೀಕಾರ್ಯನಿರ್ವಹಣಾಧಿಕಾರಿಯವರು ನನಗೆ ವಹಿಸಿದ ಈ ಬೃಹತ್ಕಾರ್ಯವನ್ನು ನಿರ್ವಹಿಸುವುದರಲ್ಲಿ ಸಫಲೀಕೃತನಾದೆನೆಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗಿದೆ. ನಿಪುಣರಾದ ಪಂಡಿತರ ಸಮೂಹದಲ್ಲಿ ನಾನು ಪಾಲುಗಾರನಾಗಿದ್ದು, ಈ ಬೃಹದ್ಯಜ್ಞದಲ್ಲಿ ಸಮಿತ್ತಾಗಿ ನನ್ನ ಪಾಲಿನ ಶ್ರಮವನ್ನು ವಹಿಸಿರುವುದು ನನ್ನ ಪೂರ್ವಜನ್ಮದ ಸುಕೃತವೆಂದು ಭಾವಿಸುತ್ತಾ ನನಗೆ ಈ ಮಹದವಕಾಶವನ್ನು ಕಲ್ಪಿಸಿದ ಶ್ರೀವೇಂಕಟಾದ್ರಿ ರಾಮನಿಗೆ, ಶ್ರೀಮದಾಂಜನೇಯ ಸ್ವಾಮಿಗೆ ಅನೇಕಾನೇಕ ಸಾಷ್ಟಾಂಗ ನಮನಗಳನ್ನು ಸಮರ್ಪಿಸುತ್ತಿದ್ದೇನೆ. ಈ ವಿವರಗಳಿರುವ ಪುಸ್ತಕವು ರೂಪುಗೊಳ್ಳುವುದಕ್ಕೆ ಸಹಾಯ ಮಾಡಿದ ಪಂಡಿತ ಪರಿಷತ್ತಿನ ಅಧ್ಯಕ್ಷರಿಗೆ, ಸದಸ್ಯರಿಗೆ, ಸಹಾಯಕರಿಗೆ, ವೆಬಿನಾರ್ ನಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಪೂಜ್ಯರಿಗೆ, ಪಂಡಿತರಿಗೆ, ಮತ್ತು ಪ್ರಮುಖರಿಗೆ, ಪ್ರಸಿದ್ಧ ಚಿತ್ರಕಾರರಾದ ಶ್ರೀಕೂಚಿಯವರಿಗೆ, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗೆ, ಪ್ರತಿಯೊಬ್ಬರಿಗೂ ಕೃತಜ್ಞತೆಗಳು. ನನಗೆ ಈ ಮಹದವಕಾಶವನ್ನು ಕಲ್ಪಿಸಿದ ಶ್ರೀಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಕೆ.ಎಸ್. ಜವಹರ್ ರೆಡ್ಡಿಯವರಿಗೆ ನನ್ನ ಪ್ರತ್ಯೇಕವಾದ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಕಾರ್ಯಕ್ರಮಕ್ಕೆ ಹಗಲೂ ರಾತ್ರಿ ಶ್ರಮಿಸಿ, ತಮ್ಮ ಬೆಲೆಬಾಳುವ ಸಮಯವನ್ನು ನೀಡಿ, ಆದ್ಯಂತವೂ ತಮ್ಮ ಸ್ವೀಯ ಪರ್ಯವೇಕ್ಷಣೆಯಲ್ಲಿ ಹಲವು ಗ್ರಂಥಗಳನ್ನು ಸಮಗ್ರವಾಗಿ ಪರಿಶೀಲಿಸಿ, ಈ ಪುಸ್ತಕವನ್ನು ಇಷ್ಟು ಸುಂದರವಾಗಿ ರೂಪಿಸಿದ ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ ಅವರು ಪುಸ್ತಕಾವಿಷ್ಕರಣೆಯ ಸಮಯದಲ್ಲಿ ಇಲ್ಲದಿರುವುದು ಬಹಳ ನೋವನ್ನು ಉಂಟುಮಾಡಿತು.

ಅವರು ಪುಣ್ಯಲೋಕದಿಂದಲೇ ಈ ಪುಸ್ತಕಾವಿಷ್ಕರಣೆಯ ಕಾರ್ಯಕ್ರಮವನ್ನು ವೀಕ್ಷಿಸುವ ಶಕ್ತಿಯನ್ನು ದಯಪಾಲಿಸಬಬೇಕೆಂದು ಭಗವಂತನನ್ನು ಮನಸಾರೆ ಪ್ರಾರ್ಥಿಸುತ್ತಿದ್ದೇನೆ.

ಶ್ರೀಹರಿಯ ಸೇವೆಯಲ್ಲಿ

**ಆಳ್ಳ ವೆಂಕಟ ಧರ್ಮಾರೆಡ್ಡಿ**

जगद्गुरुरामभद्राचार्यदिव्याङ्गविश्वविद्यालय:
चित्रकूट: - २१० २०४
उत्तरप्रदेश:
दूरवाणी 91-05198-224413



श्रीश्रीश्री जगद्गुरु रामभद्राचार्य:
व्यवस्थापक: कुलाधिपति:
पद्मविभूषणभूषितश्च

## श्रीमतां जगद्गुरूणां रामभद्राचार्याणां दिव्यसन्देश:

**अञ्जनानन्दनं वीरं जानकीशोकनाशनम् ।**
**कपीशमक्षहन्तारं वन्दे लङ्काभयङ्करम् ।।**
**आञ्जनेयमतिपाटलाननं काञ्चनाद्रिकमनीयविग्रहम् ।**
**पारिजाततरुमूलवासिनं भावयामि पवमाननन्दनम् ।।**

धन्यं तत् स्थानं यत्र स्वयं वेङ्कटेश: श्रीनिवासो विराजते तत्र तस्य पर्वतस्य नाम **अञ्जनाद्रि:** इति सामान्यत: तु जना: विवदन्ते को नाम अञ्जनाद्रिरिति ? केचन हनूमतो जन्म कर्णाटके स्वीकुर्वन्ति, केचन गन्धमादने स्वीकुर्वन्ति। वस्तुतस्तु तिरुपतिस्थाने एव स पर्वतो वर्तते । स एव **अञ्जनाद्रि:** इत्यत्र केनापि संशीति: न कार्या। अस्मिन्नेव पर्वते तपस्यामाचचार भगवती हनूमतो माता अञ्जनादेवी। तस्यां तपस्यायां पूर्णायां स्वयमेव भगवान् शिव: निजतेजसा अञ्जनागर्भे आत्मानं सन्निवेशयामास । अत्रापि अञ्जना तु वायुतो हनूमन्तं लेभे । इदं तु सत्यम्। किन्तु किं मिथुनधर्मेण ? नैव । कदापि नैव । सप्तर्षय: अञ्जनाया: कर्णे राममन्त्रमुपदेष्टुम् आगता: । यदा ऋषीणां मुखात् फूत्काररूपेण वायु: अञ्जनाया: कर्णं गच्छन् आसीत् तस्मिन्नेव समये तत्र भगवान् शिव: आत्मानं स्थापितवान्। अर्थात् ऋषीणां मुखारविन्दनिर्गतवायुमाध्यमेन शिव एव तस्या: गर्भं प्राविशत् इति मदीया धी:। अत एव वाल्मीकि: अपि "अञ्जनासुप्रजा येन" इति वारं वारं हनूमन्तम् आञ्जनेयं कथयति । वाल्मीकिरामायणे कुशलवमङ्गलाचरणे अपि ...

**उल्लङ्घ्य सिन्धोस्सलिलं सलीलं यश्शोकवह्निं जनकात्मजाया: ।**
**आदाय तेनैव ददाह लङ्कां नमामि तं प्राञ्जलिराञ्जनेयम् ।।**

**''अञ्जना सुप्रजा येन मातरिश्वा च सुव्रत''** - **इति वाल्मीकिरामायणे**
हनुमान् चालीसायां **रामदूत अतुलित बलधामा अञ्जनीपुत्र पवनसुत**
**नामा हनुमान ...** एवं भगवतः आञ्जनेयस्य स्तुतिः वर्तते ।

एवं हनूमतः जन्मस्थलरूपेण प्रसिद्धानि बहूनि स्थानानि सन्ति, किन्तु यत्र अञ्जना तपस्यां कृतवती सः पर्वतः कः इत्यत्र विवदन्ते विद्वांसः । किन्तु अहं तु पूर्णतया निश्चितवानस्मि अयमेव पर्वतो यत् तिरुमलक्षेत्रे विराजमानः

(अञ्जनाचलस्य शिखरे मारुतेः सन्निधौ भगवतः श्रीवेङ्कटेश्वरस्य आलयस्य समीपे नानादेशेभ्यः समागतैः विद्वत्तल्लजैः सह संचर्च्य रामायणकाव्यस्य विपुलव्याख्यानं रचयेति स्वप्नेऽहं भगवता समादिष्टः ।)

अर्थात् अस्मिन्नेव अञ्जनापर्वते हनूमान् जन्म लेभे । अत्रैव तत्रभवान् गोविन्दराजो भूषणटीकारचनायाः प्रारम्भं कृतवान् । निष्कर्षतः अस्मिन् विषये केनापि नैव संशीतिः कार्या, न विचिकित्सा कार्या । एक एव निश्चयः यत् तिरुमलक्षेत्रे यः पर्वतो वर्तते स एव अञ्जनापर्वतः इति, तस्मिन्नेव पर्वते अञ्जना हनूमन्तं प्रसूतवती इति च निश्चयेन निगद्य अहं विरमामि ।

''जय हनुमान्''

जगद्गुरुरामभद्राचार्यदिव्याङ्गविश्वविद्यालय:
चित्रकूट: - २१० २०४
उत्तरप्रदेश:
दूरवाणी 91-05198-224413



श्रीश्रीश्री जगद्गुरु रामभद्राचार्य:
व्यवस्थापक: कुलाधिपति:
पद्मविभूषणभूषितश्च

## ಜಗದ್ಗುರು ಶ್ರೀ ರಾಮಭದ್ರಾಚಾರ್ಯರ ದಿವ್ಯ ಸಂದೇಶದ ಅನುವಾದ

ಶ್ರೀ ವೇಂಕಟೇಶ್ವರ ಸ್ವಾಮಿಯು ನೆಲೆಸಿರುವ ಶ್ರೀ ವೇಂಕಟಾದ್ರಿ ಪರಮಪಾವನ ಕ್ಷೇತ್ರ. ಆ ಬೆಟ್ಟಕ್ಕೆ ಅಂಜನಾದ್ರಿ ಎಂದು ಹೆಸರು. ಸಾಮಾನ್ಯ ಜನರು ಅಂಜನಾದ್ರಿ ಎಲ್ಲಿದೆ ಎನ್ನುವ ವಿಷಯದಲ್ಲಿ ವಾದವಿವಾದಗಳನ್ನು ಮಾಡುತ್ತಿರುತ್ತಾರೆ. ಕೆಲವರು ಅಂಜನಾದ್ರಿಯು ಕರ್ನಾಟಕದಲ್ಲಿ ಇದೆಯೆಂದು ಹೇಳುತ್ತಾರೆ. ಇನ್ನೂ ಕೆಲವರು ಗಂಧಮಾದನ ಎಂದು ಹೇಳುತ್ತಾರೆ. ಸತ್ಯವೇನೆಂದರೆ ತಿರುಮಲ ಕ್ಷೇತ್ರವೇ ಅಂಜನಾದ್ರಿಯಾಗಿದೆ. ಈ ವಿಷಯದಲ್ಲಿ ಯಾರಿಗೂ ಸಂದೇಹವು ಇರಬೇಕಾಗಿಲ್ಲ.

ಶ್ರೀ ಆಂಜನೇಯನ ತಾಯಿಯಾದ ಅಂಜನಾದೇವಿಯು ಇಲ್ಲಿ ತಪಸ್ಸನ್ನು ಮಾಡಿದ್ದಾಳೆ. ಅವಳ ತಪಸ್ಸು ಫಲಿಸುವ ಸಂದರ್ಭದಲ್ಲಿ ಪರಮಶಿವನು ಅಂಜನಾದೇವಿಯ ಗರ್ಭದಲ್ಲಿ ಪ್ರವೇಶಿಸುತ್ತಾನೆ. ವಾಯು ದೇವರಿಂದಲೇ ಅಂಜನಾದೇವಿ ಪುತ್ರನನ್ನು ಪಡೆದಳು ಎನ್ನುವುದೂ ಸತ್ಯವೇ ಆಗಿದೆ. ಆದರೆ ಇದು ಶಾರೀರಿಕ ಸಂಬಂಧದಿಂದ ಅಲ್ಲ. ಸಪ್ತರ್ಷಿಗಳು ಅಂಜನಾದೇವಿಯ ಕಿವಿಯಲ್ಲಿ ರಾಮ ಮಂತ್ರವನ್ನು ಉಪದೇಶಿಸಿದರು. ಆ ಸಮಯದಲ್ಲಿ  ವಾಯುವಿನ ಮೂಲಕ ಪರಮಶಿವನು ಗರ್ಭದಲ್ಲಿ ಪ್ರವೇಶಿಸಿದನು. ಆದ್ದರಿಂದ ಸಪ್ತರ್ಷಿಗಳ ಮುಖಾರವಿಂದದಿಂದ ಹೊರಟ ವಾಯುವಿನ ಮೂಲಕವಾಗಿ ಪರಮೇಶ್ವರನೇ ಅಂಜನಾದೇವಿಯ ಗರ್ಭದಲ್ಲಿ ಪ್ರವೇಶಿಸಿದನು ಎಂಬುದು ನನ್ನ ಅಭಿಪ್ರಾಯ. ವಾಲ್ಮೀಕಿ ರಾಮಾಯಣದಲ್ಲಿಯೂ ಹನುಮಂತನು ಆಂಜನೇಯ ನೆಂದು, ಅಂಜನಾದೇವಿಯ ಪುತ್ರನೆಂದು ಹೇಳಲಾಗಿದೆ.

**ಉಲ್ಲಂಘ್ಯ ಸಿಂಧೋಸ್ಸಲಿಲಂ ಸಲೀಲಂ ಯಶ್ಶೋಕವಹ್ನಿಂ ಜನಕಾತ್ಮಜಾಯಾಃ**
**ಆದಾಯ ತೇನೈವ ದದಾಹ ಲಂಕಾಂ ನಮಾಮಿ ತಂ ಪ್ರಾಂಜಲಿರಾಂಜನೇಯಮ್** .

ವಾಲ್ಮೀಕಿ ರಾಮಾಯಣದಲ್ಲೂ ಕೂಡಾ " ಅಂಜನಾ ಸುಪ್ರಜಾ ಯೇನ ಮಾತರಿಶ್ವಾ ಚ ಸುವ್ರತ" ಎಂದು ಹೇಳಿದ್ದಾರೆ. ಹನುಮಾನ್ ಚಾಲೀಸಾ ದಲ್ಲಿ ಕೂಡ "ರಾಮದೂತ ಅತುಲಿತ ಬಲಧಾಮಾ ಅಂಜನೀಪುತ್ರ ಪವನಸುತ ನಾಮಾ.. " ಎಂದು ಆಂಜನೇಯನನ್ನು ಸ್ತುತಿಸಿದ್ದಾರೆ. ಆದ್ದರಿಂದ ಹನುಮಂತನು  ಅಂಜನಾದೇವಿಯ ಮಗನೇ ಎನ್ನುವುದರಲ್ಲಿ ಯಾವುದೇ ಸಂದೇಹ ಬೇಡ.  ಅಂಜನಾದೇವಿ ತಪಸ್ಸು ಮಾಡಿದ ಬೆಟ್ಟ ಎಲ್ಲಿದೆ ಎನ್ನುವ ವಿಷಯದಲ್ಲಿ ಅನೇಕ ಚರ್ಚೆಗಳು ನಡೆದಿವೆ. ನಾನು ಮಾತ್ರ ಪೂರ್ತಿ ನಂಬಿಕೆಯಿಂದ ತಿರುಮಲ ಪರ್ವತವೇ ಆಂಜನೇಯನು ಹುಟ್ಟಿದ ಸ್ಥಾನವೆಂದು ಅಂಗೀಕರಿಸುತ್ತೇನೆ. ವಾಯುಪುರಾಣ ಮೊದಲಾದ ಪುರಾಣಗಳಲ್ಲಿ ಈ ವಿಷಯವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀಮದ್ವಾಲ್ಮೀಕಿ ರಾಮಾಯಣ ಭೂಷಣ ವ್ಯಾಖ್ಯಾನದಲ್ಲಿ ವ್ಯಾಖ್ಯಾನಕರ್ತರಾದ ಶ್ರೀ ಗೋವಿಂದರಾಜರು ಹೀಗೆ ಹೇಳಿದ್ದಾರೆ.

**ಶ್ರೀಮತ್ಯಂಜನ ಭೂಧರಸ್ಯ ಶಿಖರೇ ಶ್ರೀಮಾರುತೇಃ ಸನ್ನಿಧೌ**
**ಅಗ್ರೇ ವೇಂಕಟನಾಯಕಸ್ಯ ಸದನದ್ವಾರೇ ಯತಿಕ್ಷ್ಮಾ ಭೃತಃ।**
**ನಾನಾದೇಶಸಮಾಗತೈರ್ಬುಧಗಣೈಃ ರಾಮಾಯಣವ್ಯಾಕ್ರಿಯಾಂ**
**ವಿಸ್ತೀರ್ಣಾಂ ರಚಯೇತಿ ಸಾದರಮಹಂ ಸ್ವಪ್ನೇಽಸ್ಮಿ ಸಂಚೋದಿತಃ॥**

"ಅಂಜನಾದ್ರಿ ಶಿಖರದಲ್ಲಿ ಆಂಜನೇಯನ ಸನ್ನಿಧಾನದಲ್ಲಿ ಶ್ರೀ ವೆಂಕಟೇಶ್ವರನ ಆಲಯದ್ವಾರದಲ್ಲಿ ಅನೇಕ ದೇಶಗಳಿಂದ ಬಂದ ಪಂಡಿತರ ಜೊತೆಗೂಡಿ ರಾಮಾಯಣಕ್ಕೆ ವ್ಯಾಖ್ಯಾನವನ್ನು ರಚಿಸುವಂತೆ ನನ್ನನ್ನು ಆದೇಶಿಸಿದ್ದಾರೆ" ಎಂದು ಹೇಳುವ ಮೂಲಕ ಗೋವಿಂದರಾಜರು ತಿರುಮಲ ದಿಂದಲೇ ವ್ಯಾಖ್ಯಾನವನ್ನು ಪ್ರಾರಂಭಿಸಿದರು ತಿಳಿದುಬರುತ್ತದೆ. ಈ ಎಲ್ಲ ಪ್ರಮಾಣಗಳಿಂದ ನಾನು ತಿರುಮಲ ಪರ್ವತವೇ ಅಂಜನಾದ್ರಿ, ಇಲ್ಲಿಯೇ ಆಂಜನೇಯನು ಹುಟ್ಟಿದನೆಂದು ಪ್ರಮಾಣಪೂರ್ವಕವಾಗಿ ನಿವೇದಿಸುತ್ತಿದ್ದೇನೆ.

**॥ಜಯ ಹನುಮಾನ್॥**



# శ్రీ సిద్ధేశ్వరీపీఠం

ಕುರ್ತಾಳಂ - 627 802, ತೆನ್‌ಕಾಶಿ ತಾಲೂಕಾ,

ತೆನ್‌ಕಾಶಿ ಜಿಲ್ಲಾ, ತಮಿಳನಾಡು

---

**ಶ್ರೀಶ್ರೀಶ್ರೀ ಸಿದ್ಧೇಶ್ವರಾನಂದ ಭಾರತೀಮಹಾಸ್ವಾಮಿಯವರ ದಿವ್ಯಸಂದೇಶ**

**ನಾರಾಯಣಸಮಾರಂಭಾಂ ಶಂಕರಾಚಾರ್ಯಮಧ್ಯಮಾಂ,**
**ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್.**

ಸಿದ್ಧಾಶ್ರಮಗುರುಗಳಿಗೆ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ. ತಿರುಮಲ ತಿರುಪತಿ ದೇವಸ್ಥಾನದವರು ಆಂಜನೇಯನ ಜನ್ಮಸ್ಥಾನದ ಕುರಿತು ಪಂಡಿತ ಚರ್ಚಾಗೋಷ್ಠಿಯನ್ನು, ಪಂಡಿತರ ಸಮಾವೇಶವನ್ನು ಏರ್ಪಾಟು ಮಾಡಿದರು. ತಿರುಮಲೆಯಲ್ಲಿ ಅಂಜನಾಚಲ ಇರುವುದು, ಅಲ್ಲಿ ಆಂಜನೇಯನ ಗುಡಿ ಇದೆ, ಅಲ್ಲಿ ನಿತ್ಯ ಪೂಜೆಗಳನ್ನು ಏರ್ಪಾಟು ಮಾಡಿದ್ದಾರೆ. ಇದು ಅಪೂರ್ವವಾದ, ಸಮಯೋಚಿತವಾದ ಅಂಶ.

ಯೋಗವಾಸಿಷ್ಠದಲ್ಲಿ ರಾಮನು ಪ್ರತಿಕಲ್ಪದಲ್ಲೂ ಅವತರಿಸುತ್ತಾನೆ, ಪ್ರತಿ ಕಲ್ಪದಲ್ಲೂ ರಾಮಾವತಾರ ನಡೆಯುತ್ತಲೇ ಇರುತ್ತದೆಂದು, ಇಂದಿಗೆ ಹನ್ನೆರಡು ಬಾರಿ ರಾಮಾಯಣ ಬರೆಯಲ್ಪಟ್ಟಿದೆಯೆಂದು, ಯಾವುದು ಏನೇ ಆದರೂ ಇತ್ತೀಚಿನ ಕಾಲದಲ್ಲಿ ನಡೆದ ರಾಮಕಥೆಯೇ ಪ್ರಮಾಣವಾಗಿದೆ. ಅದಕ್ಕೆ ವಾಲ್ಮೀಕಿಯ ರಚನೆಯೇ ಆಧಾರ. ವಾಲ್ಮೀಕಿಯ ರಚನೆಗಳೊಂದಿಗೆ ಪುರಾಣ ವಾಙ್ಮಯದಲ್ಲಿ ಅನೇಕ ಕಡೆಗಳಲ್ಲಿ ರಾಮನ ಕಥೆ ಹೇಳಿರುವುದರಿಂದ ನಮಗೆ ಹನುಮಂತನ ಜನ್ಮಸ್ಥಳದ ನಿರ್ಧಾರಣೆಯ ವಿಷಯದಲ್ಲಿ ಪುರಾಣಗಳು ಪ್ರಮಾಣವಾಗಿದೆ. ವ್ಯಾಸಮಹರ್ಷಿ ಸಾಕ್ಷಾತ್ತು ನಾರಾಯಣಾಂಶ ಸಂಭೂತನಾದ ಮಹಾಪುರುಷ.

**"ವಿವಿಧ ವೇದತತ್ತ್ವವೇದಿ ವೇದವ್ಯಾಸುಡಾದಿಮುನಿ ಪರಾಶರಾತ್ಮಜುಂಡು""**

(ಆಂಧ್ರಮಹಾಭಾರತ ಆದಿಪರ್ವ. 1–32)

ಆದಿಮುನಿ ವ್ಯಾಸಮಹರ್ಷಿ, **"ಮುನೀನಾಮಪ್ಯಹಂ ವ್ಯಾಸಃ"** – ಮುನಿಗಳಲ್ಲಿ ನಾನು ವ್ಯಾಸನೆಂದು ಕೃಷ್ಣನೆಂದು ಹೇಳಿದ್ದಾನೆ. ಆತನೇ ವ್ಯಾಸನಾಗಿ ಉದಯಿಸಿದನೆಂದು ಪುರಾಣಗಳು ತಿಳಿಸುತ್ತಿವೆ. ಅಂತಹಾ ಜ್ಞಾನವನ್ನು ಹೊಂದಿದವನು ಶ್ರೀವ್ಯಾಸ ಮಹರ್ಷಿ. ವ್ಯಾಸಮಹರ್ಷಿ ರಚಿಸಿರುವ ಪುರಾಣಗಳು ಪರಮ ಪ್ರಮಾಣಗಳು. ಸಾಕ್ಷಾತ್ತು ಹನುಮಂತನೇ ರಾಮಾಯಣವನ್ನು ಬರೆದನೆಂದು ಮತ್ತೊಂದು ಕಥೆಯೂ ಇದೆ. ಭೋಜ–ಕಾಳಿದಾಸರ ಕಥೆಯಲ್ಲಿ ಹನುಮಂತನು ಬರೆದಿರುವಂತಹಾ ಒಂದು ಶ್ಲೋಕ ದೊರೆತಿದೆ ಎಂದು ಹೇಳಲಾಗುತ್ತಿದೆ. ಕಾಳಿದಾಸನು ಹನುಮಂತನ ಆವಾಹನೆ ಮಾಡಿದರೆ ಆತನೇ ಬಂದು ಈ ಶ್ಲೋಕವನ್ನು ನಾನೇ ಬರೆದೆನೆಂದು ಹೇಳಿದ ಒಂದು ಪ್ರಸಿದ್ಧವಾದ ಕಥೆ ಇದೆ.

**ಶಿವಶಿರಸಿ ಶಿರಾಂಸಿ ಯಾನಿ ರೇಜುಃ ಶಿವ!ಶಿವ!ತಾನಿ ಲುಠಂತಿ ಗೃಧ್ರಪಾದೇ,**
**ಅಯಿ ಖಲು ವಿಷಮಃ ಪುರಾಕೃತಾನಾಂ ಭವತಿ ಹಿ ಜಂತುಷು ಕರ್ಮಣಾಂ ವಿಪಾಕಃ**

ರಾಮನಿಂದ ಸಂಹರಿಸಲ್ಪಟ್ಟ ನಂತರ, ಶಿವನ ಶಿರಸ್ಸಿನಲ್ಲಿ ಪ್ರತಿಫಲಿಸಿದಂತಹಾ ಶಿರಸ್ಸುಗಳನ್ನು ಹೊಂದಿರುವಂತಹಾ ರಾವಣಾಸುರನ ಆ ತಲೆಗಳು ಇಂದು ಹದ್ದಿನ ಕಾಲಿನಿಂದ ಒದೆಯಲ್ಪಡುತ್ತಿವೆ. ಅಲ್ಲವೇ! ಎಂದು ಹೇಳುವ ಈ ಶ್ಲೋಕ ಹನುಮಂತನು ರಚಿಸಿರುವ ರಾಮಾಯಣದಲ್ಲಿದೆ ಎಂದು ಹೇಳುತ್ತಿದ್ದಾರೆ. ಹನುಮದ್ರಚಿತ ರಾಮಾಯಣ ನಮಗೆ ದೊರೆತಿಲ್ಲ.

ನಂತರ ರಾಮಭಕ್ತಿ ಪ್ರಧಾನವಾದ ಆಧಾರ ಈ ಪುರಾಣಕಥೆಗಳು. ಪುರಾಣ ಕಥೆಗಳೆಲ್ಲವೂ ಪ್ರಮಾಣಗಳೇ! ಅಷ್ಟಾದಶಪುರಾಣಗಳಲ್ಲಿ ಅನೇಕ ಕಡೆಗಳಲ್ಲಿ ರಾಮನ ಕಥೆ, ವೇಂಕಟೇಶ್ವರನ ಕಥೆಗಳಿವೆ. ವೇಂಕಟೇಶ್ವರನ ಕಥೆಗಳಲ್ಲಿನ ಅನೇಕ ವಿಶೇಷಗಳು ಪುರಾಣಗಳಲ್ಲಿ ಕಂಡುಬರುತ್ತಿವೆ. ತೆಲುಗಿನವರಿಗೆ ಬ್ರಹ್ಮಾಂಡಪುರಾಣವೆಂದರೆ ಬಹಳ ಇಷ್ಟ. ಆದಿಕವಿಯಾದ ನನ್ನಯ್ಯನ ಬಗೆಗೆ ಹೇಳುವ ಸಂದರ್ಭದಲ್ಲಿ **"ಬ್ರಹ್ಮಾಂಡಾದಿ ನಾನಾ ಪುರಾಣ ವಿಜ್ಞಾನನಿರತು"** (ಆಂಧ್ರಮಹಾಭಾರತ , ಆದಿಪರ್ವ–1–9) ಎಂದು ಹೇಳಿದ್ದಾರೆ.

**ಬ್ರಾಹ್ಮೀದತ್ತವರಪ್ರಸಾದುಡ ವುರುಪ್ರಜ್ಞಾವಿಶೇಷೋದಯಾ–**
**ಜಿಹ್ಮಸ್ವಾಂತುಡ ವೀಶ್ವರಾರ್ಚನಕಳಾಶೀಲುಂಡವಭ್ಯರ್ಹಿತ–**
**ಬ್ರಹ್ಮಾಂಡಾದಿಮಹಾಪುರಾಣಚಯ ತಾತ್ಪರ್ಯಾರ್ಥನಿರ್ಧಾರಿತ–**
**ಬ್ರಹ್ಮಜ್ಞಾನಕಳಾನಿಧಾನಮವು ನೀ ಭಾಗ್ಯಂಬು ಸಾಮಾನ್ಯಮೇ** (ಶೃಂಗಾರನೈಷಧಂ–೧–೧೩)

ಎಂದು ಶ್ರೀನಾಥನ ಬಗೆಗೆ ಹೇಳುವಾಗಲೂ ಆತ ಬ್ರಹ್ಮಾಂಡಪುರಾಣವೇತ್ತರು ಎಂದು ಹೇಳಿದ್ದಾರೆ. ಹೀಗೆ ಬ್ರಹ್ಮಾಂಡಪುರಾಣವೆಂದರೆ ತೆಲುಗಿನವರಿಗೆ ಬಹಳ ಇಷ್ಟವೆಂದು ತಿಳಿದುಬರುತ್ತಿದೆ. ಅದರಲ್ಲಿ ವೇಂಕಟೇಶ್ವರ ಕಥಾವಿಶೇಷಗಳಿವೆ. ಭವಿಷ್ಯೋತ್ತರ ಪುರಾಣದಲ್ಲಿ ಇರುವ ವೇಂಕಟೇಶ್ವರಚರಿತ್ರೆಯಲ್ಲಿ ವೇಂಕಟಾಚಲದ ಬಗೆಗೆ ವಿವರಿಸಿದ್ದಾರೆ.

**ಕೃತೇ ವೃಷಾದ್ರಿ ವಕ್ಷ್ಯಂತಿ ತ್ರೇತಾಯಾಂ ಅಂಜನಾಚಲಮ್**

**ದ್ವಾಪರೇ ಶೇಷಶೈಲೇತಿ ಕಲೌ ಶ್ರೀವೇಂಕಟಾಚಲಮ್ (ಭವಿಷ್ಯೋತ್ತರಪುರಾಣ, ವೇಂಕಟಾಚಲಮಾಹಾತ್ಮ್ಯಂ) ೧–೩೬**

ಕೃತಯುಗದಲ್ಲಿ ಈ ತಿರುಮಲೆ ಪರ್ವತವನ್ನು ವೃಷಾದ್ರಿ ಎಂದು ಕರೆಯುತ್ತಿದ್ದರು. ತ್ರೇತಾಯುಗದಲ್ಲಿ ಅಂಜನಾದೇವಿ ಆ ಪರ್ವತದ ಮೇಲೆ ತಪಸ್ಸು ಮಾಡಿದ್ದರಿಂದ ಆ ಪರ್ವತಕ್ಕೆ ಅಂಜನಾಚಲವೆಂದು ಹೆಸರು ಬಂದಿದೆ. ಹಾಗೆಯೇ ಈ ಪರ್ವತಕ್ಕೆ ದ್ವಾಪರಯುಗದಲ್ಲಿ ಶೇಷಶೈಲವೆಂದು ಹೆಸರು, ಕಲಿಯುಗದಲ್ಲಿ ವೇಂಕಟಾಚಲವೆಂಬ ಹೆಸರು ಬಂದಿದೆ. ಅಂತಹಾ ದಿವ್ಯವಾದ, ಭವ್ಯವಾದ ಪರ್ವತದಮೇಲೆ ಅಂಜನಾದೇವಿ ತಪಸ್ಸು ಮಾಡಿ ಹನುಮಂತನನ್ನು ಹಡೆದಳೆಂದು ನಮಗೆ ಪುರಾಣವಾಙ್ಮಯವು ಹೇಳುತ್ತಿದೆ.

**ಅಂಜನೇ! ತ್ವಂ ಹಿ ಶೇಷಾದ್ರೇ ತಪಸ್ತಪ್ತ್ವಾ ಸುದಾರುಣಂ,**
**ಪುತ್ರಂ ಸೂತವತೀ ತಸ್ಮಾತ್ ಲೋಕತ್ರಯಹಿತಾಯ ವೈ.**

(ಬ್ರಹ್ಮಾಂಡಪುರಾಣ, ವೇಂಕಟಾಚಲಮಾಹಾತ್ಮ್ಯಂ ತೀರ್ಥಖಂಡ–5–60)

ಅಂಜನಾ! ನೀನು ಈ ಪರ್ವತದ ಮೇಲೆ ಕಠಿಣವಾದ ತಪಸ್ಸು ಮಾಡಿ ಲೋಕಹಿತಕ್ಕಾಗಿ ಪುತ್ರನಿಗೆ ಜನ್ಮವನ್ನು ನೀಡಿದ್ದೀ!

**ಪ್ರಸಿದ್ಧಿ ಯಾತು ಶೈಲೋಽಯಂ ಅಂಜನೇ! ನಾಮತಸ್ತವ**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯ ವಿಚಾರಣಾ**

ಬ್ರಹ್ಮಾಂಡಪುರಾಣಂ, ವೇಂಕಟಾಚಲಮಾಹಾತ್ಮ್ಯಂ (ತೀರ್ಥಖಂಡ– 5–65)

ಅಂಜನಾ! ನಿನ್ನ ಹೆಸರಿನಿಂದ ಇನ್ನು ಈ ಪರ್ವತ ಪ್ರಕಾಶಿಸುತ್ತಿದೆ. ಈ ವಿಷಯದಲ್ಲಿ ಯಾವುದೇ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ.

ಈ ರೀತಿ ಬ್ರಹ್ಮಾಂಡಾದಿ ಪುರಾಣಗಳಲ್ಲಿ ಈ ತಿರುಮಲೆಯ ಪರ್ವತದ ಬಗೆಗೆ ಪ್ರತ್ಯೇಕವಾಗಿ ಹೇಳಿದ್ದಾರೆ.

ಇತ್ತೀಚೆಗೆ ಕಿಷ್ಕಿಂಧೆಯಲ್ಲಿನ ಒಂದು ಬೆಟ್ಟಕ್ಕೆ ಅಂಜನಾದ್ರಿ ಎಂಬ ಹೆಸರಿದೆ ಎಂದು, ಅಲ್ಲಿ ಹನುಮಂತನು ಹುಟ್ಟಿದನೆಂದು ಕೆಲವರು ವಾದಿಸುತ್ತಿದ್ದಾರೆ. ಅದಕ್ಕೆ ಶಾಸ್ತ್ರಪ್ರಮಾಣಗಳಾಗಲೀ, ಪುರಾಣಪ್ರಮಾಣಗಳಾಗಲೀ ಇಲ್ಲ. ಎಲ್ಲಾ ಪುರಾಣಗಳಲ್ಲೂ ತಿರುಮಲೆಯಲ್ಲೇ ಆಂಜನೇಯಸ್ವಾಮಿ ಅವತರಿಸಿದನೆಂದು ಬಹಳ ಸ್ಪಷ್ಟವಾಗಿ ತಿಳಿದುಬರುತ್ತಿದೆ. ಅಷ್ಟೇ ಅಲ್ಲದೇ ರಾಮಕಾರ್ಯಕ್ಕಾಗಿ ಸುಗ್ರೀವನು ಪ್ರಪಂಚದಲ್ಲಿನ ಎಲ್ಲಾ ದಿಕ್ಕುಗಳಲ್ಲಿ ಇರುವಂತಹಾ ವಾನರನ್ನು ಕರೆಯುವಾಗ ಅಂಜನಾಚಲದ ಮೇಲೆ ಇರುವಂತಹವರನ್ನು ಕೂಡಾ ಕರೆಯಿರಿ! ಎಂದನು, ಕಿಷ್ಕಿಂಧೆಯಲ್ಲಿ ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರೆಂದರೆ ಅಂಜನಾಚಲ ಬೇರೆ ಇರಬೇಕೆನ್ನುವದೇ ಇದರ ಅರ್ಥ! ಆ ರೀತಿ ಅಂಜನಾಚಲ ತಿರುಮಲೆಯಲ್ಲಿರುವ ಪರ್ವತವೇ ಆಗಿದೆ, ಈ ವಿಷಯದಲ್ಲಿ ಎಂತಹಾ ಸಂದೇಹವಿಲ್ಲ.

ಮಹನೀಯನಾದ ಆಂಜನೇಯನು ಇಂದು ಹಿಮಾಲಯಗಳಲ್ಲಿ ಇದ್ದರೂ, ಹಿಮವತ್ಪರ್ವತದಲ್ಲಿ ಕೈಲಾಸ ಪರ್ವತದಲ್ಲಿ ಒಂದು ಗುಹೆಗೆ ಹನುಮದ್ಗುಹೆ ಎಂದು ಹೆಸರಿದೆ. ಅಂದು ಇಲ್ಲಿ ವೇಂಕಟಾಚಲದಲ್ಲಿ ಉದಯಿಸಿದ ಆ ಮಹಾಪುರುಷನು ಕಿಷ್ಕಿಂಧೆಗೆ ಹೋಗಿ ಸುಗ್ರೀವನಿಗೆ ಮಂತ್ರಿಯಾಗಿ ಇದ್ದು ರಾಮನ ದಾಸನಾಗಿ, ಭಯಂಕರವಾದ ಯುದ್ಧ ಮಾಡಿದಂತಹವನು. ಅಂತಹಾ ಆಂಜನೇಯನು, ಮಹನೀಯನು, ಅವತಾರಪುರುಷ, ರುದ್ರಾಂಶಸಂಭೂತ!.

**ಮನೋಜವಂ ಮಾರುತತುಲ್ಯವೇಗಂ ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ**
**ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ .**

ಪರಮೇಶ್ವರ, ನಾರಾಯಣ ಸ್ವರೂಪ, ನಾರಾಯಣ ಭಕ್ತ, ರಾಮಭಕ್ತ, ರಾಮದಾಸನಾದ ಆ ಆಂಜನೇಯನು ತಿರುಮಲೆಯಲ್ಲಿನ ಅಂಜನಾಚಲದಲ್ಲಿ ಉದಯಿಸಿದ್ದಾನೆ ಎನ್ನುವುದಕ್ಕೆ ಎಂತಹಾ ಅನುಮಾನವಿಲ್ಲ. ಒಂದು ವಿಷಯದ ಬಗೆಗೆ ಸತ್ಯಾಸತ್ಯಗಳನ್ನು ನಿರ್ಧರಿಸಬೇಕೆಂದರೆ ಆ ವ್ಯಕ್ತಿ ಪಂಡಿತನಾಗಿರಬೇಕು. ಆತನಿಗೆ ಸಂಸ್ಕೃತ ಬರಬೇಕು. ಆತ ಪುರಾಣವೇತ್ತ, ಶಾಸ್ತ್ರವೇತ್ತನಾಗಿರಬೇಕು. ಅಂತಹಾ ಪುರಾಣವೇತ್ತ ಮಹಾಪಂಡಿತನಾಗಿ ಪ್ರಸಿದ್ಧಿಯಾದರೆ ಇನ್ನೂ ಅದಕ್ಕೆ ಪ್ರಾಮುಖ್ಯತೆ ಬರುತ್ತದೆ. ಅದೇ ವ್ಯಕ್ತಿ ಒಬ್ಬ ಪೀಠಾಧಿಪತಿಯಾದರೆ ಮತ್ತಷ್ಟು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಪ್ರಧಾನವಾಗಿ ಶಾಸ್ತ್ರಪುರಾಣಪರಿಜ್ಞಾನ ಇರುವವರಿಗೆ ಮಾತ್ರ ಆ ವಿಷಯಗಳ ಬಗೆಗೆ ಮಾತನಾಡುವ ಅರ್ಹತೆ ಇರುತ್ತದೆ. ಸಂಸ್ಕೃತ ಸರಿಯಾಗಿ ಬರದೇ ಇರುವವರು, ಪುರಾಣಪರಿಜ್ಞಾನ ಇಲ್ಲದವರು ಅವರಿಗೆ ಇಷ್ಟಬಂದಂತೆ ಮಾತನಾಡುತ್ತಿದ್ದರೆ ಅವಕ್ಕೆ ಯಾವುದೇ ಪ್ರಾಮಾಣ್ಯವು ಇಲ್ಲ. ಅವು ಕೇವಲ ಮಾತುಗಳು ಅಲ್ಲದೇ ಅವರಿಗೆ ಯಾವ ರೀತಿಯ ಪ್ರಾಮಾಣ್ಯವು ಪ್ರಯೋಜನವು ಇಲ್ಲ. ಆದ್ದರಿಂದ ತಿರುಮಲೆಯಲ್ಲಿನ ಅಂಜನಾಚಲದಲ್ಲೇ ಆಂಜನೇಯನು ಹುಟ್ಟಿದ್ದಾನೆ ಎನ್ನುವುದಕ್ಕೆ ಸಂದೇಹವಿಲ್ಲ.

ವಿವಿಧ ಶಾಸ್ತ್ರಗಳಿಂದ, ಪುರಾಣಗಳಿಂದ, ಶಾಸನಗಳಿಂದ, ಪ್ರಾಮಾಣಿಕವಾದ ಆಧಾರಗಳನ್ನು ಉಲ್ಲೇಖಿಸುತ್ತಾ ಅಂಜನಾಚಲವೇ ಆಂಜನೇಯಸ್ವಾಮಿ ಜನ್ಮಿಸಿದ ಪ್ರದೇಶವೆಂದು ನಿರೂಪಿಸುತ್ತಾ ಸಂಸ್ಕೃತಶಾಸ್ತ್ರಪುರಾಣೇತಿಹಾಸ ಪಂಡಿತರು ರಚಿಸಿದ ಪ್ರಾಮಾಣಿಕ ಸಂಶೋಧನೆ ವ್ಯಾಸಸಮಾಹರವಾದ ಈ ಗ್ರಂಥ ವಿಶ್ವವೆಲ್ಲಾ ವಿಸ್ತರಿಸಿದ ಭಕ್ತರ ಅಭಿಮಾನವನ್ನು ಹೊಂದುತ್ತದೆ ಹಾಗೆಯೇ ಹನುಮಂತನ ಜನ್ಮಸ್ಥಳದ ವಿಷಯವಾದ ಪ್ರಾಮಾಣಿಕ ಪರಿಶೋಧನಾಗ್ರಂಥವೆಂದು ವಿಶ್ವಸಿಸುತ್ತಿದ್ದೇನೆ.

**ಶುಭಂ ಭೂಯಾತ್**

ನಾರಾಯಣ ನಾರಾಯಣ



**శ్రీ శక్తిపీఠం**

రాయల చెఱువు దగ్గర, తిరుపతి - 517 561

చిత్తూరు జిల్లా, ఆం.ప్ర. - ఫోన్ 091604 55255

**ಮಂತ್ರಮಾಹೇಶ್ವರಿ , ಶ್ರೀಶಕ್ತಿ ಪೀಠಾಧೀಶ್ವರಿ**

## ಮಾತಾಜೀ ಶ್ರೀರಮ್ಯಾನಂದ ಭಾರತೀಸ್ವಾಮಿ ಅವರ ದಿವ್ಯಸಂದೇಶ

ಪರಮಪೂಜ್ಯರು, ಪರಮಹಂಸ ಪರಿವ್ರಾಜಕಾಚಾರ್ಯರು ಕುರ್ತಾಲ ಶಂಕರಾಚಾರ್ಯರು ಶ್ರೀ ಶಕ್ತಿ ಪೀಠ ವ್ಯವಸ್ಥಾಪಕರಾದ ಜಗದ್ಗುರುಗಳಾದ ಶ್ರೀ ಸಿದ್ಧೇಶ್ವರಾನಂದ ಭಾರತಿ ಮಹಾಸ್ವಾಮಿಯವರ ಪಾದಪದ್ಮಗಳಿಗೆ ನಮಸ್ಕರಿಸುತ್ತಿದ್ದೇನೆ.

**ಆರಕ್ತ ಜಿಹ್ವಾಂ ವಿಕಟಾಗ್ರದಂಷ್ಟ್ರಾಂ**
**ಶೂನ್ಯಾಂಬರಾಂ ಸುಂದರಭೀಷಣಾಂಗೀಮ್,**
**ಕರತ್ರಿಶೂಲಾಂ ಗಳಮುಂಡನಾಳಂ**
**ಕಾಳೀಂ ಕರಾಳೀಂ ಸತತಂ ಭಜಾಮಿ.**

ಶ್ರೀಶಕ್ತಿಪೀಠಮೂಲದೇವತೆ, ಅನಂತಶಕ್ತಿಸ್ವರೂಪಿಣೀ ಮಹಾಕಾಳ ಸ್ವರೂಪಿಣಿಯಾದ ಕಾಳೀದೇವಿಯ ಪಾದಪದ್ಮಗಳಿಗೆ ನಮಸ್ಕರಿಸುತ್ತಾ, ಕಲಿಯುಗಪ್ರತ್ಯಕ್ಷದೈವವಾದ ಶ್ರೀವೇಂಕಟೇಶ್ವರನ ಪಾದಪದ್ಮಗಳಿಗೆ ನಮಸ್ಕರಿಸುತ್ತಿದ್ದೇನೆ.

ಇಂದು ಕಲಿಯುಗ ವೈಕುಂಠವೆಂದು ಭಕ್ತರಿಂದ ಪೂಜಿಸಲ್ಪಡುತ್ತಿರುವ ವೇಂಕಟಾಚಲದ ಬಗೆಗೆ ವ್ಯಾಸಮಹರ್ಷಿ ಅನೇಕ ವಿಶೇಷಗಳನ್ನು ತಿಳಿಸಿದ್ದಾರೆ. ಆದಿ ಕಾಲದಿಂದಲೂ ಆದಿಯುಗಗಳಿಂದಲೂ ಈ ಕ್ಷೇತ್ರ ಎಷ್ಟು ಪರಮಪವಿತ್ರವಾದುದೋ, ಎಷ್ಟು ಶಕ್ತಿವಂತವಾದುದೋ ಎಂದು ವ್ಯಾಸರ ಮಾತುಗಳಿಂದ ತಿಳಿದು ಬರುತ್ತಿದೆ.

**ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಂ ಅಂಜನಾಚಲಂ**
**ದ್ವಾಪರೇ ಶೇಷಶೈಲೇತಿ ಕಲೌ ಶ್ರೀವೇಂಕಟಾಚಲಮ್**

ಕೃತಯುಗದಿಂದ ಈ ಮಹಾಕ್ಷೇತ್ರ ಎಷ್ಟೋ ಹೆಸರುಗಳಿಂದ ಕರೆಯಲ್ಪಟ್ಟಿತೋ ಎಂದು ನಮಗೆ ತಿಳಿದುಬರುತ್ತಿದೆ. ಇಂದು ಕಲಿಯುಗವೈಕುಂಠವೆಂದು ಪ್ರಕಾಶಿಸುತ್ತಾ ದೇವಾಧಿದೇವನಾದ ವೇಂಕಟೇಶ್ವರನು ಇಲ್ಲಿ ನೆಲಸಿ ಪ್ರಪಂಚದ ನಾಲ್ಕೂ ದಿಕ್ಕುಗಳಿಂದ ಬರುತ್ತಿರುವಂತಹಾ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಅದಕ್ಕೆ ಕಾರಣವೇನೆಂದರೆ ಆಂಜನೇಯನು ಅಂಜನಾದೇವಿಗೆ ಜನ್ಮಿಸಿದ ಸ್ಥಳ ಇದೇ ಆಗಿದೆ! ಅದಕ್ಕೇ ಈ ಪರ್ವತವನ್ನು ಅಂಜನಾಚಲವೆಂದು ಕರೆಯುತ್ತಿದ್ದಾರೆ. ಹರಿಹರರು ಇಬ್ಬರಿಗೂ ಸಂಬಂಧಿಸಿದ ಅವತಾರ ವಿಶೇಷಗಳು ಇಲ್ಲಿ ನಮಗೆ ಕಂಡುಬರುತ್ತಿವೆ, ಇವರಿಬ್ಬರ ಅವತಾರ ವಿಶೇಷಗಳ ಹಿಂದೆ ಒಂದು ಮಹತ್ತರವಾದ ಶಕ್ತಿ ಕಂಡುಬರುತ್ತಿದೆ. ಏನಾ ಶಕ್ತಿ? ಆ ಮಹಾಶಕ್ತಿ ಏನು? ಎಲ್ಲಿಂದ ಬಂದಿದೆ? ವಾತ್ಸಲ್ಯದಿಂದ ಉದ್ಭವಿಸಿರುವ ದಿವ್ಯಶಕ್ತಿ ಈ ಮಾತೃಶಕ್ತಿ.

ಇಂದು ನಮ್ಮ ಪೂಜೆಗಳನ್ನು ಸ್ವೀಕರಿಸುತ್ತಿರುವ ಶ್ರೀವೇಂಕಟೇಶ್ವರನು ದ್ವಾಪರಯುಗದಲ್ಲಿ ಕೃಷ್ಣನಾಗಿ ಅವತರಿಸಿದಾಗ, ಯಶೋದೇವಿಯ ಕೋರಿಕೆಯ ಮೇರೆಗೆ ಆಕೆಗೆ ಒಂದು ವರವನ್ನು ನೀಡಿದ. ಅದರ ಫಲವಾಗಿ ಆ ಯಶೋದಾದೇವಿ ವಕುಳಾದೇವಿಯಾಗಿ ಅವತರಿಸಿದ್ದಾಳೆ. ಆ ವೈಕುಂಠನಾಥನಾದ ನಾರಾಯಣನು ವೇಂಕಟೇಶ್ವರನಾಗಿ ಅವತರಿಸಿ, ಇಂದು ಶಾಶ್ವತವಾಗಿ ನೆಲೆಸಿದ್ದಾನೆ.

ಹನುಮಂತನ ವಿಷಯದಲ್ಲಿಯೂ ನಾವು ನೋಡಿದರೆ ತಾಯಿಯ ಪ್ರೇಮ ಅವನನ್ನು ಈ ಭೂಮಂಡಲದ ಮೇಲೆ ಅವತರಿಸುವಂತೆ ಮಾಡಿತು. ಅಂಜನಾದೇವಿ ಮಾಡಿದ ತೀವ್ರವಾದ ತಪಸ್ಸಿನ ಕಾರಣದಿಂದಾಗಿ ಆಕೆಯ ಪ್ರೇಮಫಲದಿಂದಾಗಿ, ವಾತ್ಸಲ್ಯದಕುರುಹಾಗಿ, ಮಾತೃತ್ವಶಕ್ತಿಯ ಫಲವಾಗಿ, ರುದ್ರಾಂಶಸಂಭೂತನಾದ ಹನುಮಂತನು ಉದಯಿಸಿದ. ಅಂದರೆ ಅಂಜನಾಚಲದವಾದರೂ ವೇಂಕಟಾಚಲವಾದರೂ, ಇನ್ನೂ ಯಾವ ಹೆಸರಿನಿಂದ ಕರೆಯಲ್ಪಡುತ್ತಿದ್ದರೂ ಈ ಮಹಾಕ್ಷೇತ್ರದ ಪ್ರಾಶಸ್ತ್ಯದಲ್ಲಿ ಮಾತೃಶಕ್ತಿಯು ಅತ್ಯಂತ ಪ್ರಧಾನವಾದ ಸ್ಥಾನದಲ್ಲಿ ಇದೆ ಎಂಬ ಅಂಶ ಅಂದಿಗು ಇಂದಿಗೂ ಶಾಶ್ವತವಾಗಿ ನಿಂತುಹೋಗಿದೆ. ಆ ಮಾತೃಶಕ್ತಿಯಿಂದಾಗಿ ಇಂದು ವೇಂಕಟೇಶ್ವರನು ಇಲ್ಲಿ ನೆಲಸಿದ್ದಾನೆ. ಅಂದು ತ್ರೇತಾಯುಗದಲ್ಲಿ ಅವತರಿಸಿದಂತಹಾ ಹನುಮಂತನು ಚಿರಂಜೀವಿಯಾಗಿ ಹಿಮಾಲಯದಲ್ಲಿ ಪ್ರಕಾಶಿಸುತ್ತಾ ಭಕ್ತರನ್ನು ರಕ್ಷಿಸುತ್ತಿದ್ದಾನೆ.

**ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ**
**ನಮಸ್ತಸ್ಯೈ ನಮಸ್ತಸ್ಸ್ಯೈ ನಮಸ್ತಸ್ಯೈ ನಮೋ ನಮಃ**

ಎಂದು ಹೇಳುತ್ತಿರುವ ಮಂತ್ರತುಲ್ಯವಾದ ಶ್ಲೋಕಕ್ಕೆ ಲಕ್ಷ್ಯಪ್ರಾಯವಾಗಿ ನಿಂತು ಸ್ಫೂರ್ತಿಯನ್ನು ಉಂಟುಮಾಡುವ ಕ್ಷೇತ್ರ ಈ ವೇಂಕಟಾಚಲ. ಅಂತಹಾ ವೇಂಕಟಾಚಲದಲ್ಲಿ ತ್ರೇತಾಯುಗದಲ್ಲಿ ಅಂಜನಾದ್ರಿಯ ಮೇಲೆ ಹನುಮಂತನು ಉದಯಿಸಿದ್ದಾನೆ.

ವಾಲ್ಮೀಕಿ ಮಹರ್ಷಿ ರಚಿಸಿರುವ ರಾಮಾಯಣ ಹನುಮಂತನಿಗೆ ಸಂಬಂಧಿಸಿದ ವಿಶೇಷಗಳಿಗೆ, ರಾಮನಿಗೆ ಸಂಬಂಧಿಸಿದ ವಿಶೇಷಗಳಿಗೆ, ಅತ್ಯಂತ ಪ್ರಾಮಾಣಿಕವಾಗಿ ಪರಿಗಣಿಸಲ್ಪಡುವ ಗ್ರಂಥ. ಇದರಲ್ಲಿ ರಾಮ, ಹನುಮಂತರಿಗೆ ಸಂಬಂಧಿಸಿದ ವಿಶೇಷಗಳು ನಮಗೆ ಕಂಡುಬರುತ್ತಿವೆ. ಹನುಮಂತ, ರಾಮ ಇಬ್ಬರೂ ತ್ರೇತಾಯುಗಕ್ಕೆ ಪರಿಮಿತವಾಗಿರುವವರಲ್ಲ ಎಂದು ತಿಳಿದುಬರುತ್ತಿದೆ. ರಾಮ, ಹನುಮಂತರು ಪುರಾಣ ಪುರುಷರಾಗಿ ಮಾತ್ರವೇ ಅಲ್ಲದೇ ಪುರಾಣಗಳಿಗೆ, ಚರಿತ್ರೆಗೆ ಅತೀತವಾಗಿ ಇಂದು ಭಾರತದೇಶದಲ್ಲಿ ಪ್ರತಿಯೊಬ್ಬ ಹಿಂದುವಿನ ಮನಸ್ಸಿನಲ್ಲಿ ನೆಲೆಸಿದ್ದಾರೆ. ನಮ್ಮ ಭಾರತದೇಶದಲ್ಲಿ ರಾಮಾಲಯ, ಹನುಮಾಲಯ ಇಲ್ಲದ ಗ್ರಾಮವೇ ಇಲ್ಲ. ಅವರ ಚಿತ್ರಪಟಗಳು ಇಲ್ಲದ ಹಿಂದುಗಳ ಮನೆ ಇರುವುದಿಲ್ಲವೆಂದು ಹೇಳುವುದರಲ್ಲಿ ಅತಿಶಯೋಕ್ತಿ ಇಲ್ಲ. ಆದ್ದರಿಂದ ದೇವತೆಗಳಿಗೆ ಸಂಬಂಧಿಸಿದ ವಿಶೇಷಗಳಿಗೆ ವ್ಯಾಸಭಗವಾನರು ನೀಡಿದ ಪುರಾಣಗಳನ್ನು ನೋಡಿದರೆ ಹನುಮಂತನ ಜನ್ಮಸ್ಥಳಕ್ಕೆ ಸಂಬಂಧಿಸಿದಂತಹಾ ಅಂಶಗಳು ನಮಗೆ ಸ್ಪಷ್ಟವಾಗಿ ಕಂಡುಬರುತ್ತವೆ. ಸ್ಕಾಂದ-ವರಾಹ-ಬ್ರಹ್ಮಾಂಡ-ಭವಿಷ್ಯೋತ್ತರ ಪುರಾಣಗಳಲ್ಲಿ ವೇದವ್ಯಾಸಮಹರ್ಷಿ ಸುಸ್ಪಷ್ಟವಾಗಿ ಹನುಮಂತನಿಗೆ ಸಂಬಂಧಿಸಿದ ಜನ್ಮವೃತ್ತಾಂತವನ್ನು ಈ ಅಂಜನಾದ್ರಿ ಸ್ಥಳಮಹಾತ್ಮೆಯನ್ನು, ವೇಂಕಟಾಚಲದ ವಿಶೇಷಗಳನ್ನು ಪ್ರಸ್ತಾವಿಸಿದ್ದಾರೆ,

ರಾಮಕಥೆಯು ಎಲ್ಲಾ ಪ್ರಾಂತದವರಿಗೆ, ಎಲ್ಲಾ ಭಾಷೆಯವರಿಗೆ ಸಂಬಂಧಿಸಿದ್ದಾಗಿದೆ. ಪ್ರತೀ ಭಾಷೆಯಲ್ಲೂ ರಾಮಾಯಣಕ್ಕೆ ಸಂಬಂಧಿಸಿದ ಗ್ರಂಥಗಳು ಇವೆ. ಹನುಮಂತನಿಗೆ ಜನ್ಮವೃತ್ತಾಂತಕ್ಕೆ ಸಂಬಂಧಿಸಿದ ವಿಶೇಷಗಳು ರಾಮಕಥೆಯಲ್ಲಿ ನಮಗೆ ಕಂಡುಬರುತ್ತಿವೆ, ನಮ್ಮ ದಕ್ಷಿಣ ಭಾರತದೇಶದಲ್ಲಿನ ವಿವಿಧ ಭಾಷೆಗಳಲ್ಲಿರುವ ವಿಶೇಷಗಳನ್ನು ಗಮನಿಸಿದರೆ ತಮಿಳಿನಲ್ಲಿ ಪ್ರಸಿದ್ಧವಾದಂತಹಾ ಕಂಬರಾಮಾಯಣ ಈ ಅಂಶವನ್ನು ತಿಳಿಯಪಡಿಸುತ್ತಿದೆ. ಪುರಂದರದಾಸರು ತಮ್ಮ ಕೃತಿಗಳಲ್ಲಿ ಹನುಮಂತನ ಜನ್ಮಸ್ಥಾನವಾದ ಅಂಜನಾದ್ರಿ ಈ ವೇಂಕಟಾಚಲದ ಮೇಲೇ ಇದೆಯೆಂದು ಹೇಳಿದ್ದಾರೆ. ಈ ರೀತಿ ಭಾಷೆಗೆ, ಪ್ರಾಂತಕ್ಕೆ ಅತೀತವಾಗಿ ಪ್ರತಿಯೊಬ್ಬರೂ ಈ ಅಂಜನಾದ್ರಿಗೆ ಸಂಬಂಧಿಸಿದ ವಿಶೇಷಗಳನ್ನು ತಿಳಿಸಿದ್ದಾರೆ. ಆದಿಕಾಲದಿಂದ ಇರುವ ಮಹರ್ಷಿಗಳು, ನಂತರ ಬಂದ ಮಹನೀಯರು ಹೇಳುವುದೇ ಅಲ್ಲದೇ ಅನೇಕ

ಶಾಸನಗಳ ಮೂಲಕ, ಭೌಗೋಳಿಕವಾದ ಪರಿಶೋಧನೆಯ ಮೂಲಕ ಅಂಜನಾದ್ರಿಯು ವೇಂಕಟಾಚಲದ ಮೇಲೇ ಇದೆ ಎಂಬ ವಿಷಯವು ಸ್ಪಷ್ಟವಾಗಿ ತಿಳಿಯಬರುತ್ತಿದೆ. ದಕ್ಷಿಣ ಭಾರತದೇಶದಲ್ಲಿನ ಹಂಪಿಯಲ್ಲೇ ಅಲ್ಲದೇ ಉತ್ತರ ಭಾರತದಲ್ಲಿನ ವಿವಿಧ ಪ್ರದೇಶಗಳಲ್ಲಿ ಹನುಮಂತನು ಜನ್ಮಿಸಿದ್ದಾನೆಂದು ಹೇಳುವ ಜನವಾಣಿ ನಮಗೆ ಕಂಡುಬರುತ್ತಿದೆ. ಇದು ಸಹಜವೇ! ಸ್ಥಳಪ್ರಖ್ಯಾತಿಗೆ ಸಂಬಂಧಿಸಿದ ಅಂಶಗಳಲ್ಲಿ ಹಾಗೇ ಸ್ಥಳಪುರಾಣಗಳಿಗೆ ಸಂಬಂಧಿಸಿದ ಕಥೆಗಳಲ್ಲಿ ಇಂತಹಾ ಭಿನ್ನಾಭಿಪ್ರಾಯಗಳು ಕಂಡುಬರುತ್ತಿವೆ. ಕೇವಲ ಹನುಮಂತನ ಜನ್ಮವೃತ್ತಾಂತಕ್ಕೆ ಸಂಬಂಧಿಸಿದ್ದು ಮಾತ್ರಾ ಅಲ್ಲದೇ, ಸಾಧಾರಣವಾಗಿ ಸ್ಥಳಪುರಾಣಗಳಲ್ಲಿ ಇಂತಹಾ ಅನೇಕ ಅಭಿಪ್ರಾಯಗಳು ಕಂಡುಬರುತ್ತಿವೆ,

ಆದರೆ ಅವುಗಳಿಗೆ ಪ್ರಮಾಣಗಳಾದರು ಏನಿವೆ? ಎಷ್ಟಿವೆ? ಇದು ನಿಜವೇ? ಜನವಾಣಿ ಅವರ ಭಕ್ತಿಗೆ ಸಂಬಂಧಿಸಿದ್ದು ಮಾತ್ರವೇ? ಎಂಬ ಉದ್ದೇಶಗಳಿಂದ ಸಂಶೋಧನೆ ನಡೆಯಬೇಕಾಗಿದೆ. ಹನುಮಂತನು ಕೋಟ್ಯಾಂತರ ಭಾರತೀಯರ ಹೃದಯಗಳಲ್ಲಿ ಪ್ರಪಂಚವ್ಯಾಪ್ತವಾಗಿ ನೆಲಸಿದ್ದಾನೆ. ಅಂತಹಾ ಹನುಮಂತನಿಗೆ ಸಂಬಂಧಿಸಿದ ಯಾವ ಅಂಶವಾದರೂ ಸರಿ ಬಹಳ ಎಚ್ಚರಿಕೆಯಿಂದ ಯಾರ ಭಾವನೆಗಳಿಗೂ ಘಾಸಿಯಾಗದಂತೆ ಸತ್ಯಾಸತ್ಯೆಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ನಿರೂಪಿಸುವ ಅಗತ್ಯವಿದೆ. ತಿರುಮಲ ತಿರುಪತಿ ದೇವಸ್ಥಾನಗಳವರು ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಶ್ರೀಪ್ಲವನಾಮ ಸಂವತ್ಸರ ಶ್ರೀರಾಮನವಮಿ ಸಂದರ್ಭದಲ್ಲಿ ಈ ವಿಶೇಷಗಳನ್ನು ಪ್ರಾಮಾಣಿಕವಾಗಿ ಲಘುಪುಸ್ತಕದ ಮೂಲಕ ನೀಡಿದರು. ನಂತರ ವಿವಿಧ ಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ, ಇತಿಹಾಸಗಳಲ್ಲಿ, ಪುರಾತನ ಶಾಸ್ತ್ರವಿಷಯದಲ್ಲಿ ಪಂಡಿತರಾದವರನ್ನು ಆಹ್ವಾನಿಸಿ ಪಂಡಿತ ಸದಸ್ಸನ್ನು ನಿರ್ವಹಿಸಿದರು. ಆ ಸದಸ್ಸಿನಲ್ಲಿ ಸಮರ್ಪಿಸಿದ ಪ್ರಾಮಾಣಿಕವಾದ ಪರಿಶೋಧನಾ ವ್ಯಾಸಗಳನ್ನು ಇಲ್ಲಿ ಒಗ್ಗೂಡಿಸಿ ಒಂದು ಸಮಗ್ರಗ್ರಂಥವಾಗಿ ರೂಪುಗೊಳಿಸಿದ್ದಾರೆ. ಈ ವಿಶೇಷ ಗ್ರಂಥಗಳಲ್ಲಿ ಹನುಮಂತನ ಜನ್ಮಸ್ಥಳಕ್ಕೆ ಸಂಬಂಧಿಸಿದ ಅನೇಕ ಅಂಶಗಳು, ಅನೇಕ ಆಧಾರಗಳು ಬಹಳವಾಗಿವೆ. ಈ ಮಹಿಮಾನ್ವಿತವಾದ ಗ್ರಂಥವನ್ನು ಪರಿಶೀಲಿಸಿದರೆ ಹನುಮಂತನ ಜನ್ಮಸ್ಥಳದ ಬಗೆಗೆ ಇನ್ನು ಯಾರಿಗೂ ಅನುಮಾನಗಳು ಇರುವ ಸಾಧ್ಯತೆ ಇಲ್ಲ.

ಕೆಲವು ವ್ಯಕ್ತಿಗಳು, ತಮ್ಮ ವ್ಯಕ್ತಿಗತವಾದ ಸ್ವಾರ್ಥಕ್ಕಾಗಿ ಅಥವಾ ತಿರುಮಲೆ ಕ್ಷೇತ್ರದ ಮೇಲೆ ದ್ವೇಷದಿಂದಲೋ, ಇಲ್ಲಿ ನೆಲೆಸಿರುವ ಮಾತೃಶಕ್ತಿಯಮೇಲೆ ನಂಬಿಕೆಯಿಲ್ಲದ್ದರಿಂದಲೋ, ಹನುಮಂತನ ಜನ್ಮಸ್ಥಳದ ವಿಷಯದಲ್ಲಿ ಪಂಡಿತ ಸಂಶೋಧಕರು ಪರಿಶೋಧನೆ ನಡೆಸಿ ಪುರಾಣ-ಇತಿಹಾಸ-ಶಾಸನ ಆಧಾರಗಳೊಂದಿಗೆ ನಿರೂಪಿಸಿದರೂ ಇನ್ನೂ ಅನಗತ್ಯವಾದ ವಿವರಣೆಗಳನ್ನು ಯಾವುದೇ ಆಧಾರಗಳಿಲ್ಲದೇ ಪ್ರಚಾರ ಮಾಡುತ್ತಿದ್ದಾರೆ. ಇದು ನಿಸ್ಸಂದೇಹವಾಗಿ ಧರ್ಮದ್ರೋಹ, ದೈವದ್ರೋಹವೆಂದು ಭಾವಿಸಬಹುದು, ಹನುಮಂತನೂ ಇಂತಹಾ ವಾದವನ್ನು ಸಮರ್ಥಿಸುವುದಿಲ್ಲ. ಧಾರ್ಮಿಕ, ಪೌರಾಣಿಕ ವಿಷಯಗಳಲ್ಲಿ ಅನುಮಾನಗಳು ಬಂದರೆ ಅವನ್ನು ನಿವೃತ್ತಿ ಮಾಡಿಕೊಳ್ಳುವುದಕ್ಕೆ ಒಂದು ಶಾಸ್ತ್ರೀಯ ಪದ್ಧತಿ ಇದೆ, ಅಷ್ಟೇ ಅಲ್ಲದೇ "ನನಗೂ ಬಾಯಿದೆ ಅಲ್ಲವೇ! ಎಂದು ನಾನು ಯಾವುದಾದರೂ ಮಾತನಾಡುತ್ತೇನೆ" ಎಂಬ ಭಾವನೆಯೊಂದಿಗೆ ಮಹಾವ್ಯವಸ್ಥೆಯನ್ನು ದೂಷಿಸಿದರೆ ಭಕ್ತರು ಯಾರು ಸಹಿಸುವುದಿಲ್ಲ. ಇಂದು ತಿರುಮಲ ತಿರುಪತಿ ಎನ್ನುವ ಧಾರ್ಮಿಕ ಸಂಸ್ಥೆ ಭಾರತದೇಶದಲ್ಲಿ ಮಾತ್ರವೇ ಅಲ್ಲದೇ ಪ್ರಪಂಚವ್ಯಾಪ್ತವಾಗಿ ಹಿಂದೂಧರ್ಮವನ್ನು ವ್ಯಾಪ್ತಿ ಮಾಡುವುದರಲ್ಲಿ ಅಷ್ಟೇ ಕೃಷೀ ಮಾಡುತ್ತಿದೆ. ಹಿಂದೂ ಧರ್ಮಕ್ಕೆ ಈ ಸಂಸ್ಥೆ ಬೆನ್ನೆಲುಬಾಗಿದೆ. ಅಂತಹಾ ಮಹಾಕ್ಷೇತ್ರಕ್ಕೆ, ಆ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು, ವ್ಯವಸ್ಥೆ, ವಿದ್ವಾಂಸರು, ಪಂಡಿತರು ಸಮಗ್ರವಾಗಿ ಪರಿಶೀಲಿಸಿ, ಒಂದು ಪರಿಶೋಧನಾ ಫಲವಿಶೇಷವನ್ನು ನೀಡುತ್ತಿರುವಾಗ ಅದನ್ನು ನಾವು ಸ್ವೀಕರಿಸಬೇಕು. ತಿರುಮಲ ತಿರುಪತಿ ದೇವಸ್ಥಾನದವರು, ಪಂಡಿತ ಮಂಡಲಿ ಎಚ್ಚರಿಕೆಯಿಂದ ಪರಿಶೀಲಿಸಿ, ಪರಿಶೋಧಿಸಿ ವಾಸ್ತವಗಳನ್ನು ಪ್ರಜೆಗಳಿಗೆ ನೀಡುವ ಜವಾಬ್ದಾರಿಯಲ್ಲಿನ ಭಾಗವಾಗಿ ಈ ಕರ್ತವ್ಯವನ್ನು ಸ್ವೀಕರಿಸಬೇಕು. ಇದರಲ್ಲಿ ಅವರಿಗೆ ಎಂತಹಾ ವ್ಯಕ್ತಿಗತ ಪ್ರಯೋಜನವಿಲ್ಲ. "ನನಗೆ ಇಷ್ಟಬಂದಂತೆ ನಾನು ಮಾತನಾಡುತ್ತಿದ್ದೇನೆ ನೀವು ಹೇಳಿದ್ದು ಸ್ವೀಕರಿಸಲಾರೆ. ನಾನು ಅಂದುಕೊಂಡದ್ದೇ ನಿಜವಾಗಬೇಕು" ಎಂದು ಭಾವಿಸುವವರು ನೀವು ಸ್ವೀಕರಿಸದಿದ್ದರೆ ಹಾಗೇ ಇದ್ದುಬಿಡಿ.

ಅಷ್ಟೇ ಅಲ್ಲದೇ ಅಸತ್ಯಗಳ ಪ್ರಚಾರ ಮಾಡಿ ಭಕ್ತರ ಮನೋಭಾವನೆಗಳನ್ನು ನೋಯಿಸಬೇಡಿ. ಈ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಸ್ತಾವಿಸುತ್ತಿಲ್ಲವೆಂದು ನಮ್ಮ ಭಾವನೆ. ಮಹಿಮಾನ್ವಿತರಾದ ಮಹರ್ಷಿಗಳು ನೀಡಿದ ಮಾತುಗಳು ಪ್ರಪಂಚವೇ ತಿಳಿದಿರುವ ಸತ್ಯವೆಂದು ಭಾವಿಸುತ್ತಾ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ಶ್ರೀವೇಂಕಟೇಶ್ವರಸ್ವಾಮಿಯವರು ನೆಲೆಸಿದ ಅಂಜನಾಚಲವೇ ಹನುಮಂತನ

ಜನ್ಮಸ್ಥಳವೆಂದು ಬಲವಾಗಿ ವಿಶ್ವಸಿಸುತ್ತಿದ್ದೇನೆ. ನಿಸ್ಸಂದೇಹವಾಗಿ ಅಂಜನಾದ್ರಿ ತಿರುಮಲೆ ಕ್ಷೇತ್ರದಲ್ಲೇ ಇದೆ. ಅದರಲ್ಲಿ ಎಂತಹಾ ಸಂದೇಹವಿಲ್ಲ. ಹನುಮಂತನ ಜನ್ಮಸ್ಥಳದ ಪರಿಶೋಧನಾಯಜ್ಞವೆಂಬ ಮಹತ್ಕಾರ್ಯದಲ್ಲಿ ಪಾಲ್ಗೊಳ್ಳುತ್ತಿರುವವರಿಗೆಲ್ಲಾ ಆ ಹನುಮಂತನ ಆಶೀರ್ವಾದಗಳು, ಆ ಅಂಜನಾದೇವಿ ಆಶೀರ್ವಾದಗಳು ವಿಶೇಷವಾಗಿ ದೊರೆಯಲೆಂದು ಆಶಿಸುತ್ತಿದ್ದೇವೆ.

**ಸ್ವಸ್ತಿ**

ఫోను - 95057 18452

# శ్రీ శుకబ్రహ్మాశ్రమము

స్వామి విద్యాప్రకాశానంద నగర్,

శ్రీ శుకబ్రహ్మాశ్రమము (పోస్టు), శ్రీకాళహస్తి - 517 640.

చిత్తూరు జిల్లా.

---

**ಪೂಜ್ಯ ಶ್ರೀ ವಿದ್ಯಾಸ್ವರೂಪಾನಂದಸ್ವಾಮಿಯವರು** — ಶ್ರೀಕಾಳಹಸ್ತಿ

ಪೀಠಾಧಿಪತಿಗಳು, — 06–02–2022

ಶ್ರೀ ಶುಕಬ್ರಹ್ಮಾಶ್ರಮ

ಶ್ರೀಕಾಳಹಸ್ತಿ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ್

ತಿರುಮಲ ತಿರುಪತಿ ದೇವಸ್ಥಾನ–ಶ್ರೀಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಎಸ್.ಜವಹರ್ ರೆಡ್ಡಿಯವರಿಗೆ ನಾರಾಯಣಸ್ಮರಣೆಯೊಂದಿಗೆ

ಪವಿತ್ರಾತ್ಮಸ್ವರೂಪ !

05–02–2022 ನ ನಿಮ್ಮ ಪತ್ರ ದೊರೆಯಿತು. ಕಲಿಯುಗದೈವವೆಂದು ಪ್ರಸಿದ್ಧವಾದ ತಿರುಮಲೆಯಲ್ಲಿನ ಸಪ್ತಗಿರಿಗಳಲ್ಲಿ ಒಂದಾದ ಅಂಜನಾಚಲದಲ್ಲಿ ಅಂಜನಾತನಯ ಜನ್ಮಿಸಿದಂತೆ ಹಲವು ಪುರಾಣಗಳು ಪ್ರಬೋಧಿಸುತ್ತಿವೆ.

ಶ್ರೀರಾಮನ ಜನ್ಮಸ್ಥಳದಿಂದಾಗಿ ರಾಮಕಾರ್ಯಸಿದ್ಧಿಗಾಗಿ ಅವತರಿಸಿದ ಹನುಮಂತನ ಜನ್ಮಸ್ಥಳಕ್ಕೆ ಪ್ರಾಶಸ್ತ್ಯವನ್ನು ಉಂಟುಮಾಡುವುದಕ್ಕೆ ನೀವು ಸತ್ಸಂಕಲ್ಪ ಮಾಡಿ ಧನ್ಯರಾಗಿದ್ದೀರಿ. ಸುಪ್ರಸಿದ್ಧ ವಿದ್ವಾಂಸರ ಪರಿಶ್ರಮದಿಂದ ಅನೇಕ ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿ ಆಂಜನೇಯನ ಜನ್ಮಸ್ಥಳದ ನಿರ್ಧಾರವನ್ನು ಮಾಡಿ ಕೃತಕೃತ್ಯರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಪ್ರಕಟಿಸಿದ ಗ್ರಂಥ ವಿಸ್ತೃತ ವ್ಯಾಪ್ತಿಯನ್ನು ಹೊಂದಬಲ್ಲದು. ಈ ವಿಷಯದಲ್ಲಿ ನಮ್ಮ ಶುಭಾಶೀರ್ವಚನಗಳನ್ನು ನಾರಾಯಣಸ್ಮರಣಪೂರ್ವಕವಾಗಿ ಈ ಪತ್ರದ ಮುಖೇನ ನಿಮಗೆ ನೀಡುತ್ತಿದ್ದೇವೆ.

ಅಂಜನಾದ್ರಿಯಲ್ಲಿ ಭಕ್ತರ ಸಂದರ್ಶನಾರ್ಥವಾಗಿ ನಿರ್ಮಾಣಗಳನ್ನು ಏರ್ಪಾಟು ಮಾಡುವುದು ಅತ್ಯಂತ ಸಮಂಜಸವಾದುದು. ಇದು ಭಗವತ್ಪ್ರೀತಿಕರವಾದ ಕೆಲಸ ಎನ್ನುವುದರಲ್ಲಿ ಸಂದೇಹವಿಲ್ಲ.

> **"ದುಷ್ಟಾನಾಂ ಶಿಕ್ಷಣಾರ್ಥಾಯ ಶಿಷ್ಟಾನಾಂ ರಕ್ಷಣಾಯ ಚ!**
> **ರಾಮಕಾರ್ಯಾರ್ಥ ಸಿದ್ಧ್ಯರ್ಥಂ ಜಾತಃ ಶ್ರೀಹನುಮಾನ್ ಕಪಿಃ॥"**

ದುಷ್ಟಶಿಕ್ಷಣೆಗೆ, ಶಿಷ್ಟರಕ್ಷಣೆಗೆ ಶ್ರೀರಾಮನ ಕಾರ್ಯವನ್ನು ಸಿದ್ಧಿಸುವುದಕ್ಕಾಗಿ ಶ್ರೀಹನುಮಂತನು ಅಂಜನಾದ್ರಿಯಮೇಲೆ ಅವತರಿಸಿದನೆಂದು ಆರ್ಷವಾಜ್ಞ್ಮಯವು ತಿಳಿಸುತ್ತಿದೆ.

ಈ ಶುಭಪ್ರದವಾದ ನಿರ್ಮಾಣಾತ್ಮಕವಾದ ಕಾರ್ಯಕ್ರಮವನ್ನು ನಿರ್ವಿಘ್ನವಾಗಿ ನೆರವೇರಿಸುವಂತೆ ಕಲಿಯುಗ ವೈಕುಂಠನಾಥನು ಅನುಗ್ರಹಿಸಲಿ! ತದ್ವಾರಾ ಹನುಮಂತನ ಭಕ್ತರ ಅಭೀಷ್ಟಗಳು ನೆರವೇರಲಿ.

**ಲೋಕಾಸ್ಸಮಸ್ತಾಸ್ಸುಖಿನೋಭವಂತು**

ಶ್ರೀಮತೇ ರಾಮಾನುಜಾಯ ನಮಃ




**ಶ್ರೀಮದ್ವೇದ ಮಾರ್ಗ ಪ್ರತಿಷ್ಠಾಪನಾಚಾರ್ಯೋಭಯ**
**ವೇದಾಂತ ಪ್ರವರ್ತಕರಾದ ಶ್ರೀಮತ್ಪರಮಹಂಸ**
**ಪರಿವ್ರಾಜಕಾಚಾರ್ಯರಾದ ತಿರುಮಲ ತಿರುಪತಿ**
**ತಿನ್ನನ್ನೂರು ದೇವಸ್ಥಾನಗಳಿಗೆ ಧರ್ಮಕರ್ತರಾದ**
**ಪೆರಿಯ ಕೋವಿಲ್ ಕೇಳ್ವಿ ಅಪ್ಪನ್**
**ಶ್ರೀಶ್ರೀಶ್ರೀ ಶಠಗೋಪರಾಮಾನುಜ ಪೆದ್ದ ಜಿಯ್ಯಂಗಾರ್ ಸ್ವಾಮಿ**
**ಶ್ರೀಪೆದ್ದ ಜೀಯಂಗಾರ್ ಮಠಂ, 227. ಜಿ.ಎನ್.ಮಾಡ ಸ್ಟ್ರೀಟ್.**
**ತಿರುಪತಿ–517501.**

ಶ್ರೀ ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿಗೆ
ಶ್ರೀ ತಿರುಮಲ ತಿರುಪತಿ ದೇವಸ್ಥಾನಗಳು
ತಿರುಮಲ

ನಾರಾಯಣ ಸ್ಮರಣಪೂರ್ವಕವಾಗಿ ಬರೆದಿರುವ ಪತ್ರಿಕೆ

ನಮೋ ನಾರಾಯಣಾಯ !

■ ಭಗವದ್ ರಾಮಾನುಜರು ಅವರ 120 ವರ್ಷಗಳಲ್ಲಿ ಮೂರು ಬಾರಿ ತಿರುಮಲೆಗೆ ಬಂದು, ಅನೇಕ ಶಿಷ್ಟಾಚಾರಗಳನ್ನು, ಕೈಂಕರ್ಯಗಳನ್ನು ಸ್ಥಾಪಿಸಿ, ಇಂದು ನಮಗೆ ಶ್ರೀನಿವಾಸನೆಂಬ ಸುಲಭದೈವವನ್ನು ನೀಡಿದ್ದಾರೆ.

■ ರಾಮಾನುಜರವರು ತಿರುಮಲೆ, ತಿರುಪತಿ ದೇವಸ್ಥಾನಗಳಲ್ಲಿ ನಡೆಯುವ ಸೇವೆಗಳು, ಉತ್ಸವಗಳು, ಸಾಂಪ್ರದಾಯಬದ್ಧವಾಗಿ ಶ್ರೀವೈಖಾನಸ ಆಗಮ ಶಾಸ್ತ್ರದ ರೀತಿಯಲ್ಲೇ ಪೂಜೆಯನ್ನು ನಡೆಸುವುದು, ಶ್ರೀವೈಷ್ಣವ ಸಂಪ್ರದಾಯದ ಪ್ರಕಾರ ನಡೆಯುವಂತೆ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಏರ್ಪಾಟು ಮಾಡಿದರು. ಅಂದಿನಿಂದ ಇಂದಿನವರೆಗೂ ಅವರ ಆದೇಶದ ಪ್ರಕಾರವೇ ತಿರುಮಲೆ ತಿರುಪತಿ ದೇವಸ್ಥಾನಗಳಲ್ಲಿ ಕೈಕಂರ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸಲಾಗುತ್ತಿವೆ.

■ ಹಿಂದೆ ತಿರುವೇಂಕಟದಲ್ಲಿ ನೆಲೆಸಿರುವ ಮೂರ್ತಿಯ ವಿಷಯದಲ್ಲಿ ಮತ ಭೇದಗಳು ಏರ್ಪಟ್ಟ ಸಂದರ್ಭದಲ್ಲಿ ಭಗವತ್ ರಾಮಾನುಜರು ಯಾದವರಾಜನ ಸಭೆಯಲ್ಲಿ ಇತರ ಮತಸ್ತರೊಂದಿಗೆ ತಿರುಮಲೆಯಲ್ಲಿ ನೆಲೆಸಿರುವುದು ಸಾಕ್ಷಾತ್ತು ಶ್ರೀವಿಷ್ಣುವಾದ ಶ್ರೀನಿವಾಸನೆಂದು ಅನೇಕ ವೇದ, ಪುರಾಣ, ಇತಿಹಾಸ, ದಿವ್ಯಪ್ರಬಂಧಗಳನ್ನು ವಿವರಿಸಿ, ಅವರೊಂದಿಗೆ ವಾದಿಸಿ, ನಿರ್ಧರಿಸಿ, ಶ್ರೀನಿವಾಸನಿಗೆ ಅವರ ಯೋಗ ತಪೋಬಲದಿಂದ ಶಂಖ ಚಕ್ರಗಳನ್ನು ಅಲಂಕರಿಸಿ, ಈ ಪ್ರಪಂಚಕ್ಕೆ ಆ ಮೂರ್ತಿ ಶ್ರೀನಿವಾಸನೇ ಎಂದು ತಿಳಿಹೇಳಿ, ಶ್ರೀಹರಿಗೇ ಆಚಾರ್ಯರೆಂಬ ಅತ್ಯುನ್ನತವಾದ ಸ್ಥಾನವನ್ನು ಪಡೆದುಕೊಂಡರು.

■ ಈ ವಿಷಯಗಳನ್ನು ಶ್ರೀರಾಮಾನುಜರ ಶಿಷ್ಯರಾದ ಅನಂತಾಳ್ವಾರ್ ಹನ್ನೊಂದನೆಯ ಶತಮಾನದಲ್ಲಿ ಸಂಸ್ಕೃತದಲ್ಲಿ ರಚಿಸಿರುವ "ಶ್ರೀವೇಂಕಟಾಚಲ ಇತಿಹಾಸಮಾಲ"ಎಂಬ ಗ್ರಂಥದ ಮೂಲಕ ನಮಗೆ ಗೋಚರಿಸುತ್ತಿದೆ.

■ ಈ ಗ್ರಂಥದಲ್ಲಿ ರಾಮಾನುಜರು ಯಾದವ ರಾಜರ ಸಭೆಯಲ್ಲಿ ಬ್ರಹ್ಮ, ವಾಮನ, ಗರುಡ, ವಾಯು, ಪದ್ಮ, ವರಾಹ, ಬ್ರಹ್ಮಾಂಡ, ಮಾರ್ಕಂಡೇಯ, ಭವಿಷ್ಯೋತ್ತರ ಪುರಾಣಗಳು, ಋಗ್ವೇದದಲ್ಲಿನ ಎಂಟನೇಯ ಅಷ್ಟಕಂ, ಹರಿವಂಶಾಂತರ್ಗತ ಶೇಷಧರ್ಮ ಪುರಾಣ, ಪಾಂಚರಾತ್ರ ವೈಖಾನಸಾದಿ ಭಗವತ್ ಶಾಸ್ತ್ರಗಳು, ಆಳ್ವಾರರ ಅನುಗ್ರಹ ದಿವ್ಯಪ್ರಬಂಧಗಳು, ಅದರಲ್ಲಿ ಮುಖ್ಯವಾಗಿ ನಮ್ಮಾಳ್ವಾರ್ ಅನುಗ್ರಹಿಸಿದ, "ತಿರುವಾಯಿ ಮೊಳಿ" ಯಲ್ಲಿನ ವೇಂಕಟಾಚಲಂ, ವೇಂಕಟೇಶ್ವರನ ಬಗೆಗೆ ಹೇಳಲ್ಪಟ್ಟ ವಿಷಯಗಳನ್ನು ವಿಶದೀಕರಿಸಿದ್ದಾರೆ.

■ ಈ ಗ್ರಂಥದಿಂದಲೇ ರಾಮಾನುಜರು ಏರ್ಪಡಿಸಿದ ಜೆಯ್ಯಂಗಾರ್ ವ್ಯವಸ್ಥೆಯನ್ನು, ಅವರ ಪ್ರಾತಿನಿಧ್ಯದಲ್ಲಿ ನಡೆಯುವ ಕೈಂಕರ್ಯಗಳೆಲ್ಲದರಲ್ಲೂ ಹೇಳಲ್ಪಟ್ಟಿದೆ.

■ ಶ್ರೀರಾಮಾನುಜರು ಹೇಳಿದ ವೇಂಕಟೇಶ್ವರ ತತ್ತ್ವವನ್ನು ಈ ಗ್ರಂಥ ನಮಗೆ ಅನುಗ್ರಹಿಸಿದ್ದರಿಂದ, ಈ ಗ್ರಂಥವನ್ನು ನಾವು ಪ್ರಾಮಾಣಿಕವಾಗಿ ಪರಿಗಣಿಸಬೇಕಾಗಿದೆ. "ಸತ್ಯಂ ಸತ್ಯಂ ಪುನಃ ಸತ್ಯಂ, ಯತಿರಾಜೋ ಜಗದ್ಗುರುಃ" ಎಂಬ ಶ್ಲೋಕಾನುಸಾರವಾಗಿ ಜಗದಾಚಾರ್ಯರಾದ ಶ್ರೀರಾಮಾನುಜರ ಮಾತುಗಳೇ ನಮಗೆ ಶಿರೋಧಾರ್ಯವಾಗಿದೆ. ಅದೇ ವೇದವಾಕ್ಯ!

■ "ತಿರುಮಲೈ ಒಲಗು" ಎಂಬ ಗ್ರಂಥದ ಮೂಲಕ ಶ್ರೀರಾಮಾನುಜರು ತಿರುಮಲೆಯಲ್ಲಿ ಸ್ಥಾಪಿಸಿದ ವಿಶಿಷ್ಟಾದ್ವೈತ ಸಾಮ್ರಾಜ್ಯ, ತಿರುಮಲ ವೇಂಕಟೇಶ್ವರ ಸ್ವಾಮಿಗೆ ಏರ್ಪಡಿಸಿದ ಕೈಂಕರ್ಯಗಳೇ ಮೊದಲಾದ ಸಮಸ್ತ ವಿಷಯಗಳನ್ನು ನಾವು ತಿಳಿದುಕೊಳ್ಳಬಹುದು.

■ ತಿರುಮಲೆಗೆ ಸಂಬಂಧಿಸಿದ ವೈಭವವನ್ನು, ಅವುಗಳನ್ನು ತಿಳಿಸುವ ಗ್ರಂಥಗಳು ಈ ರೀತಿಯಾಗಿವೆ.

ವೇಂಕಟಾಚಲ ಇತಿಹಾಸಮಾಲ, ತಿರುಮಲೈ ಒಲುಗು, ವೇಂಕಟಾಚಲ ಮಾಹಾತ್ಮ್ಯಂ, ಇದರಲ್ಲಿ ವೇಂಕಟಾಚಲ ಮಾಹಾತ್ಮ್ಯಂ ಪುರಾಣ ಭಾಗಗಳ ಸಂಕಲನವಾಗಿದೆ.

■ ರಾಮಾನುಜ ಅನುಗ್ರಹೀತ ವೇಂಕಟಾಚಲ ಇತಿಹಾಸಮಾಲೆಯನ್ನು ಆಧಾರವಾಗಿಟ್ಟುಕೊಂಡು ಕ್ರಿ.ಶ.1491ರಲ್ಲಿ ವೇಂಕಟಾತ್ತುರೈವರ್ (ರಾಮಾನುಜಯ್ಯನ್) ಹನ್ನೆರಡು ಪುರಾಣಗಳಲ್ಲಿ ಇರುವ ಶ್ರೀವೇಂಕಟಾಚಲ ಕ್ಷೇತ್ರ ಮಹಾತ್ಮೆಗಳನ್ನು ವರ್ಣಿಸುವ ಭಾಗಗಳನ್ನು, ವೇಂಕಟಾಚಲ ಮಾಹಾತ್ಮ್ಯಂ ಎನ್ನುವ ಸಂಕಲನವಾಗಿ ಸಿದ್ಧಪಡಿಸಿದ್ದಾರೆ.

■ ವೇಂಕಟಾಚಲ ಮಾಹಾತ್ಮ್ಯಂ, ಕ್ರೀಡಾಚಲದ ಉದ್ಭವ , ವೇಂಕಟೇಶ್ವರ ಅವತಾರ ಪರ್ಯಂತ ಅನೇಕ ಕಥೆಗಳನ್ನು ತಿಳಿಯಪಡಿಸುತ್ತಿದೆ. ಅದರಲ್ಲಿ ಶ್ರೀರಾಮಾಯಣದ ಕಾಲದಲ್ಲಿ ವಾನರ ಸಮೂಹಕ್ಕೆ ಸಂಬಂಧಿಸಿದ ಅಂಜನಾದೇವಿ ಪುತ್ರನಿಗಾಗಿ, ಈ ಪರ್ವತದಲ್ಲಿ ತಪಸ್ಸು ಮಾಡಿದಂತೆ ಹೇಳಲಾಗಿದೆ. ಆದ್ದರಿಂದಲೇ ಈ ಪರ್ವತಕ್ಕೆ ಅಂಜನಾದ್ರಿ ಎಂಬ ನಾಮಧೇಯವು ಬಂದಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಈ ತಪಃಫಲದಿಂದಾಗಿ, ವಾಯುದೇವನ ಅನುಗ್ರಹದಿಂದಾಗಿ ಅಂಜನಾದೇವಿಗೆ ಹನುಮಂತನು ಜನ್ಮಿಸಿದ.

■ ಶ್ರೀರಾಮಾನುಜರು, ಶ್ರೀವೇಂಕಟೇಶ್ವರಸ್ವಾಮಿಗೆ ಜೆಯ್ಯಂಗಾರರು ರಾಮನಿಗೆ ಹನುಮಂತನಂತೆ ಸೇವೆಗಳನ್ನು ಮಾಡಬೇಕೆಂದು ನಿಯಮ ಮಾಡಿದ್ದಾರೆಂದು ನಾವು ತಿಳಿದುಕೊಳ್ಳಬೇಕು. ಅದಕ್ಕಾಗಿ ಜೆಯ್ಯಂಗಾರರು ಮಠದಲ್ಲಿ ಸೀತಾರಾಮ ಲಕ್ಷ್ಮಣರನ್ನು ಪ್ರತಿಷ್ಠಾಪನೆ ಮಾಡಿ, ಹನುಮದ್ಧ್ವಜ, ಹನುಮಂತನ ಮುದ್ರೆಯನ್ನು ನೀಡಿ, ವೇಂಕಟಾಚಲದಲ್ಲಿ ಹನುಮಂತನ ವಿಶಿಷ್ಟತೆಯನ್ನು ಸಾರಿ ಹೇಳಿದ್ದಾರೆ.

■ ನಮಗೆ ಶ್ರೀವೇಂಕಟೇಶ್ವರ ಸಹಸ್ರನಾಮದಲ್ಲಿ "ವಾಯು ಸೂನಕೃತ ಸೇವಾಯ ನಮಃ" "ಅಂಜನಾಕೃತ ಪೂಜವತೇ ನಮಃ" , "ಅಂಜನಾದ್ರಿ ನಿವಾಸಾಯ ನಮಃ" ಎಂದು, ಅಷ್ಟೋತ್ತರ ಶತನಾಮಗಳಲ್ಲಿ "ಸದಂಜನಗಿರೀಶಾಯ ಶ್ರೀವೇಂಕಟೇಶಾಯ ನಮಃ", "ಅಂಜನಾ ಗೋತ್ರವತೇ ಶ್ರೀವೇಂಕಟೇಶಾಯ ನಮಃ"ಎಂಬ ನಾಮಾವಳಿಯನ್ನು ತಿಳಿಸಿದ್ದಾರೆ.

■ ಶ್ರಿಮತ್ ವೇದಮಾರ್ಗ ಪ್ರತಿಷ್ಠಾಪನಾಚಾರ್ಯರಾಗಿ, ಉಭಯವೇದಾಂತ ಪ್ರವಕ್ತಾಚಾರ್ಯರು, ಶ್ರೀರಾಮಾನುಜರ ಪುನರಾವತಾರವಾದ ಶ್ರಿಮಣವಾಳ ಮಹಾಮುನಿಗಳ ಅಜ್ಞಾನುಸಾರವಾಗಿ, ಪ್ರತಿವಾದಿ ಭಯಂಕರ ಅಣ್ಣನ್ ಸ್ವಾಮಿ, ವೇಂಕಟೇಶ ಸುಪ್ರಭಾತ, ಪ್ರಪತ್ತಿ, ಮಂಗಳ, ಗೋವಿಂದರಾಜ ಸುಪ್ರಭಾತ, ಪ್ರಪತ್ತಿ, ಮಂಗಳ ಮೊದಲಾದ ಸ್ತೋತ್ರರಾಜಗಳನ್ನು ರಚಿಸಿದ್ದಾರೆ. ಅವರೂ "ಅಂಜನಾಶೈಲನಾಥ ಸ್ತೋತ್ರಂ"ದಲ್ಲಿ ಶ್ರೀವೇಂಕಟೇಶ್ವರಸ್ವಾಮಿಯನ್ನು ಸ್ತುತಿಸಿದ್ದಾರೆ. ಅಂತಹಾ ಅಂಜನಾದ್ರಿನಾಥನಾದ ಶ್ರೀವೇಂಕಟೇಶ್ವರ ವೈಭವವನ್ನು ನಾವೆಲ್ಲಾ ಸದಾ ಸ್ಮರಿಸಿ, ಧನ್ಯರಾಗೋಣ.

**SRI PEDDA JEEYANGAR VARU**

**Sri.H.H.Pedda Jeeyangar Mutt**

**Tirupathi.**






ಶ್ರೀಮತೇ ರಾಮಾನುಜಾಯ ನಮಃ

**ತಿರುಮಲ ತಿರುಪತಿ ಶಿಂಗರಾಯಕೊಂಡ ಮುಂತಾದ ದೇವಸ್ಥಾನಗಳ ಧರ್ಮಕರ್ತರಾದ**

**ಇಳಯಕೋವಿಲ್ ಕೇಳ್ವಿ ಅಪ್ಪನ್ ಶ್ರೀಗೋವಿಂದರಾಮಾನುಜ ಚಿನ್ನ ಜೀಯಂಗಾರ್, ಚಿನ್ನಜೀಯಂಗಾರ್ ಮಠಂ**

ಡೋರ್ ನಂ ೧೬೧, ಗೋವಿಂದರಾಜಸ್ವಾಮಿಯವರ ಸನ್ನಿಧಿ ಬೀದಿ, ತಿರುಪತಿ–೫೧೭೫೦೭.

ಫೋನ್– ೦೮೭೭–೨೨೨೨೫೭೫

---

**ಓಂ ನಮೋ ನಾರಾಯಣಾಯ**

**ಶ್ರೀಪತೇ ರಾಮಾನುಜಾಯ ನಮಃ**

ಭಗದ್ರಾಮಾನುಜರು ತಿರುಮಲೆ ಆಲಯದಲ್ಲಿ ನಡೆಯುವ ಸೇವೆಗಳು, ಉತ್ಸವಗಳನ್ನು ಸಂಪ್ರದಾಯಬದ್ಧವಾಗಿ ಶ್ರೀವೈಖಾನಸಾಗಮ ಶಾಸ್ತ್ರದ ಪ್ರಕಾರ ನಡೆಯುವಂತೆ ಸುಭದ್ರವಾದ ವ್ಯವಸ್ಥೆಯನ್ನು ಏರ್ಪಾಟು ಮಾಡಿದ್ದರು. ಅಂದಿನಿಂದ ಇಂದಿನವರೆಗೂ ಅವರ ಆದೇಶದ ಪ್ರಕಾರ ತಿರುಮಲೆಯಲ್ಲಿನ ಸೇವೆಗಳು ಸಂಪ್ರದಾಯದ ಪ್ರಕಾರವಾಗಿ ನಿರ್ವಹಿಸಲ್ಪಡುತ್ತಿವೆ.

ಹಾಗೆಯೇ ಹಿಂದೆ ತಿರುಮಲೆ ಕ್ಷೇತ್ರದಲ್ಲಿ ನೆಲೆಸಿರುವ ವಿಗ್ರಹದ ವಿಷಯದಲ್ಲಿ ಅನುಮಾನಗಳು ಉಂಟಾದಾಗ ಭಗವದ್ರಾಮಾನುಜರು ಬಹಳ ಶ್ರಮದಿಂದ ತಿರುಮಲೆ ಶ್ರೀನಿವಾಸನ ಮಹಾತ್ಮೆಯನ್ನು ನಿರೂಪಿಸುವಂತಹಾ ಪುರಾಣಭಾಗಗಳನ್ನು ಸಂಗ್ರಹಿಸಿ, ಒಂದು ಕ್ರಮಪದ್ಧತಿಯಲ್ಲಿ ಯಾದವರಾಜನ ಸಭೆಯಲ್ಲಿ ಉಲ್ಲೇಖಿಸುತ್ತಾ, ಬೆಟ್ಟದ ಮೇಲೆ ನೆಲೆಸಿರುವ ಸ್ವಾಮಿ ಶ್ರೀನಿವಾಸನೆಂದು ನಿರೂಪಿಸುವುದಕ್ಕೆ ಬೇಕಾದ ಎಷ್ಟೋ ವಿಶೇಷಗಳನ್ನು ಪುರಾಣಗಳಿಂದಲೇ ವಿವರಿಸಿದರು. ಶ್ರೀವೇಂಕಟಾಚಲ ಇತಿಹಾಸಮಾಲದಲ್ಲಿ ಅನಂತಾಚಾರ್ಯರು ಈ ರೀತಿ ನಿರ್ದೇಶಿಸಿದರು.

"ಅಥ ಶ್ರೀವೇಂಕಟಾಚಲಮಾಹಾತ್ಮ್ಯ ಪರಿಶೀಲನ– ತತ್ಪರ್ವತ ಸಾಧಾರಣಕತಿಪಯ–ಧರ್ಮವಿಶೇಷ ವ್ಯವಸ್ಥಾಪನ–ವೃತ್ತಾಂತ : ಉಚ್ಯತೇ ಶ್ರೀ ವೇಂಕಟಾಚಲ ಮಾಹಾತ್ಮ್ಯ ವಿಷಯ ಪುರಾಣಭಾಗಾನ್ ಸಮಂತತಃ ಪರಿಶೀಲಯನ್, ಭಗವಾನ್ ರಾಮಾನುಜ ಮುನಿಃ"ಎನ್ನುತ್ತಾ ಈ ವೃತ್ತಾಂತವನ್ನು ವಿವರಿಸಿದ್ದಾರೆ.

ರಾಮಾನುಜರು ಶ್ರೀನಿವಾಸನೆಂದು ನಿರೂಪಿಸುವುದಕ್ಕಾಗಿ ಯಾದವ ರಾಜನ ಸಭೆಯಲ್ಲಿ ಪ್ರಸ್ತಾವಿಸಿದ ವಿಷಯಗಳನ್ನು ಅನಂತಾಳ್ವಾರ್ ವೇಂಕಟಾಚಲ ಇತಿಹಾಸ ಮಾಲೆ ಎಂಬ ಹೆಸರಿನಲ್ಲಿ ಗ್ರಂಥ ರೂಪದಲ್ಲಿ ತಂದರು.

ಮುನ್ನೂರು ವರ್ಷಗಳ ನಂತರ ವಿವಿಧ ಪುರಾಣಗಳನ್ನು ಪರಿಶೀಲಿಸಿ, ಅಂದಿನ ಪಂಡಿತರು ಆ ಪುರಾಣಭಾಗಗಳನ್ನು ವೇಂಕಟಾಚಲ ಮಾಹಾತ್ಮ್ಯ ಎಂದು ಸಂಕಲ ಮಾಡಿದರು.

ವೇಂಕಟಾಚಲ ಮಾಹಾತ್ಮ್ಯದಲ್ಲಿ ತಿರುಮಲೆಯ ಗಿರಿಯಲ್ಲಿನ ವಿವಿಧ ಪರ್ವತಗಳ ಔನ್ನತ್ಯವನ್ನು ವಿವರಿಸಿದ್ದಾರೆ. ಅದರಲ್ಲಿ ಅಂಜನಾದ್ರಿಯ ಬಗೆಗೆ ಪ್ರಸ್ಥಾವನೆಯಲ್ಲಿ ಅಂಜನಾದೇವಿ ತಿರುಮಲೆಯ ಗಿರಿಯಲ್ಲಿ ತಪಸ್ಸನ್ನು ಆಚರಿಸಿದಂತೆ ವಿವರಣೆ ಇದೆ.

ಅಂಜನಾದೇವಿಯ ತಪೋಬಲದಿಂದ ವಾಯುದೇವನ ಅನುಗ್ರಹದಿಂದ ಲೋಕ ಕಲ್ಯಾಣಾರ್ಥವಾಗಿ ಶ್ರೀನಿವಾಸನ ಭಕ್ತನಾಗಿ ಆಂಜನೇಯಸ್ವಾಮಿ ಅವತರಿಸಿದಂತೆ ಪುರಾಣೇತಿಹಾಸಗಳ ಮೂಲಕ ತಿಳಿದುಬರುತ್ತಿದೆ.

ಮಂಗಳಾಶಾಸನಗಳೊಂದಿಗೆ,

**SRI CHINNA JEEYANGAR**
**SHRI CHINNA JEEYANGAR MUTT**

**TIRUPATHI .**

ಶ್ರೀ ಆಂಜನೇಯಸ್ವಾಮಿ ಜನ್ಮಸ್ಥಳ ಅಂಜನಾದ್ರಿ–ತಿರುಮಲ

From
Sri Karyam
**SRI AHOBILA MATHA**






---

To
The Excecutive Officer
TT Devasthanam
Tirupati

15th march 2022

Mangalani Bhavantu

We are in receipt of your letter dated 05.05.2022 addressed to HH 46th Jeer of Sri Ahobila Matha. HH the 46th Jeer felt very happy to know the initiatives taken by TTD to determine the birth place Sri Hanuman who is one of the icons of Hindu mythological tradition. Anjanadri being one of the sacred hills among Saptagiri's is believed to be the birth palce, according to TTD findings makes the Tirumula hills a more added sacredness to the already sanctified place by the presence of supreme Lord Srinivasa. There are Puranic references too in this regard and that strengthens the claim as well.

Differences of opinion may be here and there that cannot minimise the effors of the TTD on the subject. HH 46th Jeer requests that the TTD may bring out more evidences regarding many such mythological references and beliefs in support of our glorious Dharmic tradition

**By the order od 46th Jeer of Ahobila Mutt**

Dr. S. Padmanabhacharyar, Srikaryam, Sri Ahobila Mutt

ಶ್ರೀ ಆಂಜನೇಯಸ್ವಾಮಿ ಜನ್ಮಸ್ಥಳ ಅಂಜನಾದ್ರಿ-ತಿರುಮಲ

श्री

श्रीमते रामानुजाय नमः

# श्री जगद्गुरु रामानुजाचार्य महा संस्थानम्

Sri Jagadguru Ramanujacharya Mahasamstanam

# ಶ್ರೀ ಯದುಗಿರಿ ಯತಿರಾಜ ಮಠ

# SRI YADUGIRI YATIRAJA MUTT

(Moola samsthanam : Tirunarayanapuram-Melukote 571431)

Founder Acharya : Sri. Ramanujacharya

---

Dr. K.S. Jawahar Reddy IAS
Excecutive Officer
Tirumala Tirupati Devasthanam
Tirupati

Dear Sir,

We are immensely happy to receive your letter dated 05.02.2022. We are pleased to note that you are publishing a booklet of research articles contributed by reputed research scholars and eminent vidwans with regard to the birth place of Sri Hanuman(Sri Anjaneya). It is really a yeoman's service of collecting the information from various Puranas and sacred scriptures

Based on various puranas as referred by you, it is concluded that tha Anjanadri which is of the seven hills of Lord Sri Venkateshwara is referred as birth place of Sri Hanuman. The TTD is taking all the steps to develop existing Hanuman temple with facilities to the prilgrims. It is really sacred work which will be remembered by generations to come. There is a proverb in Kannada 'There is no village without a Hanuman temple' Whatever project TTD will take, no doubt it will be a grand success because of blessings of Lord Srinivasa. Anjanadri will become a devine centre.

We would like to congratulate TTD for this wonderful initiative and pray Lord Srinivasa for the success of this project.

In the service of Acharya Ramanuja
Yatiraj Jeeyar Swamy







ಶ್ರೀಮನ್ಮೂಲರಾಮೋ ವಿಜಯತೇ

ಶ್ರೀಗುರುರಾಜೋ ವಿಜಯತೇ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರಪಾರಂಗತ

ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ

ಶ್ರೀಮನ್ಮೂಲರಘುಪತಿವೇದವ್ಯಾಸದೇವರ ದಿವ್ಯಶ್ರೀಪಾದಪದ್ಮಾರಾಧಕ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಾಧೀಶ್ವರರಾದ

ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತಸಾಮ್ರಾಜ್ಯದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ

ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ

ಶ್ರೀಮತ್ಸುಯತೀಂದ್ರತೀರ್ಥಶ್ರೀಪಾದಂಗಳವರ ವರಕುಮಾರರಾದ

## 1008 ಶ್ರೀ ಶ್ರೀಮತ್ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

## ಅನುಗ್ರಹ ಸಂದೇಶ

ಶ್ರೀಪ್ಲವನಾಮ ಸಂವತ್ಸರ ಮಾಘ ಬಹುಳ ಚತುರ್ದಶಿ, ಮಂಗಳವಾರ, ತಾರೀಖು: 01–03–2022

ತಿರುಮಲ ತಿರುಪತಿ ದೇವಸ್ಥಾನಗಳ ಸಮಸ್ತ ಅಧಿಕಾರ ವರ್ಗಕ್ಕೆ ಶುಭಾಶೀರ್ವಾದಗಳು.

ತಿರುಮಲ ತಿರುಪತಿ ದೇವಸ್ಥಾನದವರು ಶ್ರೀಆಂಜನೇಯಸ್ವಾಮಿಯವರ ದೇವಾಲಯವನ್ನು ತಿರುಮಲೆಯ ಗಿರಿಗಳಲ್ಲಿ ನಿರ್ಮಿಸುತ್ತಿರುವ ವಿಷಯ ತಿಳಿದು ಸಂತೋಷವಾಯಿತು.

ಭವಿಷ್ಯೋತ್ತರ ಪುರಾಣಾಂತರ್ಗತವಾದ ಶ್ರೀವೇಂಕಟಾಚಲ ಮಾಹಾತ್ಮ್ಯದಲ್ಲಿರುವ ಮೊದಲ ಅಧ್ಯಾಯದಲ್ಲಿ ಈ ಪರ್ವತಕ್ಕೆ ನಾಲ್ಕು ಯುಗಗಳಲ್ಲಿ ಬೇರೆ ಬೇರೆ ಹೆಸರುಗಳು ಇವೆಯೆಂದು ವರ್ಣಿಸಲಾಗಿದೆ. ತ್ರೇತಾಯುಗದಲ್ಲಿ ಈ ಪರ್ವತಕ್ಕೆ "ಅಂಜನಾಚಲ"ಎಂದು ಹೆಸರು ಯಾವ ರೀತಿ ಬಂದಿದೆ ಎಂದು ವಿವರಿಸುವ ಸಂದರ್ಭದಲ್ಲಿ , "ಕೇಸರಿ"ಎಂಬ ಕಪಿ ಶ್ರೇಷ್ಠನ ಪತ್ನಿಯಾದ "ಅಂಜನಾದೇವಿ", ತನಗೆ ಸಂತಾನವಿಲ್ಲದ ಕಾರಣ, ಮತಂಗ ಮುನಿಯನ್ನು ಪ್ರಾರ್ಥಿಸಿದಾಗ, ಈ ಪರ್ವತಗಳ ಮೇಲೆ ಇರುವ ಆಕಾಶಗಂಗೆಯ ತೀರ್ಥದಲ್ಲಿ ಸ್ನಾನ ಮಾಡಿ, ಹನ್ನೆರಡು ವರ್ಷಗಳ ಕಾಲ ತಪಸ್ಸನ್ನು ಆಚರಿಸಬೇಕೆಂದು, ಅದರಿಂದ ಪುತ್ರಸಂತಾನವು ಉಂಟಾಗುತ್ತದೆಂದು ಅಭಯವನ್ನು ನೀಡಿದರು.

ಇಲ್ಲಿ "ಹನ್ನೆರಡು ವರ್ಷಗಳಕಾಲ "ಎನ್ನುವುದಕ್ಕೆ "ದ್ವಾದಶಾಬ್ದಂ"ಎಂಬ ಪದವನ್ನು ಬಳಸಲಾಗಿದೆ.

**ಸ್ವಾಮಿ ತೀರ್ಥಸರಃಸ್ನಾನಂ ಅಶ್ವತ್ಥಸ್ಯ ಪ್ರದಕ್ಷಿಣಂ**
**ವರಾಹದೇವ ನಮನಂ ತತ್ತೀರ್ಥ ಪ್ರಾಶನಂ ತಥಾ**
**ಚತುರ್ವಿಧಾನಾಂ ಏತೇಷಾಂ ಆಬ್ದಸಂಖ್ಯಾಂ ಪ್ರಕಲ್ಪಯೇತ್।**

ಎಂಬ ಪ್ರಮಾಣವನ್ನು ಅನುಸರಿಸಿ, ಅಂಜನಾದೇವಿ ಪ್ರತಿನಿತ್ಯವೂ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನವನ್ನು ಮಾಡಿ. ಅಶ್ವತ್ಥವೃಕ್ಷವನ್ನು ಪ್ರದಕ್ಷಿಣೆಯನ್ನು ಮಾಡಿ, ವರಾಹಸ್ವಾಮಿಯನ್ನು ದರ್ಶಿಸಿ, ತೀರ್ಥಪ್ರಾಶನ, ಈ ರೀತಿ ಚತುರ್ವಿಧವಾದ ಕಾರ್ಯಗಳನ್ನು ತ್ರಿಕಾಲದಲ್ಲಿ ಹನ್ನೆರಡು ವರ್ಷಗಳಕಾಲ ಆಚರಿಸಿದ್ದರ ಫಲವಾಗಿ,

**ಪೂರ್ಣೇಸಂವತ್ಸರೇ ಜಾತೇ ವಾಯುದೇವೋ ಮಹಾಬಲಃ।**
**ಫಲಮಾದಾಯ ಭಕ್ಷ್ಯಾರ್ಥಂ ಪ್ರತ್ಯಹಂ ದಾಪಯಸ್ಮರುತ್॥**
**ಅಥ ಕಿಂಚಿದ್ದಿನೇ ವಾಯುಃ ಫಲೇ ವೀರ್ಯಂ ಪ್ರಪೂರಯತ್।**
**ವೀರ್ಯಗರ್ಭಫಲಂ ತಸ್ಯಾಃ ಪ್ರಾಕ್ಷಿಪತ್ ಕರಸಂಪುಟೇ॥**

ವಾಯುದೇವನು ಒಂದು ಫಲದಲ್ಲಿ ತನ್ನ ಶಕ್ತಿಯನ್ನು ತುಂಬಿ, ಅಂಜನಾದೇವಿಗೆ ನೀಡಿದ. ಆ ಫಲವನ್ನು ಸೇವಿಸಿದ್ದರಿಂದ ವಾಯುದೇವನ ವರಪ್ರಸಾದದಿಂದಾಗಿ ಅಂಜನಾದೇವಿ ಗರ್ಭವನ್ನು ಧರಿಸಿ, ನವಮಾಸಗಳು ತುಂಬಿದ ನಂತರ ಸುಂದರವಾದ ಒಂದು ಗಂಡು ಮಗುವಿಗೆ ಜನ್ಮವನ್ನು ನೀಡಿದಳು. ಆ ಶಿಶುವಿಗೆ "ಹನುಮಂತ"ಎಂದು ನಾಮಕರಣವನ್ನು ಮಾಡಿದರು.

**ಅಂಜನಾವ್ರತಮಾಸ್ಥಾಯ ಪುತ್ರಂಪ್ರಾಪ ಗಿರೀಶ್ವರೇ।**
**ತಸ್ಮಾದಂಜನ ಶೈಲೋಯಂ ಲೋಕವಿಖ್ಯಾತ ಕೀರ್ತಿಮಾನ್॥**

ಈ ರೀತಿ ಅಂಜನಾದೇವಿ ಈ ಪರ್ವತದ ಮೇಲೆ ತಪಸ್ಸನ್ನು ಆಚರಿಸಿ, "ಹನುಮಂತ"ಎಂಬ ಪುತ್ರನನ್ನು ಪಡೆದಳಾದ್ದರಿಂದ ಈ ಪರ್ವತಕ್ಕೆ "ಅಂಜನಾಚಲ"ವೆಂದು ಹೆಸರು ಬಂದಿದೆ ಎಂದು ಶ್ರೀವೇಂಕಟಾಚಲ ಮಾಹಾತ್ಮ್ಯಂನಲ್ಲಿ ಮೊದಲ ಅಧ್ಯಾಯದಲ್ಲಿ ಏಳನೆಯ ಶ್ಲೋಕದ ಮೂಲಕ ತಿಳಿದುಬಂದಿದೆ. ಈ ರೀತಿ ಕಲ್ಪಭೇದಗಳಿಂದಾಗಿ, ಅಂಜನಾದೇವಿ ಇಲ್ಲಿ ಪುತ್ರನನ್ನು ಪಡೆದಳೆಂದು ತಿಳಿದುಬರುತ್ತಿದೆ.

ಈ ರೀತಿ ಅತ್ಯಂತ ಮಹಿಮಾನ್ವಿತವಾದ, ಮೂರುಕೋಟಿ ತೀರ್ಥಗಳೀಗೆ ಜನ್ಮಸ್ಥಾನವಾದ, ವೈಕುಂಠಾಧಿಪತಿಯಾದ ಶ್ರೀಶ್ರೀನಿವಾಸನ ದಿವ್ಯಸ್ಥಾನವಾದ ತಿರುಮಲೆ ಕ್ಷೇತ್ರವು ಸೇವತತ್ಪರರಾದ ಅಧಿಕಾರಿಗಳ ಶ್ರಮದಿಂದಾಗಿ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಿದೆ ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ.

ಈಗ ತಿರುಮಲೆಯಲ್ಲಿ ಆಕಾಶಗಂಗಾತೀರ್ಥದ ಸಮೀಪದಲ್ಲಿ ನೆಲೆಸಿರುವ ಶ್ರೀಬಾಲಾಂಜನೇಯಸ್ವಾಮಿಯ ದೇವಾಲಯ ಭಕ್ತರಿಗೆ ಅತ್ಯಂತ ಪ್ರೀತಿಪಾತ್ರವಾಗಿದೆ. ಭಕ್ತರು ವಿಶೇಷ ಸಂಖ್ಯೆಯಲ್ಲಿ ಮಾತಾ ಅಂಜನಾದೇವಿ ಸಮೇತ ಬಾಲಾಂಜನೇಯಸ್ವಾಮಿಯನ್ನು ದರ್ಶಿಸಿ, ಅವರ ವಿಶೇಷ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ. ಆದ್ದರಿಂದ, ಭಕ್ತರ ಸೌಕರ್ಯಾರ್ಥವಾಗಿ ಅಲ್ಲಿರುವ ಪ್ರಾಕಾರವನ್ನು ಅಭಿವೃದ್ಧಿಮಾಡಿ, ಭಕ್ತರಿಗೆ ಸಕಲ ವಿಧವಾದ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಆಶಿಸುತ್ತಿದ್ದೇವೆ. ಈ ಪವಿತ್ರ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿರುವ ಅಧಿಕಾರಿಗಳಿಗೆ, ಸಿಬ್ಬಂದಿಗೆ, ಸಮಸ್ತ ಸನ್ಮಂಗಳವು ಉಂಟಾಗಲೆಂದು ಅಸ್ಮದ್ಗುರ್ವಂತರ್ಗತ ಶ್ರೀರಾಘವೇಂದ್ರತೀರ್ಥ ಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮನ್ಮೂಲರಘುಪತಿ ವೇದವ್ಯಾಸದೇವರಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಇತಿ ನಾರಾಯಣ ಸ್ಮರಣೆಗಳು

**ಶ್ರೀ ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು**
**ಮಂತ್ರಾಲಯ**







ಮಂಗಳಶಾಸನದೊಂದಿಗೆ, .......

॥ Sri Moolagopalakrishna Vijayate ॥ ॥ sri ॥ ॥ Sri Vyasarajo Vijyate ॥

**SRI SRI VYASARAJA MUTT (SOSALE)**

TO

Sri Jawahar Reddy garu, IAS

Executive Officer

Tirumala Tirupathi Devastanams

Tirupathi.

We feel immensely happy to learn that TTD is going to bring out a book containing research articles contributed by eminent scholars about the birth place of Lord Hanuman. We also learnt that the contributors having gone through various Puranas came to the conclusion that it was Anjandri of Tirumala Hills where Anjana the mother of Hanuman, gave birth to him. Since, only the Puranas are to be considered as the authentic evidence about the birth place of Hanuman, We are of the view that the conclusion arrived by the eminent scholars has to be accepted by all.

We heartily congratulate The Executive Officer Sri K. Jawahar Reddy garu, Additional Executive Officer Sri Dharma Reddy gaaru and other officials for undertaking a sincere endeavor to establish the matter decisively.

We hope that the TTD will take suitable steps to develop a magnificent temple of Hanuman in Anjanadri.

With Narayana smaranas

SriSri Vidyashreesha Teertha Swamiji

Peethadhipathi , Sri Vyasarama Matha (Sosale).





SRI DIGVIJAYARAMO VIJAYATE

**SHRIMAJJAGADGURU MADHWACHARYA MOOLAMAHASAMSTHANA**

UTTARADI MUTT

Administrative Office: 4
Sri Satyapramoda Teertha Road,
5th cross, Shankarapuram,
Basavanagudi, Bangalore-560004.
Camp''Bangalore.
Date- 04-03-2022

To

SRI JAWAHAR REDDY
IAS Executive Officer
TTD Devasthanam Tirupathi
Copy to
SRI A DHARMA REDDY
Additional Executive Officer
TTD Devasthanams Tirumala.

ಶ್ರೀಯುತ ಜವಹರ್ ರೆಡ್ಡಿಯವರು, ಕಾರ್ಯನಿರ್ವಹಣಾಧಿಕಾರಿ ಐ.ಎ.ಎಸ್ ತಿ.ತಿ.ದೇವಸ್ಥಾನ ತಿರುಪತಿ.

ಶ್ರೀಯುತ ಎ.ವಿ.ಧರ್ಮಾರೆಡ್ಡಿಯವರು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ತಿ.ತಿ.ದೇವಸ್ಥಾನ, ತಿರುಮಲ ಅವರಿಗೆ,

ಶ್ರೀಸತ್ಯಾತ್ಮತೀರ್ಥಶ್ರೀಪಾದರ ಅನೇಕ ನಾರಾಯಣಸ್ಮರಣೆಗಳು.

**ವಿಷಯ: ಆಂಜನೇಯನ ಅವತಾರಸ್ಥಳದ ಬಗೆಗಿನ ಒಂದು ವಿವರಣೆ.**

ವಿಷಯೋಪಕ್ಷೇಪ– ಆಂಜನೇಯನ ಅವತಾರ ಅಂಜನಾದ್ರಿಯಲ್ಲಿ ಅಂದರೆ ತಿರುಮಲೆಯಲ್ಲಿ ನಡೆದಿದೆ. ಈ ವಿಷಯವನ್ನು ಸ್ಪಷ್ಟೀಕರಿಸಲು ಬೇಕಾದಷ್ಟು ಪ್ರಮಾಣಗಳಿವೆ. ಹಾಗೆಯೇ ಮೇರುಪರ್ವತದಲ್ಲಿ ಆಂಜನೇಯನ ಜನ್ಮವಾಯಿತೆಂದು ವಾಲ್ಮೀಕಿ ರಾಮಾಯಣ ಮತ್ತು ಸಂಗ್ರಹರಾಮಾಯಣದಲ್ಲಿ ತಿಳಿಸಲಾಗಿದೆ.

ಕೆಲವರು ಹಂಪೀಕ್ಷೇತ್ರದಲ್ಲಿ ಆಂಜನೇಯನ ಅವತಾರ ನಡೆದಿದೆಯೆಂದು ಹೇಳುತ್ತಾರೆ. ಈ ವಿಷಯದ ಬಗೆಗೆ ಒಂದು ವಿವರಣೆ ಹೀಗಿದೆ.

ಬ್ರಹ್ಮಾಂಡ, ಭವಿಷ್ಯೋತ್ತರಪುರಾಣಗಳನ್ನು ಚೆನ್ನಾಗಿ ಓದಿದವರು ಹನುಮಂತನ ಅವತಾರ ಅಂಜನಾದ್ರಿಯಲ್ಲಿ ಅಂದರೆ ತಿರುಮಲೆಯಲ್ಲಿ ನಡೆದಿದೆ ಎಂದು ತಿಳಿಸಿದ್ದಾರೆ. ಆ ಪುರಾಣಗಳ ವಚನಗಳನ್ನು ಇಲ್ಲಿ ಉದಹರಿಸಲಾಗಿದೆ.

ಮೊದಲು ಬ್ರಹ್ಮಾಂಡಪುರಾಣದ ವೇಂಕಟೇಶಮಾಹಾತ್ಮ್ಯಂ ನಲ್ಲಿನ ಐದನೆಯ ಅಧ್ಯಾಯದಲ್ಲಿನ ಶ್ಲೋಕಗಳು ಹೀಗಿವೆ.

**ಉದಯಾಚಲಸಂರೂಢಂ ದದರ್ಶ ರವಿಮಂಡಲಮ್**
**ನಿತಾಂತರಕ್ತವರ್ಣೇನ ಫಲಬುದ್ಧಿರಭೂತ್ತದಾ ॥46॥**

**ಫಲಮಿತ್ಯೇವ ಮನ್ವಾನೋ ರವಿಂ ಭಕ್ಷಿತುಮುದ್ಯತಃ**
**ಗ್ರಹೀಷ್ಯಾಮೀತಿ ನಿಶ್ಚಿತ್ಯ ಶ್ರೀವೇಂಕಗಿರೇಸ್ತಟಾತ್**
**ಉದತಿಷ್ಠನ್ಮಹಾವೇಗಾದುದಯಾಚಲಶೇಖರಮ್ ॥47॥**

ಸೂರ್ಯನನ್ನು ಪೀಡಿಸಲು ರಾಹುವು ಮುಂದಾದ. ಆ ರಾಹುವನ್ನು ಎದುರಿಸುವುದಕ್ಕೆ ವೇಂಕಟಪರ್ವತದಿಂದ ಹನುಮಂತನು ಆಕಾಶಕ್ಕೆ ಎಗರಿದ. ಅಂದರೆ ಹನುಮಂತನ ಜನನ ವೇಂಕಟಪರ್ವತದಲ್ಲಿ ನಡೆದಿದೆ ಎಂದು ಈ ವಚನದ ಮೂಲಕ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಅದೇ ಪುರಾಣದಲ್ಲಿ, ಅದೇ ಪ್ರಸಂಗದಲ್ಲಿ ಮತ್ತೊಂದು ವಿಷಯ ಈ ರೀತಿ ಇದೆ. ಶೇಷಾಚಲದಲ್ಲಿ ತಪಸ್ಸು ಮಾಡಿ, ಈ ಪರ್ವತದಲ್ಲಿ ಪುತ್ರನನ್ನು ಹಡೆದದ್ದರಿಂದ, ಆ ಪರ್ವತ ಅಂಜನಾಚಲ ಎಂಬ ಹೆಸರಿನಿಂದ ಪ್ರಸಿದ್ಧಿಯಾಗಬೇಕೆಂದು ಬ್ರಹ್ಮದೇವನು ಅಂಜನಾದೇವಿಗೆ ಆಶೀರ್ವಾದ ಪೂರ್ವಕವಾಗಿ ವರವನ್ನು ನೀಡಿದರು. ಆ ರೀತಿ ವರಪ್ರದಾನ ಮಾಡುತ್ತಾ ಹೇಳಿದ ಮಾತುಗಳಿವು.

**ಅಂಜನೇ ತ್ವಂ ಹಿ ಶೇಷಾದ್ರೌ ತಪಸ್ತ್ವಪ್ತ್ವಾ ಸುದಾರುಣಮ್**
**ಪುತ್ರಂ ಸೂತವತೀ ಯಸ್ಮಾತ್ ಲೋಕತ್ರಯಹಿತಾಯ ವೈ ॥64॥**

**ಪ್ರಸಿದ್ಧಿಂ ಯಾತು ಶೈಲೋಽಯಮಂಜನೇ ನಾಮತಸ್ತವ**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯ ವಿಚಾರಣಾ ॥65॥**

ಭವಿಷ್ಯೋತ್ತರ ಪುರಾಣದಲ್ಲಿನ ವೇಂಕಟೇಶ ಮಾಹಾತ್ಮ್ಯದಲ್ಲೂ ಹನುಮಂತನ ಅವತಾರ ವೇಂಕಟಾಚದಲ್ಲಿ ನಡೆದಿದೆ ಎಂದು ಸ್ಪಷ್ಟವಾಗಿ ಹೇಳುತ್ತಿದೆ. ಅಲ್ಲಿನ ಪ್ರಮಾಣವಚನಗಳು ಈ ರೀತಿ ಇವೆ.

**ಅಂಜನಾ ವ್ರತಮಾಸ್ಥಾಯ ಪುತ್ರಂ ಪ್ರಾಪ ಗಿರೀಶ್ವರೇ**
**ತಸ್ಮಾದಂಜನಶೈಲೋಽಯಂ ಲೋಕೇ ವಿಖ್ಯಾತಕೀರ್ತಿಮಾನ್ ॥1.77॥**

ಪಾಠಾಂತರಂ ಪ್ರಾಪ್ತುಪುತ್ರಾಭವದ್ಗಿರೌ

ಅಂಜನಾದೇವಿ ಈ ವೇಂಕಟಾಚಲದಲ್ಲಿ ವ್ರತವನ್ನು ಆಚರಿಸಿ, ಪುತ್ರನನ್ನು ಪಡೆದಳಾದ್ದರಿಂದ ಈ ಪರ್ವತಕ್ಕೆ ಅಂಜನಾಚಲ ಎಂಬ ಹೆಸರು ಪ್ರಸಿದ್ಧಿಯಾಗಿದೆ. ಈ ರೀತಿ ಪುರಾಣವು ಉಲ್ಲೇಖಿಸುತ್ತಿದೆ. ಈ ಪ್ರಸಂಗದಲ್ಲಿ ಪ್ರಾಪ್ತಪುತ್ರಾಭವದ್ಗಿರೌ ಎಂಬ ಪಾಠ ಭೇದವೂ ಹನುಮಂತನ ಅವತಾರ ವೇಂಕಟಾಚಲದ ಮೇಲೆ ಆಗಿದೆಯೆಂದು ತಿಳಿಸುತ್ತಿದೆ. ಈ ವಚನಗಳನ್ನು ಗಮನಿಸಿದರೆ ಹನುಮಂತನ ಅವತಾರ ವೇಂಕಟಾಚಲದಲ್ಲಿ, ತಿರುಮಲೆಯಲ್ಲಿ ನಡೆದಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತಿದೆ.

ವಾಲ್ಮೀಕಿ ರಾಮಾಯಣ, ಸಂಗ್ರಹಣ ರಾಮಾಯಣದಲ್ಲಿ ಹೇಳಲ್ಪಟ್ಟಿರುವ ಹನುಮಂತನ ಅವತಾರ ಈ ರೀತಿ ಇದೆ.

ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿನ 35ನೆಯ ಸರ್ಗದಲ್ಲಿ ಅಂಜನಾ–ಕೇಸರಿ ದಂಪತಿಗಳ ಆವಾಸಸ್ಥಾನ ಮೇರುಪರ್ವತವೆಂದು ಹೇಳಲಾಗಿದೆ. ಅವತಾರ ಪ್ರಸಂಗವನ್ನೂ ಕೂಡಾ ಅಲ್ಲೇ ಉಲ್ಲೇಖಿಸಲಾಗಿದೆ.

**ಸೂರ್ಯದತ್ತವರಸ್ವರ್ಣಃ ಸುಮೇರುರ್ನಾಮ ಪರ್ವತಃ**
**ಯತ್ರ ರಾಜ್ಯಂ ಪ್ರಶಾಸ್ತ್ಯಸ್ಯ ಕೇಸರೀ ನಾಮ ವೈ ಪಿತಾ ॥19॥**

**ತಸ್ಯ ಭಾರ್ಯಾ ಬಭುವೈಷಾ ಹ್ಯಂಜನೇತಿ ಪರಿಶ್ರುತಾ।**
**ಜನಯಾಮಾಸ ತಸ್ಯಾಂ ವೈ ವಾಯುರಾತ್ಮಜಮುತ್ತಮಮ್॥20॥**

ಸೂರ್ಯನ ವರದಿಂದ ಸ್ವರ್ಣವರ್ಣವಿಭೂಷಿತವಾದುದು ಈ ಮೇರುಪರ್ವತ. ಈ ಮೇರುಪರ್ವತದಲ್ಲಿ ಕೇಸರಿ ಎಂಬ ಕಪಿ ಸಾಮ್ರಾಜ್ಯವನ್ನು ಪಾಲಿಸುತ್ತಿದ್ದ. ಅವನ ಪತ್ನಿ ಅಂಜನಾದೇವಿ. ಆ ಅಂಜನಾದೇವಿ ಹನುಮಂತನಿಗೆ ಜನ್ಮವನ್ನು ನೀಡಿದಳು.

ಈ ವಚನದ ಮೂಲಕ ಹನುಮಂತನ ಅವತಾರ ಮೇರುಪರ್ವತದಲ್ಲಿ ನಡೆದಿದೆಯೆಂದು ಅರ್ಥವಾಗುತ್ತಿದೆ.

ನಾರಾಯಣ ಪಂಡಿತಾಚಾರ್ಯರು ರಚಿಸಿದ ಸಂಗ್ರಹರಾಮಾಯಣದಲ್ಲಿ ಕಿಷ್ಕಿಂಧಾಕಾಂಡದಲ್ಲಿನ ಮೊದಲ ಸರ್ಗ, ವಾಲ್ಮೀಕಿ ರಾಮಾಯಣವನ್ನು ಅನುಸರಿಸುತ್ತಾ ಈ ವಿಷಯವನ್ನು ತಿಳಿಸುತ್ತಿದೆ. ಆ ವಚನವನ್ನು ಗಮನಿಸಬೇಕು.

**ಪ್ಲವಂಗಮಾನಾಂ ಗತ ಆಧಿರಾಜ್ಯಂ ಪ್ಲವಂಗಮಃ ಕೇಸರಿನಾಮಧೇಯಃ**
**ಮೇರಾವುಪಾಸಾಂಜನಯಾ ಸುಗಾತ್ರ್ಯಾ ಶಚ್ಯಾ ಶಚೀಕಾಂತ ಇವ ದ್ಯುಲೋಕೇ**
**ಅಸೂತ ಸೂನುಂ ತಮಸಾಂ ವಿನಾಶಂ ತಮಂಜನಾ ಸಜ್ಜನಕಂಜಬಂಧುಮ್**
**ಅನರ್ಘ್ಯಮಾಣಿಕ್ಯಮಣಿಪ್ರಕಾಶಂ ಪ್ರಾಚೀವ ದೇವಂ ಜಗದೀಶದೀಪಮ್ ॥**

ಈ ವಚನಗಳ ಆಧಾರದಿಂದ ಹನುಮಂತನ ಅವತಾರ ಮೇರುಪರ್ವತದಲ್ಲಿ ನಡೆದಿದೆಯೆಂದು ಕೆಲವರು ಹೇಳುತ್ತಾರೆ.

**ಹಂಪಿ ಕ್ಷೇತ್ರದ ವಿಶೇಷತೆ**

**ಹಂಪಿಕ್ಷೇತ್ರ ಹನುಮಂತನ ಕಾರ್ಯಕ್ಷೇತ್ರವೆಂದು ಪ್ರಸಿದ್ಧವಾಗಿದೆ.**

ಸ್ಕಾಂದಪುರಾಣಾಂತರ್ಗತವಾದ ಪಂಪಾಮಾಹಾತ್ಮ್ಯಂನಲ್ಲಿ ಹಂಪಿಕ್ಷೇತ್ರದ ಮಹಿಮೆ ವರ್ಣಿಸಲ್ಪಟ್ಟಿದೆ. ಆ ಕ್ಷೇತ್ರವನ್ನು ವರ್ಣಿಸುವ ಸಂದರ್ಭದಲ್ಲಿ ಮತಂಗಾಶ್ರಮ ಹಂಪಿಕ್ಷೇತ್ರದಲ್ಲಿ ಇದೆ ಎಂದು ಹೇಳಲಾಗಿದೆ. ಆ ಮತಂಗ ಋಷಿಗಳ ಸಲಹೆಯಿಂದ, ಆಶೀರ್ವಾದದಿಂದ, ಅಂಜನಾದೇವಿ ಶೇಷಾಚಲದಲ್ಲಿ ತಪಸ್ಸನ್ನು ಆಚರಿಸಿದಳೆಂಬ ವಿಷಯವೂ ಎಲ್ಲರಿಗೂ ತಿಳಿದಿದೆ. ಈ ಪ್ರಮಾಣದ ಮೂಲಕ ಹಾಗೇ ಅನೇಕ ವ್ಯಾಖ್ಯಾನಗಳು, ಸಾಕ್ಷ್ಯಗಳ ಮೂಲಕ ಹಂಪೀಕ್ಷೇತ್ರ ಹನುಮಂತನ ಕಾರ್ಯಕ್ಷೇತ್ರವೆಂದು ತಿಳಿದುಬರುತ್ತಿದೆ.

**ಯಂತ್ರೋದ್ಧಾರಕ ಹನುಮಂತನ ಪ್ರತಿಷ್ಠಾಪನೆಗೆ ನಾಂದಿ**

ಶ್ರೀವ್ಯಾಸರಾಜರು ಹಂಪೀಕ್ಷೇತ್ರದಲ್ಲಿ ಯಂತ್ರೋದ್ಧಾರಕ ಹನುಮಂತನನ್ನು ಪ್ರತಿಷ್ಠಾಪನೆ ಮಾಡಿದರು. ಆ ಸ್ಥಾನದಲ್ಲಿ ಪ್ರತಿಷ್ಠಾಪನೆ ಏಕೆ ಮಾಡಿದರೆಂಬ ವಿಷಯದಲ್ಲಿ ಒಂದು ಇತಿಹಾಸವನ್ನು ಹೇಳುತ್ತಾರೆ. ವ್ಯಾಸರಾಜರ ಸ್ವಪ್ನದಲ್ಲಿ ಹನುಮಂತನು ಕಾಣಿಸಿಕೊಂಡು, "ಈ ಸ್ಥಳದಲ್ಲೇ ನಾನು ಮೊದಲಬಾರಿಗೆ ಶ್ರೀರಾಮನನ್ನು ಸಂದರ್ಶಿಸಿದೆ. ಆದ್ದರಿಂದ, ಇಲ್ಲಿ ನನ್ನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಬೇಕು"

ಎಂದು ಹೇಳಿದನೆಂದು, ಅನೇಕರು ಇತಿಹಾಸವನ್ನು ಹೇಳುತ್ತಾರೆ. ಇಂತಹಾ ವಿವರಣೆಗಳೊಂದಿಗೆ ಹಂಪಿಕ್ಷೇತ್ರ ಹನುಮಂತನ ಕಾರ್ಯಕ್ಷೇತ್ರವೆಂದು ಅರ್ಥವಾಗುತ್ತಿದೆ.

ಕೆಲವರು ಹನುಮಂತನ ಅವತಾರವೂ ಹಂಪಿಯಲ್ಲೇ ನಡೆದಿದೆ ಎಂದು ಹೇಳುತ್ತಾರೆ. ಈ ವಿಷಯದಲ್ಲಿ ಪ್ರಮಾಣಗಳು ಇದ್ದರೆ ಆ ರೀತಿ ಅಂಗೀಕರಿಸುವುದರಲ್ಲಿ ತಪ್ಪಿಲ್ಲ.

ಹನುಮಂತನು ಅವತರಿಸಿದ ಸ್ಥಳದ ಬಗೆಗೆ ಪ್ರಮಾಣಗಳು ಹೀಗೆ ವಿಭಿನ್ನವಾಗಿ ಇರುವುದರಿಂದ ಸಾಮಾನ್ಯ ಭಕ್ತರು ಹನುಮಂತನ ಅವತಾರದ ಸ್ಥಳದ ಬಗೆಗೆ ಹೇಗೆ ತಿಳಿದುಕೊಳ್ಳಬೇಕು? ಯಾವ ರೀತಿ ತೀರ್ಮಾನಿಸಬೇಕು? ಎಂಬ ಸಮಸ್ಯೆ ಎದುರಾಗುತ್ತದೆ. ಇಂತಹಾ ಸಂದರ್ಭದಲ್ಲಿ ಕಲ್ಪಭೇದವನ್ನು ಆಶ್ರಯಿಸಿ, ಬೇರೇ ಬೇರೇ ಪ್ರಮಾಣಗಳನ್ನು ಗೌರವಿಸಬೇಕು.

**ಕಲ್ಪಭೇದವೆಂದರೇನು?**

ಹದಿನಾಲ್ಕು ಮನ್ವಂತರಗಳ ಅತಿಸುದೀರ್ಘವಾದ ಕಾಲವನ್ನು ಕಲ್ಪ ಭೇದವೆಂದು ಹೇಳುತ್ತಾರೆ. ಸಾಮಾನ್ಯವಾಗಿ ದೇವ, ದೇವತೆಗಳ ಚರ್ಯೆಗಳು ಪ್ರತೀಕಲ್ಪದಲ್ಲೂ ಸಾಮಾನ್ಯವಾಗಿ ಒಂದೇ ರೀತಿಯಲ್ಲಿರುತ್ತವೆ. ಆದರೂ ಕೆಲವು ಕಾರ್ಯಗಳು ತಾರುಮಾರಾಗುತ್ತವೆ. ಉದಹಾರಣೆಗೆ ನಮ್ಮ ಕೆಲಸಗಳನ್ನು ನಾವು ತಿಳಿದುಕೊಳ್ಳಬೇಕೆಂದರೆ,

ಶ್ರೀಹರಿ ವರಾಹಸ್ವಾಮಿಯಾಗಿ ಅವತರಿಸಿ, ಹಿರಣ್ಯಾಕ್ಷ ಎಂಬ ದೈತ್ಯನನ್ನು ಸಂಹರಿಸಿದ. ಈ ವಿಷಯ ಎಲ್ಲರಿಗೂ ತಿಳಿದಿದೆ.

ಕೆಲವು ಕೆಲವು ಪುರಾಣಗಳು ಕೋರೆಗಳಿಂದ ಹಿರಣ್ಯಾಕ್ಷನನ್ನು ಸಂಹರಿಸಿದನೆಂದು ಹೇಳುತ್ತವೆ. ಕೆಲವು ಪುರಾಣಗಳು ತನ್ನ ಕೈಯಿಂದ ಆ ದೈತ್ಯನ ಕಿವಿಯ ಮೇಲೆ ಹೊಡೆದು ಸಂಹರಿಸಿದನೆಂದು ಹೇಳುತ್ತವೆ. ಎರಡರಲ್ಲೂ ಎರಡೂ ನಿಜವಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಒಂದು ಕಲ್ಪದಲ್ಲಿ ಕೋರೆದಾಡಿಗಳಿಂದ ಆದಿಹಿರಣ್ಯಾಕ್ಷನನ್ನು ವರಾಹಸ್ವಾಮಿ ಕೊಂದ, ಮತ್ತೊಂದು ಕಲ್ಪದಲ್ಲಿ ಕಶ್ಯಪ-ದಿತಿದೇವಿಯ ಪುತ್ರನಾದ ಹಿರಣ್ಯಾಕ್ಷನನ್ನು ಕೈಯಿಂದ ಕಿವಿಯ ಮೇಲೆ ಹೊಡೆದು ಕೊಂದನೆಂದು ಅರ್ಥಮಾಡಿಕೊಳ್ಳಬೇಕು. ಪ್ರಮಾಣಗಳನ್ನು ಗೌರವಿಸಬೇಕು.

ಹೀಗೆ ಒಂದು ಕಲ್ಪದಲ್ಲಿ ತಿರುಮಲೆಯಲ್ಲಿ, ಇನ್ನೊಂದು ಕಲ್ಪದಲ್ಲಿ ಮೇರುಪರ್ವತದಲ್ಲಿ ಹನುಮಂತನ ಅವತಾರ ನಡೆದಿದೆಯೆಂದು ತೀರ್ಮಾನಿಸಿ, ಬ್ರಹ್ಮಾಂಡ-ಭವಿಷ್ಯೋತ್ತರ-ಮತ್ತು ರಾಮಾಯಣದ ಪ್ರಮಾಣಗಳನ್ನು ಗೌರವಿಸಬೇಕು. ಹಾಗೆಯೇ ಹಂಪೀಕ್ಷೇತ್ರದಲ್ಲಿ ಹನುಮಂತನ ಅವತಾರ ಎಂಬ ವಿಷಯದಲ್ಲಿ ಪ್ರಮಾಣ ದೊರೆತರೆ ಮತ್ತೊಂದು ಕಲ್ಪದಲ್ಲಿ ಹಂಪಿ ಕ್ಷೇತ್ರದಲ್ಲಿ ಹನುಮಂತನ ಅವತಾರ ನಡೆದಿದೆಯೆಂದು ತೀರ್ಮಾನಿಸಬಹುದು. ಹೀಗೆ ಕಲ್ಪಭೇದವನ್ನು ಆಶ್ರಯಿಸಿ ತೀರ್ಮಾನಿಸಿರುವ ಘಟನೆಗಳು ಅನೇಕವಿವೆ. ಅದಕ್ಕೆ ಒಂದು ಉದಾಹರಣೆಯನ್ನು ನೀಡಲಾಯಿತು. ಆ ರೀತಿ ಪ್ರಮಾಣಗಳನ್ನು ಸರಿಯಾದ ವಿಧದಲ್ಲಿ ತೀರ್ಮಾನಿಸಿಕೊಳ್ಳುವುದು ಶಾಸ್ತ್ರೀಯವಾದುದು.

ಈಗ ತಿರುಮಲೆಯಲ್ಲಿ ಹನುಮಂತನ ಅವತಾರ ನಡೆದಿದೆಯೆಂಬ ವಿಷಯದಲ್ಲಿ ಪ್ರಮಾಣಗಳು ಇವೆ ಆದ್ದರಿಂದ ಅಂಜನಾಚಲ, ತಿರುಮಲೆ ಆಂಜನೇಯನ ಜನ್ಮಸ್ಥಾನವೆಂಬ ವಿಷಯದಲ್ಲಿ ಎಂತಹಾ ಸಂದೇಹವೂ ಇಲ್ಲ.

ಇತಿ ನಾರಾಯಣಸ್ಮರಣೆಗಳು.

ಶ್ರೀಸತ್ಯಾತ್ಮ ತೀರ್ಥಶ್ರೀಪಾದರು ಶ್ರೀ ಉತ್ತರಾದಿಮಠ.

॥ಶ್ರೀ ಕೋದಂಡರಾಮೋ ವಿಜಯತೇ॥

ಶ್ರಿ ಅಚ್ಯುತಪ್ರಜ್ಞ–ಜಗದ್ಗುರು ಶ್ರೀಪೂರ್ಣಪ್ರಜ್ಞ–ಶ್ರೀಸತ್ಯತೀರ್ಥ ಮಹಾಸಂಸ್ಥಾನ

ಶ್ರೀ ಭಂಡಾರಕೇರಿ ಮಠ, ಶ್ರೀಭಾಗವತಾಶ್ರಮ ಪ್ರತಿಷ್ಠಾನ,

1023, 1 ಊ ಮುಖ್ಯ ರಸ್ತೆ, 8 ಅಡ್ಡರಸ್ತೆ, 2 ಹಂತ, ಗಿರಿನಗರ,

ಬೆಂಗಳೂರು– 560085.



Ref: 23/SBM/BNG/2021-22 DATE: 05-03-2022

Place: Bengaluru

To

Sri A.V.DharmaReddy, IDES

Additional Executive Officer

TTD, Tirupati (AP)

We are in receipt of your letter dated 16-02-2022 and are happy to learn about the work done by TTD on ascertaining the birthplace of Sri Hanuman. We are also glad to know that you are bringing out a compilation of research articles in this regard in the form of booklet.

Evaluating the Puranic references that we have come across, it appears that Anjanadri in Tirumala is indeed the birth place of Sri Hanuman. Two referenced in the Puranas are of great relevance in this aspect. First, the Tirumala hill came to be known as Anjanadri as Anjana performed penance and was blessed with Sri Hanuman as her son at that place. Second, Sri Hanuman's early childhood activities such as his famous flight towards Surya happened from the Venkatadri Hill.

We also recognize that the Hampi kshetra in Karnataka is also of great significance for the devotees of Sri Rama and Sri Hanuman for being the place where Sri Hanuman met Lord Sri Rama and did most important activites.

Therefore, unless encountered with stronger counter evidence, we believe that Anjandri in Tirumala is in fact Sri Hanuman's birth place (Janma-Kshetra) : Hampi in Karnataka is the place of his major activities (Karya-kshetra) : and the both these places are sacred and important in their own rights.

We wish that TTD undertakes further activities to continue fostering devotion towards Lord Sri Rama and Sri Hanuman.

With many reminiscences of the glory of Sriman Narayan,

**Sri Vidyesha Teertha Swamiji,**

Sri Bhandarkeri Matha,
Jagadguru Sri Madhwacharya
Maha Vedanta Peetham,
Udupi-Bengaluru.
Karnataka.







**Sri Gopinatho Vijyate**

Srimathaparamahamsa parivrajakacharyadyaneka Guna sampanna padavakyuapramana
Paravaraparina sarvathantra swathantra Srimadvaisnava siddhantha prathisthapanacharya
Jagduguru Sriman Madhvacharya Moola Maha Samsthana Sri Padmanabha Theertha Parampara
Sri Hayavadana Rangavitalathamaka Sri Sri Gopinathadivya Sripadapadmaradhaka
Sri Sripadaraja Varavidyasimahasanadeesha
Sri 1008 Sri Vijnananidhitheertha Sripadangala Karakamala sanjatha
Sri 1008 Sri Keshavanidhi Theertha Sripadangalavara vara kumararada

SRI 1008 SRI SUJAYANIDHI THEERTHA SRIPADANGALAVARU

To,

The Addl Executive Officer,

Tirumala Tirupathi Devastanams,

Tirumala.

We are filled with pleasure to note that TTD will be releasing a booklet comprising of research articles contributed by renowned scholars about the contention of the birth place of Lord Hanuman. We also grasp that the contributors , after going through various Puranas, came to the conclusion that Hanuman’s birth place is Anjandri on Tirumala hills where Anjana, the mother of Hanuman, gave birth to him. Since only the Puranas can be weighed as authentic evidence about the birth place of Hanuman and as per our perspective, the conclusion arrived at by the reputed scholars has to be accepted by one and all.

We heartily congratulate Sri Dharmareddy along with other officials on their efforts to resolve the issue of Hanuman's birthplace decisively.

Sri. 1008 Sri SUJANIDHI THEERTHA SRIPADANGALAVARU

SRIPADARAJA MUTT, MULABAGILU.

# ಭೂಮಿ ಪೂಜೆಗೆ ಆಗಮಿಸಿದಾಗ ನಡೆದ ಕಾರ್ಯಕ್ರಮಗಳು



श्री श्री श्री रामभद्राचार्य महाराज

जय श्री राम

मेरा सत्य बोलने का अभ्यास है।

एक बात आप जानते हैं । जब विवाद होने हैं तो निर्णय कौन करता है, विवाद होने पर निर्णय करते हैं शास्त्र, गीता अध्याय सोलह के चैंबीसवें श्लोक को देखे क्या करना चाहिए क्या नहीं करना चाहिए, इसमे शास्त्र प्रमाण है और कोई प्रमाण नही है, शास्त्र प्रमाण! हमारे यहाँ दो प्रकार के प्रमाणों की चार्चा है स्वतप प्रमाण और परतप प्रमाण। स्वतप प्रमाण वह होता है जाहाँ किसी दूसरे प्रमाण की चर्चा नहीं होती, जैसे वेद एवं वाल्मीकी रामायण । परतप प्रमाण वे हैं जो हनुमानजी के जन्म के संबंध में एक विवाद उठा कि हनुमानजी का जन्म स्थान कर्नाटक मे माना जाए या तिरुमला में माना जाए । मैने भी कर्नाटक मे हनुमानजी के जन्म स्थान का दर्शन किया, आज यहाँ रूक गया । माना क्या जाए? शास्त्र क्या है, आप माने चाहे जो, हम नही जानते, आप ये माने या वो माने हम नही जानते कि आप ये माने या वो माने, शास्त्र कह क्या रहे हैं, इस पर तो चर्चा होनी चाहिए, यदि नही होगी तो हमारा आचार्यत्व कैसा । मै हूँ जगदगुरु रामानंदाचार्य । जब जगद्गुरू रामानंदाचार्य हूँ मै, तो मुझे शास्त्र पर कहना चाहिए, चाहे कुछ भी, मुझे इसकी बलि चढ़ानी पड़े, बलि देने के लिए मै दूँगा । पर कहूँगा शास्त्र, जो लिखा है वो कहूँगा

मै । मै झूठ नहीं बोलूंगा, No, I will never speak a lie, always I will speak true, शास्त्र क्या कह रहे हैं, इस पर आप विचार करें सबको विचार करना होगा । शास्त्र क्या कह रहे हैं पहले इस पर हमें विचार करना ही चाहिए कर्नाटक मे भी हनुमानजी का जन्म स्थान है, यहाँ भी, हम कुछ नही कह सकते कल एक व्यक्ति ने कह दिया किसीको मारीच । एक गुरु गोविदानंद सरस्वती हैं,बताइए ! हमको ही स्वयं बार बार रोका गया आप मत जाइए, आप मत जाइए, मैने कहा भई, मै किसीके शासन में नहीं हूँ ,मै आचार्य हूँ, मूझ पर कोई शासन नहीं कर सकता, कोई मुझे डायरेक्शन नही दे सकता, कोई मुझ पर डिक्टेटरशिप नहीं कर सकता,जहाँ मेरा विवेक हो वहाँ जाऊँगा।

देखीए मित्रों, मै बहुत विनम्रता के साथ कहूँगा, कोई मेरा पक्षपात नहीं होगा, यहाँ न कोई पक्षपात होगा, कोई मेरा पक्षपात नहीं, शास्त्र क्या कह रहे हैं । शास्त्र ये कह रहे हैं, जैसे कि पुस्तक में भी लिखा है, मैने देखा, सारे पुराण ये कह रहे हैं बहुत से, स्कंद पुराण कह रहा है, ब्रह्मांड पुराण कह रहा है और भी पुराण कह रहे हैं कि अंजनाजी ने यहाँ तप किया था, ये सब कह रहे हैं, अंजनाजी ने तिरुमला मे तप किया था। अंजना ने तपस्या करके यहाँ हनुमानजी को जन्म दिया, इसके बाद देवता लोगों ने आकर, क्योंकि अंजनाजी ने इसी पर्वत पर पुत्र को जन्म दिया, इसलिए इस पर्वत को देवताओं ने कहा इसको अंजनाद्री कहा और वराहद्री भी कहा, इसलिए निश्चय हो जाता है, इसमें चिंता नहीं करनी चाहिए गोविंदानंद सरस्वती को । यदि कर्नाटक ही मानना हो तो मानलो। कल्प भेद से भगवान के चरित्रों मे भिन्नता हो जाती है।

जैसे स्वयं रामचरित मानसकार गोस्वामीजी ने रामचरित मानस मे कहा कि धनुषयज्ञ के बाद परशुराम जी आए, मिथिला मे और 'जानकी मंगल' में कहा कि परशुरामजी मार्ग मे मिले, ते दोनो बाते सत्य हो सकती हैं कल्पभेद की दृष्टि से यदिं आप को बहुत चिंता है तो कर्नाटक में मान लीजिए, पर शास्त्रों के प्रमाण की बहुलता तिरुमला मे ही है, मै कह रहा हूँ। जिसको जो दंड देना हो, मुझे दे ले, मै कह रहा हूँ, मै तो कह ही रहा हूँ, शास्त्र प्रमाण की बहुलता यही कह रही है वहाँ भी मानो, यहाँ भी मानो मुझे कोई आपत्ति नहीं है। अब एक बात और सुनिए, पुराणों की बात, इन लोगों ने कही भी थी, जब विबिनार हुआ था तो मैं उसमें जुड़ा था, मुझे इन विवादों का कोई पता नहीं था परंतु मैने अपने वक्तव्य में कहा था कि पुराणों मे तो कहा ही गया कि तिरूमला मे अंजनाजी ने तपस्या की थी पर एक वाल्मीकी रामायण की रामानुज संप्रदाय मे प्रभावित टीका है 'भूषण टीका', उसके रचयिता हैं गोविंदराज उन्होंने यहीं तिरूपति बालाजी में जब ब्रह्मोत्सव हुआ था उसी समय प्रेरणा पाकर 'भूषणटीका' की रचना की थी और 'भूषण टीका' के बाल कांड के मंगलाचरण के द्वितीय श्लोक में वे कहते हैं अर्थात भूषणकार गोविंदराज कहते है. कि 'अंजन' नाम का जो पर्वत है, जहाँ अंजनाजी ने तप किया इसलिए इसका नाम 'अंजन' पड़ा।

५

अंजनाजी ने जहाँ तप किया था उस समय भी लोग ये कह रहे हैं कि मंदिर अर्वाचीन होगा ये भी गलत है,भूषणकार के समय में भी यहाँ मंदिर था। हनुमानजी का, अब गोविंदा नंद सरस्वती की शक्ति हो तो भूषणकार को जाकर गोली मार दें। भूषणकार तो वैकुंठ गए और उनके कर्म में तो वैकुंठ जाना लिखा नहीं है। स्पष्ट कहा है कि मै वहाँ रामायण लिख रहा हूँ जहाँ अंजनाजी ने तप करके हनुमान जी को प्राप्त किया था। आज भी हनुमान जी का, बाल अंजनाजी का, बाल आंजनेय का आज भी वहाँ मंदिर है। उनकी सन्निधि में और वेंकटनायक वेंकटेश भगवान के द्वार पर नाना देश से आए हुए विद्वानों के द्वारा प्रेरित होकर मैने रामायण की व्याख्या का प्रारंभ किया। तो मै ये कहने जा रहा हूँ कि पुराणों ने भी कहा, इतिहास ने भी, अब एक और आपको रोचक प्रमाण बताऊँ, मैं जानता था मुझे राष्ट्रभाषा में बोलना पडता था और मै ये भी जानता था कि मुझे तुष्टीकरण की नीति नहीं अपनानी है, जो सत्य है वो कहूँगा मै बिलकुल कहूँगा । देखें, स्वयं भूषणकार ने कह दिया, अब क्या चाहते हैं आप, और भूषणकार की टीका का जो समय है वो बारहवीं शताब्दी का है। इसका अर्थ है कि बाल आंजनेय का मंदिर,बाल आंज नेय का विग्रह, बारहवीं शताब्दी से भी पहले का है, अब क्या करोगे आप?और सबसे रोचक बात, मैं अब वाल्मीकी की ओर चलूँ , वाल्मीकी रामायण के किष्किंधा कांड के छासठवें सर्ग के चौबीसवें श्लोक में वाल्मीकी कहते हैं वो, शैलाग्र शिखरे कह रहे हैं, श्रेष्ठ पर्वत, अंजन पर्वत के शिखर पर, ये सातवां शिखर है जहाँ हम, आप बैठे हैं।

5

इस शिखर पर जब हनुमानजी का प्राकट्य हुआ और सूर्यनारायण को जब वो निगलने के लिए दौड़े, इंद्र ने वज्र का प्रयोग कर दिया और वज्र का प्रयोग करने पर हनुमानजी की ठोड़ी टूटी नहीं, गलत बात, यदि ठोड़ी टूटी होती तो उन्हें हनुमान क्यों कहा जाता, क्या किसी निर्धन को कोई धनवान कहता है? यहाँ मुतुप प्रत्यय प्रशस्त्य में है। आचार्य शास्त्र प्रमाण देता है, रात दिन जो पढ़ता है, वो आचार्य होता है, तथाकथित गुरुजनों की कृपा से कोई आचार्य नहीं हो सकता और जगदगुरू वही हो सकता है जो तीनों ग्रंथों पर भाष्य कर दे। प्रस्थानत्रयी पर भाष्य करे तीनों पर, गीता पर, उपनिषद् पर और ब्रह्मसूत्र पर, आप सब के सहयोग से मै इस शताब्दी का पहला वह आचार्य हूँ जिसने बयालीस सौ पृष्ठों पर प्रस्थानत्रयी पर भाष्य लिखा, देखिए, स्वयं वाल्मीकी कह रहे हैं कि शैलाग्र शिखरे श्रेष्ठ पर्वत के सातवें शिखर पर इंद्र ने जब वज्र मारा तो वज्र ने केवल हनुमानजी की थोड़ी सी सेवा की प्रत्यय के बिना भी पूर्वोत्तर पद का लोप हो जाता है, इसलिए शास्त्र तो यही कह रहे है कि अंजनाजी ने यहाँ तप किया था और यहीं हनुमानजी का प्राकट्य हुआ - इसके पश्चात जब हनुमानजी ने सूर्यनारायण से विद्या प्राप्त की तो सूर्यनारायण ने हनुमानजी से दक्षिणा माँगी कि तुमने मुझसे एक दिन में पूरी व्याकरण पढ़ी, मुझे दक्षिणा दो, क्या दूँ दक्षिणा आपको? तब सूर्यनारायण ने कहा, ये भी वर्णन है अनर्घराघवम में, सूर्यनारायण ने कहा कि किष्किंधा में मेरा पुत्र सुग्रीव, बाली से त्रस्त हो रहा है, अब तुम आंध्र को छोडकर कर्नाटक किष्किंधा जाओ और वहाँ सूग्रीव की सेवा करो। देखिए,

थोडी देर, हमारे यहाँ प्रमाणों की दो व्याख्याएं हैं, एक स्वतप प्रमाणं और परतप प्रमाणं, जो शंकराचार्य, शांकर दिग्विजय का वाक्य है, गोविंद देवजी तो स्वतप प्रमाण से मैने आप को प्रमाणित कर दिया, अब सुनिए, गौतम का सूत्र है न्याय में चार प्रमाण हैं न्याय में - प्रत्यक्ष, अनुमान, उपमान और शब्द, यहाँ शब्द प्रमाण होगा, शब्द प्रमाण कहते किसे हैं, आप्त वाक्य को शब्द कहते हैं, किसे आप्त वाक्य कहते हैं, चरक में चरकाचार्य अर्थात पतंजलि ने कहा जिनके जीवन में रजो गुण नहीं है, तमो गुण नहीं है जो ज्ञान वर्षित त्रिकाल दर्शी हो चुके हैं, उन्हीं का वाक्य, आप्त वाक्य है, वाल्मीकीजी आप्त वाक्य के व्यक्ति हैं। आप बालांजनेय की चर्चा कर रहे हैं मेरा एक आपसे एक अनुरोध है कि बालांजनेय की चर्चा तब करूँ जब हनुमानचालीसा का अधिक से अधिक प्रचार किया जाए, जन-जन में हनुमान चालीसा का प्रचार होना चाहिए। हनुमानजी ही कह रहे हैं, हनुमान चालीसा में कहते हैं गोस्वामी तुलसीदासजी - रामदूत अतुलित बलधामा, अंजनीपुत्र पवन सुत नामा - हनुमानजी की माताजी को अंजनी भी कहते हैं और अंजना भी कहते हैं और उस व्याख्यान से एक सबसे बडी बात आ जाती है, स्कंध पुराण में, ब्रह्मांड पुराण में, महाभारत में, और वाल्मीकी रामायण में स्पष्ट कहा गया कि पवन देव के शारीरिक संपर्क से हनुमानजी का जन्म नहीं हुआ था।

अंजनाजी ने तपस्या की थी, भगवान ने उन्हें पुत्र होने का, श्रेष्ठ पुत्र होने का आदेश दिया था और शंकरजी ने अत्रि को माध्यम, सात्वऋषियों को माध्यम बनाया, अंजना के कान में राम मंत्र दिया, उसी की माध्यम से, वायु के माध्यम से, शंकरजी स्वयं अंजनाजी के गर्भ में गए, शंकर सुवन केसरी नंदन नहीं, शंकर स्वयं केसरी नंदन । शास्त्र की यही आवश्यकता है, वह विवादों को निपटाता है। जैसे जब हमारे यहाँ विवाद होता है उच्च न्यायालय निपटाता है, न्यायालय दो होते हैं बल्कि तीन, सिविल, उच्च और परमोच्च। जिलावाला न्यायालय तो मान लो स्मृतियाँ हैं, उच्च न्यायालय, हाईकोर्ट जो है, वो है पुराण और सर्वोच्च न्यायालय, सुप्रीमकोर्ट, वेद और वाल्मीकी रामायण। ये तीनों निपटा रहे हैं। सिविल से भी डिक्री हुई, यहीं जन्म हुआ था, हाईकोर्ट से डिक्री हुई, पुराण से, यही जन्म हुआ था और सुप्रीम कोर्ट से भी डिक्री हुई, यही जन्म हुआ था। अब क्या करेंगे, इसलिए मैं बहुत विनम्रता से कह रहा हूँ, कोई झगडा मत करो जैसे सुप्रीम कोर्ट ने कहा, राम जन्मभूमि का जब प्रकरण आया गोविंद देवजी जानते हैं, ये तो कोषाध्यक्ष हैं, पर जब न्यायालय का प्रकरण आया तो सब संतों ने मना कर दिया कि हमारे ठाकुर हमको मना कर रहे हैं - मैं नहीं जाऊँगा  मेरे पास आयी बात, मैने कहा, देखो मैं वशिष्ठ गोत्रीय ब्राह्मण हूँ, रामजी का नमक हमारे पूर्वजों ने खाया, मैने भी खाया, इस वाद में रामजी नाबालिग हैं, नाबालिग होने पर पिता, माता या गुरू पक्ष लेते हैं, मैं पक्ष ले रहा हूँ। जब जजों ने पूछा था कि राम जन्मभूमि का क्या प्रमाण है, वैदिक, मैंने बता दिया था कि अथर्व वेद के दशम कांड के इकतीसवें अनुवाद के द्वितीय मंत्र में स्पष्ट प्रमाण है ।

ठीक उसी प्रकार दोनों पक्ष रहें, दोनों जगह हनुमानजी की पूजा हो, कर्नाटका में भी पूजा हों, यहाँ पर भी पूजा करो, सम्मान दोनों का है। परन्तु शास्त्रों की बहुलता यहीं के पक्ष में है, अब मै क्या करूँ। अब जाकर वेदव्यास को थप्पड मार दें वो, वाल्मीकी को थप्पड़ मारें या वेद को थप्पड़ मार दें और मुझको मारने लगें तो मेरे पास तो गनर्स हैं। तो ये तो संभव नहीं और फिर मैं पद्मविभूषण भी हूँ, मेरी सुरक्षा। इसलिए आज मै बहुत विनम्रता से कहने जा रहा हूँ कि दोनों स्थानों पर मान लिया जाय, कोई आपत्ति नहीं पर शास्त्र की, प्रमाणों की, शास्त्रों के प्रमाणों की बहुलता इधर ही है, थोडा शास्त्रीय पलडा तिरूमला का भारी पड़ रहा है, उसका सम्मान करना चाहिए और वहाँ भी जायें, दोनों जायें । इस उत्सव में आपने मुझे बुलाया बहुत लोगों ने मुझे रोका, पर मैं आ गया और कोई मेरा स्वार्थ नहीं, मैने कहा कि मेरा क्या स्वार्थ है, पर जहाँ भी विवाद होगा वहाँ शास्त्रीय निर्णय देने के लिए मैं जगद्गुरू के रूप में त्रिदंड लेकर उपस्थित रहूँगा, ये त्रिदंड साधारण नहीं हैं । इसलिए मैं इन्हीं उद्गारों के साथ आप सब को बहुत बहुत धन्यवाद ज्ञापन करता हुआ वक्तव्य से विराम लूँ ।

श्रीराम जय राम

जय जय राम

जय हनुमान ।

## ವಿಶಾಖ ಶಾರದಾ ಪೀಠಾಧಿಪತಿಗಳು ಶ್ರೀಶ್ರೀಶ್ರೀ ಸ್ವರೂಪಾನಂದೇಂದ್ರ ಸ್ವಾಮಿಗಳ ಸಂದೇಶ

**ವಿಶಾಖ ಶಾರದಾಪೀಠ**



**ಶ್ರುತಿಸ್ಮೃತಿಪುರಾಣಾಮಾಲಯಂ ಕರುಣಾಲಯಮ್**
**ನಮಾಮಿ ಭಗವತ್ಪಾದಶಂಕರಮ್ ಲೋಕಶಂಕರಮ್**

**ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್**
**ಸೂತ್ರಭಾಷ್ಯಕೃತಂ ವಂದೇ ಭಗವಂತೌ ಪುನಃಪುನಃ**

**ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್**
**ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್**

**ಶ್ರೀಕೃಷ್ಣಪರಬ್ರಹ್ಮಣೇ ನಮಃ**

ಈ ದಿನ ತಿರುಮಲ ತಿಮ್ಮಪ್ಪನ ಪಾದಸಾಕ್ಷಿಯಾಗಿ ಭೂಮಿಪೂಜೆ ನಡೆದಿದೆ.

ಅಷ್ಟಾದಶ ಶಕ್ತಿಪೀಠಗಳು, ದ್ವಾದಶ ಜ್ಯೋತಿರ್ಲಿಂಗಗಳು, ಅನೇಕ ವೈಷ್ಣವ ಕ್ಷೇತ್ರಗಳು, ದೇವಾಲಯಗಳು, ತೀರ್ಥಗಳು, ನದಿಗಳಿಂದ ಕೂಡಿ ಕಂಗೊಳಿಸುತ್ತಿರುವ ಸನಾತನಧರ್ಮದ ತವರೂರು ನಮ್ಮ ಭಾರತದೇಶ. ಈ ದೇಶದಲ್ಲಿ ಮಹಾನ್ ಪುಣ್ಯಭೂಮಿ ಯಾವುದೆಂದರೆ ನಮ್ಮ ಎರಡು ತೆಲುಗು ರಾಜ್ಯಗಳೆಂದು ಹೇಳಬಹುದು. ಏಕೆಂದರೆ, ಈ ಪ್ರಾಂತ್ಯಕ್ಕೆ ತ್ರಿಲಿಂಗದೇಶವೆಂದು ಹೆಸರು. ತೆಲಂಗಾಣಾ ರಾಜ್ಯದಲ್ಲಿನ ಕಾಳೇಶ್ವರಂ, ಆಂಧ್ರಪ್ರದೇಶ್ ನಲ್ಲಿರುವ ಕಾಳಹಸ್ತಿ ಮತ್ತು ಶ್ರೀಶೈಲ – ಈ ಮೂರು ಶೈವಕ್ಷೇತ್ರಗಳನ್ನು ಒಳಗೊಂಡಿರುವ ದಿವ್ಯಸ್ಥಲವೇ ತ್ರಿಲಿಂಗದೇಶ. ವೇದಗಳಿಗೆ ತವರೂರು ಆಂಧ್ರರಾಜ್ಯ. ಏಕೆಂದರೆ ಇಲ್ಲಿ ಮಾತ್ರ ಪುಸ್ತಕವನ್ನು ಮುಂದೆ ಇಟ್ಟುಕೊಳ್ಳದೇ ವೇದವನ್ನು ಸಸ್ವರವಾಗಿ, ಉಚ್ಚಕಂಠದಿಂದ ಹೇಳುವ ಬ್ರಾಹ್ಮಣರು ಇದ್ದಾರೆ. ಅಂತಹಾ ಪುಣ್ಯಭೂಮಿಯಲ್ಲಿ ಕೇವಲ ಭಾರತದೇಶವನ್ನಷ್ಟೇ ಅಲ್ಲ ಇಡೀ ವಿಶ್ವವನ್ನೇ ಅನುಗ್ರಹಿಸುವುದಕ್ಕಾಗಿ ನೆಲೆನಿಂತಿದ್ದಾನೆ ಶ್ರೀ ಶ್ರೀನಿವಾಸ ಪರಬ್ರಹ್ಮ. ಇವನೇ ನಮ್ಮ ನಿಧಿ. ಎಷ್ಟುಬಾರಿ ನೋಡಿದರೂ ಮತ್ತೆ ಮತ್ತೆ ನೋಡಬೇಕೆಂದು ಭಕ್ತರನ್ನು ಪುನಃಪುನಃ ತನ್ನ ಕಡೆಗೆ ಆಕರ್ಷಿಸುವ ಮಹತ್ತರ ಮೂರ್ತಿ ತಿರುಮಲ ಶ್ರೀ ಶ್ರೀನಿವಾಸಮೂರ್ತಿ. ಇಂತಹಾ ಮಹಾಮಹಿಮನಾದ ಸ್ವಾಮಿಯ ಕ್ಷೇತ್ರದಲ್ಲಿ ಯಾವುದೇ ಕಾರ್ಯಕ್ರಮ ನಡೆಯ ಬೇಕೆಂದರೆ ಅವನ ಅನುಜ್ಞೆ, ಅನುಮೋದನೆ ಇಲ್ಲದೇ ನಡೆಯಲು ಸಾಧ್ಯವೇ? ಒಮ್ಮೆ ಯೋಚನೆ ಮಾಡಿ ನೋಡಿ!

ವಿಜ್ಞಾನಿಗಳಿಗೆ, ಬುದ್ಧಿಜೀವಿಗಳಿಗೆ ಮತ್ತು ಮಾಧ್ಯಮ ಮಿತ್ರರಿಗೆ ನಾವು ಹೇಳಬಯಸುವುದು ಇಷ್ಟೇ – ಆಂಧ್ರಪ್ರದೇಶ್ ರಾಜ್ಯವು ಪಡೆದಿರುವ ಅದ್ಭುತವಾದ ಕೊಡುಗೆ ತಿರುಮಲ ತಿರುಪತಿ ದೇವಸ್ಥಾನಗಳು ಎನ್ನುವ ಸಂಸ್ಥೆ. ಶ್ರೀನಿವಾಸನ ಮಹಿಮೆ ಏನೆಂದು

ಎಲ್ಲರಿಗೂ ಗೊತ್ತಿದೆ. ಇಂದಿನ ದಿನ, ಈ ಅಂಜನಾದ್ರಿಯಲ್ಲಿ ನಡೆದಂತಹ ಈ ಭೂಮಿಪೂಜೆಯೂ ಸಹಾ ಆ ದೇವದೇವನ ಅನುಗ್ರಹವೇ ಆಗಿದೆ.

ಈ ಅಂಜನಾದ್ರಿನಾಥನನ್ನು ನಾವಷ್ಟೇ ಅಲ್ಲ ಮಹಿತಾತ್ಮರಾದ ತಾಳ್ಳಪಾಕ ಅನ್ನಮಾಚಾರ್ಯರು ಸಹಾ ಒಲಿಸಿಕೊಂಡಿದ್ದಾರೆ. ಇದೇ ಅಂಜನಾದ್ರಿಯನ್ನು ಮಹಾನುಭಾವರಾದ ಶ್ರೀ ಪುರಂದರದಾಸರು ಕೂಡಾ ಹಾಡಿ ಹೊಗಳಿದ್ದಾರೆ. ಮಾತೃಶ್ರೀ ತರಿಗೊಂಡ ವೇಂಗಮಾಂಬನವರು ಇಲ್ಲೇ ಸಮಾಧಿಯನ್ನು ಪ್ರವೇಶಿಸಿದ್ದಾರೆ. ಆ ತಾಯಿಯೂ ಸಹಾ ಈ ಅಂಜನಾದ್ರಿಯನ್ನು ಬಹುವಿಧವಾಗಿ ಕೀರ್ತಿಸಿದ್ದಾರೆ. ಹೀಗೆ, ಇಂದಿನ ಆಂಧ್ರ-ಕರ್ನಾಟಕ-ತೆಲಂಗಾಣಾ ರಾಜ್ಯಗಳಿಗೆ ಸೇರಿದ ಮೂವರು ಭಾಗವತೋತ್ತಮರು ಹೇಳಿದ ಮಾತುಗಳೇ ನಮಗೆ ಸಾಕು. ಇತರರು ಆಡುವ ಮಾತುಗಳಿಗೆ ನಾವು ಹೆಚ್ಚು ತಲೆ ಕೆಡಸಿಕೊಳ್ಳ ಬೇಕಾಗಿಲ್ಲ. ಇಂದು ಇಲ್ಲಿ ನಡೆದಿರುವ ಭೂಮಿಪೂಜೆಗೆ ಈ ಮೂವರ ಅನುಗ್ರಹವು ಲಭಿಸಿದೆ ಎನ್ನುವ ಪರಿಪೂರ್ಣ ವಿಶ್ವಾಸವು ನಮಗೆ ಇದೆ.

ಯಾರೋ ಒಬ್ಬಿಬ್ಬರು "ಈ ವಿಷಯದತ್ತ ಸ್ವಲ್ಪ ನೋಡಿ" ಎಂದು ಕೇಳಿದ ಕೂಡಲೇ ಅದೆಷ್ಟೋ ಪಂಡಿತರನ್ನು ಕರೆದು ತಂದು ಐತಿಹಾಸಿಕ ವಿಷಯವಾದ ಹನುಮ ಜನ್ಮಸ್ಥಲ ಕುರಿತು ವಿಶೇಷ ಸಂಶೋಧನೆ ನಡೆಸಿದಂತಹ ಟಿಟಿಡಿ ಛೈರ್ಮನ್ ಸುಬ್ಬಾರೆಡ್ಡಿ ಅವರು, ಕಾರ್ಯನಿರ್ವಹಣಾಧಿಕಾರಿ ಜವಹರ್ ರೆಡ್ಡಿ ಅವರು ಮತ್ತು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಧರ್ಮಾರೆಡ್ಡಿ ಅವರಿಗೆ ನಮ್ಮ ಅಭಿನಂದನೆಗಳು.

ಇದು ನಮ್ಮ ವಯಕ್ತಿಕ ವಿಷಯವಲ್ಲ. ಸಾರ್ವತ್ರಿಕವಾದ ವಿಷಯ. ಹನುಮ ಜನ್ಮಸ್ಥಲ ಸಾರ್ವತ್ರಿಕ ವಿಚಾರವೆನ್ನುವುದಕ್ಕೆ ರಾಮಜನ್ಮಭೂಮಿ ಹೋರಾಟಗಾರರಾದ ಶ್ರೀಶ್ರೀಶ್ರೀ ರಾಮಭದ್ರಾಚಾರ್ಯರು ಇಲ್ಲಿಗೆ ಬಂದಿರುವುದೇ ಸಾಕ್ಷಿ. ಇವರು ಬಂದಿದ್ದಾರೆ ಎನ್ನುವುದಕ್ಕಿಂತ ಸ್ವಾಮಿಯೇ ಕರೆಸಿಕೊಂಡಿದ್ದಾರೆ ಯೆನ್ನುವುದು ಸರಿಯಾದದ್ದು.

ಈ ಕಾರ್ಯಕ್ರಮ ನಮ್ಮ ನಿಮ್ಮ ಆಲೋಚನೆ ಅಷ್ಟೇ ಅಲ್ಲ. ಇದು ದೇಶ, ಕಾಲಗಳಿಗೆ ಅತೀತನಾದ ಪರಮಾತ್ಮನ ಸಂಕಲ್ಪ. ಈ ಕಾರಣ, ಗೋವಿಂದದೇವ್ ಗಿರಿ ಸ್ವಾಮಿಗಳು ಕೂಡಾ ಇಲ್ಲಿಗೆ ಆಗಮಿಸಿದ್ದಾರೆ. ದೇಶಕ್ಕಾಗಿ, ಧರ್ಮಕ್ಕಾಗಿ, ಹಿಂದೂ ಮತಕ್ಕಾಗಿ ಅವೆಷ್ಟೋ ತ್ಯಾಗಗಳನ್ನು ಮಾಡಿದ ವಿಶ್ವಹಿಂದೂಪರಿಷತ್ ನೇತಾರರು ಕೋಟೇಶ್ವರಶರ್ಮ ಅವರೂ ಸಹಾ ಇಲ್ಲಿ ಉಪಸ್ಥಿತರಿದ್ದಾರೆ.

ಈ ಕಾರ್ಯಕ್ರಮವು ಪರಮಾತ್ಮನ ಅನುಗ್ರಹವನ್ನು ಸಂಪೂರ್ಣವಾಗಿ ಪಡೆದಿದೆ ಎಂದು ತಿಳಿಯಲು ಇಷ್ಟೊಂದು ಜನ ಹಿರಿಯರು ಇಲ್ಲಿ ನೆರೆದಿದ್ದೇ ಸಾಕ್ಷಿ. ಈ ಅಂಜನಾದ್ರಿ ಕ್ಷೇತ್ರವು ಅತ್ಯದ್ಭುತವಾದ, ಶಕ್ತಿಯುತವಾದ, ಸುಂದರವಾದ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆಯಬೇಕೆನ್ನುವುದು ನಮ್ಮ ಆಸೆ ಆಗಿದೆ. ಈ ನಮ್ಮ ಆಸೆ ಶೀಘ್ರದಲ್ಲಿಯೇ ನೆರವೇರಲಿ ಎಂದು ತಿರುಮಲ ತಿಮ್ಮಪ್ಪನನ್ನು ಪ್ರಾರ್ಥಿಸುತ್ತಿದ್ದೇವೆ. ನಿಮ್ಮೆಲ್ಲರಿಗೂ ಆಶೀರ್ವಚನಗಳನ್ನು ನೀಡುತ್ತಿದ್ದೇವೆ.

ನಾರಾಯಣ ಸ್ಮರಣೆಗಳೊಂದಿಗೆ...

**ವಿಶಾಖ ಶಾರದಾ ಪೀಠ ಉತ್ತರಾಧಿಕಾರಿಗಳು ಶ್ರೀಶ್ರೀಶ್ರೀ ಸ್ವಾತ್ಮಾನಂದೇಂದ್ರಸ್ವಾಮಿಗಳ ಸಂದೇಶ**



**ಮನೋಜವಂ ಮಾರುತತುಲ್ಯವೇಗಮ್**
**ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್**
**ವಾತಾತ್ಮಜಂ ವಾನರಯೂಥಮುಖ್ಯಮ್**
**ಶ್ರೀರಾಮದೂತಂ ಶಿರಸಾ ನಮಾಮಿ.**

ಅಸ್ಮದ್ಗುರುಚರಣಾರವಿಂದಾಭ್ಯಾಂ ನಮಃ

ಸಾಕ್ಷಾತ್ತು ಕಲಿಯುಗ ಭೂವೈಕುಂಠವಾದ ತಿರುಮಲಗಿರಿಯಲ್ಲಿ, ಶ್ರೀವೇಂಕಟೇಶ್ವರನ ಚರಣಸನ್ನಿಧಿಯಲ್ಲಿ, ಹನುಮಂತನ ಜನ್ಮಭೂಮಿಯಾದ ಈ ಆಂಜನಾದ್ರಿ ಇರುವುದು ಮತ್ತು ಅದರ ಅಸ್ಥಿತ್ವವನ್ನು ಪಂಡಿತಮಂಡಲಿ ಶ್ರಮಪಟ್ಟು ನಿರೂಪಿಸಿರುವುದು ತುಂಬಾ ಸಂತೋಷಕರವಾದ ವಿಷಯ. ಅವೆಷ್ಟೋ ಪುರಾಣಗಳು, ಇತಿಹಾಸಗಳು, ಅನ್ನಮಾಚಾರ್ಯರ ಸಾಹಿತ್ಯ ಮುಂತಾದವುಗಳನ್ನು ಪರಿಶೀಲಿಸಿ, ಇದುವೇ ಹನುಮ ಜನ್ಮಸ್ಥಲ ಅಂತ ನಿರ್ಧರಿಸಿರುವುದು, ಈ ಸಂಶೋಧನೆಯ ಆಧಾರವಾಗಿ ಇಲ್ಲಿ ಇಂದು ಭೂಮಿಪೂಜೆ ನಡೆಯುತ್ತಿರುವುದು ಆನಂದದಾಯಕವಾದದ್ದು. ಅದರಲ್ಲೂ ನಮ್ಮ ಗುರುಗಳಾದ ಶ್ರೀಶ್ರೀಶ್ರೀ ಸ್ವರೂಪಾನಂದೇಂದ್ರ ಸರಸ್ವತೀ ಸ್ವಾಮಿಗಳ ಸ್ವಹಸ್ತಗಳಿಂದಲು, ಹಾಗೆಯೇ ವೇದಿಕೆ ಮೇಲೆ ಉಪಸ್ಥಿತರಾದ ಮಹಾನುಭಾವರ ಆಶೀರ್ವಾದಗಳೊಂದಿಗೆ ನಡೆಯುತ್ತಿರುವ ಈ ಭೂಮಿಪೂಜೆಯಲ್ಲಿ ನಾವು ಸಹಾ ಭಾಗವಹಿಸುತ್ತಿರುವುದು ಸಂತೋಷಕರವಾದ ವಿಚಾರ. ಏಕೆಂದರೆ, ಆಂಜನೇಯನು ಶ್ರೀರಾಮಚಂದ್ರನ ಶಿಷ್ಯಾಗ್ರಗಣ್ಯನು. ಅಂದು ತ್ರೇತಾಯುಗದಲ್ಲಿ ಶ್ರೀರಾಮನು ದುಷ್ಟಶಿಕ್ಷಣೆ ಮತ್ತು ಶಿಷ್ಟರಕ್ಷಣೆಗಾಗಿ ಅವತರಿಸಿದನು. ಅವನ ಸೇವಾರ್ಥವಾಗಿ ಹನುಮಂತನು ಈ ಕ್ಷೇತ್ರದಲ್ಲಿ ಅವತಾರ ತಾಳಿದನು. ತನ್ನ ಅವತಾರಕಾಲದಿಂದ ಆರಂಭಿಸಿ ಇಂದಿಗೂ ಕೂಡಾ ಶ್ರೀರಾಮನ ಮತ್ತೊಂದು ರೂಪವಾದ ಶ್ರೀನಿವಾಸನನ್ನು ಸೇವಿಸುತ್ತಲೇ ಇದ್ದಾನೆ. ಅಂತಹಾ ಕ್ಷೇತ್ರದಲ್ಲಿ ನಾವೆಲ್ಲರು ಸೇರಿರುವುದು ನಮ್ಮ ನಮ್ಮ ಪೂರ್ವಜನ್ಮಪುಣ್ಯವೇ ಸರಿ. ಹನುಮ ಜನ್ಮಸ್ಥಲದ ಭೂಮಿಪೂಜೆಯಲ್ಲಿ ಪಾಲ್ಗೊಳ್ಳುತ್ತಿರುವ ನೀವೆಲ್ಲರೂ ಸಹಾ ಶ್ರೀಶ್ರೀನಿವಾಸ ಪರಬ್ರಹ್ಮನ ಪರಿಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದೀರಿ. ಇಲ್ಲದಿದ್ದರೆ ಈ ಮಹಾಕ್ಷೇತ್ರದಲ್ಲಿ ನಡೆಯುತ್ತಿರುವ ಈ ಪುಣ್ಯಕಾರ್ಯದಲ್ಲಿ ನೀವು ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಶ್ರೀನಿವಾಸ ದರ್ಶನಕ್ಕೆ ಬರುವ ಪ್ರತಿ ಭಕ್ತನು ಈ ಸುಂದರವಾದ ಹನುಮ ಜನ್ಮಭೂಮಿಯನ್ನು ದರ್ಶಿಸಿ ಧನ್ಯರಾಗಬೇಕೆಂದು ನಾವು ಭಾವಿಸುತ್ತಿದ್ದೇವೆ.

ಎಲ್ಲರಿಗೂ ಅಭಿನಂದನೆಗಳು.

ನಾರಾಯಣ ಸ್ಮರಣೆಗಳೊಂದಿಗೆ....

# HH Sri Govind Devji Maharaj
## Ayodhya



In this holy city of Lord Venkateshwara, some speak in the provincial language, some speak in the language of God, I want to speak in the national language. It is because, this message should be widespread. At the outset, I acknowledge the grace of T.T.D i.e. Tirumala Tirupati Devasthanam that it has invited me. Many years passed for having not done Lord Venkateshwara's darshan and this covid did not allow it to happen. I am indebted to you, for having had such a blissful darshan of Lord Venkateshwara. I am blessed after so many years, after so much separation. I am blessed to have felt the presence of God today. I deeply appreciate the holy work for which we are gathered here. I for sure, know What I should do in this matter, in my conscience and I want to convey the same message to you.

When I got the invitation from Tirupati Devasthanam that I am invited to be a part of the construction of a temple with regard to Lord Hanuman's birthplace, then my companions asked me how could it be, when we are still here. I myself have come, after visiting the birthplace of Kishkindha. I myself have come after seeing Sphatik Shila. As we have been doing these works in our pilgrimage. This topic was completely new to us and for any new thing, it takes time for one to be within oneself. When I thought of all the things happening around, there was a conflict in my mind. I experienced this conflict in my mind as well, heard it from others also and such thought arouse in me also that when we went to Kiskindha, which is the birthplace of Hanuman ji and today,where have we come today for the construction of this beautified temple. The truth behind this in my mind is "how can someone decide Hanuman's actual birth place"?

A low life like me finds himself incapable of doing this. Let me tell you two-three things. I don't know how much area is in front of you. In front of me, lies the entire Bharat mata from Himachal to Ramsetu, in front of me is the Indian nation and we are unable to decide even the smallest things. I will start with Maharashtra, where I am from. By the way, now I am a resident of Ayodhya, so Lord Shri Ram has sent me for your service. For the service of Hanuman ji. But in Maharashtra, you will see that the whole of Maharashtra considers Shri Dnyaneshwar Maharaj as it's Guru. He was born 700 years ago. 700 years ago, whether he was born in Alandi or in your village could not be decided by the scholars of Maharashtra till date.

This is a matter of concern since 700 years. There is a dispute going on till now about the birth place of Sai Baba. It was 100 years ago, not very old. We shall talk about Jyotirlingas. Where is the Nageshwar Linga amongst the Jyotirlingas? One is Nagesh near Dwarka, the other is Nageshwarlinga in Maharashtra and Aundha is in Nagnath.

Where is Vaidyanath Dham located? It is in Maharashtra, and you know it is also in today's Chhattisgarh. So, we are not able to solve these disputes. So, Hanuman ji himself who existed thousands and thousands of years ago. Oh no, could you all tell me how many hundred centuries must have passed?

But we are talking about Tretayuga in Kaliyuga. How could you decide? It is very difficult. Friends! I want to say one thing, wherever you go, whatever temple of Hanuman ji when built, participate in that temple and support, we need Hanuman ji today. Today we too need the awakening of Hanumat Shakti. There is a need for unity in the nation. There should be no dispute between us about these small things. Wherever there is faith, He could be worshiped

there. But Hanuman ji should be worshiped everywhere. Wherever I look, I should see Hanuman ji's temple.

Lord Adi Shankaracharya Maharaj says wherever I look, I should see Hanuman ji. If Bharat Mata is to be awakened, this nation has to be raised and the world is to be sought, then there is a need to awaken the Hanumat Shakti within us. There is a need to invoke Hanumat Shakti.

Swami Vivekananda Maharaj used to say "I wish that in my Bengal" because at that time, in Bengal, there was an atmosphere to worship the omniscient Radha-Krishna and worship of Kali. Swamiji said "I want the worship of Hanuman ji should be started everywhere in my Bengal, Hanuman ji should be established in every village". Samarth Ramdas ji established Hanuman ji, therefore the army of Chhatrapati Shivaji Maharaj stood up, it should be kept in mind, O brave men! We the people in the era of change, should ensure that there will be no dispute about any opinion of our country, regarding the community or temple. Wherever you go, worship Hanuman ji. Hey! Let me tell you, 100 Hanuman temples in Dang district are being constructed. on 20th of next month i.e. 20th March we are going there. Why? Worship of Hanuman ji is necessary for the tribals, for the forest dwellers, for the people of the countryside, because everything is attained by worshiping Hanuman ji, which our country needs. Describing Hanuman ji himself, Lord Shri Ram Prabhu told Agastya Muni that "I have not seen that there is anyone like Hanuman ji". All these qualities are in Hanuman ji.

As soon as we remember Hanuman ji, "Buddhirbalam Yasho Dhairyam nirbhayatvam Arogata" power awakens within us, the intellect is awakened, we become fearless, we become healthy, all these are due to the influence of Hanuman ji. The awakening of the power of that Hanuman ji happened in this country, we must keep in mind that the mark of Ayodhya was removed because of the power of Hanuman ji. It was the awakening of the power of Hanuman ji. Otherwise, it would not have been possible to eradicate that from this country in a day. Hanuman ji should be awakened within everyone. That is much needed. That's why I would say that you are building Hanuman ji's temple. Bal Hanuman must have played here, Bal Hanuman must have performed pastimes here, how many mantras must have been taught here. Rama's mission was accomplished because of that. Lord Shri Ram himself has said that if Hanuman ji had not done this work, I do not know whether I would have come to know about Bhagwati Janaki?

Lord Shri Ram says that "we will always be in your debt. I am not alone; my whole family will be in your debt". When Lord Shri Ram tells Hanuman ji that "I will remain in debt only along with my family because you have done so many favours that I will have to give my life to repay each favour, even then the rest of the favours still remain". Dear! Today we need to awaken such power with which the ten-headed Ravana, who is attacking our mother, India could be controlled. Don't we hear that Ravan had ten faces? Hey! Many enemies from ten directions are ready to break this India into pieces. There should be no such thing happening with India. This India should be united. The national consciousness of this entire nation from Himachal to Ramsetu, should be one. And to do this-

If this has to happen, then there should be an awakening of Hanumat Shakti within all of us and to awaken this, we should be away from controversies. In the tradition of Maharashtra, the refuge of Hanuman ji is doubled in its result. God's refuge is one time of the result, Hanuman ji's refuge is doubled-

Sant Tukaram Maharaj says that Hanuman ji Maharaj! I again and again come to your shelter, I come to show you the path of devotion, Hanuman ji has shown us the path of devotion and that is why we have to awaken the same devotion, then Narada's bhakti sutra, there is a very sweet quote i.e, *vado navalambyah* not to dispute, not to dispute with anyone.

I have only one appeal to all the Hindus to stop arguing. Start working, work together, give up egoism, renounce identity, if we all Hindus will look in one direction, speak one voice, note it down! There is no other nation like us in the whole world, this will be proved immediately and therefore our enemy is our disunity. These disputes which happen within us, destroy us. Let us

walk on the path of devotion to God with unity by giving up the controversies. Hanuman ji Maharaj has shown us this path. This is our direction.

The saints have arrived here. A question in Mahabharata says "what is dik"? Yaksha asked Dharmaraja that "what is called as the direction? - North, South, East, West, which is called as a direction? Dharmaraja replied - Santo Dik. There is only one direction which was shown by saints. The saints of our country have taught us the unity from Himachal to Ramsetu. Our saints have spoken of being non-controversial. Hence, Lord Shri Ram will be pleased, Hanuman ji's work will be done and Lord Venkatesh Prabhu, who is the centre of the whole world, "*Kalau Devah Venkateshah*", the one who inspires the entire Kali Yuga by abandoning the controversies and moving forward on the path of unity. God, due to His kindness on us, will be pleased with the people and will shower blessings on us. It is my belief. Thanks to everyone.

वेंकटेश भगवान की जय!

Hail Lord Venkatesh!

## ಶ್ರೀ ಕೋಟೇಶ್ವರ ಶರ್ಮ, ವಿಶ್ವ ಹಿಂದೂ ಪರಿಷತ್, ಅವರ ಸಂದೇಶ

**ಮನೋಜವಂ ಮಾರುತತುಲ್ಯವೇಗಮ್**
**ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್**
**ವಾತಾತ್ಮಜಂ ವಾನರಯೂಥಮುಖ್ಯಮ್**
**ಶ್ರೀರಾಮದೂತಂ ಶಿರಸಾ ನಮಾಮಿ.**

ವೇದಿಕೆ ಮೇಲೆ ಉಪಸ್ಥಿತರಾದ ಪರಮಪೂಜ್ಯ ರಾಮಭದ್ರಾಚಾರ್ಯ ಮಹರಾಜ್ ಜೀ, ಪರಮಪೂಜ್ಯ ಸ್ವರೂಪಾನಂದೇಂದ್ರ ಸರಸ್ವತೀ ಮಹರಾಜ್ ಜೀ, ಅವರ ಉತ್ತರಾಧಿಕಾರಿ ಸ್ವಾತ್ಮಾನಂದೇಂದ್ರ ಮಹರಾಜ್ ಜೀ, ಗುರುಗಳಾದ ಶ್ರೀ ಗೋವಿಂದದೇವ್ ಗುರೂಜೀಗಳ ಪಾದಕಮಲಗಳಿಗೆ ಸಾಷ್ಟಾಂಗ ನಮಸ್ಕಾರಗಳು. ಟಿಟಿಡಿ ಬೋರ್ಡ್ ಛೈರ್ಮನ್ ವೈ. ವಿ. ಸುಬ್ಬಾರೆಡ್ಡಿ ಅವರಿಗೆ, ಕಾರ್ಯನಿರ್ವಹಣಾಧಿಕಾರಿ ಡಾ. ಜವಹರ್ ರೆಡ್ಡಿ ಅವರಿಗೆ ನಮಸ್ಕಾರಗಳು.

ಹನುಮ ಜನ್ಮಭೂಮಿಯಾದ ಅಂಜನಾದ್ರಿಯನ್ನು ಅಭಿವೃದ್ಧಿ ಪಡಿಸಲು ನಡೆಸುತ್ತಿರುವ ಭೂಮಿಪೂಜೆಗೆ ಆಗಮಿಸಿದ ಎಲ್ಲ ಧಾರ್ಮಿಕ ಬಂಧುಗಳಿಗೆ ನನ್ನ ನಮಸ್ಕಾರಗಳು.

ಈಗ ತಾನೆ ಬಿಡುಗಡೆ ಮಾಡಿದ ಪುಸ್ತಕವನ್ನು ನೋಡಿ, ಗೊವಿಂದದೇವ್ ಗಿರಿಜೀ ಮತ್ತು ಡಾ. ಸದಾಶಿವಮೂರ್ತಿಗಳು ಆಡಿದ ಮಾತುಗಳನ್ನು ಕೇಳಿದ ನಂತರ ನನಗೆ ರಾಮಜನ್ಮಭೂಮಿಗಾಗಿ ನಡೆಸಿದ್ದ ಹೋರಾಟ ನೆನಪಾಯಿತು. ರಾಮನು ಅಯೋಧ್ಯದಲ್ಲಿಯೇ ಹುಟ್ಟಿದ್ದಾನೆಯೆ? ಎಂದು ಒಬ್ಬರು, ನಿಮ್ಮ ರಾಮ ಒಂದು ಕಲ್ಪಿತ ಪಾತ್ರಯೇ ಹೊರತು ನಿಜವಾದ ವ್ಯಕ್ತಿ ಅಲ್ಲೆಂದು ಒಬ್ಬರು, ಇಲ್ಲಿ ಅಲ್ಲ ಮತ್ತೆಲ್ಲೋ ಹುಟ್ಟಿದ್ದಾನೆಂದು ಮತ್ತೊಬ್ಬರು – ಹೀಗೆ ರಾಮನ ಜನನ ಮತ್ತು ಜನ್ಮಸ್ಥಲ ಕುರಿತು ಅವೆಷ್ಟೋ ಭಿನ್ನಾಭಿಪ್ರಾಯಗಳು ಬಂದಿದ್ದವು. ಇವುಗಳಲ್ಲದೇ ಈ ಸ್ಥಲವೆಲ್ಲಾ ನಮ್ಮದೇ ಎನ್ನುವ ಕೆಲವರು. ಏತನ್ಮಧ್ಯೇ ರಾಮಜನ್ಮಭೂಮಿ ಕೇಸ್ ಜಿಲ್ಲೆ ಕೋರ್ಟ್ ನಿಂದ ಹೈಕೋರ್ಟ್, ಅಲ್ಲಿಂದ ಸುಪ್ರೀಂಕೋರ್ಟ್‌ಗೆ ಬಂದ ದಿನದಿಂದ ಸಾಕ್ಷ್ಯಗಳನ್ನು, ಆಧಾರಗಳನ್ನು ಹುಡಿಕಿ ಹುಡಿಕಿ ಸುಸ್ತಾಗಿಬಿಟ್ಟಿದ್ದೇವು. ಒಬ್ಬ ಇತಿಹಾಸಕಾರರು ಫ್ರೆಂಚ್ ಪ್ರವಾಸಿಗನೊಬ್ಬನು ಇದುವೇ ರಾಮಜನ್ಮಭೂಮಿಯೆಂದು ಬರೆದಿದ್ದಾನೆ ಎಂದು ಫೋನ್ ಮಾಡಿ ಹೇಳಿದರೆ ಗೂಗುಲ್ ಸೆರ್ಚ್ ಮಾಡಿ ಆ ಪುಸ್ತಕವಿರುವ ಗ್ರಂಥಾಲಯವನ್ನು ಕಂಡು ಹಿಡಿದು, ಅವರಿಂದ ಆ ಪುಸ್ತಕವನ್ನು ತರಿಸಿದ್ದೇವೆ. ಹಾಗೆಯೇ ಜರ್ಮನ್ ಯಾತ್ರಿಕನೊಬ್ಬನು ಜನ್ಮಭೂಮಿಯ ಬಗ್ಗೆ ಬರೆದಿದ್ದಾನೆಂದು ತಿಳಿದ ಕೂಡಲೇ ಆ ಪುಸ್ತಕವನ್ನೂ ತರಿಸಿದ್ದೇವೆ. ಅಷ್ಟೇ ಅಲ್ಲ ಆ ಗ್ರಂಥಗಳ ಕಾಪೀಗಳನ್ನು, ಮುದ್ರಾಪಕರ ವಿವರಗಳನ್ನೂ ಸಹಾ ಕೋರ್ಟ ಕೊಟ್ಟಿದ್ದೇವೆ. ಲೈಡಾರ್ ತಂತ್ರಜ್ಞಾನವನ್ನು ಬಳಿಸಿ ಭೂಮಿಯೊಳಗೆ ವಿಶಾಲವಾದ ಕಟ್ಟಡವು ಇರುವುದನ್ನು ಕಂಡುಕೊಳ್ಳಲಾಗಿತ್ತು. ಆದರೆ ಅದು ಮಂದಿರವೋ, ಮತ್ತೊಂದು ಕಟ್ಟಡವೋ ಗೊತ್ತಾಗದ ಕಾರಣ ಕೋರ್ಟ್ ಆದೇಶದ ಮೇರೆಗೆ ಪುರಾತತ್ವ ಸಂಸ್ಥೆ ಅವರು ಅಲ್ಲಿ ಉತ್ಖನನ ನಡೆಸಿ 86 ಕಂಬಗಳಿಂದ ಕೂಡಿದ ಮಂದಿರವನ್ನು ಕಂಡುಹಿಡಿದರು. ವೇದಕಾಲದಿಂದ ಆರಂಭಿಸಿ ರಾಮನ ಬಗ್ಗೆ, ಜನ್ಮಭೂಮಿಯ ಬಗ್ಗೆ ಇರುವಂತಹ ಎಲ್ಲ ಪುರಾವೆಗಳನ್ನು ನಾವು ಸಂಗ್ರಹ ಮಾಡಿದ್ದೇವೆ.

ಹನುಮ ಜನ್ಮಭೂಮಿಯ ಪುಸ್ತಕದಲ್ಲಿರುವ ಒಂದೊಂದು ಬರಹವನ್ನು ನೋಡಿದರೆ ಆಯಾ ಬರಹಗಾರರು ದೊಡ್ಡ ಕೃಷಿಯನ್ನೇ ಮಾಡಿದ್ದಾರೆಂದು ತಿಳಿಯುತ್ತದೆ. ಸಂಶೋಧನೆಯ ಮೂಲಕ ಒಂದು ನಿಷ್ಕರ್ಷಕ್ಕೆ ಬಂದಿರುವುದು ಸಂತೋಷಕರವಾದ ವಿಚಾರ. ಇಲ್ಲಿ ನಾವು ಎರಡು ವಿಷಯಗಳನ್ನು ನೆನೆಪಿಗಿಟ್ಟುಕೊಳ್ಳಬೇಕು. ಒಂದು ಜನಗಳ ಮನಸ್ಸಿನಲ್ಲಿ ಇದುವೇ ಹನುಮ ಜನ್ಮಭೂಮಿ ಎಂದು ರೂಢಿಯಾಗುವುದು. ತಿರುಮಲಯೇ ಅಂಜನಾದ್ರಿಯೆಂದು ಜನಗಳಿಗೆ ಚಿರಪರಿಚಿತವಾದುದ್ದರಿಂದ ಜನಗಳು ಟಿಟಿಡಿ ವಾದವನ್ನು

ಬೇಗ ಸ್ವೀಕರಿಸುತ್ತಾರೆ. ಇದರಲ್ಲಿ ಯಾವ ಸಂದೇಹವು ಇಲ್ಲ. ತಿಮ್ಮಪ್ಪನ ದರ್ಶನಕ್ಕಾಗಿ ಹೇಗೆ ಕ್ಯೂಕಾಂಪ್ಲೆಕ್ಸ್ ಕಟ್ಟಬೇಕಾಗಿ ಬಂತೋ ಹಾಗೆಯೆ ಹನುಮ ಜನ್ಮಭೂಮಿ ದರ್ಶನಕ್ಕೂ ಸಹಾ ಕಾಂಪ್ಲೆಕ್ಸುಗಳನ್ನು ಕಟ್ಟಬೇಕಾಗಿ ಬರತ್ತೆ. ಇದರಲ್ಲಿ ನನಗೆ ಅನುಮಾನವೇ ಇಲ್ಲ.

ರಾಮದೇವರು ವಾರಧಿಯನ್ನು ಕಟ್ಟಿದ್ದನೇ? ಅವನು ಇಂಜನೀರಿಂಗ್ ಯಾವ ಕಾಲೇಜ್ನಿಂದ ಮಾಡಿದ್ದಾನೆ? ಈ ರಾಮನು ಹುಟ್ಟಿದ್ದಾನೆಂದು ಹೇಳುವ ಬರ್ತ್ ಸರ್ಟಿಫಿಕೇಟ್ ಉಂಟೇ? – ಹೀಗೆ ಕೇಳಿದ್ದಾರೆ ತಮಿಳನಾಡುಗೆ ಸೇರಿದ ಒಬ್ಬ ಪ್ರಸಿದ್ಧ ರಾಜಕಾರಿಣಿ. ಇವೇ ಪ್ರಶ್ನೆಗಳನ್ನು ಕೋರ್ಟ್ ನಲ್ಲಿಯೂ ಕೇಳಲಾಗಿದೆ. ಅವುಗಳಿಗೆಲ್ಲಾ ಸಮರ್ಪಕವಾದ ಸಮಾಧಾನಗಳನ್ನು ನಾವು ನೀಡಿದ್ದೇವೆ. ಹೀಗೆ ಐದುಜನ ಜಡ್ಜಿಗಳಿಂದಾಗಲಿ, ಏಳುಜನ ಜಡ್ಜಿಗಳನ್ನಾಗಲಿ ಒಳಗೊಂಡಿರುವ ಸುಪ್ರೀಂಕೋರ್ಟ್ ಬೆಂಚ್ ಕೊನೆಗೆ ರಾಮನ ಪರವಾಗಿಯೇ ಒಮ್ಮತದ ತೀರ್ಮಾನವನ್ನು ನೀಡಿತು. ಹಾಗೆಯೆ, ಹನುಮ ಜನ್ಮಭೂಮಿಯು ಒಂದುವೇಳೆ ಕೋರ್ಟ್‌ಗೆ ಹೋದರೂ ಅಲ್ಲಿ ತಿರುಮಲೆಯೇ ಗೆಲ್ಲುವುದು ಖಚಿತ. ದೊಡ್ಡ ಸಾಕ್ಷಿಯಾಗಿ ನಿಲ್ಲುವ ಸಾಹಿತ್ಯವನ್ನು ಸಂಶೋಧಕರೆಲ್ಲರೂ ಸೇರಿ ತಯಾರು ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಅಭಿನಂದನೆಗಳು.

ಢಿಲ್ಲಿಗೆ ಸೇರಿದ ಒಂದು ಸಂಸ್ಥೆಯವರು ಅಯೋಧ್ಯದಿಂದ ಲಂಕೆ ಮತ್ತು ಲಂಕೆ ಯಿಂದ ಅಯೋಧ್ಯಗೆ ಸೀತಾರಾಮಚಂದ್ರರು ತಿರುಗಾಡಿದ ಸ್ಥಳಗಳ ಕುರಿತು ಅಧ್ಯಯನವನ್ನು ನಡೆಸಿದ್ದಾರೆ. ಅವರು ಒಮ್ಮೆ ನನ್ನನ್ನು ಭೇಟೀ ಮಾಡಿದ್ದರು. ಆಗ ನಾನು ನಮ್ಮ ಗುಂಟೂರು ಜಿಲ್ಲೆಯಲ್ಲಿರುವ ಕೆಲವು ರಾಮಾಯಣ ಸಂಬಂಧವಾದ ಸ್ಥಳಗಳು ಮತ್ತು ಅಲ್ಲಿ ನಡೆಯುವ ಜಾತ್ರೆಗಳ ಬಗೆಗೆ ಹೇಳಿದೆ. ಹೀಗೆ ಇಡೀ ಭಾರತದೇಶವು ರಾಮಾಯಣ ಗಾಥೆಗಳೋಂದಿಗೆ ಒಂದಾಗಿದೆ. ಇದು ಭಗವಂತನ ಸರ್ವಂತರ್ಯಾಮಿತ್ವಕ್ಕೆ ನಿದರ್ಶನ. ಭಕ್ತರು ಯಾವ ರೂಪದಲ್ಲಿ, ಎಲ್ಲಿ, ಹೇಗೆ ಪೂಜಿಸಬೇಕೆನ್ನುವರೋ ಅಲ್ಲಿ, ಹಾಗೆಯೆ ಸಾಕ್ಷಾತ್ಕರಿಸುತ್ತಾನೆ ಪರಮಾತ್ಮನು. ಹಾಗಾಗಿ ಕೆಲವು ಜ್ಯೋತಿರ್ಲಿಂಗಳು ಎರಡೆರಡು ಸ್ಥಳಗಲ್ಲಿ ಕಾಣ ಸಿಗುತ್ತವೆ. ಭಕ್ತರು ಎರಡು ಕಡೆಗೂ ಹೋಗುತ್ತಿದ್ದಾರೆ. ನಾನೂ ಕೂಡಾ ಎಲ್ಲ ಕ್ಷೇತ್ರಗಳನ್ನು ದರ್ಶನ ಮಾಡುತ್ತೇನೆ. ಒಂದೇ ಜ್ಯೋತಿರ್ಲಿಂಗ ಎರಡು ಸ್ಥಲಗಳಲ್ಲಿವೆ ಎಂದರೆ, ಆ ಎರಡು ಕ್ಷೇತ್ರಗಳಿಗೆ ಹೋದರೆ ಹನ್ನೆರಡು ಬದಲಾಗಿ ಹದಿಮೂರು ಕ್ಷೇತ್ರಗಳಾಗುತ್ತವಲ್ಲಾ? ಎನ್ನುವ ಗೊಂದಲ ನನಗಿಲ್ಲ. ಏಕೆಂದರೆ ಯಾವುದು ಜ್ಯೋತಿರ್ಲಿಂಗ, ಯಾವುದು ಅಲ್ಲ ಎನ್ನುವ ತೀರ್ಮಾನ ನಾನು ಮಾಡುವುದಿಲ್ಲ. ಆ ನಿರ್ಣಯ ಪರಮಾತ್ಮನಿಗೆ ಬಿಟ್ಟದ್ದು. ನಮಗೆ ಬೇಕಾಗಿದ್ದು ಭಗವಂತನಲ್ಲಿ ಭಕ್ತಿ ಮಾತ್ರ. ಗಂಧಮಾದನ ಪರ್ವತವು ಎಲ್ಲಿದೆ? ಮಹೇಂದ್ರ ಪರ್ವತ ಒಡಿಶಾದಲ್ಲಿದೆಯೋ ಅಥವಾ ರಾಮೇಶ್ವರದಲ್ಲಿದೆಯೋ? ಇಲ್ಲಾ ಮಧ್ಯಪ್ರದೇಶದಲ್ಲೋ? ಹಾಗೆಯೇ, ಲಂಕ ಯಾವುದು? ಇಂದಿನ ಶ್ರೀಲಂಕವೋ ಅಥವಾ ಅಸ್ತ್ರಾಲಯ ಎನ್ನುವ ಆಷ್ಟ್ರೇಲಿಯಾ ಬಳಿಯೋ? ಹೀಗೆ ಅನೇಕ ಪ್ರಶ್ನಗಳು ಇನ್ನೂ ಉಳಿದಿವೆ. ಭೂಪಟವನ್ನು ತೆರದು ನೋಡಿದರೆ ರಾಮಾಯಣ ಸಂಬಂಧವಾದ ಹೆಸರುಗಳುಳ್ಳ ಅವೆಷ್ಟೋ ಸ್ಥಳಗಳು ನಮಗೆ ಕಾಣಿಸುತ್ತವೆ.

ಇಂತಹ ವಿಷಯಗಳಲ್ಲಿ ಅವರವರ ವಿಶ್ವಾಸ ಅವರವರದ್ದು. ನಮ್ಮ ವಿಶ್ವಾಸವನ್ನು ನಂಬುತ್ತಾ ಮತ್ತೊಬ್ಬರ ವಿಶ್ವಾಸವನ್ನು ಅಲ್ಲಗಳಿಯದೇ ಇರಬೇಕಾದ ಅವಸರ ಇಂದಿನ ಕಾಲದಲ್ಲಿದೆ. ಈ ದೃಷ್ಟಿಯಿಂದ ತಿರುಮಲೆಯೇ ಹನುಮ ಜನ್ಮಸ್ಥಲ ಎನ್ನುವ ಸತ್ಯವು ತಪ್ಪದೇ ಜನರ ವಿಶ್ವಾಸವನ್ನು ಹೊಂದುತ್ತದೆಂದು ನನ್ನ ನಂಬಿಕೆ. ನ್ಯಾಯಸ್ಥಾನದಲ್ಲಿಯೂ ಇದು ಸಾಬೀತು ಆಗುತ್ತದೆಂದು ನನ್ನ ಪರಿಪೂರ್ಣ ವಿಶ್ವಾಸ.

ನಮ್ಮ ಬಾಲ್ಯದಲ್ಲಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕೆ ಗಳಿಸಬೇಕೆಂದರೆ ಹನುಮಂತನ ಪೂಜೆ ಮತ್ತು ಚಾಲೀಸಾ ಪಾರಾಯಣ ಮಾಡು ಎಂದು ತಂದೆತಾಯಿಯರು ಹೇಳುತ್ತಿದ್ದರು. ನಾವು ಮಾಡುತ್ತಿದ್ದೆವು. ಆದರೆ ಇಂದು ಸಮಾಜದಲ್ಲಿ ಯುವಕರು ಹಾದಿ ತಪ್ಪುತ್ತಿದ್ದಾರೆ. ಡ್ರಗ್ಸ್, ಕ್ರೈಮ್ ಮುಂತಾದ ನಕಾರಾತ್ಮಕ ಚಟುವಟುಕೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಮನೆ ಒಳಗೆ ಸಂಸ್ಕಾರದ ಕೊರತೆ, ಹೊರಗೆ ಸಹವಾಸ ದೋಷಗಳು. ಇಂತಹ ಸ್ಥಿತಿಯಲ್ಲಿ ಹನುಮಂತನ ಆದರ್ಶ ನಮಗೆ ಮಾರ್ಗದರ್ಶಕವಾಗುವುದು. ಯುವಕರ

ವಿಕಾಸ ಮತ್ತು ಸಮಾಜದ ಸುಧಾರಣೆಗೆ ಹನುಮಂತನ ಉಪಾಸನೆ ಬಹಳ ಅವಶ್ಯಕವಾಗಿ ಬೇಕು. ಇಂತಹ ಉತ್ತಮ ಬೆಳವಣಿಗೆಗಳು ಅಂಜನಾದ್ರಿಯ ಹನುಮ ಜನ್ಮಸ್ಥಲ ನವೀಕರಣೆಯಿಂದ ಸಾಧ್ಯವಾಗುತ್ತದೆಂದು ಭಾವಿಸುತ್ತಿದ್ದೇನೆ.

ಜೈ ಶ್ರೀರಾಮ್.

ಮತಂಗ ಮಹರ್ಷಿ ಅಂಜನೆಗೆ ಸ್ವಾಮಿಯು ನೆಲೆಸಿರುವ ವೇಂಕಟಾದ್ರಿಯನ್ನು ತೋರಿಸಿ ತಪಸ್ಸಿಗೆ ಅದು ಸರಿಯಾದ ಸ್ಥಳವೆಂದು ಸೂಚಿಸುತ್ತಿರುವುದು



# ಉಪೋದ್ಘಾತ

ಹನುಮಂತನು ಸರ್ವದೇವತೆಗಳಿಗೂ ಪ್ರೀತಿಪಾತ್ರನಾದವನು. ಸಕಲ ದೇವತೆಗಳ ವರಪ್ರಸಾದ. ಮಹಾನ್ ಶಕ್ತಿಶಾಲಿ, ಅದ್ಭುತ, ಅಸಾಧ್ಯ ಕಾರ್ಯಗಳನ್ನು ಮಾಡಿ ತೋರಿಸಿದವನು. ಪರಮರಾಮಭಕ್ತಿ, ಮಹಾವೀರತ್ವ, ಜ್ಞಾನ, ಬುದ್ಧಿಕುಶಲತೆ, ವಿನಯ, ಯೋಗ, ಧೈರ್ಯ, ವಾಗ್ವೈಭವ, ಸಮರ್ಪಣಾಭಾವ– ಇಂತಹ ಅದ್ಭುತವಾದ ಗುಣಗಳ ಆಗರ. ಅನಂತಗುಣಸಾಗರನಾಗಿ ನಮ್ಮ ಮನದಲ್ಲಿ ಸುಳಿಯುವ ದೇವತೆ ಈ ಹನುಮ! ಅಭಯ, ಆನಂದ, ಇವೆರಡೂ ಹನುಮಂತನು ನಮಗೆ ನೀಡುವ ವರಗಳು.

ಹನುಮಂತನ ವ್ಯಕ್ತಿತ್ವ ಅನುಸರಣೀಯವಾದುದು. ಸರ್ವರೂ ಆರಾಧಿಸಬಹುದಾದಂತಹ ದೈವತ್ವ ಇವೆಲ್ಲಾ ಗುಣಗಳು ಒಂದೆಡೆ ಸೇರಿರುವ ಈಶ್ವರತ್ವವೇ ಶ್ರೀಆಂಜನೇಯಸ್ವಾಮಿ. ಭಯಗೊಂಡ ಸುಗ್ರೀವನಿಗೆ ಅಭಯವನ್ನು ನೀಡಿ, ಶ್ರೀರಾಮನೊಂದಿಗೆ ಮೈತ್ರಿಯನ್ನು ಬೆಳಸಿದ. ಅತ್ಯಂತ ದುಃಖದಲ್ಲಿ ಸಿಲುಕಿದ್ದ ಸೀತೆಗೆ ಶ್ರೀರಾಮನ ಸಂದೇಶವನ್ನು ನೀಡಿ, ಆಕೆಯ ಪ್ರಾಣವನ್ನು ಕಾಪಾಡಿ, ಆ ಮಾತೆಯನ್ನು ಸಂತೋಷಪಡಿಸಿದ. ಲಕ್ಷ್ಮಣನ ಪ್ರಾಣವನ್ನು ಕಾಪಾಡಿ, ಶ್ರೀರಾಮನನ್ನು ಸಂತೋಷಗೊಳಿಸಿದ. ಈ ರೀತಿ ಅಭಯ ಆಂಜನೇಯಸ್ವಾಮಿಯಾಗಿ, ಆನಂದಾಂಜನೇಯನಾಗಿ ಸಕಲಾಭೀಷ್ಟಪ್ರದಾತನಾಗಿ ನಮ್ಮೆಲ್ಲರಿಗಾಗಿ ಭುವಿಯಲ್ಲಿ ನೆಲೆಸಿರುವ ದೇವತೆ ಈ ಹನುಮಂತ.

ಹನುಮಂತನ ಸಂಪೂರ್ಣವಾದ, ಅತ್ಯದ್ಭುತವಾದ ವ್ಯಕ್ತಿತ್ವ ಶ್ರಿಮದ್ರಾಮಾಯಣದಲ್ಲಿ ಬಹಳ ಸುಂದರವಾಗಿ, ವಿವರವಾಗಿ ವರ್ಣಿಸಲಾಗಿದೆ. ಶ್ರೀಮದ್ರಾಮಾಯಣ ಮಂತ್ರಗರ್ಭಿತವಾದ ಆದಿಕಾವ್ಯ. ವಿಷ್ಣುವೇ ಶ್ರೀರಾಮಚಂದ್ರನಾಗಿ, ಮಹಾಲಕ್ಷ್ಮಿಯ ಸ್ವರೂಪವೇ ಸೀತಾದೇವಿಯಾಗಿ, ವಾಯುವಿನ ಅಂಶವೇ ಹನುಮಂತನಾಗಿ ಅಭಿವ್ಯಕ್ತವಾಗಿವೆ ಎಂದು ಪುರಾಣಗಳ ಮೂಲಕ ತಿಳಿದುಬರುತ್ತಿದೆ.

### ಹನುಮಂತನ ಜನ್ಮವೃತ್ತಾಂತ

ಶ್ರೀಮದ್ರಾಮಾಯಣದಲ್ಲಿನ ಸುಂದರಕಾಂಡದಲ್ಲಿ, ಅನೇಕ ಪುರಾಣಗಳಲ್ಲಿ, ವೇಂಕಟಾಚಲಮಾಹಾತ್ಮ್ಯಂ ಎಂಬ ಗ್ರಂಥದಲ್ಲಿ ಮತ್ತು ಅನೇಕ ಕಾವ್ಯಗಳಲ್ಲಿ ಹನುಮಂತನ ಜನ್ಮವೃತ್ತಾಂತವನ್ನು ಬಹಳ ಹೃದ್ಯಂಗಮವಾಗಿ ವರ್ಣಿಸಲಾಗಿದೆ.

1. ಸುಂದರಕಾಂಡದಲ್ಲಿ ತನ್ನ ಜನ್ಮ ವೃತ್ತಾಂತವನ್ನು ಹನುಮಂತನೇ ಸ್ವಯಂ ತಾನೇ ಸೀತಾದೇವಿಗೆ ಅರುಹಿದ್ದಾನೆ. ಶಂಬಸಾದನನೆಂಬ ರಾಕ್ಷಸನನ್ನು ಸಂಹರಿಸಿದ ಕೇಸರಿ ಎಂಬ ವಾನರವೀರನಿಗೆ, ಆತನ ಪತ್ನಿಯಾದ ಅಂಜನಾದೇವಿಗೆ ವಾಯುದೇವನ ವರದಿಂದಾಗಿ ತಾನು ಜನ್ಮಿಸಿದೆನೆಂದು ಹನುಮಂತನು ತಿಳಿಸಿದ್ದಾನೆ .

**ಮಾಲ್ಯವಾನ್ನಾಮ ವೈದೇಹೀ! ಗಿರೀಣಾಮುತ್ತಮೋ ಗಿರಿಃ**
**ತತೋ ಗಚ್ಛತಿ ಗೋಕರ್ಣಂ ಪರ್ವತಂ ಕೇಸರೀ ಹರಿಃ**
**ಸ ಚ ದೇವರ್ಷಿಭಿರ್ದಿಷ್ಟಃ ಪಿತಾ ಮಮ ಮಹಾಕಪಿಃ**
**ತೀರ್ಥೇ ನದೀಪತೇಃ ಪುಣ್ಯೇ ಶಂಬಸಾದನಮುದ್ಧರನ್**

ಮಾಲ್ಯವಂತ ಎಂಬ ಪರ್ವತವು ಅತ್ಯಂತ ಉತ್ತಮವಾದ ಪರ್ವತ. ಆ ಪರ್ವತದಿಂದ ದೇವರ್ಷಿಗಳು ಆದೇಶಿಸಿದಂತೆ ಆ ಮಹಾ ವಾನರವೀರನಾದ ಕೇಸರಿಯು ಗೋಕರ್ಣಕ್ಕೆ ಹೋಗಿ, ನದೀಪತಿಯಾದ ಆ ಪುಣ್ಯತೀರ್ಥದಲ್ಲಿ ಶಂಬಸಾದನನೆಂಬ ರಾಕ್ಷಸನನ್ನು ಸಂಹರಿಸಿದ.

**ಯಸ್ಯಾಹಂ ಹರಿಣಃ ಕ್ಷೇತ್ರೇ ಜಾತೋ ವಾತೇನ ಮೈಥಿಲಿ,**
**ಹನೂಮಾನಿತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ** [1]

1. ಶ್ರೀಮದ್ವಾಲ್ಮೀಕಿ ರಾಮಾಯಣ, ಸುಂದರಕಾಂಡ 35ನೆಯ ಸರ್ಗ , ಶ್ಲೋ–35–80–82 .

ಓ ಮಿಥಿಲಾತ್ಮಜೆ! ಆ ವಾನರವೀರನ ಪತ್ನಿಯಾದ ಅಂಜನಾದೇವಿಯಲ್ಲಿ ವಾಯುವಿನ ವರಪ್ರಭಾವದಿಂದಾಗಿ ನಾನು ಜನ್ಮಿಸಿ. ನನ್ನ ಚೇಷ್ಟೆಗಳ ಕಾರಣದಿಂದಾಗಿ ನನಗೆ ಲೋಕದಲ್ಲಿ ಹನುಮಂತನೆಂಬ ಹೆಸರು ಪ್ರಸಿದ್ಧಿಯಾಗಿದೆ.

2. ಕಿಷ್ಕಿಂಧಾ ಕಾಂಡದಲ್ಲಿ ಜಾಂಬವಂತನು ಸಮುದ್ರವನ್ನು ಲಂಘಿಸುವುದಕ್ಕಾಗಿ ಹನುಮಂತನನ್ನು ಹುರಿದುಂಬಿಸುತ್ತಾ ಆತನ ವೃತ್ತಾಂತವನ್ನು ಈ ರೀತಿ ತಿಳಿಸಿದ.

ನಿನ್ನ ತಾಯಿ ಅಂಜನಾದೇವಿ ಕಾರಣಜನ್ಮಳು–

**ಅಪ್ಸರಾಽಪ್ಸರಸಾಂ ಶ್ರೇಷ್ಠಾ ವಿಖ್ಯಾತಾ ಪುಂಜಿಕಸ್ಥಲಾ,**
**ಅಂಜನೇತಿ ಪರಿಖ್ಯಾತಾ ಪತ್ನೀ ಕೇಸರಿಣೋ ಹರೇಃ**

ಅಪ್ಸರೆಯರಲ್ಲಿ ಶ್ರೇಷ್ಠಳು, ಲೋಕಪ್ರಸಿದ್ಧಳಾದವಳು ಈ ಪುಂಜಿಕಸ್ಥಲ. ಆಕೆ ಅಂಜನಾ ಎಂಬ ಹೆಸರಿನಲ್ಲಿ ಜನ್ಮಿಸಿ ಕಪಿವೀರನಾದ ಕೇಸರಿಯ ಪತ್ನಿಯಾದಳು.

**ವಿಖ್ಯಾತಾ ತ್ರಿಷು ಲೋಕೇಷು ರೂಪೇಣಾಪ್ರತಿಮಾ ಭುವಿ,**
**ಅಭಿಶಾಪಾದಭೂತ್ತಾತ ! ವಾನರೀ ಕಾಮರೂಪಿಣೀ**

ಮೂರೂಲೋಕಗಳಲ್ಲೂ ಅಸಮಾನವಾದ ರೂಪವನ್ನು ಹೊಂದಿದ ಆಕೆ ಶಾಪದಿಂದಾಗಿ ಕಾಮರೂಪಿಣಿಯಾದ ವಾನರ ಸ್ತ್ರೀಯಾಗಿ ಜನ್ಮಿಸಿದಳು.

**ದುಹಿತಾ ವಾನರೇಂದ್ರಸ್ಯ ಕುಂಜರಸ್ಯ ಮಹಾತ್ಮನಃ**
**ಮಾನುಷಂ ವಿಗ್ರಹಂ ಕೃತ್ವಾ ರೂಪಯೌವನಶಾಲಿನೀ**
**ವಿಚಿತ್ರಮಾಲ್ಯಾಭರಣಾ ಕದಾಚಿತ್ ಕ್ಷೌಮಧಾರಿಣೀ**
**ಅಚರತ್ ಪರ್ವತಸ್ಯಾಗ್ರೇ ಪ್ರಾವೃಡಂಬುದಸನ್ನಿಭೇ**

ಮಹಾತ್ಮನು, ವಾನರರಾಜನಾದ ಕುಂಜರನಿಗೆ ಪುತ್ರಿಯಾಗಿ ಜನ್ಮಿಸಿದ ಆಕೆ ಅತ್ಯಂತ ಸುಂದರವಾದ ರೂಪ, ಯೌವನವನ್ನು ಹೊಂದಿ, ಸುಂದರವಾದ ರೇಷ್ಮೆಯ ವಸ್ತ್ರವನ್ನು ಧರಿಸಿ, ಚಿತ್ರ ವಿಚಿತ್ರವಾದ ಪುಷ್ಪಮಾಲೆಗಳಿಂದ , ಆಭರಣಗಳಿಂದ , ಮಳೆಗಾಲದ ಮೇಘಗಳೊಂದಿಗೆ ಸಮಾನವಾದ ಬಣ್ಣವನ್ನು ಹೊಂದಿ, ಪರ್ವತದ ಮೇಲೆ ವಿಹರಿಸುತ್ತಿದ್ದಳು.

**ತಸ್ಯಾ ವಸ್ತ್ರಂ ವಿಶಾಲಾಕ್ಷಿಃ ಪೀತಂ ರಕ್ತದಶಂ ಶುಭಮ್**
**ಸ್ಥಿತಾಯಾಃ ಪರ್ವತಸ್ಯಾಗ್ರೇ ಮಾರುತೋಽಥಾಹರಚ್ಛನೈಃ**

ಈ ಪರ್ವತಾಗ್ರದಲ್ಲಿ, ವಿಶಾಲವಾದ ಕಣ್ಣುಗಳನ್ನು ಹೊಂದಿದ ಆಕೆ ಧರಿಸಿದ ಕೆಂಪು ವಸ್ತ್ರವನ್ನು ನಿಧಾನವಾಗಿ ವಾಯುವು ತೊಲಗಿಸಿದ.

**ಸ ದದರ್ಶ ತತಸ್ತಸ್ಯಾ ವೃತ್ತಾವೂರೂ ಸುಸಂಹತೌ**
**ಸ್ತನೌ ಚ ಪೀನೌ ಸಹಿತೌ ಸುಜಾತಂ ಚಾರು ಚಾನನಮ್**

ವಾಯುದೇವನು, ಆಕೆಯ ವರ್ತುಲಾಕಾರದ ಊರುವುಗಳನ್ನು , ನಿಬಿಡವಾದ ವಕ್ಷೋಜಗಳನ್ನು, ಸುಂದರವಾದ ಮುಖವನ್ನು ನೋಡಿದ.

**ತಾಂ ವಿಶಾಲಾಯತಶ್ರೋಣೀಂ ತನುಮಧ್ಯಾಂ ಯಶಸ್ವಿನೀಮ್**
**ದೃಷ್ಟ್ವೈವ ಶುಭಸರ್ವಾಂಗೀಂ ಪವನಃ ಕಾಮಮೋಹಿತಃ**

ವಿಶಾಲವಾದ ಕಟಿಭಾಗದಿಂದ, ಸಣ್ಣಗಿನ ನಡುವಿನೊಂದಿಗೆ , ಲೋಕ ಪ್ರಸಿದ್ಧಿಯಾದ ಆ ಸರ್ವ ಶುಭಾಂಗಿನಿಯನ್ನು ನೋಡಿದ ಪವನನು ಕಾಮಮೋಹಿತನಾದ.

**ಸ ತಾಂ ಭುಜಾಭ್ಯಾಂ ದೀರ್ಘಾಭ್ಯಾಂ ಪರ್ಯಷ್ವಜತ ಮಾರುತಃ**
**ಮನ್ಮಥಾವಿಷ್ಟಸರ್ವಾಂಗೋ ಗತಾತ್ಮಾ ತಾಮನಿಂದಿತಾಮ್**

ಮನ್ಮಥ ವಿಕಾರಪೀಡಿತನಾದ ವಾಯುವು ತನ್ನ ನೀಳವಾದ ಬಾಹುವುಗಳೊಂದಿಗೆ ವಿಶುದ್ಧಳಾದ ಆಕೆಯನ್ನು ಆಲಿಂಗಿಸಿಕೊಂಡ.

**ಸಾ ತು ತತ್ರೈವ ಸಂಭ್ರಾಂತಾ ಸುವ್ರತಾ ವಾಕ್ಯಮಬ್ರವೀತ್**
**ಏಕಪತ್ನೀವ್ರತಮಿದಂ ಕೋ ನಾಶಯಿತುಮಿಚ್ಛತಿ**

ಆ ಘಟನೆಗೆ ಸಂಭ್ರಮಿಸಿದ ಆಕೆ, ವ್ರತದೀಕ್ಷಾ ಪರಳಾದ ನಾನು ಒಬ್ಬನಿಗೆ ಮಾತ್ರ ಪತ್ನಿಯಾದ ನನ್ನ ವ್ರತವನ್ನು ಯಾರು ಭಂಗ ಮಾಡಿದರು?

**ಅಂಜನಾಯಾ ವಚಃ ಶ್ರುತ್ವಾ ಮಾರುತಃ ಪ್ರತ್ಯಭಾಷತ,**
**ನ ತ್ವಾಂ ಹಿಂಸಾಮಿ ಸುಶ್ರೋಣಿ! ಮಾ ಭೂತ್ತೇ ಮನಸೋ ಭಯಮ್**

ಅಂಜನೆಯ ಮಾತುಗಳನ್ನು ಕೇಳಿದ ಮಾರುತಿ "ಸುಂದರೀ! ನಿನ್ನನ್ನು ಶಾರೀರಿಕವಾಗಿ ಸೇರಿ ನೋಯಿಸುವುದಿಲ್ಲ. ನಿನ್ನ ಮನಸ್ಸಿನಲ್ಲಿ ಅಂತಹಾ ಭಯವೇನೂ ಬೇಡ.

**ಮನಸೋಽಸ್ಮಿ ಗತೋ ಯತ್ತ್ವಾಂ ಪರಿಷ್ವಜ್ಯ ಯಶಸ್ವಿನೀ!**
**ವೀರ್ಯವಾನ್ ಬುದ್ಧಿಸಂಪನ್ನಸ್ತವ ಪುತ್ರೋ ಭವಿಷ್ಯತಿ**

ನಿನ್ನನ್ನು ಕೇವಲ ಮನಸಾರೆ ಇಷ್ಟಪಡುತ್ತಿದ್ದೇನೆ. ಇದರಿಂದಾಗಿ ನಿನಗೆ ಮಹಾ ವೀರ್ಯವಂತ, ಬುದ್ಧಿವಂತನಾದ ಕುಮಾರನು ಜನ್ಮಿಸುತ್ತಾನೆ.

**ಮಹಾಸತ್ತ್ವೋ ಮಹಾತೇಜಾ ಮಹಾಬಲಪರಾಕ್ರಮಃ**
**ಲಂಘನೇ ಪ್ಲವನೇ ಚೈವ ಭವಿಷ್ಯತಿ ಮಯಾ ಸಮಃ**

ಮಹಾನ್ ಅಂತಸ್ಸತ್ತ್ವವನ್ನು ಹೊಂದಿರುವವನು, ಅತ್ಯಂತ ತೇಜಸ್ಸನ್ನು ಹೊಂದಿರುವವನು, ಅತ್ಯಂತ ಬಲಪರಾಕ್ರಮವನ್ನು ಹೊಂದಿರುವವನು, ಎಷ್ಟೇ ದೂರವನ್ನಾದರೂ ಸುಲಭವಾಗಿ ಒಂದೇ ಜಿಗಿತದಲ್ಲಿ ದಾಟಬಲ್ಲವನೂ ಆಗಿರುತ್ತಾನೆ ಎಂದು ವಾಯುದೇವರು ನುಡಿದರು.

**ಏವಮುಕ್ತಾ ತತಸ್ತುಷ್ಟಾ ಜನನೀ ತೇ ಮಹಾಕಪೇ!**
**ಗುಹಾಯಾಂ ತ್ವಾಂ ಮಹಾಬಾಹೋ ಪ್ರಜಜ್ಞೇ ಪ್ಲವಗರ್ಷಭ!**

ಈ ರೀತಿಯಾಗಿ ಹೇಳುತ್ತಿರಲು, ನಿನ್ನ ತಾಯಿ ಸಂತೃಪ್ತಿಯನ್ನು ಹೊಂದಿದಳು. ಓ ವಾನರ ಶ್ರೇಷ್ಠನೇ! ಆ ಗುಹೆಯಲ್ಲಿ ನಿನಗೆ ಜನ್ಮವನ್ನು ನೀಡಿದ್ದಾಳೆ ಎಂದು ಜಾಂಬವಂತನು ಹನುಮಂತನ ಜನ್ಮವೃತ್ತಾಂತವನ್ನು ತಿಳಿಸಿದ.

## ಹನುಮನ ಜನ್ಮವೃತ್ತಾಂತದಲ್ಲಿ ವಾಯುದೇವರ ಪ್ರಸಕ್ತಿಯ ರಹಸ್ಯ

ಈ ಹನುಮಂತನ ಜನ್ಮ ವೃತ್ತಾಂತದಲ್ಲಿ ರಾಮಾಯಣದಲ್ಲಿ ಅಲ್ಲದೇ ಇತರ ಪುರಾಣಾದಿ ಗ್ರಂಥಗಳಲ್ಲೂ ವಾಯುದೇವನ ಪ್ರಸ್ತಾವನೆ ಇದೆ. ಅಂಜನಾ ಕೇಸರಿ ದಂಪತಿಗಳ ತನಯನ ವಿಷಯದಲ್ಲಿ ವಾಯುವಿನ ಪ್ರಸ್ತಾವನೆ ಆಧುನಿಕರಿಗೆ ವಿಚಿತ್ರವಾಗಿ ತೋರಬಹುದು. ಆದರೆ ಧರ್ಮಶಾಸ್ತ್ರ, ವೈದಿಕ ಸಂಪ್ರದಾಯವನ್ನು ತಿಳಿದವರಿಗೆ ಅದು ಅದ್ಭುತವನ್ನುಂಟುಮಾಡುತ್ತದೆ.

ವೈದಿಕಕ್ರಮದಲ್ಲಿ ನಡೆಯುವ ವಿವಾಹದಲ್ಲಿ ಇರುವ ಮಂತ್ರಗಳನ್ನು ಆಳವಾಗಿ ಪರಿಶೀಲಿಸಿದರೆ ಕನ್ಯೆಯಾಗಿದ್ದಾಗ ವಧುವನ್ನು ಸೋಮ, ಗಂಧರ್ವ ಮತ್ತು ಅಗ್ನಿಯು ರಕ್ಷಿಸುವವರು. ಆಕೆಯ ರಕ್ಷಕರಾದ್ದರಿಂದ ಅವರು ಆ ಕನ್ಯೆಯನ್ನು ಆಕೆಯ ಪತಿಗೆ ಒಪ್ಪಿಸುವ ಸಮಯದಲ್ಲಿ ಹೇಳುವ ಮಂತ್ರಗಳಲ್ಲಿ ಗೃಹಿಣಿಯಾಗಿ ಆಕೆಯನ್ನು ರಕ್ಷಿಸುವ ಜವಾಬ್ದಾರಿಯನ್ನು ಅಗ್ನಿಗೆ, ಭಗನಿಗೆ, ಅರ್ಯಮನಿಗೆ, ಸವಿತೃವಿಗೆ, ಇತರ ಆದಿತ್ಯರಿಗೆ , ವಾಯುವಿಗೆ, ಪ್ರಜಾಪತಿಗೆ, ವಿಷ್ಣುವಿಗೆ, ಇಂದ್ರನಿಗೆ, ಇನ್ನಿತರರಿಗೆ ನೀಡುತ್ತಾರೆ. ಈ ರೀತಿ ಒಪ್ಪಿಸಿದ ಆ ಕನ್ಯೆಯ ಗೃಹಿಣೀತ್ವವನ್ನು, ಆಕೆಯನ್ನು ರಕ್ಷಿಸುವ ಪತಿಗಳು ಆಯಾ ಸಮಯದಲ್ಲಿ ಕಾಪಾಡುತ್ತಿರುತ್ತಾರೆ. ಆ ರೀತಿ ಪಾಣೀಗ್ರಹಣದ ಸಮಯದಲ್ಲಿ ಓದುವ ಮಂತ್ರಗಳಲ್ಲಿ ಇದು ಒಂದು –

**"ಯ ಏತಿ ಪ್ರದಿಶಸ್ಸರ್ವಾ ದಿಶೋಮ ಪವಮಾನಃ**
**ಹಿರಣ್ಯ ಹಸ್ತ ಐರಮ್ಮಸ್ಸತ್ವಾ ಮನ್ಮನಸಂ ಕೃಣೋತು."**

ತನ್ನನ್ನು ಧ್ಯಾನಿಸುವವರಿಗೆ ಪ್ರಸಾದಿಸುವುದಕ್ಕಾಗಿ ಕೈಯಲ್ಲಿ ಬಂಗಾರವನ್ನು ಧರಿಸಿ, ಎಲ್ಲಾ ದಿಕ್ಕುಗಳಲ್ಲೂ ಸಂಚರಿಸುತ್ತಿರುವ, ಅಗ್ನಿಗೆ ಸ್ನೇಹಿತನಾದ ವಾಯುವು, ನಿನ್ನನ್ನು ನನ್ನಲ್ಲಿ ಮನಸ್ಸನ್ನು ಹೊಂದಿದವಳಾಗಿ ಮಾಡಲಿ! ಎಂದು ವರನು ಹೇಳುವ ಮಂತ್ರ.

ಈ ಮಂತ್ರದಲ್ಲಿ ಹೇಳುವ ರೀತಿಯಲ್ಲಿ ಅಂಜನಾ–ಕೇಸರಿಗಳ ಮಗನು, ಸಮಸ್ತ ಲೋಕಪೂಜ್ಯನೂ, ಸರ್ವದೇವ ವಂದ್ಯನೂ, ಅನಂತ ಶಕ್ತಿಸಂಪನ್ನನನೂ, ಅಪರಿಮಿತ ಬಲಪರಾಕ್ರಮನೂ, ಆಗಿರುತ್ತಾನೆ ಎಂದು ತಿಳಿಸಿ, ಆ ಶಿಶುವು ತನ್ನ ಶಕ್ತಿಯನ್ನು ಹೊಂದಿರಬೇಕು ಎಂಬ ಭಾವನೆಯೊಂದಿಗೆ, ವೇದ ಧರ್ಮಾನುಸಾರವಾಗಿ ಹನುಮಂತನು ಜನ್ಮಿಸುವವರೆಗೂ ವಾಯುವು ಆಕೆಗೆ ರಕ್ಷಾಕವಚವಾಗಿ, ವಲಯವಾಗಿ ನಿಂತ. ಅದನ್ನೇ ಆಲಿಂಗನವನ್ನಾಗಿ ವರ್ಣಿಸಲಾಯಿತು. ದೇವತೆಗಳ ಸಮಾಗಮ , ಮಾನವರ ಸಮಾಗಮದಂತಹುದಲ್ಲ. ಅವರು ತಮ್ಮ ದೇಹದ ಪ್ರೀತಿಯಿಟ್ಟವರಲ್ಲ. ಅವರು ನೆನೆಸಿಕೊಂಡರೆ ಕೇವಲ ನೋಟದಿಂದಲೇ ಸಂತಾನವನ್ನು ಅನುಗ್ರಹಿಸಬಲ್ಲ ಪ್ರಭಾವವನ್ನು ಹೊಂದಿರುವವರು. ವಾಯುವು ಕೂಡಾ ಅಂತಹವನೇ! ಈ ಕಾರಣ ಅಂಜನೇಯಲ್ಲಿ ವಾಯುದೇವನು ತೋರಿಸಿದ್ದು ಕೇವಲ ಭೌತಿಕವಾದ ಕಾಮವೆಂದು ತಿಳಿಯಬಾರದು ದೇವತೆಗಳಿಗೆ ಗರ್ಭಧಾರಣೆ ಎನ್ನುವುದಿಲ್ಲ. ನೆನೆಸಿಕೊಂಡಮಾತ್ರದಿಂದಲೇ ಸಂತಾನವನ್ನು ಹೊಂದುವುದು ಸಾಮಾನ್ಯವಾದ ವಿಷಯ! ಹಾಗೇ ದೇವತೆಗಳು ಅನುಗ್ರಹಿಸಿದಾಗ" ಸದ್ಯಃ ಜನನಂ "ಎನ್ನುವುದೂ ಸಾಮಾನ್ಯ ವಿಷಯವೇ ಆಗಿದೆ! ಹಾಗೇ ಕ್ಷೇತ್ರ(ಜನ್ಮವನ್ನು ನೀಡುವ ಸ್ತ್ರೀ) ಮಾನವಕಾಂತೆಯಾದರೂ ಅಥವಾ ಪಶುವಾದರೂ ಗರ್ಭವನ್ನು ಧರಿಸಬಲ್ಲರು.

ಒಂದು ಬೆಟ್ಟದ ಮೇಲೆ ಹೋಗಿ ನಿಂತಾಗ, ಅಲ್ಲಿ ಬೀಸುವ ಗಾಳಿಗೆ ಯಾರ ವಸ್ತ್ರವಾದರೂ ಹಾರಿ ಹೋಗುವುದು ಸಹಜ. ಆ ಸಮಯದಲ್ಲಿ ಗಾಳಿ ಅವರನ್ನು ಸುತ್ತುವರೆಯುವುದು, ಆ ಗಾಳಿಯ ಶಬ್ದವು ಕಿವಿಯಲ್ಲಿ ಪ್ರವೇಶಿಸುವುದೂ ಸಹಜ! ಆ ರೀತಿ ಸುತ್ತುಮುತ್ತುವುದನ್ನು ಆಲಿಂಗನವೆಂದು ಹೇಳುವುದು ರೂಪಕಾಲಂಕಾರ ಪ್ರೀತಿ. ಆ ಮೇಲೆ ಸಂದೇಹವನ್ನು ವಾಯುದೇವನು ಪರಿಹರಿಸಿದ್ದಾನೆ ಅವನ ಚರ್ಯೆಯ ಒಳ ರಹಸ್ಯವನ್ನು ವೇದಮಂತ್ರಗಳು ಹೇಳುತ್ತಿವೆ.

3. ಇನ್ನು ಶ್ರಿಮದ್ವಾಲ್ಮೀಕಿ ರಾಮಾಯಣದಲ್ಲಿನ ಉತ್ತರಕಾಂಡದಲ್ಲಿ ಶ್ರೀರಾಮಚಂದ್ರಪ್ರಭು, ಅಗಸ್ತ್ಯಮಹರ್ಷಿಯನ್ನು ಹನುಮಂತನ ವೃತ್ತಾಂತವನ್ನು ವಿವರಿಸಬೇಕೆಂದು ಕೇಳಿದಾಗ, ಮಹರ್ಷಿ ಆ ವೃತ್ತಾಂತವನ್ನು ಈ ರೀತಿ ವರ್ಣಿಸಿದ,

**ರಾಘವಸ್ಯ ವಚಃ ಶ್ರುತ್ವಾ ಹೇತುಯುಕ್ತಮೃಹಿಸ್ತತಃ**
**ಹನೂಮತಃ ಸಮಕ್ಷಂ ತಮಿದಂ ವಚನಮಬ್ರವೀತ್** [1]

ರಾಘವನ ಯುಕ್ತಿಯುಕ್ತವಾದ ಮಾತಗಳನ್ನು ಕೇಳಿದ ನಂತರ ಆ ಅಗಸ್ತ್ಯಋಷಿ ಹನುಮಂತನ ಸಮಕ್ಷಮದಲ್ಲೇ ಈ ರೀತಿ ಹೇಳಿದ್ದಾನೆ.

**ಸೂರ್ಯದತ್ತವರಸ್ಸ್ವರ್ಣಃ ಸುಮೇರುರ್ನಾಮ ಪರ್ವತಃ**
**ಯತ್ರ ರಾಜ್ಯಂ ಪ್ರಶಾಸ್ತ್ಯಸ್ಯ ಕೇಸರೀ ನಾಮ ವೈ ಪಿತಾ**
**ತಸ್ಯ ಭಾರ್ಯಾ ಬಭೂವೇಷ್ಟಾ ಅಂಜನೇತಿ ಪರಿಶ್ರುತಾ**
**ಜನಯಾಮಾಸ ತಸ್ಯಾಂ ವೈ ವಾಯುರಾತ್ಮಜಮುತ್ತಮಮ್** [2]

ಸೂರ್ಯನಿಂದ ವರವನ್ನು ಹೊಂದಿದ "ಸುಮೇರು"ಎಂಬ ಪರ್ವತವಿದೆ. ಅಲ್ಲಿ ಹನುಮಂತನ ತಂದೆಯಾದ "ಕೇಸರಿ"ಎಂಬ ಹೆಸರಿನ ವಾನರವೀರನು ರಾಜ್ಯವನ್ನು ಆಳುತ್ತಿದ್ದ. ಆತನಿಗೆ ಪ್ರಿಯಳಾದ "ಅಂಜನಾ"ಎಂದು ಪ್ರಸಿದ್ದಿಯನ್ನು ಹೊಂದಿದ ಪತ್ನಿಯಿದ್ದಳು. ಆಕೆಯಿಂದ ವಾಯುದೇವನು ತನಗೆ ಅನುರೂಪನೂ, ಉತ್ತಮನೂ ಆದ ಪುತ್ರನನ್ನು ಹೊಂದಿದ. ಆತನೇ ಹನುಮ!

(ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ವರ್ಣಿಸಲ್ಪಟ್ಟ ಸುಮೇರು ಪರ್ವತ "ವೇಂಕಟಾಚಲವೇ "**ಮೇರುಪುತ್ರಂ ಮಹಾರಣ್ಯಂ ವೇಂಕಟಾಚಲಸಂಜ್ಞಕಂ**"ಎಂದು ಮೇರುಪರ್ವತ ಪುತ್ರನು" ವೇಂಕಟ" ಮತ್ತು "ಸುಮೇರು" ಎಂಬ ಹೆಸರುಗಳನ್ನು ಹೊಂದಿದ್ದಾನೆ. ಆ ಸುಮೇರು ಶೇಷನ ಅಂಶದಿಂದ ಹುಟ್ಟಿದವನು. ಇವನು ಋಷಿಗಳಿಗೆ ಪರ್ವತರೂಪದಲ್ಲಿ, ದೇವತೆಗಳು ಮತ್ತು ಮುಕ್ತರಿಗೆ ಬಂಗಾರದ ಬಣ್ಣದಲ್ಲಿ ಕಾಣಿಸುವನೆಂದು ವೇಂಕಟಾಚಲಮಾಹಾತ್ಮ್ಯಂ ಗ್ರಂಥದಲ್ಲಿ ಹೇಳಲಾಗಿದೆ)

ಈ ರೀತಿ ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿ ಮೂರು ಸಂದರ್ಭಗಳಲ್ಲಿ ಹನುಮಂತನ ಜನನೀ–ಜನಕರ ಬಗೆಗೆ ವರ್ಣಿಸಲಾಗಿದೆ. ಆದರೆ ಜನ್ಮಸ್ಥಳದ ಬಗೆಗೆ ಮಾತ್ರ ವರ್ಣಿಸಲಿಲ್ಲ. ಉತ್ತರಕಾಂಡವನ್ನು ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿನ ಅಂತರ್ಭಾಗವೇ ಎಂದು ಒಪ್ಪಿಕೊಳ್ಳುವವರಿಗೆ ಆ ಮೇಲಿನ ಪ್ರಮಾಣವು ಪರಮ ಪ್ರಮಾಣವಾಗುತ್ತದೆ. ಅಂದರೆ ಸುಮೇರು ಪರ್ವತವು ಹನುಮಂತನ ಜನಕನಾದ ವಾನರವೀರ ಕೇಸರಿ ಆಳುತ್ತಿರುವ ಅತಿ ವಿಶಾಲವಾದ ವಾನರ ರಾಜ್ಯದಲ್ಲಿ ಸೇರಿಕೊಂಡಿತ್ತೆಂದು ಮೇಲಿನ ಪ್ರಮಾಣದ ಮೂಲಕ ತಿಳಿದುಕೊಳ್ಳಬಹುದು. ಬ್ರಹ್ಮಾಂಡಪುರಾಣದ ಶ್ರೀವೇಂಕಟಾಚಲಮಾಹಾತ್ಮ್ಯದಲ್ಲಿ ಹೇಳಿರುವಂತೆ ಕೇಸರಿಯ ಪತ್ನಿ ಅಂಜನಾದೇವಿ ಈ ಪ್ರಾಂತದಲ್ಲಿ ತಪಸ್ಸು ಮಾಡಿ, ಅತುಲಿತಬಲಧಾಮನಾದ ಹನುಮಂತನನ್ನು ಹಡೆದಳು. ಸ್ಕಂದಪುರಾಣದಲ್ಲಿ ಮತಂಗ ಮಹರ್ಷಿಯ ಉಪದೇಶದ ಅನುಸಾರವಾಗಿ ಅಂಜನಾದೇವಿ ಈ ತಿರುಮಲೆಯ ಗಿರಿಯಲ್ಲಿನ ಆಕಾಶಗಂಗೆಯ ಬಳಿ ತಪಸ್ಸು ಮಾಡಿ ಹನುಮಂತನಿಗೆ ಜನ್ಮವನ್ನು ನೀಡಿದಳೆನ್ನುವ ವಿವರವಿದೆ. ಇತಿಹಾಸ ಪುರಾಣಗಳಲ್ಲಿರುವ ಈ ಎಲ್ಲ ಸಂದರ್ಭಗಳನ್ನು ಸಮನ್ವಯದೃಷ್ಟಿಯಿಂದ ನೋಡಲೇಬೇಕೆ ಹೊರತು ಖಂಡನಾ ದೃಷ್ಟಿಯಿಂದಾಗಲೀ, ನಿರಾಕರಿಸುವ ದೃಷ್ಟಿಯಿಂದಾಗಲಿ ನೋಡಬಾರದು. ಕಾರಣವೇನೆಂದರೆ ನೂರಾರು ಸಾವಿರಾರು ವರ್ಷಗಳ ಪ್ರಮಾಣಗಳನ್ನು ತಿರಸ್ಕಾರಮಾಡಲು ನಮ್ಮ ನೂರುವರ್ಷಗಳ ಜೀವನದಲ್ಲಿ ಮಾತನಾಡುವುದನ್ನು ಕಲಿತಿರುವ ಹತ್ತು ಹದಿನೈದು ಅಥವಾ ಇಪತ್ತು ವರ್ಷಗಳ ಅನುಭವ ಸರಿಹೋಗುವುದಿಲ್ಲ.

ಇನ್ನು ವ್ಯಾಸವಿರಚಿತವಾದ ಮಹಾಭಾರತದಲ್ಲಿ ಭೀಮನೊಂದಿಗೆ ಸಂಭಾಷಿಸುವ ಸಂದರ್ಭದಲ್ಲಿ

**ಅಹಂ ಕೇಸರಿಣಃ ಕ್ಷೇತ್ರೇ ವಾಯುನಾ ಜಗದಾಯುಷಾ**
**ಜಾತಃ ಕಮಲಪತ್ರಾಕ್ಷ ಹನುಮಾನ್ನಾಮ ವಾನರಃ** [3]

ಎಂದು ತಾನು ವಾಯುದೇವನ ಅನುಗ್ರಹದಿಂದ ಕೇಸರಿಯ ಪತ್ನಿಯಾದ ಅಂಜನಿಯಲ್ಲಿ ಪುತ್ರನಾಗಿ ಜನ್ಮಿಸಿದೆನೆಂದು ಹನುಮಂತನು ಸ್ವತಃ ಹೇಳಿದ್ದಾನೆ.

ಹೀಗೆ ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಾಗಲೀ, ವ್ಯಾಸಮಹಾಭಾರತದಲ್ಲಾಗಲೀ ಹನುಮಂತನ ಜನನೀ ಜನಕರ ಬಗೆಗೆ ವರ್ಣನೆ, ವಾಯುದೇವನ ಪ್ರಸ್ತಾವನೆಯೂ ಸ್ಪಷ್ಟವಾಗಿ ಕಂಡುಬರುತ್ತಿದೆಯಾಗಲೀ ಆತನ ಜನ್ಮಸ್ಥಳದ ಬಗೆಗೆ ಎಲ್ಲೂ ವಿವರಗಳಿಲ್ಲ.

ಆದರೆ ಆಂಜನೇಯಸ್ವಾಮಿಯ ಜನ್ಮಸ್ಥಳ ಕುರಿತು ಭವಿಷ್ಯೋತ್ತರ, ವರಾಹ, ಬ್ರಹ್ಮಾಂಡ, ವಾಮನ, ಸ್ಕಾಂದ ಮೊದಲಾದ ಪುರಾಣಗಳಲ್ಲಿ ಸುಸ್ಪಷ್ಟವಾಗಿ ವರ್ಣಿಸಲಾಗಿದೆ.

ಪುರಾಣಗಳಲ್ಲಿ ಹನುಮಂತನ ಜನ್ಮಸ್ಥಳವನ್ನು ವರ್ಣಿಸುವ ಶ್ಲೋಕಗಳು ತಿ.ತಿ.ದೇ ಯವರು ಮತ್ತು ಜೀಯ್ಯರು ಎಡ್ಯುಕೇಷನಲ್ ಟ್ರಸ್ಟ್‌ನವರು ಮುದ್ರಿಸಿದ ವೇಂಕಟಾಚಲಮಾಹಾತ್ಮ್ಯದಲ್ಲಿ ಸುಸ್ಪಷ್ಟವಾಗಿ ಕಂಡುಬರುತ್ತಿವೆ. ಆದರೆ ಈ ಶ್ಲೋಕಗಳು ಆಯಾ ಪುರಾಣಗಳ ಇಂದಿನ ಮುದ್ರಿತ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ತಾಳಪತ್ರಾದಿ ರೂಪದಲ್ಲಿ ಕೆಲವು ಸಾವಿರ ವರ್ಷಗಳಕಾಲ ಭದ್ರಪಡಿಸಿದ ಪುರಾಣಸಾಹಿತ್ಯದಲ್ಲಿ ಮೇಲೆ ಉದಾಹರಣೆಗೆ ನೀಡಿದ ಶ್ಲೋಕಗಳು ಇರಲೇ ಬೇಕು ಆದ್ದರಿಂದ ಭಗವದ್ರಾಮಾನುಜರು ಶ್ರೀವೇಂಕಟಾಚಲಮಾಹಾತ್ಮ್ಯಂ ನಲ್ಲಿ ಆಗ ಲಭ್ಯವಾದ ಈ ಪುರಾಣ ಸಾಹಿತ್ಯವನ್ನು ಪ್ರಮಾಣವಾಗಿ ತೆಗೆದುಕೊಂಡು ಏಳು ಬೆಟ್ಟಗಳ ಮೇಲೆ ನೆಲೆಸಿದ ಮೂರ್ತಿ ವಿಷ್ಣುಸ್ವರೂಪವೇ ಎಂದು ಸ್ಪಷ್ಟವಾಗಿ ನಿರ್ಧಾರಿಸಿದ್ದಾರೆ. ಇವೆಲ್ಲಾ ಶ್ರೀವೇಂಕಟಾಚಲಮಾಹಾತ್ಮ್ಯಂ ನಲ್ಲಿ ವಿವರಿಸಲಾಗಿದೆ. ಈಗ ಹನುಮಂತನ ಜನ್ಮಸ್ಥಳದ ನಿರ್ಮಾಣದಲ್ಲಿ ಅದೇ ಗ್ರಂಥದಲ್ಲಿ ಗ್ರಹಿಸಿದ ಪುರಾಣಶ್ಲೋಕಗಳನ್ನು ಸ್ವೀಕರಿಸಬೇಕೆ ಹೊರತು ಈಗ ಅವು ಆಯಾ ಪುರಾಣಗ್ರಂಥದಲ್ಲಿ ಲಭ್ಯವಾಗುತ್ತಿಲ್ಲವೆಂದು, ಆದ್ದರಿಂದ ಪುರಾಣ ಸಾಹಿತ್ಯದಲ್ಲಿ ಇಲ್ಲದ, ಕೇವಲ ಸ್ವಕಪೋಲಕಲ್ಪಿತಗಳು ಮತ್ತು ಹನುಮಜ್ಜನ್ಮಸ್ಥಳದ ನಿರ್ಧಾರಣೆಗಾಗಿ ಹೊಸದಾಗಿ ಸೃಷ್ಟಿಸಲ್ಪಟ್ಟವು ಎಂದು ಹೇಳುವದನ್ನು ಸ್ವಲ್ಪವೂ ಒಪ್ಪುವುದಕ್ಕಾಗುವುದಿಲ್ಲ.

**ಪುರಾಣಗಳ ಪ್ರಾಮಾಣಿಕತೆ**-

ಕೋಟ ವೇಂಕಟಾಚಲಂ ನಂತಹಾ ಪ್ರಸಿದ್ಧರಾದ ಅನೇಕ ಭಾರತೀಯರು ಮತ್ತು ವಿದೇಶೀಯರಾದ ಇತಿಹಾಸಕಾರರು ಭಾರತೀಯೇತಿಹಾಸ ರಚನೆಗಳಲ್ಲಿ ಪುರಾಣಗಳನ್ನು ಪ್ರಮಾಣವಾಗಿ ತೆಗೆದುಕೊಳ್ಳುತ್ತಿದ್ದರು. ಅವುಗಳಲ್ಲಿ ಕೆಲವನ್ನು ಮಾತ್ರಾ ಇಲ್ಲಿ ಉದಹರಿಸುತ್ತಿದ್ದೇವೆ.

1. ಬಿಮ್ಲಾ ಚರಣ್ ಲಾ (Bimla Churun Law)
2. ಆಚಾರ್ಯ ಬಲದೇವ ಉಪಾಧ್ಯಾಯ "ಪುರಾಣ ವಿಮರ್ಶ"
3. ವಾಸುದೇವಶರಣ್ ಅಗ್ರವಾಲ್– ಮಾರ್ಕಂಡೇಯ ಪುರಾಣಮ್ ಏಕ್ ಸಾಂಸ್ಕೃತಿಕ್ ಅಧ್ಯಯನ್
4. ಕೋಟ ವೇಂಕಟಾಚಲಂ "ಅಗ್ನಿವಂಶಪು ರಾಜುಲು"
5. ಎಮ್.ಎಸ್.ದತ್– The Agni Puranam
6. ಡಾ॥ಸಾವಿತ್ರಿ ಸಕ್ಸೇನಾ— Geographical Survey of the Puranas
7. ಸಿ.ಆರ್. ಕೃಷ್ಣಮಾಚಾರ್ಯರು – The Cradle of Indian History

8. ಪಿ.ವಿ.ಕಾಣೇ –History of Dharmashastra

9. ಕಲ್ಯಾಣ್ ಪತ್ರಿಕೆ ಯವರ ಪುರಾಣ್ ಕಥಾಂಕ್

10. ಬಿ.ಬಿ.ಲಾಲ್ –Rama

11. ಎನ್.ಎಲ್.ದೇ (N.L.Dey)

12. ಬಿ.ಸಿ.ಲಾ (B.C.Law)

14. ಡಿ.ಸಿ.ಸರ್ಕಾರ್ (D.C. Sircar) Studies in the Geography of Ancient and Medival India

15. ಪುಷ್ಕರ್ ಭಟ್ನಾಗರ್ –Dating the era of Lord Rama

16. ಸರೋಜ್ ಬಾಲಾ, ಅಶೋಕ್ ಭಟ್ನಾಗರ್, ಕುಲ್ ಭೂಷಣ್ ಮಿಶ್ರ– वैदिकयुग ऐवं रामायण काल ऐतिहासिकथा

17. ಬಿ.ಬಿ.ಲಾಲ್ –Excavations at Sringaverapura

18. ಡಾ.ಎಚ್. ಸಿ. ರಾಯ್ ಚೌಧರಿ –Studies of Indian Antiquities

**ವಿದೇಶಿ ಚರಿತ್ರಕಾರರು**

1. ಕನ್ನಿಂಘಮ್ (Cunningham A-bhisla Topes, Geography of Ancient India)

2. Ferguson-History of Kashmir

3. Rapson E.J.- Ancient India

4. Vincent Smith - Early History of India

**ಕೃತಜ್ಞತೆಗಳು**

ಈ ವಿವರವಾದ ಪುಸ್ತಕವನ್ನು ರೂಪುಗೊಳ್ಳುತ್ತಿರುವುದಕ್ಕೆ ಸಹಕರಿಸಿದ ಪಂಡಿತಪರಿಷತ್ತಿನ ಸದಸ್ಯರು ಮತ್ತು ಶ್ರೀಜಮ್ಮುಲಮಡಕ ಲಕ್ಷ್ಮೀಶ್ರೀನಿವಾಸ್, (ಅಸಿಸ್ಟೆಂಟ್ V-C ಪೇಷಿ, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ) ಡಾ॥ ಎಂ.ದತ್ತಾತ್ರೇಯ ಶರ್ಮ, (ಅಧ್ಯಾಪಕರು, ಶಿಕ್ಷಾವಿಭಾಗ, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ), ಡಾ॥ ಟಿ.ಶ್ರೀ ತೇಜ (ಆಗಮ ಅಧ್ಯಾಪಕರು, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ) ಪ್ರಸಿದ್ಧ ಚಿತ್ರಕಾರರಾದ ಶ್ರೀಕೂಚಿಯವರಿಗೆ ನಮ್ಮ ಪ್ರತ್ಯೇಕವಾದ ಕೃತಜ್ಞತೆಗಳು. ಶ್ರೀಹನುಮ ಜನ್ಮಸ್ಥಳಾನ್ವೇಷಣೆ ಮಹಾಯಜ್ಞದಲ್ಲಿ ತಮ್ಮ ಪಾಲನ್ನು ಹಂಚಿಕೊಂಡಿರುವ ಪ್ರತಿವ್ಯಕ್ತಿಗೂ ಸರ್ವದೇವಾತ್ಮಕನಾದ ಶ್ರೀಆಂಜನೇಯಸ್ವಾಮಿಯ ಕೃಪಾಶೀರ್ವಾದಗಳು ತಪ್ಪದೇ ದೊರಕುತ್ತವೆಂದು ಆಶಿಸುತ್ತಿದ್ದೇವೆ,

**ತಿರುಪತಿ** — **ಆಚಾರ್ಯ ವಿರಿವೆಂಟಿ ಮುರಳೀಧರಶರ್ಮ**

20–12–2021 — **ಉಪ –ಕುಲಪತಿ , ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ**

ಕಪಿಲತೀರ್ಥದಲ್ಲಿ ಕೇಸರಿ ಅಂಜನಾ ಪುಣ್ಯಸ್ನಾನ ಮಾಡುತ್ತಿರುವುದು



# 1. ಪ್ರಾಚೀನ ಪುರಾಣಗಳು ಮತ್ತು ಅವುಗಳ ಪ್ರಾಮಾಣಿಕತೆ

ಆಚಾರ್ಯ ವಿರಿವೆಂಟಿ ಮುರಳೀಧರ ಶರ್ಮ

ಭಗವಂತನ ನಿಃಶ್ವಾಸರೂಪಗಳಾದ ವೇದಗಳು ಭಾರತೀಯ ಜೀವನಾಡಿಗೆ, ಧರ್ಮದ ಉದ್ಧಾರಕ್ಕೆ, ತತ್ತ್ವಾರ್ಥ ದರ್ಶನಕ್ಕೆ ತಾಯಿ ಬೇರುಗಳಂತಿವೆ. ಅವುಗಳು ಪರಮ ರಹಸ್ಯವೂ ಮತ್ತು ಜನಸಾಮಾನ್ಯರ ಗ್ರಹಿಕೆಗೆ ಕಬ್ಬಿಣದ ಕಡಲೆಯಾಗಿವೆ. ಅಂತಹಾ ಮಹಿಮಾನ್ವಿತವಾದ ವೇದಗಳು ಪುರಾಣಗಳಲ್ಲಿ ಪೋಷಿಸಲ್ಪಡುತ್ತಿವೆ.

ಅಂತಹಾ ವೇದಗಳ ಸಾರರೂಪವಾಗಿ ಅವತರಿಸಿರುವ ಗ್ರಂಥತ್ರಯವೇ ರಾಮಾಯಣ – ಮಹಾಭಾರತ ಮತ್ತು ಭಾಗವತ. ಇವು ಭಾರತೀಯ ಸನಾತನ ಸಂಸ್ಕೃತಿಗೆ ಆಧಾರವಾಗಿ ನಿಂತಿವೆ. ಅದಕ್ಕೇ **"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"** ಎಂದು ಹೇಳಿದ್ದಾರೆ. ಭಾರತೀಯರ ಜೀವನ ವಿಧಾನವನ್ನು ಸಂಸ್ಕೃತಿ, ಸ್ವಭಾವ ಸ್ವರೂಪಗಳನ್ನು ಸಮಗ್ರವಾಗಿ ಕಲಾತ್ಮಕವಾಗಿ ಚಿತ್ರಿಸುವ ನಮ್ಮ ಪುರಾಣಗಳು ಭಾರತೀಯ ಸಂಸ್ಕೃತಿಗೆ ವಿಶ್ವಕೋಶಗಳಂತೆ ಇವೆ.

ಇಂತಹಾ ಅದ್ಭುತವಾದ ಪುರಾಣಗಳನ್ನು ಇತರ ಶಾಸ್ತ್ರಗಳ ಸಹಾಯದಿಂದ ಅರ್ಥ ಮಾಡಿಕೊಳ್ಳುವ ವಿಜ್ಞಾನವನ್ನು ಪಡೆದುಕೊಂಡಿರುವ ಅಧಿಕಾರಿಯೇ ಪುರಾಣಗಳನ್ನು ಓದಿ ಇನ್ನೊಬ್ಬರಿಗೆ ತಿಳಿಹೇಳುವುದಕ್ಕೆ ಅರ್ಹನೆನಿಸಿಕೊಳ್ಳುತ್ತಾನೆ. ಅಷ್ಟೇ ಹೊರತು "ಜ್ಞಾನಲವದುರ್ವಿದಗ್ಧ"ನು ಪುರಾಣ ಪಠಣನಕ್ಕೂ ಅರ್ಹನಾಗುವುದಿಲ್ಲ. ವೇದಾರ್ಥವನ್ನು ತಿಳಿದುಕೊಳ್ಳಬೇಕೆಂದರೆ ಆರು ಶಾಸ್ತ್ರಗಳ ಬಗೆಗಿರುವ ಜ್ಞಾನ ಹೇಗೆ ಅವಗಾಹನೆ ಇರಬೇಕೋ ಹಾಗೆಯೇ ಪುರಾಣಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಜ್ಯೋತಿಷ್ಯಾದಿ ಶಾಸ್ತ್ರಗಳ ಜ್ಞಾನವೂ ಅತ್ಯಾವಶ್ಯಕವಾಗಿದೆ.

ಪುರಾಣಗಳ ಪ್ರಭಾವ ಭಾರತೀಯ ಜನಜೀವನದಲ್ಲಿ ಹೆಜ್ಜೆಹೆಜ್ಜೆಗೂ ಹಾಸುಹೊಕ್ಕಾಗಿದೆ. ಭಾರತೀಯ ಸನಾತನ ಧರ್ಮಸೌಧಕ್ಕೆ ವೇದವು ಬುನಾದಿಯಾದರೆ ನಮ್ಮ ಸ್ಮೃತಿ–ಪುರಾಣ–ಇತಿಹಾಸ ಎಲ್ಲವೂ ಮೂಲ ಸ್ತಂಭಗಳೆನಿಸಿವೆ. ಇವುಗಳು ಇಲ್ಲದಿದ್ದರೆ ಸನಾತನಧರ್ಮದ ಭವನ ಹೀಗೆ ಸುಸ್ಥಿರವಾಗಿ ನಿಲ್ಲುವುದಕ್ಕೆ ಸಾಧ್ಯವಿಲ್ಲ.

"ಶ್ರುತಿ–ಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಂ" ಎನ್ನುತ್ತಾ ನಾವು ಶ್ರೀ ಭಗವತ್ಪಾದ ಶಂಕರಾಚಾರ್ಯರನ್ನು ಪ್ರಾರ್ಥಿಸುತ್ತೇವೆ,

**ವೇದಗಳ ಉಪಬೃಂಹಕಗಳು ಪುರಾಣಗಳು**

> **ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್,**
> **ಭಿಭೇತ್ಯಲ್ಪಶ್ರುತಾ ತ್ವೇದೋ ಮಾಮಯಂ ಪ್ರಹರಿಷ್ಯತಿ.**[1]

ಇತಿಹಾಸ ಪುರಾಣಗಳ ಮೂಲಕ ವೇದಾರ್ಥ ಸ್ಪಷ್ಟವಾಗಿ ಸಂಪೂರ್ಣವಾಗಿ ತಿಳಿಯುತ್ತದೆ. **ಪುರಾಣಾದಿ ಜ್ಞಾನ ಇಲ್ಲದವನು ವೇದಕ್ಕೆ ಅರ್ಥವನ್ನು ಹೇಳಿದರೆ ತನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲವೆಂದು ವೇದಮಾತೆ ಹೆದರುತ್ತಾಳಂತೆ**. ಪುರಾಣವೆಂದರೆ "ಪ್ರಾಚೀನವಾದುದು" ಎಂದರ್ಥ. ಅದೇ ಅಲ್ಲದೇ ಹಳೆಯದಾದರೂ ಹೊಸದರಂತೆಯೇ ತೋರುವುದು" (ಪುರಾಽಪಿ ನವಂ ಪುರಾಣಂ) ಎಂಬ ಅರ್ಥವನ್ನೂ ಕೊಡುತ್ತದೆ,

1. ಪದ್ಮಪುರಾಣ–ಸೃಷ್ಟಿ ಖಂಡ–2–51

ಶತಪಥಬ್ರಾಹ್ಮಣ, ಗೋಪಥಬ್ರಾಹ್ಮಣ, ಬೃಹದಾರಣ್ಯಕೋಪನಿಷತ್ತು, ಇಂತಹಾ ವೇದ ಭಾಗಗಳು ಪುರಾಣಗಳ ಮಹತ್ವವನ್ನು ಕೊಂಡಾಡುತ್ತಿವೆ.

**ಸ ಯಥಾऽऽರ್ದ್ರೈಂಧಾಗ್ನೇಭ್ಯಾಹಿತಾತ್ ಪೃಥಗ್ಧೂಮಾ**
**ವಿನಿಶ್ಚಿರನ್ತ್ಯೇವಂ ವಾ ಅರೇऽ ಸ್ಯ ಮಹತೋ ಭೂತಸ್ಯ ನಿಃಶ್ವಸಿತ–**
**ಮೇತದ್ ಯದ್ ಋಗ್ವೇದೋ, ಯಜುರ್ವೇದಃ, ಸಾಮವೇದೋऽಥರ್ವಾಂಗಿರಸ**
**ಇತಿಹಾಸಃ, ಪುರಾಣಂ, ವಿದ್ಯಾ, ಉಪನಿಷದಃ, ಶ್ಲೋಕಾಃ**
**ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನ್ಯಸ್ಯೈವೈತಾನಿ ನಿಃಶ್ವಸಿತಾನಿ.**[1]

ತೊಯ್ದ ಇಂಧನದಿಂದ ಹುಟ್ಟಿದ ಹೊಗೆ ಯಾವ ರೀತಿ ಬೆಂಕಿಯೊಂದಿಗೆ ಹೊರಹೊಮ್ಮುತ್ತದೋ ಹಾಗೇ ಮಹಾ ಭೂತಾತ್ಮವಾದ ಪರಬ್ರಹ್ಮನ ಉಸಿರಿನಿಂದಲೇ ಎಲ್ಲವೂ ಜನಿಸಿವೆ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಅಥರ್ವಾಂಗಿರಸ, ಇತಿಹಾಸ, ಪುರಾಣ, ವಿದ್ಯ, ಉಪನಿಷತ್ತು, ಶ್ಲೋಕಗಳು, ಸೂತ್ರಗಳು, ಅನುವ್ಯಾಖ್ಯಾನಗಳು, ವ್ಯಾಖ್ಯಾನಗಳು– ಹೀಗೆ ಎಲ್ಲವೂ ಪರಮಾತ್ಮನ ಉಸಿರೇ ಆಗಿವೆ.

**ವೇದಶಾಸ್ತ್ರಗಳಿಗಿಂತಲೂ ಪ್ರಾಚೀನವಾದ ಪುರಾಣಗಳು**

ವಾಯುಪುರಾಣದಲ್ಲಿ ಪುರಾಣಗಳು ವೇದಶಾಸ್ತ್ರಗಳಿಗಿಂತಲೂ ಪ್ರಾಚೀನವಾದುವೆಂದು ಹೇಳಲ್ಪಟ್ಟಿದೆ,

**ಪ್ರಥಮಂ ಸರ್ವಶಾಸ್ತ್ರಾಣಾಂ ಪುರಾಣಂ ಬ್ರಹ್ಮಣಾ ಸ್ಮೃತಂ**
**ಅನಂತರಂ ಚ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿಸ್ಸೃತಾಃ.** [2]

(ಬ್ರಹ್ಮದೇವನು ಎಲ್ಲಾ ಶಾಸ್ತ್ರಗಳಿಗಿಂತಲೂ ಮೊದಲು ಪುರಾಣಗಳನ್ನು ಸ್ಮರಿಸಿದ. ಆನಂತರವೇ ಆತನ ವದನದಿಂದ ವೇದಗಳು ಉದ್ಭವಿಸಿವೆ. ಇಷ್ಟೆ ಅಲ್ಲ ವೇದಗಳಲ್ಲಿ ಕಾಣದೇ ಇರುವ ಅವೆಷ್ಟೋ ವಿಶೇಷಗಳು ಪುರಾಣಗಳಲ್ಲಿವೆ ಎಂದು ವಾಯುಪುರಾಣ ಸಾರುತ್ತಿದೆ.)

**ಯನ್ನ ದೃಷ್ಟಂ ಹಿ ವೇದೇಷು ತತ್ಸರ್ವಂ ಲಕ್ಷ್ಯತೇ ಸ್ಮೃತೌ**
**ಉಭಯೋರ್ಯನ್ನದೃಷ್ಟಂ ಹಿ ತತ್ಪುರಾಣೈಃ ಪ್ರಣೀಯತೇ**
**ಯೋ ವಿದ್ಯಾಚ್ಚತುರೌ ವೇದಾನ್ ಸಾಂಗೋಪನಿಷದೋ ದ್ವಿಜಃ**
**ನ ಚೇತ್ಪುರಾಣಂ ಸಂವಿದ್ಯಾನ್ನೈವ ಸ ಸ್ಯಾದ್ವಿಚಕ್ಷಣಃ** [3]

**ಪುರಾಣ ನಿರ್ವಚನ ಹೀಗಿದೆ–**

**ವಾಯುಪುರಾಣದಲ್ಲಿ**

**ಯಸ್ಮಾತ್ ಪುರಾಹ್ಯನತೀದಂ ಪುರಾಣಂ ತೇನ ತತ್ ಸ್ಮೃತಂ**
**ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ** [4]

ಪ್ರಾಚೀನಕಾಲದಿಂದಲೂ ಸಜೀವವಾಗಿದೆಯಾದ್ದರಿಂದ ಅದನ್ನು ಪುರಾಣವೆಂದು ಕರೆಯುತ್ತಾರೆ. ಇದರ ಅರ್ಥವನ್ನು ತಿಳಿದವನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ.

---

1 ಬೃಹದಾರಣ್ಯಕೋಪನಿಷದ್ –2–4–10 2 ವಾಯುಪುರಾಣ– 1–60.61 3 ವಾಯುಪುರಾಣ 1–199–1, ಪದ್ಮಪುರಾಣ ಸಂಪುಟ 2, 50–2, ಶಿವಪುರಾಣ–ಸಂ–1, 35 4 ವಾಯುಪುರಾಣ 1–1–55

**ಮಹಾಭಾರತದಲ್ಲಿ**

**"ಪುರಾಣಸಂಹಿತಾಃ ಪುಣ್ಯಾಃ ಕಥಾ ಧರ್ಮಾರ್ಥಸಂಶ್ರಿತಾಃ"** [1]
(ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ಕಥೆಗಳು ಧರ್ಮಾರ್ಥಪ್ರದವಾದುವು)

ರಾಮಾಯಣ – ಮಹಾಭಾರತದಲ್ಲಿ ಇತಿಹಾಸ ಮತ್ತು ವಿಷ್ಣು, ವಾಯು ಮೊದಲಾದ ಅಷ್ಟಾದಶ ಪುರಾಣಗಳು ಪಂಚಮವೇದಗಳೆಂದು ಪ್ರಸಿದ್ಧಿಯಾಗಿವೆ.

"**ಇತಿಹಾಸಪುರಾಣಂ ಚ ಪಂಚಮೋ ವೇದ ಉಚ್ಯತೇ**" [2]

"**ಇತಿಹಾಸಪುರಾಣಂ ಪಂಚಮಂ ವೇದಾನಾಂ ವೇದಃ**" [3]

**ಇನ್ನೊಂದು ನಿರ್ವಚನದ ಪ್ರಕಾರ – "**ಪುರಾ ಅಪಿ ನವಂ ಪುರಾಣಂ**" "**ಹಳೆಯದಾದರೂ ಹೊಸದಾಗಿರುವುದೆ ಪುರಾಣ**"**

**ಮಹತ್ವ – "**ವೇದಗಳೆಲ್ಲಾ ಪುರಾಣಗಳಲ್ಲೇ ಸದಾ ಪ್ರತಿಷ್ಠಿತವಾಗಿರುತ್ತವೆ**"** ಎಂದು ನಾರದಪುರಾಣದಲ್ಲಿ ಹೇಳಲಾಗಿದೆ. "**ವೇದಾಃ ಪ್ರತಿಷ್ಠಿತಾಸ್ಸರ್ವೇ ಪುರಾಣೇಷ್ವೇವ ಸರ್ವದಾ**"

ಜನ ಸಾಮಾನ್ಯರಿಗೆ ವೇದಗಳಿಗಿಂತಲೂ ಸುಲಭವಾದ ವಿದ್ಯೆ ಎಂದರೆ ಪುರಾಣವಿದ್ಯೆ. ಸ್ಕಂದಪುರಾಣದಲ್ಲಿ ಪುರಾಣವನ್ನು ವೇದಗಳ ಆತ್ಮವೆಂದು ವರ್ಣಿಸಿದ್ದಾರೆ.

**ಆತ್ಮಾ ಪುರಾಣಂ ವೇದಾನಾಂ ಪೃಥಗಂಗಾನಿ ತಾನಿ ಷಟ್,**
**ಯಚ್ಚ ದೃಷ್ಟಂ ಹಿ ವೇದೇಷು ತದ್ದೃಷ್ಟಂ ಸ್ಮೃತಿಭಿಃ ಕಿಲ,**[5]

**ವೇದವನ್ನಿಖಿಲಂ ಮನ್ಯೇ ಪುರಾಣಾರ್ಥಂ ದ್ವಿಜೋತ್ತಮಾಃ**
**ವೇದಾಃ ಪ್ರತಿಷ್ಠಿತಾಸ್ಸರ್ವೇ ಪುರಾಣೇ ನಾತ್ರ ಸಂಶಯಃ.** [6]

(ಎಲೈ ಬ್ರಾಹ್ಮಣೋತ್ತಮರೇ! ವೇದಾರ್ಥವೆಲ್ಲಾ ಪುರಾಣಗಳಲ್ಲೇ ಅಡಗಿದೆ. ವೇದಗಳೆಲ್ಲಾ ಪುರಾಣಗಳಲ್ಲಿ ಹುದುಗಿವೆ.)

ನಾರದೀಯಪುರಾಣ ಪ್ರಕಾರ, ಪುರಾಣಗಳು ಸರ್ವ ವೇದಾರ್ಥಸಾರಗಳು ಎಂದು ಹೇಳುತ್ತಿದೆ.

"**ಸರ್ವವೇದಾರ್ಥ ಸಾರಾಣಿ ಪುರಾಣಾನೀತಿ ಭೂಪತೇ**" [7]

**ವೇದಗಳು ಮತ್ತು ಪುರಾಣಗಳು**

ವೇದಪುರಾಣಗಳ ಪರಸ್ಪರ ಸಂಬಂಧ ಮತ್ತು ಅವುಗಳ ಪುರಾವೆಗೆ ಸಂಬಂಧಿಸಿದ ವಿವೇಚನೆ ಪುರಾಣಗ್ರಂಥಗಳಲ್ಲಿ ಮತ್ತು ದರ್ಶನಗ್ರಂಥಗಳಲ್ಲಿ ಸ್ಪಷ್ಟವಾಗಿ ಲಭ್ಯವಾಗಿವೆ. ಪುರಾಣಗಳಲ್ಲಿ ವೇದಾರ್ಥದ ಉಪಬೃಂಹಣವನ್ನು ಅನೇಕ ಕಡೆಗಳಲ್ಲಿ ಪ್ರತಿಪಾದಿಸಿದ್ದಾರೆ. ಈ ವಿಷಯವನ್ನು ಸಮರ್ಥಿಸುತ್ತಾ ಶ್ರೀ ಜೀವಗೋಸ್ವಾಮಿಯವರು "**ಪೂರಾಣಾತ್ಪುರಾಣಂ**" "**ವೇದಾರ್ಥಗಳನ್ನು ಪೂರಣೆ(ತುಂಬುವುದು)**"

---

1. ಮಹಾಭಾರತ, ಆದಿಪರ್ವ –1–16
2. ಶ್ರೀಮದ್ಭಾಗವತ – 1–4.20
3. ನ್ಯಾಯದರ್ಶನಂ, ವಾತ್ಸ್ಯಾಯನಭಾಷ್ಯಂ – 4–1–62,
4. ನಾರದಪುರಾಣಂ 24.18
5. ಸ್ಕಂದಪುರಾಣಂ,ಅವಂತಿಖಂಡಂ–1–23
6. ಸ್ಕಂದಪುರಾಣಂ, ಪ್ರಭಾಸಖಂಡಂ – 2–90
7. ನಾರದಿಯಪುರಾಣಂ– 1–9–97

**ಪುರಾಣ**" ಎಂದು ಹೊಸ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ವೇದ ಪುರಾಣಗಳ ಏಕಸಾರ ಮತ್ತು ಬಿಡಿಸಲಾರದ ಬಂಧವು ಇದರ ಮೂಲಕ ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ.

ವೇದಾರ್ಥೋಪಬೃಂಹಣಂ ಅಥವಾ ಪೂರ್ತಿ(ಪೂರ್ಣ) ಎಂದು ಹೇಳಿರುವ ವ್ಯುತ್ಪತ್ತಿಯಿಂದ ಲಭ್ಯವಾದ ಯುಕ್ತಿಯಿಂದ ಪುರಾಣಗಳಿಗೆ ವೇದತ್ವವು ಸಿದ್ಧಿಸುತ್ತದೆ.

"**ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್**". ಇತಿ

"**ಪೂರಾಣಾತ್ ಪುರಾಣಮಿತಿ ಚಾನ್ಯತ್ರ. ನ ಚಾವೇದೇನವೇದಸ್ಯ ಬೃಂಹಣಂ ಸಂಭವತಿ, ನ ಹಿ ಅಪೂರ್ಣಸ್ಯ ಕನಕವಲಯಸ್ಯ ತ್ರಪುಣಾ ಪೂರಣಂ ಯುಜ್ಯತೇ.**[1]

**ಪುರಾಣಗಳು ವೇದಗಳಿಗೆ ಸಮಾನವಾದುವು**

ಪುರಾಣಗಳು ವೇದಗಳಿಗೆ ಸಮಾನವಾದುದವೆಂದು ಹೇಳುವುದಕ್ಕೆ ಪ್ರಮಾಣಗಳಿವೆ. ಸ್ಕಂದಪುರಾಣದಲ್ಲಿನ ಪ್ರಭಾಸಖಂಡದಲ್ಲಿ ಈ ರೀತಿಇದೆ,

**ಯದಾ ತಪಶ್ಚಚಾರೋಗ್ರಮಮರಾಣಾಂ ಪಿತಾಮಹಃ**
**ಆವಿರ್ಭೂತಾಸ್ತತೋ ವೇದಾಃ ಸಷಡಂಗಪದಕ್ರಮಾಃ**
**ತತಃ ಪುರಾಣಮಖಿಲಂ ಸರ್ವಶಾಸ್ತ್ರಮಯಂ ಧ್ರುವಮ್,**
**ನಿತ್ಯಂಶಬ್ದಮಯಂಪುಣ್ಯಂಶತಕೋಟಿಪ್ರವಿಸ್ತರಮ್**
**ನಿರ್ಗತಂ ಬ್ರಹ್ಮಣೋ ವಕ್ತ್ರಾತ್** .................[2]

(ಸೃಷ್ಟ್ಯಾದಿಯಲ್ಲಿ ಬ್ರಹ್ಮನು ಘೋರವಾದ ತಪಸ್ಸನ್ನು ಆಚರಿಸಿದ. ತಪಃ ಫಲವಾಗಿ ಷಡಂಗಗಳು, ಪದ-ಕ್ರಮಾದಿಗಳಿಂದ ಕೂಡಿದ ವೇದಗಳು ಉದ್ಭವಿಸಿವೆ. ನಂತರ ಸರ್ವಶಾಸ್ತ್ರಮಯವಾದ, ನಿತ್ಯ ಶಬ್ದಮಯವಾದ, ಪುಣ್ಯದಾಯಕವಾದ, ಒಂದುಕೋಟಿ ಶ್ಲೋಕಗಳಿಂದ ಕೂಡಿದ ಪುರಾಣಗಳು ಉದ್ಭವಿಸಿದುವು. ಈ ಪುರಾಣಗಳು ಕೂಡಾ ವೇದಗಗಳಿಗೆ ಸಮಾನವಾಗಿ ಬ್ರಹ್ಮನ ಮುಖಗಳಿಂದ ಉದ್ಭವಿಸಿವೆ)

"ಋಗ್ಯಜುಸ್ಸಾಮಾಥರ್ವಣಗಳನ್ನು ಬ್ರಹ್ಮ ತನ್ನ ಚತುರ್ಮುಖಗಳಿಂದ ಕ್ರಮವಾಗಿ ಸೃಷ್ಟಿಸಿದ. ಪಂಚಮವೇದ ಸ್ವರೂಪವಾದ ಇತಿಹಾಸ ಪುರಾಣಗಳನ್ನು ತನ್ನ ನಾಲ್ಕು ಮುಖಗಳಿಂದ ಸೃಷ್ಟಿಸಿದ." ಎಂದು ಭಾಗವತ ಪುರಾಣ ತಿಳಿಸುತ್ತಿದೆ.

**ಇತಿಹಾಸಪುರಾಣಾನಿ ಪಂಚಮಂ ವೇದಮೀಶ್ವರಃ**
**ಸರ್ವೇಭ್ಯ ಏವ ವಕ್ತ್ರೇಭ್ಯಃ ಸಂಸೃಜೇ ಸರ್ವದರ್ಶನಃ** [3]

**ವೇದಗಳಲ್ಲಿ ದೊರೆಯದ ವಿಷಯಗಳೂ ಪುರಾಣಗಳಲ್ಲೂ ಕಾಣಸಿಗುತ್ತವೆ.**

ವೇದಗಳಲ್ಲಿ ಸ್ಪಷ್ಟವಾಗಿ ಲಭಿಸದ ವಿಷಯಗಳು ಪುರಾಣಗಳಿಂದಲೇ ತಿಳಿಯಬೇಕು. ವೇದಗಳಲ್ಲಿ ವಿವರಿಸದೇ ಇರುವಂತಹ ನಿಜ ಏಕಾದಶೀ ವ್ರತ ಪುರಾಣೋಕ್ತವಾದ್ದರಿಂದ ಅದು ಅನುಸರಣೀಯವಾದುದು.

---

1 ಭಾಗವತ ಸಂದರ್ಭಃ ಪುಟ 17

2 ಸ್ಕಂದಪುರಾಣಂ ಪ್ರಭಾಸ ಖಂಡಂ 2-3,4,5

3 ಭಾಗವತ- 3-12-3

ಹಾಗೆಯೇ ವೇದಗಳಲ್ಲಿ ಗ್ರಹಸಂಚಾರ, ಕಾಲಶುದ್ಧಿ, ತಿಥಿಗಳ ಕ್ಷಯ–ವೃದ್ಧಿ, ಪರ್ವದಿನಗಳು ಮೊದಲಾದುವುಗಳನ್ನು ನಿರ್ಧಾರಿಸಿಲ್ಲ. ಆದರೆ ಇತಿಹಾಸ–ಪುರಾಣಗಳಲ್ಲಿ ಇವನ್ನು ಮೊದಲೇ ನಿರ್ಧರಿಸಿದ್ದಾರೆ. ವೇದಗಳಲ್ಲಿ ಲಭ್ಯವಾದ ವಿಷಯಗಳು ಸ್ಮೃತಿಗಳಲ್ಲಿ ಲಭ್ಯವಾಗುತ್ತವೆ. ವೇದಸ್ಮೃತಿಗಳು ಎರಡರಲ್ಲೂ ಲಭ್ಯವಾಗದ ವಿಷಯಗಳ ವರ್ಣನೆ ಪುರಾಣಗಳಲ್ಲಿ ದೊರೆಯುತ್ತವೆ. ಪರಮೇಶ್ವರನು ಪಾರ್ವತಿಯೊಂದಿಗೆ **"**ವೇದಾರ್ಥಗಳಿಗಿಂತಲೂ ಪುರಾಣಾರ್ಥ ಹೆಚ್ಚು ವಿಸ್ತೃತವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಪುರಾಣಗಳಲ್ಲಿ ವೇದಗಳು ಅಚ್ಚುಕಟ್ಟಾಗಿ ಪ್ರತಿಷ್ಠಿತವಾಗಿವೆ**"** ಎಂದು ಹೇಳುತ್ತಾನೆ.

**ವೇದಾರ್ಥಾದಧಿಕಂ ಮನ್ಯೇ ಪುರಾಣಾರ್ಥಂ ವರಾನನೇ,**
**ವೇದಾಃ ಪ್ರತಿಷ್ಠಿತಾಃ ಸರ್ವೇ ಪುರಾಣೇಷ್ವೇವ ಸರ್ವದಾ,**
**ನ ವೇದೇ ಗ್ರಹಸಂಚಾರೋ ನ ಶುದ್ಧಿಃ ಕಾಲಬೋಧಿನೀ,**
**ತಿಥಿವೃದ್ಧಿಕ್ಷಯೋ ವಾಪಿ ಪರ್ವಗ್ರಹವಿನಿರ್ಣಯಃ**
**ಇತಿಹಾಸಪುರಾಣೈಸ್ತು ನಿಶ್ಚಯೋಽಯಂ ಕೃತಃ ಪುರಾ,**
**ಯನ್ನ ದೃಷ್ಟಂ ಹಿ ವೇದೇಷು ತತ್ಸರ್ವಂ ಲಕ್ಷ್ಯತೇಸ್ಮೃತೌ,**
**ಉಭಯೋರ್ಯನ್ನ ದೃಷ್ಟಂ ಹಿ ತತ್ಪುರಾಣೈಃ ಪ್ರಗೀಯತೇ** [1]

ಇನ್ನೊಂದು ಕಡೆ –

**ಶ್ರುತಿಸ್ಮೃತೀ ತು ನೇತ್ರೇ ದ್ವೇ ಪುರಾಣಂ ಹೃದಯಂ ಸ್ಮೃತಂ**
**ಶ್ರುತಿಸ್ಮೃತಿಭ್ಯಾಂ ಹೀನೋಽನ್ಧಃಕಾಣಃ ಸ್ಯಾದೇಕಯಾ ವಿನಾ**
**ಪುರಾಣಹೀನಾದ್ ಹೃಚ್ಛೂನ್ಯಾತ್ಕಾಣಾಂಧಾವಪಿ ತೌ ವರೌ,** [2]

ಶ್ರುತಿ, ಸ್ಮೃತಿ ಎರಡೂ ನೇತ್ರಗಳಾದರೆ ಪುರಾಣ ಒಂದು ಹೃದಯವಿದ್ದಂತೆ! ಒಂದು ಕಣ್ಣುಳ್ಳವನು ಒಕ್ಕಣ್ಣನೆನಿಸಿದರೆ ಎರಡೂ ಕಣ್ಣುಗಳಿಲ್ಲದವನನ್ನು ಅಂಧ ಎಂದು ಕರೆಯುತ್ತಾರೆ. ಆದರೆ ಪುರಾಣದ ಜ್ಞಾನವಿಲ್ಲದವನು ಹೃದಯವಿಲ್ಲದವನು ಎನಿಸಿಕೊಳ್ಳುತ್ತಾನೆ. ಹೃದಯವಿಲ್ಲದವನಿಗಿಂತಲೂ ಇವರಿಬ್ಬರೇ ಮೇಲು.

ಮಹಾಭಾರತ ಪುರಾಣವು ಯಾವರೀತಿಯಲ್ಲಿ ವೇದೋಪಬೃಂಹಕ ಎಂದು ಕರೆಯಲ್ಪಡುತ್ತದೆಯೋ ಒಂದು ಚಿಕ್ಕ ವಾಕ್ಯದಲ್ಲಿ ಬಹಳ ಸ್ಪಷ್ಟವಾಗಿ ಹೀಗೆ ಹೇಳುತ್ತಿದೆ.

**ಪುರಾಣ ರೂಪಿಯಾದ ಪೂರ್ಣಚಂದ್ರನು ಶ್ರುತಿಯ ಬೆಳದಿಂಗಳನ್ನು ಪ್ರಕಾಶಮಾಡುತ್ತಿದ್ದಾನೆ.**

**"ಪುರಾಣಪೂರ್ಣಚಂದ್ರೇಣ ಶ್ರುತಿಜ್ಯೋತ್ಸ್ನಾಃ ಪ್ರಕಾಶಿತಾಃ"** [3]

**ಪುರಾಣಗಳ ಪ್ರಮಾಣಿಕತೆ**

ವೇದಗಳು ಸ್ವತಃ ಪ್ರಮಾಣಗಳು. ಪುರಾಣಗಳ ಪ್ರಮಾಣದ ಬಗೆಗೆ ದರ್ಶನಕಾರರು ಪ್ರತ್ಯೇಕವಾಗಿ ವಿವೇಚಿಸಿದ್ದಾರೆ. ವಾತ್ಸ್ಯಾಯನನು ರಚಿಸಿದ ನ್ಯಾಯಭಾಷೆಯಲ್ಲಿ ಅವನ ಅಭಿಪ್ರಾಯ ಈ ರೀತಿ ಇದೆ

1 ನಾರದಪುರಾಣ ಉತ್ತರಾರ್ಧಃ ಅಧ್ಯಾ–24–8–18

2 ಸ್ಕಂದಪುರಾಣ–ಕಾಶೀಖಂಡ –4–1–2–97

3 ಮಹಾಭಾರತ 1–1–86

**"ಯ ಏವ ಮಂತ್ರಬ್ರಾಹ್ಮಣಸ್ಯ ದ್ರಷ್ಟಾರಃ ಪ್ರವಕ್ತಾರಶ್ಚತೇ ಖಲ್ವಿತಿಹಾಸಪುರಾಣಸ್ಯ ಧರ್ಮಶಾಸ್ತ್ರಸ್ಯ ಚೇತಿ"**[1]

(ಮಂತ್ರ, ಬ್ರಾಹ್ಮಣದ್ರಷ್ಟರು ಮತ್ತು ಪ್ರವಕ್ತರಾದ ಋಷಿಮುನಿಗಳು ಇತಿಹಾಸ ಪುರಾಣಗಳಿಗೆ ಕೂಡಾ ವ್ಯಾಖ್ಯಾತರಾಗಿ ಮತ್ತು ದ್ರಷ್ಟರಾಗಿದ್ದಾರೆ)

**ಭಗವತ್ಪಾದಶಂಕರರ ಅಭಿಪ್ರಾಯ**

**"ಸಮೂಲಮಿತಿಹಾಸಪುರಾಣಮ್"**[2]– ಇತಿಹಾಸ ಪುರಾಣಗಳು ಸಮೂಲಗಳೇ ಹೊರತು ನಿರ್ಮೂಲಗಳಲ್ಲ. ಅಂದರೆ ಆಧಾರಗಳಿಂದಕೂಡಿವೆ. ಶಂಕರಾಚಾರ್ಯರು ಪುರಾಣದಲ್ಲಿನ ಶ್ಲೋಕಗಳನ್ನು **"ಸ್ಮೃತಿಶ್ಚ ಭವತಿ"** ಎಂದು ಹೇಳಿ ಉದ್ಧಾರಮಾಡಿದ್ದಾರೆ. ಅಂದರೆ ಆಚಾರ್ಯರು ಪುರಾಣಗಳ ಪ್ರಾಮಾಣಿಕತೆಯನ್ನು ಸ್ಮೃತಿಕೋಟಿಯಲ್ಲಿ ಸೇರಿಸಿ ಪ್ರಮಾಣೀಕರಿಸಿದ್ದಾರೆ.

**ಭಾರತದೇಶ -ಪುರಾಣಗಳ ತವರೂರು**

ಈ ವಿಷಯದಲ್ಲಿ ಎಲ್ಲಾ ಪುರಾಣಗಳಲ್ಲೂ ಕೂಡಾ ಒಂದೇ ಅಭಿಪ್ರಾಯ ಕಂಡುಬರುತ್ತದೆ. ಅದೇನೆಂದರೆ ಭರತನ ಹೆಸರಿನಿಂದಾಗಿ **"ಭಾರತ"** ಎಂಬ ಹೆಸರು ಪ್ರಸಿದ್ಧಿಯಾಗಿದೆ. ಆದರೆ ಆ ಭರತ ಯಾರು? ಪ್ರಾಚೀನ ವಿವರಗಳನ್ನು ಅನುಸರಿಸಿ ಸ್ವಾಯಂಭುವ ಮನುವಿನ ಪುತ್ರ ಪ್ರಿಯವ್ರತ. ಆತನ ಪುತ್ರ ನಾಭಿ. ಆ ನಾಭಿಯಮಗ ಋಷಭ. ಅವನಿಗೆ ಜನ್ಮಿಸಿದ ನೂರುಜನರಲ್ಲಿ ಜ್ಯೇಷ್ಠನಾದ ಭರತನು ರಾಜ ಸಿಂಹಾಸನವನ್ನು ಅಧಿರೋಹಿಸಿದ. ಪ್ರಾಚೀನಕಾಲದಿಂದಲೂ ಅಜನಾಭ ಎಂದು ಕರೆಯಲ್ಪಡುತ್ತಿದ್ದ ಭಾರತವರ್ಷ, ಭರತನ ಕಾಲದಿಂದಲೂ ಭಾರತ ಎಂದು ಕರೆಯಲ್ಪಟ್ಟಿತು ಎಂದು ಪುರಾಣಗಳು ಸಾರಿ ಹೇಳುತ್ತಿವೆ. ದುಷ್ಯಂತನ ಪುತ್ರನಾದ ಭರತನ ಹೆಸರಿನಿಂದ ಭಾರತಕ್ಕೆ ಈ ಹೆಸರು ಬಂದಿದೆ ಎನ್ನುವುದನ್ನು ಎಲ್ಲೂ ಪ್ರಾಮಾಣೀಕರಿಸಿಲ್ಲ.

(ಕ) **ಋಷಭಾತ್ ಭರತೋ ಜಜ್ಞೇ ಯೋ ವೀರಃ ಪುತ್ರಶತಾಗ್ರಜಃ**
**ಸೋऽಭಿಷಿಚ್ಯಾಥ ಭರತಂ ಪುತ್ರಂ ಪ್ರಾವ್ರಾಜ್ಯಮಾಸ್ಥಿತಃ**
**ಹಿಮಾಹ್ವಂ ದಕ್ಷಿಣಂ ವರ್ಷಂ ಭರತಾಯ ನ್ಯವೇದಯೇತ್**
**ತಸ್ಮಾತ್ತದ್ ಭಾರತಂ ವರ್ಷಂ ತಸ್ಯ ನಾಮ್ನಾ ವಿದುರ್ಬುಧಾಃ.** [3]

(ಋಷಭನ ನೂರುಜನ ಮಕ್ಕಳಲ್ಲಿ ಅಗ್ರಜನಾಗಿ ಭರತನು ಹುಟ್ಟಿದ. ಆ ಋಷಭ ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿ ಪರಿವ್ರಾಜಕನಾದ. ಅವನು ಮಂಜಿನಿಂದ ಕೂಡಿದ ದಕ್ಷಿಣಭಾಗವನ್ನು ಪಾಲಿಸಬೇಕೆಂದು ಭರತನಿಗೆ ಆದೇಶಿಸಿದ. ಆದ್ದರಿಂದ ಭರತನ ಹೆಸರಿನಿಂದಾಗಿ ಭಾರತವರ್ಷವೆಂದು ಪ್ರಸಿದ್ಧವಾಯಿತೆಂದು ವಿದ್ವಾಂಸರು ತಿಳಿದುಕೊಂಡರು)

ಖ) **ಭರತಸ್ತು ಮಹಾಭಾಗವತೋ ಯದಾ**
**ಭಗವತಾವನಿತಲ ಪರಿಪಾಲನಾಯ ಸಂಚಿಂತಿತಸ್ತದನು ಶಾಸನಪರಃ**
**ಪಂಚಜನೀಂ ವಿಶ್ವರೂಪಪದುಹಿತರಮುಪಯೇಮೇ ..........**
**ಅಜನಾಭಂ ನಾಮೈತದ್ ವರ್ಷಂ ಭಾರತಮಿತಿ ಯತ ಆರಭ್ಯ ವ್ಯಪದಿಶಂತಿ.** [4]

---

1. ಪಾತ್ರಚಯಾನ್ತಾನುಪಪತ್ತೇಶ್ಚ ಫಲಾಭಾವಃ– ನ್ಯಾಯಸೂತ್ರಂ (4–1–62) ಮೇಲೆ ವಾತ್ಸ್ಯಾಯನಭಾಷ್ಯಂ
2. ಋಷೀಣಾಮಪಿ ಮಂತ್ರಬ್ರಾಹ್ಮಣದರ್ಶಿನಾಂಸಾಮರ್ಥ್ಯಂನಾಸ್ಮದೀಯೇನಸಾಮರ್ಥ್ಯೇನೋಪಮಾತುಂಯುಕ್ತಮ್, ತಸ್ಮಾತ್ಸಮೂಲಮಿತಿಹಾಸ
3. ಮಾರ್ಕಂಡೇಯಪುರಾಣಂ–53–39,40 ವಾಯುಪುರಾಣಂ–33–51.52 4. ಭಾಗವತ 5–7–1–3

(ಮಹಾಭಾಗವತೋತ್ತಮನಾದ ಭರತನು ಭಗವಂತನಮೂಲಕ ಭೂಮಂಡಲದ ಪಾಲನೆಗಾಗಿ ನಿಯಮಿಸಲ್ಪಟ್ಟು ಭಗವದಾಜ್ಞೆಯನ್ನು ಶಿರಸಾವಹಿಸಿ ವಿಶ್ವರೂಪನ ಪುತ್ರಿಯಾದ ಪಂಚಜನಿಯನ್ನು ವಿವಾಹಮಾಡಿಕೊಂಡ. ಅಂದಿನಿಂದ ಅಜನಾಭ ಎಂಬ ಹೆಸರನ್ನು ಹೊಂದಿದ್ದ ಈ ಭಾರತವರ್ಷ, ಭಾರತವೆಂದು ಕೀರ್ತಿಸಲ್ಪಡುತ್ತಿದೆ)

**ಪುರಾಣದಲ್ಲಿ ಅಡಗಿರುವ ವೈಜ್ಞಾನಿಕ ವಿಷಯಗಳು**

**ವಾಸ್ತುಶಾಸ್ತ್ರ** :

ಮತ್ಸ್ಯಪುರಾಣದಲ್ಲಿ (ಅ–252–253) ವಿಷ್ಣುಧರ್ಮೋತ್ತರಪುರಾಣದಲ್ಲಿ (ದ್ವಿತೀಯಭಾಗ–ಅ 29 – ತೃತೀಯಭಾಗ ಅ. 94–95 ಅಗ್ನಿಪುರಾಣಂ (ಅ. 93, 104–106) ಇವುಗಳಲ್ಲಿ ವಾಸ್ತುಶಾಸ್ತ್ರದ ವಿಶೇಷತೆಗಳನ್ನು ವರ್ಣಿಸಲಾಗಿದೆ.

**ಶಿಲ್ಪಶಾಸ್ತ್ರ** :

ಪುರಾಣದಲ್ಲಿ ಅಷ್ಟಮ ವಸುಪುತ್ರನಾದ ವಿಶ್ವಕರ್ಮ ಸಮಸ್ತ ಶಿಲ್ಪಶಾಸ್ತ್ರಗಳಿಗೆ ಮತ್ತು ಕಲೆಗಳಿಗೆ ಆಚಾರ್ಯನೆಂದೆನಿಸಿಕೊಂಡ.

**ವಿಶ್ವಕರ್ಮಾ ಪ್ರಭಾಸಸ್ಯ ಪುತ್ರಃ ಶಿಲ್ಪೀ ಪ್ರಜಾಪತಿಃ**
**ಪ್ರಾಸಾದಭವನೋದ್ಯಾನ ಪ್ರತಿಮಾಭೂಷಣಾದಿಷು,**
**ತಡಾಗಾರಾಮಕೂಪೇಷು ಸ್ಮೃತಃ ಸೋಽಮರವರ್ಧಕಃ** [1]

ಮತ್ಸ್ಯ, ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಶಿಲ್ಪಶಾಸ್ತ್ರವನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

**ಚಿತ್ರಶಾಸ್ತ್ರ** :

ಪುರಾಣಗಳಲ್ಲಿ ಚಿತ್ರಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳು ವಿಸ್ತೃತವಾಗಿ ವರ್ಣಿಸಲ್ಪಟ್ಟಿದೆ. ವಿಷ್ಣುಧರ್ಮೋತ್ತರಪುರಾಣದಲ್ಲಿ ತೃತೀಯಖಂಡದಲ್ಲಿ, ಪ್ರಥಮ ದ್ವಿತೀಯಾಧ್ಯಾಯದಲ್ಲಿ ಹಾಗೇ ಅಧ್ಯಾಯ 35 ರಿಂದ 46ರವರೆಗೂ ದೇವತೆಗಳು, ಋಷಿಗಳು. ಗಂಧರ್ವರು, ಪಶು–ಪಕ್ಷ್ಯಾದಿ–ಉದ್ಯಾನಾದಿ ಪ್ರಾಕೃತಿಕ ದೃಶ್ಯಗಳು– ಅವುಗಳ ಆಕಾರ ಪ್ರಾಕಾರಗಳು ಅವುಗಳನ್ನು ನಿರ್ಮಿಸಿರುವ ರೀತಿ ವಿವಿಧ ಬಣ್ಣಗಳ ಉಪಯೋಗದ ರೀತಿ, ಮೊದಲಾದವುಗಳನ್ನು ವರ್ಣಿಸಲಾಗಿದೆ.

**ಸ್ಥಾಪತ್ಯಶಾಸ್ತ್ರ (ಪ್ರತಿಮಾಶಾಸ್ತ್ರ)**

ಉಪಾಸ್ಯದೇವತೆಗಳು ಅಥವಾ ಅರ್ಚನೆಮಾಡುವಂತಹಾ ದೇವತೆಗಳ ವಿಗ್ರಹಗಳ ಲಕ್ಷಣಗಳು, ಆಕಾರಗಳು, ಅಳತೆಗಳು ಮತ್ತು ಅವುಗಳನ್ನು ತಯಾರಿಸುವ ಪದ್ಧತಿ ಮೊದಲಾದುವುಗಳನ್ನು ಈ ಶಾಸ್ತ್ರದಲ್ಲಿ ವರ್ಣಿಸಲಾಗಿದೆ. ವಿಷ್ಣು ಧರ್ಮೋತ್ತರಪುರಾಣದಲ್ಲಿ (3–ಅ, 44–85, ಅ, 96) ಅಗ್ನಿಪುರಾಣದಲ್ಲಿ (ಅ– 44–55) ಮತ್ಸ್ಯಪುರಾಣದಲ್ಲಿ (ಅ 285–263) ಸ್ಥಾಪತ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮುಖ್ಯವಾದ ಅಂಶಗಳನ್ನು ವಿವರಿಸಲಾಗಿದೆ.

**ಪುರಾಣದಲ್ಲಿ ಭಾರತವರ್ಷ (ಭರತಭೂಮಿ)ದ ಭೌಗೋಳಿಕ ವಿಶೇಷಗಳು**

ಭಾರತವರ್ಷವನ್ನು ಒಂಭತ್ತು ವಿಭಾಗಗಳನ್ನಾಗಿ ಪುರಾಣಗಳಲ್ಲಿ ವಿವರಿಸಲಾಗಿದೆ. ಈ ವಿಭಾಗಗಳು ಇಂದಿಗೂ ದ್ವೀಪಗಳ ಹೆಸರಿನಲ್ಲಿ ಕರೆಯಲ್ಪಡುತ್ತಿವೆ.

---

1. ಮತ್ಸ್ಯಪುರಾಣ– 5–27–28, ವಿಷ್ಣುಪುರಾಣ –1–15–118–25, ಬ್ರಹ್ಮಪುರಾಣ 1–153–159, ವಾಯುಪುರಾಣ–2–5–28–30.

**ಭಾರತಸ್ಯಾಸ್ಯ ವರ್ಷಸ್ಯ ನವ ಭೇದಾನ್ನಿಬೋಧ ಮೇ,**
**ಸಮುದ್ರಾಸ್ತರಿತಾ ಜ್ಞೇಯಾಸ್ತೇ ತ್ವಗಮ್ಯಾಃ ಪರಸ್ಪರಮ್,**
**ಇಂದ್ರದ್ವೀಪಃ ಕಶೇರೂಮಾನ ತಾಮ್ರಪರ್ಣೀ ಗಭಸ್ತಿಮಾನ್,**
**ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವೋ ವಾರುಣಸ್ತಥಾ,**
**ಅಯಂತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ,**
**ಯೋಜನಾನಾಂ ಸಹಸ್ರಂ ವೈ ದ್ವೀಪೋಽಯಂ ದಕ್ಷಿಣೋತ್ತರಾತ್** [1]

ಈ ದ್ವೀಪಗಳ ಆಧುನಿಕ ಹೆಸರುಗಳು ಈ ರೀತಿಯಾಗಿವೆ.

1. ಇಂದ್ರದ್ವೀಪ –ಅಂಡಮಾನ್ ದ್ವೀಪ,
2. ತಾಮ್ರಪರ್ಣೀ ದ್ವೀಪ– ಶ್ರೀಲಂಕ,
3. ನಾಗದ್ವೀಪ–ನಿಕೋಬಾರ್ (ನಿಕಾರ್ಗ್ವಾ),
4. ವಾರುಣದ್ವೀಪ–ಬೋನಿಯೋ

**ಅಯಂ ತು– ಭಾರತವರ್ಷಂ, ನವಮಸ್ತೇಷಾಂ** –ಈ ದ್ವೀಪಗಳಲ್ಲಿ ಒಂಭತ್ತನೆಯದ್ವೀಪ ಭಾರತದೇಶ.

ಭಾರತದೇಶ ಕುಮಾರದ್ವೀಪ ಎಂಬ ಹೆಸರಿನಿಂದ ರಾಜಶೇಖರನು ರಚಿಸಿದ ಕಾವ್ಯಮೀಮಾಂಸೆಯಲ್ಲಿನ ಹದಿನೇಳನೆಯ ಅಧ್ಯಾಯದಲ್ಲಿ, ವಾಯುಪುರಾಣದಲ್ಲಿ 13–59ರ ಅಧ್ಯಾಯದಲ್ಲಿ, ಸ್ಕಂದಪುರಾಣದ ಕುಮಾರಿ ಖಂಡದಲ್ಲಿ ಹೆಸರಿಸಲ್ಪಟ್ಟಿದೆ.

**ಪುರಾಣದಲ್ಲಿ ಹೆಸರಿಸಿರುವ ಭಾರತದೇಶದಲ್ಲಿನ ಪರ್ವತಗಳು**

ಪುರಾಣದಲ್ಲಿ ಏಳುಪರ್ವತಗಳನ್ನು ಅನೇಕ ಕಡೆಗಳಲ್ಲಿ ಹೆಸರಿಸಿರುವುದನ್ನು ನೋಡಬಹುದು. ಅವುಗಳು

1. ಮಹೇಂದ್ರಪರ್ವತ, 2. ಮಲಯಪರ್ವತ, 3. ಸಹ್ಯಪರ್ವತ, 4. ಶುಕ್ತಿಮಾನ್‌ಪರ್ವತ, 5. ಋಕ್ಷಪರ್ವತ, 6.ವಿಂಧ್ಯಪರ್ವತ, 7. ಪಾರಿಯಾತ್ರಪರ್ವತ. ಈ ಪರ್ವತಗಳೆಲ್ಲಾ ಇಂದಿಗೂ ಬೇರೆ ಬೇರೆ ಹೆಸರುಗಳಿಂದ ಗುರುತಿಸುತಿದ್ದಾರೆ. *

**ಸಪ್ತ ಚಾಸ್ಮಿನ್ಮಹಾವರ್ಷೇ ವಿಶ್ರುತಾಃ ಕುಲಪರ್ವತಾಃ**
**ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷವಾನಪಿ.**
**ವಿಂಧ್ಯಶ್ಚ ಪಾರಿಯಾತ್ರಶ್ಚ ಇತ್ಯೇತೇ ಕುಲಪರ್ವತಾಃ** [2]
**ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷಪರ್ವತಃ,**
**ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತವಾತ್ರ ಕುಲಾಚಲಃ**[3]
**ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷಮಾನ್ ಗಿರಿಃ,**
**ವಿಂಧ್ಯಶ್ಚ ಪಾರಿಯಾತ್ರಶ್ಚ ಗಿರಯಃ ಶಾಂತಿದಾಸ್ತು ತೇ.**[4]

---

1. ಮಾರ್ಕಂಡೇಯ ಪುರಾಣ 54–5–7 ಮತ್ಸ್ಯಪುರಾಣ 114–7–9, ವಾಯುಪುರಾಣ– 1–45–78–80, ಅಗ್ನಿಪುರಾಣ–219–54–56

* i. ಮಾರ್ಕಂಡೇಯಪುರಾಣ –ಏಕ್ ಸಾಂಸ್ಕೃತಿಕ್ ಅಧ್ಯಯನ್– ವಾಸುದೇವಶರಣ್ ಅಗ್ರವಾಲ್, ಪುಟ– 143–146

ii. ಪುರಾಣ ವಿಮರ್ಶ್–ಅಚಾರ್ಯ ಬಲದೇವ ಉಪಾಧ್ಯಾಯ ಪುಟ–341–342,

2. ಮತ್ಸ್ಯಪುರಾಣ– 114–17,18, 3. ಮಾರ್ಕಂಡೇಯ ಪುರಾಣ–54–10,11, 4. ಅಗ್ನಿಪುರಾಣ– 219,57.58

**ಮಹೇಂದ್ರಪರ್ವತ** : ಒಡಿಸಾರಾಜ್ಯದಿಂದ ಪ್ರಾರಂಭವಾಗುವ ಪೂರ್ವೀಘಾಟೀ ಪರ್ವತಶ್ರೇಣಿಯ ಪ್ರಾಚೀನ ಹೆಸರು. ಇಂದಿಗೂ ಗಂಜಾಂನಲ್ಲಿ ಈ ಪರ್ವತವು "ಮಹೇಂದ್ರಮಲೈ"ವೆಂದೇ ಬಳಕೆಯಲ್ಲಿದೆ. ಪರಶುರಾಮ ಈ ಪರ್ವತದ ಮೇಲೆ ತಪಸ್ಸುಮಾಡಿದರೆಂದು ಪ್ರತೀತಿ ಇದೆ.

**ಮಲಯಪರ್ವತ** : ದಕ್ಷಿಣಭಾರತದಲ್ಲಿ ಪರ್ವತಗಳಿಗೆ ಪ್ರಾಚೀನ ಹೆಸರು "ಮಲಯಂ, ಅನ್ನಾಮಲೈ, ಏಲಾಮಲೈ ಮುಂತಾದವುಗಳನ್ನು ಉದಾಹರಣೆಗಾಗಿ ನೋಡಬಹುದು. ಇಲ್ಲಿ ಪೂರ್ವ–ಪಶ್ಚಿಮ ಕಣಿವೆಗಳು ಸೇರಿ ಒಂದು ವಕ್ರ ರೇಖೆಯ ಆಕಾರವನ್ನು ಹೊಂದುತ್ತವೆ.

**ಸಹ್ಯಾದ್ರಿಪರ್ವತ** : ಉತ್ತರದಿಕ್ಕಿನಿಂದ ದಕ್ಷಿಣದವರೆಗೂ ವ್ಯಾಪಿಸಿರುವ ಪಶ್ಚಿಮಕಣಿವೆಗಳವರೆಗೂ ವ್ಯಾಪಿಸಿರುವ ಪ್ರಸಿದ್ಧವಾದ ಪರ್ವತದ ಶ್ರೇಣಿ. ಇಂದಿಗೂ ಇದು ಮಹಾರಾಷ್ಟ್ರ–ಕರ್ನಾಟಕ ರಾಜ್ಯಗಳಲ್ಲಿ ಇದೇ ಹೆಸರಿನಿಂದ ಕರೆಯಲ್ಪಡುತ್ತಿದೆ.

**ಶುಕ್ತಿಮಾನ್ ಪರ್ವತ–** ಸಹ್ಯಾದ್ರಿಯ ಉತ್ತರಭಾಗಕ್ಕೆ ಸ್ವಲ್ಪ ಮುಂದೆ ಪೂರ್ವದಿಕ್ಕಿಗೆ ವ್ಯಾಪಿಸಿರುವ ಪರ್ವತ. ಈ ಪರ್ವತದ ಭಾಗದಲ್ಲಿ ಭಾನದೇಶದ ಚಿಕ್ಕಪುಟ್ಟಪರ್ವತಗಳು, ಅಜಂತಾಪ್ರದೇಶ, ಹೈದರಾಬಾದಿನಲ್ಲಿನ ಗೋಲ್ಕಂಡಗುಡ್ಡಗಳು ಸೇರಿವೆ. ಇಂದಿನ ಭಾನ್ ದೇಶದ ಪ್ರಾಚೀನನಾಮ ಋಷಿಕ. ಶುಕ್ತಿಮಾನ್ ಪರ್ವತದಿಂದ ಪ್ರವಹಿಸುವ ನದಿಗಳಲ್ಲಿ "ಋಷಿಕಾನದಿ"ಮುಖ್ಯವಾಗಿದೆ.

**ಋಕ್ಷಪರ್ವತ** : ಈ ಪರ್ವತ ಸಹ್ಯಾದ್ರಿಗೆ ಉತ್ತರಭಾಗದಲ್ಲಿ ತಪತಿಗೆ ದಕ್ಷಿಣಮೂಲೆಯಲ್ಲಿರುವ ಸಾತ್ಪುರಕ್ಕೆ ಸೇರಿದಂತಿರುವ ಮಹಾದೇವ ಪರ್ವತಶ್ರೇಣಿವರೆಗೂ ವ್ಯಾಪಿಸಿದ ಪ್ರಸಿದ್ಧ ಪರ್ವತ. ಮಧ್ಯಪ್ರಾಂತದಲ್ಲಿರುವ ಈ ಶ್ರೇಣೀಯಿಂದ ಪ್ರವಹಿಸುವ ನದಿಗಳಲ್ಲಿ ತಪತಿ, ವೇನಗಂಗಾ ಈ ವಿಷಯವನ್ನು ಪ್ರಮಾಣೀಕರಿಸಿವೆ. ಈ ಪರ್ವತದಿಂದಲೇ ಒರಿಸ್ಸಾದಲ್ಲಿನ ಬ್ರಾಹ್ಮಣಿ, ವೈತರಣಿನದಿಗಳು ಉಗಮವಾಗುತ್ತಿದ್ದುವು. (ಈ ಪರ್ವತ ಛೋಟಾನಾಗಪುರ್‌ನ ಪರ್ವತ ಶ್ರೇಣಿಗಳವರೆಗೂ ವ್ಯಾಪಿಸಿತ್ತು)

**ವಿಂಧ್ಯಪರ್ವತ** : ಋಕ್ಷಪರ್ವತದ ಪೂರ್ವಭಾಗದಿಂದ ಉತ್ತರಭಾಗಾಭಿಮುಖವಾಗಿ ವಿಂಧ್ಯಾಚಲ ತಿರುವುಪಡೆದುಕೊಂಡಿದೆ. ಇದು ನರ್ಮದಾನದಿಯ ಉತ್ತರಭಾಗದಲ್ಲಿ ಇರುವ ಪರ್ವತಶ್ರೇಣಿ. ಈ ವಿಂಧ್ಯಾಚಲದಿಂದಲೇ ಶೋಣ, ನರ್ಮದಾ, ಮಹಾನದಿ, ಮಧ್ಯಭಾರತದಲ್ಲಿನ ತಮಸ, ಘಸಾನ್ (ದಶಾರ್ಣ) ಮೊದಲಾದ ನದಿಗಳು ಉಗಮಿಸುತ್ತವೆ.

**ಪಾರಿಯಾತ್ರ ಪರ್ವತ :** ಆರಾವಳಿಪರ್ವತ. ಭೋಪಾಲ್ನಿಂದ ಪಶ್ಚಿಮ ವಿಂಧ್ಯಾಚಲದ ಪಶ್ಚಿಮಭಾಗದಿಂದ ಮೊದಲುಗೊಂಡು ರಾಜಸ್ಥಾನದಲ್ಲಿನ ಆರಾವಳಿಪರ್ವತದ ವರೆಗೂ ವ್ಯಾಪಿಸಿರುವ ಪರ್ವತಶ್ರೇಣಿ ಪಾರಿಯತ್ರ ಎಂದು ಕರೆಯಲ್ಪಡುತ್ತಿತ್ತು. ಈ ಪರ್ವತದಿಂದ ಉದ್ಭವಿಸುವ ನದಿಗಳ ಮೂಲಕ ಇದು ಪಾರಿಯಾತ್ರ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆಂದು ಪ್ರಸಿದ್ಧ ಇತಿಹಾಸಕಾರರಾದ ಶ್ರೀಪಾರ್ಜೀಟರ್ ಅವರ ಅಭಿಪ್ರಾಯ. ಈ ಪರ್ವತದಿಂದಲೇ ಪರ್ಣಾಸ (ಪನಾಸನದಿ), ಚರ್ಮಣ್ವತಿ(ಚಂಬಲ್), ಮಹೀ, ಪಾರ್ವತೀ, ವೇತ್ರಾವತೀ ನದಿಗಳು ಇಂದಿಗೂ ಅವುಗಳ ಪ್ರಾಚೀನ ಹೆಸರುಗಳಿಂದ ಪ್ರಸಿದ್ಧಿಯಾಗಿವೆ.

**"ಉತ್ತರೋ ವಿಂಧ್ಯಾತ್ ಪಾರಿಯಾತ್ರಃ"** ವಿಂಧ್ಯಪರ್ವತಕ್ಕೆ ಉತ್ತರದಿಕ್ಕಿನಲ್ಲಿ ಪಾರಿಯಾತ್ರ ಇದೆ ಎಂದು ಶಾಕಟಾಯನ ವ್ಯಾಕರಣ ಸೂತ್ರದಲ್ಲಿ ಉದಹರಿಸಲಾಗಿದೆ (2–2–75)

**ಮತ್ತೆ ಕೆಲವು ಪರ್ವತಗಳು**

**ಕೋಲಾಹಲ ಪರ್ವತ** : ಮಹಾಭಾರತದಲ್ಲಿನ ಆದಿಪರ್ವದಲ್ಲಿ ಈ ಪರ್ವತ ಶುಕ್ತಿಮತೀನದಿ ಸಮೀಪದಲ್ಲಿದೆ. ಪ್ರಸಿದ್ಧ ಚರಿತ್ರಕಾರರಾದ ನಂದಲಾಲ್ ಡೇ ಈ ಪರ್ವತ ಬುಂದೇಲ್ ಖಂಡನಲ್ಲಿನ ಭಾಂಡೇರ್ ಹತ್ತಿರವಿರುವ ಪರ್ವತವೆಂದು, ಇದರಿಂದಲೆ "ಶುಕ್ತಿಮತೀ" ಅಥವಾ ಕೇನ ಎನ್ನುವ ನದಿ ಉದ್ಭವಿಸುತ್ತದೆಂದು ವಿವರಿಸಿದ್ದಾರೆ.

**ಮಂದರಪರ್ವತ** : ಇದು ಭಾಗಲ್ಪುರ್‌ನಲ್ಲಿನ ಮಂದಾರಗಿರಿ. ಹಿಮಾಲಯಪರ್ವತದಲ್ಲಿನ ಮಂದರ ಪರ್ವತವಲ್ಲ.

**ದರ್ದುರ** : ಇದರ ಈಗಿನ ಹೆಸರು ನೀಲಗಿರಿ. ಇಂದಿಗೂ ಪ್ರಸಿದ್ಧವಾದ ಉದಕಮಂಡಲದಲ್ಲಿದೆ. ಮಲಯ-ದರ್ದುರ ಪರ್ವತಗಳು ಎದಿರು ಬದಿರಾಗಿವೆ. ಕಾಳಿದಾಸಮಹಾಕವಿ ಈ ಪರ್ವತಗಳನ್ನು ದಕ್ಷಿಣದಿಕ್ಕಿನ ಸ್ತನಗಳೆಂದುವರ್ಣಿಸಿದ್ದಾನೆ.

**ರೈವತ(ರೈತಕ)** : ಇಂದಿನ ಗುಜರಾತ್‌ನಲ್ಲಿನ ದ್ವಾರಕ ಸಮೀಪದಲ್ಲಿರುವ (ಹಾಲಾರ್ ಹತ್ತಿರದಲ್ಲಿ) ವರದಾ ಪರ್ವತವೆಂದು ಪಾರ್ಜೀಟರ್ ಅವರ ಅಭಿಪ್ರಾಯವಾಗಿದೆ.

ಮೇಲೆ ತಿಳಿಸಿರುವ ಪರ್ವತಗಳೇ ಅಲ್ಲದೇ ಇನ್ನೂ ಅನೇಕ ಪ್ರಸಿದ್ಧವಾದಪರ್ವತಗಳು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿವೆ. **"ಶತಶೋऽನ್ಯೇ ಚ ಪರ್ವತಾಃ"** ಅವನ್ನು ಇಲ್ಲಿ ವರ್ಣಿಸುವುದು ಅಸಾಧ್ಯವಾದುದು.

**ಪುರಾಣಗಳಲ್ಲಿ ಹೆಸರಿಸಿರುವ ತೀರ್ಥಗಳು**

**'ತೀರ್ಥ' ಹೆಸರಿನ ನಿರ್ವಚನ** : **"**ತರತಿ ಪಾಪಾದಿಕಂ ಯಸ್ಮಾತ್**"** – ಯಾವುದನ್ನು ಸೇವಿಸುವುದರಿಂದ ಮಾನವನು ಪಾಪಗಳಿಂದ ತಾರಣವನ್ನು ಹೊಂದುತ್ತಾನೋ ಅದನ್ನು ತೀರ್ಥ ಎಂದು ಕರೆಯುತ್ತಾರೆ.

ಧರ್ಮಸಿದ್ಧಿಗಾಗಿ ನಮ್ಮ ಪೂರ್ವಿಕರು ಸೇವಿಸಿದ ಪುಣ್ಯಪ್ರದಾಯಕವಾದ ಪ್ರದೇಶವನ್ನು ಸತ್ಪುರುಷರು ತೀರ್ಥವೆಂದು ವಿವರಿಸಿದ್ದಾರೆ.

**ಯದ್ಧಿ ಪೂರ್ವತಮ್ಯೈಃ ನಧ್ಭಿಃ ಸೇವಿತಂ ಧರ್ಮಸಿದ್ಧಯೇ,**
**ತದ್ಧಿ ಪುಣ್ಯತಮಂ ಲೋಕೇ ಸನ್ತಸ್ತೀರ್ಥಂ ಪ್ರಚಕ್ಷತೇ.**[1]

**ತೀರ್ಥಗಳ ಸಂಖ್ಯೆ** : "ಮೂರೂವರೆಕೋಟಿ ತೀರ್ಥಗಳು ದೇವ-ಭೂ-ಅಂತರಿಕ್ಷದಲ್ಲಿವೆ ಎಂದು ವಾಯುದೇವುನು ತಿಳಿಸಿದ್ದಾನೆ.

**ತಿಸ್ರಃ ಕೋಟ್ಯೋऽರ್ಧಕೋಟೀ ಚ ತೀರ್ಥಾನಾಂ ವಾಯುರಬ್ರವೀತ್,**
**ದಿವಿ ಭುವ್ಯಂತರಿಕ್ಷೇ ಚ ತಾನಿ ತೇ ಸಂತಿ ಜಾಹ್ನವಿ !.**[2]

ಭಾರತೀಯ ಸನಾತನಸಂಸ್ಕೃತಿ ಸಾವಿರಾರುವರ್ಷಗಳಿಂದ ಎಲ್ಲೆಡೆ ಪಸರಿಸುವುದಕ್ಕೆ ಪ್ರಧಾನವಾದ ಕಾರಣವೆಂದರೆ ತೀರ್ಥರೂಪವಾದನದಿಗಳು, ಪುಣ್ಯಕ್ಷೇತ್ರಗಳು, ದೇವಾಲಯಗಳೇ ಆಗಿವೆ. ಇವುಗಳ ಮಹಾತ್ಮೆ, ಇವುಗಳನ್ನು ದರ್ಶಿಸುವುದರಿಂದ, ಆಯಾ ತೀರ್ಥಕ್ಷೇತ್ರಗಳಲ್ಲಿ ಧಾರ್ಮಿಕಕಾರ್ಯಕ್ರಮಗಳನ್ನು ಆಚರಿಸುವುದರಿಂದ ದೊರೆಯುವ ಪುಣ್ಯ, ಆಯಾಕಾರ್ಯಕ್ರಮಗಳ ನಿರ್ವಹಣಾ ಪದ್ಧತಿ ಮೊದಲಾದ ವಿಷಯಗಳ ಬಗೆಗೆ ವಿವರವಾಗಿ ಪುರಾಣಗಳಲ್ಲಿ ತಿಳಿಸಲ್ಪಟ್ಟಿವೆ. ಆದ್ದರಿಂದ ತೀರ್ಥಗಳು, ಅವುಗಳ ಭೌಗೋಳಿಕ ಚಾರಿತ್ರಿಕ ಆಧಾರಗಳನ್ನು, ಮಹಾತ್ಮೆಗಳನ್ನು ಆಳವಾಗಿ ತಿಳಿದುಕೊಳ್ಳಬೇಕೆಂದರೆ ಪುರಾಣಗಳೇ ಆಧಾರವಾಗಿವೆ.

ಇಲ್ಲಿ ಕೆಲವು ಪ್ರಸಿದ್ಧವಾದ, ಪುರಾಣಗಳಲ್ಲಿ ವಿವರಿಸಿರುವ, ಇಂದಿಗೂ ಅದೇ ರೀತಿಯಲ್ಲಿ ಸೇವಿಸಲ್ಪಡುತ್ತಿರುವ ಪ್ರಮುಖವಾದ ಕೆಲವು ತೀರ್ಥಗಳ ಬಗೆಗೆ ಮಾತ್ರ ವಿವರಿಸಲಾಗಿದೆ. ಪುರಾಣಗಳಲ್ಲಿ ಕೆಲವು ಸಾವಿರವರ್ಷಗಳ ಹಿಂದೆ ವರ್ಣಿಸಲಾಗಿರುವ ಈ ತೀರ್ಥಸ್ಥಳಗಳ ಬಗೆಗೆ, ಭೌಗೋಳಿಕ ಆಧಾರಗಳನ್ನು ತಿಳಿಸುವುದರ ಮೂಲಕ ಪುರಾಣಗಳ ದೃಢೀಕರಣವನ್ನು ನಿರೂಪಿಸುವುದೇ ಈ ವಿವರಣೆಯ ಮುಖ್ಯ ಉದ್ದೇಶವಾಗಿದೆ.

---

1 ಮಾರ್ಕಂಡೇಯಪುರಾಣ– 57–15

2 ಭವಿಷ್ಯಪುರಾಣ– ಉತ್ತರಪರ್ವ–123–6

**ಗಂಗಾನದಿ** : ನಮಗೆಲ್ಲಾ ತಿಳಿದಿರುವಂತೇ ಇದು ಅತ್ಯಂತ ಪವಿತ್ರವಾದ ನದಿಯೇ ಅಲ್ಲದೇ ದೇವನದಿ ಎಂದೂ ಕರೆಯಲ್ಪಡುತ್ತಿದ್ದು, ಕನಖಲ, ಹರಿದ್ವಾರ, ಹೃಷೀಕೇಶ, ಪ್ರಯಾಗ, ಕಾಶಿಯಂತಹಪುಣ್ಯಕ್ಷೇತ್ರಗಳು ಈ ನದಿಯತೀರದಲ್ಲಿ ಇರುವುದು , ಈ ನದಿಯ ಪ್ರಾಶಸ್ತ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

**ಗಂಗಾನದಿಯು ಉಗಮವಾದ ರೀತಿ :**

ಮಹಾಭಾರತದ (ಅನುಶಾಸನಪರ್ವ 26, 26–103) ನಾರದಪುರಾಣ, (ಉತ್ತರಾರ್ಧ –ಅ.38–45, 51, 1–48, ಪದ್ಮಪುರಾಣ (ಅ.60–1–127)ಅಗ್ನಿಪುರಾಣ(ಅ.100) ಮತ್ಸ್ಯಪುರಾಣ(180–185) ಪದ್ಮಪುರಾಣ(ಆದಿಕಾಂಡ ಅ–33–37),ಗಳು ಗಂಗಾನದಿಯ ಪ್ರಾಮುಖ್ಯತೆಯ ಬಗೆಗೆ ಕೊಂಡಾಡಿವೆ.

ಟೈಲರ್ ಎಂಬ ವಿದೇಶಿ ವಿದ್ವಾಂಸರು **"**ಪ್ರಿಮಿಟಿವ್ ಕಲ್ಚರ್**"**ಎಂಬ ತನ್ನ ಗ್ರಂಥದಲ್ಲಿ :

**"**ನಾವು ಅಚೇತನವೆಂದು ಭಾವಿಸುವ ನದಿಗಳು, ಪರ್ವತಗಳು, ವೃಕ್ಷಗಳು, ಅಸ್ತ್ರಗಳು, ಆಯುಧಗಳು ಭಾರತದಲ್ಲಿ ಚೈತನ್ಯವಂತವೆಂದು ಸಾರುತ್ತಾ ಅವುಗಳನ್ನು ಪೂಜಿಸುವುದು, ಅವುಗಳನ್ನು ಸ್ತುತಿಸುವುದು, ಅವುಗಳೊಂದಿಗೆ ಸಂಭಾಷಿಸುವುದು, ಅವುಗಳ ಬಗೆಗೆ ದುರ್ವ್ಯವಹಾರಗಳನ್ನು ಮಾಡಿದರೆ ಅದಕ್ಕೆ ಸರಿಯಾದ ಶಿಕ್ಷೆ, ಪ್ರಾಯಶ್ಚಿತ್ತಗಳನ್ನು ವಿಧಿಸುವುದು ಆಶ್ಚರ್ಯಕರವಾಗಿದೆ**"** ಎಂದು ಬರೆದಿದ್ದಾರೆ.

ಮಹಾಭಾರತದಲ್ಲಿನ ವನಪರ್ವದಲ್ಲಿ ವಿವರಿಸಿರುವ ಗಂಗಾಮಹಾತ್ಮೆ :

**ಕುರುಕ್ಷೇತ್ರಸಮಾ ಗಂಗಾ ಯತ್ರ–ತತ್ರಾವಗಾಹಿತಾ,**
**ವಿಶೇಷೋ ವೈ ಕನಖಲೇ ಪ್ರಯಾಗೇ ಪರಮಂ ಮಹತ್,**
**ಯದ್ಯಕಾರ್ಯಶತಂ ಕೃತ್ವಾ ಕೃತಂ ಗಂಗಾಭಿಷೇಚನಮ್,**
**ಸರ್ವಂ ತತ್ತಸ್ಯ ಗಂಗಾಂಭೋ ದಹತ್ಯಗ್ನಿರಿವೇಂಧನಮ್.** [1]

ಪುರಾಣಗಳೂ ತೀರ್ಥಗಳ ಮಹಿಮೆಯನ್ನು ಹಾಗೇ ಅವುಗಳ ಚರಿತ್ರೆಗಳನ್ನೂ ತಿಳಿಸುತ್ತಿವೆ. ಆಯಾ ತೀರ್ಥಗಳ ಮಹಿಮೆಗಳೊಂದಿಗೆ ಅವು ನೆಲೆಗೊಂಡಿರುವ ಭೌಗೋಳಿಕ ಸ್ಥಿತಿಗತಿಗಳನ್ನೂ ಪುರಾಣಗಳು ಅತ್ಯಂತ ಚೊಕ್ಕವಾಗಿ ವಿವರಿಸಿವೆ. ಅಂತಹಾ ತೀರ್ಥಗಳಲ್ಲಿ ಮುಖ್ಯವಾದ ತೀರ್ಥಗಳೆಂದು, ಏಳು ಮೋಕ್ಷಕಾರಣವಾದ ಕ್ಷೇತ್ರಗಳ ಬಗೆಗೆ ಈ ರೀತಿ ಹೇಳಲಾಗಿದೆ.

**ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ,**
**ಪುರೀ ದ್ವಾರವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ.** [2]

ಎಂದು ಗರುಡಪುರಾಣವು ಮೋಕ್ಷ ಕಾರಣವಾದ ಕ್ಷೇತ್ರಗಳ ಬಗೆಗೆ ವಿವರಿಸುತ್ತಿದೆ. ಇಂತಹಾ ತೀರ್ಥಗಳು ಇಂದೂ ನೆಲೆಸಿದ್ದು ಪುರಾಣಗಳ ಪ್ರಾಮಾಣಿಕತೆಯನ್ನು ನಿರೂಪಿಸುತ್ತಿವೆ. ಇವುಗಳಲ್ಲಿ ಕೆಲವು ತೀರ್ಥಗಳ ಬಗೆಗೆ ಪುರಾಣದಲ್ಲಿನ ವಿವರಗಳು ಇಂದಿಗೂ ಭೌಗೋಳಿಕ ವಿವರಗಳಿಗೆ ಸರಿಯಾದ ಪ್ರಮಾಣಗಳಾಗಿವೆ.

**ಕಾಶೀ :** ಗಂಗಾ ತೀರದಲ್ಲಿ ವಿಶ್ವನಾಥಸ್ವಾಮಿಯ ದಿವ್ಯ ಸನ್ನಿಧಾನದಲ್ಲಿ ರಾರಾಜಿಸುತ್ತಿರುವ ಕಾಶೀ ನಗರ ವಾರಣಾಸಿ ಎಂಬ ಹೆಸರಿನಿಂದಲೂ ಪ್ರಸಿದ್ಧಿಯಾಗಿದೆ. ಇಲ್ಲಿಯ ಪವಿತ್ರವಾದ ದೇವಾಲಯ ಕಾಶೀ ವಿಶ್ವೇಶ್ವರಾಲಯ ಎಂದೇ ಪುರಾಣಗಳಲ್ಲಿ ಹೇಳಲ್ಪಟ್ಟಿದೆ.

---

1. ಮಹಾಭಾರತ ವನಪರ್ವ–85–88,89
2. ಗರುಡಪುರಾಣ–2–38–5, ನಾರದಪುರಾಣ–1–27–35

**ತ್ರಿಭಿರ್ಮುಹೂರ್ತೈಃ ಸಂಪ್ರಾಪ್ತಾ ಕಾಶೀಂ ವಿಶ್ವೇಶಮಂದಿರಂ.** [1]

ಈ ಕ್ಷೇತ್ರವು ಅವಿಮುಕ್ತ ಕ್ಷೇತ್ರವೆಂದು ಹೆಸರುವಾಸಿಯಾಗಿದೆ.

**ಮುನೇ! ಪ್ರಲಯಕಾಲೇಽಪಿ ನ ತತ್ಕ್ಷೇತ್ರಂ ಕದಾಚನ,**
**ವಿಮುಕ್ತಂ ಹಿ ಶಿವಾಭ್ಯಾಂ ಯದವಿಮುಕ್ತಂ ತತೋ ವಿದುಃ.** [2]

ಗಂಗಾನದಿ ಕಾಶಿಯಲ್ಲಿ ಉತ್ತರವಾಹಿನಿಯಾಗಿ ಪ್ರವಹಿಸುತ್ತಿದೆ ಯೆಂದು ಪುರಾಣಗಳು ವಿವರಿಸುತ್ತಿವೆ.

**ತಸ್ಮಾಚ್ಛತಗುಣಾ ಗಂಗಾ ಕಾಶ್ಯಾಮುತ್ತರವಾಹಿನೀ** [3]

ಕಾಶೀಕ್ಷೇತ್ರ ಐದು ಕ್ರೋಶಗಳ(ಒಂದು ಕ್ರೋಶ ಎಂದರೆ ಎರಡೂ ಕಾಲುಮೈಲಿಗಳು, ಐದು ಕ್ರೋಶಗಳು ಎಂದರೆ ಸುಮಾರು ಹನ್ನೊಂದೂ ಕಾಲು ಮೈಲಿಗಳಷ್ಟು) ವೈಶಾಲ್ಯವನ್ನು ಹೊಂದಿದೆ ಎಂಬ ವಿಷಯ ಶಿವಪುರಾಣದ ಮೂಲಕ ತಿಳಿದುಬರುತ್ತಿದೆ. ಆದ್ದರಿಂದ ಕಾಶೀಕ್ಷೇತ್ರವನ್ನು ಪಂಚಕ್ರೋಶೀ ಎಂದೂ ಕರೆಯುತ್ತಾರೆ.

**ಪಂಚಕ್ರೋಶೀತಿ ವಿಖ್ಯಾತಾ ಕಾಶೀ ಸರ್ವಾತಿವಲ್ಲಭಾ,**
**ವ್ಯಾಪ್ತಂ ಚ ಸಕಲಂ ಹ್ಯೇತತ್ತಜ್ಜಲಂ ವಿಶ್ವತೋ ಗತಂ.** [4]

ಸ್ಕಾಂದಪುರಾಣದಲ್ಲಿನ ಕಾಶಿಖಂಡ ಎಂಬ ಅಧ್ಯಾಯದಲ್ಲಿ ಕಾಶೀಕ್ಷೇತ್ರದ ಮಹಿಮೆಯನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. ಕಾಶೀಕ್ಷೇತ್ರವನ್ನು ಆನಂದವನ, ರುದ್ರಾವಾಸ, ಮಹಾಸ್ಮಶಾನ, ಗೋರೀಕಾನನ, ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ ಎಂದು ಈ ಪುರಾಣ ವಿವರಿಸುತ್ತಿದೆ. ಕಾಶೀಕ್ಷೇತ್ರದ ಮಹಾತ್ಮೆಯನ್ನು ಅನೇಕ ಪುರಾಣಗಳು ವಿವರಿಸುತ್ತಿವೆ.

**ಅಯೋಧ್ಯೆ :** ಅಯೋಧ್ಯಾನಗರದ ವಿಸ್ತೀರ್ಣವನ್ನು ಸ್ಕಂದಪುರಾಣದಲ್ಲಿ ಈ ರೀತಿವಿವರಿಸಲಾಗಿದೆ.

**ಸಹಸ್ರಧಾರಾಮಾರಭ್ಯ ಯೋಜನಂ ಪೂರ್ವತೋ ದಿಶಿ,**
**ಪ್ರತೀಚೀದಿಶಿ ತಥೈವ ಯೋಜನಂ ಸಮನ್ತೋವಧಿಃ,**

**ದಕ್ಷಿಣೋತ್ತರಭಾಗೇ ತು ಸರಯೂತಮಸಾವಧಿಃ,**
**ಏತತ್ ಕ್ಷೇತ್ರಸ್ಯ ಸಂಸ್ಥಾನಂ ಹರೇರಂತರ್ಗೃಹಂ ಸ್ಥಿತಂ.**

**ಮತ್ಸ್ಯಾಕೃತಿರಿಯಂ ವಿಪ್ರ! ಪುರೀ ವಿಷ್ಣೋರುದೀರಿತಾ,**
**ಪಶ್ಚಿಮೇ ತಸ್ಯ ಮೂರ್ಧಾ ತು ಗೋಪ್ರತಾರಾಸಿತಾ ದ್ವಿಜ.**

**ಪೂರ್ವತಃ ಪೃಷ್ಠಭಾಗೇ ಹಿ ದಕ್ಷಿಣೋತ್ತರಮಧ್ಯಮಃ,**
**ತಸ್ಯಾಂ ಪುರ್ಯಾಂ ಮಹಾಭಾಗ ನಾಮ್ನಾ ವಿಷ್ಣುರ್ಹರಿಃ ಸ್ವಯಂ.**[5]

ಸ್ಕಂದಪುರಾಣದೊಂದಿಗೇ ಶ್ರೀಮದ್ರಾಮಾಯಣದಲ್ಲಿ ಕೂಡಾ ಈ ನಗರ ಸರಯೂ ನದೀತೀರದಲ್ಲಿ ಇದೆ ಎಂದು ವಿವರಿಸಲ್ಪಟ್ಟಿದೆ. ಅಯೋಧ್ಯಾನಗರದ ಸಂಪೂರ್ಣವಾದ ವಿವರಣೆ ವಾಲ್ಮೀಕಿರಾಮಾಯಣದಲ್ಲಿ ಹಾಗೆಯೇ ವಿಷ್ಣುಧರ್ಮೋತ್ತರ[1] ಪುರಾಣದಲ್ಲಿ ಲಭ್ಯವಿದೆ. ಸ್ಕಾಂದಪುರಾಣದ ಹತ್ತನೆಯ ಅಧ್ಯಾಯದಲ್ಲಿ ಅಯೋಧ್ಯಾಮಾಹಾತ್ಮೆಯನ್ನು ವಿವರಿಸಲಾಗಿದೆ.

---

1 ನಾರದ ಪುರಾಣ–2–29–1 2. ಸ್ಕಾಂದಪುರಾಣ–4–26–27 3 ಪದ್ಮಪುರಾಣ–5–127–48

4. ಶಿವಪುರಾಣ–ಕೋಟಿರುದ್ರಸಂಹಿತ–42–4, ಸ್ಕಾಂದಪುರಾಣ–4–26–80 5.ಸ್ಕಂದಪುರಾಣ–ವೈಷ್ಣವಖಂಡ–8–1–64–67

**ದ್ವಾರಕೆ :** ದ್ವಾರಕಾನಗರ ಶ್ರೀಕೃಷ್ಣನ ಮೂಲಕ ಸಮುದ್ರತೀರದಲ್ಲಿ ಸಂಸ್ಥಾಪಿಸಲ್ಪಟ್ಟಿದೆ. ಈ ನಗರ ಗೋಮತೀ ನದಿತೀರದಲ್ಲಿ ಇದೆ ಎಂದು ಸ್ಕಾಂದಪುರಾಣದಲ್ಲಿನ ದ್ವಾರಕಾಮಹಾತ್ಮೆಯಲ್ಲಿ ತಿಳಿಸಲಾಗಿದೆ.

**ದ್ವಾರವತ್ಯಾಂ ಚ ತೇ ದೃಷ್ಟ್ವಾ ಗೋಮತೀಂ ಸಾಗರಂಗಮಾಂ.** [2]

ದ್ವಾರಕಾನಗರದ ವಿವರಣೆಯನ್ನು ನಾವು ವರಾಹಪುರಾಣದಲ್ಲೂ ನೋಡಬಹುದು.

**ದ್ವಾರಕೇತಿ ಚ ವಿಖ್ಯಾತಾ ಪುರೀ ತತ್ರ ಸ್ಥಿತಾಽಭವೇತ್,**
**ಯಾ ಚ ದೇವಪುರೀರಮ್ಯಾವಿಶ್ವಕರ್ಮವಿನಿರ್ಮಿತಾ,**
**ಪಂಚಯೋಜನವಿಸ್ತಾರಾ ದಶಯೋಜನಮಾಯತಾ,**
**ವಸಾಮ್ಯತ್ರ ವರಾರೋಹೇ! ಶತಪಂಚಸಮಾಸ್ತಥಾ.**[3]

ಈ ವರಾಹಪುರಾಣದಲ್ಲಿ ದ್ವಾರಕಾನಗರ ಐದು ಯೋಜನೆಗಳ ವೈಶಾಲ್ಯತೆಯನ್ನು, ಮತ್ತು ಹತ್ತು ಯೋಜನೆಗಳಷ್ಟು ಆಯತವನ್ನು ಹೊಂದಿದೆ ಎಂದು ವಿವರಿಸಲಾಗಿದೆ. ಕೆಲವು ಪುರಾಣಗಳಲ್ಲಿ ದ್ವಾರಕಾನಗರದ ವಿಸ್ತೀರ್ಣ ಶತಯೋಜನೆ ಎಂದು ಹೇಳಲಾಗಿದೆ. ಈ ನಗರದ ನಾಲ್ಕು ದಿಕ್ಕುಗಳಲ್ಲಿ ದ್ವಾರಗಳಿವೆಯಾದ್ದರಿಂದ ಇದಕ್ಕೆ ದ್ವಾರಕಾ ಎಂಬ ಹೆಸರು ಬಂದಿದೆ ಎಂದು ಸ್ಕಾಂದಪುರಾಣ ತಿಳಿಸುತ್ತಿದೆ.

**ಚತುರ್ಣಾಮಪಿ ವರ್ಗಾಣಾಂ ಯತ್ರ ದ್ವಾರಾಣಿ ಸರ್ವತಃ,**
**ಅತೋ ದ್ವಾರಾವತೀತ್ಯುಕ್ತಾ ವಿದ್ವದ್ಭಿಃ ತತ್ತ್ವವೇದಿಭಿಃ.** [4]

## ಪುರಾಣಗಳಲ್ಲಿ ರಾಜರ ಚರಿತ್ರೆ

### ಅಗ್ನಿವಂಶದ ರಾಜರು

ಭಾರತದೇಶದಲ್ಲಿ ಪುರಾಣೇತಿಹಾಸಗಳು ಸಂಪೂರ್ಣ ಭಾರತದ ಚರಿತ್ರೆಗಳನ್ನು ಸಾರುತ್ತಿವೆ. ಅದರಲ್ಲಿ ಸೃಷ್ಟ್ಯಾದಿಯಿಂದಲೂ ಬಂದಿರುವ ಆರು ಮನುಗಳ ಕಾಲದಲ್ಲಿ ನಡೆದ ಮುಖ್ಯವಾದ ವಿಷಯಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇಂದಿನ ಏಳನೆಯ ಮನುವಿನ ಕಾಲದಲ್ಲಿ ನಡೆದ ಇಪ್ಪತ್ತೆಂಟು ಮಹಾಯುಗಗಳಲ್ಲಿ ಬಂದ ಪ್ರಮುಖವಾದ ರಾಜವಂಶಗಳನ್ನು ವಿವರಿಸುತ್ತಾ ಅತಿ ಮುಖ್ಯವಾದ ವಿಷಯಗಳನ್ನು ತಿಳಿಸುತ್ತಾ ಆ ಕಾಲದ ಪ್ರಜೆಗಳ ಆಚಾರ, ವ್ಯವಹಾರಗಳು, ನಡವಳಿಕೆ, ರಾಜರುಗಳ ರಾಜ್ಯಪಾಲನೆ, ಪ್ರಜಾನೀತಿ ನಿಯಮಗಳು, ನಾಗರಿಕತೆಯನ್ನು ಪುರಾಣಗಳಲ್ಲಿ ಸಂಕ್ಷಿಪ್ತವಾಗಿ ವರ್ಣಿಸಲ್ಪಟ್ಟಿವೆ. ಕೇವಲ ರಾಜರ ಚರಿತ್ರೆಗಳೊಂದಿಗೆ ಮುಗಿಯದೇ ಅವರ ಕಾಲದಲ್ಲಿನ ಪ್ರಜೆಗಳ ಚರಿತ್ರೆಯನ್ನೂ ಪುರಾಣಗಳಲ್ಲಿ ತಿಳಿಸಲಾಗಿದೆ.

### ಕಲಿಯುಗದ ರಾಜವಂಶಗಳು

ಮಗಧ ಸಾಮ್ರಾಜ್ಯದಲ್ಲಿ ರಾಜ್ಯವಾಳಿದ ರಾಜವಂಶಗಳ ಚರಿತ್ರೆ ಭಾರತ ಯುದ್ಧಾನಂತರ ಅಂದರೇ ಕಲಿಪೂರ್ವ 36ರಿಂದ (ಕ್ರಿ.ಪೂ 3138) ಪುರಾಣಗಳಲ್ಲಿ ವಿವರಿಸಲ್ಪಟ್ಟಿದೆ. ಭಾರತಯುದ್ಧದ ನಂತರ ರಾಜ್ಯವಾಳಿದ ರಾಜರು ಅವರ ಕಾಲಗಳು.

---

1. ವಾಲ್ಮೀಕಿರಾಮಾಯಣ–1–5–6, ವಿಷ್ಣುಧರ್ಮೋತ್ತರ ಪುರಾಣ–1–13
2. ಸ್ಕಂದಪುರಾಣ–ಪ್ರಭಾಸ ಖಂಡ, ದ್ವಾರಕಾಮಹಾತ್ಮೆ–14–45
3. ವರಾಹಪುರಾಣ – 149, 7–8
4. ಸ್ಕಂದಪುರಾಣ–ಕಾಶೀಖಂಡ–7–104.

ಕಲಿಪೂರ್ವ 36 ಸಂ॥ (ಕ್ರಿ. ಪೂ. 3138 ಸಂ.॥) ರಿಂದ

ಕಲಿಪೂರ್ವ 970 ಸಂ॥ (ಕ್ರಿ. ಪೂ. 2182 ಸಂ॥) ವರೆಗು

**1. ಬಾರ್ಹದ್ರಥವಂಶ**

**ದ್ವಾವಿಂಶತಿರ್ನೃಪಾ ಹ್ಯೇತೇ ಭವಿತಾರೋ ಬೃಹದ್ರಥಾಃ,**
**ಪೂರ್ಣಂ ವರ್ಷಸಹಸ್ರಂ ವೈತೇಷಾಂರಾಜ್ಯಂ ಭವಿಷ್ಯತಿ.** [1]

**ಬೃಹದ್ರಥನ ವಂಶ :** ಅವರ ವಂಶದಲ್ಲಿ 22 ಜನ ರಾಜರು, ಸಾವಿರ ವರ್ಷಗಳಕಾಲ ರಾಜ್ಯವನ್ನು ಪರಿಪಾಲಿಸುವರೆಂದು ಪುರಾಣಗಳಲ್ಲಿ ವಿವರಿಸಿದ್ದಾರೆ. ಇತರ ರಾಜರುಗಳ ಕಾಲಗಳನ್ನೂ ಸೇರಿಸಿದರೆ ಒಟ್ಟು 1006 ಸಂವತ್ಸರಗಳು.

**2. ಪ್ರದ್ಯೋತವಂಶ ಐದುಜನ ರಾಜರು-138 ಸಂವತ್ಸರಗಳು**

(ಕಲಿಶಕೆ 976-1108 ಕ್ರೀ.ಪೂ 2132-1994) **"ಪಂಚಪ್ರದ್ಯೋತನಾ ಇಮೇ"**

**ಅಷ್ಟತ್ರಿಂಶೋತ್ತರಶತಂ ಭೋಕ್ಷ್ಯಂತಿ ಪೃಥಿವೀಂ ನೃಪಾಃ.** [2]

ಈ ಐದುಜನ ಪ್ರದ್ಯೋತರು 138 ಸಂವತ್ಸರಗಳ ವರೆಗೂ ರಾಜ್ಯವನ್ನು ಪರಿಪಾಲಿಸುತ್ತಾರೆ.

**3. ಶಿಶುನಾಗವಂಶ : ಹತ್ತುಜನ ರಾಜರು - 362 ವರ್ಷಗಳು**

(ಕಲಿಶಕೆ- 1008-1468 ಕ್ರಿ. ಪೂ. 1994-1634)

**ಇತ್ಯೇತೇ ಭವಿತಾರೋ ವೈ ಶೈಶುನಾಗಾ ನೃಪಾ ದಶ,**
**ಶತಾನಿ ತ್ರೀಣಿ ವರ್ಷಾಣಿ ದ್ವಿಷಷ್ಟ್ಯಭ್ಯದಿಕಾನಿ ತು** [3]

ಶಿಶುನಾಗರು, ಹತ್ತುಜನ 362 ವರ್ಷಗಳಕಾಲ ರಾಜ್ಯವನ್ನು ಪರಿಪಾಲಿಸಿದರು.

ಇದರಲ್ಲಿ ಲೆಕ್ಕಕ್ಕೆ ಎರಡು ವರ್ಷ ಕಡಿಮೆ ಬಂದಿದ್ದರಿಂದ 360 ವರ್ಷಗಳಾದವು.

**4. ನಂದವಂಶ - ಒಂಭತ್ತುಜನ ರಾಜರು. ನೂರುವರ್ಷಗಳು**

(ಕಲಿಶಕೆ- 1468-1568 ಕ್ರಿ. ಪೂ. 1684 - 2514)

**ಮಹಾಪದ್ಮಃ ತತ್ಪುತ್ರಾಶ್ಚ**
**ಏಕಂ ವರ್ಷಶತಂ ಅವನಿಪತಯೋ ಭವಿಷ್ಯಂತಿ.**

ಮಹಾಪದ್ಮನಂದ ಅವನ ಮಕ್ಕಳು ಸೇರಿ ನೂರುವರ್ಷಗಳ ಕಾಲ ರಾಜ್ಯವನ್ನು ಆಳುತ್ತಾರೆ.

---

1. ವಾಯುಪುರಾಣ-271-29,30
2. ವಿಷ್ಣುಪುರಾಣ-12-2
3. ವಾಯುಪುರಾಣ 99-321

**5. ಮೌರ್ಯವಂಶ** – ಹನ್ನೆರಡುಜನ ರಾಜರು 316 ವರ್ಷಗಳು
(ಕಲಿಶಕೆ– 1568–1884 ಕ್ರೀ.ಪೂ 1584–1278)

**ದ್ವಾದಶೈತೇ ಮೌರ್ಯಾಃ ಚಂದ್ರಗುಪ್ತಾದಯೋ ಮಹೀಮ್**
**ಶತಾನಿ ತ್ರೀಣೀ ಭೋಕ್ಷ್ಯಂತಿ ದಶಾಷಟ್ಟಸಮಾಃ ಕಲೌ.** *

ಚಂದ್ರಗುಪ್ತರಾದ ಹನ್ನೆರಡುಜನ ಮೌರ್ಯರಾಜರು 316 ವರ್ಷಗಳಕಾಲರಾಜ್ಯವನ್ನಾಳಿದರು.

**ಇತ್ಯೇತೇದಶದ್ವಾವೇವ ಚ ಭೋಕ್ಷ್ಯಂತಿವಸುಂಧರಾಂ**
**ಶತಾನಿತ್ರೀಣಿವರ್ಷಾಣಿತೇಭ್ಯಃಶುಂಗಾನ್ಗಮಿಷ್ಯತಿ.**

"ಡಾ॥.ಯಂ॥ ಕೃಷ್ಣಮಾಚಾರ್ಯರ ಹತ್ತಿರ ಇರುವ ಮತ್ಸ್ಯ ಪುರಾಣದ ಹಸ್ತಪ್ರತಿಯಿಂದ ಅವರು ಬರೆದ ಪ್ರಕಾರ ಹನ್ನೆರಡು ಜನ ಮೌರ್ಯವಂಶದ ರಾಜರು 300 ವರ್ಷಗಳ ಕಾಲ ರಾಜ್ಯವನ್ನಾಳಿದನಂತರ ಶುಂಗರಾಜರು ರಾಜ್ಯವನ್ನು ವಶಪಡಿಸಿಕೊಂಡರು" ಎಂದು ತಿಳಿಸಲಾಗಿದೆ.

**6. ಶುಂಗವಂಶ** –ಹತ್ತುಜನರಾಜರು 300 ವರ್ಷಗಳು
(ಕಲಿಶಕೆ– 1884–2184 ಕ್ರಿ.ಪೂ 1218–918)

**ದಶೈತೇ ಶುಂಗರಾಜಾನೋ ಭೋಕ್ಷ್ಯಂತೀಮಾಂ ವಸುಂಧರಾಂ,**
**ಶತಂ ಪೂರ್ಣಂ ಶತೇದ್ವೇ ಚ ತೇಭ್ಯಃ ಕಣ್ವಾನ್ಗಮಿಷ್ಯತಿ.**

ಈ ಹತ್ತುಜನ ಶುಂಗರಾಜರು 300 ವರ್ಷಗಳಕಾಲ ರಾಜ್ಯವನ್ನಾಳಿದ ನಂತರ ಕಣ್ವರಾಜರು ಪಾಲನೆಯನ್ನು ನಡೆಸುವರು.

**7. ಕಾಣ್ವವಂಶ**– ನಾಲ್ಕುಮಂದಿ ರಾಜರು 85 ವರ್ಷಗಳು
(ಕಲಿಶಕೆ– 2184–2269) ಕ್ರೀ.ಪೂ 918–33

**ಚತ್ವಾರ ಏತೇ ಭೂಪಾಲಾಃ ಕಣ್ವಗೋತ್ರಸಮುದ್ಭವಾಃ**
**ಧರ್ಮೇಣ ಭೋಕ್ಷಂತಿ ಮಹೀಂ ಪಂಚಾಶೀತಿನ್ತು ವತ್ಸರಾನ್**

ಈ ಕಣ್ವಗೋತ್ರದವರು ನಾಲ್ವರು ರಾಜರು 85 ವರ್ಷಗಳಕಾಲ ಧರ್ಮಪರರಾಗಿ ರಾಜ್ಯವನ್ನಾಳುವರು.

**8. ಆಂಧ್ರ ಶಾತವಾಹನ ರಾಜರು** 32 ರಾಜರು 506 ವರ್ಷಗಳು
(ಕಲಿಶಕೆ 2269–2775 ಕ್ರಿ.ಪೂ 833–327)

**ಏತೇ ದ್ವಾತ್ರಿಂಶದಂಧ್ರಾಸ್ತು ಭೋಕ್ಷ್ಯಂತಿ ವಸುಧಾಮಿಮಾಂ,**
**ಶತಾನಿ ಪಂಚಪೂರ್ಣಾನಿ ತೇಷಾಂ ರಾಜ್ಯಂ ಭವಿಷ್ಯತಿ.**

ಈ 32 ಜನ ಆಂಧ್ರರಾಜರು 500 ವರ್ಷಗಳಕಾಲ ರಾಜ್ಯವನ್ನು ಆಳುತ್ತಾರೆ. ಪ್ರತಿಯೊಬ್ಬ ರಾಜನ ಕಾಲವನ್ನು ಸೇರಿಸಿದರೆ 506 ವರ್ಷಗಳಾಗುತ್ತವೆ. **

---

* i. ಕಲಿಯುಗರಾಜವೃತ್ತಾಂತ 3ನೆಯ ಭಾಗ, 2ವ ಅಧ್ಯಾಯ ii. ಡಾ.ಯಂ.ಕೃಷ್ಣಮಾಚಾರ್ಯರ History of Classical Literature ಮತ್ತು ನಡಿಂಪಲ್ಲಿ ಜಗನ್ನಾಥರಾವ್ ಅವರ "ಮಹಾಭಾರತ ಯುದ್ಧಕಾಲ" ಗ್ರಂಥಗಳನ್ನುನೋಡಿ.

** ಕಲಿಯುಗರಾಜ ವೃತ್ತಾಂತ –ಶ್ರೀಕೋಟ ವೆಂಕಟಾಚಲಂ ಅವರ ಕಲಿಶಕ ವಿಜ್ಞಾನ ದ್ವಿತೀಯ, ತೃತೀಯ ಭಾಗಗಳನ್ನು ನೋಡಿ.

**9. ಗುಪ್ತರಾಜರು** ಎಂಟುಜನ ರಾಜರು 245 ವರ್ಷಗಳು
(ಕಲಿಶಕೆ 2775–3020 ಕ್ರಿ.ಪೂ 327–83 )

**ಭೋಕ್ಷ್ಯಂತಿ ದ್ವೇಶತೇ ಪಂಚಚತ್ವಾರಿಂಶ್ಚ ವೈಸಮಾಃ,**
**ಮಾಗಧಾನಾಂ ಮಹಾರಾಜ್ಯಂ ಛಿನ್ನಂ ಭಿನ್ನಂ ಚ ಸರ್ವಶಃ,**
**ಸಾಕಮೇತೈರ್ಮಹಾಗುಪ್ತವಶ್ಯೈರ್ಯಾಸ್ಯತಿ ಸಂಸ್ಥಿತಿಃ.**

(5+7=12 ಶಾಖೆಗಳಾಗಿ ವಿಭಜನೆಗೊಂಡಿರುವ) ಆಂಧ್ರದ ಮಗಧ ಸಾಮ್ರಾಜ್ಯವು ಛಿನ್ನಾಭಿನ್ನವಾಗಿ ಮಹಾಗುಪ್ತರಾಜರನ್ನು 245 ಹೊಂದುತ್ತದೆ. ಇವರು 245 ವರ್ಷಗಳಕಾಲ ಆಳುತ್ತಾರೆ.

| | ರಾಜ ವಂಶಗಳು | ರಾಜರ ಸಂಖ್ಯೆ | ಭಾರತ ಯುದ್ಧದ ನಂತರ ಪಾಲಿಸಿದ ಸಂ|| | ಕಲಿ ಶಕೆ | ಸಂವತ್ಸರಗಳು |
|---|---|---|---|---|---|
| 1 | ಬಾರ್ಹದ್ರಥವಂಶ | 22 | 1006 | ಕಲಿಪೂ 36 | ಕಲಿ 970 |
| 2 | ಪ್ರದ್ಯೋತವಂಶ | 5 | 138 | ಕಲಿ 970 | ಕಲಿ 1108 |
| 3 | ಶಿಶುನಾಗವಂಶ | 10 | 360 | ಕಲಿ 1108 | ಕಲಿ 1468 |
| 4 | ನಂದವಂಶ (ತಂದೆ, ಮಕ್ಕಳು ಎಂಟುಜನ) | 9 | 100 | ಕಲಿ 1468 | ಕಲಿ 1568 |
| 6 | ಮೌರ್ಯವಂಶ | 12 | 316 | ಕಲಿ 1568 | ಕಲಿ 1884 |
| 7 | ಶುಂಗವಂಶ | 10 | 300 | ಕಲಿ 1884 | ಕಲಿ 2184 |
| 8 | ಕಾಣ್ವವಂಶ | 4 | 85 | ಕಲಿ 2184 | ಕಲಿ 5569 |
| 9 | ಆಂಧ್ರವಂಶ | 32 | 506 | ಕಲಿ 2269 | ಕಲಿ 2775 |
| 10 | ಮಹಾಗುಪ್ತವಂಶ | 8 | 245 | ಕಲಿ 2775 | ಕಲಿ 3010 |
| | | 105 | 3006 | ಕಲಿಶಕೆ 32 | ಕಲಿ 3020 ವರೆಗೂ |

ಆಂಧ್ರರಾಜರ ಮಹಾಸಾಮ್ರಾಜ್ಯವು ಛಿನ್ನಾಭಿನ್ನವಾದಮೇಲೆ ಮಹಾಗುಪ್ತರಾಜರ ಕಾಲದಲ್ಲಿ ಮೊದಲನೆಯ ಚಂದ್ರಗುಪ್ತನು ಮಗಧೆಯನ್ನು ಬಿಟ್ಟು ಪಾಟಲಿಪುತ್ರದಲ್ಲಿ ಪಟ್ಟಾಭಿಷಿಕ್ತನಾಗಿ ಚಕ್ರವರ್ತಿಯಾಗಲಾರದೇ ಅಲ್ಪ ರಾಜ್ಯಾಧಿಪತಿಯಾಗಿ ರಾಜ್ಯವಾಳಿದ. ಅವನ ಮಗನಾದ ಸಮುದ್ರಗುಪ್ತನು ದಿಗ್ವಿಜಯ ಯಾತ್ರೆಯನ್ನು ಮಾಡಿ, ಅಯೋಧ್ಯೆಯಲ್ಲಿ ಚಕ್ರವರ್ತಿಯಾದ. ಆದರೆ ಅವನು ಜೀವಿಸಿದ್ದಾಗಲೇ ಸಾಮಂತರಾಜರು ಸ್ವತಂತ್ರರಾದರು. ನಂತರ ಎರಡನೆಯ ಚಂದ್ರಗುಪ್ತ, ಕುಮಾರಗುಪ್ತ, ಸ್ಕಂದಗುಪ್ತ ಮೊದಲಾದವರು ನಾಮ ಮಾತ್ರ ಚಕ್ರವರ್ತಿಗಳಾಗಿದ್ದರು. ಅವರ ರಾಜ್ಯಪಾಲನೆಯ ಕಾಲವೆಲ್ಲಾ ಶಕರು ಮತ್ತು ಹೂಣಾದಿಗಳೊಂದಿಗೆ ಹೋರಾಡುವುದರಲ್ಲೇ ಮುಗಿದಿತ್ತು. ಕೊನೆಗೆ ಕಲಿ 3020 ರಲ್ಲಿ ಗುಪ್ತರಾಜ್ಯವೇ ನಾಶವಾಯಿತು. ಹೀಗಿರುವಾಗ ಅವಂತಿರಾಜ್ಯದ ಮುಖ್ಯನಗರವಾದ ಉಜ್ಜಯಿನಿಯಲ್ಲಿ ಇರುತ್ತಾ ರಾಜ್ಯವನ್ನು ಮಾಡುತ್ತಾ ಗುಪ್ತರಾಜರಿಗೆ ಶತ್ರುವಾಗಿದ್ದ ಶಕ ರಾಜನನ್ನು ಕಲಿ 3020 ರಲ್ಲಿ "ವಿಕ್ರಮಾರ್ಕ" ಎಂಬ ಅಗ್ನಿವಂಶದ ರಾಜನು ಶಕರಾಜನನ್ನು ಸೋಲಿಸಿ ಅವನನ್ನು ದೇಶದಿಂದ ಹೊರಗೆಹಾಕಿ, ಉಜ್ಜಯಿನಿಯಲ್ಲಿ ಕಲಿ 3020 ರಲ್ಲಿಪಟ್ಟಾಭಿಷಿಕ್ತನಾದ.

ಆದ್ದರಿಂದ ಕಲಿ 3020 ರಿಂದ ಅಗ್ನಿವಂಶಗಳ ನಾಲ್ಕರಲ್ಲಿ ಒಂದಾದ **"ಪ್ರಮರ"** ಎಂಬ ವಂಶಕ್ಕೆ ಸೇರಿದ ಉಜ್ಜಯಿನಿಯಲ್ಲಿ ರಾಜ್ಯಭಾರಮಾಡಿದ. **"ಶಕಹಂತ"** ಎಂಬ ವಿಕ್ರಮಾರ್ಕನಿಂದ ನಂತರದ ಕಾಲವನ್ನು ಗುರುತಿಸಬೇಕು. ವಿಕ್ರಮಾರ್ಕನ ಕಾಲವನ್ನು ಈ ರೀತಿಯಾಗಿ ಹೇಳಲಾಗಿದೆ.

**ಪೂರ್ಣೇ ತ್ರಿಂಶಚ್ಛತೇ ವರ್ಷೇ ಕಲೌ ಪ್ರಾಪ್ತೇಭಯಂಕರೇ**
**ಶಕಾನಾಂ ಚ ವಿನಾಶಾರ್ಥಮಾರ್ಯಧರ್ಮವಿವೃದ್ಧಯೇ**
**ಜಾತಃ ಶಿವಾಜ್ಞಯಾ ಸೋಽಪಿ ಕೈಲಾಸಾದ್ಗುಹ್ಯಕಾಲಯಾತ್,**
**ವಿಕ್ರಮಾದಿತ್ಯನಾಮಾನಂ ಪಿತಾ ಕೃತ್ವಾ ಮುಮೋದ ಹ,**
**ಸ ಬಾಲೋಽಪಿ ಮಹಾಪ್ರಾಜ್ಞಃ ಪಿತೃಮಾತೃಪ್ರಿಯಂಕರಃ** [1]

ಕಲಿಯಲ್ಲಿ ಮೂರುಸಾವಿರವರ್ಷಗಳು ತುಂಬಿದ ನಂತರ ಶಕರನ್ನು ನಾಶಮಾಡಿ, ಆರ್ಯಧರ್ಮವನ್ನು ಅಭಿವೃದ್ಧಿಗೊಳಿಸುವುದಕ್ಕೆ ಶಿವನ ಆಜ್ಞೆಯಿಂದಾಗಿ ಗುಹ್ಯಕ ಆಲಯದಿಂದ ಒಬ್ಬ ಪುರುಷನು ಪ್ರಮರ ವಂಶದಲ್ಲಿ ಗಂಧರ್ವಸೇನ ಮಹಾರಾಜನ ಕುಮಾರನಾಗಿ ಜನ್ಮಿಸಿದ. ಆ ಹುಡಗನಿಗೆ "ವಿಕ್ರಮಾದಿತ್ಯ"ಎಂಬ ಹೆಸರನ್ನು ಇರಿಸಿ ತಂದೆ ಸಂತೋಷಿಸಿದ. ಅವನು ಮಹಾಪ್ರಾಜ್ಞ, ಪಿತೃ ಮಾತೃ ಪ್ರಿಯಂಕರನಾಗಿ ಬೆಳೆದ.

"ವಿಕ್ರಮಾದಿತ್ಯ"ನೆನ್ನುವುದು ತಂದೆಯಿಂದ ನಾಮಕರಣದಲ್ಲಿ ಇಟ್ಟ ಹೆಸರೇ ಹೊರತು ಆತನ ಬಿರುದಲ್ಲ. ಈ ವಿಕ್ರಮಾರ್ಕನು ಕಲಿ 3020 ಸಂವತ್ಸರದಲ್ಲಿ ಉಜ್ಜಯಿನಿಯಲ್ಲಿ ರಾಜನಾದ. ಆದ್ದರಿಂದ ಅವನಿಂದ ನಂತರದ ಕಾಲವನ್ನು ಗುರುತಿಸಬೇಕು.

**10. ಪ್ರಮರವಂಶ**

(ಕಲಿಶಕೆ 3020 –4295 ಕ್ರಿ.ಪೂ 82 – ಕ್ರಿ.ಶ. 1193)

ಕಲಿ 3020 ರಿಂದ ಈ ವಂಶದಲ್ಲಿ ವಿಕ್ರಮಾರ್ಕನ ವರೆಗೂ ಆಡಳಿತ ನಡೆಸಿದ ರಾಜರು 24 ಜನ ಇದ್ದಾರೆ. ಅವರು 1275 ವರ್ಷಗಳ ಕಾಲ ರಾಜ್ಯವಾಳಿದರು.

**11. ಮಹಮ್ಮದೀಯರು, ಮಹಾರಾಷ್ಟ್ರೀಯರು, ಬ್ರಿಟಿಷರು ಮುಂತಾದವರು 753 ವರ್ಷಗಳು.**

(ಕಲಿಶಕೆ 4095 –5048) ಕ್ರೀ. ಪೂ. 1194–1917

1947 ಆಗಸ್ಟು 15ನೇ ತಾರೀಖು ಕಲಿಶಕ 504 ವರ್ಷಗಳು

ಶಾಲಿವಾಹನಶಕೆ 1869ನೆಯ ವರ್ಷ

ಸರ್ವಜಿತ್‌ನಾಮ ಸಂವತ್ಸರ ಅಧಿಕ ಶ್ರಾವಣ ಬ. 20 ಶುಕ್ರವಾರ – ಭಾರತದೇಶ ಸ್ವತಂತ್ರವಾಯಿತು.

ಕಲಿ ಪ್ರವೇಶಕಾಲದಿಂದ **"ಕಲಿಶಕೆ"** ಪ್ರಾರಂಭವಾಯಿತು. ಅಂದಿನಿಂದ ಇಂದಿನವರೆಗೂ ಲೆಕ್ಕಹಾಕುತ್ತಾ ಪ್ರತೀವರ್ಷದಲ್ಲೂ ಪಂಚಾಂಗದಲ್ಲಿ ಒಂದೊಂದು ವರ್ಷವನ್ನು ಸೇರಿಸಿಕೊಳ್ಳುವುದನ್ನು ನಾವು ನೋಡುತ್ತಿರುತ್ತೇವೆ. ಕಲಿಶಕೆ ಪ್ರಾರಂಭವಾಗಿ ಇಂದಿಗೆ 5050 ವರ್ಷಗಳು ಕಳೆದಿವೆ. ಕ್ರಿ.ಶ. ಪ್ರಕಾರ ಕ್ರಿ.ಪೂ. 3102 ವರ್ಷದಿಂದ ಪ್ರಾರಂಭಿಸಿ ಇಂದಿನವರೆಗೂ ಕ್ರಮಶಃ ಲೆಕ್ಕ ಹಾಕುತ್ತಾರೆ.

---

1. ಭವಿಷ್ಯ ಪುರಾಣಂ 3–1–7–14–15,16

ಕ್ರಿ.ಪೂ ಕಳೆದಿರುವ ವರ್ಷಗಳು 3101
ಕ್ರಿ.ಶಕೆ ಯಿಂದ ಇಲ್ಲಿಯವರೆಗೂ ನಡೆದಿರುವ ವರ್ಷಗಳು 2021
------------
5122 ವರ್ಷಗಳು ಕಳೆದಿವೆ.

ಕಲಿ ಪ್ರವೇಶಕಾಲ ಕ್ರಿ.ಪೂ 3108 ವರ್ಷ ದಿನಾಂಕ 20 ಫೆಬ್ರವರಿ ರಾತ್ರಿ 3–37–30.

ಈ ರೀತಿ ಪ್ರಾಚೀನವಾದ ಪುರಾಣಗ್ರಂಥಗಳ ಆಧಾರದಿಂದ ಮಾತ್ರ ಭಾರತದೇಶದ ಸ್ವರೂಪ, ವೈಜ್ಞಾನಿಕ ವಿಷಯಗಳು, ಪರ್ವತಗಳು, ಪುಣ್ಯ ನದಿಗಳು, ಪವಿತ್ರತೀರ್ಥಗಳು ಮೋಕ್ಷಪ್ರದಾಯಕವಾದ ಕ್ಷೇತ್ರಗಳು, ರಾಜರಚರಿತ್ರೆ, ರಾಜವಂಶಗಳು, ಮೊದಲಾದ ವಿಷಯಗಳು ತಿಳಿದುಬರುತ್ತಿವೆ. ಪುರಾಣದ ವಿಷಯದಲ್ಲಿ ಪ್ರಾಮಾಣಿಕತೆ ಇಲ್ಲದಿದ್ದರೆ ಈ ವಿಷಯಗಗಳು ಅರ್ಥವಾಗುವದಿಲ್ಲ. ಈ ಚರಿತ್ರೆ ತಿಳಿಯದಿದ್ದರೆ ಚರಿತ್ರ ಜ್ಞಾನ ಹೀನರಾಗುತ್ತೇವೆ. ಆದ್ದರಿಂದ ಪುರಾಣಗಳನ್ನು ನಿಂದಿಸಬಾರದು.

*~*~*~*~*~*~*

ಸ್ವಾಮಿ ಪುಷ್ಕರಿಣಿಯಲ್ಲಿ ಪುಣ್ಯಸ್ನಾನವನ್ನು ಆಚರಿಸಿದ ಕೇಸರಿ-ಅಂಜನಾದೇವಿ.
ಸಮೀಪದಲ್ಲಿದ್ದ ಹುತ್ತದೊಳಗಿಂದ ಸ್ವಾಮಿಯ ದರ್ಶನ



# 2. ಶ್ರೀಶಾಂಕರಭಾಷ್ಯದಲ್ಲಿ ವಿವರಿಸಿರುವ ಪುರಾಣೇತಿಹಾಸ ವಚನಗಳು

ಆಚಾರ್ಯ ಜಾನಮದ್ದಿ ರಾಮಕೃಷ್ಣ

**ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ**
**ನಮೋ ವೈ ಬ್ರಹ್ಮ ನಿಧಯೇ ವಾಸಿಷ್ಠಾಯ ನಮೋ ನಮಃ,**
**ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್,**
**ನಮಾಮಿ ಭಗವತ್ಪಾದಶಂಕರಂ ಲೋಕಶಂಕರಮ್.**

ಸನಾತನ ಧರ್ಮ ವಾಙ್ಮಯದಲ್ಲಿ, ಪುರಾಣ ಗ್ರಂಥಗಳಿಗೆ ಅತ್ಯುತ್ತಮವಾದ ಸ್ಥಾನವಿದೆ. ಪುರಾಣಗಳು ಭಾರತೀಯ ಸಂಸ್ಕೃತಿ ಸಂಪ್ರದಾಯಗಳಿಗೆ ದರ್ಪಣದಂತಹವು. ಈ ಪುರಾಣಗಳು ಅನಂತವಾದ ವೇದಗಳ ಸಾರವನ್ನು ತಮ್ಮಲ್ಲಿ ಹುದುಗಿಸಿಕೊಂಡಿವೆ. ಹದಿನೆಂಟು ಮಹಾಪುರಾಣಗಳು ಮತ್ತು ಹದಿನೆಂಟು ಉಪಪುರಾಣಗಳು ನಮಗೆ ಲಭ್ಯವಿರುವ ಮಹಾನಿಧಿಗಳು. ಈ ಮಹಾನಿಧಿಗಳು ನಮ್ಮ ಪಾಲಿಗೆ ದೊರೆತಿರುವುದು ನಮ್ಮ ಸೌಭಾಗ್ಯವೆಂದೇ ಹೇಳಬೇಕು.

ಹೀಗಿರುವಾಗ, ಕೆಲವರು ಈ ಪುರಾಣಗ್ರಂಥಗಳನ್ನು ಬಹಳ ಕೀಳಾಗಿ ನೋಡುತ್ತಿದ್ದಾರೆ. ಬಹುಶಃ ಅವರಿಗೆ ಅದರ ಅರಿವು ಇಲ್ಲದೇ ಇರುವುದೂ ಕಾರಣವಾಗಿರಬಹುದು. ಮತ್ತೆ ಕೆಲವರಾದರೆ ಇನ್ನೂ ಮುಂದುವರೆಯುತ್ತಾ "ಪುರಾಣಮಿತ್ಯೇವ ನ ಸಾಧುಸರ್ವಮ್" ಎಂಬ ನಾಣ್ಣುಡಿಯನ್ನು ತಮಗೆ ಅನುಕೂಲವಾದ ರೀತಿಯಲಿ ಬಳಸಿಕೊಳ್ಳುತ್ತಿದ್ದಾರೆ. ಇದು ಅವರ ಸ್ಥಾಯಿಯನ್ನು ಸೂಚಿಸುತ್ತದೆ. ಒಂದು ಪದವನ್ನು ಅಥವಾ ಒಂದು ವಾಕ್ಯವನ್ನು ವಿವರಿಸುವಾಗ ಅವುಗಳ ಅರ್ಥವನ್ನು ಆಳವಾಗಿ ತಿಳಿದುಕೊಂಡು ವ್ಯವಹರಿಸಬೇಕು. ಸಲ್ಲದ ದೊಡ್ಡಸ್ತಿಕೆಯನ್ನು ಮೇಲೆ ಹಾಕಿಕೊಂಡು ಜೀವನವನ್ನು ಕಳೆಯಬಾರದು. ಇಂತಹಾ ಪ್ರಯತ್ನಗಳಿಂದಾಗಿ ಅವರು ಲೋಕಕ್ಕೆ ಮೋಸ ಮಾಡಲಾರರು. ಅದರ ಬದಲಾಗಿ ಅವರೇ ಆತ್ಮವಂಚಕರಾಗುತ್ತಾರೆ. ಅವರು ತಮಗೆ ತಮ್ಮ ವಾದಕ್ಕೆ ಪ್ರಮಾಣವೆಂದು ತೋರಿಸುತ್ತಿರುವ ಮೇಲಿನ ಹೇಳಿಕೆಯನ್ನು ಪರಿಶೀಲಿಸೋಣ– ಈ ವಾಕ್ಯ ಮಹಾಕವಿ ಕಾಳಿದಾಸ ರಚಿಸಿದ "ಮಾಳವಿಕಾಗ್ನಿಮಿತ್ರ" ಎಂಬ ನಾಟಕದಲ್ಲಿ ಶ್ಲೋಕ. ಸಂಪೂರ್ಣ ಶ್ಲೋಕ ಹೀಗಿದೆ.

**ಪುರಾಣಮಿತ್ಯೇನ ನ ಸಾಧುಸರ್ವಂ, ನ ಚಾಪಿ ಕಾವ್ಯಂ ನವಮಿತ್ಯವದ್ಯಮ್,**
**ಸಂತಃ ಪರೀಕ್ಷ್ಯಾನ್ಯತರದ್ಭಜಂತೇ, ಮೂಢಃ ಪರಪ್ರತ್ಯಯನೇಯಬುದ್ಧಿಃ,**[1]

ಇಲ್ಲಿ ಇದಕ್ಕೆ ಒಂದು ಸಂಕ್ಷಿಪ್ತ ವಿವರಣೆ –

ಮೇಲಿನ ನಾಟಕದಲ್ಲಿನ ಪೂರ್ವರಂಗದಲ್ಲಿ ಈ ಶ್ಲೋಕವು ಸೂತ್ರಧಾರನು ಹೇಳುತ್ತಾನೆ. "ಈ ವಸಂತೋತ್ಸವ ಸಂದರ್ಭದಲ್ಲಿ ಕಾಳಿದಾಸ ರಚಿಸಿರುವ "ಮಾಳವಿಕಾಗ್ನಿಮಿತ್ರ" ಎಂಬ ನಾಟಕವನ್ನು ಪ್ರದರ್ಶಿಸಬೇಕೆಂದು ಹಿರಿಯರು ಕೇಳಿದ್ದರು. ಆದ್ದರಿಂದ ನಾಟಕವನ್ನು ಆರಂಭಿಸೋಣ ಎಂದು ಸೂತ್ರಧಾರನು ಹೇಳುತ್ತಾನೆ. ಆಗ ನಾಟಕದಲ್ಲಿನ ಸಹಾಯ ನಟನಾದ ಒಬ್ಬ ವ್ಯಕ್ತಿ, "ಲಬ್ಧ ಪ್ರತಿಷ್ಠೆಗೆ ಒಳಗಾಗಿರುವ ಭಾಸ, ಸೌಮಿತ್ರಿ, ಕವಿಪುತ್ರ ಮೊದಲಾದವರು ರಚಿಸಿದ ನಾಟಕಗಳು ಬೇಡವೆಂದು ಹೇಳಿ ಆಧುನಿಕ ಕಾಲದ ಕಾಳಿದಾಸನ ನಾಟಕವನ್ನು ಪ್ರದರ್ಶಿಸುವುದರಲ್ಲಿನ ಮರ್ಮವೇನು?" ಎಂದು ಕೇಳಿದ. ಆಗ ಆ ಸಹಾಯ ನಟನನ್ನು ಗದರುತ್ತಾ ಸೂತ್ರಧಾರನು – **ಹಳೆಯದಾದ ಪ್ರತೀ ವಸ್ತುವೂ ಉತ್ತಮವಾದುದೆಂದು ಭಾವಿಸಬೇಡ. ಹಾಗೆಯೇ ಹೊಸ ವಸ್ತುವನ್ನು ಅಲ್ಲಗಳೆಯ ಬೇಡ. ಪಂಡಿತರು ಈ ಎರಡನ್ನು ಚೆನ್ನಾಗಿ ಆಲೋಚಿಸಿ ಒಳ್ಳೆಯದನ್ನು ಮಾತ್ರವೇ ಗ್ರಹಿಸಿರುತ್ತಾರೆ. ಈ ಹಳೆಯ–ಹೊಸದರ ತಾರತಮ್ಯವನ್ನು ಅವರು ಮಾಡುವುದಿಲ್ಲ.**

1. ಮಾಳವಿಕಾಗ್ನಿಮಿತ್ರ– ಪೂರ್ವರಂಗ –2

ಇದು ಈ ಶ್ಲೋಕದ ಅರ್ಥ! ಆದ್ದರಿಂದ ಈ ಶ್ಲೋಕದಲ್ಲಿ ಹಳೆಯದೆಂದರೆ ಪುರಾಣವೆಂದು ಅರ್ಥ ಅಂದರೆ ಪ್ರಾಚೀನವಾದುದು ಎಂದರ್ಥ! **"ಪುರಾಣೇ ಪ್ರತನ-ಪ್ರಶ್ನ-ಪುರಾತನ-ಚಿರಂತನಾಃ"** ಎಂದು ಅಮರಕೋಶ[1] ಹೇಳುತ್ತದೆ. ಅಂದರೆ ಪ್ರಾಚೀನವಾದುದು ಎಂಬ ಅರ್ಥದಲ್ಲಿ ಪುರಾಣ, ಪ್ರತನ, ಪ್ರತ್ನ, ಪುರಾತನ, ಚಿರಂತನ ಎಂಬ ಐದು ಪರ್ಯಾಯಗಳಿವೆ. ಅಷ್ಟೇ ಹೊರತು, ಈ ಶ್ಲೋಕದಲ್ಲಿ **"ಪುರಾಣ"** ಅಂದರೆ ವೇದವ್ಯಾಸ ಭಗವತ್ಪಾದರು ರಚಿಸಿದ ಪುರಾಣಗಳು ಅಥವಾ ಉಪಪುರಾಣಗಳನ್ನು ಕುರಿತು ಹೇಳಿದ್ದಾರೆಂದಲ್ಲ. ಹಾಗೆಂದುಕೊಂಡರೆ ಅದು ಅಜ್ಞಾನದ ಪರಾಕಾಷ್ಠ ವೆನಿಸುತ್ತದೆ.

ಸರೀ, ಪ್ರಕೃತ ನಿಬಂಧ ಶೀರ್ಷಿಕೆಯ ವಿಷಯಕ್ಕೆ ಬರೋಣ- ವ್ಯಾಸ ರಚಿತವಾದ ಮಹಾಪುರಾಣ ವಚನಗಳನ್ನು ಅನೇಕ ಮಹನೀಯರು ತಮ್ಮ ಸಿದ್ಧಾಂತಗಳಿಗೆ ಪ್ರಮಾಣವೆಂದು ಭಾವಿಸಿದ್ದಾರೆ. ಪುರಾಣಗಳ ಬಗೆಗೆ ತಮಗೆ ಇರುವ ಭಕ್ತಿ-ಶ್ರದ್ಧೆಗಳನ್ನು ತೋರಿದ್ದಾರೆ. ಇವರಲ್ಲಿ ಪರಮಪೂಜ್ಯರಾದ ಶ್ರೀ ಶಂಕರ ಭಗವತ್ಪಾದರು ಒಬ್ಬರು. ಶ್ರುತಿಪ್ರಸ್ಥಾನ, ಸ್ಮೃತಿಪ್ರಸ್ಥಾನ, ನ್ಯಾಯಪ್ರಸ್ಥಾನ ಎಂಬ ಈ ಮೂರರನ್ನೂ **"ಪ್ರಸ್ಥಾನತ್ರಯ"** ಎಂದು ಕರೆಯುತ್ತಾರೆ. ಉಪನಿಷತ್ತುಗಳನ್ನು ಶ್ರುತಿಪ್ರಸ್ಥಾನವೆಂದು, ಭಗವದ್ಗೀತೆಯನ್ನು ಸ್ಮೃತಿಪ್ರಸ್ಥಾನವೆಂದೂ, ವೇದಾಂತ ಸೂತ್ರಗಳನ್ನು ನ್ಯಾಯಪ್ರಸ್ಥಾನವೆಂದು ಕರೆಯುತ್ತಾರೆ. ಈ ಮೂರೂ ಪ್ರಸ್ಥಾನಗಳಿಗು ಶ್ರೀ ಶಂಕರಭಗವತ್ಪಾದರು ಭಾಷ್ಯವನ್ನು ಬರೆದಿದ್ದಾರೆ. ಶ್ರಿ ಶಾಂಕರಭಾಷ್ಯವೆಂದು ಇವು ಪ್ರಸಿದ್ಧವಾಗಿವೆ. ಈ ಮೂರುಭಾಷ್ಯಗಳಲ್ಲಿ ಆಚಾರ್ಯರು ತಮ್ಮ ಸಿದ್ಧಾಂತಗಳಿಗೆ ಪ್ರಮಾಣಗಳಾಗಿ ಅನೇಕ ಪುರಾಣ ವಚನಗಳನ್ನು ವಿವರಿಸಿದ್ದಾರೆ. ಈ ಅಂಶಕ್ಕೆ ಸಂಬಂಧಿಸಿದಂತೆ ಸ್ವಲ್ಪ ವಿವರಣೆಯನ್ನು ನೀಡುವುದೇ ಈ ಲೇಖನದ ಉದ್ದೇಶ!

**1. ಉಪನಿಷದ್ಭಾಷ್ಯದಲ್ಲಿ ಪುರಾಣ ವಚನಗಳು-**

➢ **ಕಠೋಪನಿಷತ್ತು- ದ್ವಿತೀಯಾಧ್ಯಾಯದಲ್ಲಿನ ಪ್ರಥಮ ವಲ್ಲೀ ಭಾಷ್ಯದಲ್ಲಿ (ಪುಟ-279) ಲಿಂಗಪುರಾಣ ವಚನ-**

**ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ,**
**ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ.**[2]

ಈ ಶ್ಲೋಕವು ಆತ್ಮ ಶಬ್ದ ನಿಷ್ಪತ್ತಿಯನ್ನು ವರ್ಣಿಸುತ್ತದೆ. ಎಲ್ಲದರಲ್ಲೂ ವ್ಯಾಪಿಸುವುದು, ಗ್ರಹಿಸುವುದು, ಲೌಕಿಕ ವಿಷಯಗಳನ್ನು ಅನುಭವಿಸುವುದು ಮತ್ತು ಎಲ್ಲಾ ಸಮಯದಲ್ಲೂ ಉಳಿದಿರುವದಾದುದರಿಂದ ಇದನ್ನು **"ಆತ್ಮ"** ಎಂದು ಕರೆಯುತ್ತಾರೆ. ಈ ಉಪನಿಷತ್ತಿನಲ್ಲಿ ತೃತೀಯ ವಲ್ಲಿ ಭಾಷ್ಯದಲ್ಲಿ (ಪುಟ-336) ವಿಷ್ಣುಪುರಾಣ ವಚನ -

**ಅಭೂತಸಂಪ್ಲವಂ ಸ್ಥಾನಮಮೃತತ್ವಂ ವಿಭಾವ್ಯತೇ**[3]

ಅಮೃತತ್ವ ಎಂಬ ಶಬ್ದದ ಅರ್ಥವನ್ನು ಇದು ವಿವರಿಸುತ್ತದೆ.

➢ ಮಾಂಡೂಕ್ಯೋಪನಿಷತ್ತು- ವೈತಥ್ಯಪ್ರಕರಣದಲ್ಲಿನ ಭಾಷ್ಯದಲ್ಲಿ (ಪುಟ-644) ವ್ಯಾಸಸ್ಮೃತಿವಚನದಂತೆ ಈ ಶ್ಲೋಕವು ಕಂಡುಬರುತ್ತದೆ.

**ತಮಃಶ್ವಭ್ರನಿಭಂ ದೃಷ್ಟಂ ವರ್ಷಬುದ್ಬುದಸನ್ನಿಭಮ್**
**ನಾಶಪ್ರಾಯಂ ಸುಖಾದ್ಧೀನಂ ನಾಶೋತ್ತರಮಭಾವಗಮ್** [4]

---

1. ಅಮರಕೋಶಃ -ವಿಶೇಷ್ಯನಿಘ್ನವರ್ಗಃ - 77    4. ವೈತಥ್ಯಪ್ರಕರಣಭಾಷ್ಯ- ಪುಟ-644

2. ಲಿಂಗಪುರಾಣ- 1-70-96

3. ವಿಷ್ಣುಪುರಾಣ 2-8-95

ದ್ವೈತದ ಅಸತ್ಯವನ್ನು ಈ ವಚನ ತಿಳಿಸುತ್ತದೆ. ಈ ಜಗತ್ತು ರಂಧ್ರದಂತೆ, ನೀರಿನ ಬಿಂದುವಿನಂತೆ ನಾಶವಾಗುವಂತದು. ಸುಖಮಯವಲ್ಲದಿರುವುದು, ವಿನಾಶಾ ನಂತರ ಶೂನ್ಯತೆಯನ್ನು ಹೊಂದುತ್ತದೆ. ಎಂದು ಈ ಶ್ಲೋಕದಲ್ಲಿ ತಿಳಿಸಿದ್ದಾರೆ.

**ಐತರೇಯೋಪನಿಷತ್ತು– ದ್ವಿತೀಯಾಧ್ಯಾಯದಲ್ಲಿ ಪ್ರಥಮ ಖಂಡ ಭಾಷ್ಯದಲ್ಲಿ (ಪುಟ–875) ಹರಿವಂಶದಲ್ಲಿ ವಚನ ಈ ರೀತಿ ಇದೆ.**

**ಪತಿರ್ಜಾಯಾಂಪ್ರವಿಶತಿ** [1]

ತಂದೆಯ ಆತ್ಮವೇ ಪುತ್ರರೂಪವನ್ನು ಹೊಂದುತ್ತದೆಂದು ತಿಳಿಸುವ ಸಂದರ್ಭದಲ್ಲಿ ರಚಿಸಿರುವ ವಚನ.

➢ **ತೈತ್ತಿರೀಯೋಪನಿಷತ್ತು**

**ಶೀಕ್ಷಾವಲ್ಲಿ ಪ್ರಥಮಾನುವಾಕ ಭಾಷ್ಯದಲ್ಲಿ (ಪುಟ–916) ಗರುಡಪುರಾಣವಚನ–**

**ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ**
**ಯಥಾಽಽದರ್ಶತಲೇ ಪ್ರಖ್ಯೇ ಪಶ್ಯಂತ್ಯಾತ್ಮಾನಮಾತ್ಮನಿ** [2]

ಪಾಪಗಳು ಕ್ಷಯವಾದ ನಂತರ ಮಾತ್ರಾ ಜ್ಞಾನ ಉಂಟಾಗುತ್ತದೆ. ಯಾವಾಗ ಕನ್ನಡಿ ಸ್ಪಷ್ಟವಾಗಿದ್ದಾಗಲೇ ನಮ್ಮ ಮುಖ ಚೆನ್ನಾಗಿ ಕಾಣಿಸುತ್ತದೆ. ಹಾಗೇ ಶುದ್ಧವಾದ ಅಂತಃಕರಣದಲ್ಲಿ ಮಾತ್ರ ಆತ್ಮಸಾಕ್ಷಾತ್ಕಾರ ಉಂಟಾಗುತ್ತದೆಂದು ಈ ಶ್ಲೋಕದ ಭಾವನೆ.

➢ **ಶ್ವೇತಾಶ್ವರೋಪನಿಷತ್ತು– ಪ್ರಥಮಾಧ್ಯಾಯಭಾಷ್ಯದಲ್ಲಿ (ಪುಟ– 1117–1118) ಕೆಲವು ಪುರಾಣ ವಚನಗಳು ಹೀಗಿವೆ –**

**ಅನೂಚಾನಸ್ತತೋ ಯಜ್ವಾ ಕರ್ಮನ್ಯಾಸೀ ತತಃ ಪರಮ್,**
**ತತೋ ಜ್ಞಾನಿತ್ವಮಭ್ಯೇತಿ ಯೋಗೀ ಮುಕ್ತಿಂ ಕ್ರಮಾಲ್ಲಭೇತ್,** [3]

**ಅನೇಕಜನ್ಮಸಂಸಾರಚಿತೇ ಪಾಪಸಮುಚ್ಚಯೇ**
**ನಾಕ್ಷೀಣೇ ಜಾಯತೇ ಪುಂಸಾಂ ಗೋವಿಂದಾಭಿಮುಖೀ ಗತಿಃ** [4]

**ಜನ್ಮಾಂತರಸಹಸ್ರೇಷು ತಪೋಜ್ಞಾನಸಮಾಧಿಭಿಃ**
**ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ** [5]

**ಪಾಪಕರ್ಮಾಶ್ರಯೋ ಹ್ಯತ್ರ ಮಹಾಮುಕ್ತಿವಿರೋಧಕೃತ್,**
**ತಸ್ಯೈವ ಶಮನೇ ಯತ್ನಃ ಕಾರ್ಯಃ ಸಂಸಾರಭೀರುಣಾ** [6]

**ಸುವರ್ಣಾದಿಮಹಾದಾನಪುಣ್ಯತೀರ್ಥಾವಗಾಹನೈಃ**
**ಶಾರೀರೈಶ್ಚ ಮಹಾಕ್ಲೇಶೈಃ ಶಾಸ್ತ್ರೋಕ್ತಸ್ತಚ್ಛಮೋ ಭವೇತ್** [7]

**ದೇವತಾಶ್ರುತಿಸಚ್ಛಾಸ್ತ್ರಶ್ರವಣೈಃ ಪುಣ್ಯದರ್ಶನೈಃ**
**ಗುರುಶುಶ್ರೂಷಣೈಶ್ಚೈವ ಪಾಪಬಂಧಃ ಪ್ರಶಾಮ್ಯತಿ** [8]

1. ಹರಿವಂಶ– 3–73–31
2. ಗರುಡಪುರಾಣ –1–237–06
3. ವಿಷ್ಣುಧರ್ಮಪುರಾಣ–98–20
4. ಭವಿಷ್ಯಪುರಾಣ–01–63–09
5. ವಿಷ್ಣುಧರ್ಮಪುರಾಣ– 68–112
6. ವಿಷ್ಣುಧರ್ಮಪುರಾಣ– 97–04
7. ವಿಷ್ಣುಧರ್ಮಪುರಾಣ–97–05
8. ವಿಷ್ಣುಧರ್ಮಪುರಾಣ–97–06

ಚಿತ್ತಶುದ್ಧಿ ಇಲ್ಲದಿದ್ದರೆ ಮೋಕ್ಷ ದೊರೆಯುವುದಿಲ್ಲವೆಂಬ ಅಂಶವನ್ನು ತಿಳಿಯಪಡಿಸುವ ಶ್ಲೋಕವಿದು. ಈ ಶ್ಲೋಕಗಳ ಭಾವ ಹೀಗಿದೆ– ಯೋಗಿ ಮೊದಲು ವೇದಾಧ್ಯಯನ, ನಂತರ ಯಾಗಾನುಷ್ಠಾನ, ಇವೆರಡೂ ಮುಗಿದ ನಂತರ ಕರ್ಮಗಳನ್ನು ಬಿಡುತ್ತಾನೆ. ನಂತರ ಜ್ಞಾನ ಪ್ರಾಪ್ತಿಯಾಗುತ್ತದೆ. ಇದು ಮೋಕ್ಷಪ್ರಾಪ್ತಿಗಾಗಿ ಇರುವ ಒಂದು ನಿಯಮಬದ್ಧವಾದ ಕ್ರಮ. ಅನೇಕ ಜನ್ಮಗಳಲ್ಲಿ ಬೆಸೆದುಕೊಂಡ ಸಂಸಾರಬಂಧದಿಂದ ಉಂಟಾಗುವ ಪಾಪಗಳು ನಾಶವಾಗುವವರೆಗೂ ಬುದ್ಧಿ ಭಗವಂತನೆಡೆಗೆ ಹೋಗುವುದಿಲ್ಲ. ಕೆಲವು ಸಾವಿರ ಜನ್ಮಗಳ ಹಿಂದೆ ಮಾಡಿದ ತಪಸ್ಸು, ಜ್ಞಾನ, ಮತ್ತು ಸಮಾಧಿಗಳ ಮೂಲಕ ಪಾಪ ನಾಶವಾದಾಗ ಮಾತ್ರ ಶ್ರೀಕೃಷ್ಣಭಕ್ತಿ ಉಂಟಾಗುತ್ತದೆ. ಪಾಪಕರ್ಮಗಳಿಂದ ಉಂಟಾದ ಸಂಸ್ಕಾರವೇ ಮುಕ್ತಿಗೆ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಆದ್ದರಿಂದ ಅಂತಹಾ ಸಂಸ್ಕಾರಗಳನ್ನು ಹತ್ತಿರಕ್ಕೆ ಸೇರಿಸಬಾರದು. ಸುವರ್ಣಾದಿ ದಾನಗಳು, ಪವಿತ್ರ ತೀರ್ಥಗಳಲ್ಲಿ ಸ್ನಾನಗಳು ಮೊದಲಾದ ಪುಣ್ಯಕರ್ಮಗಳಿಂದಾಗಿ ಕಷ್ಟಗಳು ಕೊನೆಗಾಣುತ್ತವೆ. ದೈವಾರಾಧನೆ, ಗುರುಸೇವೆ, ವೇದ–ಶಾಸ್ತ್ರಗಳ ಶ್ರವಣ ಮೊದಲಾದವುಗಳಿಂದಲೂ ಪಾಪಗಳು ದೂರವಾಗುತ್ತವೆ–ಎಂದು ಇದರ ಅರ್ಥ.

ಈ ಪ್ರಥಮಾಧ್ಯಾಯ ಭಾಷ್ಯದಲ್ಲಿ (ಪುಟ–1123–1124) ಲಿಂಗಪುರಾಣಕ್ಕೆ ಸಂಬಂಧಿಸಿದ ಕಾಲಕೂಟೋಪಾಖ್ಯಾನದಲ್ಲಿನ ಶ್ಲೋಕಗಳು ಈ ರೀತಿಯಾಗಿವೆ.

**ಜ್ಞಾನೇನೈತೇನ ವಿಪ್ರಸ್ಯ ತ್ಯಕ್ತಸಂಗಸ್ಯ ದೇಹಿನಃ**
**ಕರ್ತವ್ಯಂ ನಾಸ್ತಿ ವಿಪ್ರೇಂದ್ರಾಃ ! ಅಸ್ತಿ ಚೇತ್ತತ್ತ್ವವಿನ್ನ ಚ**
**ಇಹ ಲೋಕೇ ಪರೇ ಚೈವ ಕರ್ತವ್ಯಂ ನಾಸ್ತಿ ತಸ್ಯ ವೈ,**
**ಜೀವನ್ಮುಕ್ತೋ ಯತಸ್ತು ಸ್ಯಾದ್ ಬ್ರಹ್ಮವಿತ್ಪರಮಾರ್ಥತಃ,**
**ಜ್ಞಾನಾಭ್ಯಾಸರತೋ ನಿತ್ಯಂ ವಿರಕ್ತೋ ಹ್ಯರ್ಥವಿತ್ಸ್ವಯಮ್**
**ಕರ್ತವ್ಯಭಾವಮುತ್ಸೃಜ್ಯ ಜ್ಞಾನಮೇವಾಧಿಗಚ್ಛತಿ.**
**ವರ್ಣಾಶ್ರಮಾಭಿಮಾನೀ ಯಸ್ತ್ಯಕ್ತ್ವಾ ಜ್ಞಾನಂ ದ್ವಿಜೋತ್ತಮಾಃ,**
**ಅನ್ಯತ್ರ ರಮತೇ ಮೂಢಃ ಸೋಽಜ್ಞಾನೀ ನಾತ್ರ ಸಂಶಯಃ**
**ಕ್ರೋಧೋ ಭಯಂ ತತೋ ಲೋಭೋ ಮೋಹೋ ಭೇದೋ ಮದಸ್ತಮಃ.**
**ಧರ್ಮಾಧರ್ಮೌ ಚ ತೇಷಾಂ ಹಿ ತದ್ವಶಾಚ್ಚ ತದನುಗ್ರಹಃ**
**ಶರೀರೇ ಸತಿ ವೈ ಕ್ಲೇಶಃ ಸೋಽವಿದ್ಯಾಂ ಸಂತ್ಯಜೇತ್ತತಃ**
**ಅವಿದ್ಯಾಂ ವಿದ್ಯಯಾ ಹಿತ್ವಾ ಸ್ಥಿತಸ್ತಸ್ಯೈವೇಹ ಯೋಗಿನಃ**
**ಕ್ರೋಧಾದ್ಯಾ ನಾಶಮಾಯಾಂತಿ ಧರ್ಮಾಧರ್ಮೌ ಚ ನಶ್ಯತಃ**
**ತತ್ ಕ್ಷಯಾಚ್ಚ ಶರೀರೇಣ ನ ಪುನಃ ಸಂಪ್ರಯುಜ್ಯತೇ,**
**ಸ ಏವ ಮುಕ್ತಃ ಸಂಸಾರಾದ್ದುಃಖತ್ರಯವಿವರ್ಜಿತಃ** [1]

**ಮಹೇಶ್ವರನು ಈ ರೀತಿ ಹೇಳುತ್ತಿದ್ದಾನೆ–** "ಎಲೈ ಬ್ರಾಹ್ಮಣೋತ್ತಮರೇ! ಜ್ಞಾನದಿಂದಾಗಿ ಮಾನವನು ಸಂಗರಹಿತನಾಗುತ್ತಾನೆ. ಅಂತಹಾ ಸಂಗರಹಿತನಿಗೆ ಕರ್ತವ್ಯಗಳು ಇರುವುದಿಲ್ಲ. ಒಂದು ವೇಳೆ ಕರ್ತವ್ಯಗಳು ಇದೆ ಎಂದರೆ ಆತ ತತ್ತ್ವವನ್ನು ತಿಳಿಯದವನಾಗುತ್ತಾನೆ. ಸಂಗರಹಿತನಿಗೆ ಇಹ–ಪರಗಳಲ್ಲಿ ಕರ್ತವ್ಯಗಳು ಇರುವುದಿಲ್ಲ. ನಿಜ ಹೇಳಬೇಕೆಂದರೆ ಬ್ರಹ್ಮತತ್ತ್ವವನ್ನು ತಿಳಿದುಕೊಂಡವನು ಜೀವನ್ಮುಕ್ತನಾಗುತ್ತಾನೆ.

---

1. ಲಿಂಗಪುರಾಣ–1–86–105–113

ಪರಮಾತ್ಮತತ್ತ್ವವನ್ನು ತಿಳಿದುಕೊಂಡವನು ವಿರಕ್ತನಾಗಿ ಕರ್ತವ್ಯದ ಬಗೆಗೆ ಯೋಚಿಸದೇ ಜ್ಞಾನದತ್ತಲೇ ತನ್ನ ದೃಷ್ಟಿಯನ್ನು ನೆಟ್ಟಿರುತ್ತಾನೆ. ವರ್ಣಾಶ್ರಮಗಳ ಬಗೆಗೆ ಆಸಕ್ತಿ ಹೊಂದಿದವನು ಇತರ ವಿಷಯಗಳಲ್ಲಿ ದೃಷ್ಟಿನೆಟ್ಟರೆ ಆತ ಮೂರ್ಖನೆನಿಸಿಕೊಳ್ಳುತ್ತಾನೆ ಇದು ನಿಶ್ಚಯ. ಮಾತು. ಕಾಮಕ್ರೋಧಗಳೆಂಬ ಅರಿಷಡ್ವರ್ಗಗಳಿಗೆ ಒಳಗಾದವನು ಮತ್ತೆ ಮತ್ತೆ ಜನಿಸುತ್ತಾನೆ. ಶರೀರವಿದೆ ಎಂದರೆ ಕಷ್ಟಗಳು ತಪ್ಪಿದ್ದಲ್ಲ. ಆದ್ದರಿಂದ ವಿದ್ಯೆಯ ಮೂಲಕ ಅವಿದ್ಯೆಯನ್ನು ತೊಲಗಿಸಬೇಕು. ಅಂತಹವನು ಯೋಗಿ ಎಂದು ಕರೆಯಲ್ಪಡುತ್ತಾನೆ. ಕಾಮಕ್ರೋಧಗಳೆಂಬ ಭಾವನೆಗಳು ಯೋಗಿಯ ಬಳಿಗೆ ಸುಳಿಯುವುದಿಲ್ಲ. ಅವುಗಳು ನಶಿಸಿದಾಗ ಶಾರೀರಿಕ ಸಂಬಂಧಗಳು ಇಲ್ಲದವನಾಗಿ ಕಷ್ಟಗಳಿಂದ ಮುಕ್ತನಾಗುತ್ತಾನೆಂದು ಇದರ ಅರ್ಥ. ಈ ಶ್ಲೋಕಗಳ ನಂತರ ಶಿವಧರ್ಮೋತ್ತರಪುರಾಣದಲ್ಲಿನ ಎರಡು ಶ್ಲೋಕಗಳನ್ನು ಶಂಕರಾಚಾರ್ಯರು ಉದಹರಿಸಿದ್ದಾರೆ. (ಪುಟ–1124)

**ಜ್ಞಾನಾಮೃತೇನ ತೃಪ್ತಸ್ಯ ಕೃತಕೃತ್ಯಸ್ಯ ಯೋಗಿನಃ**
**ನೈವಾಸ್ತಿ ಕಿಂಚಿತ್ಕರ್ತವ್ಯಮಸ್ತಿ ಚೇನ್ನ ಸ ತತ್ತ್ವವಿತ್,**
**ಲೋಕದ್ವಯೇಽಪಿ ಕರ್ತವ್ಯಂ ಕಿಂಚಿದಸ್ಯ ನ ವಿದ್ಯತೇ,**
**ಇಹೈವ ಸ ವಿಮುಕ್ತಃ ಸ್ಯಾತ್ ಸಂಪೂರ್ಣಃ ಸಮದರ್ಶನಃ** [1]

ಮೇಲಿನ ಎರಡೂ ಶ್ಲೋಕಗಳಲ್ಲಿ ಕೂಡಾ ಇತರ ಶ್ಲೋಕಗಳಂತೆ ಜ್ಞಾನಮಹತ್ವ ಬೋಧನೆಗಳಿವೆ. ಯೋಗಿ ಜ್ಞಾನಮೃತದದಿಂದ ತೃಪ್ತನಾಗಿ ಕೃತಕೃತ್ಯನಾಗುತ್ತಾನೆ. ಅವನಿಗೆ ಕರ್ತವ್ಯಗಳ್ಯಾವುವೂ ಇರುವುದಿಲ್ಲ. ಇದ್ದರೆ ತತ್ತ್ವವೇತ್ತನಾಗುವದಿಲ್ಲ. ಇಹಲೋಕದಲ್ಲಾಗಲೀ, ಪರಲೋಕದಲ್ಲಾಗಲಿ ಕರ್ತವ್ಯರಹಿತನಾಗಿ, ಪರಿಪೂರ್ಣನಾಗಿ ವಿಮುಕ್ತಿಯನ್ನು ಹೊಂದಬಲ್ಲನೆಂದು ಇದರ ಅರ್ಥ. ಈ ಅಂಶವನ್ನು ಧೃಡೀಕರಿಸುವಂತಹಾ ಲಿಂಗಪುರಾಣ ವಚನಗಳು ಹೀಗಿವೆ–

**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ**
**ಜ್ಞಾನಿನಃ ಸರ್ವಕರ್ಮಾಣಿ ಜೀರ್ಯಂತೇ ನಾತ್ರ ಸಂಶಯಃ**
**ಕ್ರೀಡನ್ನಪಿ ನ ಲಿಪ್ಯೇತ ಪಾಪೈರ್ನಾನಾವಿಧೈರಪಿ** [2]

ಜ್ಞಾನವೆಂಬ ಅಗ್ನಿ ಸಕಲ ಕರ್ಮಗಳನ್ನು ಭಸ್ಮ ಮಾಡುತ್ತದೆ. ಯಾವ ವಿಧವಾದ ಪಾಪವೂ ಜ್ಞಾನಿಗೆ ಅಂಟುವುದಿಲ್ಲ ಎಂದು ಇದರ ಅರ್ಥ. ಇದೇ ಅಭಿಪ್ರಾಯವನ್ನು ನೀಡುವ ಶಿವಧರ್ಮೋತ್ತರ ಪುರಾಣದಲ್ಲಿನ ಮತ್ತಷ್ಟು ವಚನಗಳನ್ನು ಇಲ್ಲಿ ನೋಡಬಹುದು– (ಪುಟ–1126–1127)

(ಈಗ ಲಭ್ಯವಾಗುತ್ತಿರುವ ಪುರಾಣಪ್ರತಿಗಳಲ್ಲಿ ಈ ಶ್ಲೋಕಗಳು ಕಂಡುಬರುತ್ತಿಲ್ಲ)

**ತಸ್ಮಾದ್ ಜ್ಞಾನಾಸಿನಾ ತೂರ್ಣಮಶೇಷಂ ಕರ್ಮಬಂಧನಮ್**
**ಕಾಮಾಕಾಮಕೃತಂ ಛಿತ್ತ್ವಾ ಶುದ್ಧಶ್ಚಾತ್ಮನಿ ತಿಷ್ಠತಿ**
**ಯಥಾ ವಹ್ನಿರ್ಮಹಾನ್ ದೀಪ್ತಃ ಶುಷ್ಕಮಾರ್ದ್ರಂ ಚ ನಿರ್ದಹೇತ್**
**ತಥಾ ಶುಭಾಶುಭಂ ಕರ್ಮ ಜ್ಞಾನಾಗ್ನಿರ್ದಹತೇ ಕ್ಷಣಾತ್**
**ಪದ್ಮಪತ್ರಂ ಯಥಾ ತೋಯೈಃ ಸ್ವಸ್ಥೈರಪಿ ನ ಲಿಪ್ಯತೇ**
**ಶಬ್ದಾದಿವಿಷಯಾಂಭೋಭಿಸ್ತದ್ವದ್ ಜ್ಞಾನೀ ನ ಲಿಪ್ಯತೇ**

1. ಶಿವಧರ್ಮೋತ್ತರಪುರಾಣ 7–22–11–51,52
2. ಲಿಂಗಪುರಾಣ 1–86–118–119

**ಯದ್ವನ್ಮಂತ್ರಬಲೋಪೇತಃ ಕ್ರೀಡನ್ ಸರ್ಪೈರ್ನ ದಂಶ್ಯತೇ**
**ಕ್ರೀಡನ್ನಪಿ ನ ಲಿಪ್ಯೇತ ತದ್ವದಿಂದ್ರಿಯಪನ್ನಗೈಃ**
**ಮಂತ್ರೌಷಧಿಬಲೈರ್ಯದ್ವಜ್ಜೀರ್ಯತೇ ಭಕ್ಷಿತಂ ವಿಷಮ್,**
**ತದ್ವತ್ಸರ್ವಾಣಿ ಪಾಪಾನಿ ಜೀರ್ಯಂತೇ ಜ್ಞಾನಿನಃ ಕ್ಷಣಾತ್**

ಯೋಗಿಯಾದವನು ಬಯಸಿ ಅಥವಾ ಬಯಸದೇ ಇದ್ದರು ಗಂಟುಬಿದ್ದಿರುವ ಕರ್ಮಬಂಧಗಳನ್ನು ಜ್ಞಾನವೆಂಬ ಖಡ್ಗದಿಂದ ತುಂಡುತುಂಡಾಗಿ ಕತ್ತರಿಸಿ ಪರಿಶುದ್ಧನಾಗಿ ಆತ್ಮಚಿಂತನೆ ಮಾಡುತ್ತಾನೆ. ಭಗಭಗನೆ ಉರಿಯುತ್ತಿರುವ ಅಗ್ನಿಯು ಒಣಗಿದ ಕಟ್ಟಿಗೆಗಳನ್ನೇ ಅಲ್ಲದೇ ಹಸಿಯಾಗಿರುವ ಕಟ್ಟಿಗೆಗಳನ್ನೂ ಸುಡುತ್ತದೆ. ಹಾಗೆಯೇ ಅಗ್ನಿಯು ಶುಭಕರ್ಮಗಳನ್ನು ಮತ್ತು ಅಶುಭಕರ್ಮಗಳನ್ನು ಎರಡನ್ನೂ ಒಂದೇ ರೀತಿಯಲ್ಲಿ ದಹಿಸಬಲ್ಲದು. ತಾವರೆಯ ಎಲೆಗಳು ತಮ್ಮ ಮೇಲೆ ಇರುವ ನೀರಿನ ಬಿಂದುವುಗಳನೊಂದಿಗೆ ಅಂಟದೇ ಇರುವ ರೀತಿಯಲ್ಲಿ ಜ್ಞಾನಿಗೆ ಲೌಕಿಕವಾದ ಯಾವ ವಿಷಯಗಳೂ ಮನಸ್ಸಿಗೆ ನಾಟುವುದಿಲ್ಲ. ಸರ್ಪಮಂತ್ರ ತಿಳಿದವನು ಎಲ್ಲಾ ಸಮಯದಲ್ಲೂ ಹಾವುಗಳ ಜೋತೆಗೆ ಇದ್ದರೂ ಅವು ಅವನನ್ನು ಕಚ್ಚುವುದಿಲ್ಲ. ಹಾಗೆಯೇ ಇಂದ್ರಿಯಗಳೆಂಬ ಸರ್ಪಗಳು ಜ್ಞಾನಿಯನ್ನು ಏನೂ ಮಾಡಲಾರವು. ವಿಷವನ್ನು ತಿಂದವನಿಗೆ ಮಂತ್ರಬಲದಿಂದಾಗಲೀ, ಔಷಧಗಳ ಬಲದಿಂದಾಗಲೀ ಆ ವಿಷವು ಇಳಿದುಹೋಗುತ್ತವೆ. ಹಾಗೆಯೇ ಜ್ಞಾನಿಗೆ ಪಾಪಗಳೆಲ್ಲವೂ ಕ್ಷಣದಲ್ಲೇ ನಾಶವಾಗುತ್ತವೆ ಎಂದು ಇದರ ಸಾರಾಂಶ.

ಈ ಶ್ವೇತಾಶ್ವತರೋಪನಿಷತ್ತಿನಲ್ಲಿ ಪ್ರಥಮಾಧ್ಯಾಯಭಾಷ್ಯದಲ್ಲಿ (ಪುಟ–1133–1135) ಕೆಲವು ಪುರಾಣಶ್ಲೋಕಗಳು–

**ಧರ್ಮಾಧರ್ಮೌ ಜನ್ಮಮೃತ್ಯೂ ಸುಖದುಃಖೇಷು ಕಲ್ಪನಾ,**
**ವರ್ಣಾಶ್ರಮಾಸ್ತಥಾ ವಾಸಃ ಸ್ವರ್ಗೋ ನರಕ ಏವ ಚ**

ಎಂಬ ಶ್ಲೋಕದಿಂದ ಆರಂಭಿಸಿ,

**ಕೌಮಾರತಾರುಣ್ಯಜರಾವಿಯೋಗಸಂಯೋಗಭೋಗಾನಶನವ್ರತಾನಿ**
**ಇತೀದಮೀದೃಗ್ವಿದಯಂ ನಿಧಾಯ ತೂಷ್ಣೀಮಾಸೀನಃ ಸುಮತಿಂ ವಿವಿದ್ಧಿ**

ಶ್ರೀಭಗವತ್ಪಾದರು , "ಬ್ರಹ್ಮಸತ್ಯಂ ಜಗನ್ಮಿಥ್ಯಾ"ಎಂಬ ವೇದಾಂತಸಿದ್ಧಾಂತವನ್ನು ಸ್ಥಿರೀಕರಿಸಿದ್ದಾರೆ. ಧರ್ಮ–ಅಧರ್ಮ, ಹುಟ್ಟು–ಸಾವು, ಸುಖ–ದುಃಖ , ವರ್ಣಾಶ್ರಮಗಳು, ಸ್ವರ್ಗ ನರಕ ಎಂಬ ಅಂಶಗಳ್ಯಾವುವೂ ಯೋಗಿಗೆ ಅನ್ವಯಿಸುವುದಿಲ್ಲ. ಬಾಲ್ಯ, ಯೌವನ, ವೃದ್ಧಾಪ್ಯ, ಸಂಯೋಗ, ವಿಯೋಗ, ಭೋಗ, ಉಪವಾಸಗಳು, ವ್ರತಗಳು –ಇವು ಪ್ರಕೃತಿ ವಿಕಾರಗಳು, ಎಂದು ಭಾವಿಸಿರುವ ಯೋಗಿ ಮೌನವಾಗಿರುತ್ತಾನೆಂದು ಇದರ ಅರ್ಥ. (ಈಗ ಲಭ್ಯವಾಗುತ್ತಿರುವ ಪುರಾಣಪ್ರತಿಗಳಲ್ಲಿ ಈ ಶ್ಲೋಕಗಳು ಕಂಡುಬರುತ್ತಿಲ್ಲ)

ಹೀಗೇ ಈ ಸಿದ್ಧಾಂತಕ್ಕೆ ಅನುಕೂಲಕರವಾದ ವಿಷ್ಣುಧರ್ಮೋತ್ತರ ಪುರಾಣದಲ್ಲಿ

**ಅನಾದಿಸಂಬಂಧವತ್ಯಾ ಕ್ಷೇತ್ರಜ್ಞೋಽಯಮವಿದ್ಯಯಾ**
**ಯುಕ್ತಃ ಪಶ್ಯತಿ ಭೇದೇನ ಬ್ರಹ್ಮ ತತ್ತ್ವಾತ್ಮನಿ ಸ್ಥಿತಮ್॥1॥**

ಎಂಬ ಶ್ಲೋಕದಿಂದ ಆರಂಭಿಸಿ(ಪುಟ 1136–1137)

1. ವಿಷ್ಣುಪುರಾಣ– 96–13

**ಆತ್ಮಾಕ್ಷೇತ್ರಜ್ಞ ಸಂಜ್ಞೋ ಹಿ ಸಂಯುಕ್ತಃ ಪ್ರಾಕೃತೈರ್ಗುಣೈಃ**
**ತೈರೇವ ವಿಗತಃ ಶುದ್ಧಃ ಪರಮಾತ್ಮಾ ನಿಗದ್ಯತೇ** [1]

ಇವೇ ಮೊದಲಾದ ಹದಿನಾಲ್ಕು ಶ್ಲೋಕಗಳನ್ನು ಉದಹರಿಸಿದ್ದಾರೆ. ಸಂಸಾರಿಯಾದವನು ತನ್ನಲ್ಲಿ ಇರುವ ಅವಿದ್ಯೆದಿಂದಾಗಿ ಜೀವ–ಬ್ರಹ್ಮರನ್ನು ಭೇದ ದೃಷ್ಟಿಯಿಂದ ನೋಡುತ್ತಾನೆ. ಕ್ಷೇತ್ರಜ್ಞ ಎಂದು ಕರೆಸಿಕೊಳ್ಳುವ ಜೀವನು ಲೌಕಿಕ ವಾಸನೆಗಳಿಂದ ಕೂಡಿರುತ್ತಾನೆ. ಅವನು ಅಂತಹಾ ವಾಸನೆಗಳಿಗೆ ದೂರವಾದರೆ ಪರಮಾತ್ಮನಾಗಬಲ್ಲನೆಂದು ಈ ಶ್ಲೋಕಗಳ ಅರ್ಥ. ನಂತರ ಇದೇ ಜಗನ್ಮಿಥ್ಯಾತತ್ತ್ವಕ್ಕೆ ಪ್ರಮಾಣ ಪೂರಕವಾಗಿರುವ ವಿಷ್ಣುಪುರಾಣದಲ್ಲಿ

**ಪರಮಾತ್ಮ ತ್ವಮೇವೈಕೋ ನಾನ್ಯೋಽಸ್ತಿ ಜಗತಃ ಪತೇ,**
**ತವೈಷ ಮಹಿಮ ಯೇನ ವ್ಯಾಪ್ತಮೇತಚ್ಚರಾಚರಮ್** [2]

ಈ ಶ್ಲೋಕದಿಂದ ಪ್ರಾರಂಭಿಸಿ (ಪುಟ– 1138–1142)

**ಇತೀರಿತಸ್ತೇನ ಸ ರಾಜವರ್ಯಸ್ತತ್ಯಾಜ ಪರಮಾರ್ಥದೃಷ್ಟಿಃ**
**ಸ ಚಾಪಿ ಜಾತಿಸ್ಮರಣಾಪ್ತಭೋದಸ್ತತ್ರೈವ ಜನ್ಮನ್ಯಪವರ್ಗಮಾಪ** [3]

ವರೆಗೂ ಮೂವತ್ತು ಶ್ಲೋಕಗಳನ್ನು ವಿವರಿಸಿದ್ದಾರೆ. "ಓ ಜಗದ್ರಕ್ಷಕನೇ! ನೀನು ಒಬ್ಬನೇ ಪರಮಾತ್ಮ. ನಿನಗಿಂತಲೂ ಮಹತ್ತರವಾದದ್ದು ಮತ್ತೊಂದು ಇಲ್ಲ. ಈ ಚರಾಚರಜಗತ್ತು ನಿನ್ನ ಮಹಿಮೆಯಿಂದಲೇ ತುಂಬಿದೆ," ಇಂತಹಾ ಅವಧೂತರ ಮಾತನ್ನು ಕೇಳಿದ ಸೌವೀರದೇಶದ ರಾಜನೊಬ್ಬನು ಪರಮಾರ್ಥದೃಷ್ಟಿಯನ್ನು ಹೊಂದಿದವನಾಗಿ, ಜೀವೇಶ್ವರರಲ್ಲಿ ಭೇದವಿಲ್ಲವೆಂದು ಅರಿತುಕೊಂಡ. ಅವನೊಂದಿಗೆ ಅವನ ಪಂಡಿತನೂ ತತ್ತ್ವಜ್ಞಾನದಿಂದಾಗಿ ಮೋಕ್ಷವನ್ನು ಹೊಂದಿದನೆಂದು ತಿಳಿಸುತ್ತಾರೆ. ಹಾಗೆಯೇ ಲಿಂಗಪುರಾಣದಲ್ಲಿನ ಐದು ಶ್ಲೋಕಗಳೊಂದಿಗೆ ಪರಾಶರಿಂದ ರಚಿಸಲ್ಪಟ್ಟ ಎಂಟು ಶ್ಲೋಕಗಳನ್ನೂ ಭಗವತ್ಪಾದರು ತಿಳಿಸಿದ್ದಾರೆ. (ಪುಟ– 1142–1144)

ಎಲ್ಲದರಲ್ಲೂ ಎಲ್ಲೆಡೆಯಲ್ಲೂ ಏಕತೆಯನ್ನು ನೋಡಬೇಕು. ಭೇದಬುದ್ಧಿಯು ಸರಿಯಲ್ಲವೆಂದು ನಿರೂಪಿಸುವುದಕ್ಕೆ ಸಿದ್ಧರಾದ ಶಂಕರಾಚಾರ್ಯರು ಇದಕ್ಕೆ ಪ್ರಮಾಣ ರೂಪವಾಗಿ ವಿಷ್ಣುಪುರಾಣದಲ್ಲಿನ ವಚನಗಳನ್ನು ಸ್ವೀಕರಿಸಿದರು(ಪುಟ– 1153) ಈ ವಚನಗಳು ಈ ರೀತಿ ಇವೆ–

**ಯದೇತದ್ದೃಶ್ಯತೇ ಮೂರ್ತಮೇತದ್ ಜ್ಞಾನಾತ್ಮನಸ್ತವ,**
**ಭ್ರಾಂತಿಜ್ಞಾನೇನ ಪಶ್ಯಂತಿ ಜಗದ್ರೂಪಮಯೋಗಿನಃ**[4]

**ಯೇ ತು ಜ್ಞಾನವಿದಃ ಶುದ್ಧಚೇತಸಸ್ತೇಽಖಿಲಂ ಜಗತ್,**
**ಜ್ಞಾನಾತ್ಮಕಂ ಪ್ರಪಶ್ಯಂತಿ ತ್ವದ್ರೂಪಂ ಪಾರಮೇಶ್ವರಮ್** [5]

**ನಿದಾಘೋಽಪ್ಯುಪದೇಶೇನ ತೇನಾದ್ವೈತಪರೋಽಭವತ್**
**ಸರ್ವಭೂತಾನ್ಯಶೇಷೇಣ ದದರ್ಶ ಸ ತದಾತ್ಮನಃ**
**ತಥಾ ಬ್ರಹ್ಮ ತತೋ ಮುಕ್ತಿಮವಾಪ ಪರಮಾಂ ದ್ವಿಜಃ** [7]

---

1. ವಿಷ್ಣುಧರ್ಮಪುರಾಣ– 100–61
2. ವಿಷ್ಣುಪುರಾಣ –1–4–38
3. ವಿಷ್ಣುಪುರಾಣ–2–16–24
4. ವಿಷ್ಣುಪುರಾಣ–1–4–39
5. ವಿಷ್ಣುಪುರಾಣ–1–4–41
6. ವಿಷ್ಣುಪುರಾಣ –2–16–19
7. ವಿಷ್ಣುಪುರಾಣ–2–16–20

"ಈ ಲೋಕವೆಲ್ಲಾ ಜ್ಞಾನಸ್ವರೂಪನಾದ ನಿನ್ನ ರೂಪವೇ ತುಂಬಿದೆ. ಅಜ್ಞಾನಿಗಳು ಭ್ರಾಂತಿಯಿಂದಾಗಿ ಇದನ್ನು ಜಗತ್ತು ಎಂದು ಭಾವಿಸುತ್ತಾರೆ. ಜ್ಞಾನಿಗಳು ಮಾತ್ರ ಜ್ಞಾನಸ್ವರೂಪನಾದ ನಿನ್ನ ಸ್ವರೂಪವೆಂದು ಭಾವಿಸುತ್ತಾರೆ."ಹೀಗೆ ಉಪದೇಶಗಳಿಂದಾಗಿ ನಿದಾಘನು ಸಕಲ ಪ್ರಾಣಿಗಳನ್ನು ಪರಮಾತ್ಮ ಎಂದು ಭಾವಿಸಿದ. ಆದ್ದರಿಂದಾಗಿ ಅವನಿಗೆ ಬ್ರಹ್ಮಸಾಕ್ಷಾತ್ಕಾರ ದೊರೆಯಿತು. ಸಮಸ್ತವನ್ನು ಆತ್ಮ ಸ್ವರೂಪವೆಂದು ತಿಳಿದು ಆತ್ಮಕ್ಕಿಂತಲೂ ಬೇರೇ ಏನೂ ಇಲ್ಲ– ಎಂಬ ಅದ್ವೈತದ ಭಾವನೆಯನ್ನು ಹೊಂದಿದವನನ್ನು "ಬ್ರಹ್ಮಭೂತ"ಎನ್ನುತ್ತಾರೆ ಎಂದು ವೇದ–ಶಾಸ್ತ್ರಗಳು ವಿವರಿಸುತ್ತಿವೆ.

ಭಗವಂತನು ಒಬ್ಬನೇ! ಆತನೇ ಬ್ರಹ್ಮ–ವಿಷ್ಣು–ಮಹೇಶ್ವರರೆಂಬ ಹೆಸರುಗಳಿಂದ ಕರೆಯಲ್ಪಡುತ್ತಿದ್ದಾನೆ. ಎಂದು ತಿಳಿಸುವ ವಿಷ್ಣುಪುರಾಣವಚನ ಈ ಶ್ವೇತಾಶ್ವತರೋಪನಿಷದ್ಭಾಷ್ಯದಲ್ಲಿ ಈ ರೀತಿ ತಿಳಿಸಿದ್ದಾರೆ(ಪುಟ–1166)

**ಸರ್ಗಸ್ಥಿತ್ಯಂತಕರಿಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್,**
**ನ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ** [1]

ತೃಪ್ತಿ ಎನ್ನುವುದು ಒಂಭತ್ತು ರೀತಿಯಲ್ಲಿರುತ್ತದೆಂದು ಹೇಳುತ್ತಾರೆ. ಲೌಕಿಕ ವಿಷಯಗಳು ಮನುಷ್ಯನನ್ನು ಆಸೆಗಳತ್ತ ನಡೆಸುತ್ತವೆ. ಭೋಗಗಳಲ್ಲಿ ಮನಸ್ಸುಳ್ಳವನಿಗೆ ತೃಪ್ತಿ ಸ್ವಲ್ಪವೂ ಇರುವುದಿಲ್ಲವೆಂದು, ಆದ್ದರಿಂದಲೇ ಕೋರಿಕೆಗಳಿಗೆ ಮನಸೋಲಬಾರದು ಎನ್ನುತ್ತಾ ಈ ವಿಷಯವನ್ನು ಶ್ರೀಮದ್ಭಾಗವತದಲ್ಲಿ ತಿಳಿಸಿದ್ದಾರೆ.(ಪುಟ–1176) ಭಾಗವತ ವಚನ–

**ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ**
**ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ** [2]

ಜೀವಾತ್ಮ–ಪರಮಾತ್ಮ ಬೇರೆ ಬೇರೆ ಅಲ್ಲವೆಂದು ತಿಳಿಸುವ ವಿಷ್ಣುಧರ್ಮೋತ್ತರ ಪುರಾಣೋಕ್ತಿಗಳಲ್ಲಿ ಶ್ರೀಶಂಕರರು (ಪುಟ–1184) ತಿಳಿಸಿದ್ದಾರೆ.

**ಪಶ್ಯತ್ಯಾತ್ಮಾನಮನ್ಯಂ ತು ಯಾವದ್ವೈ ಪರಮಾತ್ಮನಃ,**
**ತಾವತ್ಸಂಭ್ರಾಮ್ಯತೇ ಜಂತುರ್ಮೋಹಿತೋ ನಿಜಕರ್ಮಣಾ** [3]

**ಸಂಕ್ಷೀಣಶೇಷಕರ್ಮಾ ತು ಪರಂ ಬ್ರಹ್ಮ ಪ್ರಪಶ್ಯತಿ,**

**ಅಭೇದೇನಾತ್ಮನಃ ಶುದ್ಧಂ ಶುದ್ಧತ್ವಾದಕ್ಷಯೋ ಭವೇತ್** [4]

ತಾನು, ಪರಮಾತ್ಮ ಒಂದೇ ಅಲ್ಲವೆಂದು, ಇಬ್ಬರೂ ಬೇರೆ ಬೇರೆ ಎನ್ನುವಂತಿದ್ದರೆ ಆ ಭೇದದೃಷ್ಟಿ ಇರುವವರೆಗೂ ಜೀವನು ಕರ್ಮಗಳಿಗೆ ವಶನಾಗುತ್ತಾನೆ. ಈ ಕರ್ಮಬಂಧಗಳು ಕ್ಷೀಣಿಸಿದಾಗ ಪರಬ್ರಹ್ಮ ಸ್ವರೂಪನಾಗಬಲ್ಲ. ರಾಜಾ! ಜೀವಾತ್ಮ ಪರಮಾತ್ಮರ ಭೇದ ಅಜ್ಞಾನಕ್ಕೆ ಮೂಲ. ಈ ಅಜ್ಞಾನ ತೊಲಗಿದಾಗ ಜೀವನು ಪರಮಾತ್ಮನಾಗುತ್ತಾನೆ ಎಂದು ಪುರಾಣವಚನಗಳ ಸಾರವಾಗಿದೆ.

ಈ ಅಂಶಕ್ಕೆ ಸಂಬಂಧಿಸಿದಂತೆ ವಿಷ್ಣುಪುರಾಣೊಕ್ತಿಗಳು ಈ ರೀತಿ ಇವೆ(ಪುಟ– 1184–1192)

---

1. ವಿಷ್ಣುಪುರಾಣ –1–2–66
2. ಶ್ರೀಮದ್ಭಾಗವತ–9–19–14
3. ವಿಷ್ಣುಧರ್ಮ ಪುರಾಣ– 96–14
4. ವಿಷ್ಣುಪುರಾಣ–96–15
5. ವಿಷ್ಣುಪುರಾಣ–6–7–96

**ವಿಭೇದಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ,**
**ಆತ್ಮನೋ ಬ್ರಹ್ಮಣೋ ಭೇದಮಸಂತಂ ಕಃ ಕರಿಷ್ಯತಿ** [5]

**ಜ್ಞಾನಾತ್ಮಕಸ್ಯಾಮಲಸತ್ತ್ವರಾಶೇರಪೇತದೋಷಸ್ಯ ಸದಾ ಸ್ಫುಟಸ್ಯ**
**ಕಿಂ ವಾ ಜಗತ್ಯಸ್ತಿ ಸಮಸ್ತಪುಂಸಾಮಜ್ಞಾತಮಸ್ಯಾಸ್ತಿ ಹೃದಿ ಸ್ಥಿತಸ್ಯ** [1]

ಜೀವಾತ್ಮ–ಪರಮಾತ್ಮರ ನಡುವೆ ಭೇದವನ್ನು ಕಾಣುವ ಬುದ್ಧಿಗೆ ಕಾರಣವಾದ ಅಜ್ಞಾನವನ್ನು ಕಳೆದುಕೊಂಡರೆ ಈ ಭೇದಬುದ್ಧಿಗೆ ಅವಕಾಶವಿರುವುದಿಲ್ಲ –ಎಂದು ಮೇಲಿನ ಶ್ಲೋಕಗಳ ಅರ್ಥ.

ಧ್ಯಾನಫಲವನ್ನು ಮತ್ತು ಜ್ಞಾನಫಲವನ್ನು ವಿವರಿಸುವ ಸಮಯದಲ್ಲಿ ಶಂಕರಾಚಾರ್ಯರು ಶಿವಧರ್ಮೋತ್ತರ ಪುರಾಣದಲ್ಲಿನ ವಚನವನ್ನು ಪ್ರಮಾಣವಾಗಿ ತೋರಿಸಿದ್ದಾರೆ(ಪುಟ–1204)

**ಧ್ಯಾನಾದೈಶ್ವರ್ಯಮತುಲಮ್, ಐಶ್ವರ್ಯಾತ್ಸುಖಮುತ್ತಮಮ್,**
**ಜ್ಞಾನೇನ ತತ್ಪರಿತ್ಯಜ್ಯ ವಿದೇಹೋ ಮುಕ್ತಿಮಾಪ್ನುಯಾತ್**

ಧ್ಯಾನದಿಂದಾಗಿ ಅಪಾರವಾದ ಐಶ್ವಯ, ತದ್ವಾರ ಒಳ್ಳೆಯ ಲೌಕಿಕ ಸುಖ ಲಭಿಸುತ್ತದೆ. ಆದರೆ ಜ್ಞಾನದಿಂದಾಗಿ ದೇಹಾಭಿಮಾನ ತೊಲಗಿಹೋಗುತ್ತದೆ ಅದರಿಂದ ಮೋಕ್ಷ ಲಭಿಸುತ್ತದೆಂದು ಈ ವಚನದಲ್ಲಿ ತಿಳಿಸಲಾಗಿದೆ.(ಈಗ ಲಭ್ಯವಾಗುತ್ತಿರುವ ಪುರಾಣಗಳಲ್ಲಿ ಈ ಶ್ಲೋಕವು ಕಾಣುತ್ತಿಲ್ಲ)

ಯೋಗಿಯು ತನ್ನ ಸ್ವರೂಪವನ್ನು ಪೂರ್ತಿಯಾಗಿ ಯಾವಾಗ ತಿಳಿದುಕೊಳ್ಳುತ್ತಾನೋ, ಅಂದಿನಿಂದಲೇ ಆತ ಜೀವನ್ಮುಕ್ತನಾಗುತ್ತಾನೆಂಬ ಭಾವನೆಯನ್ನು ಬ್ರಹ್ಮಪುರಾಣದ ವಚನಗಳ ಮೂಲಕ ತಿಳಿಸಿದ್ದಾರೆ(ಪುಟ–1206)(ಈಗ ಲಭ್ಯವಾಗುತ್ತಿರುವ ಪುರಾಣಗಳಲ್ಲಿ ಈ ಶ್ಲೋಕ ಕಾಣುತ್ತಿಲ್ಲ)

**ಯಸ್ಮಿನ್ ಕಾಲೇ ಸ್ವಮಾತ್ಮಾನಂ ಯೋಗೀ ಜಾನಾತಿ ಕೇವಲಮ್**
**ತಸ್ಮಾತ್ಕಾಲಾತ್ ಸಮಾರಭ್ಯ ಜೀವನ್ಮುಕ್ತೋ ಭವೇದಸೌ**
**ಮೋಕ್ಷಸ್ಯ ನೈವ ಕಿಂಚಿತ್ ಸ್ಯಾದನ್ಯತ್ರ ಗಮನಂ ಕ್ವಚಿತ್**
**ಸ್ಥಾನಂ ಪರಾರ್ಥ್ಯಮಪರಂ ಯತ್ರ ಗಚ್ಛಂತಿ ಯೋಗಿನಃ**
**ಅಜ್ಞಾನಬಂಧಭೇದಸ್ತು ಮೋಕ್ಷೋ ಬ್ರಹ್ಮಲಯಸ್ತ್ವಿತಿ.**

ಯಾವಾಗ ಯೋಗಿಯು ಆತ್ಮವನ್ನು ಪರಿಶುದ್ಧವೆಂದು ಭಾವಿಸುತ್ತಾನೋ ಅಂದಿನಿಂದಲೂ ಆತ ಜೀವನ್ಮುಕ್ತನಾಗಬಲ್ಲ. ಶ್ರೇಷ್ಠವಾದ ಸ್ಥಾನದಲ್ಲಿ ಇರುವ ಯೋಗಿಗೆ ಮೋಕ್ಷಕ್ಕಿಂತಲೂ ವಿಭಿನ್ನವಾದ ಉತ್ತಮವಾದ ಸ್ಥಾನ ಮತ್ತೊಂದು ಇರುವುದಿಲ್ಲ. ಅಜ್ಞಾನದ ಕಾರಣದಿಂದಾಗಿ ಏರ್ಪಟ್ಟಿರುವ ಬಂಧಗಳನ್ನು ಕಳಚಿಕೊಂಡು ಬ್ರಹ್ಮನಲ್ಲಿ ಲೀನವಾಗುವುದೇ ಮೋಕ್ಷ ಎಂದು ಇದರ ಅರ್ಥ! (ಈಗ ಲಭ್ಯವಾಗುತ್ತಿರುವ ಪುರಾಣಗಳಲ್ಲಿ ಈ ಶ್ಲೋಕಗಳು ಕಂಡುಬರುತ್ತಿಲ್ಲ)

ಜೀವನ್ಮುಕ್ತನ ಸ್ವರೂಪವನ್ನು ಲಿಂಗಪುರಾಣದಲ್ಲಿ ಈರೀತಿ ಹೇಳಲ್ಪಟ್ಟಿದೆ(ಪುಟ–1206)

**ಇಹ ಲೋಕೇ ಪರೇ ಚೈವ ಕರ್ತವ್ಯಂ ನಾಸ್ತಿ ತಸ್ಯ ವೈ** [2]

**ಜೀವನ್ಮುಕ್ತೋ ಯತಸ್ತಸ್ಮಾದ್ ಬ್ರಹ್ಮವಿತ್ಪರಮಾರ್ಥತಃ** [3]

1. ವಿಷ್ಣುಪುರಾಣ–5–7–32 2. ಲಿಂಗಪುರಾಣ–1–86–106 3. ಲಿಂಗಪುರಾಣ–1–86–107

ಈ ಲೋಕದಲ್ಲಾಗಲೀ, ಇತರ ಲೋಕದಲ್ಲಾಗಲೀ, ಯಾರಿಗೆ ಕರ್ತವ್ಯವೆನ್ನುವುದು ಇರುವುದಿಲ್ಲವೋ ಆತನೇ ಜೀವನ್ಮುಕ್ತನು ಎನಿಸಿಕೊಳ್ಳುತ್ತಾನೆ. ಆತನೇ ಬ್ರಹ್ಮಜ್ಞಾನಿ. ಶಿವಧರ್ಮೋತ್ತರ ಪುರಾಣದಲ್ಲೂ ಈ ರೀತಿಯ ವಿವರಣೆ ಇದೆ(ಪುಟ–1206)

**ವಾಂಛತ್ಯಯೇಽಪಿ ಕರ್ತವ್ಯಂ ಕಿಂಚಿದಸ್ಯ ನ ವಿದ್ಯತೇ**
**ಇಹೈವ ಸ ವಿಮುಕ್ತಃ ಸ್ಯಾತ್ ಸಂಪೂರ್ಣಃ ಸಮದರ್ಶನಃ**

ಯಾವುದಾದರೂ ಬಯಕೆಗಳಿದ್ದರೆ ಅವೆಲ್ಲವೂ ನೆರವೇರಿದ ನಂತರ ಯೋಗಿಯಾದವನಿಗೆ ಕರ್ತವ್ಯಗಳೇನು ಇರುವುದಿಲ್ಲ. ಆದ್ದರಿಂದ ಆತ ಪರಿಪೂರ್ಣನಾಗಿ ಮೋಕ್ಷಕ್ಕೆ ಅರ್ಹನಾಗುತ್ತಾನೆ ಎಂದು ಈ ಮೇಲಿನ ಶ್ಲೋಕದ ಅರ್ಥವಾಗಿದೆ,(ಪ್ರಸ್ತುತ ಈಗ ದೊರೆಯುತ್ತಿರುವ ಪುರಾಣಗ್ರಂಥದಲ್ಲಿ ಈ ಶ್ಲೋಕವು ಕಾಣುತ್ತಿಲ್ಲ)

ಯೋಗಿಗಳ ಅಂತಃಸ್ಥಿತಿಯನ್ನು ವರ್ಣಿಸಿದ ಶಿವಧರ್ಮೋತ್ತರ ಪುರಾಣ ವಚನಗಳನ್ನು ಶ್ರೀಶಂಕರಾಚಾರ್ಯರು ಸ್ಮರಿಸಿದ್ದಾರೆ (ಪುಟ–1209)

**ಶಿವಮಾತ್ಮನಿ ಪಶ್ಯಂತಿ ಪ್ರತಿಮಾಸು ನ ಯೋಗಿನಃ**
**ಆತ್ಮಸ್ಥಂ ಯಃ ಪರಿತ್ಯಜ್ಯ ಬಹಿಃಸ್ಥಂ ಭಜೇತ್ ಶಿವಮ್**
**ಹಸ್ತಸ್ಥಂ ಪಿಂಡಮುತ್ಸೃಜ್ಯ ಲಿಹ್ಯಾತ್ಕೂರ್ಪರಮಾತ್ಮನಃ**
**ಸರ್ವತ್ರಾವಸ್ಥಿತಂ ಶಾಂತಂ ನ ಪಶ್ಯಂತೀಹ ಶಂಕರಮ್**
**ಜ್ಞಾನಚಕ್ಷುರ್ವಿಹೀನತ್ವಾದಂಧಃ ಸೂರ್ಯಂ ಯಥೋದಿತಮ್**
**ಆತ್ಮಸ್ಥಂ ಯೇ ನ ಪಶ್ಯಂತಿ ತೀರ್ಥೇ ಮಾರ್ಗಂತಿ ತೇ ಶಿವಮ್**
**ಆತ್ಮಸ್ಥಂ ತೀರ್ಥಮುತ್ಸೃಜ್ಯ ಬಹೀಸ್ತೀರ್ಥಾದಿ ಯೋ ವ್ರಜೇತ್**
**ಕರಸ್ಥಂ ಸ ಮಹಾರತ್ನಂ ತ್ಯಕ್ತ್ವಾ ಕಾಚಂ ವಿಮಾರ್ಗತಿ**

ಯೋಗಿಗಳು ಪರಮಾತ್ಮನನ್ನು ಪ್ರತಿಮೆಯಲ್ಲಿ ಅಲ್ಲದೇ ಆತ್ಮದಲ್ಲಿ ದರ್ಶಿಸುತ್ತಾರೆ. ತನ್ನಲ್ಲಿರುವ ಪರಮಾತ್ಮನನ್ನು ಬಿಟ್ಟು ಎಲ್ಲೋ ದೂರದಲ್ಲಿರುವುದನ್ನು ಪರಮಾತ್ಮ ಎಂದು ತಿಳಿದುಕೊಂಡವನು ಮೂರ್ಖನೆನಿಸಿಕೊಳ್ಳುತ್ತಾನೆ. ಲೇಹ್ಯವನ್ನು ಹತ್ತಿರದಲ್ಲಿರುವ ಅಂಗೈನಿಂದ ತೆಗೆದುಕೊಳ್ಳುತ್ತಾರಾಗಲೀ ಮೊಣಕೈನಿಂದ ತೆಗೆದುಕೊಳ್ಳುವುದಿಲ್ಲ ಅಲ್ಲವೇ! ಹಾಗೆಯೇ ಅಂಧನಾದವನು ಸೂರ್ಯನನ್ನು ಹೇಗೆ ನೋಡಲಾರನೋ ಅದೇವಿಧದಲ್ಲಿ ಮೂರ್ಖನು ಸರ್ವವ್ಯಾಪಿಯಾದ ಭಗವಂತನನ್ನು ನೋಡಲಾರ. ತನ್ನಲ್ಲಿನ ಪರಮಾತ್ಮನನ್ನು ದರ್ಶಿಸುವ ಭಾಗ್ಯವಿಲ್ಲದವರು ತೀರ್ಥಕ್ಷೇತ್ರಗಳಲ್ಲಿ ಆ ಪರಮಾತ್ಮನನ್ನು ಹುಡುಕುತ್ತಾರೆ. ಅಂಗೈನಲ್ಲಿರುವ ಅಮೂಲ್ಯವಾದ ರತ್ನದ ಬೆಲೆ ತಿಳಿಯದೇ ಅದನ್ನು ಕಣ್ಣೆತ್ತಿಯೂ ನೋಡದೇ ದೂರದಲ್ಲಿರುವ ಗಾಜಿನ ಚೂರನ್ನು ಹುಡುಕಲು ಹೋಗುತ್ತಾರೆ. ಇದು ಅಜ್ಞಾನಿಗಳ ಸ್ವಭಾವವೆಂದು ಈ ಶ್ಲೋಕಗಳ ಅರ್ಥ! (ಈಗ ಲಭ್ಯವಾಗುತ್ತಿರುವ ಪುರಾಣಗ್ರಂಥಗಳಲ್ಲಿ ಈ ಶ್ಲೋಕಗಳು ಕಾಣಸಿಗುವುದಿಲ್ಲ)

ಸಮಾಧಿ ಅಂದರೆ ಏನು? ಈ ಪ್ರಶ್ನೆಗೆ ಉತ್ತರವಾಗಿ ವಿಷ್ಣುಪುರಾಣ ಈ ರೀತಿಯಾಗಿ ವಿವರಿಸಿದೆ(ಪುಟ–1210)

**ತಸ್ಯೈವ ಕಲ್ಪನಾಹೀನಸ್ವರೂಪಗ್ರಹಣಂ ಹಿ ಯತ್**
**ಮನಸಾ ಧ್ಯಾನನಿಷ್ಪಾದ್ಯಂ ಸಮಾಧಿಃ ಸೋಽಭಿಧೀಯತೇ** [1]

ಧ್ಯಾನ ಮಾಡುವವನು, ಧ್ಯಾನ ಧ್ಯಾನಿಸಲ್ಪಡುವುದು– ಎಂಬ ಬೇಧಕಲ್ಪನೆಯನ್ನು ಮಾಡದೆ ಈ ಮೂರರಲ್ಲೂ ಧ್ಯಾನಿಸಲ್ಪಡುವುದನ್ನೇ (ಧ್ಯೇಯ) ಒಂದೇ ಎನ್ನುವ ಭಾವನೆ ಹುಟ್ಟಿದರೆ ಅದನ್ನೆ "ಸಮಾಧಿ" ಎನ್ನುತ್ತಾರೆ. ಎಂದು ಈ ಶ್ಲೋಕದ ಅರ್ಥವನ್ನು ವಿವರಿಸಿದ್ದಾರೆ.

1. ವಿಷ್ಣುಪುರಾಣ –6–7–92

ಭಗವಂತನೆಂದರೆ ಭಗವನ್ನು ಹೊಂದಿದವನು. ಭಗವೆಂದರೆ 1. ಸಮಗ್ರ ಐಶ್ವರ್ಯ 2.ಧರ್ಮ 3.ಯಶಸ್ಸು 4.ಸಂಪತ್ತು 5.ಜ್ಞಾನ 6.ವೈರಾಗ್ಯ ಇಂತಹಾ ಆರು ಅಂಶಗಳ ಸಮೂಹ. ಈ ವಿಷಯವನ್ನು ವಿಷ್ಣುಪುರಾಣದಲ್ಲಿ ಈ ರೀತಿ ತಿಳಿಸುತ್ತಿದ್ದಾರೆ – (ಪುಟ–1252)

**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ** [1]

"ಕಪಿಲೋಽಗಜಃ" ಎಂಬ ಪುರಾಣವಾಕ್ಯವನ್ನು ಆಧರಿಸಿ ಜ್ಞಾನಯೋಗಿಗಳಲ್ಲಿ ಪ್ರಥಮನು ಕಪಿಲ ಭಗವಾನನೆಂದು ಭಗವತ್ಪಾದರು ಕೆಲವು ಶ್ಲೋಕಗಳನ್ನು ಉದಾಹರಣೆಗೆ ನೀಡಿದ್ದಾರೆ. ಇವು ಯಾವ ಪುರಾಣದಲ್ಲಿವೆ ಎಂದು ಪರಿಶೀಲಿಸಬೇಕಾಗಿದೆ.

ಈ ರೀತಿ ಶ್ವೇತಾಶ್ವತರೋಪನಿಷತ್ತಿನಲ್ಲಿ ಅನೇಕಾನೇಕ ಪುರಾಣೋಕ್ತಿಗಳನ್ನು ಶ್ರೀಶಂಕರಾಚಾರ್ಯರು ನಮಗೆ ನೀಡಿದ್ದಾರೆ.

➢ ಬೃಹದಾರಣ್ಯಕೋಪನಿಷತ್ತು –ಪ್ರಥಮಾಧ್ಯಾಯದ ನಾಲ್ಕನೆಯ ಬ್ರಾಹ್ಮಣದಲ್ಲಿನ ಆರನೆಯ ಮಂತ್ರಭಾಷ್ಯದಲ್ಲಿ –"ಪುರಾಣೇ ಚ – ಬ್ರಹ್ಮವೃಕ್ಷಃ ಸನಾತನಃ"ಎಂಬ ಪಂಕ್ತಿಯಿದೆ. (ಪುಟ–189) ಸಂಸಾರವೃಕ್ಷವನ್ನು ವಿವರಿಸುವಾಗ ಈ ವಾಕ್ಯವು ಕಂಡುಬರುತ್ತದೆ. ಇಲ್ಲಿ ಪುರಾಣ ಪ್ರಾಮಾಣ್ಯವು ಸ್ಪಷ್ಟವಾಗುತ್ತದೆ.

ಕರ್ಮಸ್ವರೂಪವು ಅಜ್ಞಾನಮಯವಾಗಿದೆ, ವಿದ್ಯಾಸ್ವರೂಪವು ಜ್ಞಾನಮಯವೆಂದು ವ್ಯಾಸ ಮಹರ್ಷಿಗಳ ಮಾತನ್ನು ಕೆಲವರು ಕೇಳಿರುವುದಿಲ್ಲವೇನೊ ಎಂದು ಕರ್ಮ–ಜ್ಞಾನಗಳ ಭೇದವನ್ನು ಕೆಲವು ಶ್ಲೋಕಗಳ ಮೂಲಕ ಪ್ರಶ್ನೋತ್ತರ ರೂಪದಲ್ಲಿ ಭಾಷ್ಯದಲ್ಲಿ ವಿವರಿಸಿದ್ದಾರೆ(ಪುಟ–539–540)–ಈ ಶ್ಲೋಕಗಳು ಮಹಾಭಾರತದಲ್ಲಿವೆ.

**ಯದಿದಂ ವೇದವಚನಂ ಕುರು ಕರ್ಮ ತ್ಯಜೇತಿ ಚ**
**ಕಾಂ ಗತಿಂ ವಿದ್ಯಯಾ ಯಾಂತಿ ಕಾಂ ಚ ಗಚ್ಛಂತಿ ಕರ್ಮಣಾ** [2]

**ಏತದ್ವೈ ಶ್ರೋತುಮಿಚ್ಛಾಮಿ ತದ್ಭವಾನ್ ಪ್ರಬ್ರವೀತು, ಮೇ**
**ಏತಾವನ್ಯೋನ್ಯವೈರೂಪ್ಯೇ ವರ್ತೇತೇ ಪ್ರತಿಕೂಲತಃ** [3]

**ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ**
**ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ** [4]

"ಕರ್ಮಗಳನ್ನು ಮಾಡು" ಎಂದು ಮತ್ತು "ಕರ್ಮಗಳನ್ನು ಬಿಡು" ಎಂದು ವೇದ ಹೇಳುತ್ತಿದೆ. ವಿದ್ಯೆಯಿಂದ ಪ್ರಾಪ್ತವಾಗುವದೇನು? ಕರ್ಮದಿಂದ ಏನು ಲಭಿಸುತ್ತದೆ? ಈ ವಿಷಯವನ್ನು ತಿಳಿದುಕೊಳ್ಳಬಯಸಿದ್ದೇನೆ. ದಯವಿಟ್ಟು ಹೇಳು, ಕರ್ಮ ಮತ್ತು ಜ್ಞಾನ ಈ ಎರಡೂ ಪರಸ್ಪರ ವಿರುದ್ಧವಾದುವು ಅಲ್ಲವೇ? ಅದಕ್ಕೇ ಈ ಅನುಮಾನ ಉಂಟಾಗಿದೆ ಎಂದು ಪ್ರಶ್ನೆಯನ್ನು ಕೇಳಿದಾಗ, – ಕರ್ಮಗಳಿಂದ ಜೀವನು ಈ ಸಂಸಾರದಲ್ಲಿ ಬದ್ಧನಾಗುತ್ತಾನೆ. ಜ್ಞಾನದಿಂದ ಮುಕ್ತನಾಗುತ್ತಾನೆ. ಆದ್ದರಿಂದ ದೂರದೃಷ್ಟಿಯನ್ನು ಹೊಂದಿರುವ ಮಹಾತ್ಮರು ಕರ್ಮಗಳನ್ನು ಆಚರಿಸುವುದಿಲ್ಲ– ಎಂದು ಇದರ ಅರ್ಥ!

1. ವಿಷ್ಣುಪುರಾಣ – 6–5–74
2. The Mahabharata ವನ - 2-70
3. The Mahabharata ಶಾಂತಿ - 233-2
4. The Mahabharata ಶಾಂತಿ- 233-7

ನಾಲ್ಕನೆಯ ಅಧ್ಯಾಯ 4ನೆಯ ಬ್ರಾಹ್ಮಣದಲ್ಲಿನ ಒಂಭತ್ತನೆಯ ಮಂತ್ರಭಾಷ್ಯದಲ್ಲಿ (ಪುಟ–1073) ಶಾಂತಿಪರ್ವ ಶ್ಲೋಕ

**ಅಪುಣ್ಯಪುಣ್ಯೋಪರಮೇ ಯಂ ಪುನರ್ಭವನಿರ್ಭಯಾಃ,**
**ಶಾಂತಾಃ ಸನ್ನ್ಯಾಸಿನೋ ಯಾಂತಿ ತಸ್ಮೈ ಮೋಕ್ಷಾತ್ಮನೇ ನಮಃ** [1]

ಪಾಪಪುಣ್ಯಗಳು ಕಳೆದುಹೋದನಂತರ ಪುನರ್ಜನ್ಮಕ್ಕೆ ಭಯಪಡದೇ ಇದ್ದು, ಯಾವುದನ್ನು ಶಾಂತಿಚಿತ್ತರೂ, ಸನ್ಯಾಸಿಗಳು ಪಡೆಯುತ್ತಾರೋ ಅದನ್ನೇ ಮೋಕ್ಷವೆಂದು ಭಾವ.

ನಾಲ್ಕನೆಯ ಅಧ್ಯಾಯ 5ನೆಯ ಬ್ರಾಹ್ಮಣದಲ್ಲಿ(ಪುಟ–1153) ಶಾಂತಿಪರ್ವ ವಚನ–

**ತ್ಯಾಗ ಏವ ಹಿ ಸರ್ವೇಷಾಮುಕ್ತಾನಮಪಿ ಕರ್ಮಣಾಮ್**
**ವೈರಾಗ್ಯಂ ಪುನರೇತಸ್ಯ ಮೋಕ್ಷಸ್ಯ ಪರಮೋಽವಧಿಃ** [2]

ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮಗಳನ್ನೆಲ್ಲಾ ತ್ಯಜಿಸಬೇಕು. ವೈರಾಗ್ಯವೇ ಮೋಕ್ಷಕ್ಕೆ ಸೋಪಾನವೆಂದು ಹೇಳಲಾಗಿದೆ.

➢ ಛಾಂದಗ್ಯೋಪನಿಷತ್ತು– 5ನೆಯ ಅಧ್ಯಾಯದಲ್ಲಿನ ಹತ್ತನೆಯ ಖಂಡದಲ್ಲಿ ಭಾಷ್ಯದಲ್ಲಿ (ಪುಟ–467) ಇರುವ ಒಂದು ಪಂಕ್ತಿಯ ಭಾವ ಹೀಗಿದೆ – "ಪುರಾಣಗಳು ಮತ್ತು ಸ್ಮೃತಿಗಳ ಪ್ರಮಾಣವನ್ನು ಅನುಸರಿಸಿ ಊರ್ಧ್ವರೇತಸ್ಕರಾದ ನೈಷ್ಠಿಕ ಬ್ರಹ್ಮಚಾರಿಯಾಗಿರುವವರಿಗೆ ಸೂರ್ಯಸಂಬಂಧವಾದ ಉತ್ತರಮಾರ್ಗ ಪ್ರಸಿದ್ಧವೆನಿಸಿದೆ". (ಪುರಾಣಸ್ಮೃತಿಪ್ರಾಮಾಣ್ಯಾದೂರ್ಧ್ವರೇತಸಾಂ ಬ್ರಹ್ಮಚಾರಿಣಾಮುತ್ತರೇಣಾರ್ಯಮ್ಣಃ ಪಂಥಾಃ ಪ್ರಸಿದ್ಧಃ)

ಇಲ್ಲಿ ಕೆಲವು ಸಾಲುಗಳಾದ ಮೇಲೆ ಬರುವ ಭಾಷ್ಯಪಂಕ್ತಿಭಾವ ಈ ರೀತಿಯಾಗಿದೆ– "ಪೌರಾಣಿಕರು ಈ ರೀತಿ ಹೇಳುತ್ತಿದ್ದಾರೆ– (ತಥಾ ಚ ಪೌರಾಣಿಕಾಃ ................ ಇತ್ಯಾಹುಃ')–

ಏಳನೆಯ ಅಧ್ಯಾಯದಲ್ಲಿನ 26ನೆಯ ಖಂಡದಲ್ಲಿ (ಪುಟ–761) –ಶ್ರೀಶಂಕರಾಚಾರ್ಯರು ಭಗವಂತನನ್ನು ವಿವರಿಸುತ್ತಾ ವಿಷ್ಣುಪುರಾಣದಲ್ಲಿನ ಶ್ಲೋಕವನ್ನು ಉದಾಹರಣೆ ನೀಡಿದ್ದಾರೆ–

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ** [3]

ಭೂತಗಳ ಉತ್ಪತ್ತಿ, ಲಯ, ಆಗಮನ, ಗಮನ, ಮತ್ತು ವಿದ್ಯೆ, ಅವಿದ್ಯೆಗಳನ್ನು ತಿಳಿದವನೇ ಭಗವಂತ. ಹೀಗೆ ಕೆಲವು ಉಪನಿಷತ್ತುಗಳ ಭಾಷ್ಯವನ್ನು ಪರಿಶೀಲನೆ ಮಾಡಿದರೆ ತಮ್ಮ ಸಿದ್ಧಾಂತಗಳಿಗೆ ಪ್ರಮಾಣಗಳಾಗಿ ಅವೆಷ್ಟೋ ಪುರಾಣೋಕ್ತಿಗಳನ್ನು ಶ್ರೀ ಶಂಕರಭಗವತ್ಪಾದರು ಪ್ರತಿಪಾದಿಸಿದಂತೆ ಸ್ಪಷ್ಟವಾಗುತ್ತದೆ.

II. ಶ್ರೀಮದ್ಭಗವದ್ಗೀತಾಭಾಷ್ಯದಲ್ಲಿ ಪುರಾಣ ವಚನಗಳು –

ಶ್ರೀಮದ್ಭಗವದ್ಗೀತ –ಮೂರನೆಯ ಅಧ್ಯಾಯದಲ್ಲಿ 37ನೆಯ ಶ್ಲೋಕಭಾಷ್ಯದಲ್ಲಿ ವಿಷ್ಣುಪುರಾಣದಲ್ಲಿನ 2 ಶ್ಲೋಕಗಳನ್ನು ಸಂಗ್ರಹಿಸಲಾಗಿದೆ. (ಪುಟ–102).

---

1. The Mahabharata ಶಾಂತಿ - 47–36
2. The Mahabharata ಶಾಂತಿ 308–29
3. ವಿಷ್ಣುಪುರಾಣಂ–6–5–78

**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ**
**ವೈರಾಗ್ಯಸ್ಯಾಥ ಮೋಕ್ಷಸ್ಯ ಷಣ್ಣಾಂ ಭಗ ಇತೀರಣಾ** [1]

"ಭಗ"ಎಂಬ ಶಬ್ದವನ್ನು ಈ ಶ್ಲೋಕ ವಿವರಿಸುತ್ತಿದೆ. ಭಗ ಇದ್ದವನು ಭಗವಂತ. ಭಗವೆಂದರೆ 1. ಸಮಗ್ರ ಐಶ್ವರ್ಯ 2. ಧರ್ಮ 3. ಯಶಸ್ಸು 4. ಸಂಪತ್ತು 5. ಜ್ಞಾನ 6. ವೈರಾಗ್ಯ ಎಂಬ ಆರು ಸಿದ್ಧಿಗಳ ಸಮೂಹವೆಂದು ಭಾವ.

ಈ ಪುರಾಣ ಆಧಾರದ ಮೇಲೆ ಭಗವಂತ ಎಂಬ ಶಬ್ದಾರ್ಥವಿವರಣೆ ಹೀಗಿದೆ–

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ** [2]

ಭೂತಗಳ ಸೃಷ್ಟಿ, ಲಯಗೊಳಿಸುವುದು, ಆಗಮನ, ಗಮನ, ಮತ್ತು ವಿದ್ಯೆ, ಅವಿದ್ಯೆಗಳನ್ನು ತಿಳಿದವನು ಭಗವಂತ.

ಈ ಎರಡು ಶ್ಲೋಕಗಳು ಶ್ವೇತಾಶ್ವತರೋಪನಿಷದ್ಭಾಷ್ಯದಲ್ಲೂ ಕಂಡುಬರುತ್ತವೆ. ಆದರೆ ಮೊದಲ ಶ್ಲೋಕದಲ್ಲಿ ಸ್ವಲ್ಪ ಪಾಠಭೇಧವಿದೆ.

15ನೆಯ ಅಧ್ಯಾಯದಲ್ಲಿ ಪ್ರಥಮಶ್ಲೋಕದ ಭಾಷ್ಯದಲ್ಲಿ **ಪುರಾಣೇ ಚ** ಎನ್ನುತ್ತಾ 4 ಪುರಾಣ ಶ್ಲೋಕಗಳನ್ನು ಉದಾಹರಣೆಯಾಗಿ ನೀಡಿದ್ದಾರೆ.(ಪುಟ–365–366) 3 ಶ್ಲೋಕಗಳು ಬ್ರಹ್ಮಾಂಡಪುರಾಣದಲ್ಲಿ ಕಾಣಸಿಗುತ್ತವೆ. 4ನೆಯ ಶ್ಲೋಕ ಒಂದು ಸಣ್ಣ ಬದಲಾವಣೆಯಿಂದ ಮಹಾಭಾರತದಲ್ಲಿ ಉಲ್ಲೇಖವಾಗಿವೆ.

**ಅವ್ಯಕ್ತಮೂಲಪ್ರಭವಸ್ತಸ್ಯೈವಾನುಗ್ರಹೂತ್ಥಿತಃ**
**ಬುದ್ಧಿಸ್ಕಂಧಮಯಶ್ಚೈವ ಇಂದ್ರಿಯಾಂತರಕೋಟರಃ** [3]

**ಮಹಾಭೂತವಿಶಾಖಶ್ಚ ವಿಷಯೈಃ ಪತ್ರವಾಂಸ್ತಥಾ,**
**ಧರ್ಮಾಧರ್ಮಸುಪುಷ್ಪಶ್ಚ ಸುಖದುಃಖಫಲೋದಯಃ** [4]

**ಆಜೀವ್ಯಃ ಸರ್ವಭೂತಾನಂ ಬ್ರಹ್ಮವೃಕ್ಷಃ ಸನಾತನಃ**
**ಏತದ್ಬ್ರಹ್ಮವನಂ ಚೈವ ಬ್ರಹ್ಮಾಚರತಿ ನಿತ್ಯಶಃ** [5]

**ಏತಚ್ಛಿತ್ತ್ವಾ ಚ ಭಿತ್ತ್ವಾ ಚ ಜ್ಞಾನೇನ ಪರಮಾಸಿನಾ,**
**ತತಶ್ಚಾತ್ಮರತಿಂ ಪ್ರಾಪ್ಯ ತಸ್ಮಾನ್ನಾವರ್ತತೇ ಪುನಃ** [6]

ಸಂಸಾರ ವೃಕ್ಷವನ್ನು ವರ್ಣಿಸಿರುವ ಈ ಶ್ಲೋಕಗಳ ಭಾವ ಹೀಗಿದೆ– "ಅವ್ಯಕ್ತರೂಪವನ್ನು ಹೊಂದಿರುವ ಬೇರುಗಳಿಂದ ಹೊರಹೊಮ್ಮಿರುವುದು, ಆ ಬೇರುಗಳ ಅನುಗ್ರಹದಿಂದಲೇ ಹಿರಿದಾಗಿ ಬೆಳೆದಿದೆ. ಬುದ್ಧಿ ಎಂಬ ಕೊಂಬೆಗಳಿಂದ ಕೂಡಿದೆ. ಇಂದ್ರಿಯಗಳೆಂಬ ಪೊಟರೆಗಳನ್ನು ಹೊಂದಿದೆ. ಮಹಾಭೂತಗಳೆಂಬ ಉಪಶಾಖೆಗಳನ್ನು ಹೊಂದಿದೆ, ಧರ್ಮ–ಅಧರ್ಮ ಎಂಬ ಪುಷ್ಪಗಳನ್ನು ಹೊಂದಿದೆ. ಸುಖದುಃಖಗಳೆಂಬ ಫಲಗಳಿಂದ ಕೂಡಿದೆ, ಸಕಲ ಚರಾಚರಗಳನ್ನು ಚೈತನ್ಯವಂತವನ್ನಾಗಿ ಮಾಡಬಲ್ಲ ಸನಾತನ ವೃಕ್ಷವಿದು. ಇದನ್ನು ಬ್ರಹ್ಮವೃಕ್ಷವೆಂದು ಕರೆಯುತ್ತಾರೆ. ಈ ವೃಕ್ಷವನ್ನು ಜ್ಞಾನವೆಂಬ ಖಡ್ಗದಿಂದ ಛೇದಿಸುವ ಜ್ಞಾನಿ ಆತ್ಮಾನಂದವನ್ನು ಹೊಂದುತ್ತಾ ಅದರ ನೆರಳಿನಲ್ಲೇ ಸ್ಥಿರವಾಗಿ ಇದ್ದುಬಿಡುತ್ತಾನೆ.

1. ವಿಷ್ಣುಪುರಾಣ –6–5–74
2. ವಿಷ್ಣುಪುರಾಣ–6–5–78
3. ಬ್ರಹ್ಮಾಂಡಪುರಾಣ–1–5–100
4. ಬ್ರಹ್ಮಾಂಡಪುರಾಣ– 1–5–101
5. ಬ್ರಹ್ಮಾಂಡ ಪುರಾಣ–1–5–102
6. The Mahabharata ಅಶ್ವಮೇಧ –47–14

ಈ ರೀತಿಯಾಗಿ ಶ್ರೀಮದ್ಭಗವದ್ಗೀತಾ ಭಾಷ್ಯದಲ್ಲಿ ಮೂರು ಮತ್ತು ಹದಿನೈದನೆಯ ಅಧ್ಯಾಯದಲ್ಲಿ ಪುರಾಣೋಕ್ತಿಗಳು ಈ ರೀತಿ ಕಾಣಸಿಗುತ್ತವೆ.

### III. ಬ್ರಹ್ಮಸೂತ್ರಭಾಷ್ಯದಲ್ಲಿನ ಪುರಾಣ ವಚನಗಳು

**ಬ್ರಹ್ಮಸೂತ್ರಭಾಷ್ಯ** – ದ್ವಿತೀಯಾಧ್ಯಾಯ ಪ್ರಥಮಾಧಿಕರಣದಲ್ಲಿ ಈ ಪುರಾಣವಚನವನ್ನು ಭಗವತ್ಪಾದರು ಉದಾಹರಣೆಯನ್ನಾಗಿ ನೀಡಿದ್ದಾರೆ–(ಪುಟ–434)ವಾಯುಪುರಾಣದಲ್ಲಿ ಈ ಶ್ಲೋಕವನ್ನು ನೋಡಬಹುದು–

**ಅತಶ್ಚ ಸಂಕ್ಷೇಪಮಿಮಂ ಶೃಣುಧ್ವಂ ನಾರಾಯಣಃ ಸರ್ವಮಿದಂ ಪುರಾಣಃ**
**ಸ ಸರ್ಗಕಾಲೇ ಚ ಕರೋತಿ ಸರ್ವಂ ಸಂಹಾರಕಾಲೇ ಚ ತದತ್ತಿ ಭೂಯಃ** [1]

ಸನಾತನನಾದ ಶ್ರೀಮನ್ನಾರಾಯಣನು ಎಲ್ಲೆಡೆ ವ್ಯಾಪಿಸಿದ್ದಾನೆ ಅದಕ್ಕೇ ಆತನನ್ನು ಸರ್ವವ್ಯಾಪಿ ಎಂದು ಕರೆಯುತ್ತೇವೆ. ಆ ಮಹಾನುಭಾವನೇ ಸೃಷ್ಟಿ ಮತ್ತು ಲಯಕರ್ತನೆನಿಸಿಕೊಂಡಿದ್ದಾನೆ– ಇದು ಈ ಶ್ಲೋಕದ ಅರ್ಥ!

ಇದೇ ಪ್ರಕರಣದಲ್ಲಿ – "ಪೌರಾಣಿಕರು ಈ ರೀತಿ ಹೇಳಿದ್ದಾರೆ– (ತಥಾ ಚಾಹುಃ ಪೌರಾಣಿಕಾಃ) ಎನ್ನುತ್ತಾ ಈ ಕೆಳಗಿನ ಶ್ಲೋಕವನ್ನು ಹೇಳಿದ್ದಾರೆ– (ಪುಟ–444) ಬ್ರಹ್ಮಾಂಡಪುರಾಣದಲ್ಲಿನ ಶ್ಲೋಕ.

**ಅಚಿಂತ್ಯಾಃ ಖಲು ಯೇ ಭಾವಾಃ ನ ತಾಂಸ್ತರ್ಕೇಣ ಯೋಜಯೇತ್**
**ಪ್ರಕೃತಿಭ್ಯಃ ಪರಂ ಯಚ್ಚ ತದಂಚಿಂತ್ಯಸ್ಯ ಲಕ್ಷಣಮ್** [2]

ಬ್ರಹ್ಮಪದಾರ್ಥವನ್ನು ಶಬ್ದ ಮೂಲಕವಾದದು ಕುತರ್ಕಕ್ಕೆ ಸಿಕ್ಕುವದಲ್ಲ. ಉಪದೇಶಗಳಿಂದ ಅರ್ಥಮಾಡಿಕೊಳ್ಳುವಂತಹುದು. ಎಂದು ಇದರ ಅರ್ಥ!

ಈ ಶ್ಲೋಕವನ್ನು ಈ ಅಧಿಕರಣದಲ್ಲಿ ಮತ್ತೊಂದು ಕಡೆಯಲ್ಲೂ ಉದಾಹರಣೆಯಾಗಿ ನೀಡಿದ್ದಾರೆ, (ಪುಟ–476) ಆದರೆ ಈ ಮಾತುಗಳನ್ನು ಯಾವ ಪುರಾಣದಿಂದ ಸಂಗ್ರಹಿಸಿದ್ದಾರೋ ತಿಳಿದುಬಂದಿಲ್ಲ.

ಈ ರೀತಿ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯದಲ್ಲಿ ತಿಳಿದುಬರುತ್ತಿರುವ ನಯನಗೋಚರವಾಗಿರುವ ಪುರಾಣೋಕ್ತಿಗಳನ್ನು ಇಲ್ಲಿ ವಿವರಿಸಲಾಗಿದೆ.

**ಒಂದು ಚಿಕ್ಕ ಚರ್ಚೆ** – ಶ್ರೀಶಂಕರರು ತಮ್ಮ ಭಾಷ್ಯ ಗ್ರಂಥದಲ್ಲಿ ಆಯಾ ಸಂದರ್ಭಗಳನ್ನು ಅನುಸರಿಸಿ ಶ್ರುತಿವಚನಗಳನ್ನು, ಸ್ಮೃತಿವಚನಗಳನ್ನು, ಪುರಾಣವಚನಗಳನ್ನು ವಿವರಿಸಿದ್ದಾರೆ. ಶ್ರುತಿ–ಸ್ಮೃತಿ–ಪುರಾಣಗ್ರಂಥಗಳನ್ನೇ ಅಲ್ಲದೇ ಅನೇಕ ಕಡೆಗಳಲ್ಲಿ ಮಹಾಭಾರತದ ಶ್ಲೋಕಗಳನ್ನೂ ಪ್ರಮಾಣಗಳನ್ನಾಗಿ ವಿವರಿಸಿದ್ದಾರೆ. ಮಹಾಭಾರತ ಈ ಮೂರರಲ್ಲಿ ಯಾವ ಗುಂಪಿಗೂ ಸೇರಿಲ್ಲ. ಇದು ಇತಿಹಾಸವಾಗಿಯೇ ಪ್ರಸಿದ್ಧಿ. ಭಗವತ್ಪಾದರನ್ನು "ಶೃತಿ, ಸ್ಮೃತಿ–ಪುರಾಣಾವಾಲಯಮ್" ಎಂತಿದ್ದಾರೆ ಹೊರತು "ಇತಿಹಾಸಾಲಯಮ್" ಎನ್ನುತ್ತಿಲ್ಲ. ಮಹಾಭಾರತೇತಿಹಾಸದಲ್ಲಿನ ಎಷ್ಟೋ ವಚನಗಳನ್ನು ಪ್ರಮಾಣಗಳನ್ನಾಗಿ ನೀಡಿದ ಆಚಾರ್ಯರರು "ಇತಿಹಾಸಾಲಯಮ್" ಎಂದು ವ್ಯವಹರಿಸದಿರುವುದು ಒಂದು ಕೊರತೆಯಲ್ಲವೇ? ಎಂಬ ಪ್ರಶ್ನೆ ಬರಬಹುದು.

---

1. ವಾಯುಪುರಾಣ–(ಪೂರ್ವಾರ್ಧ)–1–185

2. ಬ್ರಹ್ಮಾಂಡಪುರಾಣ –15–7

ಮೇಲಿನ ಪ್ರಶ್ನೆಗೆ ಎರಡು ರೀತಿಯಲ್ಲಿ ಉತ್ತರಗಳಿವೆ. 1. ಶ್ರೀಶಂಕರರು ಅನೇಕ ಕಡೆಗಳಲ್ಲಿ ಮಹಾಭಾರತವನ್ನು ಸ್ಮೃತಿಯನ್ನಾಗಿ ವರ್ಣಿಸುತ್ತಿದ್ದಾರೆ. 2. ಒಂದು ಶಬ್ದವನ್ನು ಪ್ರಯೋಗಿಸಿದಾಗ ಅದರ ಅರ್ಥವೇನೆಂದು ನಮಗೆ ತಿಳಿದುಬರುತ್ತದೆ. ಇದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಆದರೆ ಆ ಶಬ್ದದಿಂದ ಮತ್ತೊಂದು ಶಬ್ದದ ಅರ್ಥವೂ ಅಭಿಲಷಿತವಾದಾಗ "ಉಪಲಕ್ಷಣ"ವನ್ನು ನೋಡುತ್ತಾರೆ. ಇದು ಶಾಸ್ತ್ರಸಮ್ಮತವಾದುದು. "ಏಕಪದೇನ ತದರ್ಥಾನ್ಯಪದಾರ್ಥಕಥನಮುಪಲಕ್ಷಣಮ್". ಇದಕ್ಕೆ ಒಂದು ಉದಾಹರಣೆ ಇಲ್ಲಿದೆ. "ಅಂಗಳದಲ್ಲಿ ಅಕ್ಕಿಯನ್ನು ಆರಲು ಹಾಕಿದ್ದೇನೆ. ಪಾರಿವಾಳಗಳು ತಿನ್ನದೇ ಇರುವಂತೆ ನೋಡಿಕೋ" ಎಂದು ಇನ್ನೊಬ್ಬರಿಗೆ ಒಪ್ಪಿಸುವವರ ಉದ್ದೇಶ್ಯ ಕೇವಲ ಪಾರಿವಾಳಗಳಿಗೆ ಮಾತ್ರ ಸೀಮಿತವಾಗಿಲ್ಲ ಇತರ ಪಕ್ಷಿಗಳೂ ಅಲ್ಲದೇ ಪ್ರಾಣಿಗಳು ಕೂಡಾ ಬರದಂತೆ ನೋಡಿಕೋಬೇಕೆನ್ನುವದು ಕೂಡಾ ಉದ್ದೇಶ್ಯವೇ. ಅದೇ ರೀತಿ ಇಲ್ಲೂ "ಪುರಾಣ' ಎಂಬ ಶಬ್ದದಿಂದ ಇತಿಹಾಸವನ್ನೂ ಅರ್ಥಮಾಡಿಕೊಳ್ಳಬಹುದೆಂಬ ವಿಷಯದಲ್ಲಿ ಯಾವ ರೀತಿಯ ಅನುಮಾನವೂ ಬೇಕಿಲ್ಲ. ಪುರಾಣಗಳಿಗೆ ಇರುವ ಪ್ರಾಮುಖ್ಯತೆ ವ್ಯಾಸಾದಿಪ್ರಣೀತವಾದ ಮಹಾಭಾರತ ಮುಂತಾದ ಗ್ರಂಥಾಗಳಿಗೂ ಇದೆ. ಆದ್ದರಿಂದಲೇ **"ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"** ಎಂಬ ವಾಕ್ಯವಿದೆ.

ಈ ಕಾರಣದಿಂದಾಗಿ "ಮಹಾಭಾರತ"ದ ಆಧಾರದ ಮೇಲೆ ಭಗವತ್ಪಾದರು ತೋರಿಸಿರುವ ಕೆಲವು ಶ್ಲೋಕಗಳನ್ನು ಇಲ್ಲಿ ನೀಡಲಾಗಿದೆ.

**1. ಉಪನಿಷದ್ಭಾಷ್ಯದಲ್ಲಿ ಮಹಾಭಾರತದ ವಚನಗಳು –**

➢ ಈಶವ್ಯಾಸೋಪನಿಷತ್ತು –ತೃತೀಯಮಂತ್ರಭಾಷ್ಯದಲ್ಲಿ (ಪುಟ–30) ಶಾಂತಿಪರ್ವದಲ್ಲಿನ ವಚನ

**ದ್ವಾವಿಮಾವಥ ಪಂಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ**
**ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ಸುಭಾಷಿತಃ** [1]

ಮನುಜರ ಉದ್ಧಾರಕ್ಕಾಗಿ ವೇದವು ಎರಡು ರೀತಿಯ ಮಾರ್ಗಗಳನ್ನು ತೋರಿಸಿಕೊಟ್ಟಿದೆ, ಅವುಗಳು 1. ಪ್ರವೃತ್ತಿ ಧರ್ಮ 2. ನಿವೃತ್ತಿಧರ್ಮ. ಮನುಷ್ಯ ಯಾವ ರೀತಿ ಇರಬೇಕು? ಏನು ಮಾಡಬೇಕು? ಮೊದಲಾದ ಅಂಶಗಳನ್ನು ಪ್ರವೃತ್ತಿಧರ್ಮವು ಉಪದೇಶಿಸುತ್ತದೆ. ಮನುಷ್ಯ ಯಾವ ರೀತಿ ಇರಬಾರದು, ಎಂತಹಾ ಕೆಲಸಗಳನ್ನು ಮಾಡಬಾರದು ಎಂಬ ಅಂಶಗಳನ್ನು ನಿವೃತ್ತಿಧರ್ಮವು ಉಪದೇಶಿಸುತ್ತದೆ ಎಂದು ಇದರ ಅರ್ಥ. ಮಹಾಭಾರತದ ಶಾಂತಿಪರ್ವದಲ್ಲಿ ಈ ವಚನವಿದೆ.

**➢ ಕೇನೋಪನಿಷತ್ತು –**

**ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಮ್** [2]

ವನಪರ್ವದಲ್ಲಿನ ವಚನ ಈ ರೀತಿ ಇದೆ(ಪುಟ–64)

ಕರ್ಮಗಳನ್ನು ಆಚರಿಸಿ, ಅಯ್ಯೋ! ಹೀಗೆ ನಡೆದುಕೊಳ್ಳದೇ ಜ್ಞಾನಮಾರ್ಗವನ್ನೇ ಆಶ್ರಯಿಸಿದ್ದರೆ ಚೆನ್ನಾಗಿರುತ್ತಿತ್ತೇನೋ? ಎಂಬ ಭಾವನೆಯಿಂದ ಪಶ್ಚಾತ್ತಾಪಪಡದೇ ಮೊದಲೇ ಜ್ಞಾನಮಾರ್ಗವನ್ನು ಆಶ್ರಯಿಸುವುದು ಉತ್ತಮವಾದ ಲಕ್ಷಣ. ಹೊಲಸನ್ನು ತುಳಿಯುವುದೇಕೆ?ನಂತರ ಕಾಲುತೊಳೆಯುವುದೇಕೆ? ಎಂದು ಈ ವಚನದ ಅರ್ಥ!

**ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ**
**ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ** [3]

---

1. The Mahabharata ಶಾಂತಿ –233–6 2. The Mahabharata ವನ–2–47 3. The Mahabharata ಶಾಂತಿ –233–7

ಶಾಂತಿಪರ್ವದಲ್ಲಿ ಇರುವ ಈ ವಚನ ಕೇನೋಪನಿಷತ್ತಿನಲ್ಲಿ ಕಂಡುಬರುತ್ತದೆ. (ಪುಟ–67) ಕರ್ಮಗಳಿಂದಾಗಿ ಜೀವನು ಈ ಸಂಸಾರಕ್ಕೆ ಕಟ್ಟುಬೀಳುತ್ತಾನೆ. ಜ್ಞಾನದಿಂದ ಮುಕ್ತನಾಗುತ್ತಾನೆ. ಆದ್ದರಿಂದಲೇ ದೂರದೃಷ್ಟಿಯಿರುವ ಮಹಾನುಭಾವರು ಕರ್ಮವನ್ನು ಆಚರಿಸುವುದಿಲ್ಲವೆಂದು ಇದರ ಅರ್ಥವಾಗಿದೆ.

**ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ** [1]

ಶಾಂತಿಪರ್ವೋಕ್ತಿ(ಪುಟ–191). ಮಾಡಿದ ಪಾಪಕರ್ಮಗಳು ಸವೆದುಹೋದಾಗ ಜೀವನಿಗೆ ಜ್ಞಾನ ಉಂಟಾಗುತ್ತದೆ. ಎಂದು ಇದರ ಅರ್ಥ.

- **ಪ್ರಶ್ನೋಪನಿಷತ್ತು–**

**ತ್ಯಜೇದೇಕಂ ಕುಲಸ್ಯಾರ್ಥೆ** [2]

ಇದು ಉದ್ಯೋಗಪರ್ವದಲ್ಲಿನ ವಾಕ್ಯ (ಪುಟ–415)

ವಂಶದ ಗೌರವಮರ್ಯಾದೆಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಅಗತ್ಯವಾದಲ್ಲಿ ಒಬ್ಬರನ್ನು ಬಿಟ್ಟುಬಿಡಬೇಕು ಗ್ರಾಮದ ಹಿತಕ್ಕಾಗಿ ಕುಲವನ್ನು ಬಿಡಬೇಕು. ದೇಶದ ಒಳಿತಿಗಾಗಿ ಗ್ರಾಮವನ್ನು ಬಿಟ್ಟುಬಿಡಬೇಕು. ತನ್ನ ಒಳಿತಿಗಾಗಿ ಅಗತ್ಯವಾದರೆ ಈ ಭೂಮಂಡಲವನ್ನೇ ಬಿಡಬೇಕು–ಇದು ಈ ಶ್ಲೋಕದ ಸಂಪೂರ್ಣಾರ್ಥ.

- **ಮುಂಡಕೋಪನಿಷತ್ತು**

**ಮನಸಶ್ಚೇಂದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ** [3]

ಇದು ಶಾಂತಿಪರ್ವದಲ್ಲಿನ ಶ್ಲೋಕ(ಪುಟ–533). ಮನಸ್ಸು ಮತ್ತು ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವುದೇ ಉತ್ತಮವಾದ ತಪಸ್ಸು. ಎಂದು ಇದರ ಅರ್ಥ!

**ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ಚ,**
**ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವತಾಂ ಗತಿಃ** [4]

ಆಕಾಶದಲ್ಲಿ ವಿಹರಿಸುವ ಪಕ್ಷಿಗಳು, ನೀರಿನಲ್ಲಿ ಸಂಚರಿಸುವ ಜಲಚರಗಳು ಇವುಗಳ ಹೆಜ್ಜೆಯಗುರುತುಗಳು ನಮಗೆ ಕಾಣಸಿಗುವುದಿಲ್ಲ. ಅದೇ ರೀತಿ ಜ್ಞಾನಿಗಳ ಗಮನದ ಪ್ರಕಾರವನ್ನು ನಾವು ನೋಡಲಾರೆವೆಂದು ಈ ವಚನದ ಅರ್ಥವಾಗಿದೆ. ಇದನ್ನು ಶಂಕರಾಚಾರ್ಯರು ಶಾಂತಿಪರ್ವದಿಂದ ಆಯ್ದುಕೊಂಡಿದ್ದಾರೆ. (ಪುಟ–550).

- **ಮಾಂಡುಕ್ಯೋಪನಿಷತ್ತು –**

ಮುಂಡಕೋಪನಿಷತ್ತಿನಲ್ಲಿ ಸಂಗ್ರಹಿಸಿದ ಶ್ಲೋಕದ ಅರ್ಥವನ್ನೇ ಸುಮಾರು ಮಾಂಡುಕ್ಯೋಪನಿಷತ್ತಿನಲ್ಲಿನ ಈ ಕೆಳಗಿನ ಶ್ಲೋಕದಲ್ಲೂ ಕಂಡುಬರುತ್ತದೆ. ಒಂದು ಸಣ್ಣ ಬದಲಾವಣೆಯಿರುವ ಈ ಶ್ಲೋಕವೂ ಕೂಡಾ ಶಾಂತಿಪರ್ವದಲ್ಲಿದೆ.(ಪುಟ–800)–

**ಸರ್ವಭೂತಾತ್ಮಭೂತಸ್ಯ ಸರ್ವಭೂತಹಿತಸ್ಯ ಚ**
**ದೇವಾ ಅಪಿ ಮಾರ್ಗೇ ಮುಹ್ಯಂತ್ಯಪದಸ್ಯ ಪದೈಷಿಣಃ** [5]

1. The Mahabharata ಶಾಂತಿ –197–8
2. The Mahabharata ಉದ್ಯೋಗ–37–16
3. The Mahabharata ಶಾಂತಿ–242–4
4. The Mahabharata ಶಾಂತಿ –174–19
5. The Mahabharata ಶಾಂತಿ –254–32

ಸಕಲ ಚರಾಚರಗಳಿಗೆ ಆತ್ಮನಂತಹವನು, ಮತ್ತು ಎಲ್ಲ ಪ್ರಾಣಿಗಳಿಗೂ ಒಳಿತನ್ನೇ ಬಯಸುವ ಮಹಾತ್ಮನ ಮಾರ್ಗಕ್ಕಾಗಿ ದೇವತೆಗಳು ಅನ್ವೇಷಿಸುತ್ತಾರೆ. ಆಕಾಶದಲ್ಲಿ ವಿಹರಿಸುವ ಪಕ್ಷಿಗಳ ಮಾರ್ಗದಂತೆಯೇ ಇದು ಸುಲಭವಾಗಿ ದೊರೆಯುವುದಿಲ್ಲ.

➢ **ತೈತ್ತಿರೀಯೋಪನಿಷತ್ತು** – ಶೀಕ್ಷಾವಲ್ಲಿ ಚತುರ್ಥಾನುವಾಕಭಾಷ್ಯದಲ್ಲಿ (ಪುಟ–916) ಶಾಂತಿಪರ್ವದಿಂದ ಈ ಕೆಳಗಿನ ಶ್ಲೋಕವನ್ನು ಸಂಗ್ರಹಿಸಲಾಗಿದೆ. ಇದು ಕೇನೋಪನಿಷತ್ತಿನಲ್ಲಿಯು ಕೂಡಾ ಕಂಡುಬರುತ್ತದೆ.

**ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ**
**ಯಥಾऽऽದರ್ಶತಲೇ ಪ್ರಖ್ಯೇ ಪಶ್ಯಂತ್ಯಾತ್ಮಾನಮಾತ್ಮನಿ** [1]

ಪಾಪಗಳು ಕಳೆದ ನಂತರವೇ ಮಾನವನಿಗೆ ಜ್ಞಾನೋದಯವಾಗುತ್ತದೆ. ಕನ್ನಡಿಯು ಶುಭ್ರವಾಗಿದ್ದಾಗಲೇ ನಮ್ಮ ಮುಖವು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೆಯೇ ಶುದ್ಧವಾದ ಅಂತಃಕರಣದಲ್ಲಿ ಮಾತ್ರ ಆತ್ಮಸಾಕ್ಷಾತ್ಕಾರ ಲಭ್ಯವಾಗುತ್ತದೆ ಎಂದು ಈ ಶ್ಲೋಕದ ಅರ್ಥವಾಗಿದೆ.

ಭೃಗುವಲ್ಲಿಯಲ್ಲಿರುವ ಪ್ರಥಮಾನುವಾಕದಲ್ಲಿ(ಪುಟ–1076) ಶಾಂತಿಪರ್ವದಲ್ಲಿನ ಈ ವಚನ ಈ ರೀತಿ ಕೇನೋಪನಿಷತ್ತಿನಲ್ಲೂ ಕಂಡುಬರುತ್ತದೆ.

**ಮನಸಶ್ಚೇಂದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ**
**ತಜ್ಜ್ಯಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ** [2]

ಮನಸ್ಸು ಮತ್ತು ಇಂದ್ರಿಯಗಳನ್ನು ನಮ್ಮ ಹತೋಟಿಗೆ ತಂದುಕೊಳ್ಳುವುದೇ ಉತ್ತಮವಾದ ತಪಸ್ಸು. ಎಲ್ಲಾ ಧರ್ಮಗಳಿಗಿಂತಲೂ ಈ ಇಂದ್ರಿಯನಿಗ್ರಹವೇ ಉತ್ಕೃಷ್ಟವಾದ ಧರ್ಮವೆಂದು ಈ ಶ್ಲೋಕದ ಅರ್ಥ!

**ಶ್ರೀಮದ್ಭಗವದ್ಗೀತಾಭಾಷ್ಯದಲ್ಲಿ ಮಹಾಭಾರತ ವಚನಗಳು –**

ಶ್ರೀಮದ್ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ (ಪುಟ–45) ಶಾಂತಿಪರ್ವದಲ್ಲಿನ ವಚನ

**ದ್ವಾವಿಮಾವಥ ಪಂಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ**
**ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ಸುಭಾಷಿತಃ** [3]

ಮನುಷ್ಯರ ಉದ್ಧಾರಕ್ಕಾಗಿ ಎರಡು ಮಾರ್ಗಗಳಿವೆ. 1. ಪ್ರವೃತ್ತಿಧರ್ಮ 2. ನಿವೃತ್ತಿಧರ್ಮ. ಮನುಷ್ಯ ಯಾವ ರೀತಿ ನಡೆದುಕೊಳ್ಳಬೇಕು?ಯಾವ ರೀತಿ ನಡೆದುಕೊಳ್ಳಬಾರದು?ಎಂದು ಪ್ರವೃತ್ತಿಧರ್ಮವು ಉಪದೇಶಿಸುತ್ತದೆ. ಮನುಷ್ಯ ಯಾವರೀತಿ ನಡೆದುಕೊಳ್ಳಬಾರದು?ಯಾವ ಕೆಲಸಗಳನ್ನು ಮಾಡಬಾರದು?ಎಂಬುದನ್ನು ನಿವೃತ್ತಿಧರ್ಮವು ತಿಳಿಸುತ್ತದೆ. ಹದಿಮೂರನೆಯ ಅಧ್ಯಾಯದಲ್ಲಿ ಕೂಡಾ ಈ ಶ್ಲೋಕವಿದೆ. (ಪುಟ–300)

ಈ ಅಧ್ಯಾಯದಲ್ಲಿರುವ ಸ್ತ್ರೀಪರ್ವವಚನ ಹೀಗಿದೆ(ಪುಟ–51)

**ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ**
**ನಾಸೌ ತವ ನ ತಸ್ಯ ತ್ವಂ ವೃಥಾ ಕಾ ಪರಿದೇವನಾ** [4]

1.The Mahabharata ಶಾಂತಿ–197–8
2.The Mahabharata –ಶಾಂತಿ–242–4
3.The Mahabharata ಶಾಂತಿ–233–6
4.The Mahabharata – ಸ್ತ್ರೀ –2–8

ಪುತ್ರ-ಮಿತ್ರಾದಿಗಳು ನಾವು ಹುಟ್ಟುವ ಮೊದಲೇ ಇರುತ್ತಾರೆ. ಆದರೆ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ನಂತರವೂ ಅವರು ಕಾಣುವುದಿಲ್ಲ, ಅವರು ಯಾರೂ ನಿನ್ನವರಲ್ಲ, ನೀನು ಅವರಿಗೆ ಸೇರಿದವನಲ್ಲ. ಆದ್ದರಿಂದ ದುಃಖಪಡುವ ಅಗತ್ಯವಿಲ್ಲ.

ಮೂರನೆಯ ಅಧ್ಯಾಯ ಶಾಂತಿಪರ್ವದಲ್ಲಿನ ವಚನ(ಪುಟ-79)

**ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾ ಚ ವಿಮುಚ್ಯತೇ**
**ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ** [1]

ಜೀವನು ಕರ್ಮಗಳ ಮುಖಾಂತರ ಸಂಸಾರದಲ್ಲಿ ಸಿಲುಕುತ್ತಾನೆ. ಜ್ಞಾನದಿಂದ ಮುಕ್ತನಾಗುತ್ತಾನೆ. ಆದ್ದರಿಂದಲೇ ದೂರದೃಷ್ಟಿಯನ್ನು ಹೊಂದಿರುವ ಮಹಾನುಭಾವರು ಕರ್ಮಗಳನ್ನು ಆಚರಿಸುವುದಿಲ್ಲ ಎಂದು ಇದರ ಅರ್ಥ!

ಈ ಅಧ್ಯಾಯದಲ್ಲಿ (ಪುಟ-85)ಶಾಂತಿಪರ್ವದಲಿನ ಮತ್ತೊಂದು ವಚನ ಹೀಗಿದೆ-

**ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ** [2]

ಪಾಪಗಳು ಸವೆದುಹೋದ ನಂತರವೇ ಮನುಷ್ಯರಿಗೆ ಜ್ಞಾನವು ಉಂಟಾಗುತ್ತದೆಂದು ಅರ್ಥ.

ಆರನೆಯ ಅಧ್ಯಾಯದಲ್ಲಿ (ಪುಟ-173) ಶಾಂತಿಪರ್ವದಲ್ಲಿನ ವಚನ ಹೀಗಿದೆ-

**ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಮ್**
**ಯಥೈಕತಾ ಸಮತಾ ಸತ್ಯತಾ ಚ,**
**ಶೀಲಂ ಸ್ಥಿತಿರ್ದಂಡನಿಧಾನಮಾರ್ಜವಮ್**
**ತತಸ್ತತಶ್ಚೋಪರಮಃ ಕ್ರಿಯಾಭ್ಯಃ** [3]

ಸಮತೆ, ಸತ್ಯ, ಶೀಲ, ಸ್ಥಿತಿ, ಅಹಿಂಸೆ, ವಕ್ರಬುದ್ಧಿ ಇಲ್ಲದಿರುವುದು, ಕರ್ಮಗಳನ್ನು ಬಿಡುವುದು ಮುಂತಾದ ಅಂಶಗಳೇ ಬ್ರಾಹ್ಮಣನಿಗೆ ಇರುವ ಸಂಪತ್ತು. ಇದಕ್ಕಿಂತಲೂ ಮಿಗಿಲಾದ ಐಶ್ವರ್ಯಗಳು ಇಲ್ಲವೆಂದು ಇದರ ಅರ್ಥ.

ಆರನೆಯ ಅಧ್ಯಾಯ (ಪುಟ-174). ಶಾಂತಿಪರ್ವದಲ್ಲಿನ ಇನ್ನೊಂದು ವಚನ ಹೀಗಿದೆ

**ಕಾಮ! ಜಾನಾಮಿ ತೇ ಮೂಲಂ ಸಂಕಲ್ಪಾತ್ಕಿಲ ಜಾಯಸೇ.**
**ನ ತ್ವಾಂ ಸಂಕಲ್ಪಯಿಷ್ಯಾಮಿ ತೇನ ಮೇ ನ ಭವಿಷ್ಯಸಿ** [4]

ಓ ಆಸೆಗಳೇ! ನಿಮ್ಮ ಮೂಲವೆಲ್ಲಿದೆ ಎಂದು ನನಗೆ ತಿಳಿದಿದೆ. ಆಸೆಗಳಿಗೆ ಮೂಲ. ನಾನು ಅಂತಹಾ ಸಂಕಲ್ಪಗಳನ್ನು ಮಾಡುವುದಿಲ್ಲ. ಆದ್ದರಿಂದ ನೀವು ನನ್ನ ಬಳಿಗೆ ಬರಲಾರಿರಿ- ಎಂದು ಇದರ ಅರ್ಥ .

ಹನ್ನೆರಡನೆಯ ಅಧ್ಯಾಯದಲ್ಲಿ (ಪುಟ-296). ಶಾಂತಿಪರ್ವದಲ್ಲಿನ ವಚನ

**ಯೇನ ಕೇನಚಿದಾಚ್ಛನ್ನೋ ಯೇನ ಕೇನಾಚಿದಾಶಿತಃ**
**ಯತ್ರ ಕ್ವಚನ ಶಾಯೀ ಸ್ಯಾತ್ತಂ ದೇವಾ ಬ್ರಾಹ್ಮಣಂ ವಿದುಃ** [5]

---

1.The Mahabharata ಶಾಂತಿ-237-7
2.The Mahabharata ಶಾಂತಿ -197-8
3. The Mahabharata ಶಾಂತಿ-169-35
4.The Mahabharata ಶಾಂತಿ-171-25
5. The Mahabharata ಶಾಂತಿ -237-12

ಬ್ರಾಹ್ಮಣನೆಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರವನ್ನು ಈ ಶ್ಲೋಕದಲ್ಲಿ ತಿಳಿದುಕೊಳ್ಳಬಹುದು–

ಯಾರೋ ಊಟ ಹಾಕುತ್ತಾರೆ, ಯಾರೋ ವಸ್ತ್ರವನ್ನು ನೀಡುತ್ತಾರೆ, ಎಲ್ಲೋ ಮಲಗುತ್ತಾರೆ, ಸ್ವಂತಕ್ಕೆ ಏನನ್ನು ಇಟ್ಟುಕೊಳ್ಳುವದಿಲ್ಲ. ಇಂತಹಾ ಲಕ್ಷಣಗಳನ್ನು ಹೊಂದಿದವನೇ ಬ್ರಾಹ್ಮಣನೆಂದು ದೇವತೆಗಳು ಹೇಳುತ್ತಿದ್ದಾರೆ.

ಹದಿಮೂರನೆಯ ಅಧ್ಯಾಯದ ಭಾಷ್ಯದಲ್ಲಿ (ಪುಟ–301) ಶಾಂತಿ ಪರ್ವದಲ್ಲಿರುವ ವಚನ ಹೀಗಿದೆ.

**ಸರ್ಪಾನ್ ಕುಶಾಗ್ರಾಣಿ ತಥೋದಪಾನಂ ಜ್ಞಾತ್ವಾ ಮನುಷ್ಯಾಃ ಪರಿವರ್ಜಯಂತಿ**
**ಅಜ್ಞಾನತಸ್ತತ್ರ ಪತಂತಿ ಕೇಚಿದ್ ಜ್ಞಾನೇ ಫಲಂ ಪಶ್ಯ ತಥಾ ವಿಶಿಷ್ಟಮ್** [1]

ಸರ್ಪಗಳು, ಮುಳ್ಳು, ಸರೋವರ ಇವುಗಳನ್ನು ನೋಡಿದಾಗ ಮನುಷ್ಯ ಎಚ್ಚರಿಕೆಯಿಂದ ಇರುತ್ತಾನೆ. ಅಥವಾ ಅವುಗಳಿಂದ ದೂರವಿರುತ್ತಾನೆ. ಅವುಗಳನ್ನು ಉದಾಸೀನ ಮಾಡುವವನು ಅವುಗಳಿಂದಲೇ ನೋವನ್ನು ಅನುಭವಿಸುತ್ತಾನೆ. ಹಾಗೇ ಜ್ಞಾನವನ್ನು ತಿಳಿದವನು ಮುಕ್ತಿಪಥವನ್ನು ಹೊಂದುತ್ತಾನೆ.

**III. ಬ್ರಹ್ಮಸೂತ್ರಭಾಷ್ಯದಲ್ಲಿ ಮಹಾಭಾರತದ ವಚನಗಳು**

1. **"ಅಂತಸ್ತದ್ಧರ್ಮೋಪದೇಶಾತ್" (1–1–20)**. ಸೂತ್ರಭಾಷ್ಯದಲ್ಲಿ (ಪುಟ–196). ಶಾಂತಿಪರ್ವದಲ್ಲಿನ ಶ್ಲೋಕ –

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ,**
**ಸರ್ವಭೂತಗುಣೈರ್ಯುಕ್ತಂ ಮೈವಂ ಮಾಂ ಜ್ಞಾತುಮರ್ಹಸಿ** [2]

"ಹೇ ನಾರದ! ನಾನು ಮಾಯೆಯನ್ನು ಸೃಷ್ಟಿಸಿದ್ದೇನೆ. ನನ್ನನ್ನು ನೀನು ನೋಡಬಲ್ಲೆ. ಸಕಲಭೂತಗಳ ಗುಣಗಳಿಂದ ಕೂಡಿರುವ ನನ್ನನ್ನು ನೀನು ಅರ್ಥಮಾಡಿಕೊಳ್ಳಲಾರೆ". ಎಂದು ಈ ಶ್ಲೋಕದ ಅರ್ಥ.

ಈ ಶ್ಲೋಕ **"ದರ್ಶಯತಿ ಚಾಥೋ ಅಪಿ ಸ್ಮರ್ಯತೇ"** (3–2–17). ಸೂತ್ರಭಾಷ್ಯದಲ್ಲಿ ಕೂಡಾ (ಪುಟ–710) ಇದೆ

2. **"ಶಬ್ದಾದೇವ ಪ್ರಮಿತಃ"**(1–3–24) ಸೂತ್ರಭಾಷ್ಯದಲ್ಲಿ (ಪುಟ–315) ವನಪರ್ವ ಶ್ಲೋಕ ಹೀಗಿದೆ–

**ಅಥ ಸತ್ಯವತಃ ಕಾಯಾತ್ ಪಾಶಬದ್ಧಂ ವಶಂ ಗತಮ್**
**ಅಂಗುಷ್ಠಮಾತ್ರಂ ಪುರುಷಂ ನಿಶ್ಚಕರ್ಷ ಯಮೋ ಬಲಾತ್** [3]

ಹೆಬ್ಬೆಟ್ಟು ಪ್ರಮಾಣದಲ್ಲಿರುವ ಜೀವನನ್ನು, ಸತ್ಯವಂತನ ದೇಹದಿಂದ ಯಮದೇವನು ಪಾಶದಿಂದ ಎಳೆದಿದ್ದಾನೆಂದು ಇದರ ಅರ್ಥ!

3. **"ವಿರೋಧಃ ಕರ್ಮಣೀತಿ ಚೇತ್"(1–3–27)** ಇತ್ಯಾದಿ ಸೂತ್ರಭಾಷ್ಯದಲ್ಲಿ (ಪುಟ–320) ಶಾಂತಿಪರ್ವದಲ್ಲಿನ ವಚನ ಹೀಗಿದೆ

**ಆತ್ಮನೋ ವೈ ಶರೀರಾಣಿ ಬಹೂನಿ ಭರತವರ್ಷಭ** [4]

**ಯೋಗೀ ಕುರ್ಯಾದ್ಬಲಂ ಪ್ರಾಪ್ಯ ತೈಶ್ಚ ಸರ್ವೈರ್ಮಹೀಂ ಚರೇತ್**
**ಪ್ರಾಪ್ನುಯಾದ್ವಿಷಯಾನ್ ಕೈಶ್ಚಿತ್ ಕೈಶ್ಚಿದುಗ್ರಂ ತಪಶ್ಚರೇತ್** [5]

"ಹೇ ಭರತ ಶ್ರೇಷ್ಠಾ! ಆತ್ಮಕ್ಕೆ ಅನೇಕ ಶರೀರಗಳಿರುತ್ತವೆ, ಯೋಗಿಯಾದವನು ಆ ಶರೀರಗಳಿಂದಲು ಮತ್ತು ತನ್ನ ಶಕ್ತಿಯಿಂದಲೂ ಉಗ್ರವಾದ ತಪಸ್ಸನ್ನು ಆಚರಿಸಬಲ್ಲ ಇದರ ಅರ್ಥ!

1. The Mahabharata ಶಾಂತಿ–194–14
2. The Mahabharata ಶಾಂತಿ–326–43
3. The Mahabharata ವನ–281–16
4. The Mahabharata ಶಾಂತಿ –289–26
5. The Mahabharata ಶಾಂತಿ–289–27

4. **"ಶಬ್ದ ಇತಿ ಚೇನ್ನ" (1–3–28)** ಇತ್ಯಾದಿ ಸೂತ್ರಭಾಷ್ಯದಲ್ಲಿ (ಪುಟ–322) ಶಾಂತಿಪರ್ವದ ಈ ವಚನವಿದೆ.

**ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂ ಭುವಾ** [1]

**"ವಾಕ್ಕು"** ಎನ್ನುವುದು ಆದಿ ಅಂತ್ಯಗಳು ಇಲ್ಲದಿರುವುದು. ಬ್ರಹ್ಮದೇವನು ಸೃಷ್ಟಿಸಿದ ಈ ವಾಕ್ಯ ವೇದರೂಪವಾಗಿ ಹೊರಹೊಮ್ಮಿತು. ಈ ವೇದಗಳನ್ನೇ ಆಧಾರವಾಗಿಟ್ಟುಕೊಂಡು ಧರ್ಮಗಳು ನಿರ್ಮಿತವಾದುವೆಂದು ಇದರ ಅರ್ಥ!

5. **"ಸ್ಮೃತ್ಯನವಕಾಶದೋಷಪ್ರಸಂಗ ಇತಿ ಚೇತ್" (2–1–1)** ಇತ್ಯಾದಿ ಸೂತ್ರಭಾಷ್ಯದಲ್ಲಿ (ಪುಟ–435) ಶಾಂತಿಪರ್ವದಲ್ಲಿ ಈ ವಚನ ಹೀಗಿದೆ.

**ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ,**
**ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮ್** [2]

ಮಾನವರೆಲ್ಲರ ಸೃಷ್ಟಿಗೂ ಮೂಲ ಒಂದೇ ! ಅಂತಹ ಗುಣಾಧಿಕನಾದ ಪುರುಷನನ್ನು ವಿವರಿಸುತ್ತೇನೆಂದು ಇದರ ಅರ್ಥ

6. **"ವಿಪರ್ಯೇಣ ತು ಕ್ರಮೋಽತ ಉಪಪದ್ಯತೇ ಚ" (2–3–14)** ಸೂತ್ರಭಾಷ್ಯದಲ್ಲಿ(ಪುಟ–597) ಶಾಂತಿಪರ್ವದ ವಚನ.

**ಜಗತ್ಪ್ರತಿಷ್ಠಾ ದೇವರ್ಷೇ! ಪೃಥಿವ್ಯಪ್ಸು ಪ್ರಲೀಯತೇ**
**ಜ್ಯೋತಿಷ್ಯಾಪಃ ಪ್ರಲೀಯಸ್ತೇ ಜ್ಯೋತಿರ್ವಾಯೌ ಪ್ರಲೀಯತೇ** [3]

"ಹೇ ದೇವರ್ಷೀ! ಪೃಥ್ವಿಯೊಳಗೆ ಜಲವು ಲೀನವಾಗುತ್ತದೆ. ತೇಜಸ್ಸಿನಲ್ಲಿ ಜಲ, ವಾಯುವಿನಲ್ಲಿ ತೇಜಸ್ಸು ಲೀನವಾಗುತ್ತವೆ. ಇದು ವಿಪರೀತಕ್ರಮವೆಂದು ಅರ್ಥ.

7. **"ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್" (2–3–29)** ಇತ್ಯಾದಿ ಸೂತ್ರಭಾಷ್ಯದಲ್ಲಿ ಪುಟ–(609)

**ಶಾಂತಿಪರ್ವದಲ್ಲಿನ ಉಕ್ತಿ**

**ಉಪಲಭ್ಯಾಪ್ಸು ಚೇದ್ಗಂಧಂ ಕೇಚಿದ್ ಬ್ರೂಯುರನೈಪುಣಾಃ**
**ಪೃಥಿವ್ಯಾಮೇವ ತಂ ವಿದ್ಯಾತ್ ಅಪೋ ವಾಯುಂ ಚ ಸಂಶ್ರಿತಮ್** [4]

ಪೃಥ್ವಿಯಲ್ಲೇ ಜಲ, ವಾಯು ದೊರೆಯುತ್ತಿರುವಾಗ, ಜಲದಲ್ಲಿ ಗಂಧವನ್ನು ಪಡೆಯುವುದೇನೂ ವಿಶೇಷವಲ್ಲ. ಎಂದು ಆಶಯ.

8. **"ಕೃತಾತ್ಯಯೇಽನುಶಯವಾನ್" (3–1–8)** ಇತ್ಯಾದಿ ಸೂತ್ರಭಾಷ್ಯದಲ್ಲಿ (ಪುಟ–670) ಶಾಂತಿಪರ್ವ ವಚನ ಹೀಗಿದೆ.

**ಕದಾಚಿತ್ಸುಕೃತಂ ಕರ್ಮ ಕೂಟಸ್ಥಮಿಹ ತಿಷ್ಠತಿ**
**ಮಜ್ಜಮಾನಸ್ಯ ಸಂಸಾರೇ ಯಾವದ್ದುಃಖಾದ್ವಿಮುಚ್ಯತೇ** [5]

ಹಿಂದೆ ಮಾಡಿದ ಪುಣ್ಯವು ನಮ್ಮನ್ನು ಈ ಸಂಸಾರಸಾಗರದಿಂದ ಮುಕ್ತರನ್ನಾಗಿ ಮಾಡುತ್ತದೆ. ಎಂದು ಇದರ ಅರ್ಥ!

---

1. The Mahabharata ಶಾಂತಿ– 224–55
2. The Mahabharata ಶಾಂತಿ–338–25
3. The Mahabharata ಶಾಂತಿ–326–28
4. The Mahabharata ಶಾಂತಿ–224–40
5. The Mahabharata ಶಾಂತಿ–279–17

9. **"ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮನಾಭ್ಯಾಮ್" (3–2–24)** ಸೂತ್ರಭಾಷ್ಯದಲ್ಲಿ (ಪುಟ–722)

ಶಾಂತಿಪರ್ವ ವಚನ –

**ಯಂ ವಿನಿದ್ರಾ ಜಿತಶ್ವಾಸಾಃ ಸಂತುಷ್ಟಾಃ ಸಂಯತೇಂದ್ರಿಯಾಃ**
**ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್** [1]

ನಿದ್ದೆ, ಗಾಳಿ, ಇಂದ್ರಿಯಗಳನ್ನು ಜಯಿಸಿದವರು ಮತ್ತು ಸಂತುಷ್ಟರು ಅಂತರಾತ್ಮವನ್ನು ನೋಡಬಲ್ಲರು. ಅಂತಹಾ ಯೋಗಾತ್ಮನಿಗೆ ನಮಸ್ಕಾರ. ಯೋಗಿಗಳು ಅಂತಹಾ ಸನಾತನನಾದ ಭಗವಂತನನ್ನು ದರ್ಶಿಸಬಲ್ಲರೆಂದು ಇದರ ಅರ್ಥ!

10. **"ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್:(3–4–26)** ಸೂತ್ರಭಾಷ್ಯದಲ್ಲಿ (ಪುಟ–597) ಶಾಂತಿಪರ್ವೋಕ್ತಿ

**ಕಷಾಯಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ**
**ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ** [2]

ಕರ್ಮಗಳೆಲ್ಲವೂ ಪಕ್ವವಾದಾಗ ಜ್ಞಾನವು ಉಂಟಾಗುತ್ತದೆಂದು ಇದರ ಅರ್ಥ! ಈ ರೀತಿ ಇಲ್ಲಿಯವರೆಗೂ ಪ್ರಸ್ಥಾನತ್ರಯಭಾಷ್ಯದಲ್ಲಿ ಪ್ರದರ್ಶಿಸಿದ ಮಹಾಭಾರತ ವಚನಗಳನ್ನು ವಿವರಿಸಲಾಗಿದೆ.

ಶ್ರೀ ಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯದಲ್ಲಿ ನನಗೆ ಕಾಣಸಿಕ್ಕ ವ್ಯಾಸಮಹರ್ಷಿಯ ಪುರಾಣವಚನಗಳು ಅಥವಾ ಮಹಾಭಾರತವಚನಗಳನ್ನು ಮಾತ್ರವೇ ಪ್ರಮಾಣಪೂರಕವಾಗಿ ನೀಡಲಾಗಿದೆ. ಇನ್ನೂ ಅನೇಕ ವಚನಗಳು ಇವೆ. ಆದರೆ ವ್ಯಾಸವಚನಗಳನ್ನು ಸಂಗ್ರಹಿಸುತ್ತಿದ್ದರೆ ಈ ವ್ಯಾಸಕಾಯ ಸ್ಥೂಲರೂಪವನ್ನು ಧರಿಸುತ್ತದೆಂಬ ಭಾವನೆಯಿಂದ ಇಲ್ಲಿಗೆ ಸಮಾಪ್ತಿಗೊಳಿಸಲಾಗಿದೆ.

**ವಿಜ್ಞಾಪನೆ –** ಪುರಾಣವೆಂಬ ಶಬ್ದಕ್ಕೆ ತಮಗೆ ತೋರಿದ ರೀತಿಯಲ್ಲಿ ಶಾಸ್ತ್ರಸಮ್ಮತವಾಗಿರದ ಅರ್ಥವನ್ನು ತಿಳಿಸುವುದು ಸರಿಯಲ್ಲ. ಹಾಗೇ "ವ್ಯಾಸಮಹರ್ಷಿಯ ವಿಷಯದಲ್ಲಾಗಲೀ, ಶಂಕರಭಗವತ್ಪಾದರ ವಿಷಯದಲ್ಲಾಗಲೀ ತಮಗೆ ಗೌರವ, ಪೂಜ್ಯಭಾವನೆ ಇದೆ ಆದರೆ ವ್ಯಾಸರು ರಚಿಸಿರುವ ಪುರಾಣಗಳು ನಮಗೆ ಸಮ್ಮತವಲ್ಲ"ಎಂಬ ಕೆಟ್ಟ ಭಾವನೆಯು ಕ್ಷಮಿಸಲಾರದಂತಹುದು. ಅಲ್ಪಸ್ವಲ್ಪ ಜ್ಞಾನವನ್ನು ತಿಳಿದುಕೊಂಡು ತಮಗೆ ಎಲ್ಲಾ ಗೊತ್ತು ಎನ್ನುವವರನ್ನು ಬ್ರಹ್ಮದೇವನು ಒಪ್ಪುವುದಿಲ್ಲವೆಂದು ಭರ್ತೃಹರಿ ಈ ರೀತಿ ತಿಳಿಸಿದ್ದಾನೆ.

**ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ**
**ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ** [3]

ಎಂಬ ಈ ಶ್ಲೋಕ ಆಗಾಗ ನೆನಪಾಗುತ್ತದೆ. ಆದ್ದರಿಂದ ಪುರಾಣೇತಿಹಾಸಗಳು ನಮಗೆ ಸದಾ ಆದರಣೀಯವಾದುವು. ಈ ವಿಷಯದಲ್ಲಿ ಇತರ ಯೋಚನೆಗಳು ವಿಹಿತವಲ್ಲ.

**॥ ನಮೋ ಮಹದ್ಭ್ಯಃ ॥**

*~*~*~*~*

1. The Mahabharata ಶಾಂತಿ –47–35
2. The Mahabharata ಶಾಂತಿ –262–36
3. सुभाषितत्रिशति(नीतिशतकम)

ವೇಂಕಟಾದ್ರಿಯ ಮೇಲೆ ವರಾಹಸ್ವಾಮಿಯನ್ನು ದರ್ಶಿಸುತ್ತಿರುವ ಅಂಜನಾ ಕೇಸರಿ



# 3. ಶ್ರೀ ವೇಂಕಟಾಚಲ ಮಾಹಾತ್ಮ್ಯ–ಪ್ರಾಮಾಣಿಕತೆ

ಡಾ॥ ಸಮುದ್ರಾಲ ವೇಂಕಟರಂಗರಾಮಾನುಜಾಚಾರ್ಯರು

ತಿರುಮಲೆಯ ಕ್ಷೇತ್ರಕ್ಕೆ ಶ್ರೀನಿವಾಸನಿಗೆ ಸಂಬಂಧಿಸಿದ ಸಂಪೂರ್ಣವಾದ ಇತಿಹಾಸವನ್ನು, ಸಾಂಪ್ರದಾಯಿಕ ವೈಭವವನ್ನು ವಿವರಿಸುವಂತಹ ಮೂರು ಗ್ರಂಥಗಳು ಇವೆ. ಅವುಗಳು, 1. ವೇಂಕಟಾಚಲ ಮಾಹಾತ್ಮೆ(ತ್ಮ್ಯಂ) 2. ವೇಂಕಟಾಚಲೇತಿಹಾಸಮಾಲ 3. ತಿರುಮಲೆಯ ಸಮಯಾಚಾರಗಳು. ಇವುಗಳಲ್ಲಿ ಮೊದಲನೆಯ ಗ್ರಂಥ ಸ್ವತಂತ್ರ್ಯ ಗ್ರಂಥವಲ್ಲ ಪರಂತು ಕೇವಲ ಪುರಾಣಭಾಗ ಸಂಕಲನ ಮಾತ್ರವಾಗಿದೆ. ಈ ಸಂಕಲನದಲ್ಲಿ ಲಭಿಸುತ್ತಿರುವ ಪುರಾಣಗಳಲ್ಲಿನ ಎಲ್ಲಾ ಭಾಗಗಳನ್ನು ಅಲ್ಲದಿದ್ದರು ಕೆಲವು ಭಾಗಗಳನ್ನು ಭಗವದ್ರಾಮಾನುಜರೇ ಉದ್ಧರಿಸಿದ್ದಾರೆ. ಸಾವಿರ ವರ್ಷಗಳ ಹಿಂದೆ ತಿರುಮಲೆಯ ಕ್ಷೇತ್ರದಲ್ಲಿ ನೆಲಸಿರುವ ಮೂರ್ತಿಯ ವಿಷಯದಲ್ಲಿ ಸಂದೇಹಗಳು ಉಂಟಾದಾಗ, ಬೆಟ್ಟದ ಮೇಲಿರುವ ಮೂರ್ತಿ ಶ್ರೀನಿವಾಸನೇ ಎಂದು ರುಜುವಾತು ಮಾಡುವುದಕ್ಕಾಗಿ ಭಗದ್ರಾಮಾನುಜಾಚಾರ್ಯರು ಪುರಾಣಗಳಲ್ಲಿರುವ ಆಧಾರಗಳನ್ನು ಆಶ್ರಯಿಸಿದರು. ವೇದವಚನಗಳನ್ನು, ಸ್ಮೃತಿವಚನಗಳನ್ನು, ಪುರಾಣವಚನಗಳನ್ನು – ಈ ಮೂರರನ್ನು ಪ್ರಮಾಣವಾಗಿ ತೋರಿದ್ದರೂ, ಪುರಾಣವಚನಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ.

ಇಲ್ಲಿ ಪೂರ್ವಪಕ್ಷಿಗಳಾದ ಶೈವರೆ ಮುಂತಾದವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಪುರಾಣಗಳನ್ನೇ ಆಶ್ರಯಿಸಿದರು. ಈ ಸಂದರ್ಭದಲ್ಲಿ ರಾಮಾನುಜರ ವಾದವನ್ನು, ಪ್ರತಿವಾದಿಗಳ ವಾದವನ್ನು, ಅವರು ಪ್ರಸ್ತುತಿ ಮಾಡಿದ ಪುರಾಣ ವಚನಗಳನ್ನು "ಶ್ರೀವೇಂಕಟಾಚಲ ಇತಿಹಾಸಮಾಲ" ಎನ್ನುವ ಗ್ರಂಥದಲ್ಲಿ ರಾಮಾನುಜರ ಶಿಷ್ಯರಾದ ಅನಂತಾಚಾರ್ಯರು ವಿಶೇಷವಾಗಿ ನಿರ್ದೇಶಿಸಿದ್ದಾರೆ. ಹೆಚ್ಚೂ ಕಡಿಮೆ ಐದು ಸ್ತಬಕಗಳಲ್ಲಿ ವರ್ಣಿಸಲ್ಪಟ್ಟ ವಾದ–ಪ್ರತಿವಾದಗಳ ಪ್ರಕ್ರಿಯೆ, ರಾಮಾನುಜರು ವೇಂಕಟಾಚಲದ ವಿಷಯದಲ್ಲಿ ಮಾಡಿದ ನಿರ್ಣಯಗಳನ್ನು ಆಳವಾಗಿ ವಿವರಿಸಲಾಗಿದೆ. ಇಲ್ಲಿ ರಾಮಾನುಜಾಚಾರ್ಯರು ಸಮರ್ಥಿಸಿದ ಪುರಾಣ ವಚನಗಳನ್ನು ಅನಂತಾಚಾರ್ಯರು ಗ್ರಂಥದ ರೂಪದಲ್ಲಿ ತಂದರು. ರಾಮನುಜರಿಂದ ಉದಹರಿಸಲ್ಪಟ್ಟ ಪುರಾಣಗಳು ಇವು. 1. ವಾಮನಪುರಾಣ, 2. ಶ್ರೀವರಾಹಪುರಾಣ, 3. ಪಾದ್ಮಪುರಾಣ, 4. ಗರುಡಪುರಾಣ, 5. ಬ್ರಹ್ಮಾಂಡಪುರಾಣ, 6. ಭವಿಷ್ಯೋತ್ತರ ಪುರಾಣ, 7. ಬ್ರಹ್ಮಪುರಾಣ, 8. ಸ್ಕಂದಪುರಾಣ, 9. ಮಾರ್ಕಂಡೇಯಪುರಾಣ, 10. ಹರಿವಂಶದಲ್ಲಿನ ಶೇಷಧರ್ಮ ಎಂಬ ಭಾಗ ಹೆಚ್ಚೂ ಕಡಿಮೆ ಇತಿಹಾಸಮಾಲೆಯಲ್ಲಿ ಇವೆಲ್ಲವೂ ವಿವರವಾಗಿ ತಿಳಿಸಲ್ಪಟ್ಟಿವೆ. ಪುರಾಣಗಳ ಆಧಾರದಿಂದಲೇ ಅನೇಕ ವಿಷಯಗಳನ್ನು ರಾಮಾನುಜರು ಯಾದವ ರಾಜನ ಸಭೆಯಲ್ಲಿ ನಿರ್ಧಾರ ಮಾಡಿದ್ದೆ ಅಲ್ಲದೇ ಬೆಟ್ಟದ ಮೇಲೆ ನೆಲೆಸಿರುವ ಸ್ವಾಮಿ ಶ್ರೀನಿವಾಸನೆಂದು ನಿರ್ಧಾರಿಸುವುದಕ್ಕೆ ಬೇಕಾದ ಅನೇಕ ಪುರಾವೆಗಳನ್ನು ಪುರಾಣಗಳಿಂದಲೇ ಸಂಗ್ರಹಿಸಿದರು.

ಆದರೆ ಇಲ್ಲಿ ಒಂದು ಪ್ರಶ್ನೆ ಮೂಡಬಹುದು. ಪುರಾಣಗಳ ಪ್ರಾಮಾಣ್ಯಗಳಿಂದ ಅಲ್ಲದೇ ತಿರುಮಲೆಯ ಬೆಟ್ಟದ ಮೇಲೆ ಇರುವುದು ಶ್ರೀನಿವಾಸನೆಂದು ತಿಳಿಯಲಾಗುವದಿಲ್ಲವೇ? "ಅರಾಯಿಕಾಣೇ" ಇತ್ಯಾದಿ ವೇದಮಂತ್ರವೇ ಈ ವಿಷಯವನ್ನು ನಿರ್ಧಾರಿಸುತ್ತಿದೆ ಅಲ್ಲವೇ!. ನಿಜ! ಋಗ್ವೇದದಲ್ಲಿನ ದಶಮಮಂಡಲದಲ್ಲಿ ಇರುವ "ಅರಾಯಿಕಾಣೇ" ಎನ್ನುವ ಮಂತ್ರ ಶ್ರೀನಿವಾಸನನ್ನು ಕುರಿತಾಗಿಯೇ ಇದೆ ಎಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಮಂತ್ರ ಶ್ರೀನಿವಾಸನನ್ನು ಕುರಿತಾಗೇ ಇದೆ ಎಂಬುದಕ್ಕೆ ರುಜುವಾತು ಏನು? ಎಂಬ ಪ್ರಶ್ನೆ ಉಂಟಾಗಿದೆ. ಆದರೆ ಇದನ್ನು ಪರಿಹರಿಸುವುದಕ್ಕೆ ಪುನಃ ಪುರಾಣಗಳನ್ನೇ ಆಶ್ರಯಿಸದೇ ವಿಧಿ ಇಲ್ಲ. ಹೇಗೆಂದರೆ ಈ ಮಂತ್ರವನ್ನು ಆಯಾ ಆಚಾರ್ಯರು ಶ್ರೀನಿವಾಸನ ಪರವಾಗಿ ಅನ್ವಯಿಸುವ ಮೊದಲು ಆ ಮಂತ್ರವನ್ನು ಹೀಗೆ ಅನ್ವಯಿಸಬೇಕೆಂದು ತೋರಿಸಿಕೊಟ್ಟಿರುವದು ಪುರಾಣಗಳೇ ಎನ್ನುವ ಸತ್ಯಸ್ಯ ಸತ್ಯವಾದ ವಿಚಾರ.

**'ಅರಾಯಕಾಣೇ ವಿಕಟೇ ಗಿರಿಂ ಗಚ್ಛೇತಿ ತಂ ವಿದುಃ**
**ಏವಂ ವೇದಮಯಃ ಸಾಕ್ಷಾತ್ ಗಿರೀಂದ್ರಃ ಪನ್ನಗಾಚಲಃ'** [1]

ಎಂದು **"ಭವಿಷ್ಯೋತ್ತರವಚನವು"** ಈ ಮಂತ್ರದ ತಾತ್ಪರ್ಯವನ್ನು ಸ್ಪಷ್ಟೀಕರಿಸುತ್ತಿದೆ. ವಾಮನಾದಿ ಪುರಾಣಗಳ ಪ್ರಾಮಾಣ್ಯವನ್ನು ವೇಂಕಟಾಚಲದ ವಿಷಯದಲ್ಲಿ ಸ್ವೀಕರಿಸದಿದ್ದರೆ ಇಲ್ಲಿ ಯಾವ ಆಗಮ ಶಾಸ್ತ್ರವು ಆಚರಿಸಲಾಗುತ್ತಿತ್ತೋ ಅದು ನಮಗೆ ತಿಳಿಯುವುದಿಲ್ಲ. ಆದರೆ ಪುರಾಣವು ಇಲ್ಲಿ ವೈಖಾನಸ ಆಗಮ ಶಾಸ್ತ್ರವು ಆಚರಣೆಯಲ್ಲಿತ್ತೆಂದು ನಿರ್ದ್ವಂದ್ವವಾಗಿ ಘೋಷಿಸುತ್ತಿದೆ.

**ಭವಿಷ್ಯೋತ್ತರ ಪುರಾಣದಲ್ಲಿ -**

**ಕನ್ಯಾಮಾಸಂಗತೇ ಭಾನೌ ದ್ವಿತೀಯಾಯಾಂ ಜಗತ್ಪತೇಃ**
**ಧ್ವಜಾರೋಹಣಮಾಧಾಯ ಸಾಂಕುರಾರ್ಪಣಮೇವ ಚ,**
**ವೈಖಾನಸಮುನಿಶ್ರೇಷ್ಠೈಃ ಪೂಜಾ ಮಂತ್ರೈಃ ಪ್ರಕಲ್ಪಿತಾ** [2]

ಇತ್ಯಾದಿ ಶ್ಲೋಕಗಳು ವೈಖಾನಸ ಆಗಮ ಶಾಸ್ತ್ರ ಇಲ್ಲಿ ಪ್ರಾಚೀನಕಾಲದಿಂದಲೂ ಆಚರಣೆಯಲ್ಲಿತ್ತೆಂದು ತಿಳಿಸುತ್ತಿದೆ.

ಈ ಪುರಾಣಗಳನ್ನು ಪ್ರಮಾಣವೆಂದು ಅಂಗೀಕರಿಸದಿದ್ದರೆ ತಿರುಮಲೆ ಕ್ಷೇತ್ರದಲ್ಲಿ ನೆಲೆಸಿರುವುದು ಶ್ರೀನಿವಾಸನೇ ಎಂದು ನಿರ್ಧರಿಸುವುದಾಗಲೀ, ಪದ್ಮಾವತಿದೇವಿಯೊಂದಿಗೆ ಶ್ರೀನಿವಾಸನ ವಿವಾಹ ನಡೆದ ರೀತಿಯಾಗಲೀ ತಿಳಿದುಕೊಳ್ಳುವುದಕ್ಕೆ ಬೇರಾವ ಪುರಾವೆಗಳೂ ಇಲ್ಲ. ಆಗ ತಿರುಮಲೆಯ ಚರಿತ್ರೆಯೇ ಆಧಾರರಹಿತವಾಗಿ, ಅಪ್ರಾಮಾಣಿಕವಾಗುತ್ತದೆ.

ಭಗವದ್ರಾಮಾನುಜಾಚಾರ್ಯರು ಅತ್ಯಂತ ಶ್ರಮವಹಿಸಿ ತಿರುಮಲೆಯ ಶ್ರೀನಿವಾಸಮಾಹತ್ಮೆಯನ್ನು ವಿವರಿಸುವಂತಹಾ ಪುರಾಣಗಳ ಭಾಗಗಳನ್ನು ಸಂಗ್ರಹಿಸಿ, ಒಂದು ಕ್ರಮಪದ್ಧತಿಯಲ್ಲಿ ಯಾದವರಾಜನ ಸಭೆಯಲ್ಲಿ ಸಮರ್ಥಿಸಿದರು. ಈ ವಿಷಯವನ್ನು ಇತಿಹಾಸಮಾಲಾಗ್ರಂಥದಲ್ಲಿ ಅನಂತಾಚಾರ್ಯರು ಈ ಕೆಳಗಿನ ರೀತಿಯಲ್ಲಿ ವಿವರಿಸಿದರು.

**"ಅಥ ಶ್ರೀವೇಂಕಟಾಚಲಮಾಹಾತ್ಮ್ಯಪರಿಶೀಲನ-ತತ್ಪರ್ವತ ಸಾಧಾರಣಕತಿಪಯ-ಧರ್ಮವಿಶೇಷ-ವ್ಯವಸ್ಥಾಪನ-ವೃತ್ತಾಂತಃ ಉಚ್ಯತೇ. ಶ್ರೀವೆಂಕಟಾಚಲಮಾಹಾತ್ಮ್ಯವಿಷಯಪುರಾಣಭಾಗಾನ್ ಸಮಂತತಃ ಪರಿಶೀಲಯನ್ , ಭಗವಾನ್ ರಾಮಾನುಜಮುನಿಃ"** [3] ಎನ್ನುತ್ತಾ ಈ ವೃತ್ತಾಂತವನ್ನು ವಿವರಿಸಿದರು.

ಶ್ರೀವೇಂಕಟಾಚಲಮಾಹಾತ್ಮೆ ಎಂಬ ಶಬ್ದಪ್ರಯೋಗವನ್ನು ಹಲವಾರು ಬಾರಿ ಮಾಡಿದ್ದರಿಂದಲೇ ಈ ಪುರಾಣಭಾಗಗಳೆಲ್ಲವೂ **"ಶ್ರೀವೇಂಕಟಾಚಲಮಾಹಾತ್ಮೆ"** ಎಂದು ಪ್ರಸಿದ್ಧವಾಗಿವೆ. ರಾಮಾನುಜರಿಗಿಂತಲೂ ಮೊದಲು ಇದ್ದವರು ಯಾರೂ ಪುರಾಣಗಳಲ್ಲಿರುವ ಈ ಭಾಗಗಳ ಬಗೆಗೆ ಅಷ್ಟಾಗಿ ದೃಷ್ಟಿಹರಿಸಲಿಲ್ಲ. ರಾಮಾನುಜರ ನಂತರವೂ ಈ ಪುರಾಣಗಳ ಭಾಗಗಳನ್ನು ಅನುಸಂಧಾನ ಮಾಡಿದರೂ, ಹೆಚ್ಚೂಕಡಿಮೆ ಐನೂರು ಆರುನೂರು ವರ್ಷಗಳಕಾಲ ನಂತರ ಇವುಗಳ ಬಗೆಗೆ ದೃಷ್ಟಿ ಹರಿಸಿ, ಇವನ್ನು ವಿಶೇಷವಾಗಿ ಒಂದು ಸಂಕಲನದಂತೆ ಸಂಗ್ರಹಿಸುವ ಪ್ರಯತ್ನ ನಡೆಯಿತು. ಈ ಪುರಾಣಭಾಗಗಳನ್ನು ಅನೇಕರು ಉಲ್ಲೇಖಿಸಿದ ರೀತಿಯನ್ನು ಗಮನಿಸಿದರೆ ಇವೆಲ್ಲವೂ ಕೆಲವು ಶತಮಾನಗಳ ಹಿಂದೆ ರಾಮಾನುಜರ ನಂತರದ ಕಾಲದಲ್ಲಿ ಪ್ರಚುರಿತವಾದವೆಂದು ಸ್ಪಷ್ಟವಾಗುತ್ತಿದೆ.

---

1.ಶ್ರೀವೇಂಕಟಾಚಲಮಾಹಾತ್ಮ್ಯಂ(ಭವಿಷ್ಯೋತ್ತರಪುರಾಣ- ತೀರ್ಥಖಂಡಾಂತರ್ಗತ-4-21,22) ದ್ವಿತೀಯಭಾಗ ಪುಟ-294, - ತಿ.ತಿ.ದೇ ಪ್ರಕಟಣೆ

2.ಶ್ರೀವೇಂಕಟಾಚಲಮಾಹಾತ್ಮ್ಯಂ(ಭವಿಷ್ಯೋತ್ತರಪುರಾಣ-ತೀರ್ಥಖಂಡಾಂತರ್ಗತ-14-22,23) ದ್ವಿತೀಯಭಾಗ-ಪುಟ-437, - ತಿ.ತಿ.ದೇ ಪ್ರಕಟಣೆ

3. ಶ್ರೀವೇಂಕಟಾಚಲೇತಿಹಾಸಮಾಲ-ಸಪ್ತಮಸ್ತಬಕಾರಂಭ ಪುಟ 184

ಇವುಗಳಿಗೆ ಮುಖ್ಯ ಪ್ರಮಾಣಗಳೇನಿವೆ? ಎಂದು ಯಾರಾದರೂ ಸಂದೇಹಿಸಿದರೆ ಪ್ರಾಮಾಣಿಕರಾದ ಆಚಾರ್ಯರನ್ನು ಉದಹರಿಸುವದೇ ಎಂದು ನಿರ್ದ್ವಂದ್ವವಾಗಿ ಹೇಳಬೇಕಾಗಿ ಬರುತ್ತದೆ. **ನಮ್ಮ ಪೂರ್ವಾಚಾರ್ಯರು ತಾವು ಬರೆದ ಅನೇಕ ಗ್ರಂಥಗಳಲ್ಲಿ ಅನೇಕ ಗ್ರಂಥಗಳ ಪ್ರಮಾಣಗಳನ್ನು ತೋರಿಸಿದ್ದಾರೆ. ಆ ಗ್ರಂಥಗಳು ಕಾಲಾಂತರದಲ್ಲಿ ಕಣ್ಮರೆಯಾದರೂ ಅವು ಅಪ್ರಮಾಣಗಳೆಂದು ಭಾವಿಸಬಾರದು.**

ಉದಾಹರಣೆಗೆ ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ, ಇನ್ನಿತರ ಗ್ರಂಥಗಳಲ್ಲಿ ತಮ್ಮ ಪೂರ್ವಾಚಾರ್ಯರ ವಾದಗಳನ್ನು ಉಲ್ಲೇಖಿಸಿದ್ದಾರೆ. ಅವರಲ್ಲಿ ಭರ್ತೃಪ್ರಪಂಚಾಚಾರ್ಯರು ಒಬ್ಬರು. ಇವರು ಪ್ರಾಚೀನ ಬ್ರಹ್ಮಪರಿಣಾಮವಾದವನ್ನು ಕಂಡುಹಿಡಿದರೆಂದು ಶಂಕರಾಚಾರ್ಯರು ತಿಳಿಸಿದ್ದಾರೆ. ಇವರ ವಾದವನ್ನು ಸುರೇಶ್ವರಾಚಾರ್ಯರು ತಮ್ಮ ವಾರ್ತಿಕೆಗಳಲ್ಲಿ ವಿಸ್ತಾರವಾಗಿ ತಿಳಿಸಿದ್ದಾರೆ. ಭತೃಪ್ರಪಂಚಾಚಾರ್ಯರು ಬರೆದ ಗ್ರಂಥಗಳನ್ನು ಓದದೇ ಅವರ ವಾದವನ್ನು ಶಂಕರಾಚಾರ್ಯರಾಗಲೀ, ಸುರೇಶ್ವರಾಚಾರ್ಯರಾಗಲೀ ಸ್ವಕಪೋಲಕಲ್ಪನೆಯಿಂದ ಉಲ್ಲೇಖಿಸಿದ್ದಾರೆಂದರೆ ಅದಕ್ಕಿಂತಲೂ ದುಃಸಾಹಸ, ಅವಿಶ್ವಸನೀಯವಾದ ದುರ್ವಚನ ಇನ್ನೊಂದಿರುವದಿಲ್ಲ. ಹಾಗೇ ಭಗವದ್ರಾಮಾನುಜಾಚಾರ್ಯರು ತಮ್ಮ ಭಾಷ್ಯದಲ್ಲಿ ಟಂಕ–ದ್ರಮಿಡ–ಭಾರುಚಿ, ಕಪರ್ದಿ ಮುಂತಾದ ಆಚಾರ್ಯರ ಹೆಸರಗಳನ್ನು ಮತ್ತು ಟಂಕ–ದ್ರಮಿಡರ ವಚನಗಳನ್ನು ಉಲ್ಲೇಖಿಸಿದ್ದಾರೆ. ಟಂಕ–ದ್ರಮಿಡರನ್ನು ಶಂಕರಾಚಾರ್ಯರು ಕೂಡಾ ಉಲ್ಲೇಖಿಸಿದ್ದಾರೆ. ಆದರೆ ಅವರ ಗ್ರಂಥಗಳು ಇಂದು ಲಭ್ಯವಿಲ್ಲ. ಹಾಗೇ ಸಂಕರ್ಷಕಾಂಡ, ದೈವತ ಕಾಂಡ ಎಂದು ನಮ್ಮ ಆಚಾರ್ಯರು ಶಂಕರ–ರಾಮಾನುಜಾದಿ ಉದಹರಿಸಿದ ಸೂತ್ರಗಳು, ವಚನಗಳು ಇಂದಿನ ಪ್ರತಿಗಳಲ್ಲಿ ಕೆಲವು ಕಂಡುಬಂದರೂ, ಇನ್ನೂ ಕೆಲವು ಕಾಣಸಿಗುತ್ತಿಲ್ಲ. ಆದರು ಅವರ ವಚನಗಳು, ಉಲ್ಲೇಖನಗಳು ಅಪ್ರಮಾಣವೆನ್ನುವ ಸಾಹಸವನ್ನು ಯಾರೂ ಮಾಡಲಾರರು. ನಮ್ಮ ಆಚಾರ್ಯರ ಉಲ್ಲೇಖನಗಳನ್ನು ಮೂಲವನ್ನು ಶಂಕಿಸುವುದೆಂದರೆ ಅವರ ಪ್ರಾಮಾಣ್ಯವನ್ನು ಶಂಕಿಸಿದಂತೆಯೇ ಆಗುತ್ತದೆ.

ಹಾಗೆಯೇ ಭಗವದ್ರಾಮಾನುಜಾಚಾರ್ಯರು ಯಾದವ ರಾಜನ ಸಭೆಯಲ್ಲಿ ಉದಹರಿಸಿದ ಪುರಾಣವಚನಗಳೆಲ್ಲವೂ ಪ್ರತಿಗಳ ರೂಪದಲ್ಲಿವೆ. ನಂತರವೂ ಲಭಿಸಿವೆ. ಆ ಪುರಾಣಗಳಲ್ಲಿರುವ ವೇಂಕಟಾಚಲಕ್ಕೆ ಸಂಬಂಧಿಸಿದ ಕಥೆಗಳು ನಂತರದ ಕಾಲದಲ್ಲೂ ಉದಹರಿಸಲ್ಪಟ್ಟಿವೆ. ಮುಖ್ಯವಾಗಿ ಪದ್ಮಾವತಿ ವಿವಾಹದ ಕಥೆ ಮೊದಲಬಾರಿಗೆ ಪುರಾಣದಲ್ಲೇ ಉಲ್ಲೇಖಿಸಲ್ಪಟ್ಟಿದೆ, ಆನಂತರದ ಕಾಲದಲ್ಲಿ ಹೆಚ್ಚೂ ಕಡಿಮೆ ಸಾವಿರ ವರ್ಷಗಳ ಹಿಂದೆಯೇ ಅಲ್ಲದೇ ನಂತರ ಐನೂರು ಆರುನೂರು ವರ್ಷಗಳಕಾಲದಲ್ಲಿ, ನಂತರ ಅನ್ನಮಯ್ಯ, ತರಿಗೊಂಡ ವೇಂಗಮಾಂಬ, ವೇಂಕಟಾಧ್ವರಿ ಮುಂತಾದವರುಗಳಿಂದಲು ಉದಹರಿಸಲ್ಪಟ್ಟಿದೆ. ಈ ಪುರಾಣಕಥೆಗಳನ್ನು ಅಶೇಷ ವಿದ್ವಲ್ಲೋಕವೂ ಆದರಿಸುತ್ತಿದೆ. ಆದ್ದರಿಂದ ಶ್ರೀವೇಂಕಟಾಚಲಮಾಹಾತ್ಮದ ಪರವಾಗಿ ಎಷ್ಟೋ ಹಿರಿಯರು ಉಲ್ಲೇಖಿಸಿರುವ ಇತಿಹಾಸಗಳನ್ನು ಈಗಿನ ಅಧುನಿಕ ವಿವೇಚನಾ ಧೋರಣೆಯಲ್ಲಿ ವಿಚಾರಿಸಿ, ಏನಾದರೂ ಕೆಲವು ಅಂಶಗಳನ್ನು ಇಂದಿನ ಪುರಾಣಪ್ರತಿಗಳಲ್ಲಿ ಲಭಿಸದಿದ್ದರೆ, ಅವುಗಳನ್ನು ಅಮೂಲವೆಂದು ನಿರ್ಧರಿಸುವುದು "ಮೂಲಚ್ಛೇದಿ ತವ ಪಾಂಡಿತ್ಯಪ್ರಕರ್ಷಃ" ಎಂಬ ನ್ಯಾಯದಂತೆ ನಿಶ್ಚಯಿಸಬೇಕಾಗುತ್ತದೆ.

"ಶ್ರೀವೇಂಕಟಾಚಲ ಮಾಹಾತ್ಮೆ"ಎಂಬ ಹೆಸರಿನಲ್ಲಿ ಸಂಕಲನಗೊಂಡಿರುವ ಪುರಾಣಭಾಗಗಳ ಬಗೆಗೆ ಸಂಶೋಧನೆ ನಡೆದಿದೆ. ಡಾ॥ ಕೆ.ವಿ ರಾಘವಾಚಾರ್ಯ ಎಂಬುವವರು ವಿಶದವಾಗಿ ಇದರ ಬಗೆಗೆ ಸಂಶೋಧನೆಯನ್ನು ನಡೆಸಿ ಮೇಲೆ ತಿಳಿಸಿರುವ ಪುರಾಣಗಳೆಲ್ಲದರಲ್ಲೂ ವೇಂಕಟಾಚಲಮಾಹಾತ್ಮೆ ಇದೆ ಎಂದು ತಿಳಿಸಿದ್ದಾರೆ. ಆದರೆ ಮೇಲ್ಕಂಡ ಪುರಾಣಗಳ ಕ್ರಮದಲ್ಲಿ ಶ್ರೀಮದ್ಭಾಗವತವೂ ಸೇರಿಸಬೇಕಾಗಿತ್ತು. ಆದರೆ ಸಂಕಲನಕಾರರು ಅದನ್ನು ಸೇರಿಸದಿರುವದಕ್ಕೆ ಕಾರಣವನ್ನು 'ಆ ಕಾಲಕ್ಕೆ ಅವರು ಸೇರಿಸಬೇಕೆಂದು ಭಾವಿಸಲಿಲ್ಲ' ಎಂದು ಊಹಿಸಬಹುದು.

ಭಾಗವತದಲ್ಲಿ ಬಲರಾಮನ ತೀರ್ಥಯಾತ್ರೆಯ ಘಟ್ಟವನ್ನು ವರ್ಣಿಸುವಾಗ ಆತ ವೇಂಕಟಗಿರಿಯನ್ನು ಸಂದರ್ಶಿಸಿದನೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

**ಸ್ಕಂದಂ ದೃಷ್ಟ್ವಾ ಯಯೌ ರಾಮಃ ಶ್ರೀಶೈಲಂ ಗಿರಿಶಾಲಯಂ**
**ದ್ರವಿಡೇಷು ಮಹಾಪುಣ್ಯಂ ದೃಷ್ಟ್ವಾದ್ರಿಂ ವೇಂಕಟಂ ಪ್ರಭುಃ** [1]

ಇಷ್ಟೆ ಅಲ್ಲದೇ ತ್ರಿಮೂರ್ತಿಗಳ ಸಹನೆಯನ್ನು, ಸಾತ್ವಿಕತೆಯನ್ನು ಪರೀಕ್ಷಿಸಿ ಲೋಕಕ್ಕೆಲ್ಲಾ ವಿವರಿಸುವ ಉದ್ದೇಶದಿಂದ ಭೃಗುಮಹರ್ಷಿ ಇತರ ಮಹರ್ಷಿಗಳ ಪ್ರೋದ್ಬಲದಿಂದ ಮಾಡಿದ ಪ್ರಯತ್ನವನ್ನು ಶ್ರೀಭಾಗವತದಶಮೋತ್ತರದಲ್ಲಿನ 89ನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾರೆ. ಆದರೂ ಈ ಭಾಗ ಪುರಾಣಸಂಕಲನೆಯಲ್ಲಿ ಇಲ್ಲ. ಅಷ್ಟೇಅಲ್ಲ, ವಾರಾಹಪುರಾಣದಲ್ಲಿನ ಕೆಲವು ಭಾಗಗಳನ್ನು ಸೇರಿಸದೇ ಉಳಿದುಕೊಂಡಿವೆ ಎಂದು 2009 ರಲ್ಲಿ ಸಂಶೋಧಕರು ಗಮನಿಸಿದ್ದಾರೆ. ಹೆಚ್ಚೂ ಕಡಿಮೆ ಇಂದಿನ ಪ್ರತಿಗಳಲ್ಲಿ ಲಭಿಸುತ್ತಿರುವ ಐದು ಅಧ್ಯಾಯಗಳು ಸಂಕಲನದಲ್ಲಿ ಸೇರಿಲ್ಲ. ನಂತರದ ಕಾಲದಲ್ಲಿ ಪರಿವರ್ಧಿತ ಸಂಸ್ಕರಣದಲ್ಲಿ ಸೇರಿಸಬೇಕೆಂದು ಸಹಾ ಭಾವಿಸಿದರು. ಕಾಲಗತಿಯಲ್ಲಿ ಈಗಿರುವ ಸಮಾಚಾರವು ಸಹಾ ಕಳೆದು ಹೋಗುವ ಸಾಧ್ಯತೆಗಳಿವೆ. ಭಗವದ್ರಾಮಾನುಜಾಚಾರ್ಯರಿಗಿಂತಲೂ ಮೊದಲೇ ಈ ಪುರಾಣಭಾಗಗಳ ಬಗೆಗೆ ಯೋಚಿಸಿದ್ದವರು ಇದ್ದಿರಬಹುದು. ಅಂತಹವರು ಯಾರೆಂದು ನಮಗೆ ತಿಳಿಯುತ್ತಿಲ್ಲ. ತಿರುಮಲ ಕ್ಷೇತ್ರದಲ್ಲಿರುವುದು ಶ್ರೀನಿವಾಸನೇ ಯೆಂದು ನಿರ್ಧರಿಸುವದಕ್ಕಾಗಲಿ ಅಥವಾ ಅಲ್ಲಿರುವುದು ಶ್ರೀನಿವಾಸನಲ್ಲದೇ ಸ್ಕಂದನೋ ಮತ್ತೊಂದು ದೇವರೆಂದೋ ಭಾವಿಸುವವರಿಗೂ ಸಹಾ ಪುರಾಣಗಳೇ ಪ್ರಮಾಣಗಳಾಗಿವೆ. ಇದರ ಪ್ರಕಾರ ಪೂರ್ವಪಕ್ಷದವರು, ಸಿದ್ಧಾಂತಿಗಳು ಇಬ್ಬರೂ ಸಮಾನವಾಗಿ ಸ್ವೀಕರಿಸಿದ ಪ್ರಮಾಣಗಳು ಪ್ರಮಾಣಗಳು ಪುರಾಣಗಳೆಂದೇ ಸ್ಪಷ್ಟವಾಗಿ ತಿಳಿದುಬರುತ್ತದೆ. ಭಗವದ್ರಾಮಾನುಜಾಚಾರ್ಯರು ಮೇಲೆ ತಿಳಿಸಿರುವ ಹನ್ನೊಂದು ಪುರಾಣಗಳನ್ನು, ಸ್ಮೃತಿಗಳನ್ನು ಆಗಮವಚನಗಳನ್ನು ಪ್ರದರ್ಶಿಸಿ ವೇಂಕಟಾಚಲ ವೈಭವವನ್ನು ಸಾರಿದರು. ಈ ಸಂದಭರ್ದಲ್ಲಿ ಅವರು ವಾಮನ ಪುರಾಣವನ್ನು ಹೆಚ್ಚೂ ಕಡಿಮೆ ಮೂವತ್ತು ಕಡೆಗಳಲ್ಲಿ ಉಲ್ಲೇಖಿಸಿದ್ದಾರೆ. ನಂತರದ ಸ್ಥಾನ ವರಾಹ ಪುರಾಣದ್ದಾಗಿದೆ. ಹಾಗೆಯೇ ಭವಿಷ್ಯೋತ್ತರ-ಮಾರ್ಕಂಡೇಯಪುರಾಣಗಳನ್ನು ಉಲ್ಲೇಖಿಸಿದ್ದಾರೆ.

ಹೀಗೆ ಸಂಕಲಿತವಾದ ಪುರಾಣಗಳನ್ನು ಯಾರು ಮೊದಲಬಾರಿಗೆ "ಶ್ರೀವೇಂಕಟಾಚಲಮಾಹಾತ್ಮೆ"ಎಂಬ ಹೆಸರಿನಿಂದ ಸಂಕಲನ ಮಾಡಿದ್ದಾರೆ? ಎನ್ನುವ ಪ್ರಶ್ನೆ ಉದ್ಭವಿಸಿದಾಗ ಸಂಶೋಧಕರು ಪಸಿಂಡಿ ವೇಂಕಟತ್ತುರೈವರ್ ಎನ್ನುವ ರಾಮರಾಮಾನುಜಯ್ಯನ್ ಜೀಯರ್ ಎನ್ನುವವರೆಂದು ಉತ್ತರಿಸಿದ್ದಾರೆ. ಇವರು ಅನ್ನಮಯ್ಯನ ಸಮಾಕಾಲೀನರೆಂದು ಹೇಳುತ್ತಾರೆ.

ಅನ್ನಮಯ್ಯ ಸಂಸ್ಕೃತಭಾಷೆಯಲ್ಲಿ ವೇಂಕಟಾದ್ರಿಮಾಹಾತ್ಮೆ ಎಂಬ ಗ್ರಂಥವನ್ನು ರಚಿಸಿದ್ದಾರೆಂದು ಎಲ್ಲೆಡೆ ಪ್ರಸಿದ್ಧಿಯಾಗಿದ್ದರೂ ಅದನ್ನು ಅನ್ನಮಯ್ಯ ತನ್ನ ಕೃತಿಯಲ್ಲಿ ಭಾಗವತ-ಬ್ರಹ್ಮಾಂಡ-ವಾಮನ ಪುರಾಣಗಳಲ್ಲಿರುವ ಕಥೆಗಳನ್ನು ಉಲ್ಲೇಖಿಸಿದ್ದಾರೆ.

ತರಿಗೊಂಡ ವೆಂಗಮಾಂಬ ವೇಂಕಟಾಚಲಮಾಹಾತ್ಮೆಯನ್ನು ಪ್ರಬಂಧದ ರೂಪದಲ್ಲಿ ವರ್ಣಿಸಿದ್ದಾರೆ.

ಈ ಪ್ರಕ್ರಿಯೆಯು ವೇಂಕಟಾಚಲಮಾಹಾತ್ಮೆಯೆಂದು ಪ್ರಸಿದ್ದವಾಗಿರುವ ಪುರಾಣಗಳ ಪ್ರಾಮಾಣವನ್ನೇ ಸಾರುತ್ತಿವೆ.

ಈ ಸಂದರ್ಭದಲ್ಲಿ ಮೊದಲಬಾರಿ ಭಗವದ್ರಾಮಾನುಜಾಚಾರ್ಯರು ಉಲ್ಲೇಖಿಸಿದ ಕೆಲವು ಪುರಾಣವಿಶೇಷಗಳನ್ನು ಇಲ್ಲಿ ನೋಡೋಣ.

ವಿವಿಧ ಪುರಾಣಗಳ ಪ್ರಮಾಣದ ಮೂಲಕ ಈ ಕೆಳಗಿನ ವಿಶೇಷಗಳನ್ನು ನಾವು ಅರ್ಥಮಾಡಿಕೊಳ್ಳಬಹುದು.

---

1. ಭಾಗವತ, ದಶಮಸ್ಕಂಧ, ಉತ್ತರಭಾಗ-79-13

**1. ವಿಷ್ಣುವೇ ವರಾಹಮೂರ್ತಿಯಾಗಿ ಉದ್ಭವಿಸಿದ ಬಗೆ :**

ಸ್ವಾಮಿ ಪುಷ್ಕರಿಣಿಗೆ ದಕ್ಷಿಣತೀರದಲ್ಲಿ ಶ್ರೀನಿವಾಸಮೂರ್ತಿಯ ರೂಪದಲ್ಲಿರುವ ಮಹಾವಿಷ್ಣು ಮತ್ತೊಂದು ರೂಪದ ಬಗೆಗೆ ಪುರಾಣಗಳೆಲ್ಲಾ ವಿವರಿಸುತ್ತಿರುವಾಗ, ಆತ ವಿಷ್ಣುವೇ ಅಲ್ಲವೆಂದು ಪ್ರತಿಪಕ್ಷದವರು ವಾದಿಸುತ್ತಿರುವಾಗ ವರಾಹ ಪುರಾಣದಲ್ಲಿನ ಪ್ರಮಾಣಗಳಿಂದಾಗಿ ನಿರಾಕರಿಸಲ್ಪಟ್ಟಿತು. ಪುರಾಣವಚನಗಳು ಹೀಗಿವೆ–

**ಏತೇಷು ಪ್ರವರಾ ದೇವೀ! ಸ್ವಾಮಿಪುಷ್ಕರಿಣೀ ಶುಭಾ,**
**ಅನ್ಯಾಸ್ತು ಪಶ್ಚಿಮೇ ತೀರೇ ನಿವಾಸಾಮಿ ತ್ವಯಾ ಸಹ,**
**ಆಸ್ತೇಽಸ್ಯಾ ದಕ್ಷಿಣೇ ತೀರೇ ಶ್ರೀನಿವಾಸೋ ಜಗತ್ಪತಿಃ**
**ಗಂಗಾದ್ಯೈಃ ಸಕಲೈಸ್ತೀರ್ಥೈಃ ಸಮಾ ಸಾ ಸಾಗರಾಂಬರೇ** [1]

**2. ಸ್ವಾಮಿಪುಷ್ಕರಿಣೀತೀರದಲ್ಲಿ ಸ್ವಾಮಿಯು ನೆಲಸಿದ್ದಾನೆ**

**ವಂದಮಾನಾಂ ಸಮುದ್ವೀಕ್ಷ್ಯ ಪ್ರೀತ್ಯುತ್ಫಲ್ಲವಿಲೋಚನಃ**
**ಉದ್ಧೃತ್ಯ ಧರಣೀಂ ದೇವೀಂ ಆಲಿಂಗ್ಯಾಽಥ ಸ್ವಬಾಹುಭಿಃ**
**ಆಘ್ರಾಯಾ ಧರಣೀವಕ್ತ್ರಂ ವಾಮಾಂಕೇ ಸನ್ನಿವೇಶ್ಯ ಚ,**
**ಆರುಹ್ಯ ಗರುಡೇಶಾನಂ ಜಗಾಮ ವೃಷಭಾಚಲಮ್**
**ಮುನೀಂದ್ರೈಃ ನಾರದಾದ್ಯೈಶ್ಚ ಸ್ತೂಯಮಾನೋ ಮಹೀಪತಿಃ**
**ಸ್ವಾಮಿಪುಷ್ಕರಿಣೀತೀರೇ ಪಶ್ಚಿಮೇ ಲೋಕಪೂಜಿತೇ** [2]

ಈ ಮೇಲಿನ ವರಾಹಪುರಾಣಶ್ಲೋಕಗಳಂತೆ ಸ್ವಾಮಿ ಪುಷ್ಕರಿಣಿಯ ದಕ್ಷಿಣಕ್ಕೆ , ಪಶ್ಚಿಮದಲ್ಲಿ ಎರಡು ಸ್ಥಾನಗಳಲ್ಲಿ ಸ್ವಾಮಿಯು ವರಾಹಮೂರ್ತಿಯಾಗಿ , ಪದ್ಮಾವತೀಪತಿಯಾಗಿಯೂ ನೆಲಸಿದ್ದಾನೆಂದು ಸ್ಪಷ್ಟವಾಗುತ್ತಿದೆ. ಶ್ರೀನಿವಾಸನು ಕಲ್ಪಾಂತದ ವರೆಗೂ ಸ್ವಾಮಿಪುಷ್ಕರಿಣೀ ತೀರದಲ್ಲಿ ನೆಲಸಿರುತ್ತಾನೆ.

**3. ಶ್ರೀನಿವಾಸನು ಲಕ್ಷ್ಮೀವಕ್ಷಃಸ್ಥಲನೇ**

ಶ್ರೀಹರಿಯ ವಕ್ಷಸ್ಥಳದಲ್ಲಿ ಲಕ್ಷ್ಮೀದೇವತೆಯನ್ನು ವೀಕ್ಷಿಸಿದ ಅರುಂಧತಿಯು ಕೀರ್ತಿಸಿದ ಶ್ಲೋಕವು ಗರುಡಪುರಾಣದಲ್ಲಿದೆ.

**ಅರುಂಧತೀ ಮಹಾಭಾಗಾ ಲಕ್ಷ್ಮ್ಯಾಽಽಲಿಂಗಿತವಕ್ಷಸಮ್**
**ದೃಷ್ಟ್ವಾ ಹರಿಂ ವೇಂಕಟೇಶಂ ಪ್ರಣನಾಮ ಮುದಾನ್ವಿತಾ** [3]

**4. ಶಂಖಚಕ್ರಧಾರಿಯಾಗಿರುವ ಶ್ರೀವೇಂಕಟೇಶ್ವರ**

ತೊಂಡಮಾನು ಚರ್ಕವರ್ತಿಗೆ ಸ್ವಾಮಿ ಚತುರ್ಭುಜನಾಗಿ, ಶಂಖಚಕ್ರಗದಾಧಾರಿಯಾಗಿ ಸಾಕ್ಷಾತ್ಕರಿಸಿದನೆಂದು ಬ್ರಹ್ಮಾಂಡಪುರಾಣದಲ್ಲಿ ಹೇಳಲಾಗಿದೆ.

---

1. ಶ್ರೀವೇಂಕಟಾಚಲ ಮಾಹಾತ್ಮ್ಯಂ (ವರಾಹಪುರಾಣ ದ್ವಿತೀಯಭಾಗಾಂತರ್ಗತ–1–47,48) ಪ್ರಥಮಭಾಗ,ಪುಟ–137. ತಿ.ತಿ.ದೇ ಪ್ರಕಟಣೆ
2. ಶ್ರೀವೇಂಕಟಾಚಲ ಮಾಹಾತ್ಮ್ಯಂ (ವರಾಹಪುರಾಣ ದ್ವಿತೀಯಭಾಗಾಂತರ್ಗತ–1–88–90) ಪ್ರಥಮಭಾಗ,ಪುಟ–141. ತಿ.ತಿ.ದೇ ಪ್ರಕಟಣೆ
3. ಶ್ರೀವೇಂಕಟಾಚಲ ಮಾಹಾತ್ಮ್ಯಂ (ಗರುಡಪುರಾಣಾಂತರ್ಗತ –63–41)ಪ್ರಥಮಭಾಗ,ಪುಟ–294, ತಿ.ತಿ.ದೇ ಪ್ರಕಟಣೆ

**ತನ್ಮಧ್ಯೇ ಸೌ ನೀಲಜೀಮೂತಕಲ್ಪಂ ಪದ್ಮಾವಾಸಂ ಸಂಶ್ರಿತತ್ರಾಣಹೇತುಮ್**
**ಶ್ರೀವತ್ಸಾಂಕಂ ಪುಂಡರೀಕಾಯತಾಕ್ಷಂ ಶಂಖಂ ಚಕ್ರಂ ಧಾರಯಂತಂ ಕರಾಭ್ಯಾಮ್** [1]

ಇದೇ ಸನ್ನಿವೇಶವನ್ನು ಮಾರ್ಕಂಡೇಯಪುರಾಣದಲ್ಲಿಯೂ ವರ್ಣಿಸಲಾಗಿದೆ.

**ತನ್ಮಧ್ಯಸ್ಥಂ ದಿವ್ಯಮೂರ್ತಿಂ ವರೇಣ್ಯಂ ಶಂಖಂ ಚಕ್ರಂ ಧಾರಯಂತಂ ಕರಾಭ್ಯಾಮ್** [2]

ಎನ್ನುತ್ತಾ ಕುಮಾರಸ್ವಾಮಿಗೂ ಇದೇ ಸ್ವರೂಪದಲ್ಲಿ ಸಾಕ್ಷಾತ್ಕರಿಸಿದಂತೆ ಮಾರ್ಕಂಡೇಯಪುರಾಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಸ್ಕಂದನು ಶ್ರೀನಿವಾಸಭಕ್ತನೆಂದು ವರಾಹಪುರಾಣವು ಸ್ಪಷ್ಟಪಡಿಸುತ್ತಿದೆ. ಕುಮಾರಧಾರೆಯೇ ಸ್ಕಂದನು ತಪಸ್ಸು ಮಾಡಿದ ಸ್ಥಳವೆಂದು ವಾಮನವಚನವಾಗಿದೆ.

**ಕುಮಾರಧಾರಿಕಾ ನಾಮ ತತ್ರ ನಿರ್ ಝರಿಣೀ ಶುಭಾ**
**ಮಯೂರವಾಹಕೋ ದೇವಿ! ತಸ್ಯಾಸ್ತೀರೇ ವಸತ್ಯಹೋ** [3]

ವೇಂಕಟಾದ್ರಿಯಲ್ಲಿ ಕಲ್ಪಾಂತ್ಯದವರೆಗೂ ತಾನು ಇಲ್ಲೇ ಇರುತ್ತೇನೆಂದು ಸ್ವಾಮಿ ತಿಳಿಸಿದ್ದಾನೆ, ಅಷ್ಟೇ ಅಲ್ಲದೇ ಪರಶಿವನಿಗೂ ಬೆಟ್ಟದ ಆಗ್ನೇಯ ಭಾಗದಲ್ಲಿ ಈಗಿರುವ ಕಪಿಲತೀರ್ಥದಲ್ಲಿ ಸ್ಥಾನವನ್ನು ಕಲ್ಪಿಸಲಾಯಿತೆಂದು ವರಾಹ ಪುರಾಣವು ಹೇಳುತ್ತಿದೆ.

**ಆಕಲ್ಪಂ ಚ ವಸಾಮೀಹ ವೇಂಕಟಾಹ್ವಯಭೂಧರೇ**
**ತ್ವಮಪ್ಯತ್ರ ಮೃಡಾನೀಶ! ಮಹಾದೇವ! ವಸ ಪ್ರಭೋ!**
**ಉಪತ್ಯಕಾಯಾಮಸ್ಯಾದ್ರೇಃ ಶೋಚಿಷ್ಕೇಶದಿಶೀಶ್ವರಃ** [4]

**೫. ಇಂದಿನ ಅರ್ಚಾವಿಗ್ರಹವನ್ನು ಶಂಖರಾಜನು ನಿರ್ಮಿಸಿದನು**

**ತೇನೋಕ್ತಮಾರ್ಗೇಣ ವಿಧಾಯ ಪುಣ್ಯಂ ವಿಮಾನವರ್ಯಂ ಪ್ರತಿಮಾಂ ಚ ಪುಣ್ಯಾಮ್**
**ಪ್ರಖ್ಯಾಪ್ಯ ಶಂಖೋ ನರಲೋಕಸಂಘೇ ಜಗಾಮ ವಿಷ್ಣೋಃ ಪದಮವ್ಯಯಂ ಶುಭಮ್** [5]

ತೊಂಡಮಾನನ ಮೇಲಿನ ವಾತ್ಸಲ್ಯದಿಂದ ಸ್ವಾಮಿ ತನ್ನ ಶಂಖ ಚಕ್ರಗಳನ್ನು ಅವನಿಗೆ ಯುದ್ಧದಲ್ಲಿ ಸಹಾಯಕ್ಕಾಗಿ ನೀಡಿದ. ಬ್ರಹ್ಮಪುರಾಣದಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ.

**ದರ್ಶಯನ್ ಭಕ್ತವಾತ್ಸಲ್ಯಂ ಯೋ ದದೌ ಹಸ್ತಗೇ ಶುಭೇ**
**ಶಂಖಚಕ್ರೇ ನೃಪೇಂದ್ರಾಯ ಚಕ್ರವರ್ತೀತಿ ಯಂ ವಿದುಃ** [6]

ಅರ್ಚಾಬಿಂಬದೊಂದಿಗೆ ಶಂಖಚಕ್ರಗಳನ್ನು ಧರಿಸಬಾರದೆಂದು ಚಕ್ರವರ್ತಿಯು ಪ್ರಾರ್ಥಿಸಿದ್ದ.

---

1. ಶ್ರೀವೇಂಕಟಾಚಲಮಾಹಾತ್ಮ್ಯಂ (ಬ್ರಹ್ಮಾಂಡಪುರಾಣ ತೀರ್ಥಖಂಡಾಂತರ್ಗತ –9–11 )ಪ್ರಥಮಭಾಗ ಪುಟ–350,ತಿ.ತಿ.ದೇ ಪ್ರಕಟಣೆ
2 ಶ್ರೀವೇಂಕಟಾಚಲಮಾಹಾತ್ಮ್ಯಂ (ಮಾರ್ಕಂಡೇಯ ಪುರಾಣ ತೀರ್ಥಖಂಡಾಂತರ್ಗತ–2–15) ಪ್ರಥಮಭಾಗ ಪುಟ –383–ತಿ.ತಿ.ದೇ ಪ್ರಕಟಣೆ
3. ಶ್ರೀವೇಂಕಟಾಚಲಮಾಹಾತ್ಮ್ಯಂ (ವಾಮನಪುರಾಣ ಕ್ಷೇತ್ರಖಂಡಾಂತರ್ಗತ –24–97)ಪ್ರಥಮಭಾಗ ಪುಟ–441, ತಿ.ತಿ.ದೇ ಪ್ರಕಟಣೆ
4. ಶ್ರೀವೇಂಕಟಾಚಲಮಾಹಾತ್ಮ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ–49–39,40)ಪ್ರಥಮಭಾಗ ಪುಟ–70 ತಿ.ತಿ.ದೇ ಪ್ರಕಟಣೆ
5. ಶ್ರೀವೇಂಕಟಾಚಲಮಾಹಾತ್ಮ್ಯಂ (ಬ್ರಹ್ಮಪುರಾಣಾಂತರ್ಗತ –3–51)ದ್ವಿತೀಯಭಾಗ ಪುಟ–16 ತಿ.ತಿ.ದೇ ಪ್ರಕಟಣೆ
6. ಶ್ರೀವೇಂಕಟಾಚಲಮಾಹಾತ್ಮ್ಯಂ (ಬ್ರಹ್ಮಪುರಾಣಾಂತರ್ಗತ –7–7)ದ್ವಿತೀಯಭಾಗ ಪುಟ–24–ತಿ.ತಿ.ದೇ ಪ್ರಕಟಣೆ

**ಮಮಾಽಽಯುಧಪ್ರದಾನಸ್ಯ ಖ್ಯಾತ್ಯೈ ದೇವೋತ್ತಮ ಪ್ರಭೋ**
**ಅರ್ಚಾಬಿಂಬೇ ಶಿಲಾಬಿಂಬೇ ಚಕ್ರಶಂಖೌ ನ ಧಾರಯ**
**ಇತಿ ಸಂಪ್ರಾರ್ಥಿತೋ ದೇವೋ ನ ದಧಾರ ಪುನಶ್ಚ ತೌ**
**ಅದೃಶ್ಯೌ ತಿಷ್ಠತಶ್ಚೋಭೌ ಪಾರ್ಶ್ವತಃ ಶಾರ್ಙ್ಗಧನ್ವಿನಃ** [1]

**6. ಜಟಾಧಾರಿಯು ಹೌದು – ನಾಗಭೂಷಣನು ಹೌದು**

ಪದ್ಮಾವತೀ ವಿವಾಹಕ್ಕೆ ಮೊದಲು ಸ್ವಾಮಿಯು ಬೇಟೆಯಾಡುವುದಕ್ಕೆಂದು ಹೋದಾಗ ಜಟಾಧಾರಿಯಾಗಿದ್ದನೆಂದು ಪುರಾಣಗಳು ವರ್ಣಿಸುತ್ತಿವೆ.

**ಧ್ಯಾಯೇದ್ವರಾಶ್ವಗಂ ತಂ ವೈ ತನುತ್ರಾವೃತವಿಗ್ರಹಮ್**
**ಸಿತೋಷ್ಣೀಷಲಲಾಟಂ ಚ ನಾತಿದೀರ್ಘಜಟಾಧರಮ್** [2]

**ನಿಶ್ಶೇಷಭುವನಾನಾಂ ಚ ಧ್ಯಾತವ್ಯಂ ಚ ಧರಾಸ್ಥಿತಮ್**
**ಅನಂತಶಯನಾಭೂಷಂ ಕಲ್ಪಾಂತಹುತಭುಕ್ಪ್ರಭಮ್** [3]

**ಕುಂಕುಮಾಕ್ತಸುಗಂಧೇನ ಲಿಪ್ತೋರೋಬಾಹುರಂಜಿತಃ**
**ಕಬರೀಕೃತಕೇಶೇಷು ರಕ್ತವಸ್ತ್ರಂ ಸುವೇಷ್ಟ್ಯ ಚ**
**ಲಂಬಿತೈಃ ಪುಷ್ಪಜಾಲೈಶ್ಚ ಸ್ಕಂಧಗೈಃ ಪರಿಭೂಷಿತಃ**
**ಸುವರ್ಣರತ್ನಸಂಬದ್ಧ ಪಾದುಕಾಗೂಹಿತಾಂಘ್ರಿಕಃ** [4]

**ಮೂರ್ಧಜೈಃ ಕುಂಚಿತೈಶ್ಚಾಪಿ ನೀಲೈಃ ಮೃದುತರೈಸ್ತಥಾ**
**ಲಂಬಮಾನೈರ್ವಿನಿಷ್ಕ್ರಾಂತೈಃ ಕಿರೀಟಾತ್ ಶುಭದರ್ಶನಾತ್** [5]

ಅಶ್ವವನ್ನು ಅಧಿರೋಹಿಸಿದವನು, ಕವಚದೊಂದಿಗೆ ಬಿಳಿಯ ವಸ್ತ್ರವನ್ನು ತಲೆಗೆ ಪೇಟದಂತೆ ಧರಿಸಿದವನು. ಜಟಾಜೂಟವನ್ನು ಹೊಂದಿರುವವನು ಅನಂತಶಯನ ಭೂಷಿತನು, ಪ್ರಳಯಕಾಲಾಗ್ನಿಗೆ ಸಮಾನವಾದ ತೇಜಸ್ಸನ್ನು ಹೊಂದಿರುವವನು, ಕುಂಕುಮಗಂಧಗಳಿಂದ ಕೂಡಿದ ಬಾಹುವುಗಳನ್ನು ಹೊಂದಿದ ಸ್ವಾಮಿಯನ್ನು ಸಕಲ ಲೋಕಗಳೂ ಧ್ಯಾನಿಸಬೇಕು.

ಕೆಂಪು ವಸ್ತ್ರವನ್ನು ಕೇಶಕ್ಕೆ ಸುತ್ತಿಕೊಂಡಿರುವವನು, ಭುಜಸ್ಕಂಧಗಳನ್ನು ಹೂಮಾಲೆಗಳಿಂದ ಅಲಂಕರಿಸಿಕೊಂಡಿರುವವನು. ಸ್ವರ್ಣ-ರತ್ನಮಯವಾದ ಪಾದುಕೆಗಳಿಂದ ಅಲಂಕರಿಸಲ್ಪಟ್ಟ ಪಾದಗಳನ್ನು ಹೊಂದಿದವನು,

ಗುಂಗುರು ಕೂದಲುಗಳಿಂದ ಕೂಡಿದವನು. ಕಪ್ಪಾದ, ಕಿರೀಟದಿಂದ ಹೊರಗೆ ಸುಳಿಯುತ್ತಿರುವ ಕೇಶರಾಶಿಯನ್ನು ಹೊಂದಿರುವವನು, ಭೂಲೋಕದಲ್ಲಿ ನಿವಸಿಸುವವನು, ಈ ರೀತಿಯಲ್ಲಿ ಜಟಾಜೂಟಧಾರಣೆಯ ವರ್ಣನೆ ಇದೆ.

---

1. ಶ್ರೀವೇಂಕಟಾಚಲಮಾಹಾತ್ಮ್ಯಂ(ಬ್ರಹ್ಮಪುರಾಣಾಂತರ್ಗತ-7-66,67) ದ್ವಿತೀಯಭಾಗ,ಪುಟ-29,ತಿ.ತಿ.ದೇ ಪ್ರಕಟಣೆ
2. ಶ್ರೀಸಾತ್ತ್ವತಸಂಹಿತೆ-12-160
3. ಶ್ರೀಸಾತ್ತ್ವತಸಂಹಿತೆ-12-164
4. ಶ್ರೀವೇಂಕಟಾಚಲಮಾಹಾತ್ಮ್ಯಂ (ಭವಿಷ್ಯೋತ್ತರ ಪುರಾಣಾಂತರ್ಗತ-6-10-11) ದ್ವಿತೀಯಭಾಗ-ಪುಟ-301, ತಿ.ತಿ.ದೇ ಪ್ರಕಟಣೆ
5. ಶ್ರೀವೇಂಕಟಾಚಲಮಾಹಾತ್ಮ್ಯಂ (ವಾಮನಪುರಾಣ, ಕ್ಷೇತ್ರಖಂಡಾಂತರ್ಗತ-34-31) ಪ್ರಥಮಭಾಗ-ಪುಟ-501. ತಿ.ತಿ.ದೇ ಪ್ರಕಟಣೆ

**7. ಆಕಾಶರಾಜ ಸಮರ್ಪಿಸಿದ ನಾಗಾಭರಣಗಳು**

ಆಕಾಶರಾಜ ನಾಗಾಭರಣಗಳನ್ನು ಪದ್ಮಾವತಿ ಶ್ರೀನಿವಾಸರ ವಿವಾಹ ಸಮಯದಲ್ಲಿ ಸ್ವಾಮಿಗೆ ಸಮರ್ಪಿಸಿದನೆಂದು ಭವಿಷ್ಯೋತ್ತರ ಪುರಾಣದಲ್ಲಿದೆ.

**ನಾಗಭೂಷಣಯುಗ್ಮಂ ಚ ಬಾಹುಪೂರಾದಿಕಾಂಸ್ತಥಾ**
**ಇಂದ್ರನೀಲಮಣಿಶ್ಯಾಮ ರಮಣೀಯಾಹಿಭೂಷಣೈಃ** [1]

**8. ಊರ್ದ್ವಪುಂಡ್ರಗಳನಿರ್ಣಯ –**

ಶ್ರೀನಿವಾಸನ ಊರ್ದ್ವಪುಂಡ್ರಗಳ ಸ್ವರೂಪವನ್ನು ಪದ್ಮಪುರಾಣವು ವಿವರಿಸಿದೆ.

**ಉದ್ಯದ್ದ್ಯುಮಣಿಬಿಂಬಶ್ರೀಃ ಶಿಖಾಮಣಿಮಹಾಮಹಃ**
**ಅಷ್ಟಮೀಂದುಕಳಾಕಾರ ಲಲಾಟಸ್ಥೋರ್ದ್ವಪುಂಡ್ರಕಃ** [2]

ಈ ರೀತಿ ಶ್ರೀನಿವಾಸನಿಗೆ ಸೇರಿದ ಎಷ್ಟೋ ವಿಶೇಷಗಳನ್ನು ಪುರಾಣಗಳು ಸ್ಪಷ್ಟಪಡಿಸುತ್ತಿವೆ ಎಂದು ನಮಗೆ ವಿವರವಾಗಿ ತಿಳಿದುಬರುತ್ತಿದೆ. ಈ ಪುರಾಣಗಳ ಸಂಕಲನವೇ "ವೇಂಕಟಾಚಲಮಾಹತ್ಮ್ಯಂ"ಎಂಬ ಹೆಸರಿನಿಂದ ಪ್ರಸಿದ್ಧಿಪಡೆದಿದೆ ಎಂದು ಅರ್ಥಮಾಡಿಕೊಳ್ಳುವುದು ವಿವೇಕವಂತರ ಲಕ್ಷಣ!

*~*~*~*~*~*

1. ಶ್ರೀವೇಂಕಟಾಚಲಮಾಹಾತ್ಮ್ಯಂ(ಭವಿಷ್ಯೋತ್ತರಪುರಾಣಾಂತರ್ಗತ-11-336) ದ್ವಿತೀಯಭಾಗ, ಪುಟ-404, ತಿ.ತಿ.ದೇ ಪ್ರಕಟಣೆ
2. ಶ್ರೀವೇಂಕಟಾಚಲಮಾಹಾತ್ಮ್ಯಂ(ಪದ್ಮಪುರಾಣ ಕ್ಷೇತ್ರಖಂಡಾಂತರ್ಗತ-27-44) ಪ್ರಥಮಭಾಗ, ಪುಟ-231, ತಿ.ತಿ.ದೇ ಪ್ರಕಟಣೆ

## ಶ್ರೀನಿವಾಸನನ್ನು ಸೇವಿಸುತ್ತಿರುವ ಅಂಜನಾಕೇಸರಿ



# 4. ಶ್ರೀ ವೇಂಕಟಾಚಲ ಮಾಹಾತ್ಮ್ಯ - ಮತ್ತೆ ಕೆಲವು ವಿಶೇಷತೆಗಳು

ಆಚಾರ್ಯ ವಿರಿವೆಂಟಿ ಮುರಳೀಧರ ಶರ್ಮ

(ಈ ಲೇಖನವು ತಿ.ತಿ.ದೆ. ಅವರು 2007ರಲ್ಲಿ ಪ್ರಕಟಿಸಿದ ಶ್ರೀವೇಂಕಟೇಶ್ವರ ವೈಭವ-ರಾಷ್ಟ್ರೀಯ ಸದಸ್ಸಿನ ಸಂಶೋಧನಾಪತ್ರದ ಸಂಕಲನ) ಎಂಬ ಪುಸ್ತಕದಲ್ಲಿ ಶ್ರೀಕೋರಾಡ ರಾಮಕೃಷ್ಣ ಅವರ **"ಶಾಸನಗಳಲ್ಲಿ ಶ್ರೀವೇಂಕಟೇಶ್ವರ"** ಡಾ॥ ಕೆ. ವಿ. ರಾಘವಾಚಾರ್ಯ ಅವರ **"ಶ್ರೀವೇಂಕಟಾಚಲ ಮಾಹಾತ್ಮೆ"** ಎಂಬ ಗ್ರಂಥ-ಪರಿಶೀಲನೆ ಎಂಬ ಪ್ರಬಂಧದಿಂದ ಮತ್ತು ತಿ.ತಿ.ದೇ ಅವರು 2019ರಲ್ಲಿ ಪ್ರಕಟಿಸಿದ ಡಾ॥ ಕೆ.ವಿ.ರಾಘವಾಚಾರ್ಯ ಅವರ **"ಪ್ರಾಚೀನಾಂಧ್ರ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರ"** ಎಂಬ ಗ್ರಂಥದಲ್ಲಿರುವ ವಿಷಯಗಳ ಸಂಗ್ರಹರೂಪ)

ಭಗವದ್ ರಾಮಾನುಜಾಚಾರ್ಯರ ಕಾಲದಲ್ಲಿ(1017-1137) ತಿರುಮಲೆಯಲ್ಲಿ ನೆಲೆಸಿರುವ ಶ್ರೀವೇಂಕಟಾದ್ರಿನಾಥನು ಸ್ಕಂದನೇ, ಶಿವನೇ, ಶಕ್ತಿಯೇ ಎಂಬ ವಿವಾದವು ಏರ್ಪಟ್ಟಿತು. ಯಾದವರಾಜನ ಸಭೆಯಲ್ಲಿ ಭಗವದ್ರಾಮಾನುಜರು ತಿರುಮಲೆಯಲ್ಲಿ ಇರುವ ಸ್ವಾಮಿ ವಿಷ್ಣುಸ್ವರೂಪನೇ ಎಂದು ವಿವಿಧ ಪುರಾಣಗಳಲ್ಲಿ ಹೇಳಲ್ಪಟ್ಟ ಶ್ರೀವೇಂಕಟೇಶ್ವರನ ವೈಭವವನ್ನು ಸಪ್ರಮಾಣವಾಗಿ ನಿರೂಪಿಸಿದರು. ಈ ವಿಷಯವನ್ನು ರಾಮಾನುಜಾಚಾರ್ಯರ ಶಿಷ್ಯರಾದ ಶ್ರೀಅನಂತಾಚಾರ್ಯರು ಶ್ರೀವೇಂಕಟಾಚಲೇತಿಹಾಸಮಾಲೆಯೆನ್ನುವ ಗ್ರಂಥದ ರೂಪಕ್ಕೆ ತಂದರು. ಆ ಕಾಲದಲ್ಲಿ ಪುರಾಣಗಳಲ್ಲಿ ಇರುವ ಶ್ರೀವೇಂಕಟಾಚಲಮಾಹಾತ್ಮ್ಯೆ ಪ್ರಶಸ್ತವಾಗಿತ್ತು. ನಂತರದ ಕಾಲದಲ್ಲಿ ವೇಂಕಟಾಚಲಮಾಹಾತ್ಮೆ ಗ್ರಂಥವು ಕಣ್ಮರೆಯಾಗಿತ್ತು.

ಕ್ರಿ.ಶ.1491 ರಲ್ಲಿ ಪಸಿಂಡಿ ವೇಂಕಟತ್ತುರೈವರ್ (ಜೀಯರ್ ರಾಮಾನುಜಯ್ಯನ್) ಎಂಬ ಶ್ರೀನಿವಾಸನ ಅರ್ಚಕರು **"ಘನುಡಗು ಪ್ರೌಢಮಾಲಕರಿ ಕಮ್ಮನಿ ಪುವ್ವುಲ ಗೂರ್ಚಿ ದಂಡಗಟ್ಟಿನಕ್ರಿಯ"** ಆ ಹನ್ನೆರಡು ಪುರಾಣಗಳಲ್ಲಿ ಇರುವ ಶ್ರೀವೇಂಕಟಾಚಲಕ್ಷೇತ್ರ, ತೀರ್ಥ, ದೈವತ ಮಾಹಾತ್ಮೆಗಳನ್ನು ವರ್ಣಿಸುವ ಭಾಗಗಳನ್ನು(ಅಧ್ಯಾಯಗಳನ್ನು)ಸಂಗ್ರಹಿಸಿ, **ತಿರುವೇಂಕಟಮಾಹಾತ್ಮ್ಯಂ** ಎಂಬ ಹೆಸರಿನಿಂದ ಸಂಕಲ ಮಾಡಿದರು. ಸ್ವಯಂಭುವಾದ ಶ್ರೀನಿವಾಸನ ಅರ್ಚಾವತಾರಕ್ಕೆ ಪೌರಾಣಿಕ ಮೂಲವನ್ನು, ಪ್ರಾಶಸ್ತ್ಯವನ್ನು ನಿರೂಪಿಸುವುದೇ ಪಸಿಂಡಿ ವೇಂಕಟತ್ತುರೈವರ್ ಅವರ ಉದ್ದೇಶ್ಯವಾಗಿತ್ತು. ಆತನೇ ಶ್ರೀನಿವಾಸನ ಸನ್ನಿಧಿಯಲ್ಲಿ ದೇವರಪ್ರೀತಿಗಾಗಿ ತಿರುವೇಂಕಟ ಮಾಹಾತ್ಮೆಯನ್ನು ಪಾರಾಯಣ ಮಾಡುವುದಕ್ಕೆ ಏರ್ಪಾಟುಮಾಡಿ ಕ್ರಿ.ಶ. 27-6-1491 ತಾರೀಖಿನಂದು ಶಾಸನವನ್ನು ಬರೆಸಿದರು.

ಪಸಿಂಡಿ ವೇಂಕಟತ್ತುರೈವರ್ ಮಾಡಿಸಿದ ತಮಿಳಶಾಸನದಲ್ಲಿ ಕೊನೆಯ ವಾಕ್ಯ ಈ ರೀತಿ ಇದೆ-

**"**ತಿರುವೇಂಗಡಮುಡೈಯಾನ್ ಇಂದ ತಿರುವೋಲಕ್ಕಂ ಕಂಡರುಳ ಕಿರಪೋದು ಇವರ್ ವಿಣ್ಣಪ್ಪಂಶೆಯ್ ದ ತಿರುವೇಂಕಟ ಮಾಹಾತ್ಮ್ಯತ್ತುಕ್ಕು ಅರುಳಪ್ಪಾಡಿಟ್ಟು ಕೇಟ್ಟರುಳಕ್ಕಡ ವರಾಹವುಂ**"** ಈ ತಮಿಳುಭಾಷೆಯಲ್ಲಿನ ವಾಕ್ಯಕ್ಕೆ ಆಂಗ್ಲಾನುವಾದ ಈ ರೀತಿ ಇದೆ – "God Tiruvenkata mudaiyan will, while presiding at the said Tiruvalokkam, be graciously pleased to hear, after honourable announcement made there for, the TIRUVENKATA MAHATMYAM compiled and humbly presented by him" (the Donor).[1]. ತಿರುವೋಲಕ್ಕಂ ಅಂದರೆ ಆಸ್ಥಾನ. ಅಂದು ಶ್ರೀಹರಿಯ ಆಸ್ಥಾನವು ನಡೆಯುತ್ತಿದ್ದಾಗ ಈ ತಿರುವೇಂಕಟ ಮಹಾತ್ಮ್ಯಗ್ರಂಥವನ್ನು ಪಾರಾಯಣ ಮಾಡುತ್ತಿದ್ದರು. ವೇಂಕಟತ್ತುರೈವರ್ ಈ ಪಾರಾಯಣ ಸೇವೆ ನಡೆಸುವುದಕ್ಕಾಗಿ ಶ್ರೀನಿವಾಸನ ಖಜಾನೆಗೆ 2000 ನರ್ಪಣಗಳನ್ನು ಮೂಲಧನವಾಗಿ ಸಮರ್ಪಿಸಿದ್ದರು. ಇದರ ಮೇಲೆ ಬರುವ ಆದಾಯದ ಮೂಲಕ ಶ್ರೀವೇಂಕಟಾಚಲಮಾಹಾತ್ಮೆಯ ಪಾರಾಯಣಸೇವೆ, ಪ್ರಸಾದ ವಿನಿಯೋಗಕ್ಕೆ ಏರ್ಪಾಟುಮಾಡಿದರು.

1 T.T.D Inscriptions Vol II No.95, 1998 p:198.

ತಿರುಮಲೆ-ತಿರುಪತಿ ದೇವಸ್ಥಾನದಲ್ಲಿ ಶಾಸನ ಸಂಶೋಧಕರಾಗಿ ಕೆಲಸಮಾಡಿದ ಸಾಧು ಸುಬ್ರಹ್ಮಣ್ಯಶಾಸ್ತ್ರಿಯವರು- (1889-1981) ತಮಿಳಶಾಸನದಲ್ಲಿರುವ "ಇವರ್ ವಿಣ್ಣಪ್ಪಂ ಶೆಯ್ ದ್"(ಇವರು ವಿಜ್ಞಾಪನೆ ಮಾಡಿಕೊಂಡಿರುವ) ಎನ್ನುವ ವಿಶೇಷಣೆಯನ್ನು ಆಧಾರವಾಗಿಟ್ಟುಕೊಂಡು ಶ್ರೀವೇಂಕಟಾಚಲಮಾಹಾತ್ಮೆಗ್ರಂಥವನ್ನು ಸಂಕಲನ ಮಾಡಿದವರು ಪಸಿಂಡಿ ವೇಂಕಟತ್ತುರೈವರ್ ಎಂದು ನಿರೂಪಿಸಲಾಗಿದೆ.

ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಶ್ರೀನಿವಾಸನ ಭಕ್ತರು ಅಧಿಕಸಂಖ್ಯೆಯಲ್ಲಿ ಶ್ರೀವೇಂಕಟಾಚಲಮಾಹಾತ್ಮ್ಯೆ ಗ್ರಂಥದ ಪಾರಾಯಣ ಸೇವೆಗೆ ಏರ್ಪಾಟುಮಾಡಿದಂತೆ ಕ್ರಿ.ಶ.19-1-1545, 5-7-1545, 17-7-1546, 3-6-1547 ರ ಕಾಲದ ಶಾಸನಗಳು[1] ತಿಳಿಯಪಡಿಸುತ್ತಿವೆ. ತಿರುಪತಿಯ ನಿವಾಸಿ ಪೆನ್ಗೊಂಡಶೆಟ್ಟಿ ಕುಮಾರನು ಕಾಳತ್ತಿಶೆಟ್ಟಿ ತಿರುಮಲೆಯ ಶ್ರೀವೇಂಕಟೇಶ್ವರಾಲಯದಲ್ಲಿ ಪುಷ್ಯಮಾಸದಲ್ಲಿ ನಿತ್ಯೋತ್ಸವಗಳನ್ನು ಏರ್ಪಾಟು ಮಾಡಿದನು. ಇದರಲ್ಲಿನ ಭಾಗವಾಗಿ ಶ್ರೀನಿವಾಸ ಪುರಾಣವನ್ನು ಪಾರಾಯಣವನ್ನು ಏರ್ಪಾಟು ಮಾಡಿದಂತೆ ಕ್ರಿ.ಶ. 31-12-1543 ಕಾಲದ ಶಾಸನದಿಂದ[2] ತಿಳಿದುಬರುತ್ತಿದೆ. ಇದರಿಂದಾಗಿ ಶ್ರೀವೇಂಕಟಾಚಲ ಮಾಹಾತ್ಮ್ಯ ಗ್ರಂಥಕ್ಕೆ, ತಿರುವೇಂಕಟಮಾಹಾತ್ಮ್ಯಂ, ಶ್ರೀನಿವಾಸ ಪುರಾಣ ಎಂಬ ಹೆಸರುಗಳಿವೆ ಎಂದು ತಿಳಿದುಬರುತ್ತಿದೆ.

ಈ ವೇಂಕಟಾಚಲ ಮಾಹಾತ್ಮ್ಯಕ್ಕೆ ಸಂಬಂಧಿಸಿದ ಪೌರಾಣಿಕ ಕಥನಗಳು ವೇಂಕಟೇಶ್ವರ ಸುಪ್ರಭಾತವನ್ನು ರಚಿಸಿರುವ ಪ್ರತಿವಾದಿ ಭಯಂಕರ ಅಣ್ಣನ್ (ಕ್ರಿ.ಶ.1361-1453) ಕಾಲಕ್ಕೇ ದೇಶದಲ್ಲಿ ಪ್ರಚಾರದಲ್ಲಿತ್ತೆಂದು ಸುಪ್ರಭಾತದಲ್ಲಿನ ಕೆಲವು ಶ್ಲೋಕಗಳು ಸಾಕ್ಷಿಗಳಾಗಿವೆ.

**ಬ್ರಹ್ಮಾದಯಸ್ಸುರವರಾಸ್ಸಮಹರ್ಷಯಸ್ತೇ**
**ಸಂತಸ್ಸನಂದನ ಮುಖಾಸ್ತ್ವಥ ಯೋಗಿವರ್ಯಾಃ**
**ಧಾಮಾಂತಿಕೇ ತವ ಹಿ ಮಂಗಳವಸ್ತುಹಸ್ತಾಃ**
**ಶ್ರೀವೇಂಕಟಾಚಲಪತೇ! ತವ ಸುಪ್ರಭಾತಮ್.**

ಈ ಶ್ಲೋಕದ ಅರ್ಥವನ್ನು ವೇಂಕಟಾಚಲಮಾಹಾತ್ಮೆ ಗ್ರಂಥದಲ್ಲಿನ ವರಾಹಪುರಾಣದ ಪ್ರಥಮಭಾಗದಲ್ಲಿ 47ನೆಯ ಅಧ್ಯಾಯದಲ್ಲಿನ "ಬ್ರಹ್ಮಾದಿದೇವತೆಗಳ ಭಗವನ್ಮಂದಿರ ಪ್ರವೇಶ"ಎಂಬ ಕಥಾಂಶವನ್ನು ಸೂಚಿಸುತ್ತಿದೆ.

**ಶ್ರೀವೈಕುಂಠವಿರಕ್ತಾಯ ಸ್ವಾಮಿಪುಷ್ಕರಿಣೀತಟೇ**
**ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಮ್** [3]

ಶ್ರೀವೇಂಕಟೇಶನು ವೈಕುಂಠದ ಮೇಲೆ ವಿರಕ್ತಿಯಿಂದ ಸ್ವಾಮಿಪುಷ್ಕರಿಣೀ ತೀರದಲ್ಲಿ ಲಕ್ಷ್ಮಿಸಹಿತನಾಗಿ ವಿಹರಿಸುತ್ತಿದ್ದಾನೆ. ಎಂದು ಈ ಶ್ಲೋಕದ ಅರ್ಥ!

ಶ್ರೀವೇಂಕಟಾಚಲಮಾಹಾತ್ಮೆಯಲ್ಲಿ ಅನೇಕ ಕಡೆಗಳಲ್ಲಿ ವಿವರಿಸಲಾಗಿದೆ.

**ಮಾಯಾವೀ ಪರಮಾನಂದಃ ತ್ಯಕ್ತ್ವಾ ವೈಕುಂಠಮುತ್ತಮಂ**
**ಸ್ವಾಮಿಪುಷ್ಕರಿಣೀ ತೀರೇ ರಮಯಾ ಸಹ ಮೋದತೇ** [4]

**ವೈಕುಂಠಾತ್ಪರಮೋ ಹ್ಯೇಷ ವೇಂಕಟಾಖ್ಯ ನಗೋತ್ತಮಃ**
**ಅತ್ರೈವ ನಿವಾಸಾಮ್ಯೇವ ಶ್ರೀಭೂಮಿಸಹಿತೋಹ್ಯಹಮ್** [5]

1. ತಿ.ತಿ.ದೇವಸ್ಥಾನ ಶಾಸನ ಸಂಪುಟ 5-29, 5-51, 5-53, 5-71, 5-92 2. ತಿ.ತಿ.ದೇ ಶಾಸನ ಸಂಪುಟ 5-10, ಪುಟ-30 3. ಶ್ರೀವೇಂಕಟೇಶ್ವರ ಮಂಗಳಾಶಾಸನಂ-12

4. ಶ್ರೀವೇಂಕಟಾಚಲಮಾಹಾತ್ಮ್ಯಂ (ಹರಿವಂಶಾಂತರ್ಗತ ಶೇಷಧರ್ಮಃ-48-15) ಪ್ರಥಮಭಾಗ, ಪುಟ-298, ತಿ.ತಿ.ದೇ ಪ್ರಕಟಣೆ

5. ಶ್ರೀವೇಂಕಟಾಚಲಮಾಹಾತ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ -35-12) ಪ್ರಥಮಭಾಗ, ಪುಟ-9, ತಿ.ತಿ.ದೇ ಪ್ರಕಟಣೆ

ಈ ವೇಂಕಟಾಚಲವು ವೈಕುಂಠಕ್ಕಿಂತಲೂ ಉತ್ತಮವಾದುದು. ನಾನು ಶ್ರೀದೇವಿ, ಭೂದೇವಿಯರೊಂದಿಗೆ ಇಲ್ಲೇ ನೆಲಸುತ್ತೇನೆ. ಎಂದು ಮೇಲಿನ ಶ್ಲೋಕದ ಅರ್ಥವಾಗಿದೆ.

ಸುಪ್ರಭಾತದಲ್ಲಿನ 6, 9, 14, 15 ಶ್ಲೋಕಗಳಲ್ಲಿ, ಸ್ತೋತ್ರದ ಎರಡನೆಯ ಶ್ಲೋಕದಲ್ಲಿ ಶ್ರೀವೇಂಕಟಾಚಲಮಾಹಾತ್ಮ್ಯಕ್ಕೆ ಸಂಬಂಧಿಸಿದ ಕಥಾಂಶಗಳನ್ನು ವರ್ಣಿಸಲಾಗಿದೆ. ಶ್ರೀವೇಂಕಟೇಶಸ್ತೋತ್ರದಲ್ಲಿನ ಕೊನೆಯ ಮೂರು ಶ್ಲೋಕಗಳು

**ವಿನಾ ವೇಂಕಟೇಶಂ ನ ನಾಥೋ, ನ ನಾಥಃ ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ**
**ಹರೇ! ವೇಂಕಟೇಶ! ಪ್ರಸೀದ ಪ್ರಸೀದ, ಪ್ರಿಯಂ ವೇಂಕಟೇಶ ಪ್ರಯಚ್ಛ ಪ್ರಯಚ್ಛ**

**ಅಹಂ ದೂರತಸ್ತೇ ಪದಾಂಭೋಜಯುಗ್ಮಪ್ರಣಾಮೇಚ್ಛಯಾಽಽಗತ್ಯ ಸೇವಾಂ ಕರೋಮಿ**
**ಸಕೃತ್ಸೇವಯಾ ನಿತ್ಯ ಸೇವಾಫಲಂ ತ್ವಂ, ಪ್ರಯಚ್ಛ, ಪ್ರಯಚ್ಛ ಪ್ರಭೋ! ವೇಂಕಟೇಶ!**

**ಅಜ್ಞಾನಿನಾ ಮಯಾ ದೋಷಾನ್ ಅಶೇಷಾನ್ ವಿಹಿತಾನ್ ಹರೇ!**
**ಕ್ಷಮಸ್ವ ತ್ವಂ ಕ್ಷಮಸ್ವ ತ್ವಂ ಶೇಷಶೈಲಶಿಖಾಮಣೇ!** [1]

ಶ್ರೀವೇಂಕಟಾಚಲ ಮಾಹಾತ್ಮೆ ಗ್ರಂಥದಲ್ಲಿನ ಮಾರ್ಕಂಡೇಯ ಪುರಾಣದ ಭಾಗದಲ್ಲಿ ಮಾರ್ಕಂಡೇಯ ಮಹರ್ಷಿ ಶ್ರೀನಿವಾಸನನ್ನು ಸ್ತುತಿಸುವ ಸಂದರ್ಭಗಳಿವೆ. ಈ ವಿವರದಿಂದಾಗಿ ಕ್ರಿ.ಶ.14ನೆಯ ಶತಮಾನಕ್ಕೂ ಮೊದಲೇ ಅಂದರೆ ಸುಪ್ರಭಾತದ ರಚನೆಗೂ ಮೊದಲೇ ವೇಂಕಟಾಚಲ ಕ್ಷೇತ್ರ ಮಹಿಮೆಗಳನ್ನು ತಿಳಿಸುವಂತಹಾ ಪುರಾಣಕಥೆಗಳು ಪ್ರಚಾರದಲ್ಲಿದ್ದುವೆಂದು ಸ್ಪಷ್ಟವಾಗುತ್ತಿದೆ.

ಶ್ರೀನಿವಾಸಮಂಗಾಪುರದಲ್ಲಿನ ಶ್ರೀಕಲ್ಯಾಣ ವೇಂಕಟೇಶ್ವರಸ್ವಾಮಿ ದೇವಾಲಯವನ್ನು ಪುನರ್ನಿರ್ಮಾಣ ಮಾಡಿಸಿದ ತಾಳ್ಳಪಾಕ ಚಿನ ತಿರುಮಲಾಚಾರ್ಯರು (ಅನ್ನಮಾಚಾರ್ಯರ ಮೊಮ್ಮಗ , ಪೆದತಿರುಮಲಾಚಾರ್ಯರ ಮಗ) ಕೆತ್ತಿಸಿದ ಕ್ರಿ.ಶ.22-3-1540 ರ ತೆಲುಗು ಶಾಸನದಲ್ಲಿ "ಸ್ಕಾಂದಪುರಾಣೋಕ್ತವಾದ ಶ್ರೀವೇಂಕಟೇಶ್ವರಮಾಹಾತ್ಮೆ"ಯ ಪ್ರಸ್ತಾವನೆ ಇದೆ,

ಆ ಶಾಸನದಲ್ಲಿ ವಿವರಣೆ ಈ ರೀತಿಯಾಗಿದೆ.

1. ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ 1463 ಇಂದಿನ ಶಾರ್ವರಿ ಚೈತ್ರಶುದ್ಧ
2. 15 ರ ಚಿತ್ತಾನಕ್ಷತ್ರದಲ್ಲಿ ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ ಶ್ರೀರಾಮಾನುಜ ಸಿ(ಂ)ದ್ಧಾಂತ (ಸ್ಥಾ)ಪನಾಚಾರ್ಯ
3. ವೇದಾಂತಚಾರ್ಯ ಕವಿತಾರ್ಕಿಕ ಕೇಸರಿ ಶರಣಾಗತವಜ್ರಪಂಜರರಾದ ಶ್ರೀತಾಳ್ಳಪಾಕ ಪೆದತಿರುಮಲಾಚಾರ್ಯರ
4. ಕುಮಾರನಾದ ಶ್ರೀಚಿನತಿರುಮಲಯಂಗಾರು ಸ್ಕಂದಪುರಾಣೋಕ್ತವಾದ ಶ್ರೀವೇಂಕಟೇಶಮಾಹಾತ್ಮೆ-
5. ಯಲ್ಲಿ ವಿಕಲ್ಯನದಿತೀರದಲ್ಲಿ ಶ್ರೀರಂಗಮಹಾತ್ಮೆಯಲ್ಲಿನ ದಶಾಧ್ಯಾಯದಲ್ಲಿ ದೇವಳತೀರ್ಥತೀರದಲ್ಲಿ
6. ತಮ್ಮ(ಸೇವೆಯಾಗಿ) ಸರ್ವಮಾನ್ಯ ಅಗ್ರಹಾರವಾದ ಅಲುಮೇಲುಮಂಗಾಪುರದಲ್ಲಿ ಜೀರ್ಣೋದ್ದರಣಕ್ಕಾಗಿ
7. ಶ್ರೀವೇಂಕಟೇಶ್ವರನು, ನಾಚ್ಚಿಯಾರು, ಅನಂತಗರುಡವಿಷ್ವಕ್ಸೇನಾದಿಗಳೆಂಬ ............ ದೇವರುಗಳನ್ನು
8. ಆಳ್ವಾರುಗಳನ್ನು ವುಡ್ಯೆಯವರುಗಳನ್ನು ಪೂರ್ವಾಚಾರ್ಯರನ್ನು ಅನ್ನಮಾಚಾರ್ಯರಾದ ನಮ್ಮ ಆಚಾರ್ಯ
9. ರನ್ನು ತಿರುಪ್ರತಿಷ್ಠಾಪನೆ ಮಾಡಿ ಆಯಾಳ್ವಾರುಗಳ ಸನ್ನಿಧಿಗೆ ಬಂದು ಆಗ ನಿತ್ಯಾನುಸಂಧಾನಗಳು
10. ಮೊದಲಾದವುಗಳನ್ನು ಆರಂಭಿಸಿ ಆಚಾರ್ಯಪುರುಷರು ಜೀಯ್ಯರು ........ ಶ್ರೀವೈಷ್ಣವರು ....... ಹೊತ್ತುಹೊತ್ತಿಗೆ

1.ಶ್ರೀವೇಂಕಟೇಶ ಸ್ತೋತ್ರ- 9,10,22 3.ತಿ.ತಿ.ದೇವಸ್ಥಾನ ಶಾಸನ ಸಂಪುಟ -4-144,1998

2.ಶ್ರೀವೇಂಕಟಾಚಲಮಾಹಾತ್ಮೆ (ಮಾರ್ಕಂಡೇಯ ಪುರಾಣಾಂತರ್ಗತ -2-20,21,22) ಪ್ರಥಮಭಾಗ ಪುಟ-378, ತಿ.ತಿ.ದೇ ಪ್ರಕಟಣೆ

11. ನೈವೇದ್ಯ .......... ಫಲ ಚಂದನ ತಾಂಬೂಲವನ್ನು

12. ಸಮರ್ಪಿಸಿ ಈ ಪದ್ದತಿ ನಮ್ಮ ಪುತ್ರಪೌತ್ರಪರಂಪರೆಯಲ್ಲಿ ಆಚಂದ್ರಾರ್ಕವಾಗಿ ಶ್ರೀ ....... ಶ್ರೀಯತಿರಾಜೆಯ್ಯ

13. ರವರ ಮೂಲಕ ಬರೆಸಿರುವ ಶಿಲಾಶಾಸನ (II) 265, 266

**ವರಾಹಪುರಾಣದಲ್ಲಿನ ವೇಂಕಟಾಚಲ ಕ್ಷೇತ್ರಮಾಹಾತ್ಮೆಯ ಗ್ರಂಥವು ಅನುವಾದವಾಗಿರುವ ಕೆಲವು ಉದಾಹರಣೆಗಳು ಇಲ್ಲಿವೆ.**

1. ಶ್ರೇಷ್ಠಲೂರಿ ವೇಂಕಟಾರ್ಯುಡು –ಶ್ರೀನಿವಾಸ ವಿಲಾಸ ಸೇವ(ದ್ವಿಪದಿ)
2. ತರಿಗೊಂಡ ವೆಂಗಮಾಂಬ –ವೇಂಕಟಾಚಲ ಮಾಹಾತ್ಮ್ಯಂ
3. ಮುಲುಪಾಕ ಬುಚ್ಚಯ್ಯ ಶಾಸ್ತ್ರಿ– ವೇಂಕಟಾಚಲ ಮಾಹಾತ್ಮ್ಯಂ
4. ದಾಮೆರ ಚಿನ ವೆಂಕಟರಾಯುಡು– ವೇಂಕಟಾಚಲ ಮಾಹಾತ್ಮ್ಯಂ
5. ಶಿಷ್ಟು ಕೃಷ್ಣಮೂರ್ತಿ ಶಾಸ್ತ್ರಿ– ವೇಂಕಟಾಚಲ ಮಾಹಾತ್ಮ್ಯಂ
6. ಕಲ್ಲೂರಿ ವೇಂಕಟ ಸುಬ್ರಹ್ಮಣ್ಯ ದೀಕ್ಷಿತುಲು(ವಚನ)
7. ಪರವಸ್ತು ವೇಂಕಟರಾಮಾನುಜ ಸ್ವಾಮಿ(ವಚನ)
8. ತೂ.ವೇಂ.ಚೂಡಾಮಣಿ(ವಚನ)

ಪಸಿಂಡಿ ವೇಂಕಟತ್ತುರೈವರ್ ಶ್ರೀವೇಂಕಟಾಚಲ ಮಾಹಾತ್ಮ್ಯಂ ಗ್ರಂಥದಲ್ಲಿ ಆಯಾ ಪುರಾಣಭಾಗಗಳನ್ನಾಗಿ ಹೆಸರಿಸಿ ಸಂಕಲನ ಮಾಡಿದ ಅಧ್ಯಾಯಗಳು ಈಗ ಲಭಿಸಿರುವ ಮೂರು ಪುರಾಣ ಗ್ರಂಥಗಳಲ್ಲಿ ಕಂಡುಬರುತ್ತಿಲ್ಲ. ಆದರೆ ಪ್ರಸ್ತುತ ಲಭಿಸಿ ಪ್ರಚಾರದಲ್ಲಿರುವ ಸ್ಕಂದಪುರಾಣದಲ್ಲಿ ಎರಡನೆಯದಾದ ವೈಷ್ಣವಖಂಡದಲ್ಲಿ ಶ್ರೀವೇಂಕಟಾಚಲಮಾಹಾತ್ಮ್ಯಂ ಗ್ರಂಥದ 40ನೆಯ ಅಧ್ಯಾಯದಲ್ಲಿ 2476 ಶ್ಲೋಕಗಳಲ್ಲಿ ವರ್ಣಿಸಲಾಗಿದೆ. ಪಸಿಂಡಿ ವೇಂಕಟತ್ತುರೈವರ್ ಸಂಕಲನೆ ಮಾಡಿದ ಪುರಾಣಭಾಗಗಳೇ ಅಲ್ಲದೇ ಈಗ ಲಭಿಸಿ, ಪ್ರಚಾರದಲ್ಲಿರುವ ಮಹಾಭಾಗವತ–ದಶಮಸ್ಕಂಧದಲ್ಲಿ 89ನೆಯ ಅಧ್ಯಾಯದಲ್ಲಿ ಕಲಿಯುಗದಲ್ಲಿ ಶ್ರೀಶ್ರೀನಿವಾಸನ ಅವತಾರಕ್ಕೆ ಕಾರಣನಾದ ಭೃಗುಮಹರ್ಷಿಯು ತ್ರಿಮೂರ್ತಿಗಳನ್ನು ಪರೀಕ್ಷಿಸಿದ ಘಟನೆಯನ್ನು ವಿವರಿಸಲಾಗಿದೆ. ಮಹಾಭಾರತದಲ್ಲಿ ಬಲರಾಮನು ತೀರ್ಥಯಾತ್ರೆಗಳನ್ನು ಮಾಡುತ್ತಾ ವೇಂಕಟಾದ್ರಿಯನ್ನು, ವೇಂಕಟೇಶ್ವರನನ್ನು ದರ್ಶಿಸಿದನೆಂದು ದಶಮಸ್ಕಂಧದಲ್ಲಿನ 79ನೆಯ ಅಧ್ಯಾಯದಲ್ಲಿ, 13ನೆಯ ಶ್ಲೋಕದಲ್ಲಿ ತಿಳಿಸಿದ್ದಾರೆ. ಭೃಗುಮಹರ್ಷಿಯ ವೃತ್ತಾಂತವು ಪದ್ಮಪುರಾಣದಲ್ಲಿನ ಉತ್ತರಖಂಡದಲ್ಲಿ 60ನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ.

ಕ್ರಿ.ಶ.1491 ರಿಂದ ತಿರುಮಲೆ ಶ್ರೀನಿವಾಸನ ದೇವಾಲಯದಲ್ಲಿ ಪಾರಾಯಣ ಗ್ರಂಥವಾಗಿ ಗೌರವಿಸಲ್ಪಟ್ಟ ಶ್ರೀವೇಂಕಟಾಚಲಮಾಹಾತ್ಮ್ಯಂ ಗ್ರಂಥ ತಾಳಪತ್ರ ಗ್ರಂಥದ ರೂಪದಲ್ಲಿ ಕ್ರಿ.ಶ. 1884 ವರೆಗೂ ದೇಶದೆಲ್ಲೆಡೆ ಪ್ರಚಾರದಲ್ಲಿ ಇತ್ತೆಂದು ತಿಳಿದುಬರುತ್ತಿದೆ. ಈ ಸಂಸ್ಕೃತ ಗ್ರಂಥಕ್ಕೆಕ್ರಿ.ಶ. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲೇ ತೆಲುಗು ಅನುವಾದಗಳು ಹೊರಬಂದುವು.

ಸಂಸ್ಕೃತದಲ್ಲಿನ ವೇಂಕಟಾಚಲಮಾಹಾತ್ಮ್ಯಂ (ಸಂಕಲನ)ಗ್ರಂಥ ತೆಲುಗು ಲಿಪಿಯಲ್ಲಿ ತಿ.ತಿ.ದೇವಸ್ಥಾನಗಳ ವಿಚಾರಣಾಧಿಕಾರಿಗಳಾಗಿದ್ದ ಮಹಂತು ಭಗವಾನ್ ದಾಸು(ಕ್ರಿ.ಶ. 1880–1890) ಅವರ ಮೂಲಕ ಮೊಟ್ಟಮೊದಲಬಾರಿಗೆ ಶಕೆ ಸಂ॥1806 ಶ್ರೀ ತಾರಣ ನಾಮ ಸಂವತ್ಸರ ಶುದ್ಧ ಬಿದಿಗೆಯಂದು (ಕ್ರಿ.ಶ.24–7–1884) ಪ್ರಕಟಿಸಲ್ಪಟ್ಟಿತು. ಈ ಪ್ರತಿ ಈಗ ಕಾಣಸಿಗುತ್ತಿಲ್ಲ.

ಈ ರೀತಿಯಲ್ಲಿ ವೇಂಕಟಾಚಲಮಾಹಾತ್ಮೆಗೆ ಸಂಬಂಧಿಸಿದ ಕಥೆಗಳು ವಿವಿಧ ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಸಾಹಿತ್ಯ, ಶಾಸನಾಧಾರಗಳ ಮೂಲಕ ತಿಳಿದುಬರುತ್ತಿದೆ.

*~*~*~*~*

## ಆಕಾಶಗಂಗೆಯ ಅಭಿಮುಖವಾಗಿ ಕುಳಿತು ತಪಸ್ಸು ಮಾಡುತ್ತಿರುವ ಅಂಜನಾದೇವಿ



# 5 . ಶ್ರೀವೇಂಕಟಾಚಲೇತಿಹಾಸಮಾಲ– ಶ್ರೀವೇಂಕಟೇಶ್ವರತತ್ತ್ವ

ಶ್ರೀ. ಈ.ಎ.ಸಿಂಗರಾಚಾರ್ಯುಲು

ಯಾವುದೇ ವಿಷಯವನ್ನಾದರೂ ಪುರಾವೆಗಳೊಂದಿಗೆ ನಿರ್ಧರಿಸುವುದಕ್ಕಾಗಿ ಮೂರು ಆಧಾರಗಳಿವೆ. ಅವು ಯಾವುವೆಂದರೆ? ಸಾಹಿತ್ಯಪರವಾದ ಆಧಾರಗಳು, ಚಾರಿತ್ರಿಕ ಅವಶೇಷಗಳು, ಶಿಲಾಶಾಸನಗಳು. ತಿರುಮಲೆಯಲ್ಲಿ ನೆಲೆಸಿರುವ ಶ್ರೀವೇಂಕಟೇಶ್ವರನ ತತ್ತ್ವವನ್ನು ನಿರೂಪಿಸುವುದಕ್ಕೆ ಪ್ರಾಮಾಣಿಕವಾದ ಸಾಹಿತ್ಯಾಧಾರಗಳಲ್ಲಿ "ಶ್ರೀವೇಂಕಟಾಚಲೇತಿಹಾಸಮಾಲ"ವೂ ಒಂದು. ಇದನ್ನು ಅನಂತಾಚಾರ್ಯರು ರಚಿಸಿದರು. ಇವರು ಶ್ರೀರಾಮಾನುಜಾಚಾರ್ಯರ ಶಿಷ್ಯರಲ್ಲಿ ಪ್ರಮುಖರು. ಶ್ರೀವೇಂಕಟಾಚಲೇತಿಹಾಸಮಾಲೆಯಲ್ಲಿ ನಮಗೆ ದೊರೆಯುವ ಆಧಾರಗಳೆಲ್ಲಾ ಸುಮಾರು ಕ್ರಿ.ಶ.1050–1150 ವರ್ಷಗಳ ನಡುವಿನ ಕಾಲಕ್ಕೆ ಸಂಬಂಧಿಸಿದ್ದಾಗಿವೆ. ಈ ಕಾಲದಲ್ಲಿ ತಿರುಮಲೆಯ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ವಿಶೇಷಗಳನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ. ಶ್ರೀವೇಂಕಟಾಚಲೇತಿಹಾಸಮಾಲೆಯಲ್ಲಿ ಏಳು ಭಾಗಗಳು ಇವೆ. ಇವಕ್ಕೆ "ಸ್ತಬಕಗಳು" ಎಂದು ಅರ್ಥ, ಅಥವಾ ಅಧ್ಯಾಯಗಳು ಎಂದೂ ಹೇಳಬಹುದು. ಶ್ರೀರಾಮಾನುಜರ ಆದೇಶದ ಮೇರೆಗೆ ತಿರುಮಲೆಗೆ ಬಂದು, ಅಲ್ಲಿ ಶ್ರೀವೇಂಕಟೇಶ್ವರನಿಗೆ ಕುಸುಮಗಳ ಮಾಲೆಯ ಸೇವೆಯನ್ನು ಮಾಡಿದ ಪುಣ್ಯಾತ್ಮರು ಶ್ರೀಅನಂತಾಳ್ವಾರರು. ಈ ಸೇವೆಗಾಗಿ ತಿರುಮಲೆಯಲ್ಲಿ ದಕ್ಷಿಣ ಸನ್ನಿಧಿ ಬೀದಿಯ, ನೈರುತ್ಯ ಮೂಲೆಯಲ್ಲಿ ಒಂದು ಉದ್ಯಾನವನನ್ನು ನಿರ್ಮಿಸಿ, ಅದನ್ನು ಬೆಳೆಸುವುದಕ್ಕಾಗಿ ಒಂದು ಕೆರೆಯನ್ನು ತೋಡಿದರು. ಇಂದಿಗೂ ಆ ಕೆರೆಯನ್ನು ನೋಡಬಹುದು.

ಅನಂತಾಳ್ವಾರರು ಶ್ರೀವೇಂಕಟಾಚಲೇತಿಹಾಸಮಾಲೆಯನ್ನು ರಚಿಸುವುದಕ್ಕೆ ನಾಂದಿ ಹಾಡಿದ ಚಾರಿತ್ರಿಕ ಹಿನ್ನೆಲೆಯನ್ನೂ ಈಗ ಸ್ಮರಿಸಬೇಕಾಗಿದೆ. ಶ್ರೀರಾಮಾನುಜಾಚಾರ್ಯರು ಶ್ರೀರಂಗವನ್ನು ಆಧ್ಯಾತ್ಮಿಕ ಕೇಂದ್ರವನ್ನಾಗಿಸಿಕೊಂಡು ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಚಾರದ ಹೊಣೆಯನ್ನು ಹೊತ್ತು ಆ ಕಾರ್ಯದಲ್ಲಿ ನಿರತರಾಗಿದ್ದಾಗ, ತಿರುಮಲೆ ಪ್ರಾಂತವನ್ನು ಯಾದವರಾಜನು ಆಳುತ್ತಿದ್ದ. ಆ ಸಮಯದಲ್ಲಿ ತಿರುಮಲೆಯ ಬೆಟ್ಟದ ಮೇಲೆ ಇರುವ ವೇಂಕಟೇಶ್ವರನ ವಿಗ್ರಹತತ್ತ್ವದ ವಿಷಯದಲ್ಲಿ ವಿವಾದ ಉಂಟಾಯಿತು. ಕೆಲವು ಜನ ಶೈವರು ಬೆಟ್ಟದ ಮೇಲಿರುವ ವಿಗ್ರಹವು ಕುಮಾರ ಸ್ವಾಮಿ ಅಥವಾ ಶಿವನ ರೂಪವೆಂದೂ ಆದರೆ ಶ್ರೀವೈಷ್ಣವರು ಅದನ್ನು ವಿಷ್ಣು ಸ್ವರೂಪವೆಂದು ಬದಲಿಸಿ ಪ್ರಚಾರ ಮಾಡುತ್ತಿದ್ದಾರೆಂದು ಯಾದವರಾಜನ ಬಳಿ ಆರೋಪಿಸಿ ತಮಗೆ ನ್ಯಾಯವನ್ನು ಒದಗಿಸಬೇಕೆಂದು ಕೇಳಿಕೊಂಡರು. ಯಾದವರಾಜನು ಆ ವಿಷಯದಲ್ಲಿ ಶೈವರು ಮಾಡುವ ವಾದಗಳಿಗೆ ಸರಿಯಾದ ಉತ್ತರವನ್ನು ಹೇಳಬಲ್ಲವರು ಶ್ರೀರಾಮಾನುಜರೇ ಎಂದು ಭಾವಿಸಿ, ಅವರನ್ನು ತಿರುಪತಿಗೆ ಆಹ್ವಾನಿಸಿದ. ಆ ಸಮಯದಲ್ಲಿ ಶೈವರಿಗೆ, ರಾಮಾನುಜಾಚಾರ್ಯರಿಗೂ ನಡುವೆ ನಡೆದ ವಾದದಲ್ಲಿ, ಶ್ರೀರಾಮಾನುಜರು ಶೈವರು ಮಾಡಿದ ವಾದಗಳಿಗೆ ಪ್ರತಿಯಾಗಿ ಯುಕ್ತಿ ಮತ್ತು ಪ್ರಮಾಣಗಳೊಂದಿಗೆ ಉತ್ತರವನ್ನು ನೀಡಿ, ಬೆಟ್ಟದ ಮೇಲೆ ನೆಲೆಸಿರುವ ವಿಗ್ರಹತತ್ತ್ವ ವಿಷ್ಣುಸ್ವರೂಪವೆಂದು , ಅದು ಕುಮಾರಸ್ವಾಮಿ ಅಥವಾ ಶಿವನರೂಪವಲ್ಲವೆಂದು ನಿರೂಪಿಸಿದರು. ಈ ರೀತಿ ನಡೆದ ವಾಗ್ವಿವಾದದಲ್ಲಿನ ವಿಶೇಷತೆಗಳನ್ನು ಅನಂತಾಚಾರ್ಯರು "ವೇಂಕಟಾಚಲೇತಿಹಾಸಮಾಲ" ಗ್ರಂಥದಲ್ಲಿ ಮೊದಲ ಮೂರು ಅಧ್ಯಾಯಗಳಲ್ಲಿ ಪ್ರಸ್ತಾವಿಸಿದ್ದಾರೆ. ಈ ವಿವರಗಳ ಆಧಾರದ ಮೇಲೆ "ಶ್ರೀವೇಂಕಟಾಚಲೇತಿಹಾಸಮಾಲ"ದಪ್ರಕಾರ ವೇಂಕಟೇಶ್ವರತತ್ತ್ವವನ್ನು ನಾವು ಗಮನಿಸಬಹುದು. ಅವುಗಳಲ್ಲಿ ಕೆಲವು ವಿವರಗಳನ್ನು ಇಲ್ಲಿ ನೀಡಲಾಗಿದೆ.

1. ತಾರಕಾಸುರ ಸಂಹಾರದಿಂದಾಗಿ ಉಂಟಾದ ಬ್ರಹ್ಮಹತ್ಯಾದೋಷವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಕುಮಾರಸ್ವಾಮಿಯು ಶಿವನ ಆಜ್ಞೆಯ ಪ್ರಕ್ರಾರ ವೇಂಕಟಾಚಲಕ್ಕೆ ಬಂದು, ಅಲ್ಲಿ ಪುಷ್ಕರಿಣಿಯ ದಕ್ಷಿಣ ತೀರದಲ್ಲಿ ನಿಂತು ತಪಸ್ಸನ್ನಾಚರಿಸಿದನೆಂದು ಆದ್ದರಿಂದಲೇ ಬೆಟ್ಟದ ಮೇಲೆ ಇರುವ ಪುಷ್ಕಿರಿಣಿಗೆ ಸ್ವಾಮಿ ಪುಷ್ಕರಿಣಿ ಎಂಬ ಹೆಸರು ಬಂದಿದೆಯೆಂದು ಶೈವರ ವಾದ. ಇದಕ್ಕೆ ಅವರು ವಾಮನಪುರಾಣದಲ್ಲಿನ **"ಮಮಾಪಿ ತಪಸೋ ಯೋಗ್ಯ ಕ್ಷೇತ್ರಂ ಬ್ರೂಹಿ ಶುಭಾನ್ವಿತಂ"** [1] **–ಜಗಾಮ ಶಿಖಿನಾ ತಸ್ಮಾತ್ ಕುಮಾರೋ**

1. ಶ್ರೀವೇಂಕಟಾಚಲಮಹಾತ್ಮ್ಯಂ (ವಾಮನಪುರಾಣ ಕ್ಷೇತ್ರಖಂಡಾಂತರ್ಗತ–21–2) ಪ್ರಥಮಭಾಗ–ಪುಟ–408, ತಿ.ತಿ.ದೇ ಪ್ರಕಟಣೆ

**ವೃಷಭಾಚಲಮ್".**[1] ಇತ್ಯಾದಿಯಾಗಿ ಕೆಲವು ವಾಕ್ಯಗಳನ್ನು ಉದಾಹರಣೆಯಾಗಿ ನೀಡಿದರು.[2] ಭೀಮಸೇನ ಎಂಬ ಶಬ್ದದಲ್ಲಿನ ಭೀಮಶಬ್ದ, ಸತ್ಯಭಾಮ ಎಂಬ ಶಬ್ದದಲ್ಲಿ ಸತ್ಯಶಬ್ದ ವ್ಯವಹಾರದಲ್ಲಿರುವಂತೆ ಕುಮಾರಸ್ವಾಮಿ ಶಬ್ದದಲ್ಲಿ ಸ್ವಾಮಿ ಎಂಬ ಶಬ್ದ ಇಲ್ಲಿ ಪುಷ್ಕರಿಣಿಯ ಹೆಸರಿನಲ್ಲಿ ಬಂದು ಸ್ವಾಮಿ ಪುಷ್ಕರಿಣಿ ಎಂಬ ನಾಮಧೇಯವನ್ನು ಹೊಂದಿದೆ ಎಂದು, ಆದ್ದರಿಂದ ತಿರುಮಲೆಯ ಕ್ಷೇತ್ರ ಶಿವಕ್ಷೇತ್ರವೆಂದೂ ವಿಷ್ಣುಕ್ಷೇತ್ರವಲ್ಲವೆಂದು ಅವರು ತಮ್ಮ ವಾದವನ್ನು ಮಂಡಿಸಿದರು.[3]

ಶ್ರೀರಾಮಾನುಜರು ಅವರ ವಾದಕ್ಕೆ ಪ್ರತಿಯಾಗಿ , ಉತ್ತರವನ್ನು ನೀಡುತ್ತಾ, ತಿರುಮಲೆಯ ಮೇಲೆ ಇರುವ ಪುಷ್ಕರಿಣಿಗೆ "ಸ್ವಾಮಿ ಪುಷ್ಕರಿಣಿ" ಎಂಬ ಹೆಸರು ಬರುವುದಕ್ಕೆ ಹಲವು ಕಾರಣವನ್ನು ವಾಮನಪುರಾಣದಲ್ಲಿನ **"ಅಸ್ತಿ ವೇಂಕಟಾಚಲೋ ನಾಮ ಪ್ರಥಿತಃ ಪರ್ವತೋತ್ತಮಃ, ಸ್ವಾಮಿಪುಷ್ಕರಿಣೀ ನಾಮ ಸರಸೀ ಸರ್ವಕಾಮದಾ, ತ್ರೈಲೋಕ್ಯವರ್ತಿನಾಂ ಬ್ರಹ್ಮನ್ ತೀರ್ಥಾನಾಂ ಸ್ವಾಮಿನೀ ಹಿ ಸಾ, ಸ್ವಾಮಿಪುಷ್ಕರಿಣೀತ್ಯೇತತ್ ನಾಮಧೇಯಂ ಚ ತತ್ ಕೃತಮ್"**[4] ಇತ್ಯಾದಿಯಾಗಿ ಕೆಲವು ಪ್ರಮಾಣಗಳನ್ನು ತೋರಿಸಿದರು. ಎಲ್ಲಾ ಪುಷ್ಕರಿಣಿಗಳಿಗೆ ಇದು ಸ್ವಾಮಿಯಂತದಾದ್ದರಿಂದ ಇದಕ್ಕೆ ಸ್ವಾಮಿ ಪುಷ್ಕರಿಣೀ ಎಂದು ಹೆಸರು ಬಂದಿದೆಯೆಂದು ಮೇಲೆ ತಿಳಿಸಿರುವ ಶ್ಲೋಕದ ಅರ್ಥ[5]. ಈ ಸಂದರ್ಭದಲ್ಲಿ ರಾಮಾನುಜಾಚಾರ್ಯರು ಇನ್ನೂ ವರಾಹ ಪುರಾಣ, ಸ್ಕಾಂದ ಪುರಾಣ ಮುಂತಾದ ಹಲವು ಪುರಾಣಗಳಿಂದ ವಾಕ್ಯಗಳನ್ನು ಪುರಾವೆಗಳಾಗಿ ತೋರಿಸಿದರು. ಇದರಿಂದ ಬೆಟ್ಟದ ಪುಷ್ಕರಿಣಿಗೆ ದಕ್ಷಿಣದಲ್ಲಿ ಇರುವ ಮೂರ್ತಿ ಕುಮಾರಸ್ವಾಮಿ ಎಂದು ಹೇಳುವುದಕ್ಕೆ ಸರಿಯಾದ ಆಧಾರಗಳಿಲ್ಲವೆಂದು ಅವರು ನಿರೂಪಿಸಿದರು. ಇನ್ನು ತಿರುಮಲೆಯ ಕ್ಷೇತ್ರ ವಿಷ್ಣುಕ್ಷೇತ್ರವೇ ಎಂದು ಹೇಳುವುದಕ್ಕೆ ಹಲವು ಪ್ರಮಾಣಗಳನ್ನು ವರಾಹ, ಬ್ರಹ್ಮಾಂಡ, ವಾಮನಾದಿ ಪುರಾಣಗಳಲ್ಲಿ ಪ್ರಸ್ತಾವನೆ ಇರುವುದರಿಂದ ಜೊತೆಗೆ ಋಗ್ವೇದದಲ್ಲಿ **"ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ । ಶಿರಿಂಬಿಠಸ್ಯ ಸತ್ತ್ವಭಿಸ್ತೇಭಿಷ್ಟ್ವಾ ಚಾತಯಾಮಸಿ"**[6] "ಅರಾಯಿ ಕಾಣೆ" ಎಂಬ ಒಂದು ಸೂಕ್ತವನ್ನು ಶ್ರೀರಾಮಾನುಜಾಚಾರ್ಯರು ಪ್ರಸ್ತಾಪಿಸಿದರು.

ಇದರಲ್ಲಿ ವೇದಪುರುಷನು ಐಹಿಕ ಆಮುಷ್ಮಿಕ ಸಂಪತ್ತುಗಳು ಇಲ್ಲದಿರುವ ಮಾನವನನ್ನು ನೋಡಿ ಅತನಿಗೆ ಉಪದೇಶಿಸುತ್ತಾ, "ಕಷ್ಟಗಳಿಂದ ನೋವನ್ನು ಅನುಭವಿಸುತ್ತಿರುವ ನೀನು ಭಗವಂತನ ಭಕ್ತರುಗಳೊಂದಿಗೆ ಶ್ರೀನಿವಾಸನ ನಿವಾಸವಾದ ತಿರುಮಲೆಗೆ ಹೋಗಿ, ಅಲ್ಲಿ ನಿನ್ನನ್ನು ನೀನು ಸ್ವಾಮಿಗೆ ಸಮರ್ಪಿಸಿಕೊಂಡು ಧ್ಯಾನಿಸು, ನಿನ್ನ ಅಭೀಷ್ಟಗಳೆಲ್ಲವೂ ಸಿದ್ಧಿಸುತ್ತವೆ: ಎಂದು ಉಪದೇಶಿಸುತ್ತಿದ್ದಾನೆ. ಈ ಸೂಕ್ತದಲ್ಲಿ ಮುಖ್ಯವಾಗಿ ಗಮನಿಸಬೇಕಾದ "ಶಿರಿಂಬಿಠಸ್ಯ" ಎಂಬ ಪದ. ಇದು "ಶ್ರೀಪೀಠಸ್ಯ" ಎಂಬ ಪದಕ್ಕೆ ಛಾಂದಸ ರೂಪ. "ಶ್ರೀನಿವಾಸನ" ಎಂದು ಇದರ ಅರ್ಥ! ಇದರ ಪ್ರಕಾರ ವೇಂಕಟಾಚಲ ಕ್ಷೇತ್ರ ವಿಷ್ಣುಕ್ಷೇತ್ರವೇ ಹೊರತು, ಶಿವಕ್ಷೇತ್ರವಲ್ಲವೆಂದು ತಿಳಿದುಬರುತ್ತಿದೆ. ಎಂದು ಶ್ರೀರಾಮಾನುಜಾಚಾರ್ಯರು ನಿರೂಪಿಸಿದರು. ಈ ಸೂಕ್ತವು ವೇಂಕಟಾಚಲಕ್ಷೇತ್ರಕ್ಕೆ ಸಂಬಂಧಿಸಿದ್ದು ಎಂಬ ವಿಷಯವನ್ನು ಭವಿಷ್ಯೋತ್ತರ ಪುರಾಣದಲ್ಲಿನ **"ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛೇತಿ ತಂ ವಿದುಃ, ಏವಂ ವೇದಮಯಃ ಸಾಕ್ಷಾತ್ ಗಿರೀಂದ್ರಃ ಪನ್ನಗಾಚಲಃ"** [7] ಎಂಬ ಶ್ಲೋಕವು ನಿರೂಪಿಸುತ್ತಿದೆ ಎಂದೂ ಪ್ರಮಾಣ ಪೂರ್ವಕವಾಗಿ ತೋರಿಸಿದರು.[8]

---

1. ಶ್ರೀವೇಂಕಟಾಚಲಮಾಹಾತ್ಮ್ಯಂ (ವಾಮನ ಪುರಾಣ ಕ್ಷೇತ್ರಖಂಡಾಂತರ್ಗತ-21-101) ಪ್ರಥಮಭಾಗ , ಪುಟ-418, ತಿ.ತಿ.ದೇ ಪ್ರಕಟಣೆ
2. ಶ್ರೀವೇಂಕಟಾಚಾಲೇತಿಹಾಸಮಾಲ ಪುಟ-5
3. ಶ್ರೀವೇಂಕಟಾಚಲೇತಿಹಾಸಮಾಲ ಪುಟ-4.5
4. ಶ್ರೀವೇಂಕಟಾಚಲಮಾಹಾತ್ಮ್ಯಂ (ವಾಮನಪುರಾಣ ಕ್ಷೇತ್ರಖಂಡಾಂತರ್ಗತ-44-11-12,17) ಪ್ರಥಮಭಾಗ-ಪುಟ- 556,557 ತಿ.ತಿ.ದೇ ಪ್ರಕಟಣೆ
5. ಶ್ರೀವೇಂಕಟಾಚಲೇತಿಹಾಸಮಾಲ ಪುಟ -21

6 ಋಗ್ವೇದ- 10-155-1

7. ಶ್ರೀವೇಂಕಟಾಚಲಮಾಹಾತ್ಮ್ಯಂ (ಭವಿಷ್ಯೋತ್ತರ ಪುರಾಣ ತೀರ್ಥಖಂಡಾಂತರ್ಗತ-4-21-22)ದ್ವಿತೀಯಭಾಗ-ಪುಟ-294. ತಿ.ತಿ.ದೇ ಪ್ರಕಟಣೆ
8. ಶ್ರೀವೇಂಕಟಾಚಲೇತಿಹಾಸಮಾಲ, ಪುಟ-18

2. ತಿರುಮಲೆಯಲ್ಲಿ ಇರುವ ಮೂರ್ತಿ ಜಟೆಯನ್ನು ಹೊಂದಿರುವುದರಿಂದ, ಈ ರೀತಿ ಜಟೆಗಳನ್ನು ಹೊಂದಿರುವುದು ಸಾಧಕವೇಷದ ಕುರುಹು ಆದ್ದರಿಂದ, ಈ ಮೂರ್ತಿ ತಪಸ್ಸು ಮಾಡುತ್ತಿರುವ ಕುಮಾರಸ್ವಾಮಿಯೇ ಇದು ವಿಷ್ಣು ರೂಪವಲ್ಲವೆಂದೂ ಶೈವರು ಇನ್ನೊಂದು ವಾದವನ್ನು ಮುಂದಿಟ್ಟರು.

ಇದಕ್ಕೆ ಉತ್ತರವಾಗಿ ಶ್ರೀರಾಮಾನುಜರು, ಪಾಂಚರಾತ್ರಾಗಮದಲ್ಲಿ ಸಾತ್ವತ ಸಂಹಿತೆಯಿಂದ, ಭಾಗವತ ಮೊದಲಾದ ಗ್ರಂಥಗಳಿಂದ ಪ್ರಮಾಣಗಳನ್ನು ಉದಾಹರಣೆಗಳನ್ನಾಗಿ ತೋರಿಸಿ. ಈ ರೀತಿ ಜಟೆಯನ್ನು ಹೊಂದಿರುವುದು ವಿಷ್ಣುರೂಪವು ಎಂಬ ವಿಷಯವನ್ನು ಪ್ರಮಾಣಗಳ ಮೂಲಕ ತಿಳಿಸಿದರು. ಪದ್ಮಾವತೀ ಪರಿಣಯದ ಪ್ರಸಂಗದಲ್ಲಿ ಶ್ರೀನಿವಾಸನು ಬೇಟೆಯಾಡುವುದಕ್ಕೆ ಹೋಗುವಾಗ ಆತನ ರೂಪವನ್ನು ವರ್ಣಿಸಿರುವುದನ್ನು **"ಸಿತೋಷ್ಣೀಷಫಲಲಾಟಂ ಚ ನಾತಿದೀರ್ಘಜಟಾಧರಮ್"** [2] ಎಂಬ ಪ್ರಮಾಣವನ್ನು ತೋರಿಸಿ ಸ್ವಾಮಿಯು ಜಟಾಧರ ಎಂದು ನಿರೂಪಿಸಿದರು.[3]

3. ವೇಂಕಟಾಚಲದಲ್ಲಿ ಇರುವ ವಿಗ್ರಹದಲ್ಲಿ ನಾಗಾಭರಣಗಳು ಇವೆ ಆದ್ದರಿಂದ ಇದು ವಿಷ್ಣುರೂಪವಲ್ಲವೆಂದು , ಶೈವರು ಮತ್ತೊಂದು ವಾದವನ್ನು ಮಂಡಿಸಿದರು.[4]

ಇದನ್ನೂ ಶ್ರೀರಾಮಾನುಜಾಚಾರ್ಯರು ಪದ್ಮಪುರಾಣ, ಭವಿಷ್ಯೋತ್ತರ ಮುಂತಾದ ಪುರಾಣಗಳಿಂದ ಆಧಾರಗಳನ್ನು ಸಂಗ್ರಹಿಸಿ ತೋರಿಸಿ, ಶ್ರೀವೇಂಕಟೇಶ್ವರನ ರೂಪದಲ್ಲಿ ನಾಗಾಭರಣಗಳೂ ಇರುವುದು ಸಹಜವೆಂದು ತಿಳಿಯಪಡಿಸಿ, ಶೈವರ ವಾದವನ್ನು ಖಂಡಿಸಿದರು. ಪದ್ಮಪುರಾಣದಲ್ಲಿ ಪದ್ಮಸರೋವರ ತೀರ್ಥದಲ್ಲಿ ಶ್ರೀನಿವಾಸನ ಉದ್ಭವವನ್ನು ವರ್ಣಿಸುವ ಹಂತದಲ್ಲಿ **"ಶಂಖಚಕ್ರಗದಾಂಭೋಜರಾಜತ್ಕರಚತುಷ್ಟಯಃ" ನಾಗೈ(ನವ್ಯೆ) ರಭಿನವಾಕಲ್ಪೈಃ ತಪನೀಯಮಯಾಂಶುಕೈಃ"** [5] ಎಂಬ ಪ್ರಮಾಣವನ್ನು, ಭವಿಷ್ಯೋತ್ತರ ಪುರಾಣದಲ್ಲಿ ಶ್ರೀನಿವಾಸ ಪದ್ಮಾವತೀ ಕಲ್ಯಾಣದ ಸಂದರ್ಭದಲ್ಲಿ ಆಕಾಶರಾಜನು ತನ್ನ ಅಳಿಯನಾದ ಶ್ರೀನಿವಾಸನಿಗೆ ನಾಗಾಭರಣಗಳನ್ನು ಕಾಣಿಕೆಯಾಗಿ ನೀಡಿದ ವಿಷಯವನ್ನು ತಿಳಿಸುವ **"ನಾಗಾಭರಣ ಯುಗ್ಮಂ ಚ ಬಾಹುಪುರಾದಿಕಾಂ ಸ್ತಥಾ"**ಎಂಬ ವಚನವನ್ನು ರಾಮಾನುಜಾಚಾರ್ಯರು ಉದಹರಿಸಿದರು.

4. ಬೆಟ್ಟದ ಮೇಲೆ ಇರುವ ರೂಪದಲ್ಲಿ ಕೈಗಳಲ್ಲಿ ಶಂಖಚಕ್ರಗಳು ಇಲ್ಲದೇ ಇರುವುದರಿಂದಲೂ ಆ ಮೂರ್ತಿ ವಿಷ್ಣುಸ್ವರೂಪವಲ್ಲ ಎಂದು ಶೈವರು ವಾದಿಸಿದರು.

ಈ ವಾದಕ್ಕೆ ಪ್ರತಿಯಾಗಿ ಶ್ರೀರಾಮಾನುಜಾಚಾರ್ಯರು ಬ್ರಹ್ಮಾಂಡಪುರಾಣದಲ್ಲಿನ ತೊಂಡಮಾನ್ ಚಕ್ರವರ್ತಿಯ ಘಟನೆಯನ್ನು ವಿವರಿಸಿ ಶೈವರ ವಾದವನ್ನು ಖಂಡಿಸಿದರು. ತೊಂಡಮಾನ್ ಚಕ್ರವರ್ತಿ ವೇಂಕಟೇಶ್ವರಸ್ವಾಮಿಯ ಪರಮಭಕ್ತ. ಒಮ್ಮೆ ಆತ ತನ್ನ ಶತ್ರುಗಳೊಂದಿಗೆ ಯುದ್ಧ ಮಾಡಬೇಕಾಯಿತು, ಅವನ ಶತ್ರುಗಳು ಬಲವಂತರಾದ್ದರಿಂದ ಅವರನ್ನು ಜಯಿಸುವುದಕ್ಕಾಗಿ ಶ್ರೀವೇಂಕಟೇಶ್ವರನನ್ನು ಪ್ರಾರ್ಥಿಸಿ, ಆ ಸ್ವಾಮಿಯ ಬಳಿ ಇರುವ ಶಂಖಚಕ್ರಗಳನ್ನು ಸಹಾಯವನ್ನಾಗಿ ಪಡೆದುಕೊಂಡ.

---

1. ಶ್ರೀವೇಂಕಟಾಚಲೇತಿಹಾಸಮಾಲ-ಪುಟ-9
2. ಶ್ರೀಸಾತ್ತ್ವತಸಂಹಿತ-12-161
3. ಶ್ರೀವೇಂಕಟಾಚಲೇತಿಹಾಸಮಾಲ-ಪುಟ-56
4. ಶ್ರೀವೇಂಕಟಾಚಲೇತಿಹಾಸಮಾಲ-ಪುಟ-9
5. ಶ್ರೀವೇಂಕಟಾಚಲಮಾಹಾತ್ಮ್ಯಂ (ಪದ್ಮಪುರಾಣ ಕ್ಷೇತ್ರಖಂಡಾಂತರ್ಗತ-26-44-45) ಪ್ರಥಮಭಾಗ-ಪುಟ-223 ತಿ.ತಿ.ದೇ ಪ್ರಕಟಣೆ
6. ಶ್ರೀವೇಂಕಟಾಚಲಮಾಹಾತ್ಮ್ಯಂ(ಭವಿಷ್ಯೋತ್ತರಪುರಾಣ ತೀರ್ಥಖಂಡಾಂತರ್ಗತ -11-346) ದ್ವಿತೀಯಭಾಗ-ಪುಟ-404, ತಿ.ತಿ.ದೇ ಪ್ರಕಟಣೆ
7. ಶ್ರೀವೇಂಕಟಾಚಲೇತಿಹಾಸಮಾಲ ಪುಟ-64,65
8. ಶ್ರೀವೇಂಕಟಾಚಲೇತಿಹಾಸಮಾಲ ಪುಟ-9

ಯುದ್ಧದಲ್ಲಿ ಜಯಿಸಿದ ನಂತರವೂ ಸ್ವಾಮಿ ತನಗೆ ಸಹಾಯ ಮಾಡಿದ ಕುರುಹಾಗಿ ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಬಾರದೆಂದು ಸ್ವಾಮಿಯನ್ನು ಪ್ರಾರ್ಥಿಸಿದ. ಆತನ ಪ್ರಾರ್ಥನೆಯನ್ನು ಮನ್ನಿಸಿದ ಸ್ವಾಮಿಯು ತನ್ನ ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸದೇ ಇದ್ದಾನೆ. ಆದ್ದರಿಂದ ಬೆಟ್ಟದ ಮೇಲೆ ಸ್ವಾಮಿಯರೂಪದಲ್ಲಿ ಶಂಖಚಕ್ರಗಳು ಇಲ್ಲ. ಎಂದು ರಾಮಾನುಜಾಚಾರ್ಯರು ನಿರೂಪಿಸುತ್ತಾ, **"ದರ್ಶಯನ್ ಭಕ್ತವಾತ್ಸಲ್ಯಂ ಯೋ ದದೌ ಹಸ್ತಗೇ ಶುಭೇ, ಶಂಖಚಕ್ರೇ ನೃಪೇಂದ್ರಾಯ ಚಕ್ರವರ್ತೀತಿ ಯಂ ವಿದುಃ ಅತ ಏವಾರಿ ಶಂಖಾಭ್ಯಾಂ ದೃಶ್ಯತೇ ರಹಿತೌ ಕರೌ"** [1] ಎಂಬ ಬ್ರಹ್ಮಾಂಡಪುರಾಣದ ವಚನಗಳನ್ನು ರುಜುವಾತಾಗಿ ತೋರಿಸಿದರು.[2]

ಇಷ್ಟೇ ಅಲ್ಲದೇ ಬೆಟ್ಟದ ಮೇಲೆ ವಿಗ್ರಹ ರೂಪದಲ್ಲಿ ಸಹಜವಾಗಿ ಶಂಖಚಕ್ರಗಳು ಇವೆ ಎಂಬ ವಿಷಯಕ್ಕೆ ಪ್ರಮಾಣಗಳಾಗಿ ಶಠಕೋಪಸೂರಿ ರಚಿಸಿರುವ **"ಸಹಸ್ರಗಾಥ"**ಎಂಬ ಗ್ರಂಥದಲ್ಲಿ ಇರುವ ಪಾಶುರವನ್ನೂ ಪ್ರಮಾಣವಾಗಿ ತೋರಿಸಿದರು. ಶಠಕೋಪಸೂರಿ ತನ್ನ ಪ್ರಬಂಧದಲ್ಲಿ (ತಿರುವಾಯ್ ಮುಳಿ) ಬೆಟ್ಟದ ಮೇಲೆ ಇರುವ ಭಗವಂತನ ರೂಪವನ್ನು ವರ್ಣಿಸುತ್ತಾ(6–10–2) **"ಕೂರಾಯ್ ನೀರಾಯ್ ನಿಲನಾಕಿ ಕೊಡು ವಲ್ಲಶುರರ್ ಕುಲಮೆಲ್ಲಾಮ್ ಶೀರಾ ವೆರಿಯುಮ್ ತಿರುನೇಮಿ ವಲವಾ!"** [3] (ಕ್ರೂರರಾದ ದೈತ್ಯರನ್ನು ಸಂಹರಿಸಿ, ಭಸ್ಮ ಮಾಡುವ ಸುದರ್ಶನ ಚಕ್ರವನ್ನು ಬಲಗೈಯಲ್ಲಿ ಹಿಡಿದುಕೊಂಡಿರುವ ಸ್ವಾಮಿ) ಎಂದು ಸಂಭೋಧಿಸಿದ್ದಾರೆ. ಇದನ್ನು ಆಧಾರವಾಗಿಟ್ಟುಕೊಂಡು ಬೆಟ್ಟದ ಮೇಲೆ ಇರುವ ಮೂರ್ತಿಯಲ್ಲಿ ಸಹಜವಾಗಿ ಶಂಖಚಕ್ರಗಳು ಇದ್ದವೆಂದು ತಿಳಿದುಬರುತ್ತಿವೆ ಎಂದು ರಾಮಾನುಜಾಚಾರ್ಯರು ತಿಳಿಸಿದ್ದಾರೆ. ಆ ಸಂದರ್ಭದಲ್ಲೇ ಇನ್ನೊಂದು ಪಾಶುರದಲ್ಲಿ ಬೆಟ್ಟದ ಮೇಲೇ ಸ್ವಾಮಿ ನೆಲೆಸಿರುವ ಸನ್ನಿವೇಶವನ್ನು ಸ್ತುತಿಸುತ್ತಾ ಶಠಗೋಪಸೂರಿ **"ಅಡಿಕ್ಕಿಳ್ ಅಮರ್ ನ್ದು ಪುಕುಂದು ಅಡಿಯೀರ್ ವಾಳ್ ಮಿನ್"** [4] (ಭಕ್ತರೇ! ನನ್ನ ಪಾದಗಳನ್ನು ಸೇವಿಸಿ ಧನ್ಯರಾಗಿ) ಎಂದು ಸ್ವಾಮಿಯು ಭಕ್ತರಿಗೆ ಹೇಳಿರುವುದನ್ನೂ ಗಮನಿಸಬೇಕು. ಇದು ಶ್ರೀನಿವಾಸನು ತನ್ನ ಒಂದು ಕೈಯಿಂದ ಪಾದಗಳನ್ನು ತೋರಿಸುತ್ತಾ **"ಮತ್ಪಾದೌ ಶರಣಂ ವ್ರಜ"**ಎಂದು ಹೇಳುತ್ತಿರುವುದನ್ನುಸೂಚಿಸುತ್ತಿದೆ. ಇದರಿಂದಲೂ ಬೆಟ್ಟದ ಮೇಲೆ ಇರುವ ಸ್ವಾಮಿ ವಿಷ್ಣುರೂಪವೆಂದು ತಿಳಿದುಬರುತ್ತಿದೆ ಎಂದು ರಾಮಾನುಜರು ತಿಳಿಸಿದರು.

ಈ ರೀತಿ ಸಪ್ತಗಿರಿಗಳ ಮೇಲೆ ನೆಲೆಸಿರುವ ದೇವಾಧಿದೇವನಾದ ಶ್ರೀಶ್ರೀನಿವಾಸನು ಸಾಕ್ಷಾತ್ತು ವಿಷ್ಣುವೇ ಎಂದು ನಿರೂಪಿಸುವುದಕ್ಕೆ ಭಗದ್ರಾಮಾನುಜರು ಪದ್ಮಾದಿ ಪುರಾಣಗಳಿಂದ ಅನೇಕ ಪುರಾವೆಗಳನ್ನು ಉಲ್ಲೇಖಿಸಿದ್ದಾರೆ. ಆಯಾ ಪುರಾಣಗಳಿಂದ ಅವರು ಪುರಾವೆಗಳನ್ನು ಸೂಚಿಸುವ ಶ್ಲೋಕಗಳ ಭಾಗಗಳು ಈಗ ಲಭಿಸುವ ಪುರಾಣಗಳ ಗ್ರಂಥಗಳಲ್ಲಿ ದೊರಕದೇ ಇರಬಹುದು.

ಮತ್ತು ಭಗವದ್ರಾಮಾನುಜರು ಅಂದಿನ ಯಾದವರಾಜನ ಸಭೆಯಲ್ಲಿ ಈ ಪ್ರಮಾಣಗಳನ್ನು ಯಾವ ರೀತಿ ತೋರಿಸಿದರು? ಅಂದಿಗೆ ಅವು ಲಭ್ಯವಾಗಿದ್ದವು ಆದ್ದರಿಂದ ಅವರು ನಿರೂಪಿಸಿದರು.

'ಈ ವಿಹಿತವಾದ ತರ್ಕವೇ ಬ್ರಹ್ಮಾಂಡಾದಿ ಪುರಾಣಗಳಲ್ಲಿನ ಆಂಜನೇಯ ಸ್ವಾಮಿ–ಜನ್ಮಸ್ಥಳಕ್ಕೆ ಸಂಬಂಧಿಸಿದ ಪ್ರಮಾಣಗಳ ವಿಷಯದಲ್ಲೂ ಅನ್ವಯಿಸುತ್ತದೆ.

*~*~*~*~*~*

---

1. ಶ್ರೀವೇಂಕಟಾಚಲಮಾಹಾತ್ಮ್ಯಂ (ಬ್ರಹ್ಮಪುರಾಣಾಂತರ್ಗತ–7–7,8)ದ್ವಿತೀಯಭಾಗ–ಪುಟ –24–ತಿ.ತಿ.ದೇ ಪ್ರಕಟಣೆ
2. ಶ್ರೀವೇಂಕಟಾಚಲೇತಿಹಾಸ ಪುಟ–49
3. ತಿರುವಾಯಿಮೊಳಿ–6–10–2
4. ತಿರುವಾಯಿಮೊಳಿ–6–10–11
5. ಶ್ರೀವೇಂಕಟಾಚಲೇತಿಹಾಸಮಾಲ–ಪುಟ–47 .

ಆಕಾಶಗಂಗೆಯ ಅಭಿಮುಖವಾಗಿ ಕುಳಿತು ತಪಸ್ಸು ಮಾಡುತ್ತಿರುವ ಅಂಜನಾದೇವಿ



# 6. ಪೌರಾಣಿಕ ಪ್ರಮಾಣಗಳು

ಡಾ. ವಿರಿವೆಂಟಿ ಮುರಳೀಧರ ಶರ್ಮ

ಭಾರತೀಯ ಸಾಹಿತ್ಯದಲ್ಲಿ ಆಂಜನೇಯನ ಜನ್ಮಸ್ಥಳವನ್ನು ನಿರ್ಧರಿಸಲು ಸಿಗುವ ಎಲ್ಲ ಆಧಾರಗಳಲ್ಲಿ ಬಹಳ ಮುಖ್ಯವಾದವು ಸಾಹಿತ್ಯ ಆಧಾರಗಳು. ಇವು ಹಲವು ವಿಧವಾಗಿರುತ್ತವೆ. ಇತಿಹಾಸ–ಪುರಾಣಗಳು, ನಂತರ ಕಾಲದಲ್ಲಿ ಬಂದ ಭಕ್ತಿ ಸಾಹಿತ್ಯ, ಶಿಲಾಶಾಸನಗಳಲ್ಲಿ ಬರುವ ಬರಹಗಳು ಇತ್ಯಾದಿ. ಇವುಗಳಲ್ಲಿ ಈ ಸಂದರ್ಭದಲ್ಲಿ ಇತಿಹಾಸ, ಪುರಾಣಗಳಲ್ಲಿರುವ ಆಂಜನೇಯ ಜನ್ಮಸ್ಥಳದ ನಿರ್ಣಯದ ಕುರಿತು ಇರುವ ಸಂದರ್ಭಗಳ ನಿರೂಪಣವೇ ಈ ಬರಹದ ಮುಖ್ಯೋದ್ದೇಶ್ಯ.

ಶ್ರೀವೇಂಕಟೇಶ್ವರನು ಪುರಾಣ ಪುರುಷನು. ಪುರಾಣಪ್ರಿಯನು. ಪುರಾಣಗಳಿಂದ ಹೊಗಳಿಸಿಕೊಂಡವನು. ಈ ಕಾರಣ ಶ್ರೀನಿವಾಸನ ಕುರಿತಾಗಿ ತಿಳಿಯಬೇಕೆಂದರೆ ವೇದ, ಪುರಾಣಗಳಿಗಿಂತಲು ಪ್ರಾಚೀನವಾದ ಗ್ರಂಥಗಳು ಬೇರಿಲ್ಲ. ಪುರಾಣಗಳಲ್ಲಿ ಹನುಮಂತನ ಜನನದಿಂದ ಈ ಹನುಮಜ್ಜನ್ಮಸ್ಥಳಕ್ಕೆ ಅಂದರೆ ವೇಂಕಟಾದ್ರಿಗೆ ಇರುವ ಸಂಬಂಧದ ಕುರಿತಾಗಿ ಅವೆಷ್ಟೋ ವಿಶೇಷಗಳು ಲಭ್ಯವಾಗುತ್ತಿವೆ. ಈ ವಿಶೇಷಗಳನ್ನು (1) ಕಥಾಪರವಾದವು ಮತ್ತು (2) ಭೌಗೋಳಿಕಪರವಾದವು ಎಂದು ಎರಡು ವಿಧವಾಗಿ ವಿಂಗಡಿಸಬಹುದು.

ಶ್ರೀಹನುಮಂತನ ಜನ್ಮವೃತ್ತಾಂತವು "ವೇಂಕಟಾಚಲ ಮಾಹಾತ್ಮ"ದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಈ 'ವೇಂಕಟಾಚಲ ಮಾಹಾತ್ಮ' ಗ್ರಂಥವು ವಿವಿಧ ಪುರಾಣಗಳಲ್ಲಿ ಹೇಳಲ್ಪಟ್ಟ ಶ್ರೀವೇಂಕಟೇಶ್ವರಸ್ವಾಮಿಯ ಮಹಿಮೆಗಳ ಸಂಕಲನವಾಗಿದೆ. ಸ್ಕಾಂದ, ವರಾಹ, ಬ್ರಹ್ಮಾಂಡಾದಿ ಪುರಾಣಗಳಿಂದ ಸಂಗ್ರಹಿಸಲ್ಪಟ್ಟ ಅನೇಕ ವಿಚಾರಗಳನ್ನೊಳಗೊಂಡ ಈ ಗ್ರಂಥದಲ್ಲಿ ಆಂಜನೇಯನ ಜನ್ಮವೃತ್ತಾಂತವು ಸಹಾ ಸೇರಿದೆ. ಮತಂಗ ಮಹರ್ಷಿಯ ಮಾತಿನಂತೆ ಅಂಜನಾದೇವಿ ವೇಂಕಟಾಚಲಕ್ಕೆ ಆಗಮಿಸಿ, ಅಲ್ಲಿಯೇ ತಪಸ್ಸನ್ನು ಮಾಡಿ, ಆಂಜನೇಯನಿಗೆ ಜನ್ಮ ನೀಡಿರುವ ಕಾರಣದಿಂದ ಈ ಪರ್ವತಕ್ಕೆ 'ಅಂಜನಾದ್ರಿ' ಎನ್ನುವ ಹೆಸರು ಬಂದಿದೆ. ಬಾಲ ಹನುಮ ಸೂರ್ಯನನ್ನು ಹಿಡಿಯಲು ಹಾರಿದ ಪರ್ವತ ವೇಂಕಟಾದ್ರಿ ಎನ್ನುವ ವಿವರವು, ಶ್ರೀರಾಮನ ದರ್ಶನವನ್ನು ಪಡೆದ ಹನುಮನು ಸೀತಾನ್ವೇಷಣೆಯ ಭಾಗವಾಗಿ ವೇಂಕಟಗಿರಿಗೆ ಬರುವುದು, ಇಲ್ಲಿಯೆ ತಾಯಿಯಾದ ಅಂಜನೆಯ ಪುನರ್ಮಿಲನ ಆಗುವುದು, ವಾನರ ವೀರರು ವೈಕುಂಠಗುಹೆ ಯಲ್ಲಿ ಪ್ರವೇಶಿಸುವುದು – ಹೀಗೆ ಅನೇಕ ವಿವರಗಳು ವೇಂಕಟಾಚಲ ಮಾಹಾತ್ಮ ಗ್ರಂಥದಲ್ಲಿ ಬರುತ್ತವೆ. ಶ್ರೀಮದ್ವಾಲ್ಮೀಕಿ ರಾಮಾಯಣ ತಿಳಿಸುವ ವಿವರಗಳೊಂದಿಗೆ ಈ ಪುರಾಣ ವಿವರಗಳನ್ನು ಹೊಂದಿಸಿ ನೋಡುವುದರಿಂದ ಆಂಜನೇಯನ ಜನ್ಮಸ್ಥಳವನ್ನು ಸರಿಯಾಗಿ ತಿಳಿಯಬಹುದಾಗಿದೆ. ಹಾಗೆಯೆ 'ಪಾರಮಾರ್ಥಕೋಪನಿಷದ್ಭಾಷ್ಯ' ದಲ್ಲಿ ಹೇಳಲ್ಪಟ್ಟ ಪದ್ಮಪುರಾಣ ಭಾಗಗಳೂ ಸಹಾ ಇದೇ ವಿಷಯವನ್ನು ಧೃಡೀಕರಿಸುತ್ತಿವೆ. ಈ ಎಲ್ಲ ಪುರಾಣ ಪ್ರಸಂಗಗಳನ್ನು ಕ್ರಮಪದ್ಧತಿಯಲ್ಲಿ ಅವಲೋಕಿಸಿದರೆ ಆಂಜನೇಯನ ಜನ್ಮಸ್ಥಳವು ಯಾವುದೆಂದು ಗೊತ್ತಾಗುತ್ತದೆ.

ಶ್ರೀನಿವಾಸನ ನಿವಾಸವಾದ ವೇಂಕಟಾಚಲದ ಪ್ರಸ್ತಾವನೆ 12 ಪುರಾಣಗಳಲ್ಲಿ ಉಲ್ಲೇಖಿತವಾಗಿದೆ.

**ಶ್ರೀವೇಂಕಟಾಚಲಕ್ಕೆ ಇರುವ ವಿವಿಧ ನಾಮಗಳು**

ವೇಂಕಟಾದ್ರಿಗೆ ವಿವಿಧ ಕಾರಣಗಳಿಂದಾಗಿ ಬೇರೇ ಬೇರೇ ಹೆಸರುಗಳು ಬಂದಿವೆ. ಕಲ್ಪಭೇದಗಳಿಂದಲು ನಾಮಭೇದಗಳು ಉಂಟಾಗಿವೆ. ವರಾಹಪುರಾಣವು ಈ ಪರ್ವತಕ್ಕೆ ವಿವಿಧ ಕಾರಣಳಿಂದ ಬಂದ 12 ಹೆಸರುಗಳನ್ನು ನೀಡುತ್ತದೆ.

**ಚಿಂತಿತಸ್ಯ ಚ ಸಿದ್ಧ್ಯಾ ತು ಚಿಂತಾಮಣಿಮಿಮಂ ವಿದುಃ**
**ಕೇಚಿದ್ ಜ್ಞಾನಪ್ರದತ್ವಾಚ್ಚ ಜ್ಞಾನಾದ್ರಿರಿತಿ ತಂ ವಿದುಃ**
**ಸರ್ವತೀರ್ಥಮಯತ್ವಾಚ್ಚ ತೀರ್ಥಾದ್ರಿಂ ಪ್ರಾಹುರುತ್ತಮಃ** [1]

ಚಿಂತನೆ ಮಾಡುವದರಿಂದಲೆ ಫಲವನ್ನು ನೀಡುವುದರಿಂದ ಚಿಂತಾಮಣಿ ಪರ್ವತವೆಂದು ಹೆಸರಾಗಿದೆ. ಜ್ಞಾನವನ್ನು ಪಾಲಿಸುವ ಬೆಟ್ಟವಾದ್ದರಿಂದ ಕೆಲವರು ಇದನ್ನು ಜ್ಞಾನಾದ್ರಿ ಎಂದು ಕರೆಯುತ್ತಾರೆ. ಸರ್ವತೀರ್ಥಗಳು ಇರುವುದರಿಂದ ಈ ಪರ್ವತವನ್ನು 'ತೀರ್ಥಾದ್ರಿ' ಎಂದು ಉತ್ತಮರು ಕೀರ್ತಿಸುತ್ತಿದ್ದಾರೆ.

**ಪುಷ್ಕರಾಣಾಂ ಚ ಬಾಹುಳ್ಯಾತ್ ಗಿರಾವಸ್ಮಿನ್ ಸರಸ್ಸು ವೈ,**
**ಪುಷ್ಕರಾದ್ರಿಂ ಪ್ರಶಂಸಂತಿ ಮುನಯಸ್ತತ್ತ್ವದರ್ಶಿನಃ** [2]

ತತ್ತ್ವದರ್ಶಿಗಳಾದ ಮುನಿಪುಂಗವರು ಈ ಪರ್ವತ ಸರಸ್ಸುಗಳಲ್ಲಿ ಕಮಲಗಳು ವಿಸ್ತಾರವಾಗಿರುವುದರಿಂದ ಈ ಪರ್ವತವನ್ನು ಪುಷ್ಕರಾದ್ರಿ ಎಂದು ಕರೆಯುತ್ತಾರೆ.

**ಗಿರಾವಸ್ಮಿಂಸ್ತಪಸ್ತೇಪೇ ಧರ್ಮೋಽಪಿ ಸ್ವಾಭಿವೃದ್ಧಯೇ,**
**ತಸ್ಮಾದಾಹುರ್ವೃಷಾದ್ರಿಂ ತಂ ಮುನಯೋ ವೇದಪಾರಗಾಃ** [3]

ವೇದಗಳನ್ನು ಸಂಪೂರ್ಣವಾಗಿ ತಿಳಿದ ಮುನೀಶ್ವರರು, ಒಂದಾನೊಂದು ಸಂದರ್ಭದಲ್ಲಿ ಧರ್ಮನು ಸಹಾ ಇಲ್ಲಿ ತಪಸ್ಸನ್ನು ಮಾಡಿದ್ದ ಕಾರಣ ವೃಷಾದ್ರಿ ಎಂದು ಕರೆಯುತ್ತಾರೆ.

**ಶಾತಕುಂಭಸ್ವರೂಪತ್ವಾತ್ ಕನಕಾದ್ರಿಂ ಚ ತಂ ವಿದುಃ,**
**ದ್ವಿಜೋ ನಾರಾಯಣಃ ಕಶ್ಚಿತ್ತಪಃ ಕೃತ್ವಾ ಮಹತ್ಪುರಾ.** [4]

ಬಂಗಾರದಂತೆ ಇರುವುದರಿಂದ ಕನಕಾದ್ರಿ ಎಂದು ಕರೆಯುತ್ತಾರೆ. ಪೂರ್ವದಲ್ಲಿ ನಾರಾಯಣ ಎನ್ನುವ ಬ್ರಾಹ್ಮಣನೊಬ್ಬನು ತಪಸ್ಸನ್ನು ಮಾಡಿ

**ಐಚ್ಛದಸ್ಯ ಸ್ವನಾಮ್ನಾ ಚ ವ್ಯಪದೇಶಂ ಮುರಾರಿತಃ,**
**ತಸ್ಮಾನ್ನಾರಾಯಣಾದ್ರಿಂ ತಂ ವಿದುರುತ್ತಮಪೂರುಷಾಃ.** [5]

ತನ್ನ ಹೆಸರಿನಿಂದ ಈ ಪರ್ವತವು ಕರೆಯಲ್ಪಡಬೇಕೆಂದು ಪ್ರಾರ್ಥಿಸಿದ ಕಾರಣ ಮುರಾರಿಯು ತಥಾಸ್ತು ಎಂದು ಅನುಗ್ರಹಿಸಿದನು. ಈಕಾರಣ ಈ ಪರ್ವತವನ್ನು ನಾರಾಯಣಾದ್ರಿ ಎಂದು ಪೂಜ್ಯರು ಕರೆಯುತ್ತಾರೆ.

**ವೈಕುಂಠಾದಾಗತತ್ವೇನ ವೈಕುಂಠಾದ್ರಿರಿತಿ ಸ್ಮೃತಃ,**
**ಹಿರಣ್ಯಾಖ್ಯವಿನಾಶಾಯ ಪ್ರಹ್ಲಾದಾನುಗ್ರಹಾಯ ಚ.** [6]

ವೈಕುಂಠದಿಂದ ತರಿಸಲ್ಪಟ್ಟಿದ್ದರಿಂದ ವೈಕುಂಠಾದ್ರಿಯೆಂದು, ಹಿರಣ್ಯಕಶಿಪುವನ್ನು ಸಂಹರಿಸಿ, ಪ್ರಹ್ಲಾದನನ್ನು ಅನುಗ್ರಹಿಸಲು

**ನಾರಸಿಂಹಾಕೃತಿರ್ಜಜ್ಞೇ ಯಸ್ಮಾದಸ್ಮಾತ್ಸ್ವಯಂ ಹರಿಃ,**
**ಸಿಂಹಾಚಲ ಇತಿ ಪ್ರಾಹುಸ್ತಸ್ಮಾದೇನಂ ಮುನೀಶ್ವರಾಃ** [7]

---

1–7 ಶ್ರೀವೇಂಕಟಾಚಲಮಾಹಾತ್ಮ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ 36–20–30) ಪ್ರಥಮಭಾಗ, ಪುಟ–13, 14. ತಿ.ತಿ.ದೇ. ಮುದ್ರಣ;

ಸ್ವಯಂ ಶ್ರೀಮನ್ನಾರಾಯಣನೆ ಇಲ್ಲಿ ನರಸಿಂಹಾಕೃತಿಯಲ್ಲಿ ಆವಿರ್ಭವಿಸಿದರಿಂದ ಸಿಂಹಾಚಲವೆಂದು ಮುನಿಗಳು ಈ ಪರ್ವತವನ್ನು ಕರೆಯುತ್ತಾರೆ.

**ಅಂಜನಾ ಚ ತಪಃ ಕೃತ್ವಾ ಹನೂಮಂತಮಜೀಜನತ್,**
**ತದಾ ದೇವಾಸ್ಸಮಾಗತ್ಯ ದೇವಸಾಹಾಯ್ಯಕಾರಕಮ್.** [1]

ಈ ಪರ್ವತದಲ್ಲೆ ಅಂಜನಾದೇವಿಯು ತಪಸ್ಸನ್ನು ಮಾಡಿ ಹನುಮಂತನಿಗೆ ಜನ್ಮ ನೀಡಿದಳು. ಆ ಸಮಯದಲ್ಲಿ ದೇವತೆಗಳೆಲ್ಲರು ದೈವಿಕ ಸಹಾಯವನ್ನು ನೀಡಲು ಬಂದು

**ಯಸ್ಮಾತ್ಪುತ್ರಮಸೂತಾऽಸೌ ಜಗುಸ್ತಸ್ಮಾದಿಮಂ ಗಿರಿಮ್,**
**ಅಂಜನಾದ್ರಿಂ, ವರಾಹಾದ್ರಿಂ ವರಾಹಕ್ಷೇತ್ರಲಕ್ಷ್ಮತಃ.** [2]

ಆ ಪರ್ವತದಲ್ಲೆ ಅಂಜನಾದೇವಿಯು ತಪಸ್ಸನ್ನು ಮಾಡಿ ಹನುಮಂತನಿಗೆ ಜನ್ಮ ನೀಡಿದ್ದ ಕಾರಣ ಅಂಜನಾದ್ರಿಯೆಂದು, ವರಾಹಕ್ಷೇತ್ರವಾಗಿ ಗುರುತಿಸಿಕೊಂಡಿರುವುದರಿಂದ ವರಾಹಾದ್ರಿ ಎಂದು ಅನ್ನುತ್ತಾರೆ.

**ನೀಲಸ್ಯ ವಾನರೇಂದ್ರಸ್ಯ ಯಸ್ಮಾನ್ನಿತ್ಯಮವಸ್ಥಿತಿಃ**
**ತಸ್ಮಾನ್ನೀಲಗಿರಿಂ ನಾಮ್ನಾ ವದಂತ್ಯೇನಂ ಮಹರ್ಷಯಃ** [3]

ಇಲ್ಲಿ ನೀಲ ಎನ್ನುವ ವಾನರೇಂದ್ರನು ನಿತ್ಯನಿವಾಸವಾಗಿರುವುದರಿಂದ ನೀಲಗಿರಿ ಯೆಂದು ಋಷಿಗಳು ವ್ಯವಹರಿಸುತ್ತಾರೆ.

**ವೇಂಕಾರೋऽಮೃತಬೀಜಸ್ತು ಕಟಮೈಶ್ವರ್ಯಮುಚ್ಯತೇ,**
**ಅಮೃತೈಶ್ವರ್ಯಸಂಘತ್ವಾತ್ ವೇಂಕಟಾದ್ರಿರಿತಿ ಸ್ಮೃತಃ.** [4]

"ವೇಂ" ಎಂದರೆ ಅಮೃತ ಬೀಜವೆಂದು, "ಕಟ" ಎಂದರೆ ಐಶ್ವರ್ಯವೆಂದು ಅರ್ಥ. ಹಾಗೆ, "ವೇಂಕಟ" ಎಂದರೆ ಅನಂತ ಐಶ್ವರ್ಯರಾಶಿ ಎಂದಾಗುವುದರಿಂದ ವೇಂಕಟಾದ್ರಿ ಯೆಂದು ಕರೆಯಲ್ಪಡುತ್ತಿದೆ.

**ಯತಃ ಕದಾಚಿದ್ದೇವಾನಾಂ ಶ್ರೀನಿವಾಸ ಇಹಾಬಭೌ,**
**ಶ್ರೀನಿವಾಸಗಿರಿಂ ಪ್ರಾಹುಸ್ತಸ್ಮಾದೇನಂ ದಿವೌಕಸಃ** [5]

ಒಂದಾನೊಂದು ಸಮಯದಲ್ಲಿ ದೇವತೆಗಳಿಗೆ ಶ್ರೀನಿವಾಸನು ಇಲ್ಲಿ ಪ್ರತ್ಯಕ್ಷವಾಗಿದ್ದರಿಂದ ಶ್ರೀನಿವಾಸಗಿರಿ ಎಂದು ದೇವತೆಗಳು ಕರೆಯುತ್ತಾರೆ.

**ಆನಂದಾದ್ರಿಮಿಮಂ ಪ್ರಾಹುಃ ವೈಕುಂಠಪುರವಾಸಿನಃ,**
**ಪ್ರಾಹುರ್ಭಗವತಃ ಕ್ರೀಡಾ ಪ್ರಾಚುರ್ಯಾತ್ತು ತಥಾ ಸುರಾಃ.** [6]

ಭಗವಂತನ ಅನೇಕ ಕ್ರೀಡೆಗಳಿಗೆ ಆವಾಸಸ್ಥಾನವಾದ್ದರಿಂದ ವೈಕುಂಠವಾಸಿಗಳು ಈ ಪರ್ವತವನ್ನು ಆನಂದಾದ್ರಿ ಯೆಂದು ವ್ಯವಹರಿಸುತ್ತಾರೆ.

**ಶ್ರೀಪ್ರದತ್ವಾಚ್ಛ್ರಿಯೋ ವಾಸಾತ್ ಶಬ್ದಶಕ್ತ್ಯಾ ಚ ಯೋಗತಃ,**
**ರೂಢ್ಯಾ ಶ್ರೀಶೈಲ ಇತ್ಯೇವಂ ನಾಮ ಚಾಸ್ಯ ಗಿರೇರಭೂತ್.** [7]

ಐಶ್ವರ್ಯವನ್ನು ನೀಡುವುದರಿಂದಲು, ಲಕ್ಷ್ಮೀದೇವಿಯ ನಿವಾಸವಾಗಿರುವುದರಿಂದಲು, ಶಬ್ದಶಕ್ತಿಯಿಂದಲು, ಅರ್ಥಶಕ್ತಿಯಿಂದಲು, ರೂಢಶಕ್ತಿಯಿಂದಲು ಈ ಪರ್ವತಕ್ಕೆ ಶ್ರೀಶೈಲ ಎನ್ನುವ ಹೆಸರು ಬಂದಿದೆ.

1-3 ಶ್ರೀವೇಂಕಟಾಚಲಮಾಹಾತ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ 36-20-30) ಪ್ರಥಮಭಾಗ, ಪುಟ-13, 14. ತಿ.ತಿ.ದೇ. ಮುದ್ರಣ;

4-7 ಶ್ರೀವೇಂಕಟಾಚಲಮಾಹಾತ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ 36-20-30) ಪ್ರಥಮಭಾಗ, ಪುಟ-14, 15. ತಿ.ತಿ.ದೇ. ಮುದ್ರಣ

**ಬಹೂನಿ ಚಾನ್ಯನಾಮಾನಿ ಕಲ್ಪಭೇದಾದ್ಭವಂತಿ ಹಿ,**
**ಯಾವದುಕ್ತಾ ಭಗವತಃ ಕಲ್ಯಾಣಗುಣರಾಶಯಃ.** [1]

ಹೀಗೆ ಕಲ್ಪಭೇದಗಳಿಂದ ಇತರೇತರ ನಾಮಗಳು ಇವೆ. ಭಗವಂತನ ಕಲ್ಯಾಣಗುಣಗಳು ಹೇಗೆ ಅನಂತವೋ

**ತಾವನ್ತೋಽಸ್ಯ ಗಿರೇಸ್ಸಂತಿ ಗುಣಾಃ ಪರಮಪಾವನಾಃ,**
**ಅಸ್ಯ ವೇಂಕಟಶೈಲಸ್ಯ ಮಾಹಾತ್ಮ್ಯಂ ಯಾವದಸ್ತಿ ಹಿ.** [2]

ಹಾಗೆ ಈ ಪರ್ವತಕ್ಕೆ ಪರಮಪವಿತ್ರವಾದ ಅನೇಕ ಗುಣಗಳು ಇವೆ. ಈ ವೇಂಕಟಾಚಲಕ್ಕೆ ಯಾವ ಮಹಾತ್ಮೆ ಇದೆಯೋ.

**ತಾವದ್ವಕ್ತುಂ ಚ ಕಾರ್ತ್ಸ್ನೇನ ನ ಸಮರ್ಥಶ್ಚತುರ್ಮುಖಃ,**

**ಷಣ್ಮುಖಶ್ಚ ಸಹಸ್ರಾಸ್ಯಃ ಫಣೀ ದೇವಾಃ ಪರೇ ಕಿಮು.** [3]

ಈ ವೇಂಕಟಾದ್ರಿಯ ಮಾಹಾತ್ಮವನ್ನು ಸಂಪೂರ್ಣವಾಗಿ ವರ್ಣಿಸಲು ಚತುರ್ಮುಖನಾದ ಬ್ರಹ್ಮನಿಗೆ ಅಶಕ್ಯವೆಂದ ಮೇಲೆ, ಇನ್ನು ಆರು ಮುಖಗಳುಳ್ಳ ಕುಮಾರಸ್ವಾಮಿಗೆ, ಸಾವಿರ ಮುಖಗಳುಳ್ಳ ಅನಂತನಿಗೆ, ದೇವತಗಳಿಗೆ ಶಕ್ಯವಲ್ಲವೆಂದು ಬೇರೆ ಹೇಳಬೇಕೇ!

**ಶ್ರುತ್ವಾ ಸೂತಮುಖಾಚ್ಚೈವಂ ಮುನಯೋ ಹೃಷ್ಟಮಾನಸಾಃ,**
**ಸ ತೃಪ್ತಿಮಾಯಯುಸ್ತೇ ಹಿ ಭೂಯಶ್ಶ್ರವಣಕೌತುಕಾತ್.** [4]

ಹೀಗೆ ಸೂತರು ಹೇಳಲು ಮುನಿಗಳು ಹರ್ಷದಿಂದ ತುಂಬಿದ ಮನಸ್ಸುಳ್ಳವರಾಗಿ ಮತ್ತಷ್ಟು ಮಹಾತ್ಮೆಯನ್ನು ಕೇಳಲು ಕುತೂಹಲವುಳ್ಳವರಾದರು.

ಅಲಂಕಾರಮಣಿಹಾರ ಗ್ರಂಥದಲ್ಲಿ ಹೇಳಲ್ಪಟ್ಟ 20 ನಾಮಗಳು ಹೀಗಿವೆ.

**ಶ್ರೀ ವೇಂಕಟಗಿರಿರ್ನಾಮ ಕ್ಷೇತ್ರಂ ಪುಣ್ಯಂ ಮಹೀತಲೇ?**

**ಇತ್ಯುಪಕ್ರಮ್ಯ–**

**ಅಂಜಾದ್ರಿರ್ವೃಷಾದ್ರಿಶ್ಚ ವೇದಾದ್ರಿರ್ಗರುಡಾಚಲಃ,**
**ತೀರ್ಥಾದ್ರಿಃ ಶ್ರೀನಿವಾಸಾದ್ರಿಶ್ಚಿಂತಾಮಣಿಗಿರಿಸ್ತಥಾ.** [5]

ಹೀಗೆ ಹೇಳಿದ್ದರಿಂದ ಈ ಶ್ರೀನಿವಾಸಕ್ಷೇತ್ರವಾದ ವೇಂಕಟಾದ್ರಿಯೇ ಅಂಜನಾದ್ರಿ, ವೃಷಾದ್ರಿ, ವೇದಾದ್ರಿ, ಗರುಡಾಚಲ, ತೀರ್ಥಾದ್ರಿ, ಶ್ರೀನಿವಾಸಾದ್ರಿ, ಚಿಂತಾಮಣಿಗಿರಿ ಎಂದು, ಹಾಗೆಯೇ

**ವೃಷಭಾದ್ರಿರ್ವರಾಹಾದ್ರಿರ್ ಜ್ಞಾನಾದ್ರಿಃ ಕನಕಾಚಲಃ,**
**ಆನಂದಾದ್ರಿಶ್ಚ ನೀಲಾದ್ರಿಃ ಕ್ರೀಡಾದ್ರಿಃ ಪುಷ್ಕರಾಚಲಃ.** [6]

ವೃಷಭಾದ್ರಿ, ವರಾಹಾದ್ರಿ, ಜ್ಞಾನಾದ್ರಿ, ಕನಕಾಚಲ, ಆನಂದಾದ್ರಿ, ನೀಲಾದ್ರಿ, ಕ್ರೀಡಾದ್ರಿ, ಪುಷ್ಕರಾಚಲ ಎಂದು

---

1–4 ಶ್ರೀವೇಂಕಟಾಚಲಮಾಹಾತ್ಯಂ (ವರಾಹಪುರಾಣ ಪ್ರಥಮಭಾಗಾಂತರ್ಗತ 36–20–30) ಪ್ರಥಮಭಾಗ, ಪುಟ–14, 15. ತಿ.ತಿ.ದೇ. ಮುದ್ರಣ ;
5–6 ಅಲಂಕಾರಮಣಿಹಾರ, ಪ್ರಥಮಭಾಗಃ ಪುಟ ಸಂ. 25

**ಸಿಂಹಾಚಲಶ್ಚ ಶ್ರೀಶೈಲಸ್ತಥಾ ನಾರಾಯಣಾಚಲಃ,**
**ವೈಕುಂಠಾದ್ರಿಶ್ಶೇಷಶೈಲ ಇತಿ ನಾಮಾನಿ ವಿಂಶತಿಃ.** [1]

ಹಾಗೆಯೆ ಸಿಂಹಾಚಲ, ಶ್ರೀಶೈಲ, ನಾರಾಯಣಾಚಲ, ವೈಕುಂಠಾದ್ರಿ, ಶೇಷಶೈಲವೆಂದು ಈ ಪರ್ವತಕ್ಕೆ 20 ನಾಮಗಳು ಇವೆ.

**ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಂ ಅಂಜನಾಚಲಂ,**
**ದ್ವಾಪರೇ ಶೇಷಶೈಲೇತಿ ಕಲೌ ಶ್ರೀ ವೇಂಕಟಾಚಲಂ,** [2]

ವ್ಯಾಸರು ಈ ಪರ್ವತವನ್ನು ಕೃತಯುಗದಲ್ಲಿ ವೃಷಾದ್ರಿಯೆಂದು, ತ್ರೇತಾಯುಗದಲ್ಲಿ ಅಂಜನಾಚಲವೆಂದು, ದ್ವಾಪರದಲ್ಲಿ ಶೇಷಶೈಲವೆಂದು, ಕಲಿಯುಗದಲ್ಲಿ ವೇಂಕಟಾಚಲವೆಂದು ಶ್ಲಾಘಿಸಿದ್ದಾರೆ.

**ಅಂಜನಾ ಚ ತಪಃ ಕೃತ್ವಾ ಹನೂಮಂತಮಜೀಜನತ್,**
**ತದಾ ದೇವಾಸ್ಸಮಾಗತ್ಯ ದೇವಸಾಹಾಯ್ಯ ಕಾರಕಮ್**
**ಯಸ್ಮಾತ್ ಪುತ್ರಮಸೂತಾಽಸೌ ಜಗುಃ ತಸ್ಮಾತ್ ಇಮಂ ಗಿರಿಂ (ಅಂಜನಾದ್ರಿಮ್)** [3]

ಅಂದರೆ ಅಂಜನ ಪುತ್ರನನ್ನು ಪಡೆದ ಬೆಟ್ಟವಾದ್ದರಿಂದ ಇದು ಅಂಜನಾದ್ರಿ ಯೆಂದಾಯಿತು ಎಂದು ಉಲ್ಲೇಖಿಸಿದ್ದಾರೆ.

**ಅಥ ಪುತ್ರಾರ್ಥಮಂಜನಾಕೃತತಪಃ ಪ್ರಕಾರಃ – ಶ್ರೀಸೂತ ಉವಾಚ –**

ಇನ್ನು ಪುತ್ರಸಂತಾನಕ್ಕಾಗಿ ಅಂಜನಾದೇವಿ ಮಾಡಿದ ತಪೋರೀತಿಯನ್ನು ಕುರಿತು ವರ್ಣಿಸಲ್ಪಡುವುದು. ಶ್ರೀ ಸೂತಮುನಿ ಹೀಗೆ ನುಡಿದರು –

**ಪುತ್ರಹೀನಾಂಜನಾ ಪೂರ್ವಂ ದುಃಖಿತಾ ತಪಸಿ ಸ್ಥಿತಾ,**
**ತಾಂ ದೃಷ್ಟ್ವಾ ಮುನಿಶಾರ್ದೂಲೋ ಮತಂಗೋ ವಿಷ್ಣುತತ್ಪರಃ,**
**ಅಂಜಾನಾಖ್ಯಾಮುವಾಚೇದಮತ್ಯುಗ್ರೇ ತಪಸಿ ಸ್ಥಿತಾಮ್.** [4]

ಪುತ್ರರಿಲ್ಲವೆಂದು ಅಂಜನಾದೇವಿ ದುಃಖಿಯಾಗಿ ತಪಸ್ಸಿನಲ್ಲಿ ಮುಳುಗಿದಳು. ಆಕೆಯನ್ನು ನೋಡಿದ ವಿಷ್ಣುಭಕ್ತನಾದ ಮತಂಗ ಮಹರ್ಷಿ ತೀಕ್ಷ್ಣವಾದ ತಪಸ್ಸಿನಲ್ಲಿದ್ದ ಅಂಜನಾದೇವಿಗೆ ಹೀಗೆ ಹೇಳಿದನು –

**ಸಮುತ್ತಿಷ್ಠಾಂಜನೇ! ದೇವಿ! ಕಿಮರ್ಥಂ ತಪಸಿ ಸ್ಥಿತಾ,**
**ವದ ದೇವಿ! ಮಹಾಭಗೇ! ಕಾರ್ಯಂ ತವ ವರಾನನೇ!.** [5]

ಏಲೈ ಅಂಜನೆಯೆ! ಏಳು ಏಳು. ಯಾವ ಅಭೀಷ್ಟಪ್ರಾಪ್ತಿಗಾಗಿ ನೀನು ಈ ತಪಸ್ಸನ್ನು ಮಾಡುತ್ತಿದ್ದಿಯೋ ಹೇಳು. ಅಂಜನಾದೇವಿ ಹೀಗೆ ನುಡಿದಳು –

1. ಅಲಂಕಾರಮಣಿಹಾರಃ, ಪ್ರಥಮಭಾಗಃ ಪುಟ ಸಂ. 25 (ಅಂಜಾದ್ರಿರ್ವೃಷಾದ್ರಿಶ್ಚ ವೇದಾದ್ರಿಗರುಡಾಚಲಃ, ತೀರ್ಥಾದ್ರಿಃ ಶ್ರೀನಿವಾಸಾದ್ರಿಶ್ಚಿಂತಾಮಣಿಗಿರಿಸ್ತಥಾ. 21 ವೃಷಭಾದ್ರಿರ್ವರಾಹಾದ್ರಿರ್ ಜ್ಞಾನಾದ್ರಿಃ ಕನಕಾಚಲಃ, ಆನಂದಾದ್ರಿಶ್ಚ ನೀಲಾದ್ರಿಃ ಕ್ರೀಡಾದ್ರಿಃ ಪುಷ್ಕರಾಚಲಃ. 22 ವೈಕುಂಠಾದ್ರಿಃ ಪುಷ್ಕರಾದ್ರಿರಿತಿ ನಾಮಾನಿ ವಿಂಶತಿಃ) ಈ ಶ್ಲೋಕಗಳು ವೇಂಕಟಾಚಲಮಾಹಾತ್ಮ್ಯ ಚತುರ್ಥಭಾಗದಿಂದ ಸ್ವೀಕರಿಸಲ್ಪಟ್ಟಿವೆ. ಇಲ್ಲಿ 16 ನಾಮಗಳು ಮಾತ್ರವಿರುವುದರಿಂದ ಇದು ಅಪಪಾಠವೆಂದು ಗ್ರಹಿಸಬೇಕು.
2. ಶ್ರೀವೇಂಕಟಾಚಲಮಾಹಾತ್ಮ್ಯ (ಭವಿಷ್ಯೋತ್ತರಪುರಾಣಾಂತರ್ಗತ–1–36,37) ದ್ವಿತೀಯಭಾಗ, ಪುಟ–263, ತಿ.ತಿ.ದೇ. ಮುದ್ರಣ.
3. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ–36–28,29) ಪ್ರಥಮಭಾಗ, ಪುಟ–14, ತಿ.ತಿ.ದೇ. ಮುದ್ರಣ.
4. ಸ್ಕಾಂದಪುರಾಣ, ಶ್ರೀವೈಷ್ಣವಖಂಡ–39–1, 2
5. ಸ್ಕಾಂದಪುರಾಣ, ಶ್ರೀವೈಷ್ಣವಖಂಡ–39–3

**ಮತಂಗ! ಮುನಿಶಾರ್ದೂಲ! ವಚನಂ ಮೇ ಶೃಣುಷ್ವ ಹ,**
**ಪಿತಾ ಮೇ ಕೇಸರೀ ನಾಮ ರಾಕ್ಷಸಃ ಶಿವತತ್ಪರಃ.** [1]

ಎಲೈ ಮುನಿಶ್ರೇಷ್ಠನೇ! ಮತಂಗ ಋಷಿಯೇ! ದಯವಿಟ್ಟು ನನ್ನ ಬಿನ್ನಹವನ್ನು ಕೇಳು. ನನ್ನ ತಂದೆ ಕೇಸರಿ ಎನ್ನುವ ರಾಕ್ಷಸನು. ಶಿವಭಕ್ತನು.

**ಶೈವಂ ಘೋರಂ ತಪಶ್ಚಕ್ರೇ ಪುತ್ರಾರ್ಥಂ ತು ಸುದುಷ್ಕರಮ್,**
**ಪಾರ್ವತೀಸಹಿತಃ ಶಂಭುರ್ವೃಷಭೋಪರಿ ಸಂಸ್ಥಿತಃ.**
**ಪ್ರಾದುರಾಸೀತ್ತದಾ ದೇವೋ ದದೌ ತಸ್ಮೈ ವರಂ ಶುಭಮ್.** [2]

ಪುತ್ರಸಂತಾನಾರ್ಥಿಯಾಗಿ ಪರಮಶಿವನನ್ನು ಕುರಿತು ತೀಕ್ಷ್ಣವಾದ ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿದ ಪರಮಶಿವನು ಪಾರ್ವತೀಸಮೇತನಾಗಿ, ವೃಷಭವಾಹನನಾಗಿ ಪ್ರತ್ಯಕ್ಷನಾದನು. ಒಂದು ಮಂಗಳಕರವಾದ ವರವನ್ನಿತ್ತನು.

**ಶಂಭುರುವಾಚ –**

**ಶೃಣು ರಾಜನ್! ಪ್ರವಕ್ಷ್ಯಾಮಿ ವಿಧಿನಾ ನಿರ್ಮಿತಂ ತವ,**
**ಅಸ್ಮಿಂಜನ್ಮನ್ಯಪುತ್ರತ್ವಂ ತಥಾಽಪ್ಯನ್ಯದ್ದದಾಮಿ ತೇ.** [3]

ಪರಮಶಿವನು ಹೀಗೆ ನುಡಿದನು –

ಎಲೈ ರಾಕ್ಷಸರಾಜನೇ! ವಿಧಿ ನಿಯಮವನ್ನನುಸರಿಸಿ ನಿನಗೆ ಈ ಜನ್ಮದಲ್ಲಿ ಪುತ್ರಪ್ರಾಪ್ತಿ ಇಲ್ಲ. ಆದರು ನಾನು ನಿನಗೆ ಬೇರೊಂದು ವರವನ್ನು ಕೊಡುವೆನು.

**ವಿಶ್ರುತಾ ಸರ್ವಲೋಕೇಷು ಪುತ್ರೀ ತವ ಭವಿಷ್ಯತಿ,**
**ತಸ್ಯಾಃ ಪುತ್ರೋ ಮಹಾಬುದ್ಧಿಸ್ತವ ಪ್ರೀತಿ ಕರಿಷ್ಯತಿ.** [4]

ಎಲ್ಲ ಲೋಕಗಳಲ್ಲಿ ಖ್ಯಾತಿ ಪಡೆಯುವ ಒಬ್ಬ ಮಗಳನ್ನು ಅನುಗ್ರಹಿಸುವೆ. ಆಕೆಯಲ್ಲಿ ಹುಟ್ಟುವ ಪುತ್ರನು ಮಹಾಬುದ್ಧಿವಂತನಾಗಿ ನಿನಗೆ ಮುದನೀಡುವವನಾಗುವನು.

**ಇತಿ ತಸ್ಮೈ ವರಂ ದತ್ತ್ವಾ ತತ್ರೈವಾಂತರ್ದಧೇ ಹರಃ**
**ಮಾಂ ಲಬ್ಧ್ವಾ ಮತ್ಪಿತಾ ವಿಪ್ರಃ ಕೃತಕೃತ್ಯೋ ಬಭೂವ ಹ.** [5]

ಎಂದು ವರವನ್ನಿತ್ತು ಪರಮಶಿವನು ಅಂತರ್ಧಾನನಾದನು. ಹೀಗೆ ನನ್ನನ್ನು ಪುತ್ರಿಯಾಗಿ ಹೊಂದಿದ ನನ್ನ ತಂದೆಯು ಕೃತಕೃತ್ಯನಾದನು.

**ತತಃ ಕಾಲಾಂತರೇ ವಿಪ್ರಃ ಕೇಸರ್ಯಾಖ್ಯೋ ಮಹಾಕಪಿಃ,**
**ಯಯಾಚೇಮಾಂ ದದಸ್ವೇತಿ ಪಿತರಂ ಮೇ ತತಃ ಪಿತಾ.** [6]

ಕೆಲಕಾಲ ಕಳೆದನಂತರ ಕೇಸರಿ ಎನ್ನುವ ಹೆಸರುಳ್ಳ ಒಬ್ಬ ವಾನರವೀರನು ನನ್ನನ್ನು ವಧುವಾಗಿ ಆರಿಸಿ ನನ್ನ ತಂದೆಯ ಬಳಿ ಬಂದನು.

---

1–2 ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–4–6
3–6 ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–7–23

**ತಸ್ಮೈ ಮಾಂ ದತ್ತವಾಂಶ್ಚೈವ ಪಾರಿಬರ್ಹಂ ದದೌ ಚ ಸಃ,**
**ಗವಾಂ ಲಕ್ಷಸಹಸ್ರಾಣಿ ಗಜಲಕ್ಷಂ ಮಹಾಮನಾಃ.** [1]

ದೊಡ್ಡಮನಸ್ಸುಳ್ಳ ನನ್ನ ತಂದೆ ಆ ಕಪಿವರನಿಗೆ ನನ್ನನ್ನಿತ್ತು ವಿವಾಹ ಮಾಡಿದನು. ಕೋಟಿ ಸಂಖ್ಯೆಯಲ್ಲಿ ಹಸುಗಳನ್ನು, ಒಂದು ಲಕ್ಷ ಆನೆಗಳನ್ನು ವರಮಾನವಾಗಿತ್ತನು.

**ವಾಜಿನಾಮರ್ಬುದಂ ಚೈವ ರಥಾನಾಮರ್ಬುದಂ ತಥಾ,**
**ವಸ್ತ್ರರತ್ನಾನ್ಯನೇಕಾನಿ ದಾಸದಾಸೀಸಹಸ್ರಕಮ್.** [2]

ಅರ್ಬುದ (ಹತ್ತು ಕೋಟಿ) ಸಂಖ್ಯೆಯಲ್ಲಿ ಕುದುರೆಗಳನ್ನು, ರಥಗಳನ್ನು, ಅನೇಕವಾದ ವಸ್ತ್ರಗಳನ್ನು, ಸಾವಿರ ಸಂಖ್ಯೆಯಲ್ಲಿ ರತ್ನಗಳನ್ನು

**ಅಂತಃಪುರಚರೀರ್ನಾರೀರ್ನೃತ್ಯಗೀತವಿಶಾರದಾಃ,**
**ದದೌ ವಾಸಃಸಹಸ್ರಂ ಚ ಮಯಾ ಸಾಕಂ ಮಹಾಮತೇ!.** [3]

ದಾಸದಾಸೀ ಜನರನ್ನು, ನೃತ್ಯಗೀತೆಗಳಲ್ಲಿ ನಿಷ್ಣಾತರಾದ ಅಂತಃಪುರಸ್ತ್ರೀಯರನ್ನು, ಸಾವಿರಾರು ವಸ್ತ್ರಗಳನ್ನು ಇತ್ತನು.

**ಪತ್ಯಾ ಮೇ ರಮಮಾಣಾಯಾ ಭೂಯಾನ್ ಕಾಲೋ ಗತೋ ಮುನೇ!,**
**ಅಪುತ್ರಾ ದುಃಖಿತಾ ವಿಪ್ರ! ವ್ರತಾನಿ ವಿವಿಧಾನಿ ಚ.** [4]

ಪತಿಯೊಂದಿಗೆ ನಾನು ಸುಖವಾಗಿರಲು ಅದೆಷ್ಟೋ ಕಾಲ ಕಳೆದು ಹೋಯಿತು. ಆದರೂ ಸಂತಾನವಿಲ್ಲ. ಹಾಗಾಗಿ ಮಹಾನಗರವಾದ ಕಿಷ್ಕಿಂಧೆಯಲ್ಲಿ ನಾನು ಅನೇಕ ವ್ರತಗಳನ್ನು ಆಚರಿಸಿದೆ.

**ಕೃತಾನಿ ಚ ಮಯಾ ತತ್ರ ಕಿಷ್ಕಿಂಧಾಯಾಂ ಮಹಾಪುರಿ,**
**ಮಾಘೇ ಮಾಸಿ ಚ ವಿಪ್ರೇಂದ್ರ! ವೈಶಾಖೇ ಕಾರ್ತಿಕೇ ತಥಾ.** [5]

ಎಲೈ ಮುನಿಯೆ! ಕಿಷ್ಕಿಂಧಾಮಹಾಪುರಿಯಲ್ಲಿ ನಾನು ಮಾಘ ಮಾಸದಲ್ಲಿ, ವೈಶಾಖ, ಕಾರ್ತಿಕ ಮಾಸಗಳಲ್ಲಿ

**ಸ್ನಾನದಾನವ್ರತಾದೀನಿ ಚಾತುರ್ಮಾಸ್ಯವ್ರತಂ ತಥಾ,**
**ನಮಸ್ಕಾರಸ್ತಥಾ ವಿಪ್ರ! ಪ್ರದಕ್ಷಿಣಮನುತ್ತಮಮ್.** [6]

ಸ್ನಾನಗಳು, ದಾನಗಳು, ವ್ರತಾದಿಗಳು, ಚಾತುರ್ಮಾಸ್ಯವ್ರತಗಳು, ನಮಸ್ಕಾರಗಳು, ಪ್ರದಕ್ಷಿಣೆಗಳು,

**ಶಾಲಗ್ರಾಮಾನ್ನದಾನಾನಿ ದೀಪದಾನಂ ತಥೈವ ಚ,**
**ಗೋದಾನಂ ತಿಲದಾನಂ ಚ ವಸ್ತ್ರದಾನಂ ಮಹಾಮುನೇ!.** [7]

ಸಾಲಿಗ್ರಾಮ ದಾನ, ಅನ್ನ, ದೀಪ–ಗೋ–ತಿಲ–ವಸ್ತ್ರ ದಾನಗಳು, ಶ್ರಾವಣಾದಿ ಮಾಸಗಳಲ್ಲಿ ಮಹಾತ್ಮರು ಉಪದೇಶಿಸಿದ ವ್ರತವನ್ನು ಶ್ರೀಮನ್ನಾರಾಯಣನ ತೃಪ್ತಿ ಗೋಸುಗ ಮಾಡಿದೆ.

**ಭೂದಾನಂ ವಾರಿದಾನಂ ಚ ದತ್ತ್ವಾ ಪುಷ್ಪಾದಿಕಂ ಮುನೇ!,**
**ಯಾನಿ ಯಾನಿ ಚ ಮುಖ್ಯಾನಿ ವೈಷ್ಣವಾನಿ ವ್ರತಾನಿ ಚ,** [8]

ಭೂ, ಜಲ, ಪುಷ್ಪಾದಿ ದಾನಗಳನ್ನು ಅವೆಷ್ಟೋ ಮಾಡಿದೆ. ಸತ್ಪುತ್ರಾರ್ಥಿಯಾಗಿ ಮುಖ್ಯವಾದ ವಿಷ್ಣುಸಂಬಂಧ ವ್ರತಗಳನ್ನಾಚರಿಸಿದೆ.

1–8 ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–7–23

**ಮಯಾ ಕೃತಾನಿ ಸರ್ವಾಣಿ ಸತ್ಪುತ್ರಫಲಕಾಂಕ್ಷಯಾ,**
**ಶ್ರವಣಾದಿಷು ಯತ್ಪ್ರೋಕ್ತಂ ವ್ರತಂ ವಿಪ್ರೈರ್ಮಹಾತ್ಮಭಿಃ** [1]

ಲೆಕ್ಕವಿಲ್ಲದ ಅವೆಷ್ಟೋ ವ್ರತಗಳನ್ನು ಅನುಷ್ಠಾನ ಮಾಡಿದೆ.

**ಮಯಾ ಕೃತಂ ಚ ವಿಪ್ರೇಂದ್ರ! ತುಷ್ಟ್ಯರ್ಥಂ ಮಧುವಿದ್ವಿಷಃ,**
**ಯಾನಿ ಯಾನಿ ಚ ಮುಖ್ಯಾನಿ ಫಲಾನಿ ವಿವಿಧಾನಿ ಚ.** [2]

ದಾನಕ್ಕೆ ಮುಖ್ಯವಾದ ಅವೆಷ್ಟೋ ಫಲಗಳನ್ನು ನೀಡಿದೆ.

**ಮಯಾ ದತ್ತಾನಿ ಸರ್ವಾಣಿ ಸತ್ಪುತ್ರಫಲಕಾಂಕ್ಷಯಾ,**
**ಮಯಾ ಕೃತಾನ್ಯಸಂಖ್ಯಾನಿ ವ್ರತಾನಿ ವಿವಿಧಾನಿ ಚ.** [3]

ಅಸಂಖ್ಯಾತವಾದ ವಿವಿಧ ವ್ರತಗಳನ್ನು ಆಚರಿಸಿದೆ

**ಪುತ್ರಂ ತಥಾಪ್ಯಲಬ್ಧ್ವಾಹಂ ದುಃಖಿತಾ ತಪಸಿ ಸ್ಥಿತಾ,**
**ಭವಿಷ್ಯತಿ ಕಥಂ ವಿಪ್ರ! ಪುತ್ರಸ್ತ್ರೈಲೋಕ್ಯವಿಶ್ರುತಃ** [4]

ಆದರೂ ಪುತ್ರನನ್ನು ಪಡೆಯದೆ ದುಃಖಕ್ಕೆ ಒಳಗಾಗಿದ್ದೇನೆ. ಕೊನೆಗೆ ತಪಸ್ಸು ಮಾಡಲು ಸಿದ್ಧಳಾಗಿದ್ದೇನೆ.

**ಯಾಚೇಽಹಂ ತು ಮುನಿಶ್ರೇಷ್ಠ! ಪ್ರಣತಾ ಚ ತವಾಗ್ರತಃ,**
**ವದ ತ್ವಂ ಮುನಿಶಾರ್ದೂಲ! ದೀನಾಽಹಂ ತಪಸಿ ಸ್ಥಿತಾ.** [5]

ಎಲೈ ಮುನಿಸತ್ತಮನೆ! ನನಗೆ ಮೂರುಲೋಕಗಳಲ್ಲಿ ಪ್ರಸಿದ್ಧನಾಗುವ ಪುತ್ರನು ಎಂದು ಲಭಿಸುತ್ತಾನೆ? ಎಲೈ ತಂದೆಯೆ! ತಪಸ್ಸಿನಲ್ಲಿ ತೊಡಗಿದ್ದ ನಾನು ದೀನಳಾಗಿ ನಿನಗೆ ಶಿರ ಬಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀಸೂತ ಉವಾಚ (ಸೂತನು ಹೀಗೆ ಹೇಳಿದನು) –

**ಏವಂ ವದಂತೀಂ ತಾಂ ಪ್ರಾಹ ಮತಂಗೋ ಮುನಿಸತ್ತಮಃ,**
**ಶೃಣು ಮದ್ವಚನಂ ದೇವಿ! ಪುತ್ರಪೌತ್ರಪ್ರದಾಯಕಮ್.** [6]

ಹೀಗೆ ದೈನ್ಯದಿಂದ ಪ್ರಾರ್ಥಿಸುತ್ತಿರುವ ಅಂಜನಾದೇವಿಯನ್ನು ಕಂಡು ಆ ಮುನಿಶ್ರೇಷ್ಠನು ಹೀಗೆ ನುಡಿದನು – "ಎಲೈ ದೇವೀ! ಪುತ್ರಪೌತ್ರರನ್ನು ಅನುಗ್ರಹಿಸುವ ಒಳ್ಳೆಯ ಮಾತೊಂದನ್ನು ಹೇಳುತ್ತೇನೆ, ಕೇಳು.

**ಇತೋ ದಕ್ಷಿಣದಿಗ್ಭಾಗೇ ದಶಯೋಜನದೂರತಃ,**
**ಘನಾಚಲ ಇತಿ ಖ್ಯಾತೋ ನೃಸಿಂಹಸ್ಯ ನಿವಾಸಭೂಃ.** [7]

ಇಲ್ಲಿಂದ ದಕ್ಷಿಣದಿಕ್ಕಿನಲ್ಲಿ ಹತ್ತು ಯೋಜನೆಗಳ ದೂರದಲ್ಲಿ (ಸುಮಾರು ಎಂಬತ್ತು ಮೈಲಿ) ನೃಸಿಂಹದೇವನ ನಿವಾಸವಾದ 'ಘನಾಚಲ' ಎನ್ನುವ ಪರ್ವತವಿದೆ.

**ತಸ್ಯೋಪರಿ ಮಹಾಭಾಗೇ ಬ್ರಹ್ಮತೀರ್ಥಂ ಮನೋಹರಮ್,**
**ತಸ್ಯಾಪಿ ಪೂರ್ವದಿಗ್ಭಾಗೇ ದಶಯೋಜನಮಾತ್ರತಃ,** [8]

1–5. ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–7–23　　6–8. ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–24–35

ಅದರ ಮೇಲೆ ಸುಂದರವಾದ ಬ್ರಹ್ಮತೀರ್ಥವಿದೆ. ಆ ಬ್ರಹ್ಮತೀರ್ಥಕ್ಕೆ ಪೂರ್ವದಿಕ್ಕಿನಲ್ಲಿ ಹತ್ತು ಯೋಜನಗಳ ದೂರದಲ್ಲಿ

**ಸುವರ್ಣಮುಖರೀ ನಾಮ ನದೀನಾಂ ಪ್ರವರಾ ನದೀ,**
**ತಸ್ಯಾ ಏವೋತ್ತರೇ ಭಾಗೇ ವೃಷಭಾಚಲನಾಮತಃ,** [1]

ನದಿಗಳಲ್ಲಿ ಶ್ರೇಷ್ಠವಾದ "ಸುವರ್ಣಮುಖರೀ" ಎನ್ನುವ ನದಿ ಒಂದು ಇದೆ. ಆ ನದಿಯ ಉತ್ತರದಿಕ್ಕಿನಲ್ಲಿ ವೃಷಭಾದ್ರಿ ಇದೆ.

**ತಸ್ಯಾಗ್ರೇ ಸರಸೀ ನಾಮ್ನಾ ಸ್ವಾಮಿಪುಷ್ಕರಿಣೀ ಶುಭಾ,**
**ಗತ್ವಾ ದೃಷ್ಟ್ವಾ ಶುಭಂ ತೋಯಂ ಮನಃಶುದ್ಧಿಂ ಗಮಿಷ್ಯಸಿ.** [2]

ಆ ಪರ್ವತದ ಮೇಲೆ ಮಂಗಳಕರವಾದ "ಸ್ವಾಮಿಪುಷ್ಕರಿಣಿ" ಎನ್ನುವ ಹೆಸರುಳ್ಳ ಸರಸ್ಸು ಒಂದಿದೆ. ಅಲ್ಲಿಗೆ ಹೋಗಿ ಆ ಪುಷ್ಕರಿಣೀ ಜಲವನ್ನು ನೋಡಿದರೆ ಸಾಕು ನಿನ್ನ ದುಃಖವೆಲ್ಲವು ನಶಿಸಿ ಹೋಗುತ್ತದೆ. ನೀನು ಸಂತೋಷವನ್ನು ಹೊಂದುತ್ತೀ.

**ತತ್ರ ಸ್ನಾತ್ವಾ ವಿಧಾನೇನ ವರಾಹಂ ತಂ ಪ್ರಣಮ್ಯ ಚ,**
**ವೇಂಕಟೇಶಂ ನಮಸ್ಕೃತ್ಯ ತತೋ ಗಚ್ಛ ವರಾನನೇ.** [3]

ಆ ಪುಷ್ಕರಿಣಿ ಯಲ್ಲಿ ಸ್ನಾನ ಮಾಡಿ ಅಲ್ಲಿ ನೆಲೆಸಿರುವ ಶ್ರೀವರಾಹಸ್ವಾಮಿಯನ್ನು, ಶ್ರೀಶ್ರೀನಿವಾಸನನ್ನು ಶಾಸ್ತ್ರೋಕ್ತವಾಗಿ ನಮಸ್ಕರಿಸಿ

**ಉತ್ತರೇ ಸ್ವಾಮಿತೀರ್ಥಸ್ಯ ಸಿಂಹಶಾರ್ದೂಲಸಂಯುತೇ,**
**ಚೂತಪುನ್ನಾಗಪನಸೈರ್ಬಕುಲಾಮಲಕಃ ಶುಭೈಃ,** [4]

**ಚಂದನಾಗರುನಿಂಬೈಶ್ಚ ತಾಲಹಿಂತಾಲಕಿಂಶುಕೈಃ,**
**ಕಪಿತ್ಥಾಶ್ವತ್ಥಬಿಲ್ವೈಶ್ಚ ಇಂಗುದೈಶ್ಚ ವರಾನನೇ.** [5]

**ಏತಾದೃಶೈರ್ಮಹಾಪುಣ್ಯೈರ್ವೃಕ್ಷೈಶ್ಚ ವಿವಿಧೈಃ ಶುಭೈಃ,**
**ವಿಯದ್ಗಂಗೇತಿ ವಿಖ್ಯಾತಂ ತೀರ್ಥಮೇಕಂ ವಿರಾಜತೇ.** [6]

ಆ ಪುಷ್ಕರಿಣಿಯ ಉತ್ತರದಿಕ್ಕಿನಲ್ಲಿ ಮಾವು, ಪುನ್ನಾಗ, ಹಳಸು, ಬೇವು ಮುಂತಾದ ವಿವಿಧ ವೃಕ್ಷಜಾತಿಗಳಿಂದಲು, ಸಿಂಹ ಮೊದಲಾದ ಕ್ರೂರಮೃಗಗಳಿಂದಲು ಕೂಡಿರುವ "ಆಕಾಶಗಂಗ" ಎನ್ನುವ ಪ್ರಸಿದ್ಧತೀರ್ಥವೊಂದು ರಾರಾಜಿಸುತ್ತಿದೆ.

**ತಸ್ಮಿಸ್ತೀರ್ಥೇಽಅಂಜನೇದೇವಿ! ಸಂಕಲ್ಪವಿಧಿಪೂರ್ವಕಮ್,**
**ಸ್ನಾತ್ವಾ ಪೀತ್ವಾ ಶುಭಂ ತೀರ್ಥಂ ತೀರ್ಥಸ್ಯಾಭಿಮುಖೀ ಸ್ಥಿತಾ.** [7]

ಎಲೈ ಅಂಜನಾದೇವೀ! ಆ ಪುಣ್ಯತೀರ್ಥದಲ್ಲಿ ಶಾಸ್ತ್ರೋಕ್ತವಾಗಿ ಸಂಕಲ್ಪವನ್ನು ಮಾಡಿ, ಸ್ನಾನವನ್ನಾಚರಿಸಿ, ಆ ನೀರನ್ನು ಸೇವಿಸಿ, ತೀರ್ಥಕ್ಕೆ ಅಭಿಮುಖವಾಗಿ ನಿಂತು

**ವಾಯುಮುದ್ದಿಶ್ಯ ಹೇ ದೇವಿ! ತಪಃ ಕುರು ವರಾನನೇ,**
**ದೇವೈಶ್ಚ ರಾಕ್ಷಸೈರ್ವಿಪ್ರೈರ್ಮನುಜೈರ್ಮುನಿಸತ್ತಮೈಃ.** [8]

ವಾಯುದೇವನನ್ನು ಕುರಿತು ತಪಸ್ಸನ್ನು ಮಾಡು. ತಪಃಫಲವಾಗಿ ನೀನು ದೇವ-ರಾಕ್ಷಸ-ಬ್ರಾಹ್ಮಣ-ಮುನಿಗಳಿಗೆ ಅಸಾಧ್ಯವಾದ

**ಭೃಂಗೈಃ ಪಕ್ಷಿಭಿರಸ್ತ್ರೈಶ್ಚ ಶಸ್ತ್ರೈಶ್ಚ ವಿವಿಧೈಃ ಶುಭೈಃ,**
**ಅವಧ್ಯೋ ಭವಿತಾ ಪುತ್ರಸ್ತಪಸ್ಯಾಂತೇ ನ ಸಂಶಯಃ** [9]

1-9 ಸ್ಕಾಂದಪುರಾಣ, ಶ್ರೀವೈಷ್ಣವಖಂಡ - 39-24-35

ದುಂಬಿ ಮುಂತಾದ ಕೀಟಗಳಿಂದಲು, ಪಕ್ಷಿಗಳಿಂದಲು, ವಿವಿಧಾಸ್ತ್ರ–ಶಸ್ತ್ರಗಳಿಂದಲು ಅವಧ್ಯನಾದಂತಹಾ ಪುತ್ರನು ತಪ್ಪದೇ ಜನಿಸುವನು. ನನ್ನ ಮಾತಿನಲ್ಲಿ ಯಾವ ರೀತಿಯ ಸಂದೇಹ ಪಡಬೇಡ

ಶ್ರೀಸೂತ ಉವಾಚ –

**ಇತಿ ಪ್ರೋಕ್ತಾಽಂಜನಾ ದೇವೀ ತಂ ಪ್ರಣಮ್ಯ ಪುನಃ ಪುನಃ,**
**ಭರ್ತ್ರಾ ಸಾಕಂ ಯಯಾವಾಶು ವೇಂಕಟಾಚಲಸಂಜ್ಞಕಮ್.** 1

ಶ್ರೀ ಸೂತಮುನಿಗಳು ಹೀಗೆ ನುಡಿದರು–

ಮತಂಗಮಹರ್ಷಿಯಿಂದ ಆಜ್ಞಾಪ್ತಳಾದ ಅಂಜನಾದೇವಿ ಆ ಮಹರ್ಷಿಪುಂಗವನಿಗೆ ಮತ್ತೆ ಮತ್ತೆ ಪ್ರಣಾಮಗಳನ್ನು ಅರ್ಪಿಸಿ ಶೀಘ್ರವೇ ತನ್ನ ಪತಿಯನ್ನು ಕೂಡಿ ವೇಂಕಟಾದ್ರಿಗೆ ಪಯಣವಾದಳು.

**ಕಾಪಿಲಂ ತೀರ್ಥಮಾಸಾದ್ಯ ಸ್ನಾತ್ವಾ ನಿರ್ಮಲಮಾನಸಾ,**
**ವೇಂಕಟಾದ್ರಿಂ ಸಮಾರುಹ್ಯ ಸ್ವಾಮಿಪುಷ್ಕರಿಣೀಂ ಯಯೌ.** 2

ಆಕೆ ಕಪಿಲತೀರ್ಥದಲ್ಲಿ ಪರುಶುದ್ಧಮನಸ್ಕಳಾಗಿ ಸ್ನಾನಮಾಡಿ ವೇಂಕಟಾದ್ರಿಯನ್ನು ಅಧಿರೋಹಿಸಿ ಸ್ವಾಮಿಪುಷ್ಕರಿಣಿಯನ್ನು ತಲುಪಿದಳು.

**ಸ್ನಾತ್ವಾ ವರಾಹಮಾನಮ್ಯ ವೇಂಕಟೇಶಕೃತಾನತಿಃ,**
**ಮತಂಗಸ್ಯ ಋಷೇರ್ವಾಕ್ಯಂ ಸ್ಮರಂತೀ ಚ ಮುಹುರ್ಮುಹುಃ.** 3

ಅಂಜನೆಯು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಪ್ರಥಮ ನಮಸ್ಕಾರವನ್ನು ವರಾಹಸ್ವಾಮಿಗೆ ಅರ್ಪಿಸಿ ಶ್ರೀಶ್ರೀನಿವಾಸನ ಸೇವೆಯನ್ನು ಮಾಡಿ ಮತಂಗಮಹರ್ಷಿಯ ಮಾತುಗಳನ್ನು ಬಾರಿ ಬಾರಿಗೆ ಸ್ಮರಿಸಿಕೊಳ್ಳುತ್ತಾ

**ವಿಯದ್ಗಂಗಾಂ ಯಯಾವಾಶು ಚಾಂಜನಾ ಮಂಜುಭಾಷಿಣೀ,**
**ಸ್ನಾತ್ವಾ ಪೀತ್ವಾ ಶುಭಂ ತೋಯಂ ತೀರೇ ತಸ್ಯ ತದುನ್ಮುಖೀ.** 4

ಆಕಾಶಗಂಗೆಯನ್ನು ಸೇರಿದಳು. ಆಕಾಶಗಂಗೆಯಲ್ಲಿ ಸ್ನಾನ ಮಾಡಿ, ಆ ನೀರನ್ನು ಕುಡಿದು, ಅದಕ್ಕೆ ಅಭಿಮುಖವಾಗಿ ನಿಂತು ನಿಯಮನಿಷ್ಠೆಗಳಿಂದ ಆರಂಭದಲ್ಲಿ ಕೇವಲ ಫಲಗಳನ್ನು ನಂತರ ಕೇವಲ ನೀರನ್ನು ಸ್ವೀಕರಿಸುತ್ತಾ,

**ಪ್ರಾಣವಾಯುಂ ಸಮುದ್ದಿಶ್ಯ ತಪಶ್ಚಕ್ರೇ ಯತವ್ರತಾ,**
**ಫಲಾಹಾರಾ ಜಲಾಹಾರಾ ನಿರಾಹಾರಾ ತತಃ ಪರಮ್.** 5

ನಂತರ ಯಾವ ಆಹಾರವನ್ನೂ ಸ್ವೀಕರಿಸದೇ ವಾಯುದೇವರನ್ನು ಕುರಿತು ತಪಸ್ಸನ್ನು ಮಾಡಿದಳು.

**ಸಹಸ್ರಾಬ್ದಂ ತಪಶ್ಚಕ್ರೇ ನ್ಯಸ್ತನಾಸಾಗ್ರದೃಷ್ಟಿಕಾ,**
**ವಯಸ್ಯಾ ವಿಪುಲಾ ನಾಮ ಶುಶ್ರೂಷಾಮಕರೋಚ್ಛುಭಾ.** 6

ಮೂಗಿನ ತುದಿಯ ಮೇಲೆ ದೃಷ್ಟಿ ನಿಲ್ಲಿಸಿ ಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡಿದಳು ಅಂಜನಾ. ಈ ಸಮಯದಲ್ಲಿ 'ವಿಪುಲ' ಎನ್ನುವ ಹೆಸರುಳ್ಳ ಸಖಿಯೊಬ್ಬಳು ಆಕೆಗೆ ಸೇವಾದಿಗಳನ್ನು ಮಾಡಿದಳು.

---

1–6 ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39–36–50

**ವರ್ಷಾಣಾಂ ಚ ಸಹಸ್ರಾಂತೇ ವಾಯುರ್ದೇವೋ ಮಹಾಮತಿಃ,**
**ಪ್ರಾದುರಾಸೀತ್ತದಾ ತಾಂ ವೈ ಭಾಷಮಾಣೋ ಮಹಾಮತಿಃ.** [1]

ಸಾವಿರ ವರ್ಷಗಳು ಕಳೆದನಂತರ ವಾಯುದೇವನು ಪ್ರತ್ಯಕ್ಷನಾದನು. ಅಂಜನಾದೇವಿ ಯೊಡನೆ ಹೀಗೆ ಹೇಳತೊಡಗಿದನು

**ಮೇಷಸಂಕ್ರಮಣಂ ಭಾನೌ ಸಂಪ್ರಾಪ್ತೇ ಮುನಿಸತ್ತಮಾಃ,**
**ಪೂರ್ಣಿಮಾಖ್ಯೇ ತಿಥೌ ಪುಣ್ಯೇ ಚಿತ್ರಾನಕ್ಷತ್ರಸಂಯುತೇ.** [2]

ಸೂರ್ಯನು ಮೇಷರಾಶಿಯಲ್ಲಿ ಪ್ರವೇಶಿಸಿದಾಗ ಚಿತ್ರಾನಕ್ಷತ್ರದಿಂದ ಕೂಡಿದ ಹುಣ್ಣಿಮೆ ದಿನದಂದು

**ತವೇಪ್ಸಿತಮಹಂ ದಾಸ್ಯೇ ವರಂ ವರಯ ಸುವ್ರತೇ!**
**ಇತಿ ತದ್ವಚನಂ ಶ್ರುತ್ವಾ ತತಃ ಪ್ರಾಹಾಂಜನಾ ಸತೀ.** [3]

ನಿನ್ನ ಇಚ್ಛೆಯನ್ನು ಪೂರ್ಣಮಾಡುತ್ತೇನೆ' ಎಂದನು. ವಾಯುದೇವನ ಮಾತನ್ನು ಆಲಿಸಿದ ಅಂಜನಾದೇವಿಯು ಹೀಗೆ ನುಡಿದಳು

**ಪುತ್ರಂ ದೇಹಿ ಮಹಾಭಾಗ! ವಾಯೋ! ದೇವ! ಮಹಾಮತೇ!.**
**ತಸ್ಯಾಸ್ತದ್ವಚನಂ ಶ್ರುತ್ವಾ ಮಾತರಿಶ್ವಾಬ್ರವೀತ್ತತಃ.** [4]

ಎಲೈ ವಾಯುದೇವನೇ! ದಯವಿಟ್ಟು ನನಗೆ ಸುಪುತ್ರನನ್ನು ಕರುಣಿಸು" ಎಂದು ಪ್ರಾರ್ಥಿಸಿದಳು. ಆಕೆಯ ಇಚ್ಛೆಯನ್ನು ಕೇಳಿದ ವಾಯುದೇವನು

**ಪುತ್ರಸ್ತೇಹಂ ಭವಿಷ್ಯಾಮಿ ಖ್ಯಾತಿಂ ದಾಸ್ಯೇ ಶುಭಾನನೇ!**
**ಇತಿ ತಸ್ಯೈ ವರಂ ದತ್ವಾ ತತ್ರೈವಾಸ್ತ ಮಹಾಬಲಃ.** [5]

ಅಂಜನೆ 'ನಾನೇ ನಿನ್ನ ಮಗನಾಗಿ ಅವತರಿಸಿ ನಿನಗೆ ಕೀರ್ತಿಯನ್ನು ತಂದುಕೊಡುತ್ತೇನೆ' ಎಂದು ಹೇಳಿ ಅಂತರ್ಧಾನನಾದನು.

**ತದಾ ಬ್ರಹ್ಮಾದಯೋ ದೇವಾ ಇಂದ್ರಾದ್ಯಾ ಲೋಕಪಾಲಕಾಃ,**
**ವಶಿಷ್ಠಾದ್ಯಾ ಮಹಾತ್ಮಾನಃ ಸನಕಾದ್ಯಾಶ್ಚ ಯೋಗಿನಃ.** [6]

ಅದೇ ಸಮಯದಲ್ಲಿ ಬ್ರಹ್ಮಾದಿ ದೇವತೆಗಳು, ಇಂದ್ರಾದಿ ಲೋಕಪಾಲಕರು, ವಶಿಷ್ಠಾದಿ ಮಹಾತ್ಮರು, ಸನಕಾದಿ ಯೋಗಿಗಳು ತಮ್ಮ ತಮ್ಮ ಕಳತ್ರ, ಪುತ್ರ, ಸೇವಕರೊಂದಿಗೆ ತಮ್ಮ ತಮ್ಮ ವಾಹನಗಳನ್ನು ಅಧಿರೋಹಿಸಿ ತಪೋಮಗ್ನಳಾದ ಆ ಅಂಜನಾದೇವಿಯನ್ನು ನೋಡಲು

**ವ್ಯಾಸಾದಯಶ್ಚ ವಿಪ್ರೇಂದ್ರಾ ಲಕ್ಷ್ಮ್ಯಾ ಸಾಕಂ ಜಗತ್ಪತಿಃ,**
**ಮುನಿಪತ್ನ್ಯೋ ದೇವಪತ್ನ್ಯ ಋಷಿಪತ್ನ್ಯಸ್ತಥೈವ ಚ.** [7]

ವ್ಯಾಸಾದಿ ಮುನಿಗಳು, ಲಕ್ಷ್ಮೀಸಮೇತನಾದ ಶ್ರೀಮಹಾವಿಷ್ಣು, ಮುನಿಪತ್ನಿಯರು, ದೇವತೆಗಳ ಪತ್ನಿಯರು, ಋಷಿಪತ್ನಿಯರು

**ಸ್ವಂ ಸ್ವಂ ವಾಹನಮಾರುಹ್ಯ ದಾರಭೃತ್ಯಸುತಾದಿಭಿಃ,**
**ಆಗತಾಸ್ತೇ ಮಹಾತ್ಮಾನೋ ದ್ರಷ್ಟುಂ ತಾಂ ತಪಸಿ ಸ್ಥಿತಾಮ್.** [8]

ಮತ್ತು ಮಹಾತ್ಮರು ತಮ್ಮ ಭಾರ್ಯಾಪುತ್ರರೊಂದಿಗೆ ತಮ್ಮ ತಮ್ಮ ವಾಹನಗಳನ್ನು ಹತ್ತಿಕೊಂಡು ತಪಸ್ಸನ್ನಾಚರಿಸುತ್ತಿದ್ದ ಅಂಜನೆಯನ್ನು ನೋಡಲು ಬಂದರು.

---

1-8 ಸ್ಕಾಂದಪುರಾಣ, ಶ್ರೀವೈಷ್ಣವಖಂಡ – 39-36-50

**ಆಶ್ಚರ್ಯಮಾಶ್ಚರ್ಯಮಿತಿ ಬ್ರುವಾಣಾ ಬ್ರಹ್ಮಾದಯೋ ದೇವಗಣಾಶ್ಚ ಸರ್ವೇ,**
**ಆಲೋಕಯಂತೋ ದಿವಿ ದೂರತಸ್ತೇ ಸ್ಥಿತಾಸ್ತದಾ ಬ್ರಹ್ಮಮಹೇಶಮುಖ್ಯಾಃ.** [1]

ಆ ಆಕಾಶಗಂಗೆಯ ಬಳಿ ಆಕೆಯ ತಪಃಸ್ಥಾನಕ್ಕೆ ಬಂದ ಬ್ರಹ್ಮಾದಿಗಳು, ದೇವಗಣಗಳು ಘೋರ ತಪಸ್ಸಿನಲ್ಲಿ ಮಗ್ನಳಾಗಿದ್ದ ಅಂಜನಾದೇವಿಯನ್ನು ಕಂಡು "ಆಶ್ಚರ್ಯ ಆಶ್ಚರ್ಯ"ವೆಂದು ಉದ್ಗಾರ ಮಾಡುತ್ತಾ ಆಕೆಯನ್ನು ನೋಡಿದರು.

ಬ್ರಹ್ಮಾಂಡಪುರಾಣದಲ್ಲಿ ಅಂಜನಾದೇವಿ ತಿರುಮಲೆಯಲ್ಲಿ ಏಳು ಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡಿದ್ದಳೆಂದು ಹೇಳಲ್ಪಟ್ಟಿದೆ. (ನೋಡಿ ಪುಟ 68).

ತರಿಗೊಂಡ ವೇಂಗಮಾಂಬ ರಚಿಸಿದ ಶ್ರೀವೇಂಕಟಾಚಲ ಮಾಹಾತ್ಮ್ಯಂ ಕಾವ್ಯದಲ್ಲಿ ಅಂಜನಾದೇವಿಯು ತಿರುಮಲೆಯಲ್ಲಿ 12 ವರ್ಷಗಳ ಕಾಲ ತಪಸ್ಸು ಮಾಡಿದಳೆಂದು ಹೇಳಲಾಗಿದೆ. (ನೋಡಿ ಪುಟ 117)*

**ಶ್ರೀಸೂತ ಉವಾಚ–**

**ಅಂಜನಾಽಪಿ ವರಂ ಲಬ್ಧ್ವಾ ಭರ್ತ್ರಾ ಸಾಕಂ ಮುಮೋದ ಹ,**
**ಬ್ರಹ್ಮಾದೀನಾಗತಾನ್ ದೃಷ್ಟ್ವಾ ವಿಸ್ಮಯಾವಿಷ್ಟಮಾನಸಾ.** [2]

ಹೀಗೆ ವಾಯುದೇವನಿಂದ ಪುತ್ರಪ್ರಾಪ್ತಿ ವರವನ್ನು ಹೊಂದಿದ ಅಂಜನಾದೇವಿ ಮತ್ತು ಪತಿ ಕೇಸರಿಯು ಬಹಳ ಸಂತೋಷಪಟ್ಟರು.

**ಪತ್ಯಾ ಸಾಕಂ ತತಃ ಸ್ವಸ್ಥಾ ಚಾಂಜನಾ ಮಂಜುಭಾಷಿಣೀ,**
**ಬ್ರಹ್ಮಾದಿಭಿರನುಜ್ಞಾತೋ ವ್ಯಾಸೋ ವೇದವಿದಾಂ ವರಃ,**
**ಅಂಜನಾಂ ತಾಮುವಾಚೇದಂ ಮೇಘಗಂಭೀರಯಾ ಗಿರಾ.** [3]

ಆ ದೇವಿಯ ತಪಸ್ಸನ್ನು ನೋಡಲು ಬಂದು ತನ್ನ ಮುಂದೆ ಪ್ರತ್ಯಕ್ಷರಾದ ಬ್ರಹ್ಮಾದಿ ದೇವತೆಗಳನ್ನು ಕಂಡು ಆಶ್ಚರ್ಯಕ್ಕೊಳಗಾದಳು ಮತ್ತು ಪುತ್ರಪ್ರಾಪ್ತಿ ಯಾಗುವುದೆಂದು ಸಂತೋಷದಿಂದ ಪುಳಕಿತಗೊಂಡಳು. ನಂತರ ಬ್ರಹ್ಮಾದಿ ದೇವತೆಗಳ ಅನುಜ್ಞ ಪಡೆದು ವ್ಯಾಸಮಹರ್ಷಿಯು ಮೇಘ ಗರ್ಜನೆಯೆಂತಿರುವ ಧ್ವನಿಯಿಂದ ಅಂಜನೆಯನ್ನು ಕುರಿತು ಹೀಗೆ ಹೇಳಿದನು–

**ವ್ಯಾಸ ಉವಾಚ–**

**ಅಂಜನೇ! ಶೃಣು ಮದ್ವಾಕ್ಯಂ ಸರ್ವಲೋಕೋಪಕಾರಕಮ್,**
**ಮತಂಗಸ್ಯ ಋಷೇರ್ವಾಕ್ಯಂ ಶ್ರುತ್ವಾ ನಿರ್ಮಲಚೇತಸಾ,**
**ಯಸ್ಮಾತ್ತು ವೇಂಕಟಂ ಗತ್ವಾ ತಪಃ ಕೃತ್ವಾ ಸುದುಷ್ಕರಮ್,**
**ಪ್ರಸೂಯತೇ ತ್ವಯಾ ಪುತ್ರಃ ಶೂರಸ್ತ್ರೈಲೋಕ್ಯವಿಕ್ರಮಃ.** [4]

---

1 ಸ್ಕಾಂದಪುರಾಣ, ಶ್ರೀವೈಷ್ಣವಖಂಡ –39–36–50

* ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠದವರು ಮುದ್ರಿಸಿದ "ಶ್ರೀವೇಂಕಟಾಚಲಮಾಹಾತ್ಮ್ಯಂ" ಗ್ರಂಥದಲ್ಲಿ ಮತಂಗನು ಅಂಜನಾದೇವಿಗೆ "ದ್ವಾದಶಾಬ್ದವ್ರತಂ ಚರ" ಎಂದು ಹೇಳಿದ್ದನೆಂದಿದೆ. ಈ ಗ್ರಂಥಕ್ಕೆ 2 ವ್ಯಾಖ್ಯಾನಗಳಿವೆ. ಇವುಗಳನ್ನು ಸ್ವಲ್ಪ ಅಧ್ಯಯನ ಮಾಡಲು ಅಂಜನಾದೇವಿಯು 12 ವರ್ಷಗಳು ತಪಸ್ಸು ಮಾಡಿದಳೆಂದು ತಿಳಿದುಬರುತ್ತದೆ. (ಪುಟ 77–87).

2–3. ಸ್ಕಾಂದಪುರಾಣ, ಶ್ರೀವೈಷ್ಣವಖಂಡ –40–1–3

4. ಸ್ಕಾಂದಪುರಾಣ, ಶ್ರೀವೈಷ್ಣವಖಂಡ –40–4–5

ಈ ವೇಂಕಟಾಚಲಕ್ಕೆ ಬಂದು ಬೇರೊಬ್ಬರು ಮಾಡಲು ಅಸಾಧ್ಯವಾದ, ಬಹುಕಷ್ಟಕರವಾದ ತಪಸ್ಸನ್ನು ಆಚರಿಸಿದ ಕಾರಣ ನಿನ್ನ ತಪಃಫಲವಾಗಿ ಮೂರುಲೋಕಗಳಲ್ಲಿ ಸಾಟಿಯಿಲ್ಲದ ಅಪರಪರಾಕ್ರಮನಾದ ಪುತ್ರನು ನಿನಗೆ ಜನಿಸುವನು.

ಬ್ರಹ್ಮಾಂಡಪುರಾಣದಲ್ಲಿ ತೀರ್ಥಖಂಡದಲ್ಲಿ ದೇವತೆಗಳು ಅಂಜನಾದೇವಿಯನ್ನು ಸ್ತುತಿಸುವ ಸಂದರ್ಭ–

**ಅಂಜನೇ! ತ್ವಂ ಹಿ ಶೇಷಾದ್ರೌ ತಪಸ್ತಪ್ತ್ವಾ ಸುದಾರುಣಮ್,**
**ಪುತ್ರಂ ಸೂತವತೀ ಯಸ್ಮಾತ್ ಲೋಕತ್ರಯಹಿತಾಯ ವೈ.** [1]

ಎಲೈ ಅಂಜನಾದೇವಿಯೇ! ನೀನು ಈ ಶೇಷಪರ್ವತದಲ್ಲಿ ದೊಡ್ಡ ತಪಸ್ಸನ್ನು ಮಾಡಿ ಪುತ್ರನನ್ನು ಪಡೆದಿರುವಿ. ನಿನ್ನ ತಪಸ್ಸು ಮೂರುಲೋಕಗಳನ್ನು ಕಾಪಾಡುವ ಮಹತ್ತನ್ನು ಪಡೆದಿದೆ. ಆ ಕಾರಣ –

**ಪ್ರಸಿದ್ಧಿಂ ಯಾತು ಶೈಲೋಽಯಂ ಅಂಜನೇ! ನಾಮತಸ್ತವ,**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯಾ ವಿಚಾರಣಾ.** [2]

ಇನ್ನು ಈ ಪರ್ವತ ಮಹಿಮೆಯನ್ನು ಹೇಳುತ್ತಾ – ಅಂಜನೆ! ನೀನು ತಪಸ್ಸನ್ನು ಮಾಡಿದ ಈ ಪರ್ವತವು ಮತ್ತಷ್ಟು ಹಿರಿಮೆಯನ್ನು ಮೆರೆದಿದೆ. ಶ್ರೇಷ್ಠಪುತ್ರನನ್ನು ನೀನು ಪಡೆದಿದ್ದ ಕಾರಣ ಈ ಪರ್ವತವು ನಿನ್ನ ಹೆಸರಿನಿಂದಲೇ ಪ್ರಸಿದ್ಧಿಗೆ ಬರಲಿ. ಇದರಲ್ಲಿ ಯಾವ ಸಂದೇಹವು ಬೇಕಿಲ್ಲವೆಂದು ದೇವತೆಗಳು ಉದ್ಗಾರಮಾಡಿದರು.

ಮೇಲೆ ಉದಹರಿಸಿದ ಹೆಸರುಗಳಲ್ಲಿ ವೇಂಕಟಾಚಲಕ್ಕೆ "ಅಂಜನಾದ್ರಿ" ಎನ್ನುವ ಹೆಸರು ಬರುವುದಕ್ಕೆ ಸಂಬಂಧಪಟ್ಟ ಕಥೆಯು ಸ್ಕಂದಪುರಾಣದಲ್ಲಿ ಸಂಗ್ರಹವಾಗಿಯು, ಬ್ರಹ್ಮಾಂಡಪುರಾಣದಲ್ಲಿ ವಿಸ್ತಾರವಾಗಿಯು ಹೇಳಲ್ಪಟ್ಟಿದೆ. ಕಥಾಪರವಾಗಿ ಅಂಜನಾದೇವಿ ತಪಸ್ಸು ಮಾಡಿ, ಆಂಜನೇಯನು ಹುಟ್ಟಿ, ಸೂರ್ಯನನ್ನು ಹಿಡಿಯಲು ಆಕಾಶಕ್ಕೆ ಹಾರಿದ ಪ್ರದೇಶವು ವೇಂಕಟಾದ್ರಿಯೇ.

ಬ್ರಹ್ಮಾಂಡಪುರಾಣದಲ್ಲಿ ಉಲ್ಲೇಖಿಸಲ್ಪಟ್ಟ ವೃತ್ತಾಂತದಲ್ಲಿನ ಕೆಲವು ಮುಖ್ಯ ವಿಶೇಷಗಳು ಹೀಗಿವೆ–

ಪೂರ್ವದಲ್ಲಿ ತ್ರೇತಾಯುಗದಲ್ಲಿ ಕೇಸರಿ ಎನ್ನುವ ರಾಕ್ಷಸನೊಬ್ಬನು ಇದ್ದನು. ಇವನು ಶಿವನ ಕುರಿತು ತಪಸ್ಸು ಮಾಡಿ – "ಮಹಾಬಲಪರಾಕ್ರಮಶಾಲಿಯಾದ ಪುತ್ರನನ್ನು ಕೊಡು" ಎನಲು ಶಿವನು–"ನಿನಗೆ ಪುತ್ರಿಯೇ ಆಗುವಳೆಂದು" ಅನುಗ್ರಹಿಸಿದನು. ಆಕೆಯೆ ಅಂಜನಾದೇವಿ. ಯುಕ್ತವಯಸ್ಸಿಗೆ ಬಂದ ಅಂಜನೆಯನ್ನು ಕೇಸರಿ ಎನ್ನುವ ಹೆಸರುಳ್ಳ ಒಬ್ಬ ವಾನರವೀರನು ಅದೇ ಹೆಸರುಳ್ಳ ಅಂಜನೆಯ ತಂದೆಯ ಬಳಿಗೆ ಕನ್ಯಾರ್ಥಿಯಾಗಿ ಬಂದನು. ಬಲಶಾಲಿಯು, ತನ್ನ ಹೆಸರನ್ನೇ ಉಳ್ಳಂಥಹ ಆ ವೀರನನ್ನು ಕಂಡು ಸಂತೋಷಪಟ್ಟು ತನ್ನ ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡಿದನು ಕೇಸರಿ.

ದಂಪತಿಗಳಿಗೆ ಬಹಳಕಾಲವಾದರೂ ಮಕ್ಕಳಾಗಲಿಲ್ಲ. ಅನೇಕ ವ್ರತಗಳನ್ನು ಆಚರಿಸಿದ ಅಂಜನೆಯು ಒಂದುದಿನ ತನ್ನ ಮನೆಗೆ ಬಂದ ಒಬ್ಬ ಕೊರವಂಜಿಯನ್ನು ಕಣಿ ಹೇಳಲು ಕೇಳುತ್ತಾ – "ನನಗೆ ಸಂತಾನಯೋಗ ವಿದೆಯೆ?" ಎಂದಳು. ಆಗ ಆ ಕೊರವಂಜಿಯು–

**ಅಭೀಷ್ಟಸ್ತವ ಪುತ್ರೋ ವೈ ಭವಿಷ್ಯತಿ ನ ಸಂಶಯಃ,**
**ಮಾ ಶೋಕಂ ಕುರು ಕಲ್ಯಾಣಿ! ಧರ್ಮೇಣ ಮಮ ತೇ ಶಪೇ.** [3]

ಎಲೈ ಕಲ್ಯಾಣಿಯೇ! ನೀನು ಬಯಸಿದಂತೆ ಪುತ್ರನನ್ನು ಹೊಂದುವಿ. ದುಃಖಪಡಬೇಡ. ನನ್ನ ಮೇಲೆ ಆಣೆ.

1. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–64) ಪ್ರಥಮಭಾಗ, ಪುಟ–333 ತಿ.ತಿ.ದೇ ಮುದ್ರಣ.
2. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–65) ಪ್ರಥಮಭಾಗ, ಪುಟ–333 ತಿ.ತಿ.ದೇ ಮುದ್ರಣ.
3. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–16) ಪ್ರಥಮಭಾಗ, ಪುಟ–328 ತಿ.ತಿ.ದೇ ಮುದ್ರಣ.

**ಶ್ರೀವೇಂಕಟಗಿರೌ ಸಪ್ತಸಾಹಸ್ರಂ ವತ್ಸರಾನ್ಪುನಃ,**
**ತಪಃ ಕುರು ತತಃ ಪುತ್ರಮವಾಪ್ಸ್ಯಸಿ ಸುಶೋಭನಮ್.** [1]

ಶ್ರೀವೇಂಕಟಗಿರಿಯಲ್ಲಿ ಏಳು ಸಾವಿರ ವರ್ಷಗಳು ತಪಸ್ಸನ್ನಾಚರಿಸು. ನೀನು ಶ್ರೇಷ್ಠಪುತ್ರನನ್ನು ಹೊಂದುವಿ- ಎಂದು ಹೇಳಿ ಆಕೆ ಹೊರಟುಹೋದಳು.

**ಇತ್ಯುಕ್ತ್ವಾ ಸಾ ನಿಮಿತ್ತಜ್ಞಾ ಯಥಾ ಗತಮಥೋ ಯಯೌ,**
**ಅಂಜನಾ ಚಿಂತಯಂತೀ ತದ್ವಾಕ್ಯಂ ತಸ್ಯಾ ಮನೋಹರಮ್.** [2]

ಆ ಕೊರವಂಜಿ ನುಡಿದ ಮನೋಹರವಾದ ಮಾತನ್ನು ನೆನೆಯುತ್ತಾ ಅಂಜನಾದೇವಿಯು

**ಪ್ರಚಕ್ರಮೇ ತಪಶ್ಚರ್ತುಂ ಶ್ರೀ ವೇಂಕಟಗಿರೇಸ್ತಟೇ,**
**ಆಕಾಶಗಂಗಾನಿಕಟೇ ಸಿದ್ಧಸಂಘನಿಷೇವಿತೇ.** [3]

ಶ್ರೀ ವೇಂಕಟಗಿರಿಗೆ ತೆರಳಿದ ಅಂಜನೆ ಆಕಾಶಗಂಗಾತೀರ್ಥ ಸಮೀಪದಲ್ಲಿ, ಸಿದ್ಧಪುರುಷರಿಂದ ಸೇವಿಸಲ್ಪಡುತ್ತಿರುವ ಪ್ರದೇಶದಲ್ಲಿ ತಪಸ್ಸನ್ನು ಮಾಡಲು ಮುಂದಾದಳು.

**ವಾಯ್ವಾಹಾರಾನ್ ಚ ವಾಯುಂ ವೈ ಸಮುದ್ದಿಶ್ಯ ಸುದಾರುಣಮ್,**
**ತಪಶ್ಚಚಾರ ದಾನ್ತೇಯಂ ಪ್ರೀಣಯನ್ತೀ ವ್ರತೈರಿಮಮ್.** [4]

ಅಂಜನೆಯು ಕೇವಲ ವಾಯುಭಕ್ಷಣೆ ಮಾಡುತ್ತಾ ವಾಯುದೇವರನ್ನು ಕುರಿತು ಅತಿ ತೀವ್ರವಾದ ತಪಸ್ಸನ್ನು ಮಾಡಿದಳು.

ವಾಯುದೇವನು ಆಕೆಯನ್ನು ಅನುಗ್ರಹಿಸಿ ದಿನಕ್ಕೊಂದು ಹಣ್ಣಿನಂತೆ ಒಂದು ಹಣ್ಣನ್ನು ಕೊಡುತ್ತಿದ್ದನು. ಒಂದುದಿನ ವಾಯುದೇವನು ಶಿವತೇಜಸ್ಸಿನಿಂದ ಕೂಡಿದ ಫಲವನ್ನು ಆಕೆಗೆ ಇತ್ತನು. ಆ ಫಲವನ್ನು ತಿಂದ ಆಕೆ ಗರ್ಭವನ್ನು ಧರಿಸಿದಳು. ದೈವಪ್ರಸಾದದಿಂದ ಗರ್ಭವನ್ನು ಧರಿಸಿದ ಆಕೆ ಯೊಂದಿಗೆ ಆಕಾಶವಾಣಿಯು- "ಶಿವತೇಜಸ್ಸಿನಿಂದ ನಿನ್ನಲ್ಲಿ ಹುಟ್ಟುವ ಪುತ್ರನು ಲೋಕೋತ್ತರಶಕ್ತಿಸಂಪನ್ನನು, ಭವಿಷ್ಯದಲ್ಲಿ ಲೋಕಕಂಟಕನಾಗುವ ಲಂಕಾಧಿಪತಿಯಾದ ರಾವಣ ಎನ್ನುವ ರಾಕ್ಷಸನನ್ನು ಸದೆಬಡೆಯಲು ಶ್ರೀರಾಮಚಂದ್ರನಾಗಿ ಅವತರಿಸುವ ವಿಷ್ಣುವಿನ ಸೇವಕನಾಗಿ ನಿನ್ನ ಪುತ್ರನು ಖ್ಯಾತಿ ಪಡೆಯುತ್ತಾನೆ." ಎಂದು ಆಶೀರ್ವಾವನ್ನು ನೀಡಿತು.

**ತತೋ ವೈ ದಶಮೇ ಮಾಸಿ ಸಂಪ್ರಾಪ್ತೇ ನಳಿನೇಕ್ಷಣಾ,**
**ಅಸೂತ ಪುತ್ರಂ ಬಲಿನಮುದಯತ್ಯಹಿಮತ್ವಿಷಿ.** [5]

ಹೀಗೆ ವಾಯುದೇವನಿಂದ ಪುತ್ರಸಂತಾನ ವರವನ್ನು ಪಡೆದ ನಂತರ ಅಂಜನಾದೇವಿ ಹತ್ತನೆಯ ತಿಂಗಳಿನಲ್ಲಿ ಬಲಿಷ್ಠನಾದ ಪುತ್ರನಿಗೆ ಜನ್ಮನಿತ್ತಳು.

**ಶ್ರಾವಣೇ ಮಾಸಿ ನಕ್ಷತ್ರೇ ಶ್ರವಣೇ ಹರಿವಾಸರೇ,**
**ಕುಂಡಲೋದ್ಭಾಸಿಗಂಡಾನ್ತಮುಪವೀತಿಸಮುಜ್ಜ್ವಲಮ್.** [6]

---

1. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ-5-17) ಪ್ರಥಮಭಾಗ, ಪುಟ-329 ತಿ.ತಿ.ದೇ ಮುದ್ರಣ.
2-4. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ-5-18-29) ಪ್ರಥಮಭಾಗ, ಪುಟ-329 ತಿ.ತಿ.ದೇ ಮುದ್ರಣ.
5-6. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ-5-42-45) ಪ್ರಥಮಭಾಗ, ಪುಟ-331 ತಿ.ತಿ.ದೇ ಮುದ್ರಣ.

**ಕೌಪೀನೋದ್ಭಾಸಿತಂ ಚೈವ ದೀಪ್ಯಮಾನಮಿವ ಶ್ರಿಯಾ,**
**ಬಿಭ್ರಾಣಂ ವಾನರಾಣಾಂ ವೈ ರೂಪಮತ್ಯದ್ಭುತಂ ಮಹತ್.**
**ರಕ್ತಾಸ್ಯಪುಚ್ಛಮೂಲಂ ತು ಸುವರ್ಣಸದೃಶದ್ಯುತಿಮ್,** [1]

ಶ್ರವಣಾನಕ್ಷತ್ರಯುಕ್ತ ಹರಿವಾಸರದಂದು ಸೂರ್ಯೋದಯ ಘಳಿಗೆಯಲ್ಲಿ ಮಹಾಬಲವಂತನಾದ ಪುತ್ರನಿಗೆ ಜನ್ಮನಿತ್ತಳು. ಸುಂದರವಾದ ದಿವ್ಯಕುಂಡಲಗಳಿಂದ, ಹೊಳೆಯುವ ಕೆನ್ನೆಗಳಿಂದ, ಉಪವೀತಧಾರಿಯಾಗಿ, ಪುಟ್ಟ ಕೌಪೀನದಿಂದ ಶೋಭಿಸುತ್ತಾ ಆ ಬಾಲಕನು ಅದ್ಭುತವಾದ ವಾನರರೂಪವನ್ನು ತಾಳಿದ್ದನು. ಕೆಂಪಾದ ಮುಖ, ಬಾಲೆಯ ತುದಿಯಲ್ಲಿ ಬಂಗಾರ ಬಣ್ಣದ ಹೊಳಪಿನಿಂದ ಶೋಭಿಸುತ್ತಿದ್ದನು.

ವೈಶಾಖ ಬಹುಳ ದಶಮಿ ದಿನವು ಶ್ರೀಹನುಮಜ್ಜನನ ಸಮಯ, ಆದ್ದರಿಂದ , ಆ ದಿನ ತಿರುಮಲೆಯಲ್ಲಿ ಹನುಮಂತ ಪೂಜೆಯನ್ನು ಮಾಡುತ್ತಾರೆ. ಶ್ರೀ ಹನುಮಜ್ಜನನ ವೈಶಾಖ ಬಹುಳ ದಶಮಿ ಶನಿವಾರ ಪೂರ್ವಾಭಾದ್ರ ನಕ್ಷತ್ರದಂದು ಆಗಿದೆ ಎಂದು ಕೆಲವರು ಪ್ರಯೋಗಗ್ರಂಥಕಾರರು ಅಭಿಪ್ರಾಯಪಟ್ಟಿದ್ದಾರೆ. ಮೂಲಾ ನಕ್ಷತ್ರದಲ್ಲಿ ಜನನವೆಂದು ಜ್ಯೋತಿಶ್ಶಾಸ್ತ್ರವು, ಅನೂರಾಧ ನಕ್ಷತ್ರವೆಂದು ಪಾಂಚರಾತ್ರಾಗಮಶಾಸ್ತ್ರವು ಬೋಧಿಸುತ್ತಿವೆ. ಆದರೆ ಮಾಸಾದಿಗಳ ವಿವರಗಳನ್ನು ನೀಡಿಲ್ಲ. [2]

ಪ್ರತಿ ವರ್ಷ ವೈಶಾಖ ಬಹುಳ ದಶಮಿಯಂದು ತಿರುಮಲ ಕ್ಷೇತ್ರದಲ್ಲಿ ಹನುಮಜ್ಜಯಂತಿ ಅದ್ದೂರಿಯಾಗಿ ನಡೆಯುತ್ತಿದೆ. [3]

ಬಾಲಹನುಮನು ಸೂರ್ಯನನ್ನು ನುಂಗಲು ಆಕಾಶಕ್ಕೆ ಹಾರುವುದು

**ಅತೋಽಯಂ ಜಾತಮಾತ್ರೋಽಪಿ ನಿತರಾಂ ತು ಬುಭುಕ್ಷಿತಃ,**
**ಉದಯಾಚಲಸಂರೂಢಂ ದದರ್ಶ ರವಿಮಣ್ಡಲಮ್,**
**ನಿತಾಂತರಕ್ತವರ್ಣೇನ ಫಲಬುದ್ಧಿರಭೂತ್ತದಾ,** [4]

**ಫಲಮಿತ್ಯೇವ ಮನ್ವಾನೋ ರವಿಂ ಭಕ್ಷಿತುಮುದ್ಯತಃ,**
**ಗ್ರಹೀಷ್ಯಾಮೀತಿ ನಿಶ್ಚಿತ್ಯ ಶ್ರೀವೇಂಕಟಗಿರೇಸ್ತಟಾತ್,** [5]

ಹುಟ್ಟುತ್ತಲೇ ತೀವ್ರ ಹಸಿವೆಯಿಂದ ಉದಯಪರ್ವತ ಮೇಲಿರುವ ಸೂರ್ಯನನ್ನು ಕೆಂಪು ಹಣ್ಣು ಎಂದು ಭಾವಿಸಿ ತಿನ್ನಲು ಹನುಮಂತನು ಶ್ರೀವೇಂಕಟಗಿರಿಯಿಂದ

**ಉದತಿಷ್ಠನ್ಮಹಾವೇಗಾದುದಯಾಚಲಶೇಖರಮ್,**
**ಗ್ರಹೀತುಮುದ್ಯತೇ ತಸ್ಮಿನ್ ಬಿಂಬಂ ಸೂರ್ಯಸ್ಯ ತದ್ಬಲಾತ್.** [6]

ಸೂರ್ಯನನ್ನು ಹಿಡಿಯಲು ಉದಯಗಿರಿಯತ್ತ ಹಾರಿದನು. ಆ ಸೂರ್ಯಬಿಂಬವನ್ನು ಹಿಡಿಯಬೇಕೆಂದು ಸಜ್ಜಾದನು.

**ಹಾಹಾಕೃತಮಭೂತ್ಸರ್ವಂ ಜಗತ್ಸ್ಥಾವರಜಂಗಮಮ್,**
**ತತಃ ಚತುರ್ಮುಖೋ ಬ್ರಹ್ಮಾ ಸ್ವಯಮಾಗತ್ಯ ವೇಗತಃ.**[7]

1. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–42–45) ಪ್ರಥಮಭಾಗ, ಪುಟ–331 ತಿ.ತಿ.ದೇ ಮುದ್ರಣ.
2. ಶ್ರೀವೇಂಕಟೇಶ್ವರವೈಭವಂ, ಪಂಡಿತ ವೇದಾಂತಂ ಜಗನ್ನಾಥಾಚಾರ್ಯುಲು, ಪುಟ–195
3. ಶ್ರೀನಿವಾಸ ವೈಭವಂ – ಜೂಲಕಂಟಿ ಬಾಲಸುಬ್ರಹ್ಮಣ್ಯಂ, ಪುಟ – 225
4–5. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–45–49) ಪ್ರಥಮಭಾಗ, ಪುಟ–331 ತಿ.ತಿ.ದೇ ಮುದ್ರಣ.
6–7. ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–64–67) ಪ್ರಥಮಭಾಗ, ಪುಟ–333 ತಿ.ತಿ.ದೇ ಮುದ್ರಣ.

ಇದನ್ನು ಕಂಡ ನಿಖಿಲಚರಾಚರಜೀವಲೋಕವು ಹಾಹಾಕಾರವನ್ನು ಮಾಡಿತು. ಚತುರ್ಮುಖ ಬ್ರಹ್ಮ ಸ್ವಯಂ ತಾನೇ ವೇಗವಾಗಿ ಬಂದನು.

ಹಾರುತ್ತಾ ಬರುತ್ತಿದ್ದ ಅಂಜನಾಸುತನನ್ನು ಯಾರೋ ಅಸುರನೆಂದು ಭಾವಿಸಿದ ಬ್ರಹ್ಮನು ಅವನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರವನ್ನು ಬಾಲಕ್ರೀಡೆಯೆನ್ನುವಂತೆ ಆ ಬಾಲಕನು ತನ್ನ ಬಾಲದಿಂದ ತಳ್ಳಿಹಾಕಿದನು. ದೇವತೆಗಳು ನಿಜವನ್ನು ಅರಿತರು. ಕೇವಲ ತನ್ನ ಬಾಲದ ತುದಿಯಿಂದ ಬ್ರಹ್ಮಾಸ್ತ್ರವನ್ನು ತಳ್ಳಿದ ಆ ಬಾಲವಾನರನ ಒಂದೊಂದು ಚೇಷ್ಟೆಯೂ ದೇವತಳಿಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಅಂಜನಾಪುತ್ರನಿಗೆ ತಾನು ಕಂಡದ್ದು ಹಣ್ಣು ಅಲ್ಲ ಸೂರ್ಯನೆಂದು ತಿಳಿಯಿತು. ಹಾಗೆಯೆ ಬ್ರಹ್ಮಾಸ್ತ್ರದ ಘಾತದಿಂದಾದ ನೋವು ಕೂಡಾ ಕಾಣಿಸಿಕೊಳ್ಳಲು ನಿರುತ್ಸಾದಿಂದ ಭೂಮಿಗೆ ಅಪ್ಪಳಿಸಿ ಬಿದ್ದನು. ತನ್ನ ಕಂದನನ್ನು ಈ ಸ್ಥಿತಿಯಲ್ಲಿ ಕಂಡ ಅಂಜನೆಯ ಮನಸ್ಸು ದುಃಖಕ್ಕೆ ಒಳಗಾಯಿತು.

ಆಗ ಬ್ರಹ್ಮದೇವನು ಹೀಗೆ ನುಡಿದನು –

**ಅಂಜನೆ ತ್ವಂ ಹಿ ಶೇಷಾದ್ರೌ ತಪಸ್ತಪ್ತ್ವಾ ಸುದಾರುಣಮ್,**
**ಪುತ್ರಂ ಸೂತವತೀ ಯಸ್ಮಾಲ್ಲೋಕತ್ರಯಹಿತಾಯ ವೈ.** [1]

"ಎಲೈ ಅಂಜನೆ! ನೀನು ಈ ಶೇಷಾದ್ರಿಯಲ್ಲಿ ತೀವ್ರ ತಪಸ್ಸನ್ನು ಮಾಡಿ ಲೋಕಶ್ರೇಯಸ್ಸಿಗಾಗಿ ಈ ಪುತ್ರನನ್ನು ಪಡೆದಿ.

**ಪ್ರಸಿದ್ಧಿಂ ಯಾತು ಶೈಲೋಽಯಮಂಜನೇ! ನಾಮತಸ್ತವ,**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯಾ ವಿಚಾರಣಾ.** [2]

ಈ ಕಾರಣ ಈ ವೇಂಕಟಗಿರಿ ಅಥವಾ ಶೇಷಾದ್ರಿಯು ಇನ್ನು ಮುಂದೆ ನಿನ್ನ ಹೆಸರಿನಲ್ಲಿ ಅಂಜನಾದ್ರಿ ಎಂದು ಪ್ರಸಿದ್ಧಿಯನ್ನು ಪಡೆಯುವುದು. ಇದರಲ್ಲ ಸಂಶಯವಿಲ್ಲ.

**ಇತಿ ತಸ್ಯೈ ವರಂ ದತ್ವಾ ದೇವಾ ಬ್ರಹ್ಮಪುರೋಗಮಾಃ,**
**ಸ್ವಂ ಸ್ವಂ ಸ್ಥಾನಂ ಸಮುದ್ದಿಶ್ಯ ಯಥಾಗತಮಥೋ ಯಯುಃ.** [3]

ಎನ್ನುವ ವರವನ್ನಿತ್ತು ಬ್ರಹ್ಮ ಮತ್ತು ಇತರ ದೇವತೆಗಳು ತಮ್ಮ ತಮ್ಮ ಲೋಕಗಳಿಗೆ ತೆರಳಿದರು.

**ಅಂಜನಾ ಪುತ್ರಮಾದಾಯ ಶ್ರೀವೇಂಕಟಗಿರಿಸ್ತಟಮ್,**
**ಪುನರಾಗಮ್ಯ ಸಾಮೋದಮಲಂಚಕ್ರೇ ನಿಜಾಶ್ರಮಮ್.** [4]

ನಂತರ ಅಂಜನೆಯು ತನ್ನ ಕುಮಾರನನ್ನು ಕರೆದುಕೊಂಡು ಸಂತೋಷದಿಂದ ಶ್ರೀವೇಂಕಟಗಿರಿಯಲ್ಲಿರುವ ತನ್ನ ಆಶ್ರಮವನ್ನು ಸೇರಿದಳು.

**ಚತುರ್ಷು ಮೇರುಪಾರ್ಶ್ವೇಷು, ಹೇಮಕೂಟಹಿಮಾಹ್ವಯೇ,**
**ನೀಲೇ ಶ್ವೇತನಗೇ ಚೈವ ನಿಷಧೇ ಗಂಧಮಾದನೇ.** [5]

ಬ್ರಹ್ಮಾಂಡಪುರಾಣದಲ್ಲಿ ಹನುಮ ಜನ್ಮಸ್ಥಾನವು 'ಸುಮೇರು' ಎಂದು ಪ್ರಸ್ತಾವಿಸಲ್ಪಟ್ಟಿದೆ. ಹಾಗೆಯೆ, ರಾಮಾಯಣದಲ್ಲಿ ಶ್ರೀರಾಮನು ತುಂಬಾ ಆಸಕ್ತಿಯಿಂದ ಅಗಸ್ತ್ಯರನ್ನು ಕೇಳಿ ಹನುಮ ಜನ್ಮವೃತ್ತಾಂತವನ್ನು ತಿಳಿಯುತ್ತಾನೆ.

**ಸೂರ್ಯದತ್ತವರಸ್ವರ್ಣಃ ಸುಮೇರುರ್ನಾಮ ಪರ್ವತಃ,**
**ಯತ್ರ ರಾಜ್ಯಂ ಪ್ರಶಾಸ್ತ್ಯಸ್ಯ ಕೇಸರೀ ನಾಮ ವೈ ಪಿತಾ.** [6]

1–4 ವೇಂಕಟಾಚಲಮಾಹಾತ್ಮ್ಯ (ಬ್ರಹ್ಮಾಂಡಪುರಾಣಾಂತರ್ಗತ ತೀರ್ಥಖಂಡಾಂತರ್ಗತ–5–64–67) ಪ್ರಥಮಭಾಗ, ಪುಟ–333 ತಿ.ತಿ.ದೇ ಮುದ್ರಣ.
5. ಬ್ರಹ್ಮಾಂಡಪುರಾಣ, ಮಧ್ಯಮಭಾಗ–7–194; 6. ರಾಮಾಯಣ, ಉತ್ತರಕಾಂಡ–35–19

ಬ್ರಹ್ಮಾಂಡಪುರಾಣದಲ್ಲಿ ಮತ್ತು ರಾಮಾಯಣದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಸುಮೇರುಪರ್ವತವು 'ವೇಂಕಟಾಚಲ'ವೇ ಎಂದು ಬ್ರಹ್ಮಪುರಾಣ ಸ್ಪಷ್ಟಮಾಡಿದೆ. "ಮೇರುಪುತ್ರಂ ಮಹಾಪುಣ್ಯಂ, ವೇಂಕಟಾಚಲಸಂಜ್ಞಕಂ"[1] ಮೇರುಪರ್ವತಪುತ್ರನಿಗೆ ವೇಂಕಟ, ಸುಮೇರು ಎನ್ನುವ ಹೆಸರುಗಳಿವೆ. ಆ ಸುಮೇರು ಪರ್ವತನು ಶೇಷಾಂಶ ದಿಂದ ಹುಟ್ಟಿದವನು. ಪರ್ವತಸ್ವರೂಪವು ಋಷಿಗಳಿಗೆ, ದೇವತೆಗಳಿಗೆ, ಮುಕ್ತರಿಗೆ ಬಂಗಾರದ ಬಣ್ಣದಲ್ಲಿ ಕಾಣಿಸುತ್ತದೆ ಎಂದು ಬ್ರಹ್ಮಪುರಾಣಾಂತರ್ಗತ ಶ್ರೀವೇಂಕಟಾಚಲಮಾಹಾತ್ಮ್ಯ ವಿವರಿಸುತ್ತಿದೆ. ಅನ್ನಮಾಚಾರ್ಯರು ಈ ಸತ್ಯವನ್ನು ಅವೆಷ್ಟೋ ಸಂಕೀರ್ತನೆಗಳಲ್ಲಿ ಹೇಳಿದ್ದಾರೆ.

**ವರಾಹಪುರಾಣ**

**ದಶರಥನು ಪುತ್ರಸಂತಾನಾರ್ಥಿಯಾಗಿ ತಿರುಮಲೆಗೆ ಆಗಮಿಸುವುದು**

ಬಹಳಷ್ಟು ಕಾಲದವರೆಗು ಸಂತಾನವಿಲ್ಲದ ದಶರಥ ಮಹಾರಾಜನು ವಶಿಷ್ಠ ಮಹಾಮುನಿಯ ಉಪದೇಶಾನುಸಾರ ವೇಂಕಟಾದ್ರಿಗೆ ಬಂದು ತಪಸ್ಸು ಮಾಡಿದನೆಂದು ವರಾಹಪುರಾಣವು ತಿಳಿಸುತ್ತಿದೆ.

**ತಸ್ಮಿನ್ ಕಾಲೇ ತು ಧರ್ಮಾತ್ಮಾ! ರಾಜಾ ದಶರಥಃ ಪ್ರಭುಃ,**
**ಶಶಾಸ ಮೇದಿನೀಂ ಕೃತ್ಸ್ನಾಂ! ಅಯೋಧ್ಯಾಯಾಂ ಮಹಾಯಶಾಃ,** [2]

ಆ ಕಾಲದಲ್ಲಿ ಧರ್ಮಾತ್ಮನಾದ ದಶರಥ ಮಹಾರಾಜನು ಅಯೋಧ್ಯವನ್ನು ರಾಜಧಾನಿಯಾಗಿಸಿ ಕೊಂಡು ಭೂಮಿಯನ್ನು ಆಳುತ್ತಿದ್ದನು.

**ವರ್ಣಾಶ್ರಮಾಚಾರಯುತಾಃ ಪ್ರಜಾ ಧರ್ಮೇಣ ಪಾಲಯನ್,**
**ಚಿರಕಾಲಂ ಮಹೀಂ ರಾಜಾ ಬುಭುಜೇ ಭೂರಿ ವಿಕ್ರಮಃ.** [3]

ವರ್ಣಾಶ್ರಮವಿಧಾನವನ್ನು ಆಚರಿಸುತ್ತಾ ಪ್ರಜೆಗಳನ್ನು ಧರ್ಮಬದ್ಧವಾಗಿ ಪಾಲಿಸುತ್ತಾ ಅಮಿತಪರಾಕ್ರಮದಿಂದ ಚಿರಕಾಲ ಭೂಮಿಯನ್ನು ಆಳುತ್ತಿದ್ದನು.

**ನ ಚಾದ್ರಾಕ್ಷೀತ್ ಕುಮಾರಸ್ಯ ಶುಚಿಸ್ಮೇರಮುಖಾಂಬುಜಮ್,**
**ವಶಿಷ್ಠಮಬ್ರವೀದ್ದುಃಖಾತ್ ಬ್ರಹ್ಮರ್ಷಿಮಮಿತೌಜಸಮ್.** [4]

ಪುತ್ರಸಂತಾನ ವಿಲ್ಲದ ಕಾರಣ ದುಃಖಿತನಾಗಿದ್ದನು. ಅತ್ಯಂತ ತೇಜಸ್ವಿಯು, ಬ್ರಹ್ಮರ್ಷಿಯುನಾದ ವಶಿಷ್ಠನೊಂದಿಗೆ ಮಾತನಾಡುತ್ತ "ಮಹಾಮುನಿಯೆ!

**ಪುರೋಹಿತೋಽಸ್ಯ ವಂಶಸ್ಯ ವಿಶೇಷೇಣ ಭವಾನ್ಮುನೇ!**
**ಚಿರಂ ಲಾಲಪ್ಯಮಾನಸ್ಯ ನಾಽಽಸೀದ್ವಂಶಕರಸ್ಸುತಃ.** [5]

ನಮ್ಮ ವಂಶಕ್ಕೆ ನೀನೇ ಪ್ರಧಾನಪುರೋಹಿತನು. ನಮ್ಮ ವಂಶವನ್ನು ನಿಲ್ಲಿಸುವ ಸಂತಾನವನ್ನು ನಾನು ಪಡೆಯಲಿಲ್ಲ.

**ಪಾಪಿನೋ ಮಮ ತು ಬ್ರಹ್ಮನ್! ಮಯಾ ಪಾಪಂ ಕೃತಂ ಬಹು,**
**ಪಾಪಸ್ಯ ನಿಷ್ಕೃತಿಃ ಕಸ್ಮಾತ್ ಕಥಂ ಪುತ್ರೋ ಭವಿಷ್ಯತಿ.** [6]

ಬ್ರಹ್ಮರ್ಷಿ! ನಾನು ಪಾಪಿಷ್ಠನು. ಅನೇಕ ಪಾಪಗಳನ್ನು ಮಾಡಿದ್ದೀನಿ. ನನ್ನ ಪಾಪದ ಪರಿಹಾರವೇನು? ನನಗೆ ಪುತ್ರಸಂತಾನ ಹೇಗೆ ಆಗುತ್ತದೆ? ಎಂದು ಕೇಳಿದನು.

---

1. ಶ್ರೀ ವೇಂಕಟಾಚಲಮಾಹಾತ್ಮ್ಯ(ಬ್ರಹ್ಮಪುರಾಣಾಂತರ್ಗತಂ -1-36) ದ್ವಿತೀಯಭಾಗ, ಪುಟ-5 ತಿ.ತಿ.ದೇ ಮುದ್ರಣ.
2. ಶ್ರೀವೇಂಕಟಾಚಲಮಾಹಾತ್ಮ್ಯ(ವರಾಹಪುರಾಣಾಂತರ್ಗತ ಪ್ರಥಮಭಾಗಾಂತರ್ಗತ-44-33-54) ಪ್ರಥಮಭಾಗ, ಪುಟ-48-50 ತಿ.ತಿ.ದೇ ಮುದ್ರಣ.

**ಇತಿ ಪ್ರೋಕ್ತೋ ವಶಿಷ್ಠಸ್ತು ಕ್ಷಣಂ ಧ್ಯಾತ್ವಾ ಪ್ರಸನ್ನಧೀಃ,**
**ಪ್ರಾಹ ಚೈನಂ ನೃಪಂ ಧೀರಂ ವಶಿಷ್ಠೋ ಭಗವಾನ್ ಋಷಿಃ.** 1

ದಶರಥನಿಂದ ಪ್ರಾರ್ಥಿಸಲ್ಪಟ್ಟ ವಶಿಷ್ಠಮಹರ್ಷಿ ನಿರ್ಮಲಾಂತಃಕರಣನಾಗಿ ಕ್ಷಣಕಾಲ ಯೋಚನೆಮಾಡಿ ಧೀರನಾದ ದಶರಥಮಹಾರಾಜ ಕುರಿತು ಹೀಗೆ ಹೇಳಿದನು.

**ಪುಣ್ಯಶ್ಲೋಕಸ್ಯ ಭವತಃ ಕಥಂ ಪಾಪಂ ಭವಿಷ್ಯತಿ?**
**ತಥಾऽಪಿ ತವ ರಾಜೇಂದ್ರ! ಪುತ್ರಪ್ರಾಪ್ತಿವಿರೋಧಕೃತ್.** [2]

ಪುಣ್ಯಾತ್ಮನಾದ ನಿನಗೆ ಪಾಪವು ಹೇಗೆ ಬರುತ್ತದೆ? ಆದರೂ ರಾಜಾ ನಿನಗೆ ಪುತ್ರಪ್ರಾಪ್ತಿ ಆಗದಿರಲಿಕ್ಕೆ

**ದುಷ್ಕೃತಂ ಕಿಂಚಿದಸ್ತೀತಿ ಧ್ಯಾನೇನ ಪ್ರತಿಭಾತಿ ಮೇ,**
**ತಸ್ಯ ಪಾಪಸ್ಯ ಶಾಂತ್ಯರ್ಥಂ ಪುತ್ರಾಣಾಂ ಪ್ರಾಪ್ತಯೇ ತಥಾ.** [3]

ನೀನು ಮಾಡಿದ ಒಂದು ದುಷ್ಕಾರ್ಯವೇ ಕಾರಣವೆಂದು ಧ್ಯಾನದಲ್ಲಿ ನನಗೆ ತಿಳಿಯಿತು. ಆ ಪಾಪ ಪರಿಹಾರಕ್ಕಾಗಿ, ಪುತ್ರಸಂತಾನಕ್ಕಾಗಿ

**ಸೇವ್ಯಃ ಶ್ರೀವೇಂಕಟಾಧೀಶಃ ಕ್ಷೀರಾಬ್ಧಿತನಯಾಪತಿಃ,**
**ಇತ್ಯುಕ್ತಃ ಪ್ರಾಹ ರಾಜಾऽಪಿ ಬ್ರಹ್ಮನ್! ಕುತ್ರ ಶ್ರಿಯಃಪತಿಃ?,** [4]

ವೇಂಕಟಾದ್ರೀಶನಾದ ಲಕ್ಷ್ಮೀಪತಿಯನ್ನು ಸೇವಿಸತಕ್ಕದ್ದು. ಇದಕ್ಕೆ ಪ್ರತಿಯಾಗಿ ದಶರಥನು ವಶಿಷ್ಠನನ್ನು ಉದ್ದೇಶಿಸಿ "ಆ ವೇಂಕಟಾಚಲಾಧೀಶನು ಎಲ್ಲಿರುವನು?"

**ಇದಾನೀಂ ವರ್ತತೇ ವಿಷ್ಣುಃ ಕಥಂ ದೃಶ್ಯೋ ಮಯಾ ಪ್ರಭುಃ,**
**ಇತಿ ಪೃಷ್ಟಃ ಪುನಃ ಪ್ರಾಹ ವಶಿಷ್ಠೋऽಪಿ ಮಹಾಮುನಿಃ.** [5]

ಈಗ ವಿಷ್ಣು ಇದ್ದಾನಾ? ಆತನ ದರ್ಶನ ಪಡೆಯುವುದು ಹೇಗೆ ಎಂದು ಕೇಳಲು ಮಹಾಮುನಿ ಹೀಗೆ ಉತ್ತರಿಸಿದನು

**ಶೃಣು ರಾಜನ್! ಮಹಾಭಾಗ! ಭಾಗೀರಥ್ಯಾಶ್ಚ ದಕ್ಷಿಣೇ,**
**ವರ್ತತೇ ವೇಂಕಟಃ ಶೈಲೋ ಯೋಜನಾನಾಂ ಶತದ್ವಯೇ.** [6]

ಮಹಾಮುನಿ ವಶಿಷ್ಠನು ದಶರಥನೊಂದಿಗೆ "ಮಹಾನುಭಾವನಾದ ಎಲೈ ರಾಜನೇ ಕೇಳು! ಗಂಗಾನದಿಗೆ ದಕ್ಷಿಣದಿಕ್ಕಿನಲ್ಲಿ ಇನ್ನೂರು ಯೋಜನಗಳ ದೂರದಲ್ಲಿ ವೇಂಕಟಾಚಲವೆನ್ನುವ ಪರ್ವತವಿದೆ.

**ಸುವರ್ಣಮುಖರೀತೀರಾತ್ ಉತ್ತರೇ ಕ್ರೋಶಮಾತ್ರಕೇ,**
**ಅನೇಕ ಪುಣ್ಯತೋಯೈಶ್ಚ ಪುಣ್ಯೈಶ್ಚೈವ ಮಹಾಹ್ರದೈಃ** [7]

ಸುವರ್ಣಮುಖರೀ ತೀರದಿಂದ ಉತ್ತರದಿಶೆಯಲ್ಲಿ ಒಂದು ಕ್ರೋಶ ದೂರದಲ್ಲಿ ಅನೇಕ ಪುಣ್ಯತೀರ್ಥಗಳಿಂದ ಶೋಭಿಸುತ್ತಿರುವುದು ಎಂದು ಉತ್ತರಿಸಿದನು.

**ಅನೇಕ ಕಿನ್ನರೀಭಿಶ್ಚ ಶೋಭಿತಃ ಪರ್ವತೋತ್ತಮಃ,**
**ದಿವ್ಯೋऽಯಂ ಪರ್ವತೇಂದ್ರಸ್ತು ನ ಪುನಃ ಪ್ರಾಕೃತೋ ಗಿರಿಃ.** [8]

ಈ ದಿವ್ಯವಾದ ವೇಂಕಟಾಚಲ ಪರ್ವತರಾಜವು ಅನೇಕ ಕಿನ್ನರರಿಂದ ಶೋಭಿಸುವ ಮಹಾಪರ್ವತವಾಗಿದೆ.

1–8 ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣಾಂತರ್ಗತ ಪ್ರಥಮಭಾಗಾಂತರ್ಗತ–44–33–54) ಪ್ರಥಮಭಾಗ, ಪುಟ–48–50 ತಿ.ತಿ.ದೇ ಮುದ್ರಣ

**ಸ್ವರೂಪಂ ತಸ್ಯ ಶೈಲಸ್ಯ ನ ತು ಜಾನಂತಿ ಮಾನುಷಾಃ,**
**ನಾರಾಯಣಸ್ಯ ದೇವಸ್ಯ ವೈಕುಂಠಪುರವಾಸಿನಃ,** [1]

ಈ ಪರ್ವತ ಸ್ವರೂಪವು ಸಾಮಾನ್ಯ ಮಾನವರಿಗೆ ತಿಳಿಯಲು ಅಸಾಧ್ಯ. ಶ್ರೀಮಹಾವಿಷ್ಣುವಿನ ವೈಕುಂಠಪುರವಾಸಿಗಳಿಗೆ ಮಾತ್ರ ಈ ಪರ್ವತ ಸ್ವರೂಪ ತಿಳಿಯುವುದು.

**ಸೂರ್ಯವೈಕುಂಠನಾಕೇಭ್ಯಃ ಪ್ರಿಯೋಽಯಂ ವೇಂಕಟಾಚಲಃ,**
**ತಸ್ಮಿನ್ ಹಿ ರಮತೇ ನಿತ್ಯಂ ಶ್ರೀನಿವಾಸಃ ಶ್ರಿಯಾ ಸಹ.** [2]

ಸೂರ್ಯ, ವೈಕುಂಠ, ಸ್ವರ್ಗಲೋಕಗಳಲ್ಲಿ ವಾಸಮಾಡುವವರಿಗೆ ಈ ವೇಂಕಟಾಚಲವೆಂದರೆ ಬಹಳ ಇಷ್ಟ, ಆ ವೇಂಕಟಾಚಲದಲ್ಲಿ ನಿತ್ಯದಲ್ಲಿ ಶ್ರೀನಿವಾಸನು ಲಕ್ಷ್ಮೀದೇವಿ ಯೊಡನೆ ವಿಹರಿಸುತ್ತಿರುತ್ತಾನೆ.

**ದರ್ಶನಾರ್ಥಂ ಹರೇಸ್ತತ್ರ ಯಜಂತೇ ಮುನಯೋಽಮಲಾಃ,**
**ಯೋಗಿನಸ್ತ್ರಿದಶಾಶ್ಚಾಪಿ ತಪಃ ಕುರ್ವಂತಿ ಸಂತತಮ್.** [3]

ಶ್ರೀಮಹಾವಿಷ್ಣುವಿನ ದರ್ಶನಾರ್ಥವಾಗಿ ಪಾವನರಾದ ಮುನಿಗಳು ನಿರಂತರ ಯಜ್ಞಗಳನ್ನು ಮಾಡುತ್ತಿರುತ್ತಾರೆ. ಯೋಗಿಪುಂಗವರು, ದೇವತೆಗಳು ಈ ಪರ್ವತದಲ್ಲಿ ನಿರಂತರ ತಪಸ್ಸನ್ನು ಮಾಡುತ್ತಾರೆ.

**ಪ್ರಯಯೌ ಚ ವಶಿಷ್ಠೇನ ವೇಂಕಟಾಖ್ಯಂ ಗಿರಿಂ ಪ್ರತಿ,**
**ಗಂಗಾಂ ಗೋದಾವರೀಂ ರಮ್ಯಾಂ ಕೃಷ್ಣವೇಣೀಮನಂತರಮ್.** [4]

ದಶರಥ ಮಹಾರಾಜನು ವಶಿಷ್ಠನಿಂದ ಕೂಡಿ ಮಾರ್ಗಮಧ್ಯದಲ್ಲಿ ಗಂಗಾ, ಗೋದಾವರೀ, ಕೃಷ್ಣಾನದಿಗಳು

**ಮಲಾಪಹಾರಿಣೀಂ ಭದ್ರಾಂ ತುಂಗಾಂ ಪಂಪಾಂ ಮನೋಹರಾಮ್,**
**ಭವನಾಶೀಂ ಚ ಸಂಪ್ರಾಪ್ಯ ಸ್ನಾತ್ವಾ ಸ್ನಾತ್ವಾ ಮಹಾರಥಃ.** [5]

ನಂತರ ಪಾಪಗಳನ್ನು ಕಳೆಯುವ ತುಂಗಭದ್ರ, ಮನೋಹರವಾದ ಪಂಪಾದಿ ಭವನಾಶಿನಿಗಳಾದ ಪುಣ್ಯನದಿಗಳ ಬಳಿ ಹೋಗಿ ಅವುಗಳಲ್ಲಿ ಸ್ನಾನ ಮಾಡಿ

**ವೇಂಕಟಾದ್ರಿಂ ದದರ್ಶಾಥ ತುಂಗಶೃಂಗಸಮನ್ವಿತಮ್,**
**ಉದ್ಯಾನಂ ನಂದನಂ ಚೈತ್ರ ರಥಂ ಸಂಭೂಯ ತಿಷ್ಠತಿ.** [6]

ಮೇರುಪರ್ವತದಂತೆ ಉನ್ನತವಾದ ವೇಂಕಟಾಚಲವನ್ನು ದಶರಥನು ದರ್ಶಿಸಿದನು.

**ಇತ್ಯುತ್ಪ್ರೇಕ್ಷ್ಯ ಮನೋಹರಿ ವೃಕ್ಷಗುಲ್ಮಲತಾ ಯುತಮ್,**
**ಯುವಾನಂಚ ಮಹಾಮೇರುಮಿವ ಚಕ್ಷುಷ್ಪದಂ ಗಿರಿಮ್.** [7]

ಮನೋಹರವಾದ ಲತಾಗುಲ್ಮಾದಿಗಳಿಂದ ಕಣ್ಣುಗಳಿಗೆ ಮಹಾಮೇರು ಪರ್ವತದಂತೆ ಕಾಣುವುದು

**ಆರುಹ್ಯ ನಯನಾನಂದಂ ಹೃದಯಾಹ್ಲಾದಕಾರಕಮ್,**
**ನಿರ್ಝರೇಷು ತಟಾಕೇಷು ಸರಸ್ಸು ಸರಸೀಷು ಚ.** [8]

1-8 ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣಾಂತರ್ಗತ ಪ್ರಥಮಭಾಗಾಂತರ್ಗತ-44-33-54) ಪ್ರಥಮಭಾಗ, ಪುಟ-48-50 ತಿ.ತಿ.ದೇ ಮುದ್ರಣ

ಹೃದಯಾಹ್ಲಾದಕಾರಕವಾದ, ನಯನಾನಂದಕರವಾದ ವೇಂಕಟಾದ್ರಿಯನ್ನು ಅಧಿರೋಹಿಸಿ

**ನದೀಷು ದೇವಖಾತೇಷು ತಥಾ ಪುಷ್ಕರಿಣೀಷು ಚ,**
**ಸ್ನಾತ್ವಾ ನಿರ್ಮಲಸರ್ವಾಂಗಃ ಕ್ಷಾಳಿತಾಘೋ ಮಹಾಬಲಃ,** [1]

ಅಲ್ಲಿರುವ ದೇವನದಿಗಳಲ್ಲಿ, ಪುಷ್ಕರಿಣಿಗಳಲ್ಲಿ ಸ್ನಾನ ಮಾಡಿ ಮಹಾಬಲನಾದ ದಶರಥನು ಪಾಪಪರಿಹಾರ ಮಾಡಿಕೊಂಡನು.

**ವೇಂಕಟಾಚಲಕ್ಕೆ ಶ್ರೀರಾಮನ ಆಗಮನ**

**ವೇಂಕಟಾದ್ರೇಸ್ತು ಮಾಹಾತ್ಮ್ಯಂ ಜನಕರ್ಣರಸಾಯನಮ್,**
**ಶೃಣ್ವತಾಂ ನಾಸ್ತಿ ತೃಪ್ತಿಸ್ತು ಮುನೀನಾಂ ನೋ ಬುಧೋತ್ತಮ!.** [2]

**ಭೂಯಃ ಕಥಯ ವೃತ್ತಾಂತಂ ಶ್ರುತಂ ಕಿಂಚಿತ್ತ್ವಯಾ ಪುರಾ,**
**ಇತ್ಯುಕ್ತಃ ಪ್ರಾಹ ಸೂತೋಽಪಿ ಶ್ರುತಂ ಚ ಮುನಿಪುಂಗವಾನ್.** [3]

ಮುನಿಗಳು ಸೂತಮಹರ್ಷಿ ಕುರಿತು "ಎಲೈ ಸೂತಮಹರ್ಷಿಯೆ! ವೇಂಕಟಾಚಲ ಮಾಹಾತ್ಮ್ಯವು ಜನರ ಕಿವಿಗಳಿಗೆ ಶ್ರವಣಾನಂದಕರವಾಗಿದೆ. ನಾವು ಎಷ್ಟು ಕೇಳಿದರೂ ತೃಪ್ತಿ ಯಾಗುತ್ತಿಲ್ಲ. ನೀನು ಹಿಂದೆ ಕೇಳಿದ್ದನ್ನೆಲ್ಲವೂ ನಮಗೆ ಹೇಳು" ಎಂದರು. ಸೂತರು ತಾವು ಹಿಂದೆ ಕೇಳಿದ್ದನ್ನೇ ಮುನಿಗಳಿಗೆ ಹೀಗೆ ಹೇಳ ತೊಡಗಿದರು.

**ಶ್ರೀ ಸೂತಃ**

**ಪುತ್ರೋ ದಶರಥಸ್ಯಾಽಸೀದ್ರಾಮೋ ರಾಜೀವಲೋಚನಃ,**
**ಸ ಸರ್ವಲಕ್ಷಣೋಪೇತಃ ಸರ್ವಶಾಸ್ತ್ರವಿಶಾರದಃ.** [4]

ದಶರಥನಿಗೆ ಸರ್ವಲಕ್ಷಣೋಪೇತನು, ಸರ್ವಶಾಸ್ತ್ರವಿಶಾರದನು, ರಾಜೀವಲೋಚನನು ಆದ ರಾಮ ಎನ್ನುವ ಪುತ್ರನಿದ್ದನು.

**ರಾವಣಸ್ಯ ವಧಾರ್ಥಾಯ ಪುರಾ ಸೌಮಿತ್ರಿಣಾ ಸಹ,**
**ಹನೂಮತಾ ವೇಗವತಾ ಸುಗ್ರೀವೇಣ ಮಹಾತ್ಮನಾ.** [5]

ಪೂರ್ವದಲ್ಲಿ ಆತನು ರಾವಣನ್ನು ವಧಿಸುವುದಕ್ಕಾಗಿ ಲಕ್ಷ್ಮಣ, ಹನುಮ, ಸುಗ್ರೀವರೊಡನೆ ಮತ್ತು

**ಸಹ ಸೈನ್ಯೈರ್ಯದಾ ಪಂಪಾತೀರಾಚ್ಛೋಭಿತಪಾದಪಾತ್,**
**ನಿರ್ಜಗಾಮ ತದಾ ರಾಮಃ ಶುಭೇ ಶ್ರೀವೇಂಕಟಾಚಲೇ.** [6]

ಸೈನ್ಯದಿಂದ ಕೂಡಿ ಶ್ರೇಷ್ಠವಾದ ವೃಕ್ಷಗಳಿಂದ ಶೋಭಿಸುವ ಪಂಪಾತೀರದಿಂದ ಶ್ರೀರಾಮನು ಶ್ರೀವೇಂಕಟಾಚಲಕ್ಕೆ ಹೋದನು.

**ಸ್ವಾಮಿಪುಷ್ಕರಿಣೀತೀರ್ಥೇ ಸ್ನಾತ್ವಾ ಪಶ್ಚಾದ್ರಣೇ ರಿಪುಮ್,**
**ರಾವಣಂ ಸಗಣಂ ಹತ್ವಾ ಜಯಮಾಪೇತಿ ಮೇ ಶ್ರುತಮ್.** [7]

ಅಲ್ಲಿಯ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ನಂತರ ಯುದ್ಧದಲ್ಲಿ ರಾವಣನನ್ನು ಬಂಧುಸಹಿತ ಸಂಹರಿಸಿದನೆಂದು ಕೇಳಿದ್ದೀನಿ.

---

1. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-44-33-54) ಪ್ರಥಮಭಾಗ, ಪುಟ-48-50 ತಿ.ತಿ.ದೇ ಮುದ್ರಣ.
2, 3. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-1-2) ಪ್ರಥಮಭಾಗ, ಪುಟ-33 ತಿ.ತಿ.ದೇ ಮುದ್ರಣ.
4-7 ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-3-8) ಪ್ರಥಮಭಾಗ, ಪುಟ-33, 34 ತಿ.ತಿ.ದೇ ಮುದ್ರಣ.

**ತತ್ಸರ್ವಂ ಕಥಯಿಷ್ಯಾಮಿ ಶ್ರೋತವ್ಯಮವಧಾನತಃ,**
**ಋಷ್ಯಮೂಕಾಚಲಾತ್ತಸ್ಮಾತ್ ವಾನರೈರ್ಬಹುಭಿರ್ವೃತಃ,** [1]

ಆ ವೃತ್ತಾಂತವನ್ನು ತಿಳಿಸುವೆನು ಏಕಾಗ್ರಚಿತ್ತದಿಂದ ಕೇಳಿರೆಂದು ಸೂತರು ಮುನಿಗಳಿಗೆ ಹೀಗೆ ಹೇಳಲಾರಂಭಿಸಿದರು

**ರಾವಣಸ್ಯ ವಧಾರ್ಥಾಯ ಕೃತೋದ್ಯೋಗಃ ಸಕಾರ್ಮುಕಃ,**
**ಶೇಷಾಚಲಸಮೀಪೇ ತು ಯದಾ ರಾಮಃ ಸಮಾಗತಃ.** [2]

ಆ ಋಷ್ಯಮೂಕಪರ್ವತದಿಂದ ರಾಮನು ಅನೇಕ ಕಪಿಗಳಿಂದ ರಾವಣನ್ನು ಸಂಹರಿಸಲು ಬಿಲ್ಲು, ಬಾಣಗಳನ್ನು ಹಿಡಿದು ಶೇಷಾಚಲಕ್ಕೆ ಬಂದನು.

**ಅಂಜನಾದೇವಿ ಶ್ರೀರಾಮಚಂದ್ರನನ್ನು ತನ್ನ ಆಶ್ರಮಕ್ಕೆ ಬರಲು ಪ್ರಾರ್ಥನೆ ಮಾಡುವುದು**

ಅಂಜನಾದೇವಿ ಪುತ್ರಾರ್ಥಿಯಾಗಿ ಮತಂಗ ಮಹರ್ಷಿಯ ಆಜ್ಞೆ ಮೇರೆಗೆ ಕಿಷ್ಕಿಂಧೆ ಯಿಂದ ವೇಂಕಟಾದ್ರಿಗೆ ಬಂದು ಆಕಾಶಗಂಗಕ್ಕೆ ಅಭಿಮುಖವಾಗಿ ತಪಸ್ಸು ಮಾಡಿ, ತತ್ಫಲವಾಗಿ ಹನುಮ ಜನ್ಮಿಸುವುದುರ ಬಗ್ಗೆ ಸ್ಕಂದ-ಬ್ರಹ್ಮಾಂಡ ಪುರಾಣಗಳಲ್ಲಿ ಇದೆ. ನಂತರ ಆಕೆ ಇಲ್ಲಿಯೇ ಸ್ಥಿರನಿವಾಸ ಏರ್ಪಡಿಸಿಕೊಂಡಿದ್ದಳು ಎಂದು ವರಾಹಪುರಾಣದ ಈ ಕೆಳಕಂಡ ಪ್ರಮಾಣಗಳಿಂದ ಸ್ಪಷ್ಟವಾಗುತ್ತದೆ.

**ತದಾ ಸತ್ಯಂಜನಾದೇವೀ ವಾಯುಸೂನೋರ್ಮಹಾತ್ಮನಃ,**
**ಜನನೀ ಪುರತೋ ಗತ್ವಾ ರಾಮಂ ರಕ್ತಾಂತಲೋಚನಮ್.** [3]

ಪೂಜ್ಯನಾದ ಹನುಮಂತನ ತಾಯಿ, ಪತಿವ್ರತಾ ಲಲಾಮಳಾದ ಆ ಅಂಜನಾದೇವಿ ರಕ್ತಾಂಗಲೋಚನನಾದ ಶ್ರೀರಾಮಚಂದ್ರನಿಗೆ

**ನಮಸ್ಕೃತ್ಯ ಮಹಾಭಾಗಾ ವಚನಂ ಚೇದಮಬ್ರವೀತ್,**
**"ಪ್ರತೀಕ್ಷಂತೀ ಮಹಾಬಾಹೋ! ತ್ವದಾಗಮನಮದ್ಭುತಮ್."** [4]

ನಮಸ್ಕರಿಸಿ, ತಂದೆ! ಅದ್ಭುತವಾದ ನಿನ್ನ ಆಗಮನಕ್ಕಾಗಿ ಈ ಪರ್ವತದಲ್ಲಿ ನಿರೀಕ್ಷಿಸುತ್ತಿದ್ದೇನೆ ಎಂದು ಹೇಳಿದಳು.

**ತಿಷ್ಠಾಮ್ಯಸ್ಮಿನ್ ಗಿರೌ ರಾಮ! ಮುನಯೋಽಪಿ ಚ ಕಾನನೇ,**
**ತಪಃ ಕುರ್ವಂತಿ ಸತತಂ ತ್ವದಾಗಮನಕಾಂಕ್ಷಯಾ.** [5]

ನಿನ್ನ ಆಗಮನವನ್ನು ಬಯಸುವ ಮುನೀಂದ್ರರು ಕೂಡಾ ಈ ಪರ್ವತದಲ್ಲೇ ತಪಸ್ಸನ್ನು ಮಾಡುತ್ತಿದ್ದಾರೆ.

**ತಾನ್ತ್ಸರ್ವಾನ್ತ್ಸಮನುಜ್ಞಾಪ್ಯ ಗಂತುಮರ್ಹಸಿ ಸುವ್ರತ!",**
**ಇತ್ಯುಕ್ತಃ ಪ್ರಾಹ ರಾಮೋಽಪಿ ಹನೂಮನ್ಮಾತರಂ ಪ್ರತಿ.** [6]

ನೀನು ಅವರೆಲ್ಲರನ್ನು ಪ್ರೇಮಪುರಸ್ಸರವಾಗಿ ನೋಡಲು ಹೋಗು ಎಂದು ಪ್ರಾರ್ಥಿಸುತ್ತಿದ್ದೇನೆ ಎಂದು ಅಂಜನಾದೇವಿ ರಾಮನಿಗೆ ಮನವಿ ಮಾಡಿದಳು.

---

1-2. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-3-8) ಪ್ರಥಮಭಾಗ, ಪುಟ-33,34 ತಿ.ತಿ.ದೇ ಮುದ್ರಣ
3-5. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-9-12) ಪ್ರಥಮಭಾಗ, ಪುಟ-34 ತಿ.ತಿ.ದೇ ಮುದ್ರಣ

ಶ್ರೀರಾಮಃ

**'ಕಾಲಾತ್ಯಯೋ ಭವೇದ್ದೇವಿ! ಮಯಿ ತತ್ರ ಸಮಾಗತೇ,**
**ಮಮೇದಾನೀಂ ವರಾರೋಹೇ! ಕಾರ್ಯಸ್ಯ ಮಹತೀ ತ್ವರಾ.'** [1]

ಅಂಜನೆಯ ಪ್ರಾರ್ಥನೆಯನ್ನು ಕೇಳಿದ ರಾಮಚಂದ್ರನು "ಅಮ್ಮಾ! ನಾನು ಈಗ ಇಲ್ಲಿಗೆ ಬಂದರೆ ಆಲಸ್ಯವಾದೀತು. ನನ್ನ ಕರ್ತವ್ಯವನ್ನು ನಿರ್ವರ್ತಿಸಲು ನಾನು ಬೇಗ ಹೊರಡಬೇಕು.

**ಪುನರಾಗಮನೇ ದೇವಿ! ತಥಾ ಭವತು ಸುಂದರಿ!'**
**ಇತ್ಯುಕ್ತಂ ರಾಘವೇಣೈತದ್ವಾಕ್ಯಂ ಶ್ರುತ್ವಾ ಮಹಾಮತಿಃ.** [2]

ಹಿಂದಿರುಗಿ ಬರುವಾಗ ತಪ್ಪದೆ ಬರುತ್ತೇನೆ ಎಂದನು. ಆಗ ಮಹಾಪಂಡಿತನಾದ

**ಹನೂಮಾನ್ ಪ್ರಣತೋ ಭೂತ್ವಾ ವಾಕ್ಯಂ ಚೇತದುವಾಚ ಹ,**
**'ಸ್ಥಾತವ್ಯಮತ್ರ ಭವತಾ ಯತ್ರ ಕುತ್ರಾಽಪಿ ಸರ್ವದಾ.** [3]

ಹನುಮಂತನು ರಾಮನಿಗೆ ನಮಸ್ಕರಿಸಿ "ರಾಮಾ! ಈಗ ನೀನು ಎಲ್ಲಾದರೊಂದು ಸ್ಥಾನದಲ್ಲಿ ವಿಶ್ರಮಿಸಬೇಕಾಗಿದೆ

**ಯಸ್ಮಾಚ್ಛ್ರಾಂತಾ ಮಹಾಸೇನಾ ವಾನರಾಣಾಂ ತರಸ್ವಿನಾಮ್,**
**ಅಯಂ ಚ ಮಾರ್ಗ ಏವಾದ್ರಿಃ ಸದಾ ಪುಷ್ಪಫಲದ್ರುಮಃ.** [4]

ಬಹುವೇಗದಿಂದ ಪ್ರಯಾಣಿಸಿರುವ ವಾನರಸೇನೆಗೆ ವಿಶ್ರಾಂತಿ ಬೇಕಾಗಿದೆ. ಈ ಪರ್ವತವು ನಾವು ಹೋಗಬೇಕಾದ ಮಾರ್ಗದಲ್ಲಿಯೇ ಇದೆ. ಇದು ಸದಾ ಫಲಪುಷ್ಪಗಳಿಂದ ಕೂಡಿರುತ್ತದೆ.

**ಬಹುಪ್ರಸ್ರವಣೋಪೇತೋ ಬಹುಕಂದರಸಾನುಮಾನ್,**
**ಸುಸ್ವಾದುಕಂದಮೂಲೋಽಯಮ್ ಅಂಜನಾಖ್ಯೋ ಮಹಾಗಿರಿಃ.** [5]

ನದಿಗಳಿಂದಲು, ಅನೇಕ ಗುಹೆಗಳಿಂದಲು, ಬೆಟ್ಟಗಳಿಂದಲು, ಸಿಹಿಯಾದ ಕಂದಮೂಲಗಳಿಂದಲು ಶೋಭಿಸುವ ಈ ಪರ್ವತವನ್ನು ಅಂಜನಾದ್ರಿಯೆನ್ನುತ್ತಾರೆ.

**ಮಧೂನಿ ಸಂತಿ ವೃಕ್ಷೇಷು ಬಹೂನಿ ಗಿರಿಕಂದರೇ,**
**ವೇತ್ಥಂ ಸರ್ವಂ ಮಹಾಬಾಹೋ! ಯಥೇಚ್ಛಸಿ ತಥಾ ಕುರು.'** [6]

ಇಲ್ಲಿಯ ಗುಹೆಗಳಲ್ಲಿರುವ ಗಿಡಗಳಿಗೆ ಜೇನುಗೂಡುಗಳು ಬಹಳವಾಗಿರುತ್ತವೆ. ಇದು ನಿವಾಸಯೋಗ್ಯವಾದ ಪ್ರಾಂತ್ಯವಾಗಿದೆ. ಇದೆಲ್ಲವು ನಿನಗೆ ತಿಳಿದಿದ್ದೇಯಾಗಿದೆ. ಹಾಗಾಗಿ ನಿನ್ನ ಇಚ್ಛೆಯಂತೆ ಮಾಡು ಎಂದನು.

**ಇತ್ಯುಕ್ತೋ ವಾಯುಪುತ್ರೇಣ ಶ್ರೀರಾಮಃ ಪ್ರಹಸನ್ನಸೌ,**
**ಜಾನೇಽಹಮಂಜನಾಸೂನೋ! ತಥಾಽಪಿ ವಚನಂ ತವ.** [7]

ಹನುಮಂತನು ಹೀಗೆ ನುಡಿಯಲು ಶ್ರೀರಾಮನು ಮುಗುಳ್ನಗೆಯಿಂದ 'ನನಗೆ ಗೊತ್ತು. ಆದರೂ

**ಶ್ರೋತವ್ಯಂ ಹಿ ಮಹಾಬಾಹೋ! ಗಚ್ಛಾಗ್ರೇ ತ್ವಂ ಹರೀಶ್ವರ!,**
**ಇತ್ಯುಕ್ತ್ವಾ ವಾಹಿನೀಂ ತಾಂ ಚ ಕರ್ಷನ್ ಪರ್ವತಮಾಯಯೌ.** [8]

---

1. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-13-20) ಪ್ರಥಮಭಾಗ, ಪುಟ-34,35 ತಿ.ತಿ.ದೇ ಮುದ್ರಣ

"ಹನುಮಾ! ನಿನ್ನ ಮಾತುಗಳು ಕೇಳತಕ್ಕದ್ದಾಗಿವೆ. ನೀನು ಮುಂದೆ ಹೊರಡು" ಎಂದು ಹೇಳಿ ಸೇನಾಸಮೇತನಾಗಿ ವೇಂಕಟಾಚಲಕ್ಕೆ ಬಂದನು.

**ಅಂಜನಾದ್ರಿಗೆ ಶ್ರೀರಾಮನ ಆಗಮನ**

**ನಾಗಕೇಸರಮಾಲೂರಪುನ್ನಾಗತರುಶೋಭಿತಮ್,**
**ಚಂಪಕಾಶೋಕವಕುಳಚೂತಕಿಂಶುಕರಾಜಿತಮ್.** [1]

ಶ್ರೀರಾಮನು ಸೇನೆಯನ್ನು ನಡೆಸುತ್ತಾ ಬಿಲ್ವ, ಸಂಪಿಗೆ, ಪುನ್ನಾಗ, ಮಾವು ಮುಂತಾದ ಗಿಡಗಳಿಂದಲು

**ಮಯೂರಶಾರಿಕಾಲಾಪೈಃ ಕೋಕಿಲಾನಾಂ ಸ್ವನೈರಪಿ,**
**ಶುಕಮಂಜುಲನಾದೈಶ್ಚ ಕಪೋತಸ್ವನಹುಂಕೃತೈಃ.** [2]

ನವಿಲು, ಕೋಗಿಲೆ, ಗಿಣಿ, ಪಾರಿವಾಳ ಮುಂತಾದ ಪಕ್ಷಿಗಳು ಮಾಡುವ ಶಬ್ದಗಳಿಂದ ಪ್ರತಿಧ್ವನಿಸುತ್ತಿರುವ

**ಶೋಭಿತಂ ಫಲಪುಷ್ಪೈಶ್ಚ ವೇಙ್ಕಟಾಖ್ಯಂ ನಗೋತ್ತಮಮ್,**
**ನಿರ್ಲೋಮಾ ನಾಮತಃ ಕಶ್ಚಿದ್ವಿಪ್ರೋ ವೇದವಿದಾಂ ವರಃ.** [3]

ಫಲಪುಷ್ಪಗಳಿಂದ ಶೋಭಿಸುವ ವೇಂಕಟವೆನ್ನುವ ಹೆಸರುಳ್ಳ ಶ್ರೇಷ್ಠಪರ್ವತದಲ್ಲಿ ವೇದವಿದ್ವಾಂಸರಲ್ಲಿ ಉತ್ತಮನಾದ ನಿರ್ಲೋಮ ಎನ್ನುವ ಒಬ್ಬ ಬ್ರಾಹ್ಮಣೋತ್ತಮನು

**ಸ್ವಯಂಭುವಂ ಸಮುದ್ದಿಶ್ಯ ಬ್ರಹ್ಮಲೋಕಜಿಗೀಷಯಾ,**
**ತಪಶ್ಚಕಾರ ಧರ್ಮಾತ್ಮಾ ಪರ್ವತೋತ್ತರದೇಶತಃ.** [4]

ಬ್ರಹ್ಮಲೋಕಕ್ಕೆ ಹೋಗುವ ಉದ್ದೇಶ್ಯದಿಂದ ಬ್ರಹ್ಮದೇವರನ್ನ ಕುರಿತು ತಪಸ್ಸನ್ನು ಮಾಡುತಿದ್ದನು.

**ಆಗತ್ಯ ಭಗವಾನ್ ಬ್ರಹ್ಮಾ ತಮಾಹ ದ್ವಿಜಸತ್ತಮಮ್,**
**"ರಾಮಂ ದೃಷ್ಟ್ವಾ ಸಸೌಮಿತ್ರಂ ಬ್ರಹ್ಮಲೋಕಮವಾಪ್ಸ್ಯಸಿ"**
**ಇತ್ಯುಕ್ತೋ ಬ್ರಹ್ಮಣಾ ಪೂರ್ವಂ ದೃಷ್ಟ್ವಾ ರಾಮಂ ಪರಾತ್ಪರಮ್.** [5]

ಅಲ್ಲಿಗೆ ಬಂದ ಬ್ರಹ್ಮನು ಆ ಬ್ರಾಹ್ಮಣೊತ್ತಮನಿಗೆ ಹೀಗೆ ಹೇಳಿದನು. ನೀನು ಲಕ್ಷ್ಮಣನಿಂದ ಕೂಡಿದ ರಾಮನನ್ನು ದರ್ಶನ ಮಾಡು. ಬ್ರಹ್ಮಲೋಕವನ್ನು ಪಡೆಯುತ್ತಿ. ಈಗ ಆ ನಿರ್ಲೋಮನು ರಾಮಚಂದ್ರನನ್ನು ನೋಡಿ

**ಫಲಮೂಲಾಶನೈಃ ಸಮ್ಯಕ್ ಪೂಜಯಿತ್ವಾ ತಮಬ್ರವೀತ್,**
**"ಅದ್ಯ ಮೇ ಸಫಲಂ ಜನ್ಮ ತ್ವನ್ಮುಖಾಂಭೋಜದರ್ಶನಾತ್.** [6]

ಫಲಗಳು, ಕಂದಮೂಲಗಳಿಂದ ರಾಮನನ್ನು ಅರ್ಚಿಸಿದ ನಿರ್ಲೋಮನು "ರಾಮಾ! ನಿನ್ನ ಮುಖಪದ್ಮ ಸಂದರ್ಶನದಿಂದ ನನ್ನ ಜನ್ಮ ಇಂದು ಧನ್ಯವಾಯಿತು."

1-6. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-41-21-32) ಪ್ರಥಮಭಾಗ, ಪುಟ-35,36 ತಿ.ತಿ.ದೇ ಮುದ್ರಣ

**ಚಿರಕಾಲಾರ್ಜಿತಂ ಸ್ವಾಮಿನ್! ಫಲಿತಂ ತಪ ಉತ್ತಮಮ್,**
**ಅನುಜ್ಞಾಪಯ ಮಾಂ ರಾಮ! ಬ್ರಹ್ಮಲೋಕಂ ಪ್ರತೀಶ್ವರ!"**.[1]

ಸ್ವಾಮಿ, ಚಿರಕಾಲದಿಂದ ನಾನು ತಪಸ್ಸನ್ನು ಮಾಡಿ ಉತ್ತಮಫಲವನ್ನು ಪಡೆದಿದ್ದೇನೆ. ರಾಮ, ಬ್ರಹ್ಮಲೋಕಗಮನಕ್ಕಾಗಿ ನನಗೆ ಅನುಜ್ಞೆ ನೀಡು.

**ಇತ್ಯುಕ್ತಃ ಸ ತು ಧರ್ಮಾತ್ಮಾ "ತಥೈವಾಽಚರ ಭೋ ದ್ವಿಜ!,"**
**ಇತ್ಯುಕ್ತ್ವಾ ತಂ ತು ವಿಪ್ರೇಂದ್ರಮಾರುರೋಹ ನಗೋತ್ತಮಮ್.** [2]

ಎಂದು ಕೇಳಲು ಧರ್ಮಾತ್ಮನಾದ ರಾಮನು "ಹಾಗೇ ಆಗಲಿ" ಎಂದನು.

**ಶಾಪಮೋಕ್ಷಂ ಚ ಯಕ್ಷಾಣಾಂ ಕೇಷಾಂಚಿತ್ ಪರ್ವತೋತ್ತಮೇ,**
**ದತ್ವಾ ರಾಮೋಽಂಜನಾದೇವ್ಯಾ ಆಶ್ರಮಂ ಪುಣ್ಯವರ್ಧನಮ್.** [3]

ಆ ಪರ್ವತದಲ್ಲಿ ಶಾಪಗ್ರಸ್ತರಾದ ಕೆಲವು ಯಕ್ಷರಿಗೆ ರಾಮನು ಶಾಪವಿಮೋಚನವನ್ನುಂಟುಮಾಡಿ ಪುಣ್ಯವರ್ಧಕವಾದ ಅಂಜನಾದೇವಿಯ ಆಶ್ರಮಕ್ಕೆ

**ಆಕಾಶಗಂಗಾನಿಕಟೇ ಪ್ರತಿಪೇದೇ ಮಹಾಮನಾಃ,**
**ತಯಾ ಸ ಪೂಜಿತಃ ಸಮ್ಯಕ್ ತಸ್ಯೈ ದತ್ತ್ವಾ ವರೋತ್ತಮಮ್.** [4]

ಆಕಾಶಗಂಗೆಯ ಸಮೀಪದಲ್ಲಿರುವ ಅಂಜನಾದೇವಿ ಆಶ್ರಮಕ್ಕೆ ಹೋಗಲು ಅಲ್ಲಿ ಅಂಜನಾದೇವಿ ಕೈಗಳಿಂದ ಪೂಜೆಗೊಂಡು ರಾಮನು ವರಗಳನ್ನಿತ್ತನು.

**ಆಪೃಚ್ಛ್ಯತಾಂ ಮಹಾಭಾಗಾಂ ಸ್ವಾಮಿ ಪುಷ್ಕರಿಣೀಂ ಯಯೌ,**
**ತತ್ರ ರಾಮೋ ಮಹಾತೇಜಾಃ ಸೌಮಿತ್ರಿರ್ಮಾರುತಾತ್ಮಜಃ.** [5]

**ಸುಗ್ರೀವಶ್ಚಾಂಗದಶ್ಚೈವ ಜಾಂಬವಾನ್ ನೀಲ ಏವ ಚ,**
**ಚಕ್ರುಃ ಸ್ನಾನಂ ಮಹಾತೀರ್ಥೇ ಸರ್ವತ್ರ ವಿಜಯಪ್ರದೇ.** [6]

ಅಧಿಕ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಶ್ರೀರಾಮಚಂದ್ರನು, ಲಕ್ಷ್ಮಣ, ಹನುಮಂತ, ಸುಗ್ರೀವ, ಅಂಗದ, ಜಾಂಬವಂತ ಮತ್ತು ನೀಲನು ಪುಷ್ಕರಿಣೀತೀರವನ್ನು ಸೇರಿ ಅಲ್ಲಿ ಎಲ್ಲರು ಪವಿತ್ರಸ್ನಾನವನ್ನು ಮಾಡಿದರು.

**ವೈಕುಂಠಗುಹೆಯಲ್ಲಿ ಪ್ರವೇಶಿಸಿದ ವಾನರರ ವೃತ್ತಾಂತ –**

ಸೂತಮಹರ್ಷಿ ವೈಕುಂಠಗುಹೆ ಒಳಗೆ ವಾನರರು ಪ್ರವೇಶಿಸಿದ ವೃತ್ತಾಂತವನ್ನು ಮುನಿಗಳಿಗೆ ಹೀಗೆ ವಿವರಿಸಿದನು.

ಶ್ರೀರಾಮಚಂದ್ರನ ವಾನರಸೈನ್ಯದಲ್ಲಿ ಕೆಲವರು ಗಜ, ಗವಾಕ್ಷ ಮೊದಲಾದ ವಾನರವೀರರು ಕುತೂಹಲದಿಂದ ಈಶಾನ್ಯಭಾಗದಲ್ಲಿರುವ ವೈಕುಂಠಗುಹೆಯೊಳಗೆ ಪ್ರವೇಶಿಸಿದರು. (ಈ ಗುಹೆ ಇಂದಿಗೂ ಅದೇ ಸ್ಥಳದಲ್ಲೇ ಇದೆ. ಚಿತ್ರವನ್ನು ನೋಡಿ.)

---

೧-೬. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-೪೧-೨೧-೩೨) ಪ್ರಥಮಭಾಗ, ಪುಟ-೩೫-೩೬ ತಿ.ತಿ.ದೇ ಮುದ್ರಣ

ಶ್ರೀಸೂತಃ

**ಸ್ವಾಮಿಪುಷ್ಕರಿಣೀ ಯತ್ರ ತತ ಈಶಾನ್ಯಭಾಗತಃ,**
**ಗಜೋ ಗವಾಕ್ಷೋ ಗವಯಃ ಶರಭೋ ಗಂಧಮಾದನಃ,** [1]

ಸ್ವಾಮಿಪುಷ್ಕರಿಣಿಗೆ ಈಶಾನ್ಯಭಾಗದಲ್ಲಿ ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ

**ಮೈಂದಶ್ಚ ದ್ವಿವಿದಶ್ಚೈವ ಸುಷೇಣಶ್ಚ ಮಹಾಮತಿಃ,**
**ಕಾಂಚಿದ್ಗುಹಾಂ ತಮೋರುದ್ಧಾಂ ಪ್ರವಿಷ್ಟಾಸ್ತತ್ರ ವಾನರಾಃ.** [2]

ಮೈಂದ, ದ್ವಿವಿದ, ಸುಷೇಣ ಮುಂತಾದ ವಾನರರು ಗಾಢಾಂಧಕಾರವಾದ ಒಂದಾನೊಂದು ಗುಹೆಯನ್ನು ಹೊಕ್ಕರು.

**ಉನ್ನಿದ್ರನೇತ್ರಾಃ ಸರ್ವೇಽಪಿ ಸಿಂಹತುಲ್ಯಪರಾಕ್ರಮಾಃ,**
**ಜಗ್ಮುಸ್ತೇ ತಮಸಾವಿಷ್ಟಾಂ ಸುದೂರಂ ತಾಂ ಗುಹಾಂ ತದಾ.** [3]

ಸಿಂಹಸದೃಶ ಪರಾಕ್ರಮವಿರುವ ಆ ವಾನರರೆಲ್ಲರು ಕತ್ತಲು ತುಂಬಿದ ಆ ಗುಹೆಯಲ್ಲಿ ಬಹಳ ದೂರ ಹೋದರು.

**ದದೃಶೇಽತ್ರ ಮಹಾಜ್ಯೋತಿಃ ಸೂರ್ಯಕೋಟಿರಿವೋದಿತಾ,**
**ಜ್ಯೋತಿರ್ಗಣಾನಾಂ ತಟಿತಾಂ ಮಿಳಿತಾನಾಮಿವಾಬಭೌ.** [4]

ಕೋಟಿ ಸೂರ್ಯರು ಉದಿಸಿದಂತೆ ಅನೇಕ ಕಾಂತಿಪುಂಜಗಳಿಂದಲು, ವಿದ್ಯುಲ್ಲತೆಗಳ ಪ್ರಕಾಶದಿಂದ ಕೂಡಿದ ಮಹಾಜ್ಯೋತಿಯನ್ನು ಕಂಡರು.

**ತತ್ರ ಕಾಚಿತ್ಪುರೀ ರಮ್ಯಾ ತಪ್ತಹಾಟಕನಿರ್ಮಿತಾ,**
**ಕವಾಟತೋರಣತ್ಪುರೀ ರಮ್ಯೋದ್ಯಾನಶತೈರ್ಯುತಾ.** [5]

ಅಲ್ಲಿ ಕಾಯಿಸಿದ ಬಂಗಾರದಿಂದ ಮಾಡಿದ ಕವಾಟ, ತೋರಣಗಳಿಂದಲು, ರಮ್ಯವಾದ ನೂರು ಉದ್ಯಾನವನಗಳಿಂದಲು ಶೋಭಿಸುತ್ತಿರುವ ಒಂದು ನಗರವು ಕಾಣಿಸಿತು.

**ಸ್ಫಟಿಕೋಪಲವಚ್ಛುದ್ಧಜಲನದ್ಯಾ ಸಮಾವೃತಾ,**
**ರತ್ನ ಮಾಣಿಕ್ಯ ವೈಡೂರ್ಯ ಮುಕ್ತಾನಿರ್ಮಿತ ಗೋಪುರಾ.** [6]

ಆ ನಗರವು ಸ್ಫಟಿಕದಂತೆ ಸ್ವಚ್ಛವಾಗಿರುವ ಒಂದು ನದಿ ಇದೆ. ರತ್ನ, ಮಾಣಿಕ್ಯ, ವೈಡೂರ್ಯ, ಮುತ್ತುಗಳಿಂದ ನಿರ್ಮಿತವಾದ ಗೋಪುರವನ್ನು ಹೊಂದಿದೆ.

**ಅನೇಕಮಂಡಪೈರ್ಯುಕ್ತಾ ಪ್ರಾಸಾದಶತಸಂಕುಲಾ,**
**ಮಹಾವೀಥೀಶತೋಪೇತಾ ರಥಮಾತಂಗಸಂಯುತಾ.**
**ವರನಾರೀಗಣೋಪೇತಾ ಸರ್ವಮಂಗಳಶೋಭಿತಾ,** [7]

ಅನೇಕ ಮಂಡಪಗಳು, ನೂರಾರು ದೇವಭವನಗಳು, ದೊಡ್ಡ ದೊಡ್ಡ ಬೀದಿಗಳು, ರಥಗಳು, ಆನೆಗಳು ಉಳ್ಳಂತಹ ಮತ್ತು ಅಸಂಖ್ಯಾತ ಸ್ತ್ರೀ, ಪುರುಷರಿಂದ ಕೂಡಿ ಸರ್ವವಿಧಮಂಗಳಸುಶೋಭಿತವಾದ ಪಟ್ಟಣವನ್ನು ವಾನರರು ಕಂಡರು.

**ಶಂಖಚಕ್ರಧರಾಸ್ತತ್ರ ಸರ್ವೇ ಚೈವ ಚತುರ್ಭುಜಾಃ,**
**ಸಶುಕ್ಲಮಾಲ್ಯವಸನಾಃ ಸರ್ವಾಭರಣಭೂಷಿತಾಃ,**
**ದಿವ್ಯಚಂದನಲಿಪ್ತಾಂಗಾಃ ಪರಮಾನಂದಪೂರಿತಾಃ.** [1]

ಅಲ್ಲಿರುವವರೆಲ್ಲರು ಶಂಖಚಕ್ರಗಳನ್ನು, ನಾಲ್ಕು ಕೈಗಳನ್ನು, ಬಿಳಿ ವಸ್ತ್ರಗಳನ್ನು, ಬಿಳಿ ಹೂಮಾಲೆಗಳನ್ನು, ಸಮಸ್ತ ಆಭರಣಗಳನ್ನು ಧರಿಸಿದ್ದಾರೆ. ಚಂದನಲೇಪನದಿಂದ ಪರಮಾನಂದಭರಿತರಾಗಿದ್ದಾರೆ.

**ತನ್ಮಧ್ಯೇ ಸುಮಹದ್ದಿವ್ಯಂ ವಿಮಾನಂ ಸೂರ್ಯಸನ್ನಿಭಮ್,**
**ಅತ್ಯುನ್ನತಮಹಾಮೇರುಶೃಂಗತುಲ್ಯಂ ಮನೋಹರಮ್.** [2]

ಆ ನಗರ ಮಧ್ಯದಲ್ಲಿ ಸೂರ್ಯಸಮಾನ ಕಾಂತಿಯಿಂದಲು, ಮೇರುಪರ್ವತವಂತೆ ಎತ್ತರವಿರುವುದು

**ಬಹುಪ್ರಕಾಶಸಂಪನ್ನಂ ಮಣಿಮಂಡಪಸಂಯುತಂ,**
**ಭೇರೀಮೃದಂಗಪಣವಮರ್ದಲಧ್ವನಿಶೋಭಿತಮ್.** [3]

ತುಂಬಾ ಪ್ರಕಾಶಿಸುವ ಮಣಿಮಂಡಪದಿಂದ ಕೂಡಿದ್ದು ಮತ್ತು ಭೇರಿ, ಮೃದಂಗ, ತಾಳ, ಮದ್ದಳೆ ಧ್ವನಿಗಳಿಂದ ಶೋಭಿಸುತ್ತಾ

**ನೃತ್ತವಾದಿತ್ರಸಂಪನ್ನಂ ಕಿನ್ನರಸ್ವನಸಂಯುತಮ್,**
**ದದೃಶುಸ್ತತ್ರ ಪುರುಷಂ ಪೂರ್ಣಚಂದ್ರನಿಭಾನನಮ್,** [4]

ನೃತ್ಯವಾದ್ಯಗಳಿಂದ ಕಿನ್ನರರಿಂದ ಕೂಡಿರುವ ಸುಂದರವಾದ, ವಿಚಿತ್ರವಾದ ವಿಮಾನವನ್ನು ವಾನರರು ನೋಡಿದರು. ಆ ದಿವ್ಯವಿಮಾನದಲ್ಲಿ ಚಂದ್ರನಂತೆ ಮುಖವುಳ್ಳ ಒಬ್ಬ ಮಹಾಪುರುಷನನ್ನು ಕಂಡರು.

**ಚತುರ್ಬಾಹುಮುದಾರಾಂಗಂ ಶಂಖಚಕ್ರಧರಂ ಪರಮ್,**
**ಪೀತಾಂಬರಧರಂ ಸೌಮ್ಯಮಾಸೀನಂ ಕಾಂಚನಾಽಸನೇ.** [5]

ಆ ಮಹಾಪುರುಷನು ನಾಲ್ಕು ಭುಜಗಳಿಂದ ಶಂಖಚಕ್ರಗಳನ್ನು, ಕಾಂಚೀಪೀತಾಂಬರವನ್ನುಟ್ಟು ಬಂಗಾರದ ಆಸನದಲ್ಲಿ ಕುಳಿತಿದ್ದನು.

**ಫಣಾಮಣಿಮಹಾಕಾಂತಿವಿರಾಜಿತಕಿರೀಟಿನಮ್,**
**ಭೋಗಿಭೋಗೇ ಸಮಾಸೀನಂ ಸರ್ವಾಭರಣಭೂಷಿತಮ್.** [6]

ಮಣಿಕಾಂತಿಯಿಂದ ರಾರಾಜಿಸುತ್ತಿರುವ ಆ ಮಹಾಪುರುಷನು ಆದಿಶೇಷನ ಮೇಲೆ ಸರ್ವಾಭರಣಭೂಷಿತನಾಗಿ ಕುಳಿತಿದ್ದಾನೆ.

**ಆಸನೋಪರಿ ವಿನ್ಯಸ್ತವಾಮೇತರಕರಾಂಬುಜಮ್,**
**ಪ್ರಸಾರ್ಯ ದಕ್ಷಿಣಂ ಪಾದಮುದ್ಧೃತೇ ವಾಮಜಾನುನಿ.** [7]

ಆಸನದಲ್ಲಿ ಕುಳಿತಿರುವ ಮಹಾವಿಷ್ಣುವು ತನ್ನ ಬಲಗೈಯನ್ನು ಚಾಚಿ ಎಡಗಾಲಿನ ಮಂಡಿಯಮೇಲೆ

**ಪ್ರಸಾರ್ಯ ವಾಮಹಸ್ತಾಬ್ಜಂ ಶ್ರೀಭೂಮಿಭ್ಯಾಂ ನಿಷೇವಿತಮ್,**
**ಸೇವಿತಂ ನೀಳಯಾ ದೇವ್ಯಾ ವೈಜಯಂತ್ಯಾ ವಿರಾಜಿತಮ್,** [8]

1–8 ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ–42–8–28) ಪ್ರಥಮಭಾಗ, ಪುಟ–38–40 ತಿ.ತಿ.ದೇ ಮುದ್ರಣ

**ಶ್ರೀವತ್ಸಕೌಸ್ತುಭೋರಸ್ಕಂ ವನಮಾಲಾವಿಭೂಷಿತಮ್,**
**ಕೃಪಾರಸತರಂಗೌಘಪೂರ್ಣ ನೇತ್ರಾಂಬುಜದ್ವಯಮ್.** [1]

ಶ್ರೀಭೂನೀಳಾದೇವಿಯರಿಂದ ಸೇವಿತನಾಗಿದ್ದಾನೆ. ಆ ಮಹಾಪುರುಷನ ಕಂಠದಲ್ಲಿ ವೈಜಯಂತೀಮಾಲೆ, ವಕ್ಷಸ್ಥಲದಲ್ಲಿ ಶ್ರೀವತ್ಸವೆನ್ನುವ ಸಂಗಾತಿ, ವನಮಾಲೆ ಪ್ರಕಾಶಿಸುತ್ತಿವೆ. ಕೃಪಾರಸತರಂಗಸಮೂಹ ನೇತ್ರಪದ್ಮಗಳುಳ್ಳ ಆ ಮಹಾಪುರುಷನನ್ನು ವಾನರರು ಕಂಡರು.

**ಶಶಿಪ್ರಭಾಸಮಚ್ಛತ್ರಂ ಚಾಮರವ್ಯಜನೇ ಶುಭೇ,**
**ಹಸ್ತಾಭ್ಯಾಂ ಧಾರಯಂತೀಭಿಃ ನಾರೀಭಿಃ ಸೇವಿತಂ ಮುದಾ.** [2]

ಚಂದ್ರಕಾಂತಿ ಸಮಾನವಾದ ಕಾಂತಿವುಳ್ಳ ಛತ್ರಗಳನ್ನು, ವಿಂಜಾಮರಗಳನ್ನು ಹಿಡಿದ ಸ್ತ್ರೀಯರು ಆ ಮಹಾಪುರುಷನನ್ನು ಸಂತೋಷದಿಂದ ಸೇವಿಸುತ್ತಿದ್ದಾರೆ.

**ದೃಷ್ಟ್ವಾ ತೇ ವಾನರಾಃ ಸರ್ವೇ ವಿಸ್ಮಿತಾಃ ಶುಭಲೋಚನಾಃ,**
**ಅತ್ರಾಂತರೇ ಮಹಾಭಾಗಃ ಪುರುಷಃ ಪರಮಾದ್ಭುತಃ.** [3]

ಆ ದೃಶ್ಯವನ್ನು ಕಂಡ ವಾನರರು ಆಶ್ಚರ್ಯಚಕಿತರಾದರು. ಅಲ್ಲಿರುವ ಪರಮಾದ್ಭುತ ಮಹಾಪುರುಷನು

**ಚತುರ್ಭುಜೋ ದಂಡಹಸ್ತೋ ದೃಷ್ಟ್ವಾ ತ್ವರಿತವಿಕ್ರಮಃ,**
**ದಂಡಮುದ್ಯಮ್ಯ ತಾನ್ ಸರ್ವಾನ್ ಭರ್ತ್ಸಯಾಮಾಸ ವೈ ತಥಾ.** [5]

ಚತುರ್ಭುಜನು, ದಂಡಹಸ್ತನು, ಪರಾಕ್ರಮಿಯುಯಾದ ವ್ಯಕ್ತಿಯೊಬ್ಬನು ವಾನರರನ್ನು ಬೆತ್ತದಿಂದ ಹೆದರಿಸಿದನು.

**ತೇ ಸರ್ವೇ ವಾನರಾ ಭೀತಾ ನಿರ್ಜಗ್ಮುರ್ಗಿರಿಗಹ್ವರಾತ್,**
**ನಿರ್ಗತ್ಯ ಸಹಸಾ ತೇಭ್ಯಃ ಪ್ರೋಚುರ್ದೃಷ್ಟಂ ಯಥಾ ತಥಾ.** [5]

ವಾನರರೆಲ್ಲರು ಭಯದಿಂದ ಹೊರಗೆ ಬಂದು ನಡೆದ ವಿಚಾರವನೆಲ್ಲವನ್ನು ಉಳಿದ ವಾನರರಿಗೆ ತಿಳಿಸಿದರು.

**'ರಾವಣಸ್ತು ಮಹಾಮಾಯೀ ಕಾಮರೂಪೀ ಚ ವಂಚಕಃ,**
**ಅನ್ಯೋ ವಾ ರಾವಣೋ ವಾಽಥ ಶೋಧನೀಯಃ ಪ್ರಯತ್ನತಃ'.** [6]

**ಇತ್ಯುಕ್ತ್ವಾ ವಾನರಾಸ್ತೇ ಚ ಸರ್ವೇ ಸಂಭೂಯ ಸಂಭ್ರಮಾತ್,**
**ಯತ್ರ ಪೂರ್ವಂ ಗೃಹಾ ದೃಷ್ಟಾ ತತ್ರಾಗಚ್ಛನ್ವನೌಕಸಃ.** [7]

ಉಳಿದ ವಾನರರೆಲ್ಲರು ರಾವಣ ಮಹಾಮಾಯಾವಿ, ಕಾಮರೂಪಿ, ಮೋಸಗಾರ. ಅದು ರಾವಣನೇ ಅಥವಾ ಬೇರೆಯಾರಾದರೂ ಇರಬಹುದೇ? ಎಂದು ಕಂಡುಹಿಡಿಯಬೇಕೆಂದು ಎಲ್ಲರು ಸೇರಿ ಗುಹೆಯೊಳಗ ಹೊರಟರು.

**ನಾಪಶ್ಯನ್ನಗರೀಂ ತತ್ರ ಚಿಹ್ನಂ ವಾ ದೃಷ್ಟಪೂರ್ವಕಮ್,**
**ಭ್ರಮಾತ್ತಮಂಜಸಾ ಶೈಲಂ ವಿಚಿನ್ವಂತಶ್ಚ ಪರ್ವತಃ.** [8]

ಮೊದಲಬಾರಿಗೆ ಗುಹೆ ಒಳಗೆ ಹೋಗಿದ್ದ ವಾನರರು ಹೇಳಿದ ಯಾವ ದೃಶ್ಯವೂ ಇವರಿಗೆ ಕಾಣಿಸದ ಕಾರಣ ಇದೆಲ್ಲವೂ ಭ್ರಮೆ ಯೆಂದು ಭಾವಿಸಿದರು.

1. ಶ್ರೀವೇಂಕಟಾಚಲಮಾಹಾತ್ಮ್ಯ(ವರಾಹಪುರಾಣ ಪ್ರಥಮಭಾಗಾಂತರ್ಗತ-42-8-28) ಪ್ರಥಮಭಾಗ, ಪುಟ-38-40 ತಿ.ತಿ.ದೇ ಮುದ್ರಣ

**'ಭ್ರಮ' ಇತ್ಯೇವ ನಿಶ್ಚಿತ್ಯ ತೂಷ್ಣೀಮಾಸನ್ ವನೌಕಸಃ,**
**ತತಃ ಪ್ರಭಾತೇ ವಿರತೇ ರಾಮೋ ರಾಜೀವಲೋಚನಃ.** [1]

ಇವೆಲ್ಲವು ಭ್ರಮೆಯೆಂದು ನಿರ್ಣಯಿಸಿದ ವಾನರರು ಮೌನವಾಗಿ ಹಿಂದುರಿಗಿದರು. ಬೆಳಗಿನಜಾವದಲ್ಲಿ ರಾಮನು

**ಲಕ್ಷ್ಮಣೇನ ಸಹ ಭ್ರಾತ್ರಾ ವಾನರೇಂದ್ರೇಣ ಧೀಮತಾ,**
**ಸಹ ಸೈನ್ಯೈರ್ಮಹಾತೇಜಾಃ ಪ್ರತಸ್ಥೇಽರಿಜಿಗೀಷಯಾ.** [2]

ಸೋದರನಾದ ಲಕ್ಷ್ಮಣ, ವಾನರರಾಜನಾದ ಸುಗ್ರೀವರಿಂದ ಮತ್ತು ಸೈನ್ಯದಿಂದ ಕೂಡಿ ರಾವಣನ ಮೇಲೆ ಯುದ್ಧಕ್ಕೆ ಹೊರಟನು.

**ಜಿತ್ವಾ ಚ ರಾವಣಂ ಯುದ್ಧೇ ಪ್ರಾಪ್ಯ ಸೀತಾಂ ಮಹಾಬಲಃ,**
**ಅಯೋಧ್ಯಾಂ ಪುನರಭ್ಯೇತ್ಯ ಭ್ರಾತೃಭಿಃ ಸಹಿತೋಽನಘಃ.** [3]

ನಂತರ ಮಹಾಬಲನು, ಪುಣ್ಯಾತ್ಮನು ಆದ ಶ್ರೀರಾಮನು ಯುದ್ಧದಲ್ಲಿ ರಾವಣನನ್ನು ಜಯಿಸಿ, ಸೀತೆಯನ್ನು ಪಡೆದು, ತನ್ನ ತಮ್ಮಂದಿರೊಂದಿಗೆ ಅಯೋಧ್ಯದಲ್ಲಿದ್ದನು.

**ಪ್ರಾಪ ರಾಜ್ಯಂ ಸ್ವಯಂ ರಾಮಃ ಸ್ವಾಮಿತೀರ್ಥಸ್ಯ ವೈಭವಾತ್,**
**ಇತಿ ಶ್ರುತಂ ಮಯಾ ಪೂರ್ವಮಬ್ರುವಂ ಭವತಾಮಹಮ್.** [4]

ಸ್ವಾಮಿಪುಷ್ಕರಿಣೀ ಮಹಾತ್ಮ್ಯದಿಂದ ರಾಮನು ವಿಜಯವನ್ನು ಹೊಂದಿ ರಾಜ್ಯವನ್ನು ಸೇರಿದನೆಂದು ಹಿಂದೆ ನಾನು ಕೇಳಿದ್ದನ್ನು ನಿಮಗೆ ತಿಳಿಸಿದನೆಂದು ಸೂತಮಹರ್ಷಿ ಶೌನಕಾದಿ ಮುನಿಗಳಿಗೆ ಹೇಳಿದನು.

**ವೈಕುಂಠಗುಹೆಯ ವರ್ಣನೆ**

**ಮುನಯಃ –**

**ವೈಕುಂಠಾದ್ರೌ ಗುಹಾ ದೃಷ್ಟಾ ಕಾಚಿದ್ವಾನರಸತ್ತಮೈಃ,**
**ಇತ್ಯುಕ್ತಂ ಭವತಾ ಸೂತ! ವೇದವೇದಾಂಗಪಾರಗ!**
**ಗುಹಾ ಕಾ? ವದ ನೋ ಬ್ರಹ್ಮನ್! ಶ್ರೋತುಂ ಕೌತೂಹಲಂ ಹಿ ನಃ.** [5]

ಶೌನಕಾದಿ ಮುನಿಗಳು ಸೂತಮಹರ್ಷಿ ಕುರಿತು – "ವೇದವೇದಾಂತಪಾರಂಗತನಾದ ಸೂತನೇ! ವಾನರರು ವೈಕುಂಠಾದ್ರಿಯಲ್ಲಿ ಒಂದು ಗುಹೆಯನ್ನು ಹೊಕ್ಕರೆಂದು ಹೇಳಿದ್ದಿಯಲ್ಲವೆ! ಆ ಗುಹೆ ಯಾವುದು? ನಮಗೆ ಮತ್ತಷ್ಟು ವಿವರಗಳನ್ನು ಹೇಳು" ಎಂದು ಕೇಳಲು ಸೂತರು ಹೀಗೆ ಹೇಳ ತೊಡಗಿದರು.

**ಶ್ರೀಸೂತಃ –**

**ಶ್ರೂಯತಾಮಭಿಧಾಸ್ಯಾಮಿ ದೇವಮಾಯಾ ಮಯಾ ಶ್ರುತಾ,**
**ವೈಕುಂಠಾಖ್ಯಾ ಗುಹಾ ಸಾ ತು ದುರ್ಜ್ಞೇಯಾ ಮುನಿಯೋಗಿಭಿಃ.** [6]

ಅದು ದೇವಮಾಯೆಯೆಂದು ನಾನು ಕೇಳಿದ್ದೇನೆ. ಆ ವೈಕುಂಠಗುಹೆ ಮುನಿಗಳಿಗೆ ಸಹಾ ಅರ್ಥವಾಗದು.

---

1–4. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ–42–8–28) ಪ್ರಥಮಭಾಗ, ಪುಟ–38–40 ತಿ.ತಿ.ದೇ ಮುದ್ರಣ
5–6. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ–42–29–36) ಪ್ರಥಮಭಾಗ, ಪುಟ–40 ತಿ.ತಿ.ದೇ ಮುದ್ರಣ

**ದುರ್ಜ್ಞೇಯ ಸಾ ತು ದೇವೈಶ್ಚ ಮಾಯಯಾ ಪರಮಾತ್ಮನಃ,**
**ಲೀಲಯಾ ವಿಷ್ಣುನಾ ಪೂರ್ವಂ ವಾನರಾಣಾಂ ಪ್ರಕಾಶಿತಾ.** [1]

ತಿಳಿಯಲು ಅಶಕ್ಯವಾದ ಆ ಗುಹೆಯನ್ನು ಪರಮಾತ್ಮನ ಮಾಯೆಯಿಂದ ವಿಷ್ಣುಲೀಲೆಯಿಂದ ಹಿಂದೆ ವಾನರರು ನೋಡಲು ಸಮರ್ಥರಾದರು.

**ತಸ್ಯಾಂ ಗುಹಾಯಾಂ ಯೇ ದೃಷ್ಟಾಃ ಶಂಖಚಕ್ರಧರಾ ಅಪಿ,**
**ತೇ ತು ಮುಕ್ತಾಸ್ತಥಾ ನಿತ್ಯಾಃ ಪರಮಾನಂದರೂಪಿಣಃ.** [2]

ಆ ಗುಹೆಯಲ್ಲಿ ಕಾಣಿಸಿದ ಶಂಖಚಕ್ರಧಾರಿಗಳು ಎಲ್ಲರು ನಿತ್ಯರು, ಪರಮಾನಂದ ಸ್ವರೂಪಿಗಳಾದ ಮುಕ್ತರು.

**ಭುಂಜತೇ ಬ್ರಾಹ್ಮಮಾನಂದಮಾವಿರ್ಭೂತಗುಣಾಶ್ಚ ತೇ,**
**ಸಂಚರನ್ತಃ ಕಾಮರೂಪಾ ಲೋಕಾನ್ ಭಗವತಾ ಸಹ.** [3]

ಅವರು ಬ್ರಹ್ಮಾನಂದವನ್ನು ಅನುಭವಿಸುತ್ತಾ ಕಾಮರೂಪಧಾರಿಗಳಾಗಿ ಭಗವಂತನ ಜೋತೆ ವಿವಿಧ ಲೋಕಗಳಲ್ಲಿ ಚರಿಸುತ್ತಾ ಇರುತ್ತಾರೆ.

**ಆನಂದರೂಪಾಃ ಕೈಕಂರ್ಯಂ ಕುರ್ವಂತೋ ಬ್ರಹ್ಮಣೋ ಹಿತೇ**
**ವಸಂತಿ ತತ್ರ ಸತತಂ ಬ್ರಹ್ಮಣಾ ಪರಮೇಷ್ಠಿನಾ** [4]

ಆನಂದರೂಪಿಗಳಾದ ಅವರು ಪರಮಾತ್ಮನನ್ನು ನಿತ್ಯ ಸೇವಿಸುತ್ತಾ ಬ್ರಹ್ಮದೇವರಿಗೆ ಸನ್ನಿಹಿತರಾಗಿ ಆ ಗುಹೆಯಲ್ಲಿ ಬ್ರಹ್ಮನನ್ನು ಒಡಗೂಡಿ ನಿರಂತರವಾಗಿ ವಾಸಿಸುತ್ತಾರೆ.

**ಯದಾ ಯದಾ ಕಲಿಃ ಕಾಲೋ ಯದಾ ವಾ ಜನತಾ ಗಿರೌ,**
**ತದಾ ಗುಹಾಯಾಂ ತಸ್ಯಾಂ ತು ವಸಿಷ್ಯಂತೀತಿ ನಃ ಶ್ರುತಮ್.** [5]

ಎಂದೆಂದು ಕಲಿಯುಗ ಸಂಭವಿಸುತ್ತೆದಯೊ ಅಂದಂದು ಜನಬಾಹುಳ್ಯವು ಹೆಚ್ಚಾದಾಗ ಅವರು ಈ ಗುಹೆಯಲ್ಲಿ ವಾಸಮಾಡುತ್ತಾರೆಂದು ನಾವು ಕೇಳಿದ್ದೀವಿ.

**ಏವಂ ಪ್ರಭಾವಃ ಶೇಷಾದ್ರಿಃ ವಸತ್ಯಸ್ಮಿನ್ ಜಗನ್ಮಯಃ,**
**ಕ್ರೀಡತೇ ಲೀಲಯಾ ಯುಕ್ತೋ ನಿತ್ಯೈರ್ಮುಕ್ತೈಶ್ಚ ಸೂರಿಭಿಃ.** [6]

ಹೀಗಿರುತ್ತದೆ ಶೇಷಾದ್ರಿ ಮಾಹಾತ್ಮ್ಯವು. ಈ ಪರ್ವತದಲ್ಲಿ ಜಗದಂತರ್ಯಾತ್ಮನಾದ ಪರಮಾತ್ಮನು ಲೀಲಾಸ್ವರೂಪಿಯಾಗಿ ನಿತ್ಯಸೂರರಿಂದ ಕ್ರೀಡಿಸುತ್ತಾ ಇರುತ್ತಾನೆ.

**ನೀಲಮೇಘನಿಭಂ ಶ್ಯಾಮಂ ನೀಲೋತ್ಪಲವಿಲೋಚನಮ್,**
**ನೀಲಾದ್ರಿಶಿಖರಸ್ಥಂ ತಂ ಭಜಾಮ್ಯತ್ರೈವ ಸುಸ್ಥಿತಮ್.**
**ಗುಹಾಖ್ಯಾನಂ ಶ್ರುತಂ ಕಿಂ ವಾ? ಯುಷ್ಮಾಭಿರ್ವೀತಕಲ್ಮಷೈಃ,**
**ಶೃಣ್ವತಾಮಿದಮಾಖ್ಯಾನಂ ಕಲಿದೋಷಮಲಾಪಹಮ್,**
**ಧನ್ಯಂ ಯಶಸ್ಯಮಾಯುಷ್ಯಂ ಪುತ್ರಪೌತ್ರಾಭಿವರ್ಧನಮ್.**

---

1-6. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ-42-29-36) ಪ್ರಥಮಭಾಗ, ಪುಟ-40 ತಿ.ತಿ.ದೇ ಮುದ್ರಣ

**ಇತೀರಿತಃ ಶೇಷಗಿರೇಃ ಪ್ರಭಾವಃ ಶ್ರುತೋ ಮಯಾ ಯೋಗಿನರೇಭ್ಯ ಆದರಾಃ,**
**ಸಮಸ್ತಜೀವಾತ್ಮಸಮಷ್ಟಿರೂಪಿಣೋ ಹರೇಃ ಪ್ರಭಾವೋಽಪಿ ಕರೀಂದ್ರಗೋಪ್ತುಃ.** [1]

ನೀಲಮೇಘಸಮವಾದ ಬಣ್ಣವುಳ್ಳವನು, ಪುಂಡರೀಕಾಕ್ಷನು, ನೀಲಾದ್ರಿ ನಿವಾಸನು ಆದ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಮುನೀಂದ್ರರೇ! ಪಾಪರಹಿತರಾದ ನೀವು ಈ ಗುಹೆ ಕುರಿತು ಕೇಳಿದ್ದೀರಲ್ಲಾ! ಕಲಿದೋಷವನ್ನು ಹರಿಸುವ ಈ ವೃತ್ತಾಂತವನ್ನು ಕೇಳಿದವರು ಧನ್ಯರು. ಈ ವೃತ್ತಾಂತ ಶ್ರವಣದಿಂದ ಕೀರ್ತಿ, ಆಯುಷ್ಯ, ವಂಶಾಭಿವೃದ್ಧಿ ಆಗುವುದು. ಹೀಗೆ ಶೇಷಾದ್ರಿ ಪ್ರಭಾವವನ್ನು ನಾನು ಭಕ್ತಿಶ್ರದ್ಧೆಗಳಿಂದ ಯೋಗೀಂದ್ರರಿಂದ ಕೇಳಿದ್ದೇನೆ. ಗಜೇಂದ್ರರಕ್ಷಕನಾದ ವೇಂಕಟಾಚಲಪತಿ ಪ್ರಭಾವವನ್ನು ಪ್ರೀತಿಯಿಂದ ನಿಮಗೆ ಹೇಳಿದ್ದೇನೆ.." ಎಂದು ಸೂತನು ಶೌನಕಾದಿಗಳಿಗೆ ಹೇಳಿದನು.

ಇನ್ನು ತಿರುಮಲೆ ಶ್ರೀನಿವಾಸನ ಸೇವೆಗಳಲ್ಲಿ ಪಠಿಸುವ ವೇಂಕಟಾಚಲಮಾಹಾತ್ಮ್ಯ ಶ್ಲೋಕಗಳಿಂದಲು, ಪುರಾಣಗಳ ಸತ್ಯವನ್ನು, ಸತ್ವವನ್ನು ನಾವು ಗುರುತಿಸಬಹುದು.

ಭಾರತದೇಶದಲ್ಲಿ ಆಂಜನೇಯನ ಜನ್ಮಸ್ಥಳವೆಂದು ಹೇಳಲಾಗುವ ಇತರ ಸ್ಥಳಗಳನ್ನು ನಾವು ಪರಿಶೀಲನೆ ಮಾಡಿದರೆ ಇಷ್ಟೊಂದು ಪ್ರಮಾಣಗಳು ಸಿಗಲಾರವು.

ತಿರುಮಲ ಪುಣ್ಯಕ್ಷೇತ್ರವು ವೈಷ್ಣವಪುಣ್ಯಕ್ಷೇತ್ರವಾಗಿ ಪ್ರಸಿದ್ಧಿಯಾಗಿದೆ. ಪುರಾಣಗಳು ಶ್ರೀ ವೇಂಕಟೇಶ್ವರನ ವೈಭವವನ್ನು ಕೀರ್ತಿಸುತ್ತಾಯಿವೆ.

ಪಸಿಂಡಿ ವೇಂಕಟತ್ತುರೈವರ್ ಸಮಕಾಲೀನರಾದವರು ತಾಳ್ಳಪಾಕ ಅನ್ನಮಾಚಾರ್ಯರು (ಕ್ರೀ.ಶ. 1408–1503)

**ಪ್ರವಿಮಲ ದ್ವಿಪದ ಪ್ರಬಂಧ ರೂಪಮುನ**
**ನವಮುಗಾ ರಾಮಾಯಣಮು, ದಿವ್ಯಭಾಷ**
**ನಾ ವೇಂಕಟಾದ್ರಿ ಮಾಹಾತ್ಮ್ಯಮಂತಯುನು**
**ಗಾವಿಂಚಿ, ರುಚುಲ ಶೃಂಗಾರಮಂಜರಿಯು**
**ಶತಕಮುಲ್ ಪದಿರೆಂಡು ಸಕಲ ಭಾಷಲನು**
**ಪ್ರತಿ ಲೇನಿ ನಾನಾ ಪ್ರಬಂಧಮುಲ್ ಚೇಸಿ** [2]

ಸಂಸ್ಕೃತಭಾಷೆಯಲ್ಲಿ ವೇಂಕಟಾದ್ರಿ ಮಾಹಾತ್ಮ್ಯವನ್ನು ಅನ್ನಮಯ್ಯ ರಚಿಸಿದನೆಂದು ಆತನ ಮೊಮ್ಮೊಗ ಚಿನ್ನನ್ನ (ಚಿಕ್ಕ ತಿರುವೇಂಗಳನಾಥ) "ಅನ್ನಮಾಚಾರ್ಯ ಚರಿತ್ರ" ಎನ್ನುವ ದ್ವಿಪದಕಾವ್ಯದಲ್ಲಿ ಹೇಳಿದ್ದಾನೆ. ಅನ್ನಮಾಚಾರ್ಯ ರಚಿಸಿದ ವೇಂಕಟಾದ್ರಿ ಮಾಹಾತ್ಮ್ಯಂ ಇಂದು ಸಿಗುತ್ತಿಲ್ಲ. ಅನ್ನಮಯ್ಯ ಒಂದು ಸಂಕೀರ್ತನೆಯಲ್ಲಿ ಭಾಗವತ, ಬ್ರಹ್ಮಾಂಡಪುರಾಣ, ವಾಮನ ಪುರಾಣಗಳಲ್ಲಿ ಬರುವ ವೇಂಕಟಾದ್ರಿ ಮಾಹಾತ್ಮ್ಯಕ್ಕೆ ಸಂಬಂಧಪಟ್ಟ ಕಥೆಗಳು ಇವೆ ಎಂದು ತಿಳಿಸಿದ್ದಾನೆ.

**ಶ್ರೀವೇಂಕಟೇಶುಡು ಶ್ರೀಪತಿಯು ನಿತಡೇ**
**ಪಾವನಪು ವೈಕುಂಠಪತಿಯು ನಿತಡೇ.**
**ಭಾಗವತಂಲೋ ಜೆಪ್ಪೆ ಬಲರಾಮು ತೀರ್ಥಯಾತ್ರ**

1. ಶ್ರೀವೇಂಕಟಾಚಲಮಾಹಾತ್ಮ್ಯ (ವರಾಹಪುರಾಣ ಪ್ರಥಮಭಾಗಾಂತರ್ಗತ–42–37,38) ಪ್ರಥಮಭಾಗ, ಪುಟ–41 ತಿ.ತಿ.ದೇ ಮುದ್ರಣ
2. ಅನ್ನಮಾಚಾರ್ಯ ಜೀವನ ಚರಿತೆ, ಪುಟ 49

**ನಾಗಮೋಕ್ತಮೈನ ದೈವ ಮಾತ ಡೀತಡೇ**
**ಬಾಗುಗಾ ಬ್ರಹ್ಮಾಂಡಪುರಾಣ ಪದ್ಧತಿ ಯಾತಡೀತಡೇ**
**ಯೋಗಮೈ ವಾಮನಪುರಾಣೋಕ್ತ ದೈವಮೀತಡೇ**
**ವೆಲಯು ಸಪ್ತಋಷುಲು ವೆದಕಿ ಪ್ರದಕ್ಷಿಣಮು**
**ಲಲರ ಜೇಸಿನ ದೇವುಡಾತಡೀತಡೇ**
**ನೆಲವೈ ಕೋನೇಟಿ ಪೊಂತ ನಿತ್ಯಮು ಗುಮಾರಸ್ವಾಮಿ**
**ಕಲಿಮಿ ದಪಮು ಸೇಸಿ ಕನ್ನ ದೇವುಡೀತಡೇ.**
**ಯೆಕ್ಕುವೈ ಬ್ರಹ್ಮಾದುಲು ನೆಪ್ಪುಡು ನಿಂದ್ರಾದುಲು**
**ತಕ್ಕಕ ಕೊಲಿಚೆಯುನ್ನ ತತ್ತ್ವಮೀತಡೇ**
**ಚಕ್ಕನಾರದಾದುಲ ಸಂಕೀರ್ತನಕು ಜೊಕ್ಕಿ**
**ನಿಕ್ಕಿನ ಶ್ರೀವೇಂಕಟಾದ್ರಿ ನಿಲಯುಡು ನೀತಡೇ.** [1]

17ನೆಯ ಶತಾಬ್ದಿಗೆ ಸೇರಿದ ಶ್ರೇಷ್ಠಲೂರಿ ವೇಂಕಟಾರ್ಯನು ತಾನು ರಚಿಸಿದ **"**ಶ್ರೀನಿವಾಸ ವಿಲಾಸಶೇವಧಿ**"** ಕಾವ್ಯದಲ್ಲಿ ಪುರಾಣಾಂತರ್ಗತವಾದ ಶ್ರೀವೇಂಕಟೇಶ್ವರ ವೈಭವವನ್ನು ಹೀಗೆ ಹೇಳಿದ್ದಾನೆ

**ಶೇಷಾಚಲೋರು ವೈಭವಮು**
**ಪ್ರಕಟಿತಾಲಂಕೃತಾಲಂ ಕ್ರಿಯಾಸ್ಪದ ವರ್ಣನಲನು**
......................................................
**ವಾರಾಹ ವಾಮನ ಬ್ರಹ್ಮಾಂಡ ಪಾದ್ಮ**
**ಗಾರುಡ ಸ್ಕಂದ ಮಾರ್ಕಂಡೇಯ ಮುಖ್ಯ**
**ಬಹುಪುರಾಣೋಕ್ತಿ ಸಂಬಂಧಂಬು ವಲನ**
**ಗಾಹನಮೈ ಪೆನುಗೊನ್ನ ಕಥ ಚೆಕ್ಕುದೀರ್ಚಿ**

ಶ್ರೀನಿವಾಸನ ಕಥೆಯನ್ನು ವೇಂಕಟಾದ್ರಿಮಾಹಾತ್ಮ್ಯಕ್ಕೆ ಹೋಲುವಂತೆ **"**ಶ್ರೀನಿವಾಸವಿಲಾಸಶೇವಧಿ**"**ಯನ್ನು ರಚಿಸಿದನೆಂದು ಶ್ರೇಷ್ಠಲೂರಿ ವೇಂಕಟಾರ್ಯನು ಹೇಳಿಕೊಂಡಿದ್ದಾನೆ.

*~*~*~*~*~*

## ಅಂಜನೆಗೆ ವಾಯುದೇವರು ಫಲವನ್ನು ಪ್ರಸಾದವಾಗಿ ನೀಡುತ್ತಿರುವುದು



# 7. ಹನುಮಂತನ ಜನ್ಮಸ್ಥಳ ತಿರುಮಲ

(ಭೂಗೋಳ ಪ್ರಮಾಣಗಳ ಮೇರೆಗೆ)

ಆಚಾರ್ಯ ರಾಣಿ ಸದಾಶಿವಮೂರ್ತಿ

**ವಿಷಯ ಸಾರಾಂಶ**

1. ಹನುಮಂತನ ಜನ್ಮಳಸ್ಥಲ ತಿರುಮಲ ಅಥವಾ ಅಂಜನಾದ್ರಿ ಎನ್ನುವುದಕ್ಕೆ ಪೌರಾಣಿಕ, ಭಕ್ತಿ ಸಾಹಿತ್ಯ, ಕಾವ್ಯ, ಶಾಸನಾಧಾರಗಳು ಸಾಕಷ್ಟಿವೆ. ಈ ತರಹದ ಪುರಾವೆಗಳು ಹನುಮ ಜನ್ಮಸ್ಥಲಗಳೆಂದು ಹೇಳಲ್ಪಡುವ ಇತರ ಪ್ರದೇಶಗಳಿಗೆ ಇಲ್ಲ.

2 ಪ್ರಪಂಚ ಭೌಗೋಳಿಕ ವ್ಯವಸ್ಥೆಯಲ್ಲಿ ಭಾರತದೇಶದ ಪೂರ್ವ ಘಟ್ಟಗಳು – ತಿರುಮಲ ಗಿರಿಗಳು.

2(a) ಪೂರ್ವಘಟ್ಟಗಳಲ್ಲಿ ತಿರುಮಲ ಗಿರಿಗಳು : ದಕ್ಷಿಣಭಾಗ – ಮಧ್ಯಭಾಗ – ಉತ್ತರಭಾಗ

3. ಈ ಅಂಜನಾದ್ರಿ ಅಥವಾ ಅಂಜನಗಿರಿ ಕುರಿತು ಬೃಹತ್ಸಂಹಿತೆಯಲ್ಲಿರುವ ವಿಶೇಷಗಳು

4 ಕಥಾಪರವಾಗಿ, ಭೌಗೋಳಿಕ ವಿಷಯ ದೃಷ್ಟಿಯಿಂದಲು ಪೌರಾಣಿಕ ಆಧಾರಗಳ ಪುಷ್ಟೀಕರಣ

5 ಆಧುನಿಕ ಶಾಸ್ತ್ರಜ್ಞರ ಅನುಸಾರವಾಗಿ ಪ್ರಪಂಚ ಭೌಗೋಳಿಕ ವ್ಯವಸ್ಥೆಯಲ್ಲಿ ಭಾರತದೇಶದ ಪೂರ್ವಘಟ್ಟಗಳು – ತಿರುಮಲ ಗಿರಿಗಳು.

6 ತಿರುಮಲ ಬೆಟ್ಟಗಳು, ಪೂರ್ವಘಟ್ಟದಲ್ಲಿರುವ ಶೇಷಾಚಲ – ವೆಲಿಕೊಂಡ ಶ್ರೇಣಿಯಲ್ಲಿವೆ.

7 ಪುರಾಣ ಭೂಗೋಳದಲ್ಲಿ ಪೂರ್ವಘಟ್ಟಗಳು

8 ಮಹೇಂದ್ರಗಿರಿಗಳು → ಆಂಧ್ರವಿಷಯ (ವಿಷಯವೆಂದರೆ ಪ್ರದೇಶವೆಂದು ಅರ್ಥ) → ಆಂಧ್ರ ವಿಷಯದಲ್ಲಿನ ನದಿಗಳು, ಪರ್ವತಗಳು → ಆ ನದಿಗಳಲ್ಲಿ ಸುವರ್ಣಮುಖೀ ನದಿ, ಆ ಪರ್ವತಗಳಲ್ಲಿ ತಿರುಮಲ ಬೆಟ್ಟಗಳು

9 ಆಂಧ್ರದಲ್ಲಿ ಕೃಷ್ಣ, ಗೋದಾವರೀ ನದಿಗಳ ಮಧ್ಯದಲ್ಲಿರುವ ಪ್ರದೇಶಗಳು

10. ಬೃಹತ್ಸಂಹಿತೆಯಲ್ಲಿ ಕೂರ್ಮವಿಭಾಗ

ಸಂಪೂರ್ಣ ಮಾಹಿತಿಯನ್ನು ಈ ಪತ್ರದಲ್ಲಿ ನೋಡಬಹುದು.

**ವಿಷಯಪ್ರವೇಶ**

ಹನುಮಂತನು ಭೂಗೊಳದ ಎಲ್ಲೆಡೆಯು ಹಿಂದೂಮತ ಪ್ರಿಯರಿಗೆ, ಹಿಂದೂಮತವನ್ನು ಅನುಸರಿಸುವವರಿಗೆ ಎಲ್ಲರಿಗೂ ಆರಾಧ್ಯ ದೈವ. ರಾಮನ ಬಂಟನಾಗಿ ,ಮಹಾವೀರನೆಂದು, ಅಷ್ಟಸಿದ್ಧಿಗಳನ್ನು ತನ್ನ ವಶದಲ್ಲಿಟ್ಟುಕೊಂಡವನೆಂದು, ಮಹಾಮಹಿಮನೆಂದು ಕೂಡಾ ಪ್ರಖ್ಯಾತಿಯಿದೆ. ಹುಟ್ಟಿದ ತಕ್ಷಣ ಹಸಿವೆಯಿಂದ ಹಣ್ಣು ಎನ್ನುವ ಭ್ರಾಂತಿಯಿಂದ ಉದಯಸೂರ್ಯನನ್ನು ನುಂಗಲು ಆಗಸಕ್ಕೆ ಹಾರಿ, ಸೂರ್ಯಮಂಡಲದತ್ತ ಬಾಣದಂತೇ ನುಗ್ಗಿದ ಮಹಾಬಲಶಾಲಿ. ಇಂತಹ ಹನುಮಂತನು ಭಾರತದೇಶದಲ್ಲಿ ಜನ್ಮಿಸಿದನೆಂದು ಶ್ರೀಮದ್ರಾಮಾಯಣ, ಅನೇಕ ಪುರಾಣಗಳು ಹೇಳುತ್ತಿರುವ ವಿಷಯವಾಗಿದೆ. ಆದರೆ ಭಾರತದೇಶದಲ್ಲಿ ಎಲ್ಲಿ ಜನ್ಮಿಸಿದನು ಎನ್ನುವ ವಿಷಯದಲ್ಲಿ ಅವರವರ ನಂಬಿಕೆ ಅವರವರಿಗೆ ಉಂಟು. ಉತ್ತರಭಾರತದಲ್ಲಿ ಎಂದು ಕೆಲವರು, ಮಧ್ಯಪ್ರದೇಶ್ ನಲ್ಲಿ ಎಂದು ಕೆಲವರು, ಕರ್ನಾಟಕದಲ್ಲಿ ಎಂದು

ಕೆಲವರು ಹೀಗೆ ಅವರವರ ನಂಬಿಕೆಯ ಅನುಸಾರವಾಗಿ ಆಯಾ ಪ್ರಾಂತ್ಯಗಳನ್ನು ಹನುಮಜನ್ಮಭೂಮಿಯೆಂದು ಘೋಷಿಸಿಕೊಂಡು ಭಕ್ತಿಶ್ರದ್ಧೆಗಳಿಂದ ಅಲಯಾದಿಗಳನ್ನು ನಿರ್ಮಿಸಿಕೊಂಡು, ಯಾತ್ರಾಸ್ಥಳಗಳನ್ನು ವೃದ್ಧಿ ಮಾಡಿ ಸ್ಥಾನಿಕರ ಮತ್ತು ದೂರಪ್ರಾಂತ್ಯಗಳಿಂದ ಬರುವ ಪ್ರವಾಸಿಗರ ಭಕ್ತಿಕೇಂದ್ರಗಳನ್ನಾಗಿ ಇವುಗಳನ್ನು ರೂಪಿಸಿದ್ದಾರೆ. ಇವೆಲ್ಲವು ಕೇವಲ ನಂಬಿಕೆಯ ತಳಹದಿ ಮೇಲೆ ನಿಂತಿವೆ.

ಆದರೆ, ಹಿಂದೆ ಹೇಳಿದ ಉಳಿದ ಪ್ರದೇಶಗಳಿಗಿಂತಲು ಅತ್ಯಂತ ಭಿನ್ನವಾಗಿ ತಿರುಮಲೆಯಲ್ಲಿನ ಅಂಜನಾದ್ರಿ ಹನುಮಂತನ ಜನ್ಮಸ್ಥಲ ಎನ್ನುವುದಕ್ಕೆ ಪೌರಾಣಿಕ, ಭಕ್ತಿಸಾಹಿತ್ಯ, ಕಾವ್ಯ, ಶಾಸನಾಧಾರಗಳಿವೆ. ಈ ತರಹದ ಆಧಾರಗಳು ಇನ್ನಿತರ ಪ್ರದೇಶಗಳಿಗೆ ಇಲ್ಲ. ಪ್ರಸ್ತುತ ಬರಹ ದಲ್ಲಿ ಆಧುನಿಕ ಶಾಸ್ತ್ರಜ್ಞರ ಸಮಾಚಾರವನ್ನು ಆಧರಿಸಿ, ಪೌರಾಣಿಕ ಸಾಹಿತ್ಯ ಆಧಾರಗಳಿಗೆ ಅನುಸಾರವಾಗಿ ಭೌಗೋಳಿಕ ವಿಶೇಷಗಳೊಂದಿಗೆ ತಿರುಮಲೆಯಲ್ಲಿರುವ ಅಂಜನಾದ್ರಿಯ ಅಸ್ತಿತ್ವವನ್ನು ನಿರ್ಧರಿಸಿ, ಅಲ್ಲಿಯೆ ಹನುಮಂತನ ಜನ್ಮವಾಯಿತೆನ್ನುವ ಬ್ರಹ್ಮಾಂಡಪುರಾಣ, ಸ್ಕಾಂದಪುರಾಣ ವಿವರಗಳನ್ನು ನೀಡಲಾಗಿದೆ.

**ಕಥಾಪರವಾಗಿ, ಭೌಗೋಳಿಕ ವಿಷಯ ದೃಷ್ಟ್ಯಾ ಪೌರಾಣಿಕ ಆಧಾರಗಳ ಪುಷ್ಟೀಕರಣ**

ಭಾರತೀಯ ಸಾಹಿತ್ಯದಲ್ಲಿ ಆಂಜನೇಯನ ಜನ್ಮಸ್ಥಲ ನಿರ್ಧಾರಣೆ ಮಾಡಲು ಲಭಿಸುವ ಎಲ್ಲ ತರಹದ ಆಧಾರಗಳಲ್ಲಿ ಅತಿಮುಖ್ಯವಾದವು ಸಾಹಿತ್ಯಪರವಾದ ಆಧಾರಗಳು. ಇವು ಹಲವು ಪ್ರಕಾರಗಳು. ಇತಿಹಾಸಪುರಾಣಗಳು, ಉತ್ತರಕಾಲದಲ್ಲಿ ಬಂದ ಭಕ್ತಿಸಾಹಿತ್ಯ, ಶಿಲಾಶಾಸನಗಳಲ್ಲಿರುವ ಬರಹಗಳು ಇತ್ಯಾದಿ. ಇವುಗಳಲ್ಲಿ ಈ ಪ್ರಸ್ತುತ ಸಂದರ್ಭದಲ್ಲಿ ಇತಿಹಾಸಪುರಾಣಗಳಲ್ಲಿ ಆಂಜನೇಯ ಜನ್ಮಸ್ಥಳದ ನಿರ್ಣಯ ಪ್ರಸ್ತಾವನೆ ಬರುವ ಸಂದರ್ಭಗಳನ್ನು ಇಲ್ಲಿ ನಿರೂಪಿಸಲು ಮಾಡಿದ ಪ್ರಯತ್ನದ ಫಲವೆ ಈ ಬರಹ.

ಶ್ರೀವೇಂಕಟೇಶ್ವರನು ಪುರಾಣಪುರುಷನು, ಪುರಾಣಪ್ರಿಯನು, ಪುರಾಣಗಳಿಂದ ಕೀರ್ತಿಸಲ್ಪಡುತ್ತಿರುವವನು. ಹಾಗಾಗಿ ಶ್ರೀನಿವಾಸನ ಕುರಿತು ಹೇಳಬೇಕೆಂದರೆ ವೇದಪುರಾಣಗಳಿಗಿಂತಲು ಪ್ರಾಚೀನವಾದ ಗ್ರಂಥಗಳು ಬೇರಿಲ್ಲ. ಈ ಪುರಾಣಗಳಲ್ಲಿ ಹನುಮಂತನ ಜನನದಿಂದ ಈ ಹನುಮಜ್ಜನ್ಮಸ್ಥಳ ಮತ್ತು ವೇಂಕಟಾದ್ರಿಗೆ ಇರುವ ಸಂಬಂಧದ ಕುರಿತು ವಿಶೇಷಗಳು ಲಭ್ಯವಾಗುತ್ತಿವೆ. ಈ ವಿಶೇಷಗಳನ್ನು ಭೌಗೋಳಿಕಪರವಾಗಿ ಎರಡು ವಿಧವೆಂದು ವಿಂಗಡಿಸಬಹುದು. ಇಲ್ಲಿ ಭೌಗೋಳಿಕಪರವಾದ ಆಧಾರಗಳ ವಿಶ್ಲೇಷಣೆಯನ್ನು ಆಧುನಿಕ ಭೂಗೋಳ ತಜ್ಞರ ಅಭಿಪ್ರಾಯಗಳೊಂದಿಗೆ ಮಂಡಿಸಲಾಗಿದೆ.

**ಆಧುನಿಕ ಶಾಸ್ತ್ರಜ್ಞರ ಅನುಸಾರವಾಗಿ ಪ್ರಪಂಚ ಭೌಗೋಳಿಕ ವ್ಯವಸ್ಥೆಯಲ್ಲಿ ಭಾರತದೇಶದ ಪೂರ್ವಘಟ್ಟಗಳು – ತಿರುಮಲ ಗಿರಿಗಳು, ಪೂರ್ವಘಟ್ಟಗಳಲ್ಲಿರುವ ತಿರುಮಲ ಗಿರಿಗಳು**

ಭಾರತ ದ್ವೀಪಕಲ್ಪದ ಪೂರ್ವಸಮುದ್ರತೀರ ಉದ್ದಕ್ಕು ಬಿಡಿ ಬಿಡಿಯಾಗಿ ಬಿಸಾಡಿದಂತೆ ಕಾಣುವ ಪರ್ವತಪಂಕ್ತಿಗಳಿಗೆ ಪೂರ್ವಘಟ್ಟಗಳು ಎಂದು ಹೆಸರು. ಉತ್ತರದ ಒಡಿಷಾನಿಂದ ಆರಂಭಿಸಿ ದಕ್ಷಿಣದ ತಮಿಳನಾಡಿನವರೆಗೂ ಈ ಪರ್ವತ ಸಾಲುಗಳು ವ್ಯಾಪಿಸಿಕೊಂಡಿವೆ. ಇವು ಒಡಿಷಾ, ಆಂಧ್ರಪ್ರದೇಶ್, ತೆಲಂಗಾಣಾ, ಕರ್ನಾಟಕ, ತಮಿಳನಾಡು ರಾಜ್ಯಗಳಲ್ಲಿ ಹರಡಿವೆ. ಈ ಪರ್ವತ ಸಾಲುಗಳು ವಿಚ್ಛಿನ್ನವಾಗಿ ಕಾಣುವುದಕ್ಕೆ ಪ್ರಧಾನ ಕಾರಣಗಳಲ್ಲೊಂದು ಈ ಘಟ್ಟಗಳ ನಡುವೆ ಪ್ರವಹಿಸುವ ಗೋದಾವರಿ, ಮಹಾನದಿ, ಕೃಷ್ಣ, ಕಾವೇರೀ ಮುಂತಾದ ನದಿಗಳು. ಇವು ನಿರಂತರ ಹರಿಯುತ್ತಾ ಈ ಘಟ್ಟಗಳನ್ನು ಮತ್ತು ಭೂಭಾಗಗಳನ್ನು ಕೊರೆಯುತ್ತಾ ಕೊನೆಗೆ ಬಂಗಾಳಾ ಕೊಲ್ಲಿಯಲ್ಲಿ ಸೇರಿಕೊಳ್ಳುತ್ತವೆ. ಪ್ರಸ್ತುತ ಭೂಪಟದಲ್ಲಿ ಕಾಣುವ ಖಂಡಗಳ ವಿಭಜನೆಯ ಪೂರ್ವದಲ್ಲಿಯೇ ರೋಡಿನಿಯಾ ಮಹಾಖಂಡದಿಂದ ಬೇರ್ಪಡುವ ಸಮಯದಲ್ಲಿ ಗೋಂಡ್ವಾನಾ ಮಹಾಖಂಡ ಏರ್ಪಾಡಾಗುವ ಸಮಯಕ್ಕೆ ಸುಮಾರು ಇಪ್ಪತ್ತು ಅಥವಾ ಐವತ್ತು ಮಿಲಿಯನ್ ವರ್ಷಗಳ ಮಧ್ಯಕಾಲದಲ್ಲಿ ಭಾರತದೇಶದಲ್ಲಿನ ಪಶ್ಚಿಮ ಘಟ್ಟಗಳಿಗಿಂತಲು ಪೂರ್ವದಲ್ಲಿ ಪೂರ್ವ ಘಟ್ಟಗಳು ಹುಟ್ಟಿವೆಯೆಂದು ಭೂಗೋಳ ತಜ್ಞರ ಅಭಿಪ್ರಾಯವಾಗಿದೆ.

ನೂರಾರು ಮಿಲಿಯನ್ ವರ್ಷಗಳ ಪೂರ್ವದಲ್ಲೇ ತೃಟಿತವಾಗಿ ವ್ಯಾಪಿಸಿದ ಈ ಪರ್ವತ ಸಾಲುಗಳು ಬಂಗಾಳ ಕೊಲ್ಲಿ ತೀರಪ್ರಾಂತ್ಯಕ್ಕೆ ಸಮಾಂತರವಾಗಿ ವ್ಯಾಪಿಸಿವೆ. ಇವುಗಳನ್ನು ಸ್ಥೂಲವಾಗಿ ದಕ್ಷಿಣಭಾಗ, ಮಧ್ಯಭಾಗ ಮತ್ತು ಉತ್ತರ ಭಾಗಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

**ದಕ್ಷಿಣಭಾಗ**

ಪೂರ್ವ ಘಟ್ಟಗಳಿಗೆ ದಕ್ಷಿಣದಿಕ್ಕಿನಲ್ಲಿ ತುಟ್ಟತುದಿಗೆ ಇರುವ ಬೆಟ್ಟಗಳನ್ನು ಸಿರುಮಲೈ, ಕಾರಂತಮಲೈ ಬೆಟ್ಟಗಳೆಂದು ಕರೆಯುತ್ತಾರೆ. ಇವುಗಳು ತುಂಬಾ ಎತ್ತರವಾದ ಬೆಟ್ಟಗಳಲ್ಲ. ಇವೆಲ್ಲವು ಚಿಕ್ಕ ಚಿಕ್ಕ ಬೆಟ್ಟಗಳಾಗಿ ಕಾಣುತ್ತವೆ. ಕಾವೇರೀನದಿಯ ಉತ್ತರದಿಕ್ಕಿನಲ್ಲಿರುವ ಉತ್ತರ ತಮಿಳನಾಡುನಲ್ಲಿ ಕೊಲ್ಲಿಮಲೈ, ಪಚ್ಚಾಯ್ಮಲೈ, ಷೆವರಾಅಯ್ (ಸರ್ವಾರಾಯನ್), ಕಾಲರಾಯನ್, ಚಿತ್ತೇರಿ, ಜಾವಾದು, ಪಾಲಮಲೈ, ಮೆಟ್ಟೂರು ಹಿಲ್ಸ್ ಎನ್ನುವ ಬೆಟ್ಟಗಳ ಸಾಲುಗಳಿವೆ. ಇವು ಪೂರ್ವಘಟ್ಟಗಳಲ್ಲಿ ಇರುವ ಭಾಗಗಳೆ. ಕರ್ನಾಟಕ ರಾಜ್ಯದಲ್ಲಿರುವ ಚಾಮರಾಜನಗರ್ ಜಿಲ್ಲೆಯಲ್ಲಿನ ಮಲೆ ಮಹದೇಶ್ವರಾಲಯವು ಪೂರ್ವಘಟ್ಟಗಳಲ್ಲಿಯೆ ನೆಲೆನಿಂತಿದೆ. ಹಾಗೆಯೆ, ಕೇರಳ ರಾಜ್ಯದಲ್ಲಿರುವ ವಯನಾಡ್ ಜಿಲ್ಲೆಯಲ್ಲಿರುವ ಮತ್ತೊಂದು ಪರ್ವತಶ್ರೇಣಿ ಕುರುಂಬಲಕೋಟ ಎನ್ನುವ ಬೆಟ್ಟವು ಕೂಡಾ ಪೂರ್ವಘಟ್ಟಗಳಿಗೆ ಸೇರಿದ್ದೇ ಆಗಿದೆ.

ಪೂರ್ವಘಟ್ಟಗಳು ಚಾರ್ನೋಕ್ಲೈಟ್, ಗ್ರಾನೈಟ್ ಕಲ್ಲು, ಖೋಂಡಲೈಟ್, ಮೆಟಾಮಾರ್ಫಿಕ್ ನೀಸ್, ಕ್ವಾರ್ಟ್ಜ್ ಕಲ್ಲುಗಳಿಂದ ತುಂಬಿವೆ. ಪೂರ್ವಘಟ್ಟಗಳ ನಿರ್ಮಾಣದಲ್ಲಿ ಥ್ರಸ್ಟ್, ಸ್ಟ್ರೈಕ್–ಸ್ಲಿಪ್ ಎನ್ನುವ ದೋಷಗಳು ಕಾಣಿಸಿಕೊಳ್ಳುತ್ತವೆ(2) . ಪೂರ್ವಘಟ್ಟಗಳಲ್ಲಿ ಸುಣ್ಣದಕಲ್ಲು, ಬಾಕ್ಸೈಟ್ ಮತ್ತು ಕಬ್ಬಿಣದ ಅದಿರು ಸಿಗುತ್ತವೆ.

**ಮಧ್ಯಭಾಗ**

ಪಾಲಾರ್ ನದಿಗೆ ಉತ್ತರದಲ್ಲಿ, ಆಂಧ್ರಪ್ರದೇಶದ ಪೂರ್ವಘಟ್ಟಗಳ ಮಧ್ಯಭಾಗವು ಸುಮಾರು ಉತ್ತರ–ದಕ್ಷಿಣ ದಿಶೆಗಳಲ್ಲಿ ವಿಸ್ತರಿಸಿದ ಎರಡು ಸಮಾಂತರ ಶ್ರೇಣಿಗಳಿವೆ. ಪೂರ್ವದಲ್ಲಿ ಕಡಿಮೆ ಎತ್ತರದ ವೆಲಿಕೊಂಡ ಶ್ರೇಣಿ ಪಶ್ಚಿಮದಲ್ಲಿ ಎತ್ತರವಾದ ಪಾಲಿಕೊಂಡ–ಲಂಕಮಲ–ನಲ್ಲಮಲ ಶ್ರೇಣಿಗಳಿವೆ. ಇವು ಕೋರಮಾಂಡಲ್ ತೀರಕ್ಕೆ ಸಮಾಂತರವಾಗಿ ಉತ್ತರ–ದಕ್ಷಿಣಗಳಿಗೆ ಹೊಂದಿಕೊಂಡು ಕೃಷ್ಣ, ಪೆನ್ನ ನದಿಗಳ ನಡುವೆ 430 ಕಿ.ಮಿ. ದೂರದವರೆಗೆ ವ್ಯಾಪಿಸಿವೆ. ಇವುಗಳ ಉತ್ತರದ ಗಡಿಪ್ರಾಂತ್ಯದಲ್ಲಿ ಚಪ್ಪಟವಾದ ಪಲ್ನಾಡು ಬೇಸಿನ್ ಇರಲು, ದಕ್ಷಿಣದಲ್ಲಿ ತಿರುಪತಿ ಬೆಟ್ಟಗಳಲ್ಲಿ ಸೇರಿಕೊಳ್ಳುತ್ತವೆ. ತುಂಬಾ ಪುರಾತನವಾದ ಈ ಬೆಟ್ಟಗಳು ಕಾಲಗತಿಯಲ್ಲಿ ಶೀತೋಷ್ಣ ಪ್ರಭಾವಕ್ಕೆ ತುತ್ತಾಗಿ ಕ್ಷೀಣಿಸಿವೆ. ಇಂದು ಇವುಗಳ ಸರಾಸರಿ ಎತ್ತರ 520 ಮಿ. ಆದರೆ ಭೈರವಕೊಂಡದ ಬಳಿ 1,100 ಮಿ., ಗುಂಡ್ಲಬ್ರಹ್ಮೇಶ್ವರದ ಬಳಿ 1,048 ಮಿ. ಎತ್ತರ ಇವೆ.

**ತಿರುಮಲೆ ಬೆಟ್ಟಗಳು ಪೂರ್ವಘಟ್ಟಗಳಲ್ಲಿ ಶೇಷಾಚಲಂ–ವೆಲಿಕೊಂಡ ಶ್ರೇಣಿಗಳಲ್ಲಿವೆ.**

ಪಾಲಾರ್ ನದಿ ಈ ಬೆಟ್ಟದ ಸಾಲುಗಳನ್ನು ಖಂಡಿಸುತ್ತಾ ಹೋಗುತ್ತದೆ. ವೆಲಿಕೊಂಡ ಶ್ರೇಣಿ ಕೊನೆಯಲ್ಲಿ ನೆಲ್ಲೂರು ಜಿಲ್ಲೆ ಉತ್ತರಪ್ರಾಂತ್ಯದ ಕರಾವಳಿಯ ಚಪ್ಪಟ ಪ್ರಾಂತ್ಯದಲ್ಲಿ ಕೆಳಗೆ ಇಳಿಯುತ್ತದೆ. ಕರ್ನೂಲಿನಲ್ಲಿ ನಲ್ಲಮಲ್ಲ ಶ್ರೇಣಿಯು ಕೃಷ್ಣಾನದಿಯವರೆಗೂ ಮುಂದುವರೆಯುತ್ತದೆ.

ಕೊಂಡಪಲ್ಲಿ ಬೆಟ್ಟಗಳು ಕೃಷ್ಣಾ–ಗೋದಾವರಿ ನದಿಗಳ ಮಧ್ಯದಲ್ಲಿರುವ ಕಡಿಮೆ ಎತ್ತರದ ಬೆಟ್ಟಗಳ ಸಾಲಾಗಿವೆ. ಈ ಬೆಟ್ಟಗಳು ಆಂಧ್ರಪ್ರದೇಶ್ ರಾಜ್ಯದ ಗುಂಟೂರು, ಕೃಷ್ಣ, ಪಶ್ಚಿಮಗೋದಾವರಿ ಜಿಲ್ಲೆಗಳಲ್ಲಿಯು ಮತ್ತು ತೆಲಂಗಾಣ ರಾಜ್ಯದ ಖಮ್ಮಂ ಜಿಲ್ಲೆಯಲ್ಲಿ ಹರಡಿವೆ. ಪೂರ್ವಘಟ್ಟಗಳಿಗೆ ಸೇರಿದ ಈ ಬೆಟ್ಟಗಳನ್ನು ಕೃಷ್ಣಾನದಿಯು ಇಬ್ಭಾಗ ಮಾಡುತ್ತದೆ. ಪ್ರಧಾನ ಪರ್ವತಶ್ರೇಣಿಯು ನಂದಿಗಾಮ ದಿಂದ ಆರಂಭವಾಗಿ ವಿಜಯವಾಡದವರೆಗು ವಿಸ್ತರಿಸಿರುತ್ತದೆ. ಇದನ್ನು ಕೊಂಡಪಲ್ಲಿ ಶ್ರೇಣಿ ಎಂದು ಕರೆಯುತ್ತಾರೆ.

ಪಾಪಿಕೊಂಡಲು ಪೂರ್ವಘಟ್ಟಗಳಲ್ಲಿ, ಆಂಧ್ರಪ್ರದೇಶ್ ನಲ್ಲಿರುವ ತೂರ್ಪುಗೋದಾವರಿ, ಪಶ್ಚಿಮಗೋದಾವರಿ ಜಿಲ್ಲೆಗಳು, ತೆಲಂಗಾಣಾದ ಖಮ್ಮಂ ಜಿಲ್ಲೆಯ ಮಧ್ಯದಲ್ಲಿ ಹರಡಿವೆ. ಇವು ರಾಜಮಹೇಂದ್ರವರಂ ಹತ್ತಿರ ಕೊನೆಗೊಳ್ಳುತ್ತವೆ.

ಮಧುರವಾಡ ಡೋಮ್ ವಿಶಾಖಪಟ್ಟಣದ ಉತ್ತರದಿಕ್ಕಿಗೆ ಇರುವ ಪೂರ್ವಘಟ್ಟಗಳಲ್ಲಿ ಖೋಂಡಲೈಟ್ ಸೂಟ್, ಕ್ವಾರ್ಟ್ಜ಼್ ಆರ್ಕಿಯನ್ ಶಿಲೆಗಳಿಂದ ಟೆಕ್ಟೋನಿಕ್ ಜೋಡಣೆಯಿಂದಾಗಿ ಏರ್ಪಡಿಸಲಾಗಿದೆ.

**ಉತ್ತರಭಾಗ**

ಮಾಲಿಯಾಶ್ರೇಣಿ ಪೂರ್ವಘಟ್ಟಗಳ ಉತ್ತರಭಾಗದಲ್ಲಿದೆ. ಮಾಲಿಯಾಶ್ರೇಣಿಯು ಸಾಧಾರಣವಾಗಿ 900–1200 ಮೀ. ಎತ್ತರವನ್ನು ಹೊಂದಿದೆ. ಇದರ ಶಿಖರಗಳು ಕೆಲವು ಇನ್ನೂ ಎತ್ತರವನ್ನು ಹೊಂದಿವೆ. ಈ ಶ್ರೇಣಿಯಲ್ಲಿ ಅತ್ಯಧಿಕ ಎತ್ತರವುಳ್ಳ ಶಿಖರವು ಮಹೇಂದ್ರಗಿರಿ (1,501 ಮೀ.), ಮಾಡುಗುಲ ಬೆಟ್ಟಗಳು ಪೂರ್ವಘಟ್ಟಗಳ ಉತ್ತರಭಾಗದಲ್ಲಿವೆ. 1100–1400 ಮೀ. ಎತ್ತರವಿರುವ ಇವುಗಳು, ಮಾಲಿಯಾ ಬೆಟ್ಟಗಳಿಗಿಂತಲೂ ಎತ್ತರವಾಗಿ ಇರುತ್ತವೆ. ಈ ಬೆಟ್ಟಗಳಲ್ಲಿ ಪ್ರಮುಖ ಶಿಖರಗಳು ಪೂರ್ವಘಟ್ಟಗಳ ಎಲ್ಲ ಶಿಖರಗಳಿಗಿಂತಲೂ ತುಂಬಾ ಎತ್ತರವಾದದ್ದು – ಆರ್ಮಾ ಬೆಟ್ಟ (1,680 ಮೀ.), ಗಾಲಿಕೊಂಡ (1,643 ಮೀ.), ಸಿಂಕರಂ ಗುಟ್ಟ (1,620 ಮೀ.)

ಒಡಿಶಾ ರಾಜ್ಯದಲ್ಲಿ ಅತಿ ಎತ್ತರವಾದ ಪರ್ವತಶಿಖರ ದೇವಮಾಲಿ (1,672 ಮೀ.) ಪೂರ್ವಘಟ್ಟಗಳಲ್ಲಿ, ದಕ್ಷಿಣ ಒಡಿಶಾದಲ್ಲಿರುವ ಕೋರಾಪುಟ್ ಜಿಲ್ಲೆಯಲ್ಲಿದೆ. ಇದು ಚಂದ್ರಗಿರಿ–ಪೊತ್ತಂಗಿ ಪರ್ವತ ವ್ಯವಸ್ಥೆಯಲ್ಲಿನ ಒಂದು ಭಾಗ. ಈ ಪ್ರಾಂತ್ಯವು ಒಡಿಶಾ ರಾಜ್ಯ ಒಟ್ಟು ವಿಸ್ತೀರ್ಣದಲ್ಲಿ 3/4 ಭಾಗವಾಗಿದೆ. ಭೌಗೋಳಿಕವಾಗಿ ಇದು ಭಾರತ ದ್ವೀಪಕಲ್ಪದ ಒಂದು ಭಾಗ. ಇದು ಪ್ರಾಚೀನ ಗೋಂಡ್ವಾನಾ ಲಾಂಡ್ ಭೂಭಾಗದ ಒಂದು ತುಣುಕಾಗಿದೆ. ಒಡಿಶಾನಲ್ಲಿರುವ ಪ್ರಧಾನ ನದಿಗಳು, ಅವುಗಳ ಉಪನದಿಗಳು ಆಳವಾದ ಸಣ್ಣ ಸಣ್ಣ ಕಣಿವೆಗಳನ್ನು ಸೃಷ್ಟಿಮಾಡಿವೆ.

ಗರ್ಜತ್ ಶ್ರೇಣಿಯು ವಾಯವ್ಯ ದಿಕ್ಕಿನಿಂದ ಪೂರ್ವಘಟ್ಟಗಳ ವಿಸ್ತರಣೆಯಾಗಿದೆ. ಇದು ಪೂರ್ವದಲ್ಲಿ ಥಟ್ಟನೇ ಎದ್ದುನಿಂತ ಕಡಿದಾದ ಶ್ರೇಣಿ. ಪಶ್ಚಿಮದಲ್ಲಿ ಮಯುರ್ಭಂಜ್–ಮಲ್ಕಾನಗಿರಿಗಳ ಮಧ್ಯ ಇರುವ ಪ್ರಸ್ಥಭೂಮಿಯವರೆಗೂ ಸಾಗಿ ಅಲ್ಲಿ ಕ್ರಮವಾಗಿ ಕೆಳಗೆ ಇಳಿಯುತ್ತವೆ. ಒಡಿಶಾನಲ್ಲಿನ ಎತ್ತರವಾದ ಪ್ರಾಂತ್ಯಗಳನ್ನು ಗರ್ಜತ್ ಬೆಟ್ಟಗಳೆಂದು ಕರೆಯುತ್ತಾರೆ. ಈ ಪ್ರಾಂತ್ಯದ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ ಸುಮಾರು 900 ಮೀ. ಇರುತ್ತದೆ. ಸಿಮಿಲಿಪಾಲ್ ಮಾಸಿಫ್ಫು ಪೂರ್ವಘಟ್ಟಗಳ ಈಶಾನ್ಯ ತುದಿಯ ವಿಸ್ತರಣೆ ಎಂದು ಭಾವಿಸುತ್ತಾರೆ. ದಕ್ಷಿಣಭಾರತದೇಶದ ಪೂರ್ವ ಕರಾವಳಿಯ ಚಪ್ಪಟ ಪ್ರಾಂತ್ಯಗಳಲ್ಲಿ ಹರಿಯುವ ಸಣ್ಣ ಮತ್ತು ಮಧ್ಯಮಗಾತ್ರದ ನದಿಗಳಿಗೆ ಪೂರ್ವಘಟ್ಟಗಳೇ ಜನ್ಮಸ್ಥಾನ.

**ಪೂರ್ವಘಟ್ಟಗಳ ನಡುವೆ ಹರಿಯುವ ನದಿಗಳು:** ಗೋದಾವರಿ, ಕಾವೇರೀ, ಕೃಷ್ಣ, ಮಹಾನದಿ, ತುಂಗಭದ್ರ. ಆದರೆ ಪೂರ್ವಘಟ್ಟಗಳಲ್ಲಿ ಉದ್ಭವಿಸುವ ನದಿಗಳು: ಋಷಿಕುಲ್ಯ, ವಂಶಧಾರ, ಪಾಲಾರ್, ನಾಗಾವಳಿ, ಚಂಪಾವತಿ, ಗೋಸ್ತನೀ, ಶಾರದಾ ನದಿ, ತಾಂಡವ, ಶಬರಿ, ಸೀಲೇರು, ತಮ್ಮಿಲೇರು, ಗುಂಡ್ಲಕಮ್ಮ, ಪೊನ್ನಿಯಾರ್, ಸುವರ್ಣಮುಖಿ, ಕುಂದೂ, ವೆಲ್ಲಾರು, ಪೆನ್ನಾ.

ಹೀಗೆ ಆಧುನಿಕ ಭೌಗೋಳಿಕ ತಜ್ಞರ ಅಭಿಪ್ರಾಯದ ಮೇರೆಗೆ ತಿರುಮಲ ಬೆಟ್ಟಗಳು, ಅದರ ಸಮೀಪದಲ್ಲಿ ಹರಿಯುವ ಸುವರ್ಣಮುಖೀ ನದಿ – ಇವೆರಡು ಪೂರ್ವಘಟ್ಟಗಳ ಮಧ್ಯಭಾಗದಲ್ಲಿ 13.6781837N ಅಕ್ಷಾಂಶ ಮತ್ತು 79.352188E ರೇಖಾಂಶಗಳಲ್ಲಿವೆ.

**ಪುರಾಣ ಭೂಗೋಳದಂತೆ ಪೂರ್ವಘಟ್ಟಗಳು**

ಇನ್ನು ಅಷ್ಟಾದಶ ಪುರಾಣಗಳಲ್ಲಿ ಭೂಗೋಳ, ಭುವನಕೋಶ ಅಧ್ಯಾಯಗಳಲ್ಲಿ ಇಂದಿನ ಪೂರ್ವಘಟ್ಟಗಳಿಗೆ ಇರುವ ಹೆಸರು, ಈ ಪೂರ್ವಘಟ್ಟಗಳಲ್ಲಿರುವ ಪ್ರಾಂತ್ಯಗಳು, ನದಿಗಳು ಅಂದಿನ ಪುರಾಣಗಳಲ್ಲಿ ಇರುವ ವ್ಯವಹಾರ ನಾಮಗಳ ಕುರಿತು ತಿಳಿಯೋಣ.

ಈ ಪೂರ್ವಘಟ್ಟಗಳಿಗೆ ಪುರಾಣಕಾಲದಿಂದ ಆರಂಭಿಸಿ ಇಂದಿನ ಕಾಲದವರೆಗು ಕೂಡಾ ಮಹೇಂದ್ರಗಿರಿ ಎನ್ನುವ ಪ್ರಸಿದ್ಧ ನಾಮವಿದೆ.

ತಿರುಮಲೆಯ ಬೆಟ್ಟಗಳು ಈ ಮಹೇಂದ್ರಗಿರಿಯಲ್ಲಿನ ಒಂದು ಭಾಗವಾಗಿಯೇ ಗುರುತಿಸಿಕೊಂಡಿವೆ. ಮಹೇಂದ್ರಗಿರಿಯ ಅಂಗವಾದ ಆಂಧ್ರವಿಷಯದಲ್ಲಿಯ ಭಾಗವಾಗಿ ತಿರುಮಲ ಗಿರಿಗಳ ಪ್ರಸ್ತಾವ ಬರುತ್ತದೆ.

ಹಾಗಾಗಿ ಇಲ್ಲಿ ಪುರಾಣಗಳ ಜೊತೆಯಲ್ಲಿ ರಾಜಶೇಖರನ ಕಾವ್ಯಮೀಮಾಂಸ, ಕಾಳಿದಾಸನ ರಘುವಂಶದಿಂದ ಆರಂಭಿಸಿ ರಾಜೇಂದ್ರಚೋಳನ ನಂಡೂರು ಶಾಸನ, ನಾರದ ಪುರಾಣ, ರಾಮಾಯಣ, ಮಹಾಭಾರತ, ಬೃಹತ್ಸಂಹಿತ ತದಿತರ ಗ್ರಂಥಗಳಲ್ಲಿರುವ ಪ್ರಮಾಣಗಳಿಂದ ಮಹೇಂದ್ರಗಿರಿಗಳು→ ಆಂಧ್ರವಿಷಯ→ ಆಂಧ್ರ ವಿಷಯದಲ್ಲಿನ ನದಿಗಳು, ಪರ್ವತಗಳು →ಆ ನದಿಗಳಲ್ಲಿ ಸುವರ್ಣಮುಖೀ ನದಿ, ಆ ಪರ್ವತಗಳಲ್ಲಿ ತಿರುಮಲ ಗಿರಿಗಳು ಅವುಗಳ ಪೌರಾಣಿಕ ನಾಮಗಳಲ್ಲಿ ಅಂಜನಾದ್ರಿ ಎನ್ನುವ ಹೆಸರು, ಅದರ ಪ್ರಾಶಸ್ತ್ಯದ ವರೆಗು ಚರ್ಚಿಸಲಾಗಿದೆ.

**ಮಹೇಂದ್ರಗಿರಿ**

ಭಾರತವರ್ಷದ ಸಪ್ತಕುಲಾಚಲಗಳಲ್ಲಿ ಇದು ಒಂದು.

**ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನ್ ಋಕ್ಷಪರ್ವತಃ,**
**ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈವಾತ್ರ ಕುಲಾಚಲಾಃ.** [1]

ರಾಜಶೇಖರನು ಕಾವ್ಯಮೀಮಾಂಸದಲ್ಲಿ ಭರತಖಂಡದಲ್ಲಿರುವ ಕುಮಾರೀದ್ವೀಪ (ವಿಂಧ್ಯಪರ್ವತ ದಕ್ಷಿಣದಿಗ್ಭಾಗ)ದಲ್ಲಿ ಈ ಗಿರಿ ಇರುವುದಾಗಿ ಬರೆದಿದ್ದಾನೆ. ಇದುವೆ ಸರಿಯಾದ ಭೂಗೋಳ ಸ್ಥಲನಿರ್ಣಯವಾಗಿದೆ.

**ಕುಮಾರೀದ್ವೀಪ**

**ವಿಂಧ್ಯಶ್ಚ ಪಾರಿಯಾತ್ರಶ್ಚ ಶುಕ್ತಿಮಾನ್ ಋಕ್ಷಪರ್ವತಃ,**
**ಮಹೇಂದ್ರಸಹ್ಯಮಲಯಾಃ ಸಪ್ತೈತೇ ಕುಲಪರ್ವತಾಃ.** [2]

ರಾಜಶೇಖರನು ದಕ್ಷಿಣಪಥದಲ್ಲಿರುವ ಪರ್ವತಶ್ರೇಣಿಗಳನ್ನು ಹೀಗೆ ವಿವರಿಸಿದ್ದಾನೆ –

**ವಿಂಧ್ಯದಕ್ಷಿಣಪಾದ ಮಹೇಂದ್ರಮಲಯಮೇಕಲಪಾಲಮಂಜರ ಸಹ್ಯಶ್ರೀಪರ್ವತಾದಯಃ, ಪರ್ವತಾಃ.** [3]

ಕಾಳಿದಾಸನು, ರಘುವಂಶದಲ್ಲಿ ಚತುರ್ಥ, ಷಷ್ಠ ಸರ್ಗಗಳಲ್ಲಿ ಮಹೇಂದ್ರಪರ್ವತವನ್ನು ವರ್ಣಿಸಿದ್ದಾನೆ.

**ಸ ಪ್ರತಾಪಂ ಮಹೇಂದ್ರಸ್ಯ ಮೂರ್ಧ್ನಿ ತೀಕ್ಷ್ಣಂ ನ್ಯವೇಶಯತ್.**
**ಅಂಕುಶಂ ದ್ವಿರದಸ್ಯೇವ ಯಂತಾ ಗಂಭೀರವೇದಿನಃ,**
**ಪ್ರತಿಜಗ್ರಾಹ ಕಾಳಿಂಗಸ್ತಮಸ್ತ್ರೈರ್ಗಜಸಾಧನಃ**
**ಪಕ್ಷಚ್ಛೇದೋದ್ಯತಂ ಶಕ್ರಂ ಶಿಲಾವರ್ಷೀವ ಪರ್ವತಃ.** [4]

**ಗೃಹೀತಪ್ರತಿಮುಕ್ತಸ್ಯ ಸ ಧರ್ಮವಿಜಯೀ ನೃಪಃ,**
**ಶ್ರಿಯಂ ಮಹೇಂದ್ರನಾಥಸ್ಯ ಜಹಾರ ನ ತು ಮೇದಿನೀಮ್.** [5]

---

1. ಮಾರ್ಕಂಡೇಯಪುರಾಣ, 57–10
2. ಕಾವ್ಯ ಮೀಮಾಂಸ ಹದಿನೇಳನೆಯ ಅಧ್ಯಾಯಂ – ಪುಟ 92
3. ಕಾವ್ಯ ಮೀಮಾಂಸ ಹದಿನೇಳನೆಯ ಅಧ್ಯಾಯಂ – ಪುಟ 93
4. ರಘುವಂಶಂ – 4–39,40
5. ರಘುವಂಶಂ – 4–43

**ಅಸೌ ಮಹೇಂದ್ರಾದಿಸಮಾನಸಾರಃ ಪತಿರ್ಮಹೇಂದ್ರಸ್ಯ ಮಹೋದಧೇಶ್ಚ,**
**ಯಸ್ಯ ಕ್ಷರತ್ಸೈನ್ಯಗಜಚ್ಛಲೇನ ಯಾತ್ರಾಸು ಯಾತೀವ ಪುರೋ ಮಹೇಂದ್ರಃ.** [1]

ಮಹೇಂದ್ರಪರ್ವತಗಳು ಕಳಿಂಗ ದೇಶದೊಂದಿಗೆ ಸಂಬಂಧಹೊಂದಿವೆ. ಕಳಿಂಗ ನರಪತಿಗಳು ಮಹೇಂದ್ರನಾಥರು. ಈ ಪರ್ವತಗಳು ಭಾಗವತಪುರಾಣದಲ್ಲಿ ಗಂಗಾಸಾಗರ ಸಂಗಮದಿಂದ ಮೊದಲ್ಗೊಂಡು ಗೋದಾವರಿ ತೀರದ ವರೆಗು ವ್ಯಾಪಿಸಿದಂತೆ ಹೇಳಲ್ಪಟ್ಟಿದೆ. ಬಲರಾಮನ ತೀರ್ಥಯಾತ್ರೆಯ ಸಂದರ್ಭದಲ್ಲಿ –

**ಗಯಾಂ ಗತ್ವಾ ಪಿತೄನಿಷ್ಟ್ವಾ ಗಂಗಾಸಾಗರಸಂಗಮೇ,**
**ಉಪಸ್ಪೃಶ್ಯ ಮಹೇಂದ್ರಾದ್ರೌ ರಾಮಂ ದೃಷ್ಟ್ವಾಭಿವಾದ್ಯ ಚ,**
**ಸಪ್ತಗೋದಾವರೀಂ ವೇಣಾಂ ಪಂಪಾಂ ಭೀಮರಥೀಂ ತತಃ.** [2]

ವೆಲನಾಟಿ ರಾಜೇಂದ್ರಚೋಡನ ನಂಡೂರು ಶಾಸನದಲ್ಲಿ ಆಂಧ್ರವಿಷಯ ಗಡಿ ವಿವರಗಳನ್ನು ಹೇಳುವ ಸಂದರ್ಭದಲ್ಲಿ ಆತನು ಮಹೇಂದ್ರಾಚಲ, ಕಾಳಹಸ್ತಿಶಿಖರೀ, ಅಲಪರ್ವತಗಳ ಮಧ್ಯದಲ್ಲಿ ಆಂಧ್ರವಿಷಯವು ಇದೆಯೆಂದು ತಿಳಿಯುತ್ತಿದೆ.

**ಮಹೇಂದ್ರೋ ಮಲಯಸ್ಸಹ್ಯೋ ದೇವತಾತ್ಮಾ ಹಿಮಾಲಯಃ,**
**ಧ್ಯೇಯೋ ರೈವತಕೋ ವಿಂಧ್ಯೋ ಗಿರಿಶ್ಚಾರಾವಳಿಸ್ತಥಾ.**

ಎಂಬ ನಾರದಪುರಾಣದಲ್ಲಿ ಸಪ್ತಕುಲಪರ್ವತಗಳಲ್ಲಿ ಸಾವಿರ ಶಿಖರಗಳುಳ್ಳ ಒಂದೇಒಂದು ಪರ್ವತ ಮಹೇಂದ್ರಗಿರಿ. ಇದುವೆ ದಕ್ಷಿಣದ ರಾಮೇಶ್ವರದಿಂದ ಉತ್ತರದ ಕಟಕ್ ವರೆಗು ವ್ಯಾಪ್ತವಾಗಿರುವ ಮಹೇಂದ್ರಗಿರಿ ಪರ್ವತಶ್ರೇಣಿ. ಇದೇ ಇಂದು ಪೂರ್ವಘಟ್ಟಗಳು ಎನ್ನುವ ಹೆಸರಿನಿಂದ ಕರೆಯಲ್ಪಡುತ್ತಿವೆ. ಈ ಪರ್ವತಗಳು ಚಿಕ್ಕ ಚಿಕ್ಕ ಖಂಡಗಳಾಗಿ, ಶ್ರೇಣಿಗಳಾಗಿ, ಉಪಶ್ರೇಣಿ–ಉಪೋಪಶ್ರೇಣಿಗಳಿಂದ ಕೂಡಿವೆ.

ಹೀಗೆ ಮಹೇಂದ್ರಪರ್ವತವೆಂದು ಕೀರ್ತಿಯನ್ನು ಹೊಂದಿದ ಕುಲಪರ್ವತಗಳೇ ಇಂದಿನ ಪೂರ್ವಘಟ್ಟಗಳೆಂದು ಗ್ರಹಿಸಬೇಕು.

ಈ ಮಹೇಂದ್ರಪರ್ವತ ಶ್ರೇಣಿಗಳಲ್ಲಿರುವ ರಾಜ್ಯಗಳಲ್ಲಿ ಆಂಧ್ರದೇಶದ ಪ್ರಸ್ತಾವನೆ ಶ್ರೀಮದ್ರಾಮಾಯಣದಲ್ಲಿ, ಶ್ರೀಮನ್ಮಹಾಭಾರತದಲ್ಲಿ, ಮಾರ್ಕಂಡೇಯಪುರಾಣ ಮೊದಲಾದುವುಗಳಲ್ಲಿ ಕಾಣಸಿಗುತ್ತದೆ.

**ಆಂಧ್ರದಲ್ಲಿ ಕೃಷ್ಣಾ–ಗೋದಾವರೀ ನದಿಗಳ ಮಧ್ಯದಲ್ಲಿರುವ ಪ್ರದೇಶಗಳು –**

ದಾಕ್ಷಿಣಾತ್ಯ ಜನಪದವಾಸಿಗಳಲ್ಲಿ ಆಂಧ್ರ, ಕೇರಳ, ಕೊಂಕಣ, ಕರ್ನಾಟಕ, ಕೋಸಲ, ಕಾಳಿಂಗ, ಕುಂತಲ, ವಿದರ್ಭ ದೇಶದವರು ಕೌರವಪಕ್ಷದಲ್ಲಿ ಮತ್ತೆ ಚೋಳ, ಪಾಂಡ್ಯ ದೇಶದ ರಾಜರು ಪಾಂಡವಪಕ್ಷದಲ್ಲಿ ಹೋರಾಡಿದರೆಂದು ಭೀಷ್ಮ, ದ್ರೋಣ, ಕರ್ಣ ಪರ್ವಗಳಲ್ಲಿ ವರ್ಣಿಸಲ್ಪಟ್ಟಿದೆ.

**ಅಥಾಪರೆ ಜನಪದಾಃ ದಕ್ಷಿಣಾಪಥವಾಸಿನಃ,**
**ಪಾಂಡ್ಯಾಶ್ಚ ಕೇರಳಾಶ್ಚೈವ ಚೋಲಾಃ ಕುಂತ್ಯಾಸ್ತಥೈವ ಚ,**
**ಶೈಲೂಷಾ ಮೂಷಿಕಾಶ್ಚೈವ ಕುಮಾರಾ ವಾನವಾಸಕಾಃ,**
**ಮಹಾರಾಷ್ಟ್ರಾ ಮಾಹಿಷಿಕಾಃ ಕಳಿಂಗಾಶ್ಚೈವ ಸರ್ವಶಃ.**

---

1. ರಘುವಂಶಂ – 6–53
2. ಭಾಗವತಪುರಾಣ – 10–79–11,12

**ಅಭೀರಾಃ ಸಹ ವೈಶಿಖ್ಯಾ ಅಧಖ್ಯಾ ಶಬರಾಶ್ಚ ಯೇ,**
**ಪುಲಿಂದಾ ವಿಂಧ್ಯಮಾಲೇಯಾ ವೈದರ್ಭಾ ದಂಡಕೈಸ್ಸಹ,**
**ಪೌರಿಕಾ ಮೌಲಿಕಾಶ್ಚೈವ ಅಶ್ಮಕಾ ಭೋಗವರ್ಧನಾಃ !,**
**ನೈಷಿಕಾಃ ಕುಂತಲಾ ಆಂಧ್ರಾ ಅಧ್ಬಿದಾ ವನದಾರಕಾಃ !.** [1]

ಇಲ್ಲಿ ದಕ್ಷಿಣಾಪಥದಲ್ಲಿನ ಜನಪದಗಳಲ್ಲಿ ಪುಂಡ್ರ, ಕೇರಳ, ಗೋಲಾಂಗೂಲ, ಶೈಲೂಷಿ, ಮೂಷಿಕ, ಕುಸುಮ, ವಾನಕ, ಮಹರಾಷ್ಟ್ರ, ಮಾಹಿಷ್ಮ, ಕಳಿಂಗ, ಅಭೀರ, ಪುಲಿಂದ, ವಿಂಧ್ಯ, ವೈದರ್ಭ, ಶೌರಿಕ, ಮೌಲಿಕ, ಅಶ್ಮಕ, ನೈಶಿಕ, ಕುಂತಲ ರಾಜ್ಯಗಳ ಜೊತೆಯಲ್ಲಿ ಆಂಧ್ರ ಶಬ್ದವು ಕೂಡಾ ಪ್ರಯೋಗವಾಗಿದೆ.

ವಾತ್ಸ್ಯಾಯನ ಕಾಮಸೂತ್ರಗಳಿಗೆ ವ್ಯಾಖ್ಯಾನ ರಚಿಸಿದ ಜಯಮಂಗಳನು ಆಂಧ್ರವಿಷಯ ಕರ್ನಾಟಕ ವಿಷಯಕ್ಕೆ ಪೂರ್ವದಿಕ್ಕಿನಲ್ಲಿದೆ ಯೆಂದು ಹೇಳಿದನು.

"ನರ್ಮದಾಯಾ ದಕ್ಷಿಣೇನ ದೇಶೋ ದಕ್ಷಿಣಾಪಥಃ, ತತ್ರ ಕರ್ನಾಟ ವಿಷಯಾತ್ ಪೂರ್ವೇಣಾಂಧ್ರ ವಿಷಯಃ, ನರ್ಮದಾ ಕರ್ನಾಟ ವಿಷಯಯೋರ್ಮಧ್ಯೇ ಮಹಾರಾಷ್ಟ್ರ ವಿಷಯಃ, ಕರ್ನಾಟ ವಿಷಯಾದ್ದಕ್ಷಿಣೇನ ದ್ರವಿಡ ವಿಷಯಃ, ಕೊಂಕಣ ವಿಷಯಾತ್ ಪೂರ್ವೇಣ ವನವಾಸ ವಿಷಯಃ." [2]

ವೆಲನಾಟಿ ಎರಡನೆ ರಾಜೇಂದ್ರಚೋಳನ ಸಂಡೂರು ಶಾಸನದಲ್ಲಿ ಪೂರ್ವಸಮುದ್ರ, ಶ್ರೀಶೈಲಪರ್ವತ, ಮಹೇಂದ್ರಗಿರಿಗಳಿಗೆ, ಕಾಳಹಸ್ತಿ ಬೆಟ್ಟಗಳ ಮಧ್ಯದಲ್ಲಿರುವ ಭೂಭಾಗವನ್ನು ಆಂಧ್ರವಿಷಯ ವೆಂದು ಬರೆಯಲಾಗಿದೆ. ಇಲ್ಲಿ ವಿಷಯವೆಂದರೆ ಪ್ರದೇಶ ಎಂದು ಅರ್ಥ.

**ಪೂರ್ವಾಂಭೋನಿಧಿ ಕಾಳಹಸ್ತಿ ಶಿಖರೀ ಶ್ರೀಮನ್ಮಹೇಂದ್ರಾಚಲ,**
**ಶ್ರೀಶೈಲೇಶ್ವರ ವಲಯೂಕೃತಾಂಧ್ರವಿಷಯಂ ಶ್ರೀರಾಜರಾಜನ್ವಯಃ.** [3]

ಬೃಹತ್ಸಂಹಿತೆಯಲ್ಲಿ ಕೂರ್ಮವಿಭಾಗ

ಶ್ರೀವರಾಹಮಿಹಿರಾಚಾರ್ಯವಿರಚಿತವಾದ ಬೃಹತ್ಸಂಹಿತೆಯಲ್ಲಿ ಭಾರತದೇಶವನ್ನು ಒಂದು ಕೂರ್ಮಕ್ಕೆ ಹೋಲಿಸುತ್ತಾ ಕೂರ್ಮಕ್ಕೆ ಇರುವ ಹಾಗೆ ಒಂಭತ್ತು ದಿಕ್ಕುಗಳಲ್ಲಿ ಭಾರತದೇಶದಲ್ಲಿನ ವಿವಿಧ ಪರ್ವತ, ನಗರ, ಪಟ್ಟಣಾದಿಗಳನ್ನು ಸ್ಮರಿಸಿದ್ದಾರೆ. ಇದರಲ್ಲಿ?

**ಮಧ್ಯದೇಶವಿಭಾಗಃ –** (ಭಾರತದೇಶ ಒಂದು ಕೂರ್ಮದಂತೆ ಇದೆಯೆಂದು ಗ್ರಹಿಸಿದರೆ ಅದರ ಎತ್ತರವಾದ ಮಧ್ಯದೇಶದಲ್ಲಿ ಇರುವ ಗಿರಿ, ನಗರ, ಜನಪದಾದಿಗಳ ಪರಾಮರ್ಶೆ ಇಲ್ಲಿ ಹೇಳಲಾಗಿದೆ.)

**ಭದ್ರಾರಿಮೇದಮಾಂಡವ್ಯಸಾಲ್ವನೀಪೋಜ್ಜಿಹಾನಸಂಖ್ಯಾತಾಃ,**
**ಮರುವತ್ಸಘೋಷಯಾಮುನಸಾರಸ್ವತಮತ್ಸ್ಯಮಾಧ್ಯಮಿಕಾಃ,**
**ಮಾಥುರಕೋಪಜ್ಯೋತಿಷಧರ್ಮಾರಣ್ಯಾನಿ ಶೂರಸೇನಾಶ್ಚ,**
**ಗೌರಗ್ರೀವೋದ್ದೇಹಿಕಪಾಂಡುಗುಡಾಶ್ವತ್ಥಪಾಂಚಾಲಾಃ.**

---

1. ಮಾರ್ಕಂಡೇಯಪುರಾಣ, 54-45-48
2. ಕಾಮಸೂತ್ರ ವಾತ್ಸಾಯನ 2-5-28,30,31 ಜಯಮಂಗಳ ವ್ಯಾಖ್ಯಾ ಪುಟ 289,290
3. ವೆಲನಾಟಿ ಇಮ್ಮಡಿ ರಾಜೇಂದ್ರಚೋಳನ ಸಂಡೂರ ಶಾಸನ-ಶ್ಲೋಕ 68

**ಸಾಕೇತಕಂಕಕುರುಕಾಲಕೋಟಿಕುಕುರಾಶ್ಚ ಪಾರಿಯಾತ್ರನಗಃ,**
**ಔದುಂಬರಕಾಪಿಷ್ಠಲಗಜಾಹ್ವಯಾಶ್ಚೇತಿ ಮಧ್ಯಮಿದಮ್.** 1

ಪೂರ್ವದೇಶವಿಭಾಗ: (ಇಲ್ಲಿ ಪೂರ್ವಘಟ್ಟಗಳಲ್ಲಿರುವ ಆಂಧ್ರ ಪ್ರಾಂತ್ಯಕ್ಕೆ ಸೇರಿದ ಪ್ರದೇಶಗಳನ್ನಾರಂಭಿಸಿ ಈಶಾನ್ಯ ಭಾರತದ ವರೆಗು ಇರುವ ಪ್ರದೇಶಗಳನ್ನು ಸ್ಮರಿಸಿದ್ದಾರೆ. ಈ ಕ್ರಮದಲ್ಲಿ ಮೊತ್ತಮೊದಲು ಆಂಧ್ರದೇಶದಲ್ಲಿನ ಅಂಜನಗಿರಿ, ವೃಷಭಧ್ವಜ, ಪದ್ಮಗಿರಿ, ಮಾಲ್ಯವದ್ಗಿರಿಗಳನ್ನು ಸ್ಮರಿಸಿದ್ದಾರೆ.)

**ಅಥ ಪೂರ್ವಸ್ಯಾಮಂಜನವೃಷಭಧ್ವಜಪದ್ಮಮಾಲ್ಯವದ್ಗಿರಯಃ,**
**ವ್ಯಾಘ್ರಮುಖಸುಹ್ಮಕರ್ವಟಚಾಂದ್ರಪುರಾಃ ಶೂರ್ಪಕರ್ಣಾಶ್ಚ.**
**ಖಸಮಗಧಶಿವಿರಗಿರಿಮಿಥಿಲಸಮತಟೋಡ್ರಾಶ್ವವದನದನ್ತುರಕಾಃ,**
**ಪ್ರಾಗ್ಜ್ಯೋತಿಷಲೌಹಿತ್ಯಕ್ಷೀರೋದಸಮುದ್ರಪುರುಷಾದಾಃ.**
**ಉದಯಗಿರಿಭದ್ರಗೌಡಕಪೌಂಡ್ರೋತ್ಕಲಕಾಶಿಮೇಕಲಾಂಬಷ್ಠಾಃ,**
**ಏಕಪದತಾಮ್ರಲಿಪ್ತಕಕೋಸಲಕಾ ವರ್ಧಮಾನಶ್ಚ** [2]

ಆಗ್ನೇಯದಿಶಾಯಾಂ ಸ್ಥಿರದೇಶನಾಮಾನಿ – (ಹೀಗೆ ಆಗ್ನೇಯ ದಿಕ್ಕಿನಲ್ಲಿರುವ ಕಿಷ್ಕಿಂಧೆಯನ್ನು ಸ್ಮರಿಸಿದ್ದಾರೆ)

**ಆಗ್ನೇಯ್ಯಾಂ ದಿಶಿ ಕೋಸಲಕಲಿಂಗವಂಗೋಪವಂಗಜಠರಾಂಗಾಃ,**
**ಶೌಲಿಕವಿದರ್ಭವತ್ಸಾಂಧ್ರಚೇದಿಕಾಶ್ಚೋರ್ಧ್ವಕಂಠಾಶ್ಚ.**
**ವೃಷನಾಲಿಕೇರಚರ್ಮದ್ವೀಪಾ ವಿಂಧ್ಯಾಂತವಾಸಿನಸ್ತ್ರಿಪುರೀ,**
**ಶ್ಮಶ್ರುಧರಹೇಮಕುಡ್ಯವ್ಯಾಲಗ್ರೀವಾ ಮಹಾಗ್ರೀವಾಃ.**
**ಕಿಷ್ಕಿಂಧಕಂಟಸ್ಥಲನಿಷಾದರಾಷ್ಟ್ರಾಣಿ ಪುರಿಕದಾಶಾರ್ಣಾಃ,**
**ಸಹ ನಗ್ನಪರ್ಣಶಬರೈರಾಶ್ಲೇಷಾದ್ಯೇ ತ್ರಿಕೇ ದೇಶಾಃ.** [3]

ದಕ್ಷಿಣದೇಶಾಯಾಂ ಸ್ಥಿತದೇಶನಾಮಾನಿ (ದಕ್ಷಿಣ ದಿಕ್ಕಿಗೆ ಲಂಕಾಪುರೀ ಸ್ಮರಣೆ ಇದೆ. ಆ ಕ್ರಮದಲ್ಲಿಯೇ ಪೂರ್ವಕರಾವಳೀಪ್ರಾಂತ್ಯದ ಪರ್ವತಶ್ರೇಣಿಯಾದ ಮಹೇಂದ್ರಗಿರಿ ಪರ್ವತ ದಕ್ಷಿಣಭಾಗ ಪಂಕ್ತಿಗಳನ್ನು ಸಹಾ ಸ್ಮರಿಸಿದ್ದಾರೆ.)

**ಅಥ ದಕ್ಷಿಣೇನ ಲಂಕಾ ಕಾಲಾಜಿನಸೌರಿಕೀರ್ಣತಾಲಿಕಟಾಃ,**
**ಗಿರಿನಗರಮಲಯದರ್ದುರಮಹೇಂದ್ರಮಾಲಿಂದ್ಯಭರುಕಚ್ಛಾಃ.**
**ಕಂಕಟಕಂಕಣವನವಾಸಿಶಿಬಿಕಫಣಿಕಾರಕೋಂಕಣಾಭೀರಾಃ,**
**ಆಕರವೇಣಾವರ್ತಕದಶಪುರಗೋನರ್ದಕೇರಲಕಾಃ.**
**ಕರ್ಣಾಟಮಹಾಟವಿಚಿತ್ರಕೂಟನಾಸಿಕ್ಯಕೋಲ್ಲಗಿರಿಚೋಲಾಃ,**
**ಕ್ರೌಂಚದ್ವೀಪಜಟಾಧರಕಾವೇರ್ಯೋ ರಿಷ್ಯಮೂಕಶ್ಚ.**
**ವೈದೂರ್ಯಶಂಖಮುಕ್ತಾಽತ್ರಿವಾರಿಚರಧರ್ಮಪಟ್ಟನದ್ವೀಪಾಃ,**
**ಗಣರಾಜ್ಯಕೃಷ್ಣವೇಲ್ಲರಪಿಶಿಕಶೂರ್ಪಾದ್ರಿಕುಸುಮನಗಾಃ.**

---

1. ಬೃಹತ್ಸಂಹಿತಾ 14–2,3,4
2. ಬೃಹತ್ಸಂಹಿತಾ 14–5,6,7
3. ಬೃಹತ್ಸಂಹಿತಾ 14–8,9,10

**ತುಂಬವನಕಾರ್ಮಣೇಯಕಯೋಮ್ಯೋದಧಿತಾಪಸಾಶ್ರಮಾ ಋಷಿಕಾಃ,**

**ಕಾಂಚೀಮರುಚೀಪಟ್ಟನಚೇರ್ಯಾರ್ಯಕಸಿಂಹಲಾ ಋಷಭಾಃ,**

**ಬಲದೇವಪಟ್ಟನಂ ದಂಡಕಾವನತಿಮ್ಗಿಲಾಶನಾ ಭದ್ರಾಃ,**

**ಕಚ್ಛೋಥ ಕುಂಜರದರೀ ಸತಾಮ್ರಪರ್ಣೀತಿ ವಿಜ್ಞೇಯಾಃ.** [1]

**ಶ್ರೀವೇಂಕಟಾಚಲಮಾಹಾತ್ಮ್ಯೆ**

ತಿರುಮಲ ಗಿರಿಗಳಿಗಿರುವ ಹೆಸರುಗಳಲ್ಲಿ ಅಂಜನಾದ್ರಿ – ಆ ಹೆಸರು ಬರಲು ಬ್ರಹ್ಮಪುರಾಣದಲ್ಲಿ ಹೇಳಲ್ಪಟ್ಟ ಕಾರಣ.

ಆಧುನಿಕಕಾಲದಲ್ಲಿ ತಿರುಮಲ ಗಿರಿಗಳೆಂದು ಪ್ರಸಿದ್ಧಿಯಾದ ಶ್ರೀ ವೇಂಕಟೇಶ್ವರನ ದಿವ್ಯಕ್ಷೇತ್ರ ಅನೇಕ ಕಾರಣಗಳಿಂದ ಅನೇಕ ದಿವ್ಯನಾಮಗಳಿಂದ ಕರೆಯಲ್ಪಡುತ್ತಿದೆ. ನಿಜಕ್ಕೆ ಈ ಪರ್ವತರಾಜವು ಮೇರುಪರ್ವತನ ಮಗನಾದ ಸುಮೇರು ಶಿಖರಾಚಲವೆಂದು ಹಲವು ಪುರಾಣಗಳು ಸಾರುತ್ತಿವೆ. ಇವುಗಳಲ್ಲಿ ಬ್ರಹ್ಮಪುರಾಣಾಂತರ್ಗತ ಶ್ರೀವೇಂಕಟಾಚಲಮಾಹಾತ್ಯ ಪ್ರಸಂಗದಲ್ಲಿ ಜಾಂಬೂನದನದೀ (ಸುವರ್ಣಮುಖೀ ನದೀ) ತೀರದಲ್ಲಿರುವ ಈ ಕ್ಷೇತ್ರಕ್ಕೆ ಇರುವ ವಿವಿಧ ನಾಮಗಳಲ್ಲಿ ವೇಂಕಟಪರ್ವತ, ನಾರಾಯಣಗಿರಿ, ವೃಷಾದ್ರಿ, ವೃಷಭಗಿರಿ, ಅಂಜನಾದ್ರಿ, ಶೇಷಾದ್ರಿ ಎನ್ನುವ ಹೆಸರುಗಳು ಹೇಗೆ ಬಂದವು ಎನ್ನುವ ವಿಷಯವು ಹೀಗೆ ವರ್ಣಿಸಲ್ಪಟ್ಟಿದೆ.

**ಶೃಣು ರಾಜನ್! ಪ್ರವಕ್ಷ್ಯಾಮಿ ವೇಂಕಟಾಛಲವೈಭವಮ್,**
**ತಸ್ಯಾಽಗತಿಂ ಪ್ರವಕ್ಷ್ಯಾಮಿ ದೇವಸ್ಯಾಪಿ ಮಹಾತ್ಮನಃ,**
**ಮೇರೋಃ ಪುತ್ರೋ ಮಹಾಶೈಲೋ ಜಾಂಬೂನದನದೀತಟೇ,**
**ಯೋಜನತ್ರಯವಿಸ್ತೀರ್ಣಂ ತ್ರಂಶದ್ಯೋಜನಮಾಯತಃ.**
**ವೇಂಕಟೇತಿ ಕೃತಂ ನಾಮ ಪಿತ್ರಾ ತಸ್ಯ ಮಹಾತ್ಮನಃ,**
**ಅಮೃತಸ್ಯೇಂದಿರಾಯಾಶ್ಚ ಯತೋ ವಿಸ್ತಾರಕಾರಕಃ.**
**ಜೀವಾನಾಂ ಭಾರತೇ ವರ್ಷೇ ತತೋಽಯಂ ಗುಣನಾಮಕಃ,**
**ನಿರ್ದೋಷ ವಿಷ್ಣೋರಯನಂ ನಾರಾಯಣಮಿಮಂ ವಿದುಃ.**
**ವೃಷಸ್ಯ ಭರಣಾತ್ತೋಷಾದ್ವೃಷಭಂ ಚಾಪಿ ತಂ ವಿದುಃ!,**
**ಪ್ರಸವಾದಂಜನಾ ದೇವ್ಯಾಃ ವಿದುರಂಜನಸಂಜ್ಞಕಮ್,**
**ಸಶೇಷಾಗಮನಶ್ಚಾಪಿ ಶೇಷಾದ್ರಿಂ ಪ್ರಾಹುರುತ್ತಮಾಃ.** [2]

**"**ಎಲೈ ರಾಜನೇ! ವೇಂಕಟಾಚಲಮಾಹಾತ್ಮ್ಯವನ್ನು ಹೇಳುತ್ತೇನೆ ಏಕಾಗ್ರಚಿತ್ತನಾಗಿ ಕೇಳು. ವೇಂಕಟಾಚಲ ಆವಿರ್ಭಾವ ವೇಂಕಟೇಶನ ಸಾನ್ನಿಧ್ಯ ವಿಶೇಷಗಳನ್ನು ವರ್ಣಿಸುತ್ತೇನೆ. ಸುವರ್ಣಮುಖೀನದಿಯ ದಡದಲ್ಲಿ ಮೂರು ಯೋಜನ ವಿಸ್ತೀರ್ಣ, ಮೂವತ್ತು ಯೋಜನ ಉದ್ದವಿರುವ ಪರ್ವತ ವೊಂದಿದೆ. ಅದು ಮೇರುಪರ್ವತದ ಒಂದು ಭಾಗ (ಮಗ). ಪರ್ವತರಾಜನಾದ ಮೇರು ತನ್ನ ಪುತ್ರನಿಗೆ *ವೇಂಕಟ ಎಂದು ನಾಮಕರಣವನ್ನು ಮಾಡಿದನು. ಈ ಹೆಸರು ಸಾರ್ಥಕವಾಗುವಂತೆ ತನ್ನ ಮಗನ ಭವಿಷ್ಯವನ್ನು ತಿಳಿದು ಆ ಹೆಸರನ್ನಿಟ್ಟನೇನೋ ಎನ್ನಿಸುತ್ತದೆ. ವೇಂಕಟ ಶಬ್ದಕ್ಕೆ ಇಹಪರಗಳನ್ನು ಕೊಡುವವನೆನ್ನುವ ಅರ್ಥವು ಶಬ್ದಶಕ್ತಿಯಿಂದ ಸಿದ್ಧವಾಗುತ್ತದೆ. ಇಲ್ಲಿ **"ವೇಂ"** ಶಬ್ದದಿಂದ ಅಮೃತವು, **"ಕಟ"** ಶಬ್ದದಿಂದ ಐಶ್ವರ್ಯ ಎನ್ನುವ ಅರ್ಥವು ಸಿದ್ಧವಾಗುತ್ತಿವೆ. ಭಾರತವರ್ಷದಲ್ಲಿನ ಸಕಲ

1. ಬೃಹತ್ಸಂಹಿತಾ 14–11–16
2. ಶ್ರೀವೇಂಕಟಾಚಲಮಹಾತ್ಮ್ಯೆ(ಬ್ರಹ್ಮಪುರಾಣಾಂತರ್ಗತ 1–6–10) ದ್ವಿತೀಯಭಾಗ ಪುಟ 2 ತಿ.ತಿ.ದೇ ಮುದ್ರಣ

ಚೇತನರಿಗೆ ತನ್ನಲ್ಲಿರುವ ಭಗವತ್ಸಾನ್ನಿಧ್ಯವು ಪರಿಪೂರ್ಣವಾಗಿರುವುದರಿಂದ ಈ ಪರ್ವತವು ಭಾರತ ಪ್ರಜಗಳಿಗೆ ಇಹಪರಗಳನ್ನು ನೀಡಬಲ್ಲದ್ದಾಗಿದೆ. ತಂದೆಯಿಂದ ಮಾಡಲ್ಪಟ್ಟ ಈ ನಾಮಕರಣವು ಸಾರ್ಥಕವಾಯಿತು. ವೇಂಕಟಾದ್ರಿಯಂತೆ ಇನ್ನಿತರ ವ್ಯವಹಾರ ನಾಮಗಳು ಅನೇಕವು ಈ ಪರ್ವತಕ್ಕೆ ಇವೆ. ಶ್ರೀಮನ್ನಾರಾಯಣ ನಿವಾಸಸ್ಥಾನವಾದ್ದರಿಂದ ನಾರಾಯಣಾದ್ರಿ ಎಂದು, ಈ ಕ್ಷೇತ್ರವನ್ನು ಸೇವಿಸುವವರಿಗೆ ಧರ್ಮಬುದ್ಧಿನ್ನು ನೀಡುವುದರಿಂದ ವೃಷಾದ್ರಿ ಯೆಂದು, ವೃಷಭಾದ್ರಿ ಯೆಂದು (ವೃಷ–ವೃಷಭ ಶಬ್ದಗಳಿಗೆ ಧರ್ಮ ಎನ್ನುವ ಪ್ರಸಿದ್ಧ ಅರ್ಥವಿದೆ), ಹಾಗೆಯೆ ಕೇಸರಿಯ ಪುತ್ರಿಯಾದ ಅಂಜನಾದೇವಿ ಇಲ್ಲಿಯೇ ರಾಮಾಯಣವೀರನಾದ ಶ್ರೀಆಂಜನೇಯನನ್ನು ಪಡೆದಿದ್ದ ಕಾರಣ ಆಕೆಯ ಹೆಸರಿನ ಮೇಲೆ ಅಂಜನಾದ್ರಿ ಯೆಂದು ಕರೆಯಲ್ಪಡುತ್ತಿದೆ. ಹಾಗೆಯೆ, ಈ ಪರ್ವತವು ಸಹಸ್ರಶಿರಸ್ಕನಾದ ಆದಿಶೇಷನಿಂದ ಸುತ್ತುವರಿಯಲ್ಪಟ್ಟಿದ್ದರಿಂದ ಶೇಷಾದ್ರಿ ಯೆಂದು ಕರೆಯಲ್ಪಡುತ್ತಿದೆ.

**ಅಂಜನಾದ್ರಿಯ ಕುರಿತಾದ ವಿವಿಧ ಪುರಾಣಗಳು**

ತಿರುಮಲ ಗಿರಿಗಳಿಗೆ ಇರುವ ಹೆಸರುಗಳಲ್ಲಿ ಅಂಜನಾದ್ರಿ ಎನ್ನುವ ಹೆಸರು ಮೊದಲನೆಯ ಹೆಸರು ಎಂದು, ಪ್ರಸಿದ್ಧವಾದ ನಾಮವೆಂದು ಬಹಳ ಪುರಾಣಗಳಲ್ಲಿ ಇದ್ದರೂ ಪದ್ಮಪುರಾಣದಲ್ಲಿರುವ ಎರಡು ಪ್ರಸಂಗಗಳನ್ನು ಇಲ್ಲಿ ಉದಹರಿಸಲ್ಪಡುತ್ತಿವೆ.

ಶ್ರೀವೇಂಕಟಾಚಲವನ್ನು ದರ್ಶಿಸಿದವರಲ್ಲಿ ಮೊದಲಿಗೆ ಹೇಳಬೇಕಾದವರು ಮಹರ್ಷಿ ಶ್ರೀಶುಕರು. ಇವರು ತಿರುಶುಕನೂರು (ಇಂದಿನ ತಿರುಚಾನೂರು)ನಲ್ಲಿ ಪದ್ಮಾವತೀ ಅಮ್ಮನವರನ್ನು ಸೇವಿಸಿ ಅಲ್ಲಿಂದ ರಮ್ಯಾತಿರಮ್ಯವಾದ ಶ್ರೀವೇಂಕಟಾಚಲ ದಿವ್ಯಕ್ಷೇತ್ರವನ್ನು ಕಂಡರು ಎಂದು ಹೇಳುವ ಸಂದರ್ಭದಲ್ಲಿ ಈ ಬೆಟ್ಟವನ್ನು ಅಂಜನಗಿರಿ, ಅಂಜನಾಚಲ ವೆಂದು ಪ್ರಸ್ತಾವಿಸಿದ್ದಾರೆ. ಇದು ಗಮನಿಸ ಬೇಕಾದ ವಿಷಯ. ಹಾಗೆಯೆ ನಾರಾಯಣಾದ್ರಿ ಎಂದು ವರ್ಣಿಸಲ್ಪಡುವ ಸಂದರ್ಭದಲ್ಲಿಯೂ ಸಹಾ ಈ ಪರ್ವತವನ್ನು ಅಂಜನಗಿರಿ ಯೆಂದು ಹೇಳುತ್ತಾ ಈ ಅಂಜನಗಿರಿಯ ತಟದಲ್ಲಿ ಸ್ವಾಮಿಪುಷ್ಕರಿಣಿ ಇದೆ ಎಂದು, ಅಲ್ಲಿ ಸ್ನಾನಮಾಡಿದವರಿಗೆ ಸಿಗುವ ಫಲವನ್ನೂ ಸಹಾ ವರ್ಣಿಸಿದ್ದಾರೆ.

**ಪದ್ಮಪುರಾಣದಲ್ಲಿ**

**ತಸ್ಯ ಸಾನುಮತಃ ಸೋಽಪಿ ಪದಾನಾಶ್ರಿತ್ಯ ಸತ್ವರಃ.**
**ನಿರ್ಝರೇಷ್ವಾಪ್ಲವಂ ಕುರ್ವನ್ ವಿಮಲೋದೇಷ್ವನನ್ಯಧೀಃ, ..........**
**ಅತಂದ್ರಿತೋಂಜನಗಿರಿಂ ಪ್ರಾಪ್ಯ ವಿಪ್ರೋಪವೇಶನಮ್,** [1]

ಸುಂದರವಾದ ತಪ್ಪಲು ಪ್ರಾಂತ್ಯಗಳಿರುವ ಆ ಅಂಜನಾದ್ರಿಯನ್ನು ಸೇರಿದ ಆ ಮುನಿಯು ಅಲ್ಲಿದ್ದ ಪವಿತ್ರಜಲಗಳಿಂದ ಕೂಡಿದ ನದಿಗಳಲ್ಲಿ ಸ್ನಾನ ಮಾಡಿ ಸೋಮಾರಿತನ ವಿಲ್ಲದವನಾಗಿ ಆ ಪರ್ವತ ಪಾದಗಳಲ್ಲಿ ಸಂಚರಿಸಿದನು.

**ಶುಕಪುರಿಯಿಂದ ಶುಕನು ಶೇಷಾಚಲಕ್ಕೆ ಬಂದಿದ್ದು**

**ತತ್ರ ತ್ರಿಷವಣಸ್ನಾನಂ ಕೃತ್ವಾ ವ್ಯಾಸೋರಸೋ ಮುನಿಃ**
.......
**ಉಷಿತ್ವಾ ತ್ರಿದಿನಂ ತತ್ರೋಪಾಸಕಃ ಪರಾಯಣಃ**
**ದ್ರಷ್ಟುಕಾಮೋಽಖಿಲಾಶ್ಚರ್ಯಂ ಪುನರಪ್ಯಂಜನಾಚಲೇ.** [2]

1 ಶ್ರೀವೇಂಕಟಾಚಲಮಹಾತ್ಮ್ಯೆ(ಪದ್ಮಪುರಾಣಾಂತರ್ಗತ 24–35–39) ಪ್ರಥಮಭಾಗ ಪುಟ 206 ತಿ.ತಿ.ದೇ ಮುದ್ರಣ
2. ಶ್ರೀವೇಂಕಟಾಚಲಮಹಾತ್ಮ್ಯೆ(ಪದ್ಮಪುರಾಣಾಂತರ್ಗತ 27–13–18) ಪ್ರಥಮಭಾಗ ಪುಟ 228 ತಿ.ತಿ.ದೇ ಮುದ್ರಣ

ವ್ಯಾಸಪುತ್ರನಾದ ಆ ಮುನಿಯು ಅಲ್ಲಿ ತ್ರಿಷವಣ ಸ್ನಾನವನ್ನು ಮಾಡಿ ಮೂರು ದಿನಗಳ ಕಾಲ ಉಪವಾಸವಿದ್ದು ಕಾಲ ಕಳೆದನು. ಆ ಅಂಜನಾಚಲದಲ್ಲಿರುವ ಆಶ್ಚರ್ಯಗಳನ್ನು ನೋಡಲು ಬಯಸಿದನು.

**ನಾರಾಯಣಾದ್ರಿಯ ವರ್ಣನೆ**

**ಪ್ರಾಚೀನೇ ತಸ್ಯ ದೇಶಸ್ಯ ಸ್ಥಿತೋಂಜನಗಿರೇಸ್ತಟೇ,**
**ತರುಣಾದಿತ್ಯ ಸಂಕಾಶಾಽಖಿಲಾಭೀಷ್ಟದಾ.** [1]

ಪ್ರಾಚೀನವಾದ ಆ ಪ್ರದೇಶದಲ್ಲಿ ಅಂಜನಗಿರಿಯ ತಟದಲ್ಲಿ, ಉದಯಸೂರ್ಯನ ಕಾಂತಿಗೆ ಸಮಾನವಾದ ಸ್ವಾಮಿಪುಷ್ಕರಿಣಿ ಅಭೀಷ್ಟಪ್ರದಾಯಿನಿಯಾಗಿ ಕಂಗೊಳಿಸುತ್ತಿದೆ.

**ಕುಂಜೇಂಜನಗಿರೇಃ ಸ್ವಾಮಿಪುಷ್ಕರಿಣ್ಯಾಪ್ಸು ಯೋ ನರಃ,**
**ಕೃತಾಪ್ಲವಃ ಸಕೃತ್ ಸತ್ಯಂ ಕೃತಕೃತ್ಯೋ ಭವೇನ್ನರಃ.** [2]

ಇಂತಹಾ ಅಂಜನಗಿರಿಯಲ್ಲಿರುವ ಸ್ವಾಮಿಪುಷ್ಕರಿಣಿಯಲ್ಲಿ ಯಾರು ಸ್ನಾನ ಮಾಡುತ್ತಾರೋ ಅವರು ತಮ್ಮ ಕಾರ್ಯಗಳಲ್ಲಿ ಸಾಫಲ್ಯವನ್ನು ಹೊಂದುತ್ತಾರೆ.

**ಸ್ಕಂದಪುರಾಣದಲ್ಲೂ ಈ ಕಥೆಯೇ ಸಂಗ್ರಹವಾಗಿ ಇದೆ.**

ಹೀಗೆ ಈ ವ್ಯಾಸದಲ್ಲಿ ಪ್ರಪಂಚ ಭೌಗೋಳಿಕ ವಿಜ್ಞಾನುಸಾರವಾಗಿ ಇಂದಿನ ತಿರುಮಲ ಗಿರಿಗಳು ಪೂರ್ವಘಟ್ಟಗಳ ಮಧ್ಯಭಾಗದಲ್ಲಿವೆ ಯೆಂದು, ಪುರಾಣ-ಇತಿಯಾಸ-ಶಾಸ್ತ್ರಗಳಲ್ಲಿರುವ ಭೌಗೋಳಿಕ ಪ್ರಸ್ತಾವನೆಗಳಗನುಸಾರವಾಗಿ ಪ್ರಾಚೀನಕಾಲದಿಂದಲೂ ಇಂದಿನ ವರೆಗು ಮಹೇಂದ್ರಗಿರಿಗಳೆಂದರೆ ಪೂರ್ವಘಟ್ಟಗಳಿಗಿರುವ ಪ್ರಸಿದ್ಧ ನಾಮವೆಂದು, ಈ ಮಹೇಂದ್ರಗಿರಿಗಳಲ್ಲಿಯೆ ಇರುವ ಪ್ರದೇಶಗಳಲ್ಲಿ ಆಂಧ್ರ ವಿಷಯವು ಒಂದು ಎಂದೂ, ಈ ಆಂಧ್ರ ವಿಷಯದ ಭಾಗವೇ ಶ್ರೀವೇಂಕಟಾಚಲವೆಂದು, ಈ ಪರ್ವತಕ್ಕೇ ಅಂಜನಗಿರಿ ಯೆಂದು ಪ್ರಸಿದ್ಧನಾಮವಿದೆಯೆಂದು ವಿವರಿಸಲಾಗಿದೆ. ಈ ಸಂದರ್ಭದಲ್ಲಿ ಬ್ರಹ್ಮಾಂಡಪುರಾಣದಲ್ಲಿರುವ ಶ್ರೀ ಆಂಜನೇಯನ ಜನ್ಮವೃತ್ತಾಂತವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಇದೇ ವಿಷಯವು ಶ್ರೀ ಸ್ಕಂದಪುರಾಣ್ದಲ್ಲಿಯೂ ಸಹಾ ಬರುವುದೆಂದು ಸೂಚ್ಯವಾಗಿ ಸ್ಮರಿಸಲಾಗಿದೆ. ಈ ಎಲ್ಲ ಆಧಾರಗಳಿಂದಲೂ ಹನುಮಂತನ ಜನ್ಮಸ್ಥಳ ಎಲ್ಲ ರೀತಿಯಿಂದಲೂ ತಿರುಮಲ ಗಿರಿಗಳಲ್ಲಿರುವ ಅಂಜನಗಿರಿ ಅಥವಾ ಅಂಜನಾದ್ರಿಯೇ ಎಂದು ಹೇಳಲ್ಪಟ್ಟಿದೆ.

*~*~*~*~*~*

---

1 ಶ್ರೀವೇಂಕಟಾಚಲಮಹಾತ್ಮ್ಯ(ಪದ್ಮಪುರಾಣಾಂತರ್ಗತ 32-7) ಪ್ರಥಮಭಾಗ ಪುಟ 257 ತಿ.ತಿ.ದೇ ಪ್ರಕಟನೆ
2. ಶ್ರೀವೇಂಕಟಾಚಲಮಹಾತ್ಮ್ಯ(ಪದ್ಮಪುರಾಣಾಂತರ್ಗತ 32-35) ಪ್ರಥಮಭಾಗ ಪುಟ 260 ತಿ.ತಿ.ದೇ ಪ್ರಕಟನೆ

## ಅಂಜನಾದೇವಿ ಹನುಮಂತನನ್ನು ಎತ್ತಿ ಲಾಲಿಸುತ್ತಿರುವುದು



# 8. ತಿರುಮಲ ಬೆಟ್ಟಗಳು – ಅಂಜನಾದ್ರಿ – ಒಂದು ಪುರಾತತ್ವ ಸಂಶೋಧನೆ

ಶ್ರೀ ವಿಜಯ್ ಕುಮಾರ್ ಜಾದವ್, ಉಪಸಂಚಾಲಕರು (ವಿಶ್ರಾಂತ)
ರಾಜ್ಯ ಪುರಾತತ್ವ ಮತ್ತು ಪ್ರದರ್ಶನಾಲಯ ಶಾಖೆ

**ಉಪೋದ್ಘಾತ :**

**ತಿರುಮಲೆಯ ಬೆಟ್ಟಗಳು:**

ವಿಶ್ವಖ್ಯಾತಿಯನ್ನು ಹೊಂದಿರುವ , ಕಲಿಯುಗವೈಕುಂಠವೆಂದು ಕರೆಯಲ್ಪಡುತ್ತಿರುವ ಶ್ರೀವೇಂಕಟೇಶ್ವರಸ್ವಾಮಿ ಆಲಯವು ಪವಿತ್ರವಾದ ತಿರುಮಲೆಯ ಬೆಟ್ಟಗಳಲ್ಲಿ ನೆಲಗೊಂಡಿದೆ. ಈ ಪ್ರದೇಶವು ಪ್ರತಿನಿತ್ಯ ಭಕ್ತರಿಂದ ಕಂಗೊಳಿಸುತ್ತಿರುತ್ತದೆ. ಈ ಬೆಟ್ಟಗಳು ಶೇಷಾಚಲ, ವೇಂಕಟಾಚಲ, ಅಂಜನಾಚಲ ಮುಂತಾದ ಹೆಸರುಗಳಿಂದ ಸಪ್ತಗಿರಿಗಳು1 ಎಂದು ಕೃತ–ತ್ರೇತ–ದ್ವಾಪರ–ಕಲಿಯುಗಗಳಲ್ಲಿ ಮತ್ತು ಪುರಾತನ ವಾಙ್ಮಯದಲ್ಲಿಯು ಬಹುವಿಧವಾಗಿ ಯುಗಾನುಸಾರವಾಗಿ ಕರೆಯಲ್ಪಡುತ್ತಿವೆ. ಆದರೆ ಸಪ್ತಗಿರಿಗಳೆಂದು ಹೆಸರುವಾಸಿಯಾದ ಬೆಟ್ಟವು ಇದೇ ಎಂದು ಖಚಿತವಾಗಿ ಹೇಳಲು ಭೌತಿಕ ಆಧಾರಗಳು ಇಲ್ಲ.

**ಭೌಗೋಳಿಕ ಸ್ವರೂಪ ಕಾಲನಿರ್ಣಯ:**

ಈ ಪವಿತ್ರವಾದ ತಿರುಮಲ ಬೆಟ್ಟಗಳು ಒಂದು ಅದ್ಭುತವಾದ ಭೌಗೋಳಿಕ ಸ್ವರೂಪಗಳಾಗಿ[2] ಏರ್ಪಟ್ಟಿವೆ. ಇವುಗಳನ್ನು ಜಿಯೊಲಾಜಿಕಲ್ ಸರ್ವೇ ಆಫ್ ಇಂಡಿಯಾ (GSI) ಶೋಧಕರು ಮೊದಲುಬಾರಿಗೆ 1980ರಲ್ಲಿ ಪರಿಶೋಧನೆ ನಡೆಸಿ ಇಲ್ಲಿ ಎರಡು ಮುಖ್ಯವಾದ ಮತ್ತು ಅಪುರೂಪವಾಗಿರುವ ಭೂಗರ್ಭ ಸ್ವರೂಪಗಳನ್ನು ಕಂಡುಹಿಡಿದರು. ಅವೇನೆಂದರೆ ..

(1) ಶಿಲಾತೋರಣ

(2) ಭೂಗರ್ಭ ಶಾಸ್ತ್ರಜ್ಞರ ಪರಿಭಾಷೆಯಲ್ಲಿ "ಎಪಾರ್ಷಿಯನ್ ಅನ್ಕನ್ಫೆರ್ಮಿಟಿ"[3] ಎಂದು ಇದನ್ನು ಕರೆಯಲಾಗುವುದು.

**ಶಿಲಾತೋರಣ:**

ಪ್ರಪಂಚದಲ್ಲಿನ ಬಹಳ ಅಪುರೂಪವಾಗಿ ಸಹಜಸಿದ್ಧವಾಗಿ ಏರ್ಪಟ್ಟಿರುವ ಕಲ್ಲಿನ ತೋರಣವು ನಮ್ಮ ದೇಶದಲ್ಲಿ ತಿರುಮಲೆಯಲ್ಲಿ ಮಾತ್ರ ಕಾಣ ಸಿಗುತ್ತದೆ. ಭೂಗರ್ಭ ತಜ್ಞರ ತಪಾಸಣೆಗಳ ಅನುಸಾರವಾಗಿ ಈ ಶಿಲಾತೋರಣವು 160 ಕೋಟಿ ವರ್ಷಗಳ ಹಿಂದೆ ಹುಟ್ಟಿದೆಯೆಂದು ಭಾವಿಸಲಾಗುತ್ತಿದೆ. ಈ ಶಿಲಾತೋರಣವು 8 ಮೀಟರ್ ಉದ್ದ, 3 ಮೀಟರ್ ಅಗಲದಿಂದ ಕೂಡಿ ತಿರುಮಲ ಬೆಟ್ಟಗಳಲ್ಲಿರುವ ಪವಿತ್ರವಾದ ಚಕ್ರತೀರ್ಥದ ಬಳಿ ಇದೆ.

ಈ ಅನಂತವಿಶ್ವದಲ್ಲಿ ಭೂಮಿಯು ಸರಿಸುಮಾರು 460 ಕೋಟಿ ವರ್ಷಗಳ ಹಿಂದೆ ಹುಟ್ಟಿದೆಯೆಂದು ಭೂಗರ್ಭ ತಜ್ಞರು ಅಂದಾಜು ಹಾಕಿದ್ದಾರೆ. ಈ ಭೂಮಿಯು ವಿವಿಧ ಹಂತಗಳಲ್ಲಿ, ಪದರಗಳಲ್ಲಿ ಪರಿಣಾಮ ಹೊಂದುತ್ತಾ ಏರ್ಪಾಟಾಗಿದೆ. ಈ ಭೂಸ್ವಾಭಾವಿಕ ಹಂತಗಳನ್ನು ವಿಜ್ಞಾನಿಗಳು ಮುಖ್ಯವಾಗಿ 5 ಹಂತಗಳಾಗಿ ವಿಂಗಡಿಸಿದ್ದಾರೆ.[4]ಅವೇನೆಂದರೆ ...

1. (i) Tirupati Sri Venkateswara - page 10 ; (ii) Sri Venkateswara Vaibhavam -page 1
2. International Journal of Engineering Applied Sciences and Technology, 2020 Vol. 4, Issue 11, pages 224-231
3. Eparchian Unconformity at Tirumalai -A Study 4. https://www.britannica.com/science/geologic-history-of-Earth

(1) **ಆರ್ಕಿಯನ್ ಯುಗ** (ಮೊದಲನೆಯ ದಶೆ  ಆರಂಭ ದಿಂದ 2500 ಮಿಲಿಯನ್ ವರ್ಷಗಳ ವರೆಗು)

(2) **ಪ್ರೋಟೆರೋಜೋಯಿಕ್ ದಶೇ** (ಎರಡನೆಯ ದಶೆ 2500 ಮಿಲಿಯನ್ ವರ್ಷಗಳಿಂದ 570 ಮಿಲಿಯನ್ ವರ್ಷಗಳ ನಡುವೆ)

(3) **ಪಾಲಿಯೋಜೋಯಿಕ್ ದಶೆ** (ಮೂರನೆಯ ದಶೆ 570 ಮಿಲಿಯನ್ ವರ್ಷಗಳಿಂದ 245 ವರ್ಷಗಳ ನಡುವೆ)

(4) **ಮೆಸೋಜೋಯಿಕ್ ಯುಗ** (ನಾಲ್ಕನೆಯ ದಶೆ 245 ಮಿಲಿಯನ್ ವರ್ಷಗಳಿಂದ 66 ಮಿಲಿಯನ್ ವರ್ಷಗಳ ನಡುವೆ)

(5) **ಸೆನೋಜೋಯಿಕ್ ಯುಗ** (ಐದನೆಯ ದಶೆ 66 ಮಿಲಿಯನ್ ವರ್ಷಗಳಿಂದ 0.01 ಮಿಲಿಯನ್ ವರ್ಷಗಳ ನಡುವೆ)

ತಿರುಮಲ ಬೆಟ್ಟಗಳು ಮುಖ್ಯವಾಗಿ ಪ್ರೀಕಾಂಬ್ರಿಯನ್ ಕಾಲಕ್ಕೆ ಹೊಂದುವ ಅವಕ್ಷೇಪಣಾ ಶಿಲೆಗಳ ಕ್ವಾರ್ಟ್ಜ್ ಮತ್ತು ಇಂಟರ್ಕಲೇಟೆಡ್ ಷೇಲ್ಸ್ ನಿಂದ ಕೂಡಿವೆ. ಇವುಗಳನ್ನು ಕಡಪ್ಪಾ ಸೂಪರ್ ಗ್ರೂಪ್ ನ ಅಂಗವಾದ ನಗರಿ ಕಾರ್ಟ್ಜೈಟ್ ಎಂದು ಸೂಚಿಸುತ್ತಾರೆ. ಇದು ಪುರಾಣ ಕಲ್ಲಿನವಾರಸತ್ವದ ಉಪಸಮಿತಿಯಾಗಿದೆ. ಇದು ಆರ್ಕಿಯನ್ ಶಿಲೆಗಳ ಮೇಲೆ ಇರುತ್ತದೆ. ಭಾರತದೇಶದಲ್ಲಿನ ಪುರಾತನ ಕಲ್ಲುಗಳು 4500 ಮಿಲಿಯನ್ ವರ್ಷಗಳಷ್ಟು ವಯಸ್ಸನ್ನು ಪಡಿದಿವೆ ಯೆಂದು ಕಂಡುಹಿಡಿಯಲಾಗಿದೆ. ಪ್ರೀಕಾಂಬ್ರಿಯನ್ ಯುಗದಲ್ಲಿ (3.8 ಮಿಲಿಯನ್ ವರ್ಷಗಳಿಂದ 540 ಮಿಲಿಯನ್ ವರ್ಷಗಳ ವರೆಗು) ಎಲ್ಲೆಗಳು ಏರ್ಪಾಡಾಗಿವೆ.

ಭೂಗರ್ಭ ವಿಜ್ಞಾನಿಗಳು ತಿರುಮಲ ಘಟ್ಟಗಳನ್ನು ಅವರ ಪಾರಿಭಾಷಿಕ ಪದ **"ಎಪಾರ್ಚಿಯನ್ ಅನ್ ಕನ್ಫರ್ಮಿಟಿ"** ಎನ್ನುವ ಪದದಿಂದ ಸೂಚಿಸುತ್ತಾರೆ. ಈ ಘಟ್ಟಗಳು ರಾಷ್ಟ್ರೀಯ ಭೌಗೋಳಿಕ ಪುರಾತತ್ವ ಸ್ಮಾರಕ ಚಿಹ್ನೆ ಯೆಂದು ಪರಿಗಣಿಸಿದ್ದಾರೆ. ಇದು ಸ್ಟ್ರಾಟ್ ಗ್ರಾಫಿಕ್ ಪ್ರಾಮುಖ್ಯದ ಪ್ರಧಾನವಾದ ನಿಲುಗಡೆ. ಇದು ಭೂಮಿಯ ಕ್ರಸ್ಟ್ ನಲ್ಲಿನ ಕಲ್ಲಿನ ಪದರಗಳಲ್ಲಿ 500 ಮಿಲಿಯನ್ ವರ್ಷಗಳ ವಿರಾಮವನ್ನು (Gap) ಸೂಚಿಸುತ್ತಿದೆ.

**ತಿರುಪತಿ ಎಪಾರ್ಚಿಯನ್ ಅನಾನುಕೂಲತೆ**:

- ನೋಟಿಫೈಡ್ ನೇಷನ್ ಜಿಯೋ – ಹೆರಿಟೇಜ್ ಮಾನ್ಯುಮೆಂಟ್ ಎನ್ನುವುದು ವ್ಯೂಹಾತ್ಮಕ ಪ್ರಾಧಾನ್ಯವುಳ್ಳ ಮುಖ್ಯವಾದ ನಿಲುಗಡೆ.
- ಇದು ಭೂಮಿಯ ಭೌಗೋಳಿಕ ಇತಿಹಾಸದಲ್ಲಿ ಆಕಸ್ಮಿಕವಾಗಿ ಆದ ಪ್ರಶಾಂತತೆಯ ಕಾಲವನ್ನು ಸೂಚಿಸುತ್ತದೆ.
- ಭೂಮಿಯ ಕ್ರಸ್ಟ್ ನಲ್ಲಿ ಕಲ್ಲಿನ ಪದರಗಳ ನಿರ್ಮಾಣದಲ್ಲಿ ಮಾರ್ಪಾಡುಗಳು ಮತ್ತು ಅವುಗಳ ನಿಲುಗಡೆಗಳು. ಇದು ಆಂಧ್ರಪ್ರದೇಶ್ ನಲ್ಲಿನ ಚಿತ್ತೂರು ಜಿಲ್ಲೆಯಲ್ಲಿನ ತಿರುಪತಿ ತಿರುಮಲ ಘಾಟ್ ರೋಡ್ ನಲ್ಲಿ ಕಡಿದಾಗಿ ಕಾಣುವ ಸಹಜ ಜಲಧಾರೆಗಳು, ರಹದಾರಿಯ ಮಚ್ಚೆಗಳು ಮತ್ತು ಕಣಿವೆಗಳ ಬಳಿ ಕಾಣಿಸುತ್ತವೆ.
- ಭಾರತದೇಶದ ಬೇಸಿನ್ ನೆಲಮಾಳಿಗೆ ಸುಮಾರು 2500 ಮಿಲಿಯನ್ ವರ್ಷಗಳಷ್ಟು ಹಳೆಯದಾದ ಒಂದು ನಿರ್ಮಾಣ.
- ಕಡಪ್ಪಾ ಬೇಸಿನ್ ಸುಮಾರು 1700 ಮಿಲಿಯನ್ ವರ್ಷಗಳಷ್ಟು ಪುರಾತನವಾದದ್ದು ಮತ್ತು ನೆಗರಾ ಕಟ್ಜೈಟ್ ಸ್ವಲ್ಪವಾಗಿರುವುದು.
- ಚಿಕ್ಕ ವಯಸ್ಸು 1,500 ಮಿಲಿಯನ್ ವರ್ಷಗಳು. ನೆಲಮಾಳಿಗೆ ಮತ್ತು ಅವಕ್ಷೇಪಣಗಳ ನಡುವೆ ಸುದೀರ್ಘವಾದ ಅಂತರವಿದೆ.
- ರಾಕ್ಸ್‌ಗಳನ್ನು ಎಪಾರ್ಕಿಯನ್ ಅನ್ಕನ್ಫಾರ್ಮಿಟೀ ಎನ್ನುತ್ತಾರೆ.

**ಅಂಜನಾದ್ರಿಯನ್ನು ನಿರ್ಣಯಿಸಲು ಪುರಾತತ್ವ ಆಧಾರಗಳ ಪರಿಶೀಲನೆ:**

ಇತಿಹಾಸಕಾರನಿಗೆ ಪುರಾತತ್ವ ಶಾಸ್ತ್ರವು ಒಂದು ಪ್ರಾಥಮಿಕ ಮೂಲ ಉಪಕರಣ. ಪುರಾತತ್ವ ಮೂಲದ **'ಪ್ರತ್ಯಕ್ಷ'** ಆಧಾರಗಳು. ಏಕೆಂದರೆ ಮಾನವರು ಇವುಗಳನ್ನು ಮಾರ್ಪಾಡುಮಾಡಲು ಸಾಧ್ಯವಾಗದು. ಪುರಾತತ್ವ ಮೂಲಗಳ ಪ್ರಧಾನ ಆಕರಗಳು

ಭೌಗೋಳಿಕ ಅಸ್ತಿತ್ವ, ಶಾಸನಗಳು (ತಾಳೆಗರೆಗಳು, ಮೆಟಲ್ ಬಿರ್ಚ್ ಮತ್ತು ಕಾಗದ), ಸ್ಮಾರಕ ಕಟ್ಟಡಗಳು, ನಾಣ್ಯಗಳು, ಸಾಹಿತ್ಯ (ಇತಿಹಾಸ, ಪುರಾಣಗಳೂ) ಮತ್ತು ಕಲಾಕೃತಿಗಳು.

ನಿರ್ಮಾಣಗಳು, ಮನೆಗಳು, ಗಡಿಗೆಗಳು, ಮುದ್ರೆಗಳು, ಕಲ್ಲುಗಳು ಅಥವಾ ಗೋಡೆಗಳ ಮೇಲಿನ ಬರಹಗಳು ಮತ್ತು ರೇಖಾಚಿತ್ರಗಳು, ಉಪಕರಣಗಳು, ಆಭರಣಗಳು, ಮೂಳೆಗಳು, ಲೋಹದ ತುಣುಕುಗಳು.

**ಶೇಷಾಚಲ ಬೆಟ್ಟಗಳು:**

ದಕ್ಷಿಣ ಆಂಧ್ರಪ್ರದೇಶದ ಪೂರ್ವಘಟ್ಟಗಳಲ್ಲಿನ ಬೆಟ್ಟದ ಸಾಲುಗಳು ಮರಳುಗಲ್ಲುಗಳು ಮತ್ತು ಸುಣ್ಣದಕಲ್ಲುಗಳಿಂದಾದ ಷೇಲ್ಗಳಿಂದ ಕೂಡಿವೆ. ಈ ಪರ್ವತಶ್ರೇಣಿಗಳು ಬಹಳಷ್ಟು ರೇಖಾಂಶ ಕಣಿವೆಗಳಿಂದ ವಿಚ್ಛೇದನ ಗೊಳ್ಳುತ್ತವೆ. ಪಶ್ಚಿಮ ಮತ್ತು ವಾಯುವ್ಯದಿಕ್ಕಿನಲ್ಲಿ ರಾಯಲಸೀಮದ ಮೇಲಿನ ಪ್ರಾಂತ್ಯಗಳು ಮತ್ತು ಈಶಾನ್ಯದಲ್ಲಿ (ಕುಂದೇರು ನದಿಯಿಂದಾದ) ಪಾಂಡ್ಯ ಕಣಿವೆಯನ್ನು ಗಡಿಗಳನ್ನಾಗಿ ಹೊಂದಿವೆ. ಶೇಷಾಚಲ ಬೆಟ್ಟಗಳು ಸುಮಾರು 3,000 ಚದರ ಮೈಲಿ (8,000 ಚದರ ಕಿ.ಮಿ.) ಯಷ್ಟು ದೂರ ಹರಡಿವೆ. ಇವುಗಳ ಸಾಧಾರಣ ಟ್ರೆಂಡ್ ಪೂರ್ವ–ಆಗ್ನೇಯವಾಗಿ ಇರುತ್ತದೆ. ಶೇಷಾಚಲ ಬೆಟ್ಟಗಳು ಉತ್ತರದಲ್ಲಿರುವ ಎರ್ರಮಲ ಶ್ರೇಣಿಯನ್ನು ಕೂಡಿಸಿಕೊಂಡು ೧,೩೦೦ ರಿಂದ ೪,೫೦೦ ಅಡಿಗಳ (೪೦೦ ರಿಂದ ೧,೩೭೦ ಮೀಟರ್) ಎತ್ತರವಿರುತ್ತವೆ. ಅಲ್ಪ ಮಳೆ ಬೀಳುವ ಕಾರಣ ಇಲ್ಲಿನ ಬೆಟ್ಟಗಳ ಇಳಿಜಾರುಗಳಲ್ಲಿ ಅರಣ್ಯಪ್ರಾಂತವು ತುಂಬಾ ಕಡಿಮೆಯಾಗಿ ಇರುತ್ತದೆ. ಪೆನ್ನೇರು ನದಿಯ ಉಪನದಿಗಳು ಈ ಪ್ರಾಂತ್ಯದಲ್ಲಿ ಹರಿಯುತ್ತವೆ.

**ಪುರಾತತ್ವ ಆಧಾರಗಳು**

ಕಲಾಕೃತಿಗಳು, ಪುರಾತನ ಉಪರಿತಲ ಆಧಾರಗಳ ಶೇಖರಣೆ, ಇತಿಹಾಸಪೂರ್ವ ಪ್ರದೇಶಗಳ ಪುರಾತತ್ವ ಉತ್ಖನನಗಳು, ಹಳೆಯ ನಿರ್ಮಾಣಗಳು, ದೇವಾಲಯಗಳು, ಇತರ ಸ್ಮಾರಕ ಕಟ್ಟಡಗಳು ಮತ್ತು ಆವಾಸ ಸ್ಥಳಗಳು, ಪ್ರಾಚೀನವಾದ ಮಣ್ಣಿನ ದಿಬ್ಬಗಳು ಇರುವ ವಾಸ್ತವಸ್ಥಿತಿಯನ್ನು ನಿರೂಪಿಸಲು ನಮಗೆ ಇರುವ ಮುಖ್ಯ ಆಧಾರಗಳು.

ಆದಿಕಾವ್ಯ ಮತ್ತು ಪ್ರಸಿದ್ಧ ಇತಿಹಾಸವಾಗಿ ಪ್ರಸಿದ್ಧಿಯನ್ನು ಹೊಂದಿದ ರಾಮಾಯಣದಲ್ಲಿ ಮಹಾಯೋಧ ಮತ್ತು ಶ್ರೀರಾಮಚಂದ್ರನ ಮಹಾಭಕ್ತ, ಪುರಾಣಪುರುಷನಾದ ಹನುಮಂತನ ಜನ್ಮಸ್ಥಳವನ್ನು ಗುರುತಿಸಲು ಇತಿಹಾಸಪರವಾಗಿಯು, ಪುರಾತತ್ವಪರವಾಗಿಯು ಪರಿಶೀಲನೆ ನಡೆಸುವುದು ಇಲ್ಲಿನ ಪ್ರಧಾನ ಸಮಸ್ಯೆಯಾಗಿದೆ.

* ಸಾಧಾರಣವಾಗಿ ಯಾವುದಾದರೂ ಪ್ರಾಮಾಣಿಕ ಸಮಾಚಾರ ಮತ್ತು ಐತಿಹಾಸಿಕ ವಾಸ್ತವಗಳನ್ನು ಆವಿಷ್ಕಾರಗಳನ್ನು ಪುನರ್ನಿರ್ಮಾಣ ಮಾಡುವುದರಲ್ಲಿ ಪುರಾತತ್ವ ಮೂಲಗಳು ಮಹತ್ವದ ಪಾತ್ರವನ್ನು ಪೋಷಿಸುತ್ತವೆ.

**ತಿರುಮಲ–ಅಂಜನಾದ್ರಿ ಪರಿಸರಗಳಲ್ಲಿ ಆಧುನಿಕ ಮಾನವನ ಪರಿಣಾಮ :**

ಒಂದು ಪ್ರದೇಶ ಅಥವಾ ವ್ಯಕ್ತಿಯ ಯಾವುದಾದರು ಇತಿಹಾಸವನ್ನು ತಿಳಿಯಬೇಕಾದರೆ ಎಲ್ಲ ಸಾಹಿತ್ಯ ಮತ್ತು ಪುರಾತತ್ವ ಪುರಾವೆಗಳನ್ನು ಪರಿಶೀಲಿಸಬೇಕು.[1] ಪೂರ್ವ ಸಾಹಿತ್ಯ ಸಾಕ್ಷ್ಯಗಳ ಎಲ್ಲ ಮಾನವ ಚಟುವಟಿಕೆಗಳೊಂದಿಗೆ ಪುರಾತತ್ವ ಮೂಲಗಳು ಮತ್ತು ಪುರಾತತ್ವ ವಸ್ತುಗಳಿಂದ ಅನುಸಂಧಾನ ಮಾಡಿ ವಿಷಯಗಳನ್ನು ಪರಿಶೀಲಿಸಬೇಕು. ಆದರೆ ಇತಿಹಾಸಕಾರರು ತಿರುಮಲ ಬೆಟ್ಟಗಳ ಪಾದದಲ್ಲಿ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಕೆಲವು ಸಂಶೋಧನಾ ಕಾರ್ಯಗಳನ್ನು ನಡೆಸಿದ್ದಾರೆ.

---

1. (i) Golden Research Thoughts Volume-4, Issue-10 (Pre and Proto Historic Evidences of Human Subsistence in the Talakona Valley)
(ii) Early hunter, Gatherers adaptations in the Tirupati valley, 5-12 & 112.

**ಮೇಲ್ಭಾಗದ ಪ್ರಾಚೀನ ಶಿಲಾಯುಗ ಮತ್ತು ಮೊತ್ತಮೊದಲಿನ ಮಾನವರ ಕುರುಹಗಳು:**

ಹಳೆಯ ಶಿಲಾಯುಗ ದಿಂದ ಆರಂಭಿಸಿ ತಿರುಮಲ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಮಾನವಜಾತಿಯ ಕುರುಹುಗಳು –

ರಾಳ್ಳಕಾಲ್ವ ಮೇಲ್ಭಾಗದ ಪುರಾತನ ಶಿಲಾಯುಗದ ಪುರಾವೆಗಳನ್ನು 1968ರಲ್ಲಿ ಪ್ರೊ. ಎಮ್.ಎಲ್.ಕೆ. ಮೂರ್ತಿ ಅವರು ಬ್ಲೇಡ್ ಮತ್ತು ಬ್ಯೂರಿನ್ ಉದ್ಯಮಕ್ಕೆ ಸೇರಿದ ರಾಳ್ಳಕಾಲ್ವ ಪ್ರವಾಹದ ಬಳಿ ಕಂಡುಹಿಡಿದರು.

**ಮೆಸೋಲಿಥಿಕ್ ಪೀರಿಯಡ್ ರಾಕ್ ಆರ್ಟ್ – ರುದ್ರಗಲತೀರ್ಥ:**

ಇಂದಿಗೂ ತಿರುಮಲ ಬೆಟ್ಟಗಳು ದಟ್ಟವಾದ ಕಾಡಿನಿಂದಲು ಮತ್ತು ಶ್ರೇಣಿ ಗಿಡಗಳಿಂದಲು ತುಂಬಿಕೊಂಡಿದೆ. ಆಳವಾದ ಕಣಿವೆಗಳು, ಎತ್ತರವಾದ ಬೆಟ್ಟಗಳು, ಪವಿತ್ರ ತೀರ್ಥಗಳು ಮತ್ತು ಜಲಸಂಪತ್ತು, ಅನೇಕ ಪಶು ಮತ್ತು ವೃಕ್ಷಜಾತಿಗಳು ಆದಿಮಾನವರನ್ನು ಆಕರ್ಷಿಸಿವೆ. ವಿಶಿಷ್ಟವಾದ ಭೌಗೋಳಿಕ ಸ್ವರೂಪ ಮತ್ತು ಪ್ರದೇಶಗಳ ಕಾರಣದಿಂದಾಗಿ ಈ ಪ್ರಾಂತ್ಯದಲ್ಲಿ ಶಿಸ್ತುಬದ್ಧವಾದ, ಸಮಗ್ರವಾದ ಸಮೀಕ್ಷೆ ಮತ್ತು ಅಧ್ಯಯನವನ್ನು ನಡೆಸಲು ಅಸಾಧ್ಯವಾಗಿದೆ. ಆದರು, ಸಾಹಸಿಗಳಾದ ಮತ್ತು ಟ್ರೆಕ್ಕಿಂಗ್ ಪಟುಗಳಾದ ಸ್ಥಳೀಯ ಯುವಕರಿಂದ ಇತಿಹಾಸಕಾರರಿಗೆ ಕೆಲವು ಪುರಾವೆಗಳು ಲಭ್ಯವಾಗಿವೆ. ಆದರೆ ಇವುಗಳ ಸಂಖ್ಯ ತುಂಬಾ ಕಡಿಮೆ. ಸಾಹಸಿ ಯುವಕರು ತಿರುಮಲ ಕಾಡಿನ ಒಳ ಪ್ರಾಂತ್ಯಗಳನ್ನು ಹೊಕ್ಕಿ ನೋಡಲು ಕೆಲವು ಪುರಾತತ್ವ ಅವಶೇಷಗಳನ್ನು ನೋಡಿದರು. ಪೆಟ್ರೋಗ್ಲಿಫ್ಗಳ ರೂಪದಲ್ಲಿ ಇತಿಹಾಸದ ಪೂರ್ವದಲ್ಲಿ ಬರೆಯಲಾಗಿದ್ದ ರಾಕ್ ಆರ್ಟ್ ಮತ್ತು ಕಲ್ಲುಬಂಡೆಗಳ ಕೆಳಗೆ ಚಿತ್ರಿಸಿರುವ ಕೆಲವು ರೇಖಾಚಿತ್ರಗಳು (ಜಂತುಜಾಲವನ್ನು ಒಳಗೊಂಡ ಪಿಕ್ಟೋಗ್ರಾಫ್ಗಳು) ಕಂಡು ಬಂದಿವೆ. ತಿರುಮಲೆಯಲ್ಲಿ ಪುರಾತನ ಮಾನವರು ನೆಲವೂರಿದ್ದರು ಎನ್ನುವುದಕ್ಕೆ ಇವು ಸಾಕ್ಷಿಗಳಾಗಿವೆ. ತಿರುಪತಿಗೆ ಸಮೀಪದಲ್ಲಿರುವ ತಲಕೋನ ಬೆಟ್ಟದ ಮೇಲೆ ಇರುವ ರುದ್ರಗಲತೀರ್ಥ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಬಂದ ಹಂಪ್ಡ್ ಬುಲ್ ಕೆತ್ತನೆ, ಮತ್ತಿತರ ಜಂತುಗಳ ಚಿತ್ರಗಳು ಮತ್ತು ಚಿಹ್ನೆಗಳು ಕಂಡು ಬಂದಿವೆ. ತಲಕೋನ ಕಾಡಿನಲ್ಲಿರುವ ಜಲಮೂಲಗಳ ಬಳಿ ಕಲ್ಲಿನ ಮೇಲ್ಭಾಗಗಳಲ್ಲಿ ಮತ್ತಷ್ಟು ಪುರಾವೆಗಳು ಇವೆ.

**ಮಲ್ಲಯ್ಯಪಲ್ಲಿಗೆ ಸೇರಿದ ಮೆಗಾಲಿಥಿಕ್ ಪಿಲ್ಲರ್ಡ್ ಡೋಲ್ಮೆನ್[1] (ಬೃಹತ್ ಶಿಲಾಯುಗದ ಸ್ಮಾರಕ ಕಟ್ಟಡ):**

ಚಂದ್ರಗಿರಿ ಕೋಟೆಯಿಂದ 3 ಕಿ.ಮಿ. ದೂರದಲ್ಲಿರುವ ಒಂದು ಚಿಕ್ಕ ಗ್ರಾನೈಟ್ ಬೆಟ್ಟದ ಮೇಲೆ ಮೆಗಾಲಿಥಿಕ್ ಸ್ಮಾರಕ ಚಿಹ್ನೆಯು ಕಾಣಸಿಗುತ್ತದೆ. ಇದು ಕಂಬಗಳಿಂದ ಕೂಡಿದ ಒಂದು ಡೊಲ್ಮೆನ್. ಇದು ಸುಮಾರು ಕ್ರೀ.ಪೂ. 4000 ವರ್ಷಗಳ ಹಿಂದೆ ನಿರ್ಮಾಣವಾದದ್ದು. ದೊಡ್ಡಗಾತ್ರದ ಕ್ಯಾಪ್ಸ್ಟೋನ್ ಯಾವುದೆ ಬೈಂಡಿಂಗ್ ಏಜೆಂಟ್ ಇಲ್ಲದೆನೆ ಮೇಲ್ಭಾಗದಲ್ಲಿ ಕೂಡಿಸಲಾಗಿದೆ. ಈ ಕ್ಯಾಪ್ಸ್ಟೋನ್ ನಿಲ್ಲಲು 8 ಕಂಬಗಳನ್ನು ನಿಲ್ಲಿಸಲಾಗಿದೆ. ಈ ಸ್ಮಾರಕ ಚಿಹ್ನೆಯ ಮತ್ತೊಂದು ವಿಶೇಷತೆ ಯೆಂದರೆ ಕ್ಯಾಪ್ಸ್ಟೋನ್ ಕೆಳಗೆ ಬರೆದಿರುವ ರಾಕ್ ಆರ್ಟ್. ಮಿಶ್ರ ಶಿಲಾಯುಗದಿಂದ ಆರಂಭಿಸಿ ಬೃಹತ್ ಶಿಲಾಯುಗದ ವರೆಗು 100 ಮೇಲ್ಪಟ್ಟ ಶಿಲಾವರ್ಣಚಿತ್ರಗಳು (ರಾಕ್ ಆರ್ಟ್) ತಿರುಪತಿ ಸುತ್ತಮುತ್ತಲು ಕಂಡುಹಿಡಿಯಲಾಗಿದೆ.

**ತಿರುಮಲ ಐಹಾಸಿಕ ಕಾಲ ಸೂಚನೆಗಳು – ಸಂಗಮ ಸಾಹಿತ್ಯದ ಆಕರಗಳು[2]**

ತಿರುಮಲ ಇತಿಹಾಸ ಮತ್ತು ವೇಂಕಟೇಶ್ವರ ಸ್ವಾಮಿ ಆಲಯವನ್ನು ನಾವು ಒಮ್ಮೆ ಪರಿಶೀಲನೆ ಮಾಡಿದರೆ, ಸಂಗಮ ಯುಗದಲ್ಲಿ ಇತಿಹಾಸ ಆರಂಭ ಕಾಲದಲ್ಲಿ ತಮಿಳ ರಾಜ್ಯಕ್ಕೆ ಉತ್ತರದಲ್ಲಿರುವ ಈ ಪ್ರದೇಶವನ್ನು ವಡವೇಂಗಡಂ ಎಂದು ತಮಿಳ ಸಾಹಿತ್ಯದಲ್ಲಿ

1. Proceedings of the A.P.History Congress,19th Session (Evidences of Megalithic Art in Chittoor District) page no, 22-24
2. The Tirumala Temple - page 202

ಹೆಸರಿಸಿದ್ದಾರೆ. ತಮಿಳ ಸಂಪ್ರದಾಯ ಸಾಹಿತ್ಯ, ಸಂಗಂ ಬರಹಗಳು, ತಮಿಳು ಪ್ರಾಂತ್ಯದ ಉತ್ತರ ಗಡಿಯಾದ ವೇಂಗಡಂ ಬಗ್ಗೆ ಕೆಲವು ಸೂಚನೆಗಳಿವೆ. ಇವುಗಳ ಮೇರೆಗೆ ಇದು ಉತ್ತರ ತಮಿಳೇತರ ಪ್ರಾಂತ್ಯವೆಂದು ತಿಳಿದುಬರುತ್ತಿದೆ. ಪ್ರಾಚೀನಕಾಲದ ವೇಂಗಡಂ ಬೆಟ್ಟಗಳ ಮೇಲಿನ ಶ್ರೀ ವೇಂಕಟೇಶ್ವರ ಸ್ವಾಮಿಯನ್ನು ಕುರಿತು ಪರಂಬಿರಾನಾರ್ ಎನ್ನುವ ಘನ ವಿದ್ವಾಂಸನು ತೋಲ್ಕಪ್ಪಿಯಂ ನಲ್ಲಿ ಪ್ರಸ್ತಾಪಿಸಿದ್ದಾರೆ. "ವೇಂಗಡಂ" ಎನ್ನುವ ಪದಕ್ಕೆ ಮಿತಿಮೀರಿದ, ಕತ್ತಲೆಯಲ್ಲಿರುವ ಸಂಪತ್ತು ಎನ್ನುವ ಅರ್ಥಗಳಿವೆ. ಇನ್ನೊಂದು ಅರ್ಥವೆಂದರೆ, ಈ ಪ್ರದೇಶವನ್ನು ದರ್ಶಿಸಿದರೆ ಮಾನವನ ಪಾಪಗಳು ಸುಟ್ಟುಹೋಗುತ್ತವೆ. ಕನಕ್ಕಾಯನಾರ್ ಮಗನಾದ ನಕ್ಕಿರರ್ ಅಹಂ 27ರಲ್ಲಿ ಉತ್ತರ ವೇಂಗಡಂ ಮತ್ತು ಪಾಂಡ್ಯ ವರ್ಣನೆಯಲ್ಲಿ ಆನೆಗಳ ಜಾತಿಗಳು ಈ ಅರಣ್ಯಗಳನ್ನು ಆಕ್ರಮಿಸುವುದನ್ನು ಸೂಚಿಸುತ್ತವೆ.

ತಮಿಳಗಂ ಉತ್ತರದಲ್ಲಿ ವೇಂಗಡಂ ಬಳಿ ಜಾತ್ರೆಗಳು, ಆಚಾರಗಳು ಮತ್ತು ಹಬ್ಬಗಳನ್ನು ನಿರ್ವಹಿಸುವ ಸಂಪ್ರದಾಯವಿದೆಯೆಂದು, ಅಲ್ಲಿನ ಕಾಡು ಜನರು "ಪುಲ್ಲಿ" ಎನ್ನುವವನ ಆಡಳಿತಕ್ಕೊಳಪಟ್ಟಿದ್ದರೆಂದು ತಮಿಳ ಸಂಘಂ (ಕ್ರೀ.ಪೂ. 3ನೆಯ ಶತಮಾನ) ಸಾಹಿತ್ಯದಲ್ಲಿದೆ. ಆ ಕಾಲದಲ್ಲಿ ಈ ಪ್ರದೇಶವನ್ನು "ಪುಲಿಕುಂಡ್ರಂ" ಎಂದು ಕರೆಯುತ್ತಿದ್ದರು. ಚೋಳರ ಕಾಲದಲ್ಲಿ ಈ ಪ್ರಾಂತ್ಯವನ್ನು ಚೋಳಮಂಡಲವೆಂದು ಕರೆಯುತ್ತಿದ್ದರು. ಇದನ್ನು 24 ಭಾಗಗಳಾಗಿ ವಿಂಗಡಿಸಲಾಗಿತ್ತು. ಇವುಗಳಲ್ಲಿ "ವೇಂಗಡ ಕೊಟ್ಟಂ" ಎನ್ನುವುದು ಒಂದ ಭಾಗವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. 1013 ವರ್ಷದ ನಂತರದ ಶಾಸನಗಳಲ್ಲಿ ತಿರುಮಲೆ ಹೆಸರು ಕಾಣಿಸಿಗುತ್ತದೆ.

**ಪ್ರಾರಂಭಿಕ ಐತಿಹಾಸಿಕ ಸೂಚನೆ** [1]

ಆಳ್ವಾರುಗಳ ಪಾಶುರಗಳು (4 ಸಾವಿರ ಪ್ರಬಂಧಗಳು) "ನಾಲಾಯಿರ ದಿವ್ಯಪ್ರಬಂಧ" (4 ಸಾವಿರ ಪ್ರಬಂಧಗಳು) ಸಾರ. ದಿವ್ಯಪ್ರಬಂಧವು ದಕ್ಷಿಣ ಭಾರತದೇಶದಲ್ಲಿದ್ದ 12 ಮಂದಿ ಆಳ್ವಾರುಗಳ (ಸಾಧುಗಳ) ರಚನೆಯಾಗಿದೆ (5–8 ಶತಮಾನ). 12 ಆಳ್ವಾರುಗಳಲ್ಲಿ ಹತ್ತು ಆಳ್ವಾರುಗಳು "ನಾಳೈರ ದಿವ್ಯಪ್ರಬಂಧ" ಎನ್ನುವ ಗ್ರಂಥದಲ್ಲಿ ಒಟ್ಟಾರೆ 202 ಶ್ಲೋಕಗಳಲ್ಲಿ ವೇಂಗಡಂ (ತಿರುವೇಂಗಡಂ) ಕುರಿತು ಹಾಡಿದ್ದಾರೆ ಅಥವಾ ಪ್ರಸ್ತಾವಿಸಿದ್ದಾರೆ. ಇದು ವೇಂಗಡಂ ಜೊತೆಗೆ ಅಥವಾ ಪೂರ್ವ ಆಳ್ವಾರುಗಳ ಪದ್ಯಗಳಲ್ಲಿ ಮತ್ತೆ ಮತ್ತೆ ಹೇಳಲಾಗಿದೆ. 3–4 ಶತಮಾನಗಳ ಮಧ್ಯದಲ್ಲಿ ತಿರುವೇಂಗಡಂ ಮಂಗಳಾಶಾಸನ 8ನೆ ಶತಮಾನದಲ್ಲಿ ನಂತರ–ಪಲ್ಲವರ ಕಾಲದಲ್ಲಿದ್ದ ಆಳ್ವಾರುಗಳು ಭಾರತದೇಶದಲ್ಲಿನ ಪ್ರಧಾನ ವೈಷ್ಣವ ಕ್ಷೇತ್ರಗಳು 108 ದಿವ್ಯದೇಶಗಳ ಮೇಲೆ ಅಸಂಖ್ಯಾಕ ಪದ್ಯಗಳನ್ನು ರಚಿಸಿದ್ದಾರೆ ಮತ್ತು ಹಾಡಿದ್ದಾರೆ. ಇವರು ವೇಂಗಡಂ ಬಳಿಯಿದ್ದ ಭಗವಂತನ ಚಿತ್ರ ಕುರಿತು ಹಾಡಿದ್ದಾರೆ ಆದರೆ ಆಲಯ ಕುರಿತು ವಿಶೇಷವಾಗಿ ಹೇಳಲಿಲ್ಲ. ಹಾಡುಗಳಲ್ಲಿ ಸೂಚಿಸಿದಂತೆ ಅಲ್ಲಿ ಒಂದು ಹೊರಾಂಗಣ ಮಂಡಪ ಮತ್ತು ಒಂದು ಚಿಕ್ಕ ಆವರಣವಿತ್ತೆಂದು ನಾವು ಭಾವಿಸಬಹುದು. ನಮ್ಮಾಳ್ವಾರ್ ಜನನ ಮರಣ ಪ್ರಾಂತಗಳಲ್ಲಿರುವ ಸಂಸಾರ ಎನ್ನುವ ವ್ಯಾಧಿಯನ್ನು ವಾಸಿಮಾಡುವುದಕ್ಕೆ ವೇಂಕಟೇಶ್ವರ ಸ್ವಾಮಿಯೇ ನಿಜವಾದ ಔಷಧಿಯೆಂದು ಕೀರ್ತಿಸುತ್ತಾರೆ. ಪವಿತ್ರವಾದ ಸ್ವಾಮಿಪುಷ್ಕರಿಣಿಯಲ್ಲಿ ಮೀನಾಗಿಯೋ, ಗಿಡವಾಗಿಯೋ, ವೇಂಕಟೇಶ್ವರ ಸ್ವಾಮಿಯ ಬಂಗಾರದ ಬೆಟ್ಟಗಳ ಮೇಲೆ (ಎಂಬೆರುಮಾನ್ ಪೊನ್ಮಲೈ ಮೇಲ್ ಎದ್ದೇನುಮ್) ತನಗೆ ಆ ಪವಿತ್ರ ತಿರುಮಲ ಬೆಟ್ಟಗಳಲ್ಲಿ ನೀಚಜನ್ಮವನ್ನಾದರೂ ಕರುಣಿಸಬೇಕೆಂದು ಮಹಾನ್ ಭಕ್ತನಾದ ಕುಲಶೇಖರ ಆಳ್ವಾರ್ ಶ್ರೀನಿವಾಸ ಸ್ವಾಮಿಯನ್ನು ಪ್ರಾರ್ಥಿಸಿದ್ದಾರೆ.

**ತಿರುಮಲೆಯ ಆಲಯದ ಅಸ್ಥಿತ್ವ ಮತ್ತು ಅಭಿವೃದ್ಧಿ :**

ತಿರುಮಲೆಯ ಕಲ್ಲಿನ ಆಲಯ ಕಟ್ಟಡ ನಿರ್ಮಾಣ ಕಾರ್ಯಗಳು ಪಲ್ಲವರ ಕಾಲದ ಕೊನೆಯಭಾಗದಲ್ಲಿ ಆರಂಭವಾಗಿ ಚೋಳ, ಪಾಂಡ್ಯ, ಯಾದವ, ವಿಜಯನಗರ ಅರಸರ ಕಾಲಗಳಲ್ಲಿ ಮತ್ತು ವಿಜಯನಗರಾನಂತರ ಕಾಲದಲ್ಲಿಯು ಸಹಾ ನಡೆದಿವೆ. ತಿರುಮಲ ಆಲಯವು 16 ಎಕರೆ ಸ್ಥಲದಲ್ಲಿ 2 ಗೋಪುರಗಳು ಮತ್ತು 3 ಪ್ರಾಕಾರಗಳು, 4 ಸನ್ನಿಧಿ ಬೀದಿಗಳು (ರಥಬೀದಿಗಳು) ಇದ್ದು, ಆಲಯವು ಮಾತ್ರ 2.5 ಎಕರೆಗಳಲ್ಲಿ ಮತ್ತು ಪವಿತ್ರ ಪುಷ್ಕರಿಣಿಯು 1.5 ಎಕರೆಗಳ ವಿಸ್ತೀರ್ಣದಲ್ಲಿ ನೆಲೆಗೊಂಡಿವೆ.

---

1. Tirupati Sri Venkateswara, page 113-125

ತಿರುಮಲ ಆಲಯ ಪರಿಣಾಮವು ವಿವಿಧ ರಾಜವಂಶಗಳಿಗೆ ಸೇರಿದ್ದ ಅನೇಕ ರಾಜಮಹಾರಾಜರುಗಳು ಮತ್ತು ಪೋಷಕರಿಂದ ಪುನರ್ನಿರ್ಮಾಣ ಗೊಂಡಿದೆ. ತಿರುಮಲ ಆಲಯದ ಪರಿಣಾಮಕ್ರಮವು ಈ ಕೆಳಕಂಡಂತೆ ಇದೆ. 2 ಗೋಪುರಗಳು, 3 ಪ್ರಾಕಾರಗಳು, ಅನೇಕ ಮಂಟಪಗಳು, ಕಂಬಗಳಿಂದ ಕೂಡಿದ ಕಟ್ಟಡಗಳು, ಕಲ್ಯಾಣ ಮಂಟಪಗಳು, ಗೊಲ್ಲ ಮಂಡಪಗಳು, 1000 ಕಂಬಳುಳ್ಳ ಮಂಟಪಗಳು ಮತ್ತು ವಿವಿಧ ನಿರ್ಮಾಣಗಳು ಮತ್ತು ಕಳಾಕೃತಿಗಳಿಂದ ಕೂಡಿದ ಅದ್ಭುತ ಕಟ್ಟಡಗಳು ಇಲ್ಲಿ ನಿರ್ಮಾಣವಾಗಿವೆ.

| | ಕಾಲ ವಲಯ | ಅಭಿವೃದ್ಧಿ |
|---|---|---|
| 1 | ಸಂಗಮ ವಂಶದ ರಾಜರು | ಕೇವಲ ವಿಗ್ರಹವು ಇತ್ತು. ಆಲಯ ನಿರ್ಮಾಣ ಪದ್ಧತಿ ಇಲ್ಲವಾಗಿತ್ತು. |
| 2 | ತೊಂಡಮಾನ್ | ತಾತ್ಕಾಲಿಕ ನಿರ್ಮಾಣ |
| 3 | ಪ್ರಾಚೀನ ಪಲ್ಲವರು | ಕಲ್ಲಿನಿಂದ ಗರ್ಭಗೃಹ ನಿರ್ಮಾಣ |
| 4 | ಚೋಳರು | ಮುಖಮಂಡಪದಿಂದ ಕೂಡಿದ ಗರ್ಭಗೃಹ ನಿರ್ಮಾಣ |
| 5 | ಪಾಂಡ್ಯರ ಸಾಮಂತರಾದ ಯಾದವ ಅರಸರು | ವಿಮಾನಗೋಪುರ, ಶಯನ ಮಂಟಪ, ರಾಮನ ಮಹಡಿ, ಮುಕ್ಕೋಟಿ ಪ್ರಾಕಾರ, ವಿಮಾನ ಪ್ರಾಕಾರ, ಸಂಪಂಗಿ ಪ್ರಾಕಾರ, ಮಹಾಗೋಪುರ, ಬೆಳ್ಳಿಬಾಗಿಲು ಗೋಪುರ |
| 6 | ವಿಜಯನಗರ ಅರಸರು | ತಿರುಮಲಗಿರಿ ಮಂಟಪ, ರಂಗನಾಯಕ ಮಂಟಪ, ತಿರುಮಲರಾಯ ಮಂಟಪ, ಕನ್ನಡಿ ಮಂಟಪ, ವಿಮಾನ ಪ್ರಾಕಾರ ಸುತ್ತಲು ಕಲ್ಯಾಣ ಮಂಟಪಗಳು, ವಿಮಾನ ಪ್ರಾಕಾರ, ಇನ್ನಿತರ ಒಳ ನಿರ್ಮಾಣಗಳು, ಸಾವಿರ ಕಂಬಗಳ ಮಂಟಪ |

**ಶ್ರೀವೇಂಕಟಾಚಲ ಮಾಹಾತ್ಮ್ಯ – ವೈಕುಂಠ ಗುಹೆ**

**ವೈಕುಂಠ ಗುಹೆ** [1]

ಶ್ರೀವೇಂಕಟಾಚಲ ಮಾಹಾತ್ಮ್ಯದಲ್ಲಿ ತ್ರೇತಾಯುಗದ ವೈಕುಂಠಗುಹೆ ಘಟ್ಟವು ವರ್ಣಿಸಲ್ಪಟ್ಟಿದೆ. ಈಗಲೂ ಸ್ವಾಮಿಪುಷ್ಕರಿಣಿಯ ಈಶಾನ್ಯದಿಕ್ಕಿನಲ್ಲಿ ಎರಡು ಕಿ.ಮೀ. ದೂರದಲ್ಲಿನ ಕಡಲಿವನಂ ಬಳಿ ಈ ಗುಹೆಯು ಕಾಣಿಸಿಕೊಳ್ಳುತ್ತದೆ. ಹನುಮಂತನ ತಾಯಿಯಾದ ಅಂಜನಾದೇವಿಯ ಪ್ರಾರ್ಥನೆ ಮೇರೆಗೆ ಶೇಷಾಚಲದಲ್ಲಿ ನಿಂತ ವಾನರಸೇನೆ ರಾವಣನ ಜೊತೆ ಯುದ್ಧಕ್ಕೆ ತೆರಳುತ್ತಿರುವಾಗ ಈ ವೈಕುಂಠಗುಹೆ ಒಳಗೆ ಪ್ರವೇಶಿಸಿ ವಿಚಿತ್ರ ಅನುಭವಗಳನ್ನು ಹೊಂದಿದರು.

---

1. (i) The Tirumala Temple - page no. 190
(ii) Vaikunta Guha video https://www.youtube.com/watch?v=GU5trlW_BMo&t=661s

**ಪುರಾತತ್ವ ಪುರಾವೆಗಳು – ಲಿಖಿತ ಮತ್ತು ಪುರಾತತ್ವ:**

ಪುರಾತತ್ವ ಪುರಾವೆಗಳು ಸಾಧಾರಣವಾಗಿ ಪೂರ್ವಕಾಲದಲ್ಲಿ ಮಾನವರು ತಯಾರಿಸಿದ ಮತ್ತು ಉಪಯೋಗಿಸಿದ ವಸ್ತುಗಳು.

**ಹನುಮಂತನ ವಿಗ್ರಹದ ಉಲ್ಲೇಖನೆ:**

ನಮ್ಮ ದೇಶದಲ್ಲಿ ಕ್ರೀ.ಶ. 4–5 ಶತಮಾನಗಳಿಗೆ ಸೇರಿದ ರಾಕ್–ಕಟ್ ಆರ್ಕಿಟೆಕ್ಚರ್ ನಲ್ಲಿ ಗುಪ್ತರ ಕಾಲದ ಕಲ್ಲಿನ ಶಿಲ್ಪರೂಪದಲ್ಲಿ ಮೊತ್ತಮೊದಲಿನ ಹನುಮಾನ್ ಆರಾಧನೆಯನ್ನು ನೋಡಬಹುದು. ಗುಪ್ತರ ಕಾಲದ ಅಂದಿನ ಚಕ್ರವರ್ತಿಗಳು ಅನೇಕರು ವೈಷ್ಣವರಾಗಿದ್ದರು. ಈ ಕಾರಣ ನರಸಿಂಹ, ವಿಷ್ಣು ಮತ್ತು ರಾಮಾಯಣ ಕಥಯೆನ್ನಾಧರಿಸಿ ಕೆತ್ತಿದ ಶಿಲ್ಪಗಳನ್ನು ಇವರ ನಿರ್ಮಾಣಗಳಲ್ಲಿ ಹೇರಳವಾಗಿ ನೋಡಬಹುದು.

ಮೊತ್ತಮೊದಲಿನ ಆಂಜನೇಯ ಶಿಲ್ಪವು ಆಂಧ್ರಪ್ರದೇಶ್ ರಾಜ್ಯದ ಗುಂಟೂರು ಜಿಲ್ಲೆಯಲ್ಲಿರುವ ಉಂಡವಲ್ಲಿ ಕಲ್ಲಿನ ಗುಹೆಗಳಲ್ಲಿರುವುದಾಗಿ ಕಂಡುಹಿಡಿದ್ದಾರೆ.ಈ ಗುಹೆಗಳಲ್ಲಿರುವ ಶಿಲ್ಪಗಳು ಸುಮಾರು 7ನೆಯ ಶತಮಾನಕ್ಕೆ ಸೇರಿದ್ದಾಗಿವೆ ಎಂದು ಹೇಳುತ್ತಾರೆ. ಇವು ವಿಷ್ಣುಕುಂಡಿನ ವಂಶದ ಅರಸರ (ಕ್ರೀ.ಶ. 420–720) ಕಾಲದವೆಂದು ಗುರುತಿಸಲಾಗಿದೆ

ತಿರುಮಲೆಯ ಆಕಾಶಗಂಗ, ಕುಮಾರಧಾರ ತೀರ್ಥ, ತುಂಬುರುತೀರ್ಥ ಮುಂತಾದವುಗಳಿವೆ.

**ಆಕಾಶಗಂಗ**

ವಿವಿಧ ಪುರಾಣಗಳಲ್ಲಿ ಹೇಳಿದಂತೆ ಅಂಜನಾದೇವಿಯು ತಿರುಮಲೆಯಲ್ಲಿರುವ ಆಕಾಶಗಂಗ ತೀರ್ಥ ಸಮೀಪದಲ್ಲಿರುವ ಪ್ರದೇಶದಲ್ಲಿ ತಪಸ್ಸನ್ನು ಮಾಡಿದಳೆಂದು ಆದ್ದರಿಂದ ಈ ತಿರುಮಲ ಬೆಟ್ಟಕ್ಕೆ ಅಂಜನಾದ್ರಿ ಎಂದು ಹೆಸರು ಬಂದಿತು. [1]

ತಿರುಮಲ ಶ್ರೀವೇಂಕಟೇಶ್ವರಾಯಲದ ಉತ್ತರದಿಕ್ಕಿನಲ್ಲಿ ಮಹಾವೃಕ್ಷಗಳೊಂದಿಗೆ, ಲತಗುಲ್ಮಾದಿಗಳೊಂದಿಗೆ, ನಾನಾವಿಧ ಫಲಪುಷ್ಪಗಳಿಂದ ಕಂಗೊಳಿಸುವ ವೃಕ್ಷ ಸಮೂಹದಿಂದ ಕೂಡಿದ ಎತ್ತರವಾದ ಬೆಟ್ಟಗಳಿವೆ. ಆ ದಟ್ಟವಾದ ಕಾಡಿನಲ್ಲಿ, ಕಣಿವೆಗಳಲ್ಲಿ ಕಾಡುಮೃಗಗಳು ಸ್ವೇಚ್ಛೆಯಿಂದ ವಿಹರಿಸುತ್ತಿದ್ದವು. ಈ ಬೆಟ್ಟಗಳಲ್ಲಿ ಒಂದು ಕಡೆ ಸಮುದ್ರಮಟ್ಟದಿಂದ 2,700 ಅಡಿಗಳ ಎತ್ತರದಲ್ಲಿರುವ ಒಂದು ಗುಹೆ ಒಳಗಿನಿಂದ ಕೆಳಗಡಿಗೆ ನೀರು ನಿರಂತರವಾಗಿ ಹರಿಯುತ್ತಿದೆ. ಈ ಜಲಪಾತವೇ ಆಕಾಶಗಂಗೆ ಯೆಂದು ಕರೆಯಲ್ಪಡುತ್ತಿದೆ. ಈ ಜಲಪಾತವು ಪರ್ವತ ಒಳಭಾಗದಿಂದ ಹರೆಯುತ್ತಾ ಭೂಮಿಯ ಮೇಲೆ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಇದಕ್ಕೆ ಆಕಾಶಗಂಗೆ ಎನ್ನುವ ಸಾರ್ಥಕನಾಮವು ಬಂದಿದೆ. ಈ ತೀರ್ಥವು 13°–14° ಉತ್ತರ ಅಕ್ಷಾಂಶ ಮೇಲೆ 79°–20° ಪೂರ್ವ ರೇಖಾಂಶ ಮೇಲೆ ಇದೆ. ಇದು ಮುಕ್ತಿಪ್ರದಾಯಕವಾದ ಸಪ್ತತೀರ್ಥಗಳಲ್ಲಿ ಒಂದಾಗಿದೆ. ಆಕಾಶಗಂಗೆಯು ಪರಮ ಪವಿತ್ರವಾದ ತೀರ್ಥ. ಆಕಾಶಗಂಗೆಯ ನೀರಿನಿಂದಲೆ ಶ್ರೀವೇಂಕಟೇಶ್ವರ ಸ್ವಾಮಿಗೆ ಅಭಿಷೇಕಾದಿಗಳು ನಡೆಯುತ್ತವೆ. ಇದು ಶ್ರೀನಿವಾಸನ ಆಲಯದಿಂದ 5.5 ಕಿ.ಮೀ. ದೂರದಲ್ಲಿದೆ. ಈ ತೀರ್ಥಕ್ಕೆ ಮೇಷಮಾಸದಲ್ಲಿ ಚಿತ್ತಾ ನಕ್ಷತ್ರದಿಂದ ಕೂಡಿದ ಹುಣ್ಣಿಮ ದಿನದಂದು ಆಕಾಶಗಂಗೆ ಪರ್ವದಿನವೆಂದು ಆಚರಿಸಲಾಗುತ್ತದೆ. ಅಮೃತಪಾನ ಮಾಡುವ ದೇವತೆಗಳಿಗೂ ಸಹಾ ಅಮೃತವನ್ನು ಮೀರಿದ ಮಧುರಾತಿಮಧುರವಾದ ತೀರ್ಥದಿಂದ "ಅಮೃತ"ವೆನ್ನುವ ಜಲನಾಮವನ್ನು ಸಾರ್ಥಕ ಮಾಡುವ ಶಕ್ತಿಯಿಂದ ಈ ತೀರ್ಥವು ಹರಿಯುತ್ತಿದೆ. [2]

---

1. Sri Venkatachala Mahatyam - page no. 198-206
2, ಶ್ರೀ ವೇಂಕಟೇಶ್ವರ ವೈಭವಂ, ಪಂಡಿತ ವೇದಾಂತಂ ಜಗನ್ನಾಥಾಚಾರ್ಯರು ಪುಟ 136

**ಬೇಡೀ ಆಂಜನೇಯ :**

ಈ ವಿಶೇಷವಾದ ಹನುಮಂತನ ಶಿಲ್ಪವು ಕೈಗಳನ್ನು ಕಟ್ಟಿಕೊಂಡು ನಿಂತಿರುತ್ತದೆ. ಇಂತಹ ವಿಚಿತ್ರ ಶಿಲ್ಪವು ಮತ್ತೆಲ್ಲೂ ಕಾಣಸಿಗದು. ಇದು ಶ್ರೀವೇಂಕಟೇಶ್ವರ ಸ್ವಾಮಿಯ ಆಲಯದ ಎದಿರಿನಲ್ಲಿದೆ. ಇದು ಸಾಳುವ ನರಸಿಂಹರಾಯನ ಕಾಲದಲ್ಲಿ ನಿರ್ಮಾಣವಾಗಿದೆ. ಪುರಾಣಗಳ ಕಥೆಗಳಂತೆ ಹನುಮಂತನು ಬಾಲ್ಯದಲ್ಲಿ ಮಹರ್ಷಿಗಳಿಂದ ಹೊಂದಿದ್ದ ವರಬಲದಿಂದ ಅನೇಕ ಚೇಷ್ಟೆಗಳನ್ನು ಮಾಡುತ್ತಿದ್ದನಂತೆ. ಬಾಲ ಹನುಮಾನ್ ಮಾಡುತ್ತಿರುವ ತುಂಟತನವನ್ನು ನಿಯಂತ್ರಿಸಲು ಆತನ ತಾಯಿ ಅಂಜನಾದೇವಿಯು ಮಗನ ಕೈಗಳನ್ನು ಕಟ್ಟಿಹಾಕಿ ಕದಲದಂತೆ ಮಾಡಿದಳಂತೆ. ಇದು ಸ್ಥಳೀಯವಾಗಿ ಹೇಳುವ ಐತಿಹ್ಯವಾಗಿದ್ದು ತಿರುಮಲೆಯೆ ಆಂಜನೇಯನ ಜನ್ಮಸ್ಥಾನವೆನ್ನುವ ವಿಷಯವನ್ನು ಬಲಪಡಿಸುತ್ತಿದೆ.

**ಶ್ರೀ ವ್ಯಾಸರಾಯರು :**[1]

ವಿಜಯನಗರ ಅರಸನಾದ ಸಾಳುವ ನರಸಿಂಹನ ಕಾಲದಲ್ಲಿ ಹನ್ನೆರಡು ವರ್ಷಗಳ ಕಾಲ (1486–98) ತಿರುಮಲೆಯಲ್ಲಿ ಆಡಳಿತ ಮತ್ತು ಪೂಜಾಕಾರ್ಯಗಳನ್ನು ಶ್ರೀವ್ಯಾಸರಾಯರ ಮೇಲ್ವಿಚಾರಣೆಯಲ್ಲಿ ನಡೆದಿದ್ದವು. ಶ್ರೀವ್ಯಾಸತೀರ್ಥರು 12 ವರ್ಷಗಳ ಕಾಲ ತಿರುಮಲೆಯಲ್ಲಿ ಇದ್ದುಕೊಂಡು ವೇಂಕಟೇಶ್ವರಸ್ವಾಮಿಗೆ ಪೂಜೆಗಳನ್ನು ಸಲ್ಲಿಸಿದರೆಂದು ತಿಳಿಯುತ್ತಿದೆ. ಇವರು ವಿಜಯನಗರ ಸಾಮ್ರಾಜ್ಯದಲ್ಲಿನ ವಿವಿಧ ಪ್ರದೇಶಗಳಲ್ಲಿ ಸುಮಾರು 700ಕ್ಕೂ ಹೆಚ್ಚು ಆಂಜನೇಯ ಮೂರ್ತಿಗಳನ್ನು ಸ್ಥಾಪಿಸಿ ಪ್ರಸಿದ್ಧರಾಗಿದ್ದರು.

ಭಾರತದೇಶದಲ್ಲಿ ಹನುಮಂತನ ಶಿಲ್ಪಗಳನ್ನು ಆಸೀನ, ಸ್ಥಾನಕ, ಯಾನಭಂಗಿ ಎನ್ನುವ ಮೂರು ವಿಧದ ಪ್ರತಿಮಾ ರೂಪಗಳಲ್ಲಿ ನೋಡಬಹುದು. ನಮ್ಮ ದೇಶದಲ್ಲಿ ಹನುಮಂತನ ಆರಾಧನೆ ಮಹತ್ತ್ವವನ್ನು ಪಡೆದಿದೆ. ಅನೇಕ ಗ್ರಾಮಗಳಲ್ಲಿ ಕೊನೇಪಕ್ಷ ಒಂದಾದರೂ ಹನುಮಂತನ ವಿಗ್ರಹ ಅಥವಾ ಪೂಜಾಮಂದಿರ ಇರುವುದರಲ್ಲಿ ಯಾವ ಆಶ್ಚರ್ಯವು ಇಲ್ಲ. ಹನುಮಂತನನ್ನು ಸಂರಕ್ಷಕ ದೇವತೆ ಎಂದು ಇಂದಿಗೂ ಭಾವಿಸುತ್ತಾರೆ.

ಅನೇಕ ಕೋಟೆಕೊತ್ತಲಗಳಲ್ಲಿಯು ಮತ್ತು ರಾಜಭವನಗಳಲ್ಲಿಯು ಸಹಾ ಹನುಮಂತನ ವಿಗ್ರಹವಿರುವುದನ್ನು ಕಾಣಬಹುದು. ಗ್ರಾಮ ರಕ್ಷಣೆಗಾಗಿ ಗ್ರಾಮದ ಪ್ರವೇಶದ್ವಾರಗಳ ಬಳಿಯೂ ಸಹಾ ಹನುಮಂತನ ವಿಗ್ರಹಗಳನ್ನು ನೋಡಬಹುದು. ಆಂಧ್ರಪ್ರದೇಶ್ ರಾಜ್ಯದ ಚಂದ್ರಗಿರಿ ಕೋಟೆ, ಪೆನುಗೊಂಡ ಕೋಟೇ ಮತ್ತಿತರ ದುರ್ಗಗಳಲ್ಲಿ ಈ ತರಹದ ಆಂಜನೇಯನ ಮೂರ್ತಿಗಳನ್ನು ಇಂದಿಗೂ ಕಾಣಬಹುದು.

**ಹನುಮಂತ ನಾಣ್ಯಗಳು :**[2]

ಪೂರ್ವದಲ್ಲಿ ಅರಸರು ಉಪಯೋಗಿಸುವ ನಾಣ್ಯಗಳ ಮೇಲೆ ಅವರ ಇಷ್ಟದೈವಗಳ ಚಿತ್ರಗಳನ್ನು ಮುದ್ರಿಸಿರುವುದು ನೋಡಬಹುದು. ವಿಜಯನಗರ ಆರಂಭ ಕಾಲದ ನಾಣ್ಯಗಳಲ್ಲಿ ಹನುಮಂತನ ಚಿತ್ರವು ಇದೆ. ವಿಜಯನಗರ ಅರಸರಾದ ಹರಿಹರ–1, ಬುಕ್ಕ–1, ವೇಂಕಟಪತಿರಾಯ–2 ಮುಂತಾದವರು ಮುದ್ರಿಸಿದ ನಾಣ್ಯಗಳ ಮೇಲೆ ಹನುಮಂತನ ಚಿತ್ರವು ಇದೆ. ಈ ಚಿತ್ರಗಳಲ್ಲಿ ಹನುಮಂತನು ಸಮುದ್ರ ಲಂಘನೆ ಮಾಡುತ್ತಿರುವ ಭಂಗಿಯಲ್ಲಿ ಅಥವಾ ರಾಕ್ಷಸರನ್ನು ಸದಬಡೆಯಲು ಕಯ್ಯನು ಎತ್ತಿರುವಂತಹ ಭಂಗಿಯಲ್ಲಿ ಕಾಣಿಸುತ್ತಾನೆ.

---

1. History of Tirupati - The Tiruvengadam Temples, Vol. II, page no. 458
2. (i) Proceedings of Srikantaya Centenary Seminar Early Vijayanagara Studies in its History and Culture (Coins of the early period of Vijayanagara empire - A.V. Narasimha Murthy)
(ii) International Journal of Scientific and Research Publications, Volume 9, Issue 4 (Cultural importance of the Vijaya Nagara Coins - Dr. P. Bhaskara Rao) page no. 331

**ಶಾಸನಗಳು :**[1]

ಹನುಮಂತನನ್ನು ಕುರಿತು ಬಂದ ಮೊದಲು ಶಾಸನವು ಕ್ರೀ.ಶ. 8ನೆಯ ಶತಮಾನಕ್ಕೆ ಸೇರಿದ್ದು ಆಂಧ್ರಪ್ರದೇಶ್ ರಾಜ್ಯದ ರಾಯಲಸೀಮಯಲ್ಲಿರುವ ಕಡಪ ಜಿಲ್ಲೆ ಪುಲಿವೆಂದುಲ ಮಂಡಲದ ಕಾಸನೂರು ಗ್ರಾಮದಲ್ಲಿ ಲಭ್ಯವಾಗಿದೆ. ಈ ಗ್ರಾಮದ ಆಂಜನೇಯ ದೇವಸ್ಥಾನಕ್ಕೆ ಭೂದಾನ ಮಾಡಿದ ವಿವರಗಳು ಈ ಶಾಸನದಲ್ಲಿ ನೀಡಲಾಗಿದೆ.

**ಮುಕ್ತಾಯ :**

ತಿರುಮಲ ಬೆಟ್ಟಗಳ ಶೇಷಾಚಲ ಪರ್ವತ ಪಂಕ್ತಿಗಳಲ್ಲಿರುವ ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳವೆಂದು ಹೇಳುವ ಆಧಾರಗಳು ಹೇರಳವಾಗಿವೆ. ಅಂಜನಾದ್ರಿ/ಸೆಹಸ್ಥಲಂ ಎನ್ನುವುದು ಇಂದು ನೀರಿನ ಬುಗ್ಗೆಗಳು, ಪವಿತ್ರ ತೀರ್ಥಗಳು, ಜಲಪಾತಗಳು, ದೊಡ್ಡ ಪರ್ವತ ಪಂಕ್ತಿಗಳು, ಆಳವಾದ ಕಣಿವೆಗಳು, ದಟ್ಟವಾದ ಕಾಡುಗಳು, ಅಪುರೂಪವಾದ ವೃಕ್ಷ ಮತ್ತು ಜಂತುಜಾಲಗಳಿಂದ ಕೂಡಿವೆ.

ಶ್ರೀರಾಮನು ವಾನರಸೇನೆ ಯೊಂದಿಗೆ ಶೇಷಚಲವನ್ನು, ವೈಕುಂಠ ಗುಹೆಯನ್ನು ದರ್ಶಿಸಿದ್ದಾನೆಂದು ಶ್ರೀವೇಂಕಟಾಚಲ ಮಾಹಾತ್ಮ್ಯವು ಸ್ಪಷ್ಟೀಕರಿಸಿದೆ. ಆದರೆ ಈ ಶೇಷಾಚಲ ಪ್ರಾಂತ್ಯದಲ್ಲಿನ ಪುರಾತನ ನಿವಾಸಗಳನ್ನು ನಾವು ಬೇರ್ಪಡಿಸಲು ಸಾಧ್ಯವಿಲ್ಲ. ಅಂಜನಾದ್ರಿ ಇರುವ ಶೇಷಾಚಲ ಪರ್ವತ ಪಂಕ್ತಿಗಳಲ್ಲಿರುವ ಪುರಾತನ ಶಿಲಾಫಲಕಗಳು ಮತ್ತು ಕಲ್ಲಿನ ಮೇಲೆ ಕೆತ್ತಿರುವ ಪಿಕ್ಟೋಗ್ರಾಫ್ ಮುಂತಾದ ಕೆಲವು ಗಿರಿಜನ ಸ್ಥಳಗಳಲ್ಲಿನ ಕಲ್ಲಿನ ಕಲಾಕೃತಿಗಳು ಇತಿಹಾಸಪೂರ್ವ ಸ್ವಭಾವನ್ನು ಹೊಂದಿವೆ ಎಂದು ಇತ್ತೀಚಿನ ಸಂಶೋಧನೆಗಳು ಗುರುತಿಸಿವೆ.

ಈ ಪ್ರಾಂತ್ಯದಲ್ಲಿ ಇಂದು ದಟ್ಟವಾದ ರಿಜರ್ವ್ಡ್ ಫಾರೆಸ್ಟ್ ಮತ್ತು ರ್ಯಾಂಕ್ ವೃಕ್ಷಸಂಪದೆಯಿಂದ ತುಂಬಿಕೊಂಡಿದ್ದು ಇಲ್ಲಿ ಹಿಂದೆ ಮಾನವ ನಿವಾಸಗಳು ಇದ್ದವು ಎನ್ನುವದಕ್ಕೆ ಬಲವಾದ ಸಾಕ್ಷಿಗಳಾಗಿವೆ. ಪುರಾತತ್ವ ದೃಷ್ಟಿಕೋಣದಿಂದ ಆಳವಾದ ಮತ್ತು ಕ್ರಮಬದ್ಧವಾದ ಸಂಶೋಧನೆಯನ್ನು ಮಾಡುವುದು ಇನ್ನೂ ಕಷ್ಟವಾಗೆ ಇದೆ. ಕಾಡು ಮೃಗಗಳ ಅಸ್ತಿತ್ವ ಮತ್ತು ಅಪುರೂಪವಾದ ಕೆಂಪುಚಂದನ ಮರಗಳ ಸ್ಮಗ್ಲಿಂಗ್ ಚಟುವಟುಕೆಗಳಿಂದ ಕಾಡುಗಳನ್ನು ರಕ್ಷಿಸಲು ಕಠಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಶೇಷಾಚಲದ ಪರ್ವತ ಪಂಕ್ತಿಗಳಲ್ಲಿ ಹನುಮಂತನ ಜನ್ಮಸ್ಥಳವನ್ನು ಅನೇಕ ಪುರಾಣಗಳು ಮತ್ತು ವೇಂಕಟಾಚಲ ಮಾಹಾತ್ಮ್ಯದಲ್ಲಿ ಧೃಢೀಕರಿಸಿದಂತೆ, ಈ ಸಾಹಿತ್ಯದ ಸೂಚನೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ನಮ್ಮ ಲಕ್ಷ್ಯವನ್ನು ಸಾಧಿಸಲು ಅತ್ಯಾಧುನಿಕ ತಂತ್ರಜ್ಞಾನ ಸಹಾಯದಿಂದ ಪುರಾತತ್ವ ಅನ್ವೇಷಣೆಯ ವ್ಯಾಪ್ತಿಯನ್ನು ಮತ್ತಷ್ಟು ಬೆಳಿಸಬೇಕು. ಹನುಮಂತನ ಜನ್ಮಸ್ಥಲಕ್ಕೆ ಸಂಬಂಧಪಟ್ಟ ಪುರಾಣಗಳಲ್ಲಿ ಮತ್ತು ಇಲ್ಲಿ ಪ್ರಸ್ತಾಪಿಸಿದ ಅಂಶಗಳನ್ನು ಪರಿಶೀಲನೆಗಾಗಿ ಪ್ರಮಾಣೀಕರಿಸಿದ ಅಥವಾ ನಮೂದಿಸಿದ ಆಧಾರಗಳಾಗಿ ಪರಿಗಣಿಸಬಹುದು.

ಭಾರತದೇಶದಲ್ಲಿನ ಇತರ ಪ್ರಾಂತ್ಯಗಳಲ್ಲಿ ಪ್ರಧಾನವಾಗಿ 5 ಪ್ರದೇಶಗಳಲ್ಲಿ ಇತರರು ಹನುಮಂತನ ಜನ್ಮಸ್ಥಳವೆಂದು ತೋರಿಸುವ ಸ್ಥಳಗಳು ರಾಮಾಯಣಕ್ಕೆ ಸಂಬಂಧಪಟ್ಟಿರುವ ಸ್ಥಳೀಯ ವಿಶ್ವಾಸಗಳ ಮೇಲೆ ಮಾತ್ರ ಆಧರಿಸಿವೆ ಹೊರತು ಸಾಹಿತ್ಯ ಮತ್ತು ಪುರಾತತ್ವ ಪರವಾಗಿ ನಿರೂಪಿಸಲು ಧೃಢೀಕರಿಸುವ ಅಥವಾ ನಮೂದಿಸಿರುವ ಪುರಾವೆಗಳನ್ನು ಹೊಂದಿಲ್ಲ.

ಹನುಮಂತನು ಒಬ್ಬ ಪುರಾಣಪುರುಷನು. ಆ ಕಾರಣ ಶಾಸನಗಳು ಮತ್ತು ಇತರ ಐತಿಹಾಸಿಕ ದಾಖಲೆಗಳಲ್ಲಿ ಅವನ ಜನ್ಮಸ್ಥಳ ಸೂಚಿತವಾಗಿರುವುದಿಲ್ಲ. ಹನುಮಂತನ ಜನ್ಮಸ್ಥಳ ಅಂಜನಾದ್ರಿ ಯೆಂದು ವಿಶ್ವವ್ಯಾಪ್ತವಾಗಿ ಅಂಗೀಕೃತವಾದ ಪ್ರದೇಶ. ಮೇಲೆ ಉದಹರಿಸಿದ

1. Further sources of Vijaya Nagara History - Sastri Nilakanata. K.A and Venkata Ramanayya. N

ಎಲ್ಲ ಪುರಾವೆಗಳು ಮುಖ್ಯವಾಗಿ ಪೌರಾಣಿಕ, ವಾಙ್ಮಯ ಪ್ರಮಾಣಗಳು ಮತ್ತು ಮಧ್ಯಮಯುಗದ ಶಾಸನಗಳು ತಿರುಮಲ ಬೆಟ್ಟಗಳಿವೆ "ಅಂಜನಾದ್ರಿ" ಯೆನ್ನುವ ಹೆಸರನ್ನೇ ಧೃಢೀಕರಿಸಿವೆ. ಹನುಮಂತನ ಜನ್ಮಸ್ಥಳಕ್ಕಾಗಿ ಇವುಗಳನ್ನು ನಾವು ಪುರಾವೆಗಳನ್ನಾಗಿ ಪರಿಗಣಿಸಬಹುದು.

*~*~*~*~*

ಅಂಜನಾದೇವಿ ಕೆಲಸದಲ್ಲಿ ತೊಡಗಿರುವಾಗ, ಹನುಮಂತನು ಸೂರ್ಯನನ್ನು ಹಣ್ಣು ಎಂದು ಭಾವಿಸಿ ಆಕಾಶದೆಡೆಗೆ ಧಾವಿಸುತ್ತಿರುವುದು



# 9. ಶ್ರೀನಿವಾಸನ ಭಕ್ತಿ ಸಾಹಿತ್ಯದಲ್ಲಿ ಅಂಜನಾದ್ರಿ

ಡಾ॥ ಆಕೆಳ್ಳ ವಿಭೀಷಣಶರ್ಮ

ಅನೇಕ ಭಕ್ತಕವಿಗಳು ಹನುಮಂತನನ್ನು ಸ್ತುತಿಸಿರುವರು. ಪದಕವಿಗಳು ವಿಶೇಷವಾಗಿ ಕ್ಷೇತ್ರಸಂಕೀರ್ತನೆಗಳನ್ನು ರಚಿಸಿದರು. ತೆಲುಗು ಕವಿಗಳಲ್ಲಿ ತಾಳ್ಳಪಾಕ ಅನ್ನಮಯ್ಯ ಮತ್ತು ಅವರ ವಂಶೀಕರು ಶ್ರೀವೇಂಕಟೇಶ್ವರ ಸೇವಾಗ್ರಗಣ್ಯರಾಗಿ ಹನುಮನನ್ನು, ಅಂಜನಾದ್ರಿಯನ್ನು ಸ್ತುತಿಸಿದ್ದಾರೆ. ತೆಲುಗುನಲ್ಲಿ ತಾಳ್ಳಪಾಕ ಪದಸಾಹಿತ್ಯದೊಂದಿಗೆ ಕನ್ನಡದಲ್ಲಿ ಹರಿದಾಸ ಸಾಹಿತ್ಯವು ಸುಪ್ರಸಿದ್ಧವಾದದ್ದು. ಹರಿದಾಸರಲ್ಲಿ ಶ್ರೀಪಾದರಾಯರಿಂದ ಆರಂಭಿಸಿ ಇಂದಿನ ವರೆಗು ಎಲ್ಲರೂ ಹನುಮತ್ಪ್ರಸಂಶೆಯನ್ನು ಮಾಡಿದವರೆ. ಇವರಲ್ಲಿ ಹನುಮಸ್ವಾಮಿ 'ಪ್ರಾಣದೇವ'ರೆಂದೇ ಪ್ರಸಿದ್ಧಿ. ಹರಿದಾಸರಲ್ಲಿ ಪುರಂದರದಾಸರು ನಾಲ್ಕು ಲಕ್ಷಕ್ಕೂ ಹೆಚ್ಚಿನ ಕೀರ್ತನೆಗಳನ್ನು ರಚಿಸಿದರೆಂದು ತಿಳಿಯುತ್ತಿದೆ. ಇವರ ಕ್ಷೇತ್ರಕೀರ್ತನೆಗಳು ಅನ್ನಮಯ್ಯನ ಸಾಹಿತ್ಯದಂತೆ ವಿಶಿಷ್ಟವಾದವು. ಕರ್ನಾಟಾಂಧ್ರ ಪ್ರಾಂತ್ಯಗಳಲ್ಲಿ 'ಹನುಮಂತರಾಯ' ಶಬ್ದಕ್ಕೆ ವ್ಯಾಪ್ತಿ ಅಧಿಕ. ಅನ್ನಮಯ್ಯ ಭಕ್ತಿಕೀರ್ತನೆಗಳಲ್ಲಿ ಮತಂಗಾದ್ರಿ, ಕಲಶಾಪುರ, ಮಂಗಾಂಬುಧಿ, ಕೆಳಭಾಗದ ಪಟ್ಟಣ, ವಿಜಯನಗರ ಹನುಮತ್ ಕ್ಷೇತ್ರ ಸಂಕೀರ್ತನೆಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ.

**ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಮಂಜನಾಚಲಮ್,**
**ದ್ವಾಪರೇ ಶೇಷಶೈಲಂ ಚ ಕಲೌ ಶ್ರೀವೇಂಕಟಾಚಲಮ್,** [1]

ಈ ಶ್ಲೋಕವು ಆಯಾ ಕಾಲಗಳಲ್ಲಿ ತಿರುಮಲ ಹೇಗೆ ಪ್ರಸಿದ್ಧಯನ್ನು ಹೊಂದುತ್ತಾ ಬಂದಿದೆ ಎಂಬುದನ್ನು ತಿಳಿಸುತ್ತಿದೆ. ಆಯಾ ಹೆಸರುಗಳು ಆಯಾ ಕಾಲಗಳಲ್ಲಿ ಸಾರ್ಥಕ್ಯವನ್ನು ಹೊಂದಿದ ಋಷಿಗಳ, ದೇವತೆಗಳ ಸ್ತೋತ್ರಗಳಲ್ಲಿ ಯುಗಭೇದದಿಂದ ಸಂಬಂಧವಿಲ್ಲದೆ ಎಲ್ಲ ಕಾಲಗಳಲ್ಲಿಯು ಈ ನಾಮಗಳಿಂದ ಸ್ತೋತ್ರಗಳನ್ನು ಮಾಡಿರುವುದೇ ಈ ಕ್ಷೇತ್ರದ ವಿಶೇಷತೆ. ಇದಕ್ಕೆ ಋಷಿಗಳಿಗು, ದೇವತೆಗಳಿಗು ಇರುವ ತ್ರಿಕಾಲಜ್ಞಾನವೇ ಕಾರಣವಾಗಿದೆ.

ಅನ್ನಮಯ್ಯ 'ಅಂಜನಾಪುತ್ರುಡು' ಎನ್ನುವ ಪ್ರಯೋಗಕ್ಕಿಂತ ವಿಲಕ್ಷಣವಾದದ್ದು 'ಅಂಜನೀತನಯುಡು' ಮುಂತಾದ ಸಂಬೋಧನೆಗಳನ್ನು ಹೆಚ್ಚಾಗಿ ಮಾಡಿದ್ದಾನೆ.

**ಅಂಜನಾಚಲಮು ಮೀದನತಡು ಶ್ರೀವೇಂಕಟೇಶುಡಂಜನೀತನಯುಡಾ ಯನಿಲಜುಡು–**[2]

ಹಾಗೆಯೆ ಅನ್ನಮಯ್ಯನಿಂದ ಹನುಮನ ತಾಯಿ ಅಂಜನಾದೇವಿಯೇ – ಅಂಜನೀದೇವಿ ಎಂದು ಕರೆಯಲ್ಪಟ್ಟಿದ್ದಾಳೆ.

**ಅಂಜನೀದೇವಿ ಕೊಡುಕು ಹನುಮಂತುಡು ಸಂಜೀವನಿ ತೆಚ್ಚಿನಾಡು ಸಾರೆ ಹನುಮಂತುಡು** [3]

ಹಾಗೆಯೆ ಅನ್ನಮಯ್ಯ ಅಂಜನಾದ್ರಿಯನ್ನು ಹೆಚ್ಚಾಗಿ 'ಅಂಜನಗಿರಿ'ಯೆಂದು ಕರೆದಿದ್ದಾನೆ.

**ಮಿಸಿಮಿನಂಜನಗಿರಿ ಮೀದ ವಸಂತವೇಳನು ವೆಸ ಕಲ್ಪವೃಕ್ಷಮು ವಿರುಲಿಚ್ಚಿನಟ್ಲು** [4]

---

1. ಶ್ರೀವೇಂಕಟಾಚಲಮಾಹಾತ್ಯಂ (ಭವಿಷ್ಯೋತ್ತರಪುರಾಣಾಂತರ್ಗತ–1–36, 37) ದ್ವಿತೀಯಭಾಗ, ಪುಟ–263, ತಿ.ತಿ.ದೇ. ಮುದ್ರಣ.
2. ತಾಳ್ಳಪಾಕಪದಸಾಹಿತ್ಯಂ – 4ನೆಯಸಂಪುಟ, 443ಕೀ.
3. ತಾಳ್ಳಪಾಕಪದಸಾಹಿತ್ಯಂ – 4ನೆಯಸಂಪುಟ, 272ಕೀ, 499ಕೀ.
4. ತಾಳ್ಳಪಾಕಪದಸಾಹಿತ್ಯಂ – 13ನೆಯಸಂಪುಟ, 107ಕೀ.

ಇನ್ನು ಶ್ರೀನಿವಾಸನನ್ನು ಅಂಜನಗಿರಿರಾಯ, ಅಂಜನಾದ್ರೀಶ್ವರ – ಎನ್ನುವ ಸಂಬೋಧನೆಗಳಿಂದ ಅನ್ನಮಯ್ಯ ಸ್ತುತಿಮಾಡಿದ್ದಾನೆ.

**ಅಂಜನಗಿರಿರಾಯುಡು ವೇಂಕಟಪತಿ ಸಂಜೀವನಿ ಪರುಷಲ ಕೊದುವಗನು** [1]

ಹಾಗೆಯೆ – **ಅಲಿಗಿ ಸಾಧಿಂಚದಗಡಂಜನಾದ್ರೀಶ್ವರುನಿ ಕಲಿಕಿ ಚೂಪುಲನೆ ಮದಿ ಕರಗಗ ಚೇಸೆದನು** [2]

ಇನ್ನು ಅನ್ನಮಯ್ಯ ಹನುಮಂತನನ್ನು ಅವರ ವಂಶದಲ್ಲಿ ಬಂದ ಕವಿಗಳು ಹನುಮಜ್ಜನನ, ಬಾಲ್ಯ, ವಿದ್ಯಾಭ್ಯಾಸ ಮುಂತಾದವುಗಳನ್ನು ದರ್ಶಿಸಿ, ಕೀರ್ತನೆ ಮಾಡಿ, ತಾವೂ ಧನ್ಯರಾಗಿ ನಮ್ಮನ್ನು ಧನ್ಯನರನ್ನಾಗಿ ಮಾಡಿದ್ದಾರೆ.

**ಬಾಲಹನುಮಂತುನಿ ರೂಪಾನ್ನಿ ಜಾತವರ್ಣುಡು** (4–83),
**ಕನಕ ಕುಂಡಲಾಲತೋ ಕೌಪೀನಮು ತೋಡ ಜನಿಯಿಂಚಿನಾಡು** (2–207)
**ಪುಟ್ಟು ಕೌಪೀನಮು ಮಹಾದ್ಭುತ ಯಜ್ಞೋಪವೀತಮು** (4–85)
**ಸಿರುಲ ಬಂಗಾರು ಕಾಸೆ ಚೆಲರೇಗಿನ ಸಿಂಗಾರಮು** (4–413) – ಎಂದು ವರ್ಣಿಸಿದ್ದಾನೆ.

ಹನುಮ ಜೀವನ ಸಮರಕ್ಕೆ ಮೊತ್ತಮೊದಲಿನ ಶಂಖಾರಾವವಾದ ಬಾಲಸೂರ್ಯನ ದರ್ಶನ – ಹಣ್ಣೆಂದು ತಿನ್ನುವುದಕ್ಕೆ ಮಾಡಿದ ಯತ್ನವನ್ನು ಸೊಗಸಾಗಿ ದರ್ಶನಮಾಡಿ, ಕೀರ್ತನೆಗಳಲ್ಲಿ ಆವಿಷ್ಕಾರ ಮಾಡಿದ್ದಾರೆ.

**ಪುಟ್ಟಿನ ನಾಡೇ ಭುವನಮುಲೆರಗಗ – ಪಟ್ಟಿತಿ ಸೂರ್ಯುನಿ ಪಂಡನುಚು** (3–421)
**ಅಂದುಕೊನೆ ಸೂರ್ಯಫಲಮನಿ ಹನುಮಂತುಡು** (4–155)
**ಕಂಜಾಪ್ತಫಲಹಸ್ತ** (3–522)
**ವೋ ರವಿಗ್ರಹಣ** (4–327)

ಇನ್ನು ಅನ್ನಮಯ್ಯ ಹನುಮಂತನ ವಿದ್ಯಾಭ್ಯಾಸವನ್ನು ಅನೇಕಬಾರಿ ಸ್ಮರಿಸಿದ ರೀತಿ, ಆ ಕೀರ್ತನೆಗಳಲ್ಲಿನ ಸತ್ಯದ ಸೊಬಗು ರಮಣೀಯವಾಗಿದೆ.

**ಚದಿವೆ ಸೂರ್ಯುನಿ ವೆಂಟ ಸಾರೆ ಮೊಗಮು ದ್ರಿಪ್ಪುಚು**
**ಯೆದುಟ ಸೀತನಿ ಮಹಿಮೇಮನಿ ಚೆಪ್ಪೇಮಯ್ಯ** ....... (4–509)

**ಉದಯಾಚಲಮು ಮೀದಿ ನೊಕ್ಕ ಜಂಗ ಚಾಚುಕೊನಿ**
**ಉದುಟನ ನಪರಾತ್ರಿನೊಕ್ಕ ಜಂಗ ಚಾಚುಕೊನಿ**
**ತುದ ಸೂರ್ಯಮಂಡಲಮು ತೋಡ ಮೋಮು ದಿಪ್ಪುಕೊಂಟಾ ಪೆದವುಲೆತ್ತಿ ಚದಿವೆ** ..... (4–470)

**ಮೊಗಿ ಸೂರ್ಯುನಿ ಚೇ ಶಾಸ್ತ್ರಮುಲು ಚದಿವಿನಾಡು** (4–525)

---

೧. ತಾಳ್ಳಪಾಕಸಾಹಿತ್ಯಂ – ೧ನೆಯಸಂಪುಟ, ೧೧೯ಕೀ.
೨. ತಾಳ್ಳಪಾಕಸಾಹಿತ್ಯಂ – ೨೫ನೆಯಸಂಪುಟ, ೪೭೮ಕೀ

ಯಾವ ತಿರುಮಲ ಕ್ಷೇತ್ರದಲ್ಲಿ – 'ಕೌಸಲ್ಯಾ ಸುಪ್ರಜಾ ರಾಮ' ಎನ್ನುವ ಸುಪ್ರಭಾತ ಸ್ತೋತ್ರವು ಪ್ರತಿಧ್ವನಿಸುತ್ತೆದೆಯೋ ಅಲ್ಲಿ "ಶ್ರೀಮದಖಿಲಮಹೀಮಂಡಲಧರಣೀಧರಮಂಡಲಾಖಂಡಲಸ್ಯ" – ಎನ್ನುವ ಗದ್ಯದಲ್ಲಿ ನಿತ್ಯವು ಶೇಷಾಚಲ – ಗರುಡಾಚಲ – ನಾರಾಯಣಾಚಲ – ಅಂಜನಾಚಲಾದಿ – ಎಂದುಕೂಡಾ ಹೇಳುವುದುಂಟು. ಕನ್ನಡ ದಾಸಭಕ್ತಿಶಿರೋಮಣಿಯಾದ ಪುರಂದರದಾಸರು, ಶ್ರೀಪಾದರಾಯರು, ವ್ಯಾಸರಾಯರಂತೆಯೆ ಸುಪ್ರಸಿದ್ಧರು. ಇವರ ಕೀರ್ತನೆಗಳಲ್ಲಿ ತಿರುಮಲೆಯನ್ನೇ ಅಂಜನಾದ್ರಿಯೆಂದು ಹೇಳುವ ಸಂಪ್ರದಾಯವು ಸ್ಪಷ್ಟವಾಗಿ ಕಾಣುತ್ತದೆ.

**ಪುರಂದರದಾಸರ ತಿರುಮಲ ಕೃತಿಗಳಲ್ಲಿ ಮೊದಲನೆಯ ಕೃತಿ**

**(ಜೀವಿತಾವಧಿ ಸಮಯ – ಕ್ರೀ.ಶ. 1484–1565)**

**ಕೂಸಿನ ಕಂಡೀರಾ, ಮುಖ್ಯಪ್ರಾಣನ ಕಂಡೀರಾ**
**ಬಾಲನ ಕಂಡೀರಾ, ಬಲವಂತನ ಕಂಡೀರಾ**

**ಅಂಜನೆ ಉದರದಿ, ಜನಿಸಿತು ಕೂಸು**
**ರಾಮರ ಪಾದಕ್ಕೆರಗಿತು ಕೂಸು**
**ಸೀತಗೆ ಉಂಗರ ಕೊಟ್ಟಿತು ಕೂಸು**

**ಲಂಕಾಪುರ ವನು ಸುಟ್ಟಿತು ಕೂಸು** 1

ಎಂದು ಬಾಲಾಂಜನೇಯನನ್ನು ಶಿಶುರೂಪದಲ್ಲಿ ದರ್ಶಿಸಿ ಪರವಶರಾಗಿದ್ದಾರೆ. ಈರೀತಿಯಲ್ಲಿಯೆ ಉತ್ತರಭಾರತೀಯರಾದ ಮಹಂತರು ಸಹಿತ ದರ್ಶಿಸಿದ್ದಾರೆ. ಹನುಮದುಪಾಸಕರಾಗಿ ದೇಶದ ಎಲ್ಲಡೆ ಸಂಚರಿಸಿದ್ದಾರೆ. ಈ ಕ್ಷೇತ್ರದಲ್ಲಿ ಹನುಮನ ಬಾಲರೂಪವನ್ನು, ತೇಜವನ್ನು ದರ್ಶಿಸಿದ್ದಾರೆ.

**ತಿರುಪತಿ ವೇಂಕಟರಮಣ ನಿನಗೇತಕೆ ಬಾರದು ಕರುಣ**
**ನಂಬಿದೆ ನಿನ್ನಯ ಚರಣ ಪರಿಪಾಲಿಸ ಬೇಕೋ ಕರುಣ**

**ಅಳಗಿರಿಯಿಂದಲಿ ಬಂದ ಸ್ವಾಮಿ ಅಂಜನಗಿರಿಯಲಿ ನಿಂದ**
**ಕೊಳಲು ಧ್ವನಿಯು ಬಲು ಚಂದ ನಮ್ಮ ಕುಣ್ಡಲರಾಯ ಮುಕುಂದ**

**ಬೇಟೆಯಾಡುತ ಬಂದ ಸ್ವಾಮಿ ಬೆಟ್ಟದ ಮೇಲೆ ನಿಂದ**
**ನೀಟುಗಾರ ಗೋವಿಂದ ಅಲ್ಲಿ ಜೇನು ಸಕ್ಕರೆಯ ತಿಂದ**

**ಮೂಡಲಗಿರಿಯಲಿ ನಿಂದ ಮುದ್ದು ವೇಂಕಟಪತಿ ಬಲವಂತ**
**ಈಡಿಲ್ಲ ನಿನಗೆ ಶ್ರೀಕಾಂತ ಈರೇಳು ಲೋಕಕನಂತ**

೧. ದಾಸರ ಕೀರ್ತನೆಗಳು – ಪಾವಂಜೆ ಗುರುರಾವ್

**ಆಡಿದರೆ ಸ್ಥಿರವಪ್ಪ ಅಬದ್ಧಗಳಾಡಲು ಒಪ್ಪ**
**ಬೇಡಿದ ವರಗಳನಿಪ್ಪ ನಮ್ಮ ಮೂಡಲಗಿರಿ ತಿಮ್ಮಪ್ಪ**

**ಅಪ್ಪವು ಅತಿರಸ ಮೆದ್ದ ಸ್ವಾಮಿ ಅಸುರರ ಕಾಲಲಿ ಒದ್ದ**
**ಸತಿಯ ಕೂಡಾಡುತಲಿದ್ದ ಸ್ವಾಮಿ ಸಕಲ ದುರ್ಜನರನು ಗೆದ್ದ**

**ಬಗೆ ಬಗೆ ಭಕ್ಷ್ಯ ಪರಮಾನ್ನ ನಾನಾ ಬಗೆಯ ಸಕಲ ಶಾಲ್ಯಾನ್ನ**
**ಬಗೆ ಬಗೆ ಸೊಬಗು ಮೋಹನ್ನ ನಮ್ಮ ನಗುಮುಖದ ಸುಪ್ರಸನ್ನ**

**ಕಾಶಿ ರಾಮೇಶ್ವರದಿಂದ ಅಲ್ಲಿ ಕಾಣಿಕೆ ಬರುವುದು ಚಂದ**
**ದಾಸರ ಕೂಡೆ ಗೋವಿಂದ ಅಲ್ಲಿ ದಾರಿ ನಡೆವುದೇ ಚಂದ**

**ಎಲ್ಲ ದೇವರ ಗಂಡ ಅವ ಚೆಲ್ಲರೆ ದೈವದ ಮಿಂಡ**
**ಬಲ್ಲಿದವರಿಗೆ ಉದ್ದಂಡ ಶಿವಬಿಲ್ಲ ಮುರಿದ ಪ್ರಚಂಡ**

**ಕಾಸು ತಪ್ಪಿದರೆ ಪಟ್ಟಿ ಬಡ್ಡಿ ಕಾಸು ಬಿಡದೆ ಗಂಟು ಕಟ್ಟಿ**
**ದಾಸನೆಂದರೆ ಬಿಡಗಟ್ಟಿ ನಮ್ಮ ಕೇಸಕ್ಕಿ ತಿಮ್ಮಪ್ಪಶೆಟ್ಟಿ**

**ದಾಸರ ಕಂಡರೆ ಪ್ರಾಣ ತಾ ಧರೆಯೊಳಗಧಿಕ ಪ್ರವೀಣ**
**ದ್ವೇಷಿಯ ಗಂಟಲಗಾಣ ನಮ್ಮ ದೇವಗೆ ನಿತ್ಯಕಲ್ಯಾಣ**

**ಮೋಸ ಹೋಗುವನಲ್ಲ ಒಂದು ಕಾಸಿಗೆ ಒಡ್ಡುವ ಕಯ್ಯ**
**ಏಸು ಮಹಿಮಗಾರನಯ್ಯಾ ನಮ್ಮ ವಾಸುದೇವ ತಿಮ್ಮಯ್ಯ**

**ಚಿತ್ತಾವಧಾನ ಪರಾಕು ನಿನ್ನ ಚಿತ್ತದ ದಯವೊಂದೆ ಸಾಕು**
**ಸತ್ಯವಾಹಿನಿ ನಿನ ವಾಕ್ಕು ನೀನು ಸಕಲ ಜನರಿಗೆ ಬೇಕು**

**ಅಲ್ಲಲ್ಲಿ ಪರಿಷೆಯ ಗುಂಪು ಮತ್ತಲ್ಲಲ್ಲಿ ತೋಪಿನ ತಂಪು**
**ಅಲ್ಲಲ್ಲಿ ಸೊಗಸಿನ ಸೊಂಪು ಮತ್ತಲ್ಲಲ್ಲಿ ಪರಿಮಳದಿಂಪು**

**ಅಲ್ಲಲ್ಲಿ ಜನಗಳ ಕೂಟ ಮತ್ತಲ್ಲಲ್ಲಿ ಬ್ರಾಹ್ಮರ ಊಟ**
**ಅಲ್ಲಲ್ಲಿ ಪಿಡಿದ ಕೋಲಾಟ ಮತ್ತಲ್ಲಿಂದ ಊರಿಗೆ ಓಟ**

**ಪಾಪವಿನಾಶಿನಿ ಸ್ನಾನ ಹರಿಪಾದೋದಕವೆ ಪಾನ**
**ಕೋಪತಾಪಗಳ ನಿಧಾನ ನಮ್ಮ ಪುರಂದರವಿಠಲನ ಧ್ಯಾನ**

ಈ ಕೀರ್ತನೆಯಲ್ಲಿ ಶ್ರೀಪುರಂದರದಾಸರು ತಿರುಪತಿ ವೇಂಕಟೇಶ್ವರಸ್ವಾಮಿಯನ್ನು ಅಂಜನಗಿರಿನಾಥನೆಂದು ಸ್ತುತಿಮಾಡಿದ್ದಾರೆ.

**ಅಖಿಲ ಲೋಕೈಕವಂದ್ಯ ಹನುಮಂತುಡಾ ಸೀತ –**
**ಶಿಖಾಮಣಿ ರಾಮುನಿಕಿ ಚೇಕೊನಿ ತೆಚ್ಚಿತಿವಿ –**

ಎನ್ನುವ ಕೀರ್ತನೆಯಲ್ಲಿ ಜಯಮುಲಕು ಸಾಕಾರಮುಗ ಚೆಪ್ಪಿ "ಘಟನ ಅಲಮೇಲ್ಮಂಗಕಾಂತು, ಶ್ರೀವೇಂಕಟೇಶುಕು, ತಟುಕುನ ಬಂಟುವೈ, ಧರಣಿ ನಿಲ್ಚಿತಿವಿ" ಎಂದು ಸ್ವಾಮಿಗೆ ಎದುರಾಗಿ ನಿಂತಿರುವ ಬೇಡಿ ಹನುಮಂತನನ್ನು ಅನ್ನಮಯ್ಯ ವಿವರಿಸುತ್ತಿದ್ದಾನೆಂದು ಗ್ರಹಿಸಬಹುದು. ತಿರುಮಲ ಶ್ರೀನಿವಾಸನೇ ಅಂಜನಗಿರಿಸಾರ್ವಭೌಮನೆಂದು ಸಾರುವ ಅನ್ನಮಯ್ಯ ಕೀರ್ತನೆಗಳೆ ಸಾಕು – ತಿರುಮಲೆಯನ್ನು ಅಮೃತಸ್ವರೂಪಿಯ ನಿಜ ನಿವಾಸವೆಂದು ಹೇಳುತ್ತಾ, ಭವರೋಗ ವೈದ್ಯನನ್ನು ಹೀಗೆ ಕೀರ್ತಿಸಿದನು

**ಎಡಯಕ ವೊಕ ಕಾಂತ ಯೆಕ್ಕುವ ವುಂಡಿನದಿ**
**ಕಡಲೇನಿ ಯಂಜನಾದ್ರಿ ಗಾರುಡಪುಮಂದು –**

ಎಂದು ವಿಶ್ಲೇಷಣೆ ಮಾಡಿದ್ದಾನೆ. ಹಾಗೆಯೆ – "ಅಣುರೇಣು ಪರಿಪೂರ್ಣಮೈನ ರೂಪಮು" ಎಂದು ವೇದಾಂತಿಗಳು, ಯೋಗೀಂದ್ರರು, ಬ್ರಹ್ಮಾದಿಗಳು – ದರ್ಶನ ಮಾಡುವ ಆ ವಿವಿಧವಾಗಿ ಭಾಸಿಸುವ ಪರಬ್ರಹ್ಮ ರೂಪ – ಹೀಗೆ ಅಂಜನಾದ್ರಿ ಮೇಲೆ ಅಣಿಮಾದಿಸಿದ್ಧಿಗಳಿಗೆ ಆಧಾರವಾಗಿ ಶೋಭಿಸುತ್ತಿದೆಯೆಂದು ವಿವರಿಸಿದ್ದಾನೆ. ಹಾಗೆಯೆ – ಅನ್ನಮಯ್ಯ ಅಭಿಷೇಕ ಕೀರ್ತನೆಯಲ್ಲಿ – "ಭಾವಿಂಚರೇ ಚೆಲುಲಾರ ಪರಮಾತ್ಮುನಿ – ಚೇವದೇರಿ ಚಿಗುರುಲೋ ಚೇಗಯ್ಯೆ ಯುಂಡೆನು" "ಅಂಚಲ ತಟ್ಟುಪುಣುಗು ಅವಧರಿಂಚೇವೇಳ, ಯೆಂಚನಂಜನಾದ್ರಿಪೈ ಯೇನುಗ್ಯೆ ವುಂಡೆನು" ಎಂದು ಪುನುಗುಸೇವೆಯಲ್ಲಿ ಕಪ್ಪಾದ ಆನೆಯಂತೆ ಈ ಅಂಜನಾದ್ರಿಯ ಮೇಲೆ ಇದ್ದಾನೆಂದು ಸ್ತುತಿಸಿದ್ದಾನೆ. ಹಾಗೆಯೆ "ಕಟ್ಟೆದರ ವೈಕುಂಠಮು, ಕಾಣಾಚೈನ ಕೊಂಡ" ಎನ್ನುವ ಸಂಕೀರ್ತನೆಯಲ್ಲಿ "ಪೂರ್ವಪುಟಂಜನಾದ್ರಿ ಈ ಪೊಡವಾಟಿ ಕೊಂಡ" ಹೀಗೆ ತಾಳ್ಳಪಾಕ ಕವಿಗಳು ತಮ್ಮ ಕೀರ್ತನೆಗಳಲ್ಲಿ ಅಂಜನಾದ್ರಿ ಯೆಂದು ಸ್ತುತಿಮಾಡಿ – ಪುರಾಣೋಕ್ತ ಸತ್ಯವಾದ ಹನುಮ ಜನ್ಮಕ್ಷೇತ್ರ ತಿರುಮಲ ಎಂದೇ ಪ್ರತಿಪಾದನೆ ಮಾಡಿ ಧನ್ಯರಾಗಿದ್ದಾರೆ.

**ಶ್ರೀ ಪ್ರಸನ್ನ ವೇಂಕಟದಾಸರು (ಕ್ರೀ.ಶ. 1680–1752)**

17ನೆಯ ಶತಮಾನದಲ್ಲಿ ಉತ್ತರ ಕರ್ಣಾಟಕದ ಬಾಗಲ್ಕೋಟೆ ಪ್ರಾಂತ್ಯಕ್ಕೆ ಸೇರಿದ ಶ್ರೀ ಪ್ರಸನ್ನ ವೇಂಕಟದಾಸರು, ಸಾಕ್ಷಾತ್ತು ಶ್ರೀನಿವಾಸನು ತನ್ನ ನಾಲಿಗೆಯ ಮೇಲೆ "ಪ್ರಸನ್ನ ವೇಂಕಟೇಶಾ" ಎನ್ನುವ ಬೀಜಾಕ್ಷರಗಳನ್ನು ಬರಿಸಿಕೊಂಡ ಭಾಗ್ಯವಂತನು. ಆ ಭಕ್ತವತಂಸನು, ನೀರಾಜನವನ್ನು ಶ್ರೀನಿವಾಸನ ಮೇಲೆ ಕೀರ್ತಿಸುತ್ತಾ "ಮಂಗಳ ಅಂಜನಗಿರಿ ಪತಿಗೆ ಮಂಗಳಂ" ಎನ್ನುತ್ತಾ ಏಳುಬೆಟ್ಟಗಳಲ್ಲಿರುವ ಅಂಜನಾದ್ರಿ ವೈಭವವನ್ನು ಕೀರ್ತಿಸಿದ್ದಾನೆ. ಅಷ್ಟೇ ಅಲ್ಲ, ಪ್ರಾದೇಶಿಕ ವೈಭವವನ್ನು ಅನಾವರಣ ಗೊಳಿಸುತ್ತಾ ತಿರುಮಲೆಯನ್ನು ಅಂಜನಗಿರಿ ಯೆಂದು ಭಕ್ತಿಯಿಂದ ಕೊಂಡಾಡಿದ್ದಾನೆಂದು ಆಚಾರ್ಯ ಸರ್ವೋತ್ತಮರಾವು ವಿವರಿಸಿದ್ದಾರೆ. (ವೇಂಕಟೇಶ್ವರ ವೈಭವಂ, ಪುಟ 152, ಪ್ರಕಟಣೆ ತಿ.ತಿ.ದೇ., 2007).

**ಮಾತೃಶ್ರೀ ತರಿಗೊಂಡ ವೇಂಗಮಾಂಬ (ಕ್ರೀ.ಶ. 1730–1817)**

ಶ್ರೀವೇಂಕಟಾಚಲ ಮಾಹಾತ್ಮ್ಯಂ ಪ್ರಥಮಾಶ್ವಾಸದಲ್ಲಿ ವೇಂಕಟಾದ್ರಿಗೆ ಇರುವ ವಿವಿಧ ನಾಮಗಳನ್ನು ವರ್ಣಿಸುತ್ತಾ 20 ನಾಮಗಳಲ್ಲಿ ಅಂಜನಾದ್ರಿಯನ್ನು ಒಂದು ತೇಟಗೀತಿಯಲ್ಲಿ ಅಭಿವರ್ಣಿಸುತ್ತಾ ಹನುಮ ಜನನದಲ್ಲಿ ದೇವತೆಗಳ ಸಹಕಾರವಿದೆ ಎನ್ನುವ ರಹಸ್ಯವನ್ನು ಮಾತೃಶ್ರೀ ತರಿಗೊಂಡ ವೇಂಗಮಾಂಬ ತಿಳಿಸಿದ್ದಾಳೆ.

**ಅಂಜನಾದ್ರಿ**

**ಅಂಜನಾದೇವಿ ತಪಮು ಮುನ್ನಚಟ ಜೇಸಿ**
**ಪೊಸಗ ಹನುಮಂತುಡನು ವರಪುತ್ರು ಗಾಂಚೆ**

**ನಪುಡು ದೇವತಲೆಲ್ಲ ಸಾಹಾಯ್ಯು ಲಗುಚು**
**ನಾ ಗಿರಿಕಿ ನಂಜನಾದ್ರಿಪೇ ರಮರ ನಿಡಿರಿ** [1]

ತರಿಗೊಂಡ ವೇಂಗಮಾಂಬ ಚತುರ್ಥಾಶ್ವಾಸದಲ್ಲಿ ಅಂಜನಾಚಲ ಪುತ್ರಸಂತಾನವನ್ನು ಪ್ರಸಾದಿಸುವ ಕಲ್ಪವೃಕ್ಷವೆಂದು ಹಾಡಿ ಹೊಗಳಿದ್ದಾಳೆ. ಶೌನಕಋಷಿಗೆ ಸೂತನು ಹೇಳಿದ ಸಂಭಾಷಣಾ ರೂಪದಲ್ಲಿ ಈ ಸತ್ಯವು ಸಾಕ್ಷಾತ್ಕರಿಸುತ್ತದೆ.

**"ಮುನಿನಾಥ! ವೃಷಭಾದ್ರಿ ಯನುದಾನಿ ಕಂಜನಾ**
**ಚಲಮನು ಪೇರೆಟ್ಲು ಗಲಿಗೆ?' ನನಿನ**
**ನಾ ಶತಾನಂದು ಡಿಟ್ಲನಿಯೆ ಗೇಸರಿಯನು**
**ವನಚರೋತ್ತಮು ಭಾರ್ಯ ತನಕು ಸುತುಲು**
**ಗಲುಗಕುಂಡಗ, ಮತಂಋಷೀಶ್ವರುನಿ ಜೇರಿ**
**ಮ್ರೊಕ್ಕಿ ಯಿಟ್ಲನಿಯೆ 'ನೋ ಮುನಿವರೇಣ್ಯ!**
**ಪುತ್ರಹೀನುಲ ಕೆಂದು ಬುಣ್ಯಗತುಲು ಗಲ್ಗ**
**ವನು ವೇದಪೂರುಷುಂಡಂದುವಲನ**

**ವರಕುಮಾರುಡು ನಾಕು ಗಾವಲಯು ನಂದು**
**ಕೆಟು ತಪಮು ಜೇತು ಮೀ ರಾನ್ತೀಯು' ಡನುಚು**
**ನಂಜನಾದೇವಿ ಪ್ರಾರ್ಥಿಂಚಿ ಯಡುಗಗಾನು**
**ವಿನಿ ಕರುಣ ನತ ಡಪ್ಪು ಡಾ ವೆಲದಿ ಕನಿಯೆ.** [2]

ವೇಂಗಮಾಂಬ ಅಂಜನಾದೇವಿ ತಪಶ್ಚರ್ಯವನ್ನು ರಮಣೀಯವಾಗಿ ಅಭಿವರ್ಣಿಸಿ ಹನುಮಜ್ಜನನ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಆವಿಷ್ಕರಿಸಿದ್ದಾಳೆ.

**ಹನುಮಂತನ ಜನನ**

**ದಶಮಾಸಂಬು ವಚ್ಚೆ ನತ್ತರಿ ಧರಿತ್ರಿ**
**ನಂಜನಾದೇವಿ ಗರ್ಭಮಂ ದನಘುಡೈನ**
**ಪುತ್ರು ಡುದಯಿಂಪಗಾ, ಜೂಚಿ ಪುಷ್ಪವೃಷ್ಟಿ**
**ಸುರಲು ಗುರಿಯಿಂಚಿ ಸಂತೋಷಭರಿತುಲೈರಿ,** [3]

ಹೀಗೆ ಜನ್ಮಿಸಿದ ಹನುಮಂತನ ರಮಣೀಯ ರೂಪವನ್ನು ವೇಂಗಮಾಂಬ ಅತ್ಯಂತ ಸೌಂದರ್ಯಮಹಿತವಾಗಿ ಮತ್ತೇಭ ವಿಕ್ರೀಡಿತದಲ್ಲಿ ಅಕ್ಷರಬದ್ಧ ಮಾಡಿದ್ದಾಳೆ.

---

1. ವೇಂಕಟಾಚಲಮಾಹಾತ್ಯಮು – ಮಾತೃಶ್ರೀತರಿಗೊಂಡವೆಂಗಮಾಂಬ – 1–115
2. ವೇಂಕಟಾಚಲಮಾಹಾತ್ಯಮು – ಮಾತೃಶ್ರೀತರಿಗೊಂಡವೆಂಗಮಾಂಬ – 4–29
3. ವೇಂಕಟಾಚಲಮಾಹಾತ್ಯಮು – ಮಾತೃಶ್ರೀತರಿಗೊಂಡವೆಂಗಮಾಂಬ – 4–33

**ಘನ ವಜ್ರಾಂಗಮು, ದೀರ್ಘವಾಲಮು, ಲಸತ್ಕಾಂತುಲ್, ಬಲಸ್ಥೈರ್ಯಂಬುಲ್**
**ಮುನುಲೆಲ್ಲಂ ಗನಿ 'ಯಾಂಜನೇಯುಡು ಮಹಾಮುಖ್ಯುಂಡಗುನ್ ಧಾತ್ರಿಪೈ'**
**ನನಿ ದೀವಿಂಪುಚು ಮಾರುತಾತ್ಮಜುನ ಕಂ ದಾಸಕ್ತಿತೋ ನಂದರುನ್**
**ಹನುಮಂತುಂಡನು ನಾಮಧೇಯಮಿಡಿ ರತ್ಯಾಹ್ಲಾದ ಮುಪ್ಪೊಂಗಗನ್.'** [1]

ಹೀಗೆ ತ್ರೇತಾಯುಗದಲ್ಲಿ ಅಂಜನಾದೇವಿ ತಪಸ್ಸು ಮಾಡಿ ಪುತ್ರವತಿ ಆದ ಕಾರಣ ತಿರುಮಲ ಬೆಟ್ಟವು ಅಂಜನಾದ್ರಿ ಯೆಂದು ಪ್ರಸಿದ್ಧಿ ಪಡೆದಿದೆ.

*~*~*~*~*

---

1. ವೇಂಕಟಾಚಲಮಾಹಾತ್ಯಮು – ಮಾತೃಶ್ರೀತರಿಗೊಂಡವೆಂಗಮಾಂಬ – 4–34

ಸೂರ್ಯನತ್ತ  ಹನುಮಂತನು ಎಗರುತ್ತಿರುವಾಗ ದೂರದಲ್ಲಿ ಕಂಡುಬರುತ್ತಿರುವ ವೇಂಕಟಾದ್ರಿ



# 10. ವಾಙ್ಮಯ ಪ್ರಮಾಣಗಳು

ಆಚಾರ್ಯ ಶಂಕರನಾರಾಯಣನ್

ಯಾವುದೇ ವಿಷಯವನ್ನಾದರು ವಾಙ್ಮಯ ಮತ್ತು ಶಾಸನ ಪ್ರಮಾಣಗಳಿಂದ ನಿರೂಪಣೆಯನ್ನು ಮಾಡಿದರೆ ಆ ವಿಷಯಕ್ಕೆ ಬೆಲೆ ಬರುತ್ತದೆ. ಹನುಮಂತನ ಜನ್ಮಸ್ಥಲ ಅಂಜನಾದ್ರಿಯೆಂದು ಪುರಾಣಗಳು ಮುಕ್ತಕಂಠದಿಂದ ಹೇಳುತ್ತಿವೆ. ಈ ಕಾರಣ ವೇಂಕಟಾದ್ರಿಯೇ ಅಂಜನಾದ್ರಿ ಯೆಂದು ನಿರೂಪಿಸುವುದಕ್ಕೆ ಸಾಕಷ್ಟು ಪ್ರಮಾಣಗಳನ್ನು ಗ್ರಂಥಗಳು ಮತ್ತು ಶಾಸನಗಳಿಂದ ಆಯ್ದು ತೋರಿಸಿದರೆ ಪೌರಾಣಿಕ ಪ್ರಮಾಣಗಳಿಗೆ ಮತ್ತಷ್ಟು ಬಲ ಬರುತ್ತದೆ.

### 1. ವಾಙ್ಮಯ ಪ್ರಮಾಣಗಳು

ಕಂಬರಾಮಾಯಣವು ತಮಿಳು ಭಾಷೆಯಲ್ಲಿ ರಚಿತವಾದ ರಾಮಾಯಣ. ವಾಲ್ಮೀಕಿ ರಾಮಾಯಣದ ಅದ್ಭುತ ಅನುವಾದ. ಈ ಕಾವ್ಯವು ವರಾಹಪುರಾಣದಲ್ಲಿ ಹೇಳಿದಂತೆ ಸೀತೆಯನ್ನು ಹುಡುಕುತ್ತಿರುವ ವಾನರರು ವೇಂಕಟಗಿರಿಗೆ ಬಂದರು ಎನ್ನುವ ವಿಚಾರವನ್ನು ತಿಳಿಸುತ್ತಿದೆ.

**ಅರುಂತತಿಕ್ಕು ಅರುಕು ಚೆನ್ನು ಆಂಟು ಅಳಿಕಿನುಕ್ಕು ಅಳಿಕು ಚೆಯ್ತಾಳ್**
**ಇರುಂತ ತಿಕ್ಕು ಉಣ್ರ್ಗಿ ಲಾತಾರ್, ಏಕಿನಾರ್, ಇಟ್ಟೈಯರ್ ಮಾತರ್**
**ಪೆರುನ್ ತತಿಕ್ಕು ಅರುಂತೇನ್ ಮಾಙಂ ಮರಕತಪ್ ಪೆರುಂಕುನ್ರು ಎಯ್ತು**
**ಇರುಂತು ಅತಿಲ್ ತೀರ್ನು ಚೆನ್ರಾರ್ ವೇಂಕಟತ್ತು ಇಙತ್ತ ಎಲ್ಲೈ** [1]

ಸೌಂದರ್ಯಕ್ಕೆ ಸೌಂದರ್ಯವಾದ ಸೀತಾದೇವಿ ಇರುವ ಸ್ಥಳ ಯಾವುದೆಂದು ತಿಳಿಯದ ಆ ವಾನರ ವೀರರು ಅರುಂಧತಿಗಿರಿಯ ಬಳಿಗೆ ಹೋಗಿ ಅಲ್ಲಿಂದ ಮರಕತಗಿರಿಗೆ ಹೋಗಿ ನಂತರ ವೇಂಕಟಗಿರಿಯನ್ನು ತಲುಪಿದರು.

ಹಾಗೆಯೆ ವೇದಾಂತದೇಶಿಕರೆಂದು ಶ್ರೀವೈಷ್ಣವರಿಂದ ಪೂಜೆಗೊಳ್ಳುವ ಆಚಾರ್ಯರು (ಸಾ.ಶ. 1268–1369) ತಮ್ಮ ಹಂಸದೂತ ಎನ್ನುವ ಕಾವ್ಯದಲ್ಲಿ ವೇಂಕಟಾದ್ರಿಯೇ ಅಂಜನಾದ್ರಿಯೆಂದು ತಿಳಿಸಿದ್ದಾರೆ.

**ವಿಷ್ಣೋರ್ವಾಸಾದವನಿವಹನಾದ್ಬದ್ಧರತ್ನೈಃ ಶಿರೋಭಿಃ**
**ಶೇಷಸ್ಸಾಕ್ಷಾದಯಮಿತಿ ಜನೈಸ್ಸಮ್ಯಗುನ್ನೀಯಮಾನಃ,**
**ಅಭ್ರೈರ್ಯುಕ್ತೋಽಲಘುಭಿರಚಿರೋನ್ಮುಕ್ತನಿರ್ಮೋಕಕಲ್ಪೈಃ**
**ಅಗ್ರೇ ಭಾವೀ ಸಪದಿ ನಯನೇ ರಂಜಯನ್ ಅಂಜನಾದ್ರಿಃ.** [2]

ತನ್ನ ಹೆಡೆಯ ಮೇಲೆ ವಿಷ್ಣು ನಿವಾಸಮಾಡುವುದರಿಂದಾಗಿ ಮತ್ತು ರತ್ನಗಳನ್ನು ಧರಿಸಿದ್ದರಿಂದ 'ಈ ಬೆಟ್ಟವು ಆದಿಶೇಷನೇ, ಎಂದು ಜನರಿಂದ ಕೊಂಡಾಲ್ಪಡುತ್ತಿದೆ. ಈ ಅಂಜನಾದ್ರಿಯು ಮೇಘಗಳೆನ್ನುವ ಹಾವಿನ ಪೊರೆಯನ್ನು ಹೊಂದಿ ನಯನಾನಂದಕರವಾಗಿ ಕಾಣುತ್ತಿದೆ.

ವೇದಾಂತದೇಶಿಕರೇ ಬರೆದ ದಯಾಶತಕದಲ್ಲಿಯು "ಅಂಜನಾದ್ರಿ" ಎನ್ನುವ ಹೆಸರನ್ನು ಅನೇಕ ಬಾರಿ ಬಳಿಸಿದ್ದಾರೆ.

**ಅಂಜನಾದ್ರೀಶ್ವರದಯಾಮಭಿಷ್ಟೌಮಿ ನಿರಂಜನಾಂ** [3]

1. ಕಂಬರಾಮಾಯಣ ಕಿಷ್ಕಿಂಧಾ ಕಾಂಡ – 4732  2. ಹಂಸದೂತಂ – 1–21  3. ದಯಾಶತಕಂ – 10

ಅಂಜನಾದ್ರೀಶನಾದ ವೇಂಕಟೇಶ್ವರನ ನಿಷ್ಕಲ್ಮಷವಾದ ದಯಾಗುಣವನ್ನು ಕೀರ್ತಿಸುತ್ತಿದ್ದೇನೆ.

**ಸಂಜೀವಯತು ದಯೇ ಮಾಮಂಜನಗಿರಿನಾಥರಂಜನೀ ಭವತೀ** [1]

ಎಲೈ ಅಂಜನಾದ್ರೀಶನಾದ ವೇಂಕಟೇಶ್ವರಸ್ವಾಮಿಯೇ ದಯಾ, ನೀನು ನನ್ನ ಮರಳಿ ಬದುಕಿಸು.

**ಅಮೃತಾಂಶಮವೈಮಿ ದಿವ್ಯದೇಹಂ ಮೃತಸಂಜೀವನಮಂಜನಾಚಲೇಂದೋಃ** [2]

ಅಂಜನಾಚಲಕ್ಕೆ ಚಂದ್ರನಂತೆ ಇರುವ ಶ್ರೀವೇಂಕಟೇಶ್ವರ ಸ್ವಾಮಿಯ ಮೃತಸಂಜೀವನಿಯೆಂತಿರುವ ಆ ದಿವ್ಯದೇಹವನ್ನು ಸೇವಿಸುತ್ತೀದ್ದೇನೆ.

**ನಿತ್ಯಾಪೂರ್ವಂ ನಿಧಿಮಿವ ದಯೇ ನಿರ್ವಿಶಂತ್ಯಂಜನಾದ್ರೌ.** [3]

ಎಲೈ ದಯಾ! ಯಾವಾಗಲೂ ಘನತೆಯನ್ನು ಹೊಂದಿರುವ ನಿಧಿಯಂತೆ ಇರುವ ಅಂಜನಾದ್ರಿಯನ್ನು ಪುಣ್ಯಾತ್ಮರು ಸೇರುತ್ತಾರೆ.

**ಅಶೇಷಮವಿಶೇಷಸ್ತ್ರಿಜಗದಂಜನಾದ್ರೀಶಿತುಃ** [4]

ಎಲೈ ದಯಾ! ಅಂಜನಾದ್ರಿನಾಥನಾದ ಶ್ರೀವೇಂಕಟೇಶ್ವರನ ಪದಪಂಕಜಗಳಿಂದ ನೀನು ಎಲ್ಲಕಾಲವು ಮುದ್ರಾಂಕಿತವಾಗಿರುವೆ.

ಪ್ರತಿವಾದಿಭಯಂಕರ ಅಣ್ಣನ್ ಆಚಾರ್ಯರು ರಚಿಸಿದ ಅಂಜನಾದ್ರಿ (ಸಾ.ಶ. 1361) ಕಾವ್ಯದಲ್ಲಿ ಅವರು "ಅಂಜನಾದ್ರಿನಾಥಸ್ತೋತ್ರ" ಎನ್ನುವ ಹೆಸರಿನಿಂದ ವೇಂಕಟಾದ್ರಿನಾಥನನ್ನು ಹಾಡಿ ಪುಳಕಿತರಾಗಿದ್ದಾರೆ.

ತಾಳ್ಳಪಾಕ ಅನ್ನಮಾಚಾರ್ಯರು (ಸಾ.ಶ. 1408–1503) ತಮ್ಮ ಷಣ್ಮುಖಪ್ರಿಯ ಕೀರ್ತನೆಯಲ್ಲಿ ವೇಂಕಟಾದ್ರಿಯನ್ನು ಅಂಜನಾದ್ರಿಯಂದೇ ಕೊಂಡಾಡಿದ್ದಾರೆ.

**ಅಣುರೇಣು ಪರಿಪೂರ್ಣಮೈನ ರೂಪಮು**
**ಅಣಿಮಾದಿಸಿರಿ ಅಂಜನಾದ್ರಿ ಮೀದಿ ರೂಪಮು**
**ಅಂಜನಾಚಲಮು ಮೀದ ನತಡು ಶ್ರೀವೇಂಕಟೇಶು**
**ಡಂಜನೀತನಯುಡಾಯ ಅನಿಲಜುಡು** [5]

ಎಂದು 'ಅಂಜನಾಚಲ', 'ಅಂಜನಾತನಯ' ಎಂದು ಕೀರ್ತಿಸಿರುವುದು ಕೂಡಾ ಸರಿಯಾದ ಪ್ರಮಾಣವೆ. ಮತ್ತು ಅನ್ನಮಾಚಾರ್ಯರೇ

**ಮಿಸಿಮಿ ಅಂಜನಗಿರಿಮೀದ ವಸಂತವೇಳನು**
**ವೆಸ ಗಲ್ಪವೃಕ್ಷಮು ವಿರುಲಿಚ್ಚಿನಟ್ಲು ........** [6]

ಎಂದು ಅಂಜನಗಿರಿಯನ್ನು ವರ್ಣಿಸಿದ್ದಾರೆ. ಹೀಗೆ ಅನೇಕ ಕೀರ್ತನೆಗಳಲ್ಲಿ ಅಂಜನಾದ್ರಿ, ಅಂಜನಗಿರಿ ಯೆಂದು ಅನ್ನಮಾಚಾರ್ಯರು

---

1. ದಯಾಶತಕ–12;
2. ದಯಾಶತಕ – 22;
3. ದಯಾಶತಕ – 44;
4. ದಯಾಶತಕ – 85;
5. ತಾಳ್ಳಪಾಕ ಪದಸಾಹಿತ್ಯ – 4ನೆಯ ಸಂಪುಟ, 443 ಕೀ.;
6. ತಾಳ್ಳಪಾಕ ಪದಸಾಹಿತ್ಯ – 13ನೆಯ ಸಂಪುಟ, 107 ಕೀ.

ಸ್ವಾಮಿಯನ್ನು ಕೀರ್ತಿಸುತ್ತಾ ಗಾನಮಾಡಿದ್ದಾರೆ. ಸಾಮಾನ್ಯ ಶಕೆ 1484–1565ರ ಮಧ್ಯ ಜೀವಿಸಿದ್ದ ಮಹಾನುಭಾವರು ಪುರಂದರದಾಸರು ಶ್ರೀವೇಂಕಟೇಶ್ವರ ಸ್ವಾಮಿಯನ್ನು ಸ್ತುತಿಸುತ್ತಾ ಬರೆದ ರಚನೆಯಲ್ಲಿ

**ಅಳಗಿರಿಯಿಂದಲಿ ಬಂದ ಸ್ವಾಮಿ ಅಂಜನಗಿರಿಯಲಿ ನಿಂದ**
**ಕೊಳಲನೂದುವ ಚಂದ ನಮ್ಮ ಕುಂಡಲರಾಯ ಮುಕುಂದ**

ಎಂದು ಆ ಶ್ರೀನಿವಾಸನ ನಿವಾಸಸ್ಥಳವು ಅಂಜನಾದ್ರಿಯೇ ಎಂದು ತಿಳಿಸಿದ್ದಾರೆ.

**ವಾಮನಭಟ್ಟಾಚಾರ್ಯ**

15ನೆಯ ಶತಮಾನಕ್ಕೆ ಸೇರಿದ ವೇಮಭೂಪಾಲನ ಆಸ್ಥಾನಕವಿಯಾದ ವಾಮನಭಟ್ಟ ಬಾಣನು ತನ್ನ 'ಹಂಸ ಸಂದೇಶ'ದಲ್ಲಿ ಅಂಜನಾದ್ರಿಯನ್ನು ಹೀಗೆ ವರ್ಣಿಸಿದ್ದಾನೆ

**ಶೃಂಗಾಘಾಟ್ಯೈಃ ತಪನತುರಗಾಲೀಢದೂರ್ವಾಪ್ರವಾಲೈ –**
**ರಂಹಚ್ಛೇದೀ ತದನು ಭವತಾ ದೃಶ್ಯತಾಂ ಅಂಜನಾದ್ರಿಃ,**
**ಹೇಲಾಲೋಲಂ ವಿಹರತಿ ಸದಾ ಯತ್ರ ಪೋತ್ರೀ ಪುರಾಣೋ**
**ಯದ್ದಂಷ್ಟ್ರಾಗ್ರೇ ವಿಹೃತಿಮಕರೋತ್ ಪುಷ್ಪಧೂಲೀವ ಭೂಮಿಃ.** [1]

ಎಲೈ ಹಂಸಾ! ತನ್ನ ಶಿಖರಗಳ ಮೇಲೆ ಸೂರ್ಯನ ಕುದುರೆಗಳನ್ನು ತಿನ್ನಲು ಬಿಟ್ಟಿರುವ ದೂರ್ವಾ ಎನ್ನುವ ಹುಲ್ಲಿನಿಂದ ತುಂಬಿರುವ ಅಂಜನಾದ್ರಿಯನ್ನು ನೀನು ಕಾಣಬಹುದು. ಅಲ್ಲಿ ಸನಾತನವಾಗಿ ಕಂಗೊಳಿಸುತ್ತಿರುವ ವರಾಹಮೂರ್ತಿ ಇದ್ದಾನೆ. ಆ ವರಾಹಮೂರ್ತಿಯ ಕೋರೆದಾಡಿಯ ಕೊನೆಯಲ್ಲಿ ಪುಷ್ಪರಜಕಣದಂತೆ ಈ ಭೂಮಿಯು ಸುತ್ತುತ್ತಿರುತ್ತದೆ.

**ಶ್ರೀವೇಂಕಟೇಶ್ವರ ದಾಸರು**

ಸಾ.ಶ. 1680ರಲ್ಲಿ ಕರ್ನಾಟಕ ರಾಜ್ಯದ ಬಾಗಲ್ಕೋಟೆಯಲ್ಲಿ ಜನಿಸಿದ ಶ್ರೀವೇಂಕಟೇಶ್ವರದಾಸರು "ಮಂಗಳ ಅಂಜನಗಿರಿಪತಿಗೆ ಮಂಗಳಂ" ಎಂದು ಹಾಡಿದ್ದಾರೆ.

**ಶ್ರೀರಂಗರಾಮಾನುಜಾಚಾರ್ಯರು**

ಶ್ರೀರಂಗರಾಮಾನುಜಾಚಾರ್ಯರು 17ನೆಯ ಶತಮಾನದಲ್ಲಿ ಜೀವಿಸಿದ ಮಹನೀಯರು. ಈ ಆಚಾರ್ಯರು ತಮ್ಮ ಕಠೋಪನಿಷದ್ಭಾಷ್ಯದ ಮಂಗಳಶ್ಲೋಕದಲ್ಲಿ ಅಂಜನಾದ್ರಿನಾಥನಿಗೆ ನಮಿಸುತ್ತಾ ಹೀಗೆನ್ನುತ್ತಾರೆ:

**ಅತಸೀಗುಚ್ಛಸಚ್ಛಾಯಮಂಚಿತೋರಸ್ಥಲಂ ಶ್ರಿಯಾ,**
**ಅಂಜನಾಚಲಶೃಂಗಾರಮಂಜಲಿರ್ಮಮ ಗಾಹತಾಂ.** [2]

ಅಗಸೆ ಹೂವಿನಂತೆ ಸುಂದರವಾದ, ಶ್ರೀಮಹಾಲಕ್ಷ್ಮೀಮುದ್ರಾಂಕಿತವಾದ ಅಂಜನಾದ್ರಿಗೇ ಅಲಂಕಾರವಾದ ಆ ಶ್ರೀವೇಂಕಟೇಶ್ವರನು ನನ್ನ ನಮಸ್ಕಾರಗಳನ್ನು ಸ್ವೀಕರಿಸಲಿ!

---

1. ಹಂಸಸಂದೇಶ, ವಾಮನಭಟ್ಟ ಬಾಣನು – 35
2. ಕಠೋಪನಷತ್, ಶ್ರೀರಂಗರಾಮಾನುಜಭಾಷ್ಯಮ್, ತಿ.ತಿ.ದೇ. ಮುದ್ರಣ, 1984.

**ಬೊಡ್ಡುಚರ್ಲ ಚಿನ ತಿಮ್ಮಯ**

16ನೆಯ ಶತಮಾನದ ಬೊಡ್ಡುಚೆರ್ಲ ಚಿನ ತಿಮ್ಮಯ ತನ್ನ ಪ್ರಸನ್ನರಾಘವನಾಟ್ಯ ಪ್ರಬಂಧದಲ್ಲಿ ತಿರುಮಲೇಶನ ತೀರ್ಥಯಾತ್ರಾ ಸಂದರ್ಭದಲ್ಲಿ "ಅಂಜನಾದ್ರೀಶು ತೀರ್ಥಯಾತ್ರ" ಎಂದು ಹೇಳಿದ್ದಾನೆ.

**ಗುರುವಿಲಾಸ ನಾಭೀಸರೋವರ ಭವಪ್ರ**
**ಭೂತ ಭುವನಾಂಬುಜಾತುಂಡುನ್ನೈ ತನರ್ಚು**
**ನಂಜನಾದ್ರೀಶು ತೀರ್ಥಯಾತ್ರಾನು ರಕ್ತಿ**
**ಗೂಡೆ ನೀ ಪಾರಿಷದುಲ ಪೆನ್ನೂಗ್ಗಟ ಮಿಚಟ**

**"ವ॥ ಇಂದು ನಂದೇಲ ತಿರುಮಲ ಧರಾವರುಂಡುನು ತಿರುಮಲ ಕೊಂಡ ನೇಲು ಜೇಜೇಸ ಕಾಡು ಬೂಜಿಂಚು ವಾಡೈ"**[1]

"ನಂದ್ಯಾಲ ಪ್ರಾಂತ್ಯವನ್ನು ತಿರುಮಲರಾಯ (ತಿಮ್ಮರಾಜ) ಆಳುತ್ತಿರುವಾಗ ಅಂಜನಾದ್ರೀಶನಾದ ವೇಂಕಟೇಶ್ವರನ ದರ್ಶನಕ್ಕಾಗಿ ತೀರ್ಥಯಾತ್ರಾನುರಕ್ತಿಯಿಂದ ಅಂಜನಾದ್ರೀ ಪಾರಿಷದರು ರಾಜಸಭೆಯಲ್ಲಿ ಸೇರಿದರು" ಎಂಬುದಾಗಿ ವರ್ಣಿಸಲಾಗಿದೆ.

**ಟೇಕುಮಳ್ಳ ರಂಗಶಾಯಿ**

17ನೆಯ ಶತಮಾನಕ್ಕೆ ಸೇರಿದ ಟೇಕುಮಳ್ಳ ರಂಗಶಾಯಿ ರಚಿಸಿದ 'ವಾಣೀವಿಲಾಸವನಮಾಲಿಕ' ಗ್ರಂಥದಲ್ಲಿ ಅಂಜನಾದ್ರಿ ಪ್ರಸ್ತಾವನೆ ಬರುತ್ತದೆ.

**ಅಂಜನಾಧರ ಗುರುಡಾಹಾರ್ಯ ವೃಷಶೈಲ**
**ನಾರಾಯಣಾದ್ರಿ ಕನಕಶಿಖರುಲು,**
**ನೀಲಾದ್ರಿ ಚಿಂತಾಮಣಿಗಿರಿ ವೈಕುಂಠಾದ್ರಿ**
**ವಾರಾಹ ವೃಷಶೈಲ ಮೇರುಗಿರುಲು**
**ಸಿಂಹಾದ್ರಿತೀರ್ಥಾದ್ರಿ ಶೇಷಾದ್ರಿ ಪುಷ್ಕರಾ–**
**ಚಲ ವೇಂಕಟಾದ್ರುಲು ನೆಲಮಿ ಶ್ರೀನಿ**
**ವಾಸಾದ್ರಿ ಶ್ರೀಶೈಲ ಭಾಸುರ ಸಂಜ್ಞಲ**
**ಕೃತನಾಮಮುಲು (ಗಲ್ಗು) ಕೋಟ್ಲಕೊಲದಿ**

**ಶ್ರೀವೀರಬ್ರಹ್ಮೇಂದ್ರಸ್ವಾಮಿಗಳು**

17ನೆಯ ಶತಮಾನದ ವೀರಬ್ರಹ್ಮೇಂದ್ರಸ್ವಾಮಿಗಳು ತಮ್ಮ "ಗೋವಿಂದವಾಕ್ಯಾಲು"ಎಂಬ ಕಾವ್ಯದಲ್ಲಿ ಅಂಜನಾದ್ರಿ ಕುರಿತು ಹೀಗೆ ವರ್ಣಿಸಿದ್ದಾರೆ –

1. ಪ್ರಸನ್ನರಾಘವನಾಟ್ಯ ಪ್ರಬಂಧಂ – 1–5,6
2. ವಾಣೀವಿಲಾಸವನಮಾಲಿಕ – ಪುಟ 88

**ಅಂಗನಾಮಣಿಯ್ಯೆನ ಆದಿಲಕ್ಷ್ಮಿನಿ ಗೂಡಿ**
**ಆನಂದಸ್ವಾಮುಲು ವಚ್ಚೇನಿ ಮಾ**
**ಅಂಗಜಜನಕುಡು ಆನಂದಮುಲಚೇತ**
**ಅಂಜನಾದ್ರಿಕಿ ವಚ್ಚಿ ಚೇರೇನುಮಾ** 1

**ತರಿಗೊಂಡ ವೇಂಗಮಾಂಬ**

18ನೆ ಶತಮಾನಕ್ಕೆ ಸೇರಿದ ಯೋಗಿನಿಯಾದ ತರಿಗೊಂಡ ವೇಂಗಮಾಂಬ 'ಶ್ರೀವೇಂಕಟಾದ್ರಿಮಾಹಾತ್ಮ'ವನ್ನು ತೆಲುಗುನಲ್ಲಿ ಅನುವಾದಮಾಡಿ ಧನ್ಯಳಾದಳು. ಆ ಗ್ರಂಥದಲ್ಲಿಯು ಸಹಾ ಅಂಜನಾದ್ರಿಯಾದ ತಿರುಮಲಯಲ್ಲಿ ಆಂಜನೇಯ ಸ್ವಾಮಿ ಹುಟ್ಟಿದ ವೃತ್ತಾಂತವನ್ನು ನಾವು ಗಮನಿಸಬಹುದು.

**ಅಂಜನಾದೇವಿ ತಪಮು ಮುಂದಚಟ ಜೇಸಿ**
**ಪೊಸಗ ಹನುಮಂತುಡನು ವರಪುತ್ತ್ರ ಗಾಂಚೆ**
**ನಪುಡು ದೇವತಲೆಲ್ಲ ಸಹಾಯುಲಗುಚು**
**ನಾ ಗಿರಿಕಿ ನಂಜನಾದ್ರಿ ಪೇರಮರನಿಡಿರಿ.** [2]

**ಶ್ರೀರಾಮನು ವೇಂಕಟಾದ್ರಿಗೆ ಆಗಮಿಸುವುದು**

**ಅಂಜನಾದೇವಿ ಶ್ರೀವೇಂಕಟಾದ್ರಿಮೀದ**
**ನುಂಡಿ ರಾಮುಡು ಬಹುಕಪಿತಂಡಮುಲನು**
**ಗೂಡಿ ವಚ್ಚುಟ ಗನಿ, ಪೈಡಿಕೊಂಡ ಡಿಗ್ಗಿ**
**ಮೊನಸಿ ಯೆದುರುಗ ಜನಿ ರಾಘವುನಕು ಮ್ರೊಕ್ಕಿ.**

**ಘನುಡಗು ರಾಮುಡು ವಿಷ್ಣುಂ**
**ಡನಿ ಮನಮುನ ನಿಶ್ಚಯಿಂಚಿ, ಯತಿಶಯಭಕ್ತಿನ್**
**ವಿನುತುಲು ಸೇಯುಚು, ನಚ್ಚಟ**
**ನೆನ ಲೇನಿ ಮುದಂಬು ಮೀರ ನಿಟ್ಲನಿ ಪಲ್ಕೆನ್.**

**ರಾಮ! ಸುಕೀರ್ತಿಕಾಮ! ಬಹುರಾಕ್ಷ ಯೂಥ ವಿರಾಮ! ಸದ್ಗುಣ**
**ಸ್ತೋಮ! ದಿನೇಂದ್ರವಂಶ ಘನತೋಯಧಿ ಸೋಮ! ದಶಾಸ್ಯಭೀಮ! ನೀ**
**ಶ್ರೀ ಮಹಿತ ಪ್ರಭಾವಮುನು ಶೇಷುಡು ಸನ್ನುತಿ ಸೇಯಲೇಡು, ನೇ**
**ನೇಮಿ ನುತಿಂಪ ನೇರ್ತು? ಜಗದೀಶ್ವರ! ಮ್ರೊಕ್ಕೆದ ನನ್ನು ಗಾವವೇ!**

---

1. ಗೋವಿಂದವಾಕ್ಯಾಲು – ಪುಟ 318
2. ಶ್ರೀವೇಂಕಟಾಚಲ ಮಾಹಾತ್ಮಂ, ತರಿಗೊಂಡ ವೇಂಗಮಾಂಬ 1–115

ಈ ವೇಂಕಟಾದ್ರಿಪೈ ನೇನು ವರ್ತಿಂಪುದು
ಗಾವುನ ನಾಯಂದು ಗರುಣ ನುಂಚಿ
ವೇಂಕಟಾದ್ರಿಕಿ ಮೀರು ವಿಚ್ಚೇಯು'ಡನ ವಿನಿ
ಶ್ರೀರಾಮುಡಿಟ್ಲನೆ 'ವೀರಕಪುಲ
ತೋಡ ಶೀಘ್ರಂಬೈನ ದೂರಪ್ರಯಾಣಂಬು
ಕಲಿಗಿಯುನ್ನದಿ, ಕಾರ್ಯಘಟನಮ್ಮೈನ
ವೆನುಕ ನೀವನಿನಟ್ಲ ವೇಂಕಟಾದ್ರಿಕಿ ವತ್ತು'
ಮನಗ 'ದೇವರ ದರ್ಶನಾರ್ಥ ಮಚಟ

ಗಾಚಿಯುನ್ನಾರು ಮುನಿವರುಲ್ ಗಾನ, ವಾರಿ
ಜೂಡ ರಾವಲೆ' ನನುಚು ನಾ ಚೇಡೆ ಪಿಲುಚು
ಸಮಯಮುನ ನಾಂಜನೇಯು ಡಚ್ಚಟಿಕಿ ವಚ್ಚಿ
ವಿನಯಮುನ ಮ್ರೊಕ್ಕಿ ಇಟ್ಲನಿ ವಿನ್ನವಿಂಚೆ.
'ದೇವ! ಮಾ ತಲ್ಲಿ ಯಂಜನಾದೇವಿ ಮನವಿ
ಚೇಸಿನದಿ ಮೀರು ಮನ್ನಿಂಚಿ ಚಿತ್ತಗಿಂಪ
ವಲಯು, ನೆಲನ್ನ ಗಪುಲೆಲ್ಲ ನಲಸಿನಾರು
ಗನುಕ ಶ್ರೀ ವೇಂಕಟಾದ್ರಿಕಿ ಜನುಟ ಯೊಪ್ಪು.

ಶ್ರೀಯಂಜಾನಶ್ರಮ ಸಿದ್ಧ ಸ್ಥಲಮುನಂದು
ಫಲಸುಮ ವೃಕ್ಷಮುಲ್ ಗಲಿಗಿಯುಂಡು
ಗಂದಮೂಲಾದುಲು, ಘನ ಪುಣ್ಯತೀರ್ಥಂಬು
ಲಂದುಂಡು ಗನುಕ ನೇ ಡಚಟ ನಿಲ್ಚಿ

ಯವಲ ಬೋದಗು, ನಂಜನಾದ್ರಿ ದೂರಮು ಗಾದು
ಮನ ಪ್ರಯಾಣಮುನಕು ಮಾರ್ಗ ಮದಿಯೆ
ಯಟುಗಾನ ಮಾ ತಲ್ಲಿಯಂದು ಸತ್ಕೃಪ ನುಂಚಿ
ಯಟಕು ರಾವಲೆ ನಿಪು' ಡನಗ ರಾಮ

ಚಂದ್ರುಡಬ್ಜಾಪ್ತಸುತುನಿ, ಲಕ್ಷ್ಮಣುನಿ ಜೂಚಿ
ಮಂದಹಾಸಿತಾಸ್ಯುಡೈ 'ಹನುಮಂತುಡನುಟ
ವಿಂಟಿರೇ!' ಯನ್ನ ವಾರು ಭೂವಿಭುನಿ ಜೂಚಿ
'ದೇವ! ಶ್ರೀ ವೇಂಕಟಾದ್ರಿಕಿ ಬೋವವಚ್ಚು.'

**ಅನಿ ಯಿಟ್ಲು ಮನವಿ ಚೇಯಗ**
**ವಿನಿ ರಾಮುಡು ಸಮ್ಮತಿಂಚಿ, ವೇಡುಕಗಾ ನ**
**ಯ್ಯನಿಲತನೂಜುನಿ ನೆನರುನ**
**ಗನುಗೊನಿ ಯಿಟಲ್ನಿಯೆ ಜಾಲ ಗೌರವ ಮೊಪ್ಪನ್.**

**"ಮಾರುತಪುತ್ರ! ನೀ ಮನವಿ ಮಾ ಮದಿ ಕಿಷ್ಟಮೆ ಯಯ್ಯೆ, ನಿಪ್ಪು ಡಾ**
**ಸಾರತರಾಂಜನಾಖ್ಯ ವರಶೈಲ ಸುಮಾರ್ಗಮುನಂದೆ ಪೋದ; ಮಾ**
**ದಾರಿನಿ ವಾನರಾವಳಿಕಿ ದಪ್ಪಕ ಚೂಪು' ಮಟಂಚು ಬಲ್ಕ, ನ**
**ವ್ವೀರುಡು ಸಮ್ಮತಿಂಚಿ ಕಪಿವೀರುಲ ಬಿಲ್ಚಿ ಮುದಂಬು ಮೀರಗನ್.**

**ವೇಂಕಟಾದ್ರಿ ಮಾರ್ಗ ಮಂಕಿತಮುಗ ಜೂಪಿ**
**ಹರಿಸಮೂಹ ವಿಭುನಿ ಯನುಮತಮುನ**
**ರಾಮ ಲಕ್ಷ್ಮಣುಲನು ರಹಿಮೀರ ಭುಜಮುಲಂ**
**ದುಂಚಿಕೊನಿ ಬಲಂಬು ವೆಂಚಿ ನಡಚೆ.** [1]

ತದನಂತರಂಬುನ ರಾಮಚಂದ್ರುಂಡು ತತ್ಪರ್ವತೋತ್ತರ ಮಾರ್ಗಂಬುನ ಬರ್ವತಾರೋಹಣಂಬು ಸೇಯುಚುಂಡಿ, ತನ್ಮಧ್ಯಂಬುನ ಯಕ್ಷ ಶಾಪಮೋಕ್ಷಂಬು ಚೇಸಿವಚ್ಚಿ, ಕಂದಮೂಲ ಫಲಭರಿತಂಬೈನ ಯಂಜನಾಶ್ರಮಂಬುನಂದು ನಾಕಾಶ ಗಂಗ ಸಮೀಪಂಬುನ ಗಪಿಸಮೂಹಮುಲತೋಡ ರಾಮಲಕ್ಷ್ಮಣುಲು ನಿಲಿಚಿ ತತ್ತೀರ್ಥಂಬುನ ಸ್ನಾನ ಸಂಧ್ಯಾದಿ ಕೃತ್ಯಂಬುಲು ನೆರವೇರ್ಚಿ; ರಂಜನಾದೇವಿ ಫಲಪುಷ್ಪಂಬುಲು ಸಮರ್ಪಿಂಚಿ ಪೂಜಿಂಪಗಾ, ರಾಮಲಕ್ಷ್ಮಣುಲು ಸಂತುಷ್ಟುಲೈ ಯಂಜನಾದೇವಿ ನಾದರಿಂಚಿ ವೀಡ್ಕೊನಿ?[2]

ಪ್ರಕಾಶಿಂಚುಚುನ್ನ ನಾರಾಯಣಾದ್ರಿ ಪ್ರದೇಶಂಬುನಂದು ಬರಮಪಾವನಿಯ್ಯೆ ಯೊಪ್ಪುಚುನ್ನ ಸ್ವಾಮಿಪುಷ್ಕರಿಣಿಕಿ ನುತ್ತರಂಬುಗಾ ಗ್ರೋಶಮಾತ್ರ ದೂರಂಬುನಂದಾಕಾಶಗಂಗಾ ಪ್ರವಾಹಂ ಬುನ್ನದಿ. ನೀವಂದು ಜೇರಿ ತ್ರಿಕಾಲಸ್ನಾನಂಬು ಲಾಚರಿಂಚುಚು ದ್ವಾದಶಾಬ್ದಂಬುಲು ತಪಂಬುಜೇಯುಚುಂಡು, ಮಂತ ಸುತುಂಡುದಯಿಂಚು' ನನಿನ, ಮಹಾಪ್ರಸಾದಂಬನಿ ಮ್ರೊಕ್ಕಿ ಯಮ್ಮುನಿ ಯಾಜ್ಞಾಧಾರಿಣಿಯ್ಯೆ ನಾರಾಯಣಾದ್ರಿ ಜೇರಿ ಸ್ವಾಮಿಪುಷ್ಕರಿಣಿಲೋ ಸ್ನಾನಂಬು ಜೇಸಿ ತತ್ತೀರಾಶ್ವತ್ಥವೃಕ್ಷಂಬುಲಕು ಬ್ರದಕ್ಷಿಣಂಬುಲು ಚೇಸಿ ವರಾಹಸ್ವಾಮಿಕಿ ಮ್ರೊಕ್ಕಿ, ಚನಿ ಯಾಕಾಶಗಂಗ ಕರಿಗಿ ಯಂದುನ್ನ ಮುನುಲಕು ನಮಸ್ಕರಿಂಚಿ ವಾರಿ ಯಾಜ್ಞವಡಸಿ, ತ್ರಿಕಾಲ ಸ್ನಾನಂಬುಲು ಸೇಯುಚು ನಿರಾಹಾರಿಣಿಯ್ಯೆ ಯೊಕ್ಕ ಸಂವತ್ಸರಂಬು ತಪಂಬು ಜೇಯುಚುಂಡೆ; ನಂತ ವಾಯುದೇವುಂಡು ಪ್ರಸನ್ನುಂಡೈ ಪ್ರತಿದಿನಂಬು ನೊಕ್ಕೊಕ್ಕ ಮಧುರ ಫಲಂಬು ನಿಚ್ಚುಚುಂಡ, ನದಿ ಭಕ್ಷಿಂಚುಚು ನತ್ತಪಸ್ವಿನಿ ದ್ವಾದಶ ವರ್ಷಂಬುಲು ಪೂರಿಗಾ ದಪಂ ಬಾಚರಿಂಚೆ. ಅಂತ ನೊಕ್ಕನಾಡು ಪವನುಂಡು ಸದ್ವೀರ್ಯ ಗರ್ಭಿತಂಬೈನ ಫಲಂಬು ನಿಯ್ಯಗಾ ದಾನಿ ಭುಜಿಂಚಿ ಯತ್ತರುಣೀಮಣಿ ಗರ್ಭಂಬು ಧರಿಯಿಂಚೆ ನಂತ.

**ಅಂಜನಾದೇವಿ ಗರ್ಭಮಂ ದನಿಲದೇವು**
**ಡೊಕ್ಕನಾಡು ಪ್ರವೇಶಿಂಚುಚುಂಡಿನಟುಲ**

---

1. ಶ್ರೀವೇಂಕಟಾಚಲ ಮಾಹಾತ್ಮ್ಯಂ, ತರಿಗೊಂಡ ವೇಂಗಮಾಂಬ 1–213–221
2. ಶ್ರೀವೇಂಕಟಾಚಲ ಮಾಹಾತ್ಮ್ಯಂ, ತರಿಗೊಂಡ ವೇಂಗಮಾಂಬ 1–227

**ಸಂಯಮೀಂದ್ರುಲ ಕಚ್ಚೋಟ ಸ್ವಪ್ನಮಯ್ಯೆ**
**ನಂದುಚೇ ವಾರು ನಿಸ್ಸಂಶಯಾತ್ಮುಲೈರಿ.**

**ದಶಮಮಾಸಂಬು ವಚ್ಚೆ ನತ್ತಱಿ ಧರಿತ್ರಿ**
**ನಂಜನಾದೇವಿ ಗರ್ಭಮಂ ದನಘುಡೈನ**
**ಪುತ್ತ್ರು ಡುದಯಿಂಪಗಾ ಜೂಚಿ ಪುಷ್ಪವೃಷ್ಟಿ**
**ಸುರಲು ಗುರಿಯಿಂಚಿ ಸಂತೋಷಭರಿತುಲೈರಿ.**

**ಘನ ವಜ್ರಾಂಗಮು ದೀರ್ಘವಾಲಮು ಲಸತ್ಕಾಂತುಲ್ ಬಲಸ್ಥೈರ್ಯಮುಲ್**
**ಮುನುಲೆಲ್ಲಂ ಗನಿ 'ಯಾಂಜನೇಯುಡು ಮಹಾಮುಖ್ಯುಂಡಗುನ್ ಧಾತ್ರಿಪೈ'**
**ನನಿ ದೀವಿಂಚುಚು ಮಾರುತಾತ್ಮಜುನಕಂ ದಾಸಕ್ತಿತೋ ನಂದರುನ್**
**ಹನುಮಂತುಂಡನು ನಾಮಧೇಯಮಿಡಿ ರತ್ಯಾಹ್ಲಾದ ಮುಪ್ಪೊಂಗಗನ್.**

ತ್ರೇತಾಯುಗಂಬುನ ದಂಜನಾದೇವಿ ಯಿವ್ವಿಧಂಬುನ ದಪಂಬುಜೇಸಿ ಪುತ್ತ್ರವತಿಯ್ಯೆನ ನಿಮಿತ್ತಂಬುಚೇತ ನಗ್ಗಿರಿ ಯಂಜನಾದ್ರಿಯನ ಬ್ರಸಿದ್ಧಂಬಯ್ಯೆ.[1]

## ಸ್ಟ್ರಾಟನ್ ಎನ್ನುವ ವಿದ್ವಾಂಸ

ಸಾ.ಶ. 1800ಕ್ಕೆ ಸೇರಿದ ಸ್ಟ್ರಾಟನ್ ಎನ್ನುವ ವಿದ್ವಾಂಸನು ತಿರುಮಲ ಆಲಯ ಕುರಿತು ವಿಷಯಗಳನ್ನು ಸಂಕಲನೆ ಮಾಡಿ "ಸವಾಲ್ ಏ ಜವಾಬ್" ಎನ್ನುವ ಪುಸ್ತಕವನ್ನು ರಚಿಸಿದನು. ಈ ಪುಸ್ತಕದಲ್ಲಿ ಅಂಜನಾದ್ರಿ ಎನ್ನುವ ಪದವನ್ನು ವಿವರಿಸುತ್ತಾ ಅಂಜನಾದೇವಿಗೆ ಆಂಜನೇಯನು ಹುಟ್ಟಿದ ಸ್ಥಳ ಆದ ಕಾರಣ ಅಂಜನಾದ್ರಿ ಎಂದು ಹೆಸರುವಾಸಿಯಾಗಿದೆ[2] ಎಂದು ಬರೆದಿದ್ದಾನು.

ಇದು ಮಾತ್ರವಲ್ಲದೆ "ಅಂಜನಾದ್ರಿಮಹಾತ್ಮ್ಯಂ" ಎನ್ನುವ ಅಮುದ್ರಿತ ಗ್ರಂಥವೊಂದು ಲಂಡನ್ ನಲ್ಲಿನ ಇಂಡಿಯನ್ ಆಫೀಸ್ ರಿಕಾರ್ಡ್ ಲೈಬ್ರರಿಯಲ್ಲಿದೆ. ಆ ಗ್ರಂಥದಲ್ಲಿಯೂ ಸಹಾ ವೇಂಕಟಾದ್ರಿಯಲ್ಲಿಯೇ ಆಂಜನೇಯನು ಹುಟ್ಟಿದನೆಂದು ಇದೆ ಎಂದು ನ್ಯೂ ಕೇಟಲಾಗಸ್ ಕೇಟಲೋಗಾರಮ್ ವಿವರಿಸುತ್ತಿದೆ.

ಹಾಗೆಯೆ 19ನೆಯ ಶತಮಾನದ ವಿವಿಧ ಪರಿಶೋಧಕರು ಹೊರತಂದ ಅವೆಷ್ಟೋ ಇತಿಹಾಸ ಗ್ರಂಥಗಳಲ್ಲಿ ಶ್ರೀವೇಂಕಟೇಶ್ವಸ್ವಾಮಿ ವೈಭವವನ್ನು ಸಾರುತ್ತಾ ಅಂಜನಾದ್ರಿಯಾದ ತಿರುಮಲಯಲ್ಲಿಯೇ ಆಂಜನೇಯನು ಹುಟ್ಟಿರುವುದಾಗಿ ತಿಳಿಸುವ ವೃತ್ತಾಂತವನ್ನು ಮತ್ತೆ ಮತ್ತೆ ಹೇಳಲಾಗಿದೆ.

## 2. ಶಾಸನ ಪ್ರಮಾಣಗಳು

ಶಾಸನ ಎಂದರೆ ಆಜ್ಞೆ, ಪಾಲನೆ ಅಥವಾ ರಾಜನು ಮಾಡಿದ ದಾನಕ್ಕಾಗಿ ಬರೆದುಕೊಟ್ಟ ಕವುಲು ಎನ್ನುವ ಅರ್ಥಗಳಿವೆ. ಆಕ್ಸ್ಫರ್ಡ್ ನಿಘಂಟುವಿನಲ್ಲಿ Words inscribed especially on a monument, coin, stone or in a book etc., ಎನ್ನುವ ಅರ್ಥವನ್ನು ನೀಡಲಾಗಿದೆ.

---

೧. ವೇಂಕಟಾಚಲಮಾಹಾತ್ಮ್ಯಂ, ತರಿಗೊಂಡ ವೇಂಗಮಾಂಬ –೪–೩೧–೩೫

2. An English translation of Sawal-E-Jawab, Page 3, V. R. Srinivasa Rao, The Mythic Society, Bangalore, 1950.

## 2.1 ವೇಂಕಟಾಚಲ ಮಹಾತ್ಮೆ ಮತ್ತು ಪ್ರಾಮಾಣಿಕತೆ

ವೇಂಕಟಾಚಲಮಾಹಾತ್ಮ್ಯ ಎನ್ನುವ ಗ್ರಂಥವು ಪ್ರಾಮಾಣಿಕವೇ ಎನ್ನುವುದಕ್ಕೆ ಎರಡು ಶಿಲಾಶಾಸನಗಳು ಪುರಾವೆಗಳಾಗಿ ತಿರುಮಲೆಯ ಆಲಯದಲ್ಲಿ ಸಿಗುತ್ತವೆ. 1491 ಜೂನ್ 27ರಕ್ಕೆ ಸಲ್ಲುವ ಮೊದಲನೆಯ ಶಾಸನ ತಿರುಮಲೆ ಆಲಯದ ಎರಡನೆಯ ಪ್ರಾಕಾರದ ದಕ್ಷಿಣ ಭಾಗದಲ್ಲಿದೆ. ಇದು ತಮಿಳು ಭಾಷೆಯಲ್ಲಿ ಬರೆಯಲಾಗಿದೆ.

**"ತಿರುವೇಂಕಟಮುಡೈಯಾನ್ ಇಂತತ್ ತಿರುವೋಲಕ್ಕಂ ಕಂಟರುಳುಕಿಟಿ ಪೋತು ಇವರ್ ವಿಣ್ಣಪ್ಪಂಚೆಯ್ತು ತಿರುವೇಂಕಟ ಮಹತ್ಮ್ಯತ್ತಿಱ್ಕ್"** [1]

(ಶ್ರೀವೇಂಕಟೇಶ್ವರಸ್ವಾಮಿ ಮಂಡಪದಲ್ಲಿ ಶ್ರೀವೇಂಕಟಾಚಲಮಾಹಾತ್ಮ್ಯವನ್ನು ಪಾರಾಯಣ ಮಾಡಲು ಕೊಟ್ಟ ಮಾನ್ಯ ಎಂದು ಭಾವ.)

ಈ ಭಾಗವು ವೇಂಕಟಾದ್ರಿಮಾಹಾತ್ಮ್ಯವು ಶ್ರೀನಿವಾಸನ ಆಲಯದಲ್ಲಿ ಪಾರಾಯಣ ಮಾಡುವಂಥಹ ಸ್ಥಿತಿಯನ್ನು ಹೊಂದಿದೆಯೆಂದು ತಿಳಿಸುತ್ತದೆ.

ಇನ್ನು ಎರಡನೆಯ ಶಾಸನವು 1545 ಜೂನ್ 27ಕ್ಕೆ ಸೇರಿದ್ದು ಸದಾಶಿವರಾಯನ ಕಾಲದ್ದಾಗಿದೆ. ಈ ಶಾಸನವು ಕೂಡಾ ಪಲ್ಲವೋತ್ಸವ ನಡೆಯುವ ವೇಳೆ ವೇಂಕಟಾದ್ರಿಮಾಹಾತ್ಮ್ಯವನ್ನು ಪಾರಾಯಣ ಮಾಡಿದರೆನ್ನುವ ವಿಷಯವನ್ನು ಪ್ರಮಾಣಪುರಸ್ಸರವಾಗಿ ತಿಳಿಸುತ್ತದೆ.

ಕ್ರೀ.ಶ. 16ನೆಯ ಶತಮಾನದಲ್ಲಿ ಅನೇಕ ಭಕ್ತರುಗಳು ಶ್ರೀವೇಂಕಟಾಚಲಮಾಹಾತ್ಮ್ಯವನ್ನು ಪಾರಾಯಣ ಮತ್ತು ಸೇವೆಗೆ ಏರ್ಪಾಟುಗಳನ್ನು ಮಾಡಿದ್ದರೆಂದು ಕ್ರೀ.ಶ. 5–7–1545, 17–7–1546, 8–6–1547ರ[2] ಶಾಸನಗಳು ತಿಳಿಸುತ್ತಿವೆ. ವೇಂಕಟಾಚಲಮಾಹಾತ್ಮ್ಯ ಪಾರಾಯಣಸೇವೆ ತಿರುಮಲ ಆಲಯದಲ್ಲಿ ಮಾತ್ರವಲ್ಲದೆ ತಿರುಪತಿಯ ಶ್ರೀಗೋವಿಂದರಾಜಸ್ವಾಮಿ ಆಲಯದಲ್ಲಿಯು, ಅಚ್ಯುತ ಪೆರುಮಾಳ್ ಆಲಯದಲ್ಲಿ, ತಿರುಚಾನೂರಿನ ಅಳಗಿಯ ಪೆರುಮಾಳ್ (ಶ್ರೀಸುಂದರರಾಜ ಸ್ವಾಮಿ) ಆಲಯದಲ್ಲಿಯೂ ಸಹಾ ನಡೆಯುತ್ತಿದೆಂದು 15–7–1545ರ ಶಾಸನವೊಂದು[3] ತಿಳಿಸುತ್ತಿದೆ. ತಿರುಪತಿ ನಿವಾಸಿಯಾದ ಪೆನುಗೊಂಡಶೆಟ್ಟಿ ಮಗನಾದ ಕಾಳತ್ತಿಶೆಟ್ಟಿ ತಿರುಮಲ ಶ್ರೀವೇಂಕಟೇಶ್ವರಾಲಯದಲ್ಲಿ ತೈಮಾಸಿ ತಿಂಗಳಲ್ಲಿ ನಿತ್ಯೋತ್ಸವಗಳನ್ನು ಏರ್ಪಾಡುಮಾಡಿದ್ದನು. ಇವುಗಳ ಅಂಗವಾಗಿ ಶ್ರೀನಿವಾಸಪುರಾಣ ಪಾರಾಯಣ ನಡೆಯಬೇಕೆಂದಿದ್ದನೆಂದು ಕ್ರೀ.ಶ. 31–12–1543ರ ಶಾನನವು[4] ಹೇಳುತ್ತಿದೆ. ಇದರಿಂದ ಶ್ರೀವೇಂಕಟಾಚಲಮಾಹಾತ್ಮ್ಯ ಗ್ರಂಥಕ್ಕೆ ತಿರುವೇಂಕಟ ಮಾಹಾತ್ಮ್ಯ, ಶ್ರೀನಿವಾಸಪುರಾಣ ಮುಂತಾದ ನಾಮಾಂತರಗಳಿದ್ದವೆಂದು ತಿಳಿಯುತ್ತದೆ. ತಿರುಮಲ ಶ್ರೀನಿವಾಸನ ಆಲಯದಲ್ಲಿ ವೇಂಕಟಾಚಲಮಾಹಾತ್ಮ್ಯ ಪಾರಾಯಣಸೇವೆಯು ವಿಜಯನಗರ ಸಾಮ್ರಾಜ್ಯ ಪತನಾನಂತರ ಕ್ರೀ.ಶ. 16ನೆಯ ಶತಮಾನದ ಉತ್ತರಾರ್ಧದಲ್ಲಿ ನಿಂತುಹೋಯಿತು. ಕ್ರೀ.ಶ. 2002ರಲ್ಲಿ ನಡೆದ ಬ್ರಹ್ಮೋತ್ಸವಗಳಲ್ಲಿ ವೇಂಕಟಾಚಲ ಮಾಹಾತ್ಮ್ಯ ಪಾರಾಯಣಸೇವಯನ್ನು ಪುನರುದ್ಧರಿಸಲಾಯಿತು. ಅಂದಿನಿಂದ ಇಂದಿನವರೆಗು ಈ ಸೇವೆಯು ಶ್ರೀನಿವಾಸನ ಬ್ರಹ್ಮೋತ್ಸವಗಳಲ್ಲಿ ನಡೆಯುತ್ತಿದೆ.

ಕ್ರೀ.ಶ. 1491ರ ಪೂರ್ವದ ಶಾಸನಗಳಲ್ಲಿ ತಿರುವೇಂಕಟ ಮಾಹಾತ್ಮ್ಯ ಉಲ್ಲೇಖ ಕಾಣದೇ ಇದ್ದರೂ ಶ್ರೀನಿವಾಸನ ಸನ್ನಿಧಿಯಲ್ಲಿ ಪುರಾಣ ಪಾರಾಯಣ ಮಾಡುವ 'ಪುರಾಣಭಟ್ಟರು' ಎನ್ನುವ ಉದ್ಯೋಗಿಗಳು ಇರುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತಿದೆ.

---

1. Tirumala Tirupati Devasthanams Inscriptions, Vol. II, Inscriptions of Saluva Narasimha's Time, Page 193.
2. ತಿ.ತಿ. ದೇವಸ್ಥಾನ ಶಾಸನ ಸಂಪುಟಿ 5–51, 5–53, 5–71, 5–92
3. ತಿ.ತಿ. ದೇವಸ್ಥಾನ ಶಾಸನ ಸಂಪುಟಿ 5–53
4. ತಿ.ತಿ. ದೇವಸ್ಥಾನ ಶಾಸನ ಸಂಪುಟಿ 5–10, ಪುಟ 30

2–18 (ಕ್ರೀ.ಶ. 18–1–1464) 5–100 (ಕ್ರೀ.ಶ. 14–11–1547) ಶಾಸನಗಳು ಪುರಾಣಭಟ್ಟರ (ಪುರಾಣ ಪಾಠಕ) ಸೇವೆಗಳು ಮತ್ತು ಅವರ ಸಂಬಳಗಳ ಕುರಿತು ವಿವರಗಳನ್ನು ನೀಡುತ್ತಿವೆ. ಈ ಪುರಾಣ ಭಟ್ಟರು ಕೌಶಿಕಪುರಾಣ, ರಾಮಾಯಣ, ಭಾಗವತ ಪುರಾಣಗಳ ಜೊತೆಯಲ್ಲಿ ಶ್ರೀವೇಂಕಟೇಶ್ವರನ ಮಹಿಮೆಗಳನ್ನು ಸಾರುವ ಆಯಾ ಪುರಾಣ ಭಾಗಗಳನ್ನು ಕೂಡಾ ಪಾರಾಯಣ ಮಾಡುತ್ತಿದ್ದರೆಂದು ಭಾವಿಸಬಹುದು.

ಶ್ರೀನಿವಾಸಮಂಗಾಪುರಂನಲ್ಲಿರುವ ಶ್ರೀಕಲ್ಯಾಣವೇಂಕಟೇಶ್ವರಸ್ವಾಮಿ ದೇವಾಲಯ ಪುನರ್ನಿರ್ಮಾಣ ಮಾಡಿಸಿ, ತಾಳ್ಳಪಾಕ ಚಿನತಿರುಮಲಾಚಾರ್ಯನು (ಪೆದತಿರುಮಲಾಚಾರ್ಯರ ಮಗ ಮತ್ತು ಅನ್ನಮಾಚಾರ್ಯರ ಮೊಮ್ಮಗನು) ಹಾಕಿಸಿದ ಶಾಸನವು ಕ್ರೀ.ಶ. 23–3–1540ಕ್ಕೆ ಸೇರಿದ್ದು ಇದರಲ್ಲಿ 'ಸ್ಕಾಂದಪುರಾಣೋಕ್ತ ಶ್ರೀವೇಂಕಟೇಶ ಮಾಹಾತ್ಮ್ಯ' ಎನ್ನುವ ಮಾಹಿತಿಯನ್ನು ನೀಡುತ್ತಿದೆ.[1] ಹೀಗೆ ವೇಂಕಟೇಶ ಮಾಹಾತ್ಮ್ಯ ಸಂಬಂಧವಾದ ಕಥೆಗಳು ವಿವಿಧ ಪುರಾಣಗಳಲ್ಲಿ ಇರುವುದಾಗಿ ತಿಳಿಸುವ ಸಾಹಿತ್ಯ, ಶಾಸನಾಧಾರಗಳು ಇವೆ.

ಕ್ರೀ.ಶ. 1491 ರಿಂದ ತಿರುಮಲ ಶ್ರೀನಿವಾಸನ ಆಲಯದಲ್ಲಿ ಪಾರಾಯಣ ಗ್ರಂಥವಾಗಿ ಗೌರವವನ್ನು ಪಡೆದಿರುವ ಶ್ರೀವೇಂಕಟಾಚಲ ಮಾಹಾತ್ಮ್ಯ ಗ್ರಂಥವು ತಾಳೆಗರೆಪ್ರತಿಯ ರೂಪದಲ್ಲಿ ಕ್ರೀ.ಶ. 1884 ವರೆಗು ದೇಶಾದ್ಯಂತ ಪ್ರಚಾರದಲ್ಲಿತ್ತು. ಈ ಸಂಸ್ಕೃತ ಗ್ರಂಥಕ್ಕೆ ಕ್ರೀ.ಶ. 16ನೆಯ ಶತಮಾನ ಉತ್ತರಾರ್ಧದಲ್ಲಿ ತೆಲುಗು ಅನುವಾದಗಳು ಬಂದಿವೆ. ಅನುವಾದಕರಲ್ಲಿ ತೆನಾಲಿ ರಾಮಕೃಷ್ಣನ ಅಳಿಯನು, ಬಹುಕಾವ್ಯಕರ್ತನು ಆದ ಲಿಂಗಮಕುಂಟ ರಾಮಕವಿ (ಕ್ರೀ.ಶ. 1520–1580) ಪ್ರಥಮನೆಂದು ಹೇಳಬಹುದು. ರಾಮಕವಿ ರಚಿಸಿದ ಶ್ರೀವೇಂಕಟಾಚಲಮಾಹಾತ್ಮ್ಯವು ಇಂದು ಉಪಲಬ್ಧವಾಗುತ್ತಿಲ್ಲ. ವಿಜಯನಗರ ರಾಜವಂಶೀಕನಾದ ಪೂಸಪಾಟಿ ಕೊಂಡರಾಜು (ಕ್ರೀ.ಶ. 17ನೆಯ ಶತಮಾನ ಪೂರ್ವಭಾಗ) ರಚಿಸಿದ ವೇಂಕಟಾಚಲಮಾಹಾತ್ಮ್ಯವು ಎರಡನೆಯದು. ಇದೂ ಸಹ ಇಂದು ಲಭ್ಯವಾಗುತ್ತಿಲ್ಲ. ಶ್ರೀವೇಂಕಟಾಚಲ ಮಾಹಾತ್ಮ್ಯ ರಚನೆಯಲ್ಲಿ ತಾಳ್ಳಪಾಕ ಅನ್ನಮಾಚಾರ್ಯನು ಮಾಡಿರುವ ಕೃಷಿಯನ್ನು ಹೋಲುವ ಕೆಲಸವನ್ನು ತೆಲುಗುನಲ್ಲಿ ಶ್ರೇಷ್ಠಲೂರಿ ವೇಂಕಟಾರ್ಯನು ಮಾಡಿದ್ದಾನೆ. ಈತನು ತೆನಾಲಿ ರಾಮಕೃಷ್ಣ ಮತ್ತು ಸಾರಂಗು ತಮ್ಮಯ್ಯ ಗೆ ಸಮಕಾಲೀಕನಾಗಿದ್ದಾನೆ. ಈ ವೇಂಕಟಾರ್ಯನು ಶ್ರೀನಿವಾಸನ ಭಕ್ತನು. ಈ ಕಾರಣ ಸ್ವಾಮಿಯು ಇವನ ಕನಸಿನಲ್ಲಿ ಬಂದು ಬಹುಪುರಾಣೋಕ್ತಸಂಬಂಧದಿಂದ ತಿಳಿಯಲು ಅಶಕ್ಯವಾದ ತನ್ನ ಕಥೆಯಲ್ಲಿರುವ ಕಗ್ಗಂಟುಗಳನ್ನು ಬಿಡಿಸಿ, ಹೊಳೆಯುವ ರತ್ನದಂತಿರುವ ಕಾವ್ಯವನ್ನು ರಚಿಸಬೇಕೆಂದು ಕೇಳಿದನಂತೆ.[2] ಶ್ರೇಷ್ಠಲೂರಿ ವೇಂಕಟಾರ್ಯನು (ಕ್ರೀ.ಶ. 16ನೆಯ ಶತಮಾನ) ಶ್ರೀನಿವಾಸನ ಪುರಾಣ ಕಥೆಗಳಲ್ಲಿರುವ ಪೂರ್ವೋತ್ತರ ವಿರೋಧಗಳನ್ನು ಸರಿಮಾಡಿ, ಸಮನ್ವಯಮಾಡಿ 'ಶ್ರೀನಿವಾಸ ವಿಲಾಸ ಸೇವಧಿ' ಎನ್ನುವ ಆರು ಆಶ್ವಾಸಗಳನ್ನೊಳಗೊಂಡಿರುವ ದ್ವಿಪದ ಕಾವ್ಯವನ್ನು ರಚಿಸಿದ್ದಾನೆ. ವೇಂಕಟಾರ್ಯನು ವರಾಹ, ವಾಮನ, ಬ್ರಹ್ಮಾಂಡ, ಪದ್ಮ, ಗರುಡ, ಸ್ಕಂದ, ಮಾರ್ಕಂಡೇಯ ಪುರಾಣಗಳಲ್ಲಿರುವ ಕಥೆಗಳನ್ನು ಶೋಧಿಸಿ, ತಿಳಿಮಾಡಿ, ಪ್ರಸಿದ್ಧ ಕಥೆಗಳನ್ನು ಸಂಗ್ರಹಿಸಿ, ಸರ್ವಸಮಾಧಾನ ಸರಣಿಯಿಂದ ವಿಶಿಷ್ಟವಾದ ಶ್ರೀನಿವಾಸವಿಲಾಸ ಸೇವಧಿಯನ್ನು ರಚಿಸಿದ್ದಾನೆ. [3]

### 2.2. ತಿರುಮಲೆಯೇ ಅಂಜನಾದ್ರಿಯೆಂದು ಹೇಳಲು ಸಿಗುವ ಶಾಸನ ಪ್ರಮಾಣಗಳು

ಶ್ರೀರಂಗಂನಲ್ಲಿರುವ ಒಂದು ಶಿಲಾಶಾಸನವು "ಶ್ರೀರಂಗನಾಥನ ಆಲಯ ಆಕ್ರಮಣಕ್ಕೆ ಒಳಗಾಗಲು, ಆ ಸಮಯದಲ್ಲಿ ಶ್ರೀರಂಗನಾಥನ ಉತ್ಸವ ವಿಗ್ರಹವನ್ನು ತಿರುಮಲೆಗೆ ರವಾನಿಸಿದರೆಂದು, ನಂತರ ಗೋಪಣಾರ್ಯ ಎನ್ನುವ ವಿಜಯನಗರ ಪ್ರತಿನಿಧಿಯೊಬ್ಬನು ಪುನಃ ಉತ್ಸವಮೂರ್ತಿಯನ್ನು ಶ್ರೀರಂಗಂಗೆ ಕರೆತಂದನೆಂದು ಹೇಳುತ್ತಿದೆ.

---

1. ತಿ.ತಿ. ದೇವಸ್ಥಾನ ಶಾಸನ ಸಂಪುಟ –4, ಸಂಖ್ಯೆ 144
2. ಶ್ರೀನಿವಾಸವಿಲಾಸಸೇವಧಿ – ಅ1–121–130 ಸಾಲುಗಳು.
3. ಶ್ರೀನಿವಾಸವಿಲಾಸೇವಧಿ – ಅ1–137–144 ಸಾಲುಗಳು.

**ಆನೀಯಾನೀಲಶೃಂಗದ್ಯುತಿರಚಿತಜಗದ್ರಂಜನಾದಂಜಾದ್ರೇಃ**
**ಚೇಂಜ್ಯಾಮಾರಾಧ್ಯ ಕಂಚಿತ್ಸಮಯಯಮಥ ನಿಹತ್ಯೋದ್ಧನುಷ್ಕಾನ್ ತುಲುಷ್ಕಾನ್.**
**ಲಕ್ಷ್ಮೀಕ್ಷ್ಮಾಭ್ಯಾಮುಭಾಭ್ಯಾಂ ಸಹ ನಿಜನಿಲಯೇಸ್ಥಾಪಯದ್ರಂಗನಾಥಂ**
**ಸಮ್ಯಗ್ವರ್ಯಾಂ ಸಪರ್ಯಾಂ ಕುರುತ ನಿಜಯಶೋದರ್ಪಣೇ ಗೋಪಣಾರ್ಯಃ** [1]

ಈ ಶಿಲಾಶಾನವು ಬಂಧುಪ್ರಿಯ ಶಕಾಬ್ದಿ ಎಂದರೆ ಕಟಪಯಾದಿ ಸಂಖ್ಯೆಗಳ ಪ್ರಕಾರ ಕ್ರೀ.ಶ. 1371ರಕ್ಕೆ ಸೇರಿದ್ದಾಗಿದೆ. ಈ ಶಾಸನವು ತಿರುಮಲೆಯೇ ಅಂಜನಾದ್ರಿ ಎಂದು ಹೇಳುತ್ತಿದೆ. ಈ ಶಿಲಾಶಾಸನದಲ್ಲಿರುವ ಶ್ಲೋಕವು ವೇದಾಂತ ದೇಶಿಕರೆನ್ನುವ ವೈಷ್ಣವಾಚಾರ್ಯರು ಬರೆದಿದ್ದಾರೆಂದು 'ಕೋಯಿಲ್ ಒಳುಗು' ಎನ್ನುವ ಶ್ರೀವೈಷ್ಣವಗ್ರಂಥವು ಸಾರುತ್ತಿದೆ.

ಹಾಗೆಯೇ ತಿರುಮಲ ಆಲಯದಲ್ಲಿನ ಮತ್ತೊಂದು ಶಾಸನವು ಶ್ರೀನಿವಾಸನ್ ಹೆಸರನ್ನು ಹೇಳುತ್ತಾ

**"ಅಂಜನವೇಟ್ಟಿನ್ ನಾಯನಾರ್** [2]

ಎಂದು ಕರೆಯುತ್ತಿದೆ. ತಮಿಳು ಭಾಷೆಯಲ್ಲಿ ವೇಟ್ಟು ಎಂದರೆ ಬೆಟ್ಟ ಎಂದರ್ಥ. ಅಂಜನವೇಟ್ಟಿನ್ ಎಂದರೆ ಅಂಜನಾದ್ರಿ ಯೆಂದರ್ಥ. ಅಂಜನಾದ್ರಿನಾಥನು ಎನ್ನುವ ಹೆಸರನ್ನು ತಮಿಳು ಭಾಷೆಯಲ್ಲಿ ಅನುವಾದ ಮಾಡಿ 'ಅಂಜನವೇಟ್ಟಿನ್ ನಾಯನಾರ್' ಎಂದು ಕರೆಯಲಾಗಿದೆ. ಈ ಪ್ರಮಾಣದಿಂದ ಅಂಜನಾದ್ರಿ ತಿರುಮಲಯೆ ಎಂದು, ಅಂಜನಾದ್ರಿನಾಥನು ಶ್ರೀನಿವಾಸನೆಂದು ತಿಳಿದುಬರುತ್ತದೆ.

**ಎಟ್ಟೂರ್ ಲಕ್ಷ್ಮೀಕುಮಾರ ತಾತಾಚಾರ್ಯ**

ಇನ್ನು ಎಟ್ಟೂರ್ ಲಕ್ಷ್ಮೀಕುಮಾರ ತಾತಾಚಾರ್ಯ ಎನ್ನುವ ಮಹನೀಯನು ಸಾ.ಶ. 16ನೆಯ ಶತಮಾನಕ್ಕೆ ಸೇರಿದವನು. ಈತನು ರಚಿಸಿದ "ಹನುಮದ್ವಿಂಶತಿ" ಎನ್ನುವ ಸ್ತೋತ್ರವು ಕಾಂಚೀಪುರಂನಲ್ಲಿರುವ ವರದರಾಜಸ್ವಾಮಿ ಆಲಯದಲ್ಲಿಯು ಮತ್ತು ತಾತಾಚಾರ್ಯರು ಕಟ್ಟಿಸಿದ ಆಂಜನೇಯಸ್ವಾಮಿಯ ಆಲಯದಲ್ಲಿಯೂ ಶಿಲಾಶಾಸನಗಳಾಗಿ ಕೆತ್ತಿಸಿದ್ದಾರೆ. ಆ ಸ್ತೋತ್ರದಲ್ಲಿರುವ ಒಂದು ಪದ್ಯ –

**"ಶ್ರೀಶೈಲಪೂರ್ಣಮವತಿ ಸ್ಮ ಘಟಾಂಬುಹೃಷ್ಟೋ**
**ಯಃ ಪೂರ್ವಮಂಜನಗಿರೌ ಸ ಪುಮಾನಿದಾನೀಂ,**
**ಸ್ಥಿತ್ವಾ ಸಮೀರಭುವಿ ಪಾತಿ ರಮಾಕುಮಾರ–**
**ತಾತಾಂಬುರಾಶಿಮುದಿತೋ ಜನಮೈಂದಿರೇಯಂ.."**

ಎಂದು ಅಂಜನಗಿರಿ ಎಂದರೆ ವೇಂಕಟಗಿರಿಯೆಂದು ಹೇಳುತ್ತಿದೆ. ಹಾಗೆಯೆ ತಿರುಪತಿಯಲ್ಲಿ ಲಭಿಸಿದ ಅನೇಕ ಶಾಸನಗಳು, ತಿರುಪತಿಯಲ್ಲಿ ಶ್ರೀಆಂಜನೇಯಸ್ವಾಮಿಗೆ ನಡೆಯುವ ವಿಶೇಷ ಆರಾಧನೆಗಳ ಕುರಿತು ಮಾಹಿತಯನ್ನು ನೀಡುತ್ತಿವೆ. ಹೀಗೆ ವಾಙ್ಮಯ– ಶಾಸನ ಪ್ರಮಾಣಗಳೆಲ್ಲವು "ಅಂಜನಾದ್ರಿಯೇ ವೇಂಕಟಾದ್ರಿ" ಎಂದು ಸಾರುತ್ತಿರುವುದರಿಂದ ಆಂಜನೇಯನ ಜನ್ಮಸ್ಥಲ ತಿರುಮಲಯೇ ಎಂದು  ನಿರ್ದ್ವಂದ್ವವಾಗಿ ತಿಳಿಯಬಹುದು.

---

1. Epigrapia Indica, Vol. VI, page 323
2. Tirumala Tirupati Devasthanam Inscriptions, Vol. I., Early inscriptions, page 205



ಹಾಗೆಯೆ ತಿರುಪತಿಯಲ್ಲಿ ಲಭಿಸಿದ ಅನೇಕ ಶಾಸನಗಳು, ತಿರುಪತಿಯಲ್ಲಿ ಶ್ರೀಆಂಜನೇಯಸ್ವಾಮಿಗೆ ನಡೆಯುವ ವಿಶೇಷ ಆರಾಧನೆಗಳ ಕುರಿತು ಮಾಹಿತಿಯನ್ನು ನೀಡುತ್ತಿವೆ. ಹೀಗೆ ವಾಙ್ಮಯ-ಶಾಸನ ಪ್ರಮಾಣಗಳೆಲ್ಲವು "ಅಂಜನಾದ್ರಿಯೇ ವೇಂಕಟಾದ್ರಿ" ಎಂದು ಸಾರುತ್ತಿರುವುದರಿಂದ ಆಂಜನೇಯನ ಜನ್ಮಸ್ಥಲ ತಿರುಮಲಯೇ ಎಂದು ನಿರ್ದ್ವಂದ್ವವಾಗಿ ತಿಳಿಯಬಹುದು.

*~*~*~*~*

ಸೂರ್ಯನತ್ತ ಹಾರುತ್ತಿರುವ ಹನುಮಂತನನ್ನು ನೋಡಿ, ಭೂಮಿಯ ಮೇಲಿನ ಪ್ರಜೆಗಳು ಮತ್ತು ಆಕಾಶದಲ್ಲಿನ ದೇವತೆಗಳು ಆಶ್ಚರ್ಯಚಕಿತರಾಗಿರುವುದು



# 11. ಶ್ರೀವೈಷ್ಣವ ಸಾಹಿತ್ಯದಲ್ಲಿ ತಿರುಮಲೆ –ಅಂಜನಾದ್ರಿ

ಆಚಾರ್ಯ ಚಕ್ರವರ್ತಿ ರಂಗನಾಥ

**ಪ್ರಪದ್ಯೇ ತಂ ಗಿರಿಂ ಪ್ರಾಯಃ ಶ್ರೀನಿವಾಸಾನುಕಂಪಯಾ,**
**ಇಕ್ಷು ಸಾರಸ್ರವಂತ್ಯೇವ ಯನ್ಮೂರ್ತ್ಯಾ ಶರ್ಕರಾಯಿತಮ್,**

**ಶ್ರೀವೈಷ್ಣವ ಸಾಹಿತ್ಯ-1 ಶ್ರೀವೈಷ್ಣವಸಾಹಿತ್ಯಾರಂಭ-ಆಳ್ವಾರರು**

ಶ್ರಿಯಃಪತಿಯಾದ ಶ್ರೀಮನ್ನಾರಾಯಣನು ಭೂಲೋಕದ ಪ್ರಜೆಗಳನ್ನು ಉದ್ಧಾರಮಾಡುವುದಕ್ಕಾಗಿ ತನ್ನ ಪರಿವಾರದವರಾದ ಅನಂತ, ಗರುಡ, ವಿಷ್ವಕ್ಸೇನಾದಿಗಳನ್ನು, ಆಯುಧಾಭರಣಗಳನ್ನು ಭೂಲೋಕದಲ್ಲಿ ಅವತರಿಸಬೇಕೆಂದು ಆದೇಶಿಸಿದ. ಈ ರೀತಿಯಾಗಿ ಅವತರಿಸಿದವರು ಆಳ್ವಾರರೆನಿಸಿಕೊಂಡರು. **ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ**[1] ಮುಂತಾದ ಭಾಗವತ ಶ್ಲೋಕಗಳೇ ಇಲ್ಲಿ ಪ್ರಮಾಣಗಳಾಗಿವೆ. ಆಳ್ವಾರರು ಎಂದರೆ ಅಗಾಧವಾದ ಭಗವದ್ಭಕ್ತಿ ಸಿಂಧುವುಗಳು. ಅವರು ಪನ್ನಿದ್ದರು ಎಂದು ಕರೆಯಲ್ಪಡುತ್ತಾರೆ. ಅವರ ಬಗೆಗೆ ತಿಳಿಯಪಡಿಸುವ ಸಂಗ್ರಹ ಶ್ಲೋಕ ಪರಾಶರಭಟ್ಟರ್ ಅವರು ರಚಿಸಿರುವ ಶ್ಲೋಕ ಹೀಗಿದೆ.

**ಭೂತಂ ಸರಶ್ಚ ಮಹದಾಹ್ವಯಭಟ್ಟನಾಥ**
**ಶ್ರೀಭಕ್ತಿಸಾರ ಕುಲಶೇಖರಯೋಗಿವಾಹಾನ್,**
**ಭಕ್ತಾಂಘ್ರಿರೇಣು ಪರಕಾಲ ಯತೀಂದ್ರಮಿಶ್ರಾನ್**
**ಶ್ರೀಮತ್ ಪರಾಂಕುಶಮುನಿಂ ಪ್ರಣತೋಽಸ್ಮಿ ನಿತ್ಯಮ್** [2]

ಪೂದತ್ತಾಳ್ವಾರರನ್ನು, ಪೊಯ್ಗೈ ಆಳ್ವಾರರನು, ಪೇಯಾಳ್ವರರನ್ನು, ತಿರುಮೊಳಿಶೈ ಆಳ್ವಾರರನ್ನು, ಕುಲಶೇಖರಾಳ್ವರರನ್ನು ತಿರುಪ್ಪಾಣಾಳ್ವಾರರನ್ನು, ತೊಂಡರಡಿಪ್ಪೊಡಿ ಆಳ್ವಾರರನ್ನು , ತಿರುಮಂಗೈ ಆಳ್ವಾರರನ್ನು, ಯತಿಶ್ರೇಷ್ಠರಾಅದ ಉಡೈಯವರ್ ಅವರನ್ನು ಶ್ರೀರಾಮಮಿಶ್ರುಲು, ಶ್ರೀಪರಾಂಕುಶ ಎಂದು ಕರೆಯಲ್ಪಡುವ" ಕೈಂಕರ್ಯ ಶ್ರೀಗಲ ನಮ್ಮಾಳ್ವರರನ್ನು" ಸದಾ ಸೇವಿಸುತ್ತಿರುತ್ತೇನೆ.

ಆ ಪನ್ನಿದ್ದರು ಆಳ್ವಾರರು ದೇವದೇವನಲ್ಲಿ ದಿವ್ಯಭಕ್ತಿಪ್ರಪತ್ತಿಗಳನ್ನು ಹೊಂದಿರುವದರ ಜೊತೆಗೆ ಶ್ರೀಮನ್ನಾರಾಯಣನ ಸ್ವರೂಪರೂಪಗುಣವಿಭವಾದಿಗಳನ್ನು ಸ್ತುತಿಸುತ್ತಾ ಅಗಸ್ತ್ಯಭಾಷೆಯಾದ ಸುಂದರವಾದ ತಮಿಳುಭಾಷೆಯಲ್ಲಿ ನಾಲ್ಕುಸಾವಿರ ಪಾಶುರಗಳನ್ನು (ಪದ್ಯಗಳು)ರಚಿಸಿದರು. ಈ ಗ್ರಂಥವನ್ನು ನಾಲಾಯಿರ ದಿವ್ಯಪ್ರಬಂಧ ಎಂದು ಕರೆಯುತ್ತಾರೆ. ವೇದಸಮಾನವಾದ ಈ ದಿವ್ಯಪ್ರಬಂಧವು 108 ದಿವ್ಯದೇಶಗಳಲ್ಲಿ ಪ್ರತಿನಿತ್ಯವೂ ಅನುಸಂಧಾನ ಮಾಡುತ್ತಾರೆ. 108 ದಿವ್ಯತಿರುಪತಿಗಳಲ್ಲಿ ಅರ್ಚಾಮೂರ್ತಿಯಾಗಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿರುವ ಸ್ವಾಮಿಯ ದಿವ್ಯಗುಣಾನುಸಂಧಾನ, ದಿವ್ಯಮಂಗಳವಿಗ್ರಹದ ವರ್ಣನೆ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ಅಂಶ.

ವಿಷ್ಣುವಿನ ಪಾರಮ್ಯವನ್ನು ಮುಖ್ಯಾಂಶವನ್ನಾಗಿರಿಸಿಕೊಂಡು ಆಳ್ವಾರರ ಮುಖಾರವಿಂದಗಳಿಂದ ಹೊರಹೊಮ್ಮಿದ ಈ ದಿವ್ಯಪ್ರಬಂಧಗಳೇ ಶ್ರೀವೈಷ್ಣವಸಾಹಿತ್ಯಕ್ಕೆ ಮೂಲ ಮತ್ತು ಪ್ರಧಾನ ಅಂಗಗಳಾಗಿ ರಾರಾಜಿಸುತ್ತಿವೆ. ಆದ್ದರಿಂದ ಶ್ರೀವೈಷ್ಣವ ಸಾಹಿತ್ಯಕ್ಕೆ ಆದ್ಯರೆಂದು ಪರಿಗಣಿಸಲ್ಪಡುತ್ತಿರುವವರು ದ್ವಾದಶ ಸೂರಿಗಳೆಂಬ ಈ ಪನ್ನಿದ್ದರು ಆಳ್ವಾರರು.

1. ಭಾಗವತ– 11–5–39

2. ನಾಲಾಯಿರ ದಿವ್ಯಪ್ರಬಂಧ–ತನಿಯನ್–5

ಶ್ರೀರಂಗದಿಂದ ಪ್ರಾರಂಭಿಸಿ ಪರಮಪದದ ವರೆಗೂ ಇರುವ ದಿವ್ಯದೇಶಗಳು ನೂರಾಎಂಟು. ಅದರಲ್ಲಿ ಮುಖ್ಯವಾಗಿ ಈ ಭೂಲೋಕದಲ್ಲಿ ನಾಲಕ್ಕು ದಿವ್ಯದೇಶಗಳಿವೆ. ಅವುಗಳು ಶ್ರೀರಂಗಂ, ತಿರುಮಲ, ಕಾಂಚೀಪುರಂ, ತಿರುನಾರಾಯಣಪುರಂ. ಈ ನಾಲ್ಕು ದಿವ್ಯದೇಶಗಳನ್ನು ಭಕ್ತಿಯಿಂದ ಸೇವಿಸಿದರೆ ಎಲ್ಲಾ ದಿವ್ಯದೇಶಗಳನ್ನು ಸೇವಿಸಿದ ಪುಣ್ಯ ಲಭಿಸುತ್ತದೆಂದು ಪ್ರತೀತಿ. ಇವುಗಳಲ್ಲಿ ಮಧ್ಯಮಣಿಯಂತೆ ಬೆಳಗುತ್ತಿರುವ ದಿವ್ಯಕ್ಷೇತ್ರ ತಿರುಮಲೆ.

**ಆಳ್ವಾರರುಗಳ ಪಾಶುರಗಳಲ್ಲಿ ತಿರುಮಲೆ–**

ಅಗಾಧ ಭಗವದ್ಭಕ್ತಿ ಸಿಂಧುವುಗಳಾದ ಪನ್ನಿದ್ದರು ಆಳ್ವಾರರಲ್ಲಿ ಮಧುರಕವಿ ಆಳ್ವಾರು, ತೊಂಡರಡಿಪ್ಪೊಡಿ ಆಳ್ವಾರರನ್ನು ಬಿಟ್ಟು ಉಳಿದ ಹತ್ತುಜನ ಆಳ್ವಾರರು ತಿರುಮಲೆಯ ಕ್ಷೇತ್ರವೈಭವವನ್ನು, ವೇಂಕಟೇಶನ ಮಹಿಮೆಯನ್ನು ಅತ್ಯದ್ಭುತವಾಗಿ ಕೀರ್ತಿಸಿದ್ದಾರೆ. ವೇದ–ಪುರಾಣ–ಆಗಮಾದಿಗಳಲ್ಲಿ ತಿಳಿಸಿರುವ ಶ್ರೀವೇಂಕಟೇಶವೈಭವವನ್ನು ಕಣ್ಣಿಗೆ ಕಟ್ಟುವಂತೆ ಮನೋಜ್ಞವಾಗಿ, ಹೃದ್ಯವಾಗಿ ಇದರಲ್ಲಿ ವರ್ಣಿಸಿರುವ ವಿಷಯ ವಾಚಾಮಗೋಚರವಾದುದು.

**ತಿರುಮಲೆ–ಪಾಶುರಗಳು – ಆಳ್ವಾರರಿಂದ ತಿರುಮಲೇಶನ ವಿಷಯದಲ್ಲಿ ತಿರುಮಲೆಯ ಕ್ಷೇತ್ರವೈಭವಪ್ರತಿಪಾದಕವಾಗಿ ಪ್ರಸ್ತುತಿ ಪಡಿಸಿರುವ ಪಾಶುರಗಳು ಹೀಗಿವೆ–**

| | ಆಳ್ವಾರರು | ರಚಿಸಿರುವ ಪಾಶುರಗಳ ಸಂಖ್ಯೆ |
|---|---|---|
| 1. | ಪೋಯ್‌ಗೈ ಆಳ್ವಾರರು | 10 |
| 2. | ಭೂದತ್ತಾಳ್ವಾರರು | 11 |
| 3. | ಪೇಯಾಳ್ವಾರರು | 19 |
| 4. | ತಿರುಮಳಿಶೈ ಆಳ್ವಾರರು | 16 |
| 5. | ನಮ್ಮಾಳ್ವಾರು | 48 |
| 6. | ಕುಲಶೇಖರಾಳ್ವಾರು | 11 |
| 7. | ಪೆರಿಯಾಳ್ವಾರು | 07 |
| 8. | ಗೋದಾದೇವಿ | 16 |
| 9. | ತಿರುಪ್ಪಾಣಾಳ್ವಾರರು | 02 |
| 10. | ತಿರುಮಂಗೈ ಆಳ್ವಾರರು | 66 |
| | ಒಟ್ಟು – | 207 |

ಪಂಡಿತರ ನಡುವೆ 200 ಅಥವಾ 207 ಎಂಬ ಪಾಶುರಗಳಲ್ಲಿ ಸಂಖ್ಯಾಬೇಧಗಳು ಕಂಡುಬರುತ್ತಿದೆ. ಪಾಶುರಗಳೆಲ್ಲಾ ಶಬ್ದಮಾಧುರ್ಯದೊಂದಿಗೆ, ಅರ್ಥಗಾಂಭೀರ್ಯವನ್ನು ಹೊಂದಿವೆ. ಅವುಗಳನ್ನು ಅನುಸಂಧಾನ ಮಾಡುವ ಸಮಯದಲ್ಲಿ ಅನುಭವೈಕವೇದ್ಯವಾಗಿವೆ. ಇನ್ನು ಆಳ್ವಾರರ ಪ್ರಬಂಧಗಳಿಂದ ಶ್ರೀವೇಂಕಟೇಶನನ್ನು ಸ್ತುತಿಸುವಂತಹಾ ಪಾಶುರಗಳನ್ನು ನೋಡೋಣ ಬನ್ನಿ.

**1. ಪೋಯ್‌ಗೈ ಆಳ್ವಾರರು–ಸರೋಯೋಗಿ–ದಿವ್ಯಪ್ರಬಂಧದ ಹೆಸರು –ಮುದಲ್ ತಿರುವಂದಾದಿ**

ಮರ್ಯಾದಾ ಪುರುಷೋತ್ತಮನಾದ ಶ್ರೀರಾಮನೂ ಈ ತಿರುಮಲೆಯಲ್ಲಿ ವಾಸಮಾಡಿದ್ದಾನೆಂದು ಈ ಆಳ್ವಾರರು ಸ್ತುತಿಸುತ್ತಿದ್ದಾರೆ. ಸೀತಾದೇವಿಗಾಗಿ ಮಾಯಾಜಿಂಕೆಯ ವೇಷದಲ್ಲಿ ಬಂದ ಮಾರೀಚನನ್ನು ಹಿಂಬಾಲಿಸಿ, ಅದಕ್ಕೆ ಬಾಣವನ್ನು ಬಿಟ್ಟು ಅತನನ್ನು ಸಂಹರಿಸಿದ ಶ್ರೀರಾಮಚಂದ್ರನು ನಿತ್ಯವಾಸಿಸುವ ಪರ್ವತವಾದ್ದರಿಂದ ಸ್ತ್ರೀಯರು ಕೂಡಾ ಬಂದು ಆಶ್ರಯಪಡೆಯಬಹುದೆಂದು ಈ ಪಾಶುರದ ಮೂಲಕ ತಿಳಿದುಬರುತ್ತಿದೆ.

**ಪಡೈಯಾರುಂ ವಾಟ್ಕಣ್ಣಾರ್ ........... ಮಾನ್ ಮಾಯ ಎಯ್ ದಾನ್ ವರೈ** [1]

ಎಂತಹಾ ತತ್ತ್ವಜ್ಞಾನವಿಲ್ಲದ ಸ್ತ್ರೀಯರು ಕೂಡಾ ಸತ್ತ್ವೋತ್ತರಕಾಲವಾದ ದ್ವಾದಶಿತಿಥಿಯಲ್ಲಿ ಬಾಡದ ಹೂವಗಳಿಂದ ಹಾರವನ್ನು ತಯಾರಿಸಿ ಶ್ರೀವೇಂಕಟೇಶ್ವರನಿಗೆ ಅರ್ಪಿಸಿ ನಂತರ ಅವರು ಸಮರ್ಪಿಸಿದ ಧೂಪದಿಂದಾಗಿ ಆಕಾಶದಲ್ಲಿ ಅಲ್ಲಲ್ಲಿ ಪ್ರಕಾಶಿಸುವ ನಕ್ಷತ್ರಗಳು ಮರೆಯಾಗುವಂತೆ ಪರಮಭೋಗ್ಯವಾದುದು ತಿರುಮಲೆಯೇ ಎಂದು ಹೇಳುತ್ತಾರೆ. ಒಂದಾನೊಂದು ಕಾಲದಲ್ಲಿ ಮಾರೀಚನೆಂಬ ಮಾಯಾವಿ ನಶಿಸುವಂತೆ ಬಾಣವನ್ನು ಬಿಟ್ಟ ಶ್ರೀರಾಮನೇ ಸಂತೋಷದಿಂದ ಆನಂದದಿಂದ ನಿವಸಿಸುತ್ತಿರುವ ದಿವ್ಯದೇಶ ಇದು ಎಂದು ಮೇಲಿನ ಪಾಶುರದ ತಾತ್ಪರ್ಯ.

**2. ಪೂದತ್ತಾಳ್ವಾರರು –ಭೂತಯೋಗಿ ದಿವ್ಯಪ್ರಬಂಧದ ಹೆಸರು–ಇರಂಡಾಂ ತಿರುವಂದಾದಿ**

ಶ್ರೀವೇಂಕಟೇಶ್ವರನೇ – ಪರ–ವ್ಯೂಹ–ವಿಭವ–ಅಂತರ್ಯಾಮಿ–ಅರ್ಚಾಸ್ವರೂಪನು

**ಮನತ್ತುಳ್ಳಾನ್ ವೇಂಗಡತ್ತಾನ್ .............. ಮಾವಾಯ್ ಪಿಳಂದಮಗನ್** [2]

ಮನತ್ತುಳ್ಳಾನ್–ಎಂದು ಅಂತರ್ಯಾಮಿರೂಪವನ್ನು, ಮಾ ಕಡಲಾನ್ ಎಂದು ವ್ಯೂಹಾರೂಪವನ್ನು, ನಿನ್ನೈಪ್ಪರಿಯನೀಳ್ ಅರಂಗತ್ತುಳ್ಳಾನ್ ಎಂದು ಅರ್ಚಾರೂಪವನ್ನು, ದೇವಾದಿದೇವನ್ ಎಂದು ಪರರೂಪವನ್ನು, ಮಾವಾಯ್ ಪಿಳಂದಮಗನ್ ಎಂದು ವಿಭವಾವತಾರವನ್ನು ತಿಳಿಸುತ್ತಿದ್ದಾರೆ.

**ತಿರುಮಲೆಯಲ್ಲಿ ಬಹು ವಾನರರ ಸಂಚಾರ– ವಾನರರ ಭಕ್ತಿ ಇಲ್ಲಿ ನಿರೂಪಿಸಲ್ಪಡುತ್ತಿದೆ.**

**ಪೋದ ಅಱಿಂದು ವಾನರಂಗಳ್ ............... ಪೇರಾಯ್‌ನ್ದು** [3]

ತನ್ನ ಮನಸ್ಸನ್ನು ಉದ್ದೇಶಿಸಿ ಆಳ್ವಾರರು ಹೀಗೆ ಬೋಧಿಸುತ್ತಿದ್ದಾರೆ. "ಎಲೈ ಮನವೇ! ತಿರುಮಲೆಯಲ್ಲಿ ಪಶುಪಕ್ಷ್ಯಾದಿಗಳು (ತಿರ್ಯಕ್ಕುಗಳು)ಕೂಡಾ ಭಗವಂತನ ಕೈಂಕರ್ಯವನ್ನು ಮಾಡುತ್ತಾ ಕೃತಾರ್ಥರಾಗುತ್ತಿವೆ ಎಂದು ನೀನು ಉದಾಸೀನಮಾಡದೇ ಸ್ವಾಮಿಯ ಕೈಂಕರ್ಯಕ್ಕೆ ಸಿದ್ಧವಾಗು "ಎಂದು ಈ ಪಾಶುರದ ಅರ್ಥ.

"ಎಲೈ ಮನವೇ! ತಿರುಮಲೆಯ ಬೆಟ್ಟದ ಮೇಲೆ ವಾನರರೂ ಕೂಡಾ ಬ್ರಹ್ಮಮುಹೂರ್ತವನ್ನು ಗುರುತಿಸುತ್ತಿವೆ. ಬ್ರಾಹ್ಮೀಮುಹೂರ್ತದಲ್ಲಿ ಎಚ್ಚರಗೊಂಡು, ಹೂವುಗಳಿಂದ ಶೋಭಿಸುವ ಬೆಟ್ಟಗುಡ್ಡಗಳಲ್ಲಿ ಅರಳಿರುವ ಹೂವುಗಳನ್ನು ಕಿತ್ತು ತಂದು ಭಗವಂತನನ್ನು ಪೂಜಿಸುತ್ತಿವೆ. ನೀನೂ ಹೋಗಿ ಸ್ವಾಮಿಯನ್ನು ಮತ್ತೆ ಮತ್ತೆ ಸ್ಮರಿಸು. ಶ್ರೀಹರಿಯ ತಿರುನಾಮಗಳನ್ನು ಕೀರ್ತಿಸು. ನೀಲಮಣಿಯಂತಹ ವಿಗ್ರಹವನ್ನು ಆ ವೇಂಕಟೇಶ್ವರಸ್ವಾಮಿಯ ಕೋಮಲವಾದ ಚರಣಗಳನ್ನು ಪುಷ್ಪಗಳಿಂದ ಅಲಂಕರಿಸು"ಎಂದು ಉಪದೇಶಿಸುತ್ತಿದ್ದಾರೆ.

**೩. ಪೇಯಾಳ್ವಾರ್–ಮಹಾದಾಹ್ವಯ–ದಿವ್ಯಪ್ರಬಂಧದ ಹೆಸರು– ಮೂನ್ರಾಂ ತಿರುವಂದಾದಿ**

ಆನೆಗಳು ಸಹಾ ಶ್ರೀಶ್ರೀನಿವಾಸನಿಗೆ ಕೈಂಕರ್ಯಗಳನ್ನು ಮಾಡುತ್ತಾ ಧನ್ಯವಾಗುತ್ತಿವೆ. ತಿರಮಲೆಯಲ್ಲಿ ಅತ್ಯಂತ ಭಕ್ತಿಭಾವಗಳಿಂದ ಅವುಗಳು ಮಾಡುತ್ತಿರುವ ಸೇವೆಯನ್ನು ಈ ಪಾಶುರದಲ್ಲಿ ತುಂಬಾ ಚಮತ್ಕಾರದಿಂದ ವಿವರಿಸುತ್ತಿದ್ದಾರೆ.

**ಪುಗುಮದತ್ತಾಲ್ ವಾಯ್ .................... ವಣಂಗುಂ ಕಳಿಱು** [4]

ಆನೆಗಳಿಗೆ ಮದ ಹತ್ತುವುದು ಸಹಜವಾದ ಲಕ್ಷಣ. ಆ ಮದಜಲವು ಶಿರಸ್ಸಿನಿಂದ, ಗಂಡಸ್ಥಳದಿಂದ ಬಾಯೊಳಗೆ ಜಾರುತ್ತಿದ್ದರೆ ಆ ಜಲದಿಂದ ಬಾಯನ್ನು ಶುದ್ಧವಾಗಿಸಿಕೊಳ್ಳುತ್ತಿವೆ ಅಂದರೆ ಆಚಮನ ಮಾಡುತ್ತಿವೆ. ಹಾಗೆಯೇ ಮೇಲಿಂದ ಕೆಳಗೆ ಪ್ರವಹಿಸುವ ಝುರಿಯಂತೆ

1. ಮುದಲ್ ತಿರುವಂದಾದಿ–82
2. ಇರಂಡಾಂ ತಿರುವಂದಾದಿ–28
3. ಇರಂಡಾಂ ತಿರುವಂದಾದಿ –72
4. ಮುನ್ರಾಂ ತಿರುವಂದಾದಿ–7

ಹರಿಯುತ್ತಿರುವ ಮದಜಲದಿಂದ ಕಾಲುಗಳನ್ನು ತೊಳೆದುಕೊಂಡು ನಂತರ ಚೆನ್ನಾಗಿ ಅಮಲು ಹತ್ತಿಸುವ ಜೇನಿನಿಂದ ತುಂಬಿದ ಹೂವನ್ನು ತನ್ನ ಸೊಂಡಿಲಿನಿಂದ ತಂದು ಮಹಾಬಲಶಾಲಿಯಾದ ಶ್ರೀನಿವಾಸನನ್ನು ಭಕ್ತಿಯಿಂದ ನಮಸ್ಕರಿಸುತ್ತಿವೆ.

ಹೀಗೆ ಪಶುಪಕ್ಷ್ಯಾದಿಗಳು ಕೂಡಾ ತಿರುಮಲೆಯ ಪವಿತ್ರತೆಯಿಂದಾಗಿ ಭಗವಂತನ ಮೇಲೆ ಭಕ್ತಿಯುಂಟಾಗಿ, ಆ ಸ್ವಾಮಿಯನ್ನು ಆರಾಧಿಸಿ ಧನ್ಯಜೀವಿಗಳಾಗುತ್ತಿವೆಂದು ಈ ಪಾಶುರದ ಅರ್ಥ!

**4. ತಿರುಮಳಿಶೈ ಆಳ್ವಾರು-ಭಕ್ತಿಸಾರರು-ನಾನ್ಮುಗನ್ ತಿರುವಂದಾದಿ**

ಶ್ರೀವೇಂಕಟಾಚಲ ಎಲ್ಲರಿಗೂ ಆಶ್ರಯಸ್ಥಾನವಾಗಿ ಬೆಳಗುತ್ತಿದೆ.

**ನನ್ ಮಣಿ ವಣ್ಣನೂರ್ ......... ವೀಡುಮುಡೈ ವೇಂಗಡಮ್** [1]

ಶರಭಮೃಗಗಳನ್ನು, ಪರಾಕ್ರಮವನ್ನು ಹೊಂದಿರುವಂತಹಾ ಸಿಂಹಗಳನ್ನು, ಬಂಗಾರವನ್ನು, ಮಣಿಗಳನ್ನು, ಮುತ್ತುಗಳನ್ನು, ಅರಳಿದ ಹೂವುಗಳನ್ನು ಹೊತ್ತು ನಿಂತ ವೃಕ್ಷಗಳನ್ನು, ಹಲವಾರು ರತ್ನಗಳನ್ನು, ನೀರಿನ ಪ್ರವಾಹಗಳಿಂದ ತುಂಬಿದ ಅರಣ್ಯಗಳನ್ನು, ವಾನರರು, ಬೇಡರನ್ನು ಹೊಂದಿರುವ ವೇಂಕಟಾಚಲವೇ ಇಂದ್ರನೀಲ ವಿಗ್ರಹನಾದ ಭಗವಂತನು ನಿತ್ಯವೂ ನಿವಸಿಸುವಂತಹಾ ಪವಿತ್ರವಾದ ಕ್ಷೇತ್ರ"ಎಂದು ಈ ಪಾಶುರದ ಅರ್ಥ.

**5. ನಮ್ಮಾಳ್ವಾರ್-ಪರಾಂಕುಶರು- 4ಪ್ರಬಂಧಗಳು ನಾಲ್ಕು ವೇದಗಳ ಸಾರಭೂತಗಳು**

ತಿರುವಾಯ್ ಮೊಳಿ ಎಂಬ ದಿವ್ಯಪ್ರಬಂಧದಲ್ಲಿ 1. ಒಳಿವಿಲ್ ಕಾಲಂ 2. ಉಲಗಮುಂಡ ಪೆರುವಾಯಾ ಎಂಬ ಎರಡು ದಶಕಗಳು ಶ್ರೀವೇಂಕಟೇಶ್ವರನ ವೈಭವವನ್ನು ತಿಳಿಸುತ್ತಿವೆ.

ಅದರಲ್ಲಿ ಒಂದು ಪಾಶುರ ......... **ವೇಂಕಡಂಗಳ್ ............ ಅದುಶುಮನ್ದಾರ್ ಕಟ್ಕೇ** [2]

ಭಗವಂತನಿಗೆ ಎಂತಹಾ ಅಡ್ಡಿ ಆತಂಕಗಳಿಲ್ಲದೇ ಸೇವೆಯನ್ನು ಮಾಡುವ ಉಪಾಯವೇನೆಂದರೆ ಶ್ರೀವೇಂಕಟಾಚಲದಲ್ಲಿ ನೆಲೆಗೊಂಡಿರುವ ಶ್ರೀನಿವಾಸನಿಗೆ **"ನಮಃ"** ಎಂದು ಹೇಳುವುದು. ಇದು ಪರಮಸುಲಭವಾದ ಉಪಾಯ. ಇದನ್ನು ಪ್ರತಿಯೊಬ್ಬರೂ ಮಾಡಬಹುದು. ಇದು ನಮ್ಮ ಸ್ವರೂಪಾನುಗುಣವೂ ಹೌದು. **"ನಮಃ"** ಎಂದು ಉಚ್ಚರಿಸಿದ ಕೂಡಲೆ ಸರ್ವೇಶ್ವರನು ಅದನ್ನು ದೊಡ್ಡ ಕಾರ್ಯವೆಂದು ಭಾವಿಸಿ ನಮ್ಮ ಪೂರ್ವಕರ್ಮಗಳನ್ನು, ಆಗಾಮಿಕರ್ಮಗಳನ್ನು ಸಮೂಲವಾಗಿ ನಾಶಮಾಡುತ್ತಾನೆ. ಇದು ಸತ್ಯವೆಂದು ಪಾಶುರದ ಅರ್ಥ.

**ಅಗಲಗಿಲ್ಲೇನ್ ...................... ಅಮುರ್ ನ್ದು ಪುಗುನ್ದೇನೇ** [3]

ಮಹಾಲಕ್ಷ್ಮೀವಿಶಿಷ್ಟನಾದ ಶ್ರೀನಿವಾಸನಲ್ಲಿ ಪರಿಪೂರ್ಣಶರಣಾಗತಿಯನ್ನು ತಿಳಿಯಪಡಿಸುವ ಪಾಶುರವಿದು. ಹಾಗೇ ತಿರುರುವಿತ್ತಂ, ಪೆರಿಯತಿರುವಂದಾದಿ ಪ್ರಬಂಧಗಳಲ್ಲಿ ತಿರುವೇಂಗಡ ಮಹಿಮೆ ತಿಳಿಯಪಡಿಸುತ್ತಿದೆ.

**6. ಕುಲಶೇಖರಾಳ್ವಾರರು-ಪೆರುಮಾಳ್ ತಿರುಮೊಳಿ**

ಎಂಬ ಈ ದಿವ್ಯಪ್ರಬಂಧದಲ್ಲಿ ಒಟ್ಟು ಹನ್ನೊಂದು ಪಾಶುರಗಳಿಂದ ಸ್ವಾಮಿಯನ್ನು ಕೀರ್ತಿಸಿದ್ದಾರೆ. ಇಂದು ನಾವು ನೋಡುವ ಕುಲಶೇಖರಪಡಿಯವರೆಗೂ ಹೋಗಿ ದರ್ಶನಮಾಡುತ್ತಿದ್ದೇವಲ್ಲಾ ಅದೇ ಆ ಗರ್ಭಗುಡಿಯ ಹೊಸ್ತಿಲು **"ಕುಲಶೇಖರಪಡಿ"**ಎಂಬ ಹೆಸರು ಈ ಆಳ್ವಾರರ ಪ್ರಾರ್ಥನೆಯಂತೆ ಬಂದಿದೆ. ಇದು ಯಾವ ಪುರಾಣದಲ್ಲೂ ಕಾಣಿಸದು.

**ಶೆಡಿಯಾಯವಲ್ ವಿನ್ನೈಗಳ್ ............... ಪವಳವಾಯ್ ಕಾಣ್ಬೇನೇ** [4]

---

1. ನಾನ್ಮುಗನ್ ತಿರುವಂದಾದಿ – 47
2. ತಿರುವಾಯಿ ಮೊಳಿ–3–3–6
3. ತಿರುವಾಯಿ ಮೊಳಿ–6–10–10
4. ಪೆರುಮಾಳ್ ತಿರುಮೊಳಿ–4–9

ಅನಾದಿಕಾಲದಿಂದ ನಾವು ಹೊತ್ತುಕೊಂಡಿರುವ ಪಾಪಗಳನ್ನು, ತತ್ಸಂಬಂಧವಾದ ದೋಷಗಳನ್ನೂ ಪರಿಹರಿಸುವವನಾಗಿ, ತಿರುಮಲೆಯಲ್ಲಿ ನೆಲೆಸಿರುವ ಓ ಸ್ವಾಮಿ! ನಿನ್ನ ಭಕ್ತರು, ದೇವತೆಗಳು, ದೇವಕನ್ಯೆಯರು ಓಡಾಡುವ ನಿನ್ನ ದಿವ್ಯಸನ್ನಿಧಿಯ ಬಾಗಿಲಿನಲ್ಲಿ ಎಲ್ಲರೂ ಕಾಲಿನಿಂದ ತುಳಿಯುವ ಹೊಸ್ತಿಲಾಗಿ ಬಿದ್ದು, ಹವಳದಂತಹಾ ನಿನ್ನ ತುಟಿಗಳನ್ನು ಸದಾ ನೋಡುತ್ತಾ ಸೇವೆಮಾಡುತ್ತಾ ಇರುವ ಭಾಗ್ಯವನ್ನು ಕರುಣಿಸು ಎಂದು ಈ ಪಾಶುರದ ಅರ್ಥ.

**7. ಪೆರಿಯಾಳ್ವಾರು-ಶ್ರೀವಿಷ್ಣುಚಿತ್ತಃ-ಪೆರಿಯಾಳ್ವಾರ್ ತಿರುಮೊಳಿ**

**ತೆನ್ನಿಯೊಂಗು .............. ಎನ್ ತಿರುಕ್ಕುಱಿಪ್ಪೇ** [1]

ಆಕಾಶ ಎಷ್ಟು ಎತ್ತರವಾಗಿರುವ ಶಿಖರಗಳನ್ನು ಹೊಂದಿರುವ ತಿರುಮಲೆಯ ಗಿರಿಯಲ್ಲಿ ನೆಲೆಸಿರುವ ಸ್ವಾಮಿಯ ಅನುಗ್ರಹ ಪರಿಪೂರ್ಣವಾಗಿ ಇರಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

**8. ಆಂಡಾಳ್-ಗೋದಾದೇವಿ-ನಾಚ್ಚಿಯಾರ್ ತಿರುಮೊಳಿ**

**ತೈಯೊರು ತಿಂಗಳುಂ-ವೇಂಗಡವರ್ಕು ಎನ್ನೈವಿದಿಕ್ಕಿತ್ತಿಯೇ** [2]

ಓ ಮನ್ಮಥಾ! ನನ್ನನ್ನು ಶ್ರೀವೇಂಕಟೇಶ್ವರಸ್ವಾಮಿಗೆ ಸೇವೇ ಮಾಡುವಂತೆ ಸಹಾಯ ಮಾಡು.

**9. ತಿರುಪ್ಪಾಣ್ಣಾಳ್ವಾರ್-ಎರಡು ಪಾಶುರಗಳಲ್ಲಿ ತಿರುವೇಂಗಡಮುಡೈಯಾನ್‌ನನ್ನು ಕೀರ್ತಿಸಿದರು.**

ಮೊದಲ ಪಾಶುರದಲ್ಲಿ- "ವಿರೈಯಾರ್ ಪೊಳಿಲ್ ವೇಂಗಡವನ್, ಎಂದು ಮೂರನೆಯ ಪಾಶುರದಲ್ಲಿ ಮನ್ದಿಪಾಯ್ ವಡವೇಙ್ಗಡ-ಮಾಮಲೈ [3] ಎಂದು ತಿರುಮಲೆಯ ಗಿರಿಯಲ್ಲಿ ಎಂದು ಸಾವಿರಾರು ಕೋತಿಗಳು ಇಲ್ಲಿ ಆಟವಾಡಿಕೊಂಡು ಧನ್ಯವಾಗುತ್ತಿವೆ ಎಂದು ಪಾಶುರದ ಅರ್ಥ!

**10. ತಿರುಮಂಗೈ ಆಳ್ವಾರರು -ಪರಕಾಲಃ 6 ದಿವ್ಯಪ್ರಬಂಧಗಳು**

**ಪೇಶುಮಿನ್ ತಿರುನಾಮಂ ........... ತಿರುವೇಂಗಡಂ ಅಡೈನೆಂಜಮೇ** [4]

"ಎಲೈ ಮನವೇ! ಅಷ್ಟಾಕ್ಷರೀ ಮಹಾಮಂತ್ರವನ್ನು ಅನುಸಂಧಾನ ಮಾಡುತ್ತಾ , ಎಲ್ಲಾ ಲೋಕಗಳಿಗೆ ತಿಲಕದಂತೆ ಇದ್ದು ಪ್ರಕಾಶಿಸುವ ತಿರುಮಲೆಯನ್ನು ಆಶ್ರಯಿಸು." ಹೀಗೆ ಆಳ್ವಾರರ ಪ್ರಬಂಧಗಳಲ್ಲಿ ತಿರುಮಲೆಯ ಕ್ಷೇತ್ರ ವೈಭವವನ್ನು ಸಂಗ್ರಹವಾಗಿ ಇಲ್ಲಿ ನಿರೂಪಿಸಲಾಗಿದೆ.

**ಆಚಾರ್ಯರ ಸ್ತೋತ್ರಪ್ರಬಂಧಗಳಲ್ಲಿ ತಿರುಮಲೆ**

**ತಿರುವರಂಗತ್ತಮುದನಾರ್-ಶ್ರೀರಂಗಾಮೃತಕವಿ-ಇರಾಮಾನುಶನೂತ್ತಂದಾದಿ 1. ನಿನ್ರವಣ್ ಕೀರ್ತಿಯಂ (76)**

**2. ಇರುಪ್ಪಿಡಂ ವೈಗುನ್ದಂ(106)**

**ಶ್ರೀವೇಂಕಟನಾಥರು- ಶ್ರೀವೇದಾಂತದೇಶಿಕರು-ಅಧಿಕಾರ ಸಂಗ್ರಹ ಕಣ್ಣನಡಿಯಿನೈ ಯೆಮಕ್ಕು 43ವ ಪಾಶುರ.**

---

1. ಪೆರಿಯಾಳ್ವರ್ ತಿರುಮೊಳಿ-5-4-1
2. ನಾಚ್ಚಿಯಾರ್ ತಿರುಮೊಳಿ-1-1
3. ಅಮಲನಾದಿಪಿರಾನ್-1.3
4. ಪೆರಿಯ ತಿರುಮೊಳಿ-1-8-9

ಇದು ಆಳ್ವಾರಾಚಾರ್ಯರ ದಿವ್ಯಪ್ರಬಂಧಗಳಲ್ಲಿ ತಿರುಮಲೆಯ ಕ್ಷೇತ್ರಪ್ರಾಶಸ್ತ್ಯ, ತಿರುಮಲೆಯ ಕ್ಷೇತ್ರದ ರಮಣೀಯತೆ, ತಿರುಮಲೆಯು ಪಶುಪಕ್ಷ್ಯಾದಿಗಳಿಗೆ ಕೂಡಾ ಇಷ್ಟವಾದ ಸ್ಥಳ, ತಿರುಮಲೇಶನ ಅಪಾರಕರುಣ ಮುಂತಾದ ವಿಷಯವಿಶೇಷತೆಗಳು ನಮ್ಮ ದೃಷ್ಟಿಗೆ ಗೋಚರವಾಗುತ್ತಿವೆ. ಸಾಕ್ಷಾತ್ತು ಭಗವದಾಜ್ಞೆಯೊಂದಿಗೆ ಭಗವದಂಶದಿಂದ ಅವತರಿಸಿದ ಆಳ್ವಾರರ ದಿವ್ಯಪ್ರಬಂಧಗಳು ಶ್ರೀವೇಂಕಟಾಚಲಪ್ರಾಶಸ್ತ್ಯವನ್ನು ಕಣ್ಣಿಗೆ ಕಟ್ಟಿದಂತೆ ವರ್ಣಿಸುತ್ತಿವೆ ಎಂದರೆ ಇವೆಲ್ಲವೂ ಆ ಸ್ವಾಮಿಯ ಮಹಿಮೆಗಳು, ಲೀಲೆಗಳೇ ಅಲ್ಲವೇ!

### ಆಳ್ವಾರರ ಪಾಶುರಗಳಲ್ಲಿ ಅಂಜನೀಸುತ

| ಕ್ರ. ಸಂಖ್ಯೆ | ಪ್ರಬಂಧದ ಹೆಸರು | ಕರ್ತ | ಪಾಶುರ ಸಂಖ್ಯೆ |
|---|---|---|---|
| 1 | ಪೆರುಮಾಳ್ ತಿರುಮೊಳಿ | ಕುಲಶೇಖರಾಳ್ವಾರರು | ತನಮರುವು 10–6 |
| 2 | ಪೆರುಮಾಳ್ ತಿರುಮೊಳಿ | ಕುಲಶೇಖರಾಳ್ವಾರರು | ತಿಲ್ಲೈನಗರ್ 10–11 |
| 3 | ಪೆರಿಯತಿರುಮೊಳಿ | ತಿರುಮಂಗೈ ಆಳ್ವಾರರು | ಮುನ್ನೋರ್ ತೂದು 2–2–3 |
| 4 | ಪೆರಿಯ ತಿರುಮೊಳಿ | ತಿರುಮಂಗೈ ಆಳ್ವಾರರು | ವಾದಮಾಗನ್ 5–8–2 |
| 5 | ಪೆರಿಯ ತಿರುಮೊಳಿ | ತಿರುಮಂಗೈ ಆಳ್ವಾರರು | ಓದಮಾಕ್ಕದಲೈ 10–2–6 |
| 6 | ಪೆರಿಯ ತಿರುಮೊಳಿ | ತಿರುಮಂಗೈ ಆಳ್ವಾರರು | ಎನ್ಬಿರಾನೇ 10–3–2 |
| 7 | ಪೆರಿಯ ತಿರುಮೊಳಿ | ತಿರುಮಂಗೈ ಆಳ್ವಾರರು | ಮಾತ್ತಮಾವದಿ–10–3–7 |
| 8 | ತಿರುಕ್ಕುಟುಂ ನ್ದಾಡ್ಗಂ | ತಿರುಮಂಗೈ ಆಳ್ವಾರರು | ಮುನೊಪೊಲಾವಿ–15 |
| 9 | ಪೆರಿಯಾಳ್ವಾರ್ ತಿರುಮೊಳಿ | ಪೆರಿಯಾಳ್ವಾರ್ | ಪಡಂಗಳ್ –3–5–7 |
| 10 | ಪೆರಿಯಾಳ್ವಾರ್ ತಿರುಮೊಳಿ | ಪೆರಿಯಾಳ್ವಾರ್ | ತಿಕ್ಕುನಿಟ್ಟೈ 3–10–10 |
| 11 | ಪೆರಿಯಾಳ್ವಾರ್ ತಿರುಮೊಳಿ | ಪೆರಿಯಾಳ್ವಾರ್ | ವಾರಾರುಂ 3–10–10 |
| 12 | ಪೆರಿಯಾಳ್ವಾರ್ ತಿರುಮೊಳಿ | ಪೆರಿಯಾಳ್ವಾರ್ | ವೆಳ್ಳೈವಿಳಿಶಂಗು 4–1–7 |

ನಮಗೆ ಒಟ್ಟು ಹನ್ನೆರಡು ಪಾಶುರಗಳಲ್ಲಿ ಮಾರುತಿ ಎಂದು, ಹನುಮಾನ್ ಎಂಬ ಹೆಸರುಗಳಿಂದ ಅಂಜನೀಸುತನ ಪ್ರಸ್ತಾಪವನ್ನು ಮಾಡಲಾಗಿದೆ. ಕೆಲವರು ವಿಮರ್ಶಕರು ಆಂಜನೇಯಸ್ವಾಮಿ ಸೀತಾದೇವಿಯೊಂದಿಗೆ ಮಾತನಾಡಿದ ಸಂಭಾಷಣಾ ರೂಪವಾದ 11 ಪಾಶುರಗಳೂ ಮಾರುತಿಗೆ ಸೇರಿದ್ದವೆಂದು, ಹಾಗೆಯೇ ರಾಮನ ಸನ್ನಿಧಿಯಲ್ಲಿ ಲಂಕೆಯಲ್ಲಿ ಏನೇನು ನಡೆದಿದೆಯೆಂದು ತಿಳಿಸುವ 11 ಪಾಶುರಗಳು ಕೂಡಾ ಹನುಮಂತನಿಗೆ ಸೇರಿದ್ದವೆಂದು ಲೆಕ್ಕಮಾಡಿ ಹೆಚ್ಚು ಕಡಿಮೆ 34 ಪಾಶುರಗಳೆಂದು ನಿರ್ಧಾರ ಮಾಡಿದ್ದಾರೆ.

### ಆಚಾರ್ಯರ ಸ್ತೋತ್ರಗಳಲ್ಲಿ ವೇಂಕಟಾಚಲ–ಅಂಜನಾದ್ರಿ

**ಭಗವದ್ರಾಮನಾಜಾಚಾರ್ಯರು –ಒಂಭತ್ತು ಗ್ರಂಥಗಳು**

**ಶ್ರೀಭಾಷ್ಯಂ–ಮಂಗಳ ಶ್ಲೋಕ**

**ಅಖಿಲಭುವನಜನ್ಮಸ್ಥೇಮಭಂಗಾದಿಲೀಲೇ, ವಿನತವಿವಿಧಭೂತವ್ರಾತರಕ್ಷೈಕದೀಕ್ಷೇ**
**ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ, ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ.**

1. ತಿರುಮಲೆಯ ಕ್ಷೇತ್ರದ ವೈಭವಕ್ಕೆ ಪ್ರಧಾನ ಕಾರಣರಾದ ಶ್ರೀಭಾಷ್ಯಕಾರರು ವೇದಾರ್ಥಸಂಗ್ರಹ ಎಂಬ ಗ್ರಂಥವನ್ನು ತಿರುಮಲೆಯ ಕ್ಷೇತ್ರದಲ್ಲಿ ಬೇಡಿ ಆಂಜನೇಯಸ್ವಾಮಿಯ ಸನ್ನಿಧಾನದಲ್ಲಿ ರಚಿಸಿದರೆಂದು ಹೇಳುತ್ತಾರೆ.

2. ಪ್ರಸಿದ್ಧ ವ್ಯಾಖ್ಯಾನಕಾರರಾದ ಶ್ರೀರಂಗರಾಮಾನುಜ ಮುನಿಗಳು ಅನೇಕ ಉಪನಿಷತ್ತುಗಳಿಗೆ ಭಾಷ್ಯವನ್ನು ರಚಿಸಿದರು. ಅದರಲ್ಲಿ ಕಠೋಪನಿಷತ್ತಿಗೆ ಭಾಷ್ಯವನ್ನು ಬರೆಯುತ್ತಾ, ಮಂಗಳಶ್ಲೋಕವಾಗಿ ತಿರುಮಲೆಯ ಶ್ರೀನಿವಾಸನನ್ನು ಅಂಜನಾದ್ರಿನಾಥನೆಂದು ಕೀರ್ತಿಸಿದ್ದಾರೆ.

**ಅತಸೀಗುಚ್ಛಸಚ್ಛಾಯಮಂಚಿತೋರಃಸ್ಥಲಂ ಶ್ರಿಯಾ**
**ಅಂಜನಾಚಲಶೃಂಗಾರಾಮಂಜಲಿರ್ಮಮ ಗಾಹತಾಂ** [1]

ಕಪ್ಪಗಿನ ಅಗಸೆ ಹೂವಿನಂತಹಾ ಕಾಂತಿಯೊಂದಿಗೆ, ಲಕ್ಷ್ಮೀದೇವಿಯಿಂದ ಭೂಷಿತವಾದ ವಕ್ಷಃಸ್ಥಳದೊಂದಿಗೆ ರಾರಾಜಿಸುತ್ತಿರುವಂತಹ, ಅಂಜನಾದ್ರಿಗೆ ಅಲಂಕಾರರೂಪವಾಗಿ ಪ್ರಕಾಶಿಸುತ್ತಿರುವ, ಆ ದೇವದೇವನು ನನ್ನ ನಮಸ್ಸುಮಾಂಜಲಿಯನ್ನು ಸ್ವೀಕರಿಸಲಿ! ಎಂದು ಈ ಶ್ಲೋಕದ ಅರ್ಥ.

ಮಹಾನುಭಾವರಾದ ಶ್ರೀವೇದಾಂತದೇಶಿಕರು ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನ ಘಂಟಾಂಶವಾಗಿ ಅವತರಿಸಿದರೆಂದು ಹೇಳುತ್ತಾರೆ. ಇವರು ಕ್ರಿ.ಶ.1268-1369 ರ ಮಧ್ಯಕಾಲದಲ್ಲಿ ಅತ್ಯಂತ ಉನ್ನತ ಸ್ಥಿತಿಯನ್ನು ಕಂಡ ಕವಿತಾರ್ಕಿಕಸಿಂಹ ಎಂದು ಇವರನ್ನು ಕೊಂಡಾಡುತ್ತಾರೆ. ಇವರು 120ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಅವರ ಖಂಡಕಾವ್ಯವಾದ "ಹಂಸಸಂದೇಶ"ದಲ್ಲಿ ತಿರುಮಲೆಯನ್ನು ಅಂಜನಾದ್ರಿಯೆಂದು ವರ್ಣಿಸಿದ್ದಾರೆ.

**ಅಗ್ರೇ ಭಾವೀ ಸಪದಿ ನಯನೇ ರಂಜಯನೇ ಅಂಜನಾದ್ರಿಃ** [1]

"ಎಲೈ ಹಂಸ ಪಕ್ಷಿಯೇ! ವಿಷ್ಣುವಿನ ವಾಸಸ್ಥಾನವಾದ್ದರಿಂದ ಭೂಮಿಯನ್ನು ಹೊತ್ತು, ರತ್ನಗಳನ್ನು ಧರಿಸಿದ್ದರಿಂದಲೂ, ಈ ಗಿರಿಯನ್ನು " ಶೇಷನೋ ಏನೋ?" ಎಂದು ಪ್ರಜೆಗಳು ಸಂಶಯವನ್ನು ವ್ಯಕ್ತಪಡಿಸಿದ ಈ ಪರ್ವತದ ಮೇಲೆ ಕದಲಾಡುವ ಮೇಘಗಳು ಹಾವಿನ ಪೊರೆಯನ್ನು ಹೋಲುತ್ತಿದೆ. ಅಂತಹಾ ಶ್ರೀನಿವಾಸನ ಅಂಜನಾದ್ರಿಪರ್ವತ ನಿನ್ನ ಕಣ್ಣಿಗೆ ಆನಂದವನ್ನು ಉಂಟುಮಾಡುತ್ತಿದೆ.

ಅಭಿನವ ದೇಶಿಕರೆಂದು ಪ್ರಸಿದ್ಧಿ ಹೊಂದಿದ ಉತ್ತಮಾರ್ ವೀರರಾಘವಾಚಾರ್ಯಸ್ವಾಮಿಯವರು ಈ ವಾಕ್ಯಕ್ಕೆ ವ್ಯಾಖ್ಯಾನವನ್ನು ಬರೆಯುತ್ತ, "ಎಲೈ ಹಂಸ ಪಕ್ಷಿಯೇ! ಹನುಮಂತನ ತಾಯಿ ಅಂಜನಾದೇವಿ, ಈ ಪರ್ವತದ ಮೇಲೆ ತಪಸ್ಸು ಮಾಡಿದಳಾದ್ದರಿಂದ ಈ ಪರ್ವತಕ್ಕೆ ಅಂಜನಾದ್ರಿ ಎಂದು ಹೆಸರು ಬಂದಿದೆ. ಹನುಮ ನಿನಗೆ ಅಣ್ಣನಂತಹವನು. ಆತನ ತಾಯಿ ಅಂಜನಾದೇವಿ ನಿನಗೂ ತಾಯಿಯೇ ಆಗಿದ್ದಾಳೆ. ಆದ್ದರಿಂದ ತಾಯಿಯ ಮನೆಯಾದ ಅಂಜನಾದ್ರಿಗೆ ನೀನು ಹೋಗುವುದು ನಿನಗೆ ಆನಂದದಾಯಕವು" ಎಂದು ಹೇಳಿದ್ದಾರೆ.

**ಸಂಕಲ್ಪಸೂರ್ಯೋದಯ -ನಾಟಕ**

**ಶ್ರೀವೇದಾಂತದೇಶಿಕರ :ಸಂಕಲ್ಪಸೂರ್ಯೋದಯ:ಎಂಬ ನಾಟಕದಲ್ಲಿ ......**
**ಅದ್ಯತ್ವೇ ಹನುಮತ್ಸಮೇನ ಗುರುಣಾ ಪ್ರಖ್ಯಾಪಿತಾರ್ಥಃ ಪುಮಾನ್** 3

ಎಂದು ಸಾಕ್ಷಾತ್ತು ಹನುಮಂತನನ್ನು ಓರ್ವ ಪ್ರಸಿದ್ಧ ಆಚಾರ್ಯನೆಂದು ಕೊಂಡಾಡಿದ್ದಾರೆ.

---

1. ಕಠೋಪನಿಷತ್ತು-ರಾಮಾನುಜಭಾಷ್ಯ-ಮಂಗಳಶ್ಲೋಕ 2. ಹಂಸಸಂದೇಶಂ-21 3. ಸಂಕಲ್ಪಸೂರ್ಯೋದಯ-1-71

**ದಯಾಶತಕಂ–ಸ್ತೋತ್ರ :**

ಶ್ರೀವೇದಾಂತದೇಶಿಕರ 28 ಸೋತ್ರಗಳಲ್ಲಿ ಕಲಿಯುಗದ ಪ್ರತ್ಯಕ್ಷದೈವವಾದ ಶ್ರೀವೇಂಕಟೇಶ್ವರನ ದಯಾಗುಣವನ್ನು ಒಂದು ದಯಾದೇವಿಯಾಗಿ ನಿರೂಪಿಸುತ್ತಾ 108 ಶ್ಲೋಕಗಳಲ್ಲಿ ಹತ್ತು ರೀತಿಯ ಛಂದಸ್ಸುಗಳೊಂದಿಗೆ ಒಂದು ಅದ್ಭುತವಾದ ಸ್ತೋತ್ರವು ಹೊರಹೊಮ್ಮಿದೆ.

ಅದೇ ದಯಾಶತಕವು, ದಯಾಗುಣವು ಇಲ್ಲದಿದ್ದರೆ ಎಷ್ಟೇ ಗುಣಗಳು ಇದ್ದರೂ ಭಗವಂತನಿಗೆ ಶೋಭಿಸುವುದಿಲ್ಲ– ದಯಾನಾಥನಾದ್ದರಿಂದಲೇ ಪ್ರತಿನಿತ್ಯವೂ ಸಾವಿರಾರು ಮಂದಿ ಭಕ್ತರುಗಳು ಶ್ರೀವೇಂಕಟೇಶ್ವರನನ್ನು ಸೇವಿಸಿ, ದರ್ಶಿಸಿ ಪುನೀತರಾಗುತ್ತಿದ್ದಾರೆ. ಪ್ರಪತ್ತಿ ಸಿದ್ಧಾಂತವನ್ನು ಪ್ರಧಾನವಾಗಿ ಮಾಡಿಕೊಂಡು ಈ ಸೋತ್ರದಲ್ಲಿ ಅಂಜನಾದ್ರಿಯ ಪ್ರಸ್ತಾವನೆ ಕಂಡುಬರುತ್ತಿದೆ.

**ಅಕಿಂಚನನಿಧಿಂ ಸೂತಿಮ್ ಅಪವರ್ಗತ್ರಿವರ್ಗಯೋಃ**
**ಅಂಜನಾದ್ರೀಶ್ವರದಯಾಮ್ ಅಭೀಷ್ಟೌಮಿ ನಿರಂಜನಾಮ್** [1]

ಅಕಾರವಾಚ್ಯನಾದ ಭಗವಂತನು ಅಂಜನಾದ್ರಿಯಲ್ಲಿ ನೆಲೆಸಿ ಎಲ್ಲರನ್ನೂ ಅನುಗ್ರಹಿಸುತ್ತಿದ್ದಾನೆ. ಬಡವರಿಗೆ ನಿಧಿಯಂತೆ ದೊರಕುವ, ಮೋಕ್ಷಕ್ಕೆ ಧರ್ಮಕಾಮಗಳಿಗೆ ಉತ್ಪತ್ತಿಕಾರಣವಾಗಿರುವ, ದೋಷರಹಿತನಾದ, ಅಂಜನಗಿರಿಯ ಒಡೆಯನಾಗಿ ಶ್ರೀವೇಂಕಟೇಶನ ದಯಾಗುಣವನ್ನು ಸ್ತುತಿಸುತ್ತಿದ್ದೇನೆ" ಹಾಗೆಯೇ ಇನ್ನೂ ಒಂದೆಡೆ–

"**ಅಂಜನಗಿರಿನಾಥರಂಜನೀ ಭವತಿ**"[2] ಎಂದು ಸ್ತುತಿಸಿದ್ದಾರೆ.

"ಓ ದಯಾದೇವೀ! ಅಂಜನಾಪರ್ವತಕ್ಕೆ ಅಧಿಪತಿಯಾದ ಶ್ರೀನಿವಾಸನ ಗುಣಚೇಷ್ಟಿತಗಳಿಂದ ರಂಜಿಸುತ್ತಿರುವ ನೀನು ಅನೇಕ ಪಾಪಗಳಿಂದ ಮೂರ್ಛಿತನಾದ ನನ್ನನು ಉಜ್ಜೀವನಗೊಳಿಸು ಎಂದು ಪ್ರಾರ್ಥಿಸುತ್ತಿದ್ದೇನೆ. ಇವರೇ ಮತ್ತೊಂದು ಕಡೆ,

"**ಮೃತಸಂಜೀವನಮಂಜನಾಚಲೇಂದೋಃ**" [3] ಎಂದು ಸ್ತುತಿಸಿದ್ದಾರೆ.

ಇದೊಂದು ಅದ್ಭುತವಾದ ಕಲ್ಪನೆ. "ಓ ದಯಾದೇವೀ! ಅಂಜನಪರ್ವತವೆಂಬ ತಿರಮಲೆಯಲ್ಲಿ ಚಂದ್ರನಂತೆ ಪ್ರಕಾಶಿಸುತ್ತಿರುವ ಮರಣಿಸಿದವರಿಗೆ ಸಂಜೀವಿನಿಯಂತೆ ಇರುವ ಶ್ರೀನಿವಾಸನ ದಿವ್ಯಮಂಗಳ ವಿಗ್ರಹವನ್ನು ನಿನ್ನ ಅಮೃತಾಂಶದಂತೆ ಭಾವಿಸುತಿದ್ದೀನಿ".

"**ನಿತ್ಯಾಪೂರ್ವಂ ನಿಧಿಮಿವ ದಯೇ!ನಿರ್ವಿಶಂತ್ಯಂಜನಾದ್ರೌ**" [4]

ಎಂದು ದಯಾಶತಕದಲ್ಲಿ 44ನೆಯ ಶ್ಲೋಕದಲ್ಲಿ ಅಂಜನಾದ್ರಿಯ ಪ್ರಸ್ತಾವನೆ ಕಂಡುಬರುತ್ತದೆ. "ಅಮ್ಮಾ! ದಯಾದೇವಿ! ಸರ್ವಲೋಕಗಳಲ್ಲಿ ಅದ್ಭುತವಾಗಿರುವ ಆ ಪರಮಾತ್ಮನ ದಿವ್ಯಾತ್ಮಸ್ವರೂಪವನ್ನು ನಿನ್ನ ಅನುಮತಿಯಿಂದ , ಈ ಪ್ರಕೃತಿ ಮಂಡಲದಲ್ಲಿ, ಭಾಗ್ಯವಂತರು ನಿಧಿಯಂತೆ ಅಂಜನಪರ್ವತವೆಂಬ ತಿರುಮಲೆಯಲ್ಲಿ ಆನಂದದಿಂದ ಅನುಭವಿಸುತ್ತಿದ್ದಾರೆ" .

**ಅಶೇಷಮವಿಶೇಷತಃ ತ್ರಿಜಗತ್ ಅಂಜನಾದ್ರೀಶಿತುಃ** [5]

ತ್ರಿವಿಕ್ರಮಾವತಾರದಲ್ಲಿ ದಯಾದೇವಿ ಮಾಡಿದ ಮಹದುಪಕಾರವನ್ನು ವರ್ಣಿಸುತ್ತಾ, "ಅಮ್ಮಾ ದಯಾದೇವಿ! ಅಂಜನಾದ್ರಿಪರ್ವತಕ್ಕೆ ಅಧಿಪತಿಯಾದ ವೇಂಕಟೇಶನ ಪಾದಾರವಿಂದಗಳ ಮುದ್ರೆಯನ್ನು ತಾರತಮ್ಯವಿಲ್ಲದೇ ಚರಾಚರವಾದ ತ್ರಿಲೋಕದಲ್ಲಿ ಮುದ್ರಿಸುವಂತೆ ಮಾಡಿದೆಯಲ್ಲಾ!

ಹೀಗೇ ಶ್ರೀವೇದಾಂತದೇಶಿಕರ ಸ್ತೊತ್ರದಲ್ಲಿ ಐದುಬಾರಿ ಅಂಜನಾದ್ರಿಯ ಪ್ರಸ್ತಾವನೆ ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ತಿರುಮಲೆಯ ಕ್ಷೇತ್ರವೇ ಅಂಜನಾದ್ರಿಯಾಗಿ ಪ್ರಸಿದ್ಧಿಯಾಗಿದೆ ಎಂದು ಮಾತ್ಸರ್ಯವಿಲ್ಲದೆ ಗ್ರಹಿಸಬೇಕಾಗಿದೆ.

---

1. ದಯಾಶತಕ– 10 2.ದಯಾಶತಕ–12 3.ದಯಾಶತಕ–22 4.ದಯಾಶತಕ–44 5.ದಯಾಶತಕ–85

**ವಿಶ್ವಗುಣದರ್ಶಚಂಪೂ-ವೇಂಕಟಾಧ್ವರಿ-ವೇಂಕಟಗಿರಿವರ್ಣನೆ**

ಪ್ರಸಿದ್ಧ ವಿದ್ವತ್ಕವಿಯಾದ ವೇಂಕಟಾಧ್ವರಿ ಯವರ ಕಾವ್ಯವಾದ "ವಿಶ್ವಗುಣಾದರ್ಶಚಂಪೂ"ದಲ್ಲಿ ವೇಂಕಟಗಿರಿವರ್ಣನೆ ಎಂಬ ಪ್ರಕರಣದಲ್ಲಿ ಸುಮಾರು 16 ಶ್ಲೋಕಗಳಿಂದ ತಿರುಮಲೆಯ ಕ್ಷೇತ್ರವನ್ನು ಕ್ಷೇತ್ರಾಧೀಶನನ್ನು ಅತ್ಯಂತ ಮನೋಹರವಾಗಿ ವರ್ಣಿಸಿದ್ದಾರೆ. ಇದರಲ್ಲಿ-

**ಕಿಮಪ್ಯುಪಾದಾಯ ದಿಶನ್ನಭೀಷ್ಟಂ ಕೃತ್ಸ್ನಂ ಜನೇಭ್ಯಃ ಪತಿರಂಜನಾದ್ರೇಃ** [1]

ಅಂಜನಪರ್ವತಕ್ಕೆ ಒಡೆಯನಾದ ಶ್ರೀಶ್ರೀನಿವಾಸನು ಭಕ್ತರಿಂದ ಮಿತವಾಗಿ ತೆಗೆದುಕೊಂಡು, ಅವರಿಗೆ ಅಪರಿಮಿತವಾದ ಅಭೀಷ್ಟಸಿದ್ಧಿಯನ್ನು ಕರುಣಿಸುತ್ತಿದ್ದಾನೆಂದು, ಕುಚೇಲನ ಬಳಿ ಒಂದು ಹಿಡಿ ಅವಲಕ್ಕಿಯನ್ನು ಸ್ವೀಕರಿಸಿ ಅವನನ್ನು ತಲೆತಲೆಮಾರುಗಳವರೆಗೂ ಅನುಭವಿಸುವಷ್ಟು ಕೋಟೀಶ್ವರನನ್ನಾಗಿ ಮಾಡಿದಂತೆ ಕಲಿಯುಗದ ಪ್ರತ್ಯಕ್ಷ ದೈವವಾದ ಭಕ್ತರ ಸುಲಭದೈವವಾಗಿ ಬೆಳಗುತ್ತಿದ್ದಾನೆಂದು ಇದರ ಅರ್ಥ.

ಹಾಗೆಯೇ ಪ್ರತಿವಾದಿಭಯಂಕರ ಅಣ್ಣನ್ ಸ್ವಾಮಿ ಅಂಜನಗಿರಿನಾಥಸ್ತೋತ್ರ, ಏಡೂರ್ ಲಕ್ಷ್ಮೀಕುಮಾರ್ ತಾತಾಚಾರ್ಯಸ್ವಾಮಿಯವರ "ಹನುಮದ್ವಿಂಶತಿ" ಮುಂತಾದ ಸ್ತೋತ್ರಗಳಲ್ಲಿ ಅಂಜನಗಿರಿ ಸಾಕ್ಷಾತ್ತು ಪುರಾಣಪ್ರಸಿದ್ಧವಾದ ಶೇಷಾಚಲಪರ್ವತದಲ್ಲೇ ನೆಲೆಗೊಂಡಿದೆಯೆಂದು ಶ್ರೀವೈಷ್ಣವ ಸಾಹಿತ್ಯದಲ್ಲಿ ಆಚಾರ್ಯಸಾರ್ವಭೌಮರು ಸುಸ್ಪಷ್ಟವಾಗಿ ಪ್ರಾಮಾಣಿಕವಾಗಿ ಸಭಕ್ತಿಪೂರ್ವಕವಾಗಿ ಸಮರ್ಪಿಸಿದ್ದಾರೆ. ಆದ್ದರಿಂದ ತಿರುಮಲೆಯೇ ಅಂಜನಾದ್ರಿ ಎಂದು ನಿರೂಪಿತವಾಗಿದೆ.

**ಪ್ರಶಮಿತಕಲಿದೋಷಾಂ ಪ್ರಾಜ್ಯಭೋಗಾನುಬಂಧಾಂ**
**ಸಮುದಿತಗುಣಜಾತಾಂ ಸಮ್ಯಗಾಚಾರಯುಕ್ತಾಂ,**
**ಶ್ರಿತಜನಬಹುಮಾನ್ಯಾಂ ಶ್ರೇಯಸೀಂ ವೇಂಕಟಾದ್ರೌ**
**ಶ್ರಿಯಮುಪಚಿನು ನಿತ್ಯಂ ಶ್ರೀನಿವಾಸ! ತ್ವಮೇವ.**

*~*~*~*~*~*

1. ವಿಶ್ವಗಣಾದರ್ಶಚಂಪೂ

## ಶ್ರೀರಾಮನ ಆಸ್ಥಾನದಲ್ಲಿ ಅಗಸ್ತ್ಯ ಮಹರ್ಷಿ



# 12. ಸಪ್ತಗಿರಿಗಳಲ್ಲಿ ಅಂಜನಾದ್ರಿಯ ಪ್ರಾಮುಖ್ಯತೆ

ಅರ್ಚಕಂ ರಾಮಕೃಷ್ಣ ದೀಕ್ಷಿತರು

**ಶ್ರೀವೇಂಕಟಾಚಲಾಧೀಶಂ ಶ್ರಿಯಾಧ್ಯಾಸಿತವಕ್ಷಸಂ,**
**ಶ್ರಿತಚೇತನಮಂದಾರಂ ಶ್ರೀನಿವಾಸಮಹಂ ಭಜೇ**

ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ. ವೇದವೇದ್ಯನಾದಂತಹವನು. ಶ್ರೀ ಶ್ರೀನಿವಾಸನು ಸ್ವಯಂಭುವಾಗಿ ಅವತರಿಸಿದ ಪವಿತ್ರವಾದ ಪುಣ್ಯಕ್ಷೇತ್ರ ತಿರುಮಲೆಯ ದಿವ್ಯಕ್ಷೇತ್ರ. ಶೇಷನಿಗೆ ಪ್ರತೀಕವಾದ ಶೇಷಾಚಲಪರ್ವತದ ಅಡವಿಗಳಲ್ಲಿನ ಶಿರೋಭಾಗದಲ್ಲಿ, ಪವಿತ್ರವಾದ ತಿರುಮಲೆಯ ಬೆಟ್ಟಗಳು ನೆಲೆಗೊಂಡಿವೆ. ಶ್ರೀವೇಂಕಟೇಶ್ವರಸ್ವಾಮಿಯನ್ನು ಭಕ್ತರು ಆರ್ತಿಯಿಂದ "ಏಡುಕೊಂಡಲವಾಡಾ! ವೇಂಕಟರಮಣ ಗೋವಿಂದಾ! ಗೋವಿಂದಾ! "ಎಂದು ಕರೆಯುತ್ತಿರುತ್ತಾರೆ. ಸಾಮಾನ್ಯ ಭಕ್ತರು ಏಡುಕೊಂಡಲವಾಡ ಎಂದು ಕೀರ್ತಿಸಿದರೆ, ಅರ್ಚಕರು, ಮಾನ್ಯರು ಶ್ರೀಹರಿಯನ್ನು "ಸಪ್ತಾದ್ರೀಶನೆಂದು" ಕರೆಯುತ್ತಾರೆ. ತಿರುಮಲೆಯ ಶ್ರೀಹರಿಗೆ ಅನಾದಿಕಾಲದಿಂದಲೂ ಶ್ರೀವೈಖಾನಸ ಆಗಮ ಶಾಸ್ತ್ರ ಅನುಸಾರವಾಗಿ ಪೂಜಾಕೈಂಕರ್ಯಗಳು, ಆರಾಧನೆಗಳು, ನಡೆಯುತ್ತಿವೆ. ಆಲಯದಲ್ಲಿ ಪ್ರತಿನಿತ್ಯವೂ ನಡೆಯುವ ವಿವಿಧ ಪೂಜೆಗಳ ಸಮಯದಲ್ಲಿ, ವಿಶೇಷ ಸಂದರ್ಭಗಳಲ್ಲಿ ನಡೆಯುವ ಹೋಮ-ಹವನಗಳಲ್ಲಿ

"ಸಪ್ತಾದ್ರೀಶಾಯ ವಿದ್ಮಹೇ ವೇಂಕಟೇಶಾಯ ಧೀಮಹಿ! ತನ್ನಃ ಶ್ರೀನಿವಾಸಃ ಪ್ರಚೋದಯಾತ್॥" ಎಂದು ಶ್ರೀನಿವಾಸ ಗಾಯತ್ರೀ ಮಂತ್ರದಿಂದ ಪೂಜಿಸುತ್ತಾರೆ. ಹಾಗೆಯೇ ವೈಖಾನಸ ಆಗಮಶಾಸ್ತ್ರದ ಪ್ರಕಾರ ಪ್ರತಿಯೊಬ್ಬ ದೇವತೆಯನ್ನು ಚತುರ್ನಾಮಗಳಿಂದ ಅರ್ಚಿಸುತ್ತೇವೆ. ಹಾಗೆಯೇ ಶ್ರೀಹರಿಯ ಚತರ್ನಾಮಗಳು ವೇಂಕಟೇಶ, ಭಕ್ತವತ್ಸಲ, ಸಪ್ತಾದ್ರೀಶ, ಶ್ರೀನಿವಾಸ ಎಂದು ಹೆಸರಿಸಲ್ಪಟ್ಟಿವೆ. ಅಂದರೆ ವೇದ ಪ್ರೋಕ್ತಗಳಾದ ಆಗಮಗಳಲ್ಲಿ ಸಪ್ತಾದ್ರೀಶನಾಗಿ ಸ್ತುತಿಸಲ್ಪಟ್ಟ ಶ್ರೀನಿವಾಸನು, ಭಕ್ತಜನರ ಮನಸ್ಸಿನಲ್ಲಿ "ಏಡುಕೊಂಡಲವಾಡ" ಎಂದು ಕರೆಯಲ್ಪಡುತ್ತಿದ್ದಾನೆ. ಇದನ್ನು ನೋಡಿದರೆ ಪ್ರಾಚೀನಕಾಲದಿಂದಲೂ, ತಿರುಮಲೆಯು ಏಳುಬೆಟ್ಟಗಳಿಂದ ಕೂಡಿದೆ ಎಂಬ ವಿಷಯವು ತಿಳಿದುಬರುತ್ತಿದೆ. ಮತ್ತು ಆ ಏಳು ಬೆಟ್ಟಗಳು ಯಾವುವು? ಎಂದು ತಿಳಿಯೋಣ!

**ಶ್ರೀಶೇಷಶೈಲ ಗರುಡಾಚಲ ವೇಂಕಟಾದ್ರಿ ನಾರಾಯಣಾದ್ರಿ ವೃಷಭಾದ್ರಿ ವೃಷಾದ್ರಿ ಮುಖ್ಯಾಂ,**
**ಆಖ್ಯಾಂ ತ್ವದೀಯ ವಸತೇರನಿಶಂ ವದಂತಿ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಮ್**[1]

ಎಂದು ಪ್ರತಿನಿತ್ಯವೂ ಶ್ರೀನಿವಾಸನನ್ನು ಸುಪ್ರಭಾತ ಸೇವೆಯಲ್ಲಿ ಸ್ತುತಿಸುತ್ತಾರೆ. ಈ ಶ್ಲೋಕದಲ್ಲಿ ಶ್ರೀಶೈಲ, ಶೇಷಶೈಲ, ಗರುಡಾದ್ರಿ, ವೇಂಕಟಾದ್ರಿ, ನಾರಾಯಣಾದ್ರಿ, ವೃಷಭಾದ್ರಿ, ವೃಷಾದ್ರಿ ಎಂಬ ಏಳು ಹೆಸರುಗಳಳ್ಳ ತಿರುಮಲೆಯ ಬೆಟ್ಟಗಳನ್ನು ಪ್ರಸ್ತಾವಿಸಲಾಗಿದೆ. ಇದರಲ್ಲಿ ಕೆಲವು ಹೆಸರುಗಳೂ ಮಾತ್ರ ಹೇಳಲಾಗಿದೆ. ಇನ್ನೂ ಅನೇಕ ಹೆಸರುಗಳು ಇವೆಯೆಂದು ಸುಪ್ರಭಾತ ರಚಿಸಿದ, 14ನೆಯ ಶತಮಾನಕ್ಕೆ ಸೇರಿದ ಶ್ರೀಮಾನ್ ಪ್ರತಿವಾದಿ ಭಯಂಕರ ಅಣ್ಣನ್ ಸ್ವಾಮಿಯವರು ತಿಳಿಸಿದ್ದಾರೆ. ಆದರೆ ಸಪ್ತಗಿರಿಗಳಲ್ಲಿ ಅಂಜನಾದ್ರಿಯ ಪ್ರಾಮುಖ್ಯತೆಯನ್ನು ಗುರುತಿಸಿದ ಅಣ್ಣನ್ ಸ್ವಾಮಿ ಅಂಜನಶೈಲ ಪ್ರಾಮುಖ್ಯತೆಯನ್ನು ಸಾರಿಹೇಳುವ ವಿಧದಲ್ಲಿ ಪ್ರತ್ಯೇಕವಾಗಿ "ಅಂಜನಶೈಲನಾಥಸ್ತೋತ್ರ"ದಲ್ಲಿ ಶ್ರೀಹರಿಯನ್ನು ಸ್ತುತಿಸಿದ್ದಾರೆ. **"ವಾದಿಭೀತಿಕರಾರ್ಯೇಣ ರಚಿತಾ ........"** ಎಂದು ಈ ಸೋತ್ರದ ಕೊನೆಯಲ್ಲಿ ತಮ್ಮ ಹೆಸರನ್ನು ಹೇಳಿದ್ದಾರೆ.

---

1. ಶ್ರೀವೇಂಕಟೇಶಕಾವ್ಯಕಲಾಪಃ-ಪುಟ 5

2. ಶ್ರೀವೇಂಕಟೇಶಕಾವ್ಯಕಲಾಪಃ-ಪುಟ 49.

ತಿರುಮಲೆಯಬಗೆಗೆ, ಶ್ರೀಶ್ರೀನಿವಾಸನ ಬಗೆಗೆ ತಿಳಿದುಕೊಳ್ಳಬೇಕೆಂದರೆ ನಮಗೆ ಇರುವ ಆಧಾರವೆಂದರೆ 18 ಪುರಾಣಗಳಲ್ಲಿ 12 ಪುರಾಣಗಳಿಂದ ಸಂಗ್ರಹಿಸಿದ ಶ್ರೀವೇಂಕಟಾಚಲಮಾಹಾತ್ಮ್ಯಂ ಮುಖ್ಯವಾದುದು. ಇದೊಂದು ಸಂಕಲನ ಗ್ರಂಥ. ಇದು ಮೊದಲಬಾರಿಗೆ ಸಾಮನ್ಯ ಶಕ 1491 ರಲ್ಲಿ ಶ್ರೀಶ್ರೀನಿವಾಸನ ಆಲಯದ ವೈಖಾನಸ ಶ್ರೀಮಾನ್ ಪಸಿಂಡಿ ವೇಂಕಟತ್ತುರೈವಾರ್ ಅವರ ಮೂಲಕ ತಾಳಪತ್ರಗಳಲ್ಲಿ ರಚಿಸಲ್ಪಟ್ಟು, ಆ ಕಾಲದಲ್ಲಿ ಪ್ರತಿನಿತ್ಯವೂ ಶ್ರೀನಿವಾಸನ ಪ್ರೀತಿಗಾಗಿ, ಶ್ರೀಹರಿಯ ಆಸ್ಥಾನ ಸೇವೆಯಲ್ಲಿ ಪಾರಾಯಣ ಮಾಡುತ್ತಿದ್ದರೆಂದು ಆಲಯದ ಶಾಸನಗಳು ತಿಳಿಸುತ್ತಿವೆ.

ಶ್ರೀವೇಂಕಟಾಚಲಮಾಹಾತ್ಮ್ಯಂ ಗ್ರಂಥದ ಪ್ರಕಾರ, ತಿರುಮಲೆಯ ಬೆಟ್ಟ ಸುಮಾರು 21 ಹೆಸರುಗಳಿಂದ ಕರೆಯಲ್ಪಡುತ್ತಿದ್ದೆಂದು ತಿಳಿದುಬರುತ್ತಿದೆ. ಭವಿಷ್ಯೋತ್ತರ ಪುರಾಣದಲ್ಲಿ ತಿಳಿಸಿರುವಂತೆ,

**ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಂ ಅಂಜನಾಚಲಂ,**
**ದ್ವಾಪರೇ ಶೇಷಶೈಲೇತಿ ಕಲೌ ಶ್ರೀವೇಂಕಟಾಚಲಮ್** [1]

ಎಂದು ವರ್ಣಿಸಿದ್ದರಿಂದ, ಈ ಏಳು ಬೆಟ್ಟಗಳು ಶೇಷಾದ್ರಿ, ವೇಂಕಟಾದ್ರಿ, ನಾರಾಯಣಾದ್ರಿ, ಗರುಡಾದ್ರಿ, ವೃಷಾದ್ರಿ, ವೃಷಭಾದ್ರಿ, ಅಂಜನಾದ್ರಿ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದರಲ್ಲಿ ಅಂಜನಾದ್ರಿ, ಅಂಜನಶೈಲ, ಅಂಜನಾಚಲ ಪರ್ವತವೆಂದು ಪ್ರಸಿದ್ಧಿಯಾದ ಪರ್ವತ , ತ್ರೇತಾಯುಗದಲ್ಲಿ ಶ್ರೀರಾಮಭಕ್ತನಾದ ಹನುಮಂತನ ಜನ್ಮಸ್ಥಳವೆಂದು ಸ್ತುತಿಸಲ್ಪಡುತ್ತಿದೆ.

ಆಂಜನೇಯನ ಬಗೆಗೆ ನೆನೆಸಿಕೊಳ್ಳುತ್ತಲೇ

**ಗೋಷ್ಪದೀಕೃತ ವಾರಾಶಿಂ ಮಶಕೀಕೃತರಾಕ್ಷಸಂ,**
**ರಾಮಾಯಣ ಮಹಾಮಾಲಾರತ್ನಂ ವಂದೇ ಅನಿಲಾತ್ಮಜಮ್.**

ಎಂಬ ಶ್ಲೋಕ ನೆನಪಾಗುತ್ತದೆ. ಮಹಾಸಮುದ್ರವನ್ನು ಆಕಳಿನ ಹೆಜ್ಜೆಗುರುತನ್ನು ದಾಟುವಷ್ಟು ಸುಲಭವಾಗಿ ದಾಟಿದವನು, ರಾಕ್ಷಸಯೋಧರನ್ನು ಹುಳುಗಳಂತೆ ಸುಲಭವಾಗಿ ಸಂಹರಿಸಿದವನೂ, ರಾಮಾಯಣದ ಕಥೆ ಎಂಬ ರತ್ನದ ಹಾರದಲ್ಲಿ ಮಣಿಯಂತೆ ಪ್ರಕಾಶಿಸುವವನೂ ಆದ ಹನುಮಂತನಿಗೆ ನಮಸ್ಕರಿಸುತ್ತಿದ್ದೇನೆ.

ಹನುಮಂತನು ರಾಮಾಯಣದ ಮಹಾಮಾಲೆಗೆ ಪ್ರಖರವಾದ ಮಣಿಯುಳ್ಳ ಪದಕದಂತೇ ಇರುವವನು. ಎಂದು ಈ ಶ್ಲೋಕವು ಹೇಳುತ್ತಿದೆ. ಮಾಲೆಯ ನಡುವೆ ರತ್ನದ ಮಣಿಯು ಪ್ರಕಾಶಿಸುತ್ತದೆಯಾದ್ದರಿಂದ ಉತ್ತರಕಾಂಡದೊಂದಿಗೆ ಸೇರಿ ರಾಮಾಯಣದಲ್ಲಿ ಏಳು ಕಾಂಡಗಳಿವೆ. ಹನುಮಂತನ ಪ್ರಸ್ತಾವನೆ ಮೊಟ್ಟಮೊದಲಬಾರಿಗೆ ಕಿಷ್ಕಿಂಧಕಾಂಡದಲ್ಲಿ ಬರುತ್ತದೆ. ಕಿಷ್ಕಿಂಧ ಕಾಂಡ ನಾಲ್ಕನೆಯ ಕಾಂಡ. ಇದಕ್ಕೂ ಮೊದಲು, ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ನಂತರ ಸುಂದರಕಾಂಡ, ಯುದ್ಧ ಕಾಂಡ, ಉತ್ತರಕಾಂಡಗಳಿವೆ. ಕಿಷ್ಕಿಂಧಕಾಂಡ ನಡುವೆ ಇರುವುದರಿಂದ ಹನುಮಂತ ರಾಮಾಯಣದ ಮಹಾಮಾಲೆಯಲ್ಲಿ ರತ್ನದಂತೆ ಇರುವವನು ಎಂದು ವರ್ಣಿಸುತ್ತಾರೆ.

ಈ ಶ್ಲೋಕವನ್ನು ಕೇಳಿದ ಕೂಡಲೆ ಒಂದು ಕಥೆ ನೆನಪಾಗುತ್ತದೆ. ಒಮ್ಮೆ ಹನುಮಂತನು ತನಗೆ ರಾಮಾವತಾರದಲ್ಲಿ ದೊರೆತ ರಾಮಾಯಣ ಮಹಾಮಲಾರತ್ನ ಎಂಬ ಬಿರುದುನಿಂದಾಗಿ ಉಬ್ಬಿಹೋಗಿ, ಸ್ವಲ್ಪ ಗರ್ವಕ್ಕೆ ಒಳಗಾದ. ಅದನ್ನು ಗಮನಿಸಿದ ಶ್ರೀರಾಮನು, ಹನುಮಂತನನ್ನು ಪರೀಕ್ಷಿಸಬೇಕೆಂದುಕೊಂಡ.

**ಅನೇಕ ರಾಮಾವತಾರೇಷು ತೇಷು ಮುದ್ರಿಕಾಃ**
**ಚತುರ್ಮುಖ ಪ್ರಾರ್ಥನಯಾ ಸಮರ್ಪಿತಾಃ** [2]

1. ಶ್ರೀವೇಂಕಟಾಚಲ ಮಾಹಾತ್ಮ್ಯಂ(ಭವಿಷ್ಯೋತ್ತರಪುರಾಣಾಂತರ್ಗತ-1-36) ದ್ವಿತೀಯಭಾಗ -ಪುಟ -263 ತಿ.ತಿ.ದೇ ಪ್ರಕಟಣೆ
2. ಶ್ರೀನಿವಾಸ ಭಕ್ತವಿಜಯ ರೊಂಪಿಚರ್ಲ ಪಾರ್ಥಸಾರಥಿ ಭಟ್ಟಾಚಾರ್ಯರು ತಿ.ತಿ.ದೇ 1957-1958 ಬುಲೆಟಿನ್ ಪುಟ 123

ಎಂದು ಹನುಮಂತನನ್ನು ಪರೀಕ್ಷಿಸಿದನೆಂದು ಈ ಮೇಲಿನ ಶ್ಲೋಕವು ಹೇಳುತ್ತಿದೆ. 1950ರ ದಶಕದಲ್ಲಿ. ಸುಮಾರು 40 ವರ್ಷಗಳ ಕಾಲ ತಿ.ತಿ.ದೇವಸ್ಥಾನದಲ್ಲಿ ಆಸ್ಥಾನ ಪಂಡಿತರಾಗಿ ಕೆಲಸಮಾಡಿದ ಶ್ರೀಮಾನ್ ರೊಂಪಿಚರ್ಲ ಪಾರ್ಥಸಾರಥಿ ಭಟ್ಟಾಚಾರ್ಯರು ಒಂದು ಸಂದರ್ಭದಲ್ಲಿ ಈ ಶ್ಲೋಕಕ್ಕೆ ಅರ್ಥವನ್ನು ವಿವರಿಸಿದರು.

ಒಂದು ದಿನ ರಾಮಚಂದ್ರನು ಒಂದು ಸರೋವರದ ತೀರದಲ್ಲಿ ವಿಹರಿಸುತ್ತಿರುವಾಗ, ಅವನ ಬೆರಳಿನಲ್ಲಿರುವ ರಾಜಮುದ್ರೆ ಉಂಗುರವು ಸರೋವರದಲ್ಲಿ ಬಿದ್ದುಹೋಗುತ್ತದೆ. ಕೂಡಲೇ ಹನುಮಂತನನ್ನು ಕರೆದು ನನ್ನ ಉಂಗರವು ಈ ಸರೋವರದಲ್ಲಿ ಬಿದ್ದುಹೋಗಿದೆ ಹುಡುಕಿಕೊಂಡು ಬಾ ಎಂದು ಹೇಳಿದ. ಆಗ ಹನುಮಂತನು ಕೂಡಲೇ ಆ ಸರೋವರದೊಳಗೆ ಧುಮುಕಿ ಚೆನ್ನಾಗಿ ಹುಡುಕಿ ರಾಮನ ಉಂಗರವನ್ನು ಹುಡುಕಲಾರಂಭಿಸಿದ. ಈ ಹುಡುಕಾಟದಲ್ಲಿ ಹನುಮಂತನಿಗೆ ಅನೇಕ ವಸ್ತುಗಳು ದೊರತವು, ಅವನ್ನೆಲ್ಲಾ ಒಗ್ಗೂಡಿಸಿ, ಹೊರಗೆ ತಂದು ತೀರದಲ್ಲಿನ ಭೂಮಿಯ ಮೇಲೆ ಸುರಿದ, ಅದರಲ್ಲಿ ಆಶ್ಚರ್ಯಕರವಾಗಿ ರಾಮನ ಉಂಗರವನ್ನು ಹೋಲುತ್ತಿರುವ ಅನೇಕ ಉಂಗುರಗಳು ಕಂಡುಬಂದುವು. ಹನುಮಂತನು ರಾಮನನ್ನು ಭಕ್ತಿಯಿಂದ ಸ್ಮರಿಸಿ, ಈ ಉಂಗುರಗಳಲ್ಲಿ ನಿಜವಾದುದು ಯಾವುದು ಸ್ವಾಮಿ ಎಂದು ಕೇಳಿದ. ಆಗ ರಾಮನು, "ಹನುಮಾ! ನಾನು ದಶರಥನ ಮನೆಯಲ್ಲಿ ಅಯೋಧ್ಯೆಯಲ್ಲಿ ಹುಟ್ಟಿರುವುದು ಇದೇ ಮೊದಲಬಾರಿಯಲ್ಲ. ಅನೇಕ ಬಾರಿ ಈ ಭೂಮಿಯಮೇಲೆ ರಾಮನಾಗಿ ಅವತರಿಸಿ, ಪ್ರತಿಬಾರಿ ಅವತರಿಸಿದಾಗಲೂ ನನ್ನ ಅವತಾರದ ಮುಖ್ಯ ಉದ್ದೇಶವನ್ನು ಈಡೇರಿಸಿದ್ದೇನೆ. ನಾನು ಅವತರಿಸಿದ ಪ್ರತಿಬಾರಿ ನಿನ್ನಂತಹಾ ಭಕ್ತರು ನನ್ನೊಂದಿಗಿದ್ದು, ಸೀತಾನ್ವೇಷಣೆ ಮಾಡುತ್ತಿದ್ದರು. ಆ ರೀತಿ ಹನುಮಂತನನ್ನು ಪರೀಕ್ಷಿಸುವುದಕ್ಕಾಗಿ ಹೇಳುತ್ತಾ, ಒಂದೊಂದು ಉಂಗರವನ್ನು ಈ ಸರೋವರದಲ್ಲಿ ಒಮ್ಮೊಮ್ಮೆ ಹಾಕುತಾ ಬಂದೆ. ನೀನು ತಂದ ಎಲ್ಲಾ ಉಂಗರಗಳಿಗಿಂತಲೂ ಉತ್ತಮವಾದುವು ಇನ್ನೂ ಈ ಸರೋವರದಲ್ಲಿ ಹೇರಳವಾಗಿವೆ. ನಾನು ಸರ್ವಜ್ಞನಾದ್ದರಿಂದ, ಎಲ್ಲಾ ಕಾಲಗಳಲ್ಲೂ, ಅವತಾರಗಳಲ್ಲೂ ನಡೆದಿರುವ ವೃತ್ತಾಂತಗಳು ನೆನಪಾಗುತ್ತಿವೆ" ಎಂದು ರಾಮನು ಹೇಳಿದಾಗ ಹನುಮಂತನು ತನ್ನ ಅಜ್ಞಾನವನ್ನು ಕ್ಷಮಿಸಬೇಕೆಂದು ಕೇಳಿಕೊಂಡ.

ಹೀಗೆ ಪರಮಾತ್ಮನ ಅವತಾರಗಳು, ಲೀಲೆಗಳು ಅನಂತವಾದುವು. ಈ ಕಥೆಯ ಪ್ರಕಾರ, ವೇಂಕಟಾಚಲ ಮಾಹಾತ್ಮ್ಯಂ ಗ್ರಂಥದಲ್ಲಿ ಹೇಳಿರುವಂತೆ ಕಳೆದುಹೋದ ತ್ರೇತಾಯುಗದಲ್ಲಿ ರಾಮಾವತಾರ ಹಾಗೆಯೇ ತಿರುಮಲೆಯಲ್ಲಿ ಹನುಮಂತನು ಅವತರಿಸಿದ್ದಾನೆ.

ಸಪ್ತಗಿರಿಗಳಲ್ಲಿ ಅಂಜನಾದ್ರಿ, ಅಂಜನಾಚಲ, ಎಂಬ ಹೆಸರುಗಳಿರುವ ಈ ಪರ್ವತಕ್ಕೆ ಒಂದು ವಿಶಿಷ್ಟತೆ ಇದೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ "ಶಿರಿಯ ತಿರುವಡಿ"ಎಂದು ಕರೆಯಲ್ಪಡುವ ಹನುಮಂತ, ಈ ಪರ್ವತದ ಮೇಲೇ ಜನ್ಮಿಸಿದನೆಂದು ಶ್ರೀವೇಂಕಟಾಚಲ ಮಾಹಾತ್ಮ್ಯಂ ಗ್ರಂಥದಲ್ಲಿ ತಿಳಿಸಿದ್ದಾರೆ. ವೇಂಕಟಾಚಲಮಾಹಾತ್ಮ್ಯಂ ಗ್ರಂಥದಲ್ಲಿ ಭವಿಷ್ಯೋತ್ತರ ಪುರಾಣ, ವರಾಹ, ಬ್ರಹ್ಮ, ಬ್ರಹ್ಮಾಂಡಪುರಾಣಗಳಲ್ಲಿ ಅಂಜನಾದ್ರಿಯ ಬಗೆಗೆ ವಿವರಿಸಿದ್ದಾರೆ. ಸೃಷ್ಟಿಯಲ್ಲಿ ಸಮಸ್ತ ಪ್ರಾಣಿಕೋಟಿಗೆ ಪ್ರಾಣವಾಯುವನ್ನು ಪ್ರಸಾದಿಸುವ ವಾಯುದೇವನಿಗೆ, ಈ ಅಂಜನಾದ್ರಿಗೆ ಅವಿನಾಭಾವ ಸಂಬಂಧ ಇದೆ. ಬ್ರಹ್ಮಪುರಾಣವು"ಅಂಜನಾದ್ರಿ"ಪದದ ಅರ್ಥವನ್ನು ಈ ರೀತಿ ವಿವರಿಸಿದೆ.

**ವಾಯೋರಾವೇಶನಾಚ್ಚೈವಂ ಪ್ರಾಹುರಂಜನಸಂಜ್ಞಕಮ್**[1]

ಮೇರುಪರ್ವತದ ಕುಮಾರನಾದ ವೇಂಕಟಾದ್ರಿಯಲ್ಲಿ ವಾಯುದೇವನ ಶಕ್ತಿಯು ಪ್ರವೇಶಿಸುವುದರಿಂದ, ವಾಯುದೇವನ ಪರ್ಯಾಯ ಶಬ್ದವಾದ "ಅಂಜನ" ಎನ್ನುವ ಹೆಸರಿನಿಂದಲೇ ಈ ಪರ್ವತ ಕರೆಯಲ್ಪಡುತ್ತಿದೆ. ಹಾಗೆಯೇ ಹನುಮಂತನ ತಾಯಿಯಾದ ಅಂಜನಾದೇವಿ, ತಿರುಮಲೆಯಲ್ಲಿನ ಅಂಜನಾದ್ರಿ ಪರ್ವತ ಪ್ರಾಂತದಲ್ಲಿ ಸಂತಾನಕ್ಕಾಗಿ ತಪಸ್ಸು ಮಾಡಿದಾಗ, ವಾಯುದೇವನು ಸಂತಾನ ಪ್ರಾಪ್ತಿಯನ್ನು ಉಂಟುಮಾಡುವ ರುದ್ರ ತೇಜಸ್ಸು ಹೊಂದಿರುವ ಒಂದು ಫಲವನ್ನು ನೀಡಿದನು. ಆದ್ದರಿಂದಲೇ ಇದಕ್ಕೆ ಅಂಜನಾದ್ರಿ ಎಂಬ ಹೆಸರು ಅನ್ವರ್ಥಕವಾಗಿದೆ.

1. ಶ್ರೀವೇಂಕಟಾಚಲಮಹಾತ್ಮ್ಯಂ (ಬ್ರಹ್ಮಪುರಾಣಾಂತರ್ಗತ–1–51) ಪ್ರಥಮಭಾಗ –ಪುಟ –135 ತಿ.ತಿ.ದೇ ಪ್ರಕಟಣೆ

ಬ್ರಹ್ಮಾಂಡಪುರಾಣದಲ್ಲಿ ಭಗವಂತನ ಕ್ರೀಡಾದ್ರಿಗೆ, ಅಂಜನಾದ್ರಿ ಎಂಬ ಹೆಸರು ಇರುವುದರ ಬಗೆಗೆ ವರ್ಣಿಸಿದ್ದಾರೆ.

**ಅಂಜನೇ! ತ್ವಂ ಹಿ ಶೇಷಾದ್ರೌ ತಪಸ್ತಪ್ತ್ವಾ ಸುದಾರುಣಮ್ ..........**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯಾ ವಿಚಾರಣಾ** [1]

ಅಂಜನಾ! ನೀನು ಶೇಷಾಚಲದಲ್ಲಿ ಘೋರವಾದ ತಪಸ್ಸು ಮಾಡಿ ಮೂರೂ ಲೋಕಗಳಿಗೆ ಕಲ್ಯಾಣವನ್ನುಂಟುಮಾಡುವ ಸದುದ್ದೇಶದಿಂದ ಸುಪುತ್ರನನ್ನು ಹಡೆದೆ ಆದ್ದರಿಂದ ಈ ಪರ್ವತ ನಿನ್ನ ಹೆಸರಿನಲ್ಲಿ "ಅಂಜನಾದ್ರಿ"ಎಂದು ಪ್ರಸಿದ್ಧಿ ಪಡೆಯುತ್ತದೆ. ನೀನು ಈ ವಿಷಯದಲ್ಲಿ ಆಲೋಚಿಸಬೇಕಾದ ಅಗತ್ಯವಿಲ್ಲವೆಂದು ಬ್ರಹ್ಮದೇವನು ಅಂಜನಾದೇವಿಗೆ ವರವನ್ನು ನೀಡಿದ.

ಅಂಜನಾಚಲ ಎಂಬ ಹೆಸರು ಬರುವುದಕ್ಕೆ ಅದ್ಭುತವಾದ ಕಥೆಯೊಂದನ್ನು ಬ್ರಹ್ಮಾಂಡಪುರಾಣದಲ್ಲಿ ತಿಳಿಸಲಾಗಿದೆ. ಈ ಕಥೆ ತ್ರೇತಾಯುಗದ ಕಾಲದ್ದು.

ಹಿಂದೆ ಕೇಸರಿ ಎಂಬ ವಾನರರಾಜ, ಅವನ ಪತ್ನಿಯಾದ ಅಂಜನೀದೇವಿಯೊಂದಿಗೆ ಕಿಷ್ಕಿಂಧಾ ನಗರವನ್ನು ಆಳುತ್ತಿದ್ದ. ಬಹಳ ವರ್ಷಗಳಾದರೂ ಅವರಿಗೆ ಸಂತಾನ ಪ್ರಾಪ್ತವಾಗಲಿಲ್ಲ. ಅಂಜನಾದೇವಿ ಇದಕ್ಕೆ ಏನಾದರೂ ಉಪಾಯವನ್ನು ತಿಳಿಸಬೇಕೆಂದು ಮತಂಗ ಮಹಾಮುನಿಯ ಬಳಿ ಸಂತಾನಫಲಕ್ಕಾಗಿ ಮಂತ್ರೋಪದೇಶವನ್ನು ಪ್ರಾರ್ಥಿಸಿದಳು. ಅವಳ ಭಕ್ತಿಗೆ ಮೆಚ್ಚಿದ ಮತಂಗ ಮುನಿ, "ಅಂಜನಾ! ಪಂಪಾನದಿಗೆ ಪೂರ್ವದಿಕ್ಕಿನಲ್ಲಿ 500 ಯೋಜನಗಳ ದೂರದಲ್ಲಿ ನಾರಸಿಂಹ ಕ್ಷೇತ್ರವೊಂದಿದೆ. ಅದಕ್ಕೆ ದಕ್ಷಿಣದಲ್ಲಿ ನಾರಾಯಣಾದ್ರಿ ಎಂಬ ಪರ್ವತವಿದೆ. ಆ ಪರ್ವತದ ಮೇಲೆ ಸ್ವಾಮಿಪುಷ್ಕರಿಣಿ ಇದೆ. ಆ ತೀರ್ಥಕ್ಕೆ ಉತ್ತರ ದಿಕ್ಕಿನತ್ತ ಸ್ವಲ್ಪ ದೂರದಲ್ಲಿ ಆಕಾಶ ಗಂಗೆಯೆಂಬ ತೀರ್ಥವಿದೆ. ಆ ಪುಣ್ಯತೀರ್ಥದಲ್ಲಿ ಸ್ನಾನಮಾಡಿ, ವಾಯುದೇವನನ್ನು ಕುರಿತು, 12 ವರ್ಷಗಳ ಕಾಲ ತಪಸ್ಸು ಮಾಡು. ವಾಯುದೇವನ ವರಬಲದಿಂದಾಗಿ ನಿನಗೆ ಮಹಾಗುಣಶಾಲಿ, ಮಹಾಬಲಶಾಲಿಯಾದ ಸುಪುತ್ರನು ಜನ್ಮಿಸುತ್ತಾನೆ. ಎಂದು ವಾಯುದೇವನ ಮಂತ್ರವಾದ **"ಮರುತಃ ಪರಮಾತ್ಮ....."** ಎಂಬ ಮಂತ್ರವನ್ನು ಉಪದೇಶಿಸಿ, ಆಶೀರ್ವದಿಸಿದ.

ಆಗ ಅಂಜನಾದೇವಿ ಕಿಷ್ಕಿಂಧೆಯಿಂದ ಹೊರಟು, ವೇಂಕಟಾಚಲದಲ್ಲಿನ ನಾರಾಯಣಗಿರಿಯನ್ನು ತಲುಪಿದಳು. ನಾರಾಯಣಗಿರಿಯಲ್ಲಿರುವ ಸ್ವಾಮಿಪುಷ್ಕರಿಣೀಯಲ್ಲಿ ಸ್ನಾನ ಮಾಡಿ, ವರಾಹ ವಿಷ್ಣುದೇವನನ್ನು ದರ್ಶಿಸಿ, ಅಕಾಶಗಂಗಾತೀರ್ಥವನ್ನು ತಲುಪಿದಳು. ಆಕಾಶಗಂಗಾ ತೀರ್ಥದಲ್ಲಿ ಭಕ್ತಿಯಿಂದ ಸ್ನಾನವನ್ನು ಆಚರಿಸಿ, ಕಠೋರ ದೀಕ್ಷಾಯುತಳಾಗಿ, ವಾಯುದೇವನನ್ನು ಕುರಿತು ತಪಸ್ಸನ್ನು ಆರಂಭಿಸಿದಳು. ಒಂದು ವರ್ಷದ ನಂತರ ವಾಯುದೇವನು ಅವಳಿಗೆ ದಿನವೂ ಒಂದು ಹಣ್ಣನ್ನು ತಂದು ನೀಡುತ್ತಿದ್ದ, ಹೀಗೆ ನಡೆಯುತ್ತಿರುವಾಗ ಒಂದು ದಿನ ವಾಯುದೇವನು ರುದ್ರ ತೇಜಸ್ಸು ತುಂಬಿದ ಹಣ್ಣನ್ನು ತಂದು ಅಂಜನಾದೇವಿಗೆ ನೀಡಿದ. ಹಸಿವೆಯಿಂದ ಬಳಲುತಿದ್ದ ಅಂಜನೇಯು ಎಂದಿನಂತೆ ಆ ಹಣ್ಣನ್ನು ಸ್ವೀಕರಿಸಿದಳು. ನಂತರ ಆಕೆ ಗರ್ಭವತಿಯಾದಳು. ಆಕೆಗೆ ಹತ್ತು ತಿಂಗಳು ತುಂಬಿದ ನಂತರ ಶುಭಲಗ್ನದಲ್ಲಿ ಒಬ್ಬ ಸುಪುತ್ರನಿಗೆ ಜನ್ಮವನ್ನು ನೀಡಿದಳು. ಅಂಜನಾದೇವಿ ವ್ರತ ಮಾಡಿ ಪುತ್ರನನ್ನು ಪಡೆದದ್ದರಿಂದ ಈ ಪರ್ವತಕ್ಕೆ "ಅಂಜನಾದ್ರಿ"ಎಂದು ಕರೆಯುತ್ತಾರೆ.

ಈ ಪುರಾಣ ಇತಿವೃತ್ತವು ನಮಗೆ ಅಂಜನಾದ್ರಿ ಪರ್ವತದ ಪ್ರಭಾವವನ್ನು, ಮಹಿಮೆಯನ್ನು ತಿಳಿಸುತ್ತಿದೆ.

ಮಂತ್ರೋಪಾಸನೆಗೆ ಕಾರ್ಯಸಿದ್ಧಿಗೆ ಮಾಡುವ ಉಪಾಸನೆ, ಸೇವೆಗಳು ಈ ಅಂಜನಾದ್ರಿ ಪರ್ವತದ ಮೇಲೆ ಫಲವನ್ನು ನೀಡುವುದರಲ್ಲಿ ಸಂಶಯವೇ ಇಲ್ಲ. ಇದೇ ಕಥೆಯನ್ನು ಶ್ರೀಹರಿಯ ಪರಮಭಕ್ತೆಯಾದ ಶ್ರೀ ತರಿಗೊಂಡ ವೆಂಗಮಾಂಬ ತನ್ನ ವೇಂಕಟಾಚಲಮಾಹಾತ್ಮೆ ಯೆಂಬ ಪದ್ಯಕಾವ್ಯದಲ್ಲಿ ವರ್ಣಿಸಿದ್ದಾಳೆ.

---

1. ಶ್ರೀವೇಂಕಟಾಚಲ ಮಾಹಾತ್ಮ್ಯಂ(ಬ್ರಹ್ಮಾಂಡಪುರಾಣಾಂತರ್ಗತ-5-64-65) ಪ್ರಥಮಭಾಗ -ಪುಟ -333 ತಿ.ತಿ.ದೇ ಪ್ರಕಟಣೆ

**ಅಂಜನಾದೇವಿ ತಪಮು ಮುಂದಟ ಚೇಸಿ...............**

**ನಾಗಿರಿಕಿ ನಂಜನಾದ್ರಿ ಪೇರಮರ ನಿಡಿರಿ** [1]

(ಮೊದಲು ಆ ಪರ್ವತದ ಮೇಲೆ ಅಂಜನಾದೇವಿ ತಪಸ್ಸು ಮಾಡಿದ್ದರಿಂದ ಆ ಗಿರಿಗೆ ಅಂಜನಾದ್ರಿ ಎಂಬ ಹೆಸರು ಬಂದಿದೆ)

ಸಪ್ತಗಿರಿಗಳಲ್ಲಿ ಅಂಜನಾದ್ರಿ ವೈಭವವನ್ನು, ವೈಶಿಷ್ಟ್ಯತೆಯನ್ನು ತಿಳಿಸುತ್ತಾ, ಬ್ರಹ್ಮಾಂಡಪುರಾಣವು ಅಂಜನಾದೇವಿಯ ಜನ್ಮ ವೃತ್ತಾಂತ , ರುದ್ರಾಂಶ ಸಂಭೂತನಾದ ಆಂಜನೇಯನ ಬಗೆಗೆ , ಹನುಮಂತನು ಸೂರ್ಯನನ್ನು ನೋಡಿ, ಹಣ್ಣು ಎಂದು ಭಾವಿಸಿ, ತಿನ್ನುವುದಕ್ಕೆ ಪ್ರಯತ್ನಿಸುವುದು, ಬ್ರಹ್ಮದೇವನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ್ದು, ಆಂಜನೇಯನಿಗೆ ದೇವತೆಗಳು ವರವನ್ನು ಕೊಡುವುದು, ಮುಂತಾದ ವಿಷಯಗಳನ್ನು ವರ್ಣಿಸಿದ್ದಾರೆ.

ತಿರುಮಲೆಯ ಶ್ರೀಹರಿಯನ್ನು ಅನೇಕ ಭಕ್ತಶಿಖಾಮಣಿಗಳು ತಮ್ಮ ತಪಸ್ಸು ಮೂಲಕ, ಧ್ಯಾನದ ಮೂಲಕ, ಅಮೃತಕ್ಕೆ ಸಮಾನವಾದ ತಮ್ಮ ಕೀರ್ತನೆಗಳ ಮೂಲಕ ಸ್ತುತಿಸಿ ಪ್ರಸನ್ನೀಕರಿಸಿಕೊಂಡು ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಇದರಲ್ಲಿ ವಾಗ್ಗೇಯಕಾರರದು ಪ್ರತ್ಯೇಕಸ್ಥಾನವಾಗಿದೆ. ಪದಕವಿತಾ ಪಿತಾಮಹನೆಂದು ಪ್ರಸಿದ್ಧಿ ಪಡೆದ ಶ್ರೀಮಾನ್ ತಾಳ್ಳಪಾಕ ಅನ್ನಮಾಚಾರ್ಯರು ಸಪ್ತಗಿರಿಗಳಲ್ಲಿ ಅಂಜನಾದ್ರಿಯ ವಿಶೇಷತೆಗಳ ಬಗೆಗೆ ತಮ್ಮ **"ಅಣುರೇಣು ಪರಿಪೂರ್ಣಮೈನ ರೂಪಮು ಅಣಿಮಾದಿ ಸಿರಿ ಅಂಜನಾದ್ರಿ ಮೀದಿ ರೂಪಮು"**ಎಂದು ಕೀರ್ತಿಸಿದ್ದಾರೆ.

ಹೀಗೆ ನೂರಾರು ಸಂಕೀರ್ತನೆಗಳಿಂದ ಅನ್ನಮಾಚಾರ್ಯರು, ಸಪ್ತಗಿರಿಯಲ್ಲಿರುವ ಅಂಜನಾದ್ರಿಯ ವಿಶಿಷ್ಟತೆಯನ್ನು ಸ್ಪಷ್ಟವಾಗಿ ಹಾಡಿಹೊಗಳಿದ್ದಾರೆ.

ಕರ್ನಾಟಕ ದಾಸಸಾಹಿತ್ಯದಲ್ಲಿ ಕೀರ್ತಿ ಪಡೆದ ಎಷ್ಟೋ ಜನ ಮಹಾನುಭಾವರುಗಳು ತಮ್ಮ ಹರಿದಾಸ ಸಾಹಿತ್ಯದಲ್ಲಿ ಶ್ರೀಶ್ರೀನಿವಾಸನನ್ನು ಅನೇಕ ರೀತಿಯಲ್ಲಿ ಹಾಡಿ ಧನ್ಯರಾಗಿದ್ದಾರೆ. ಪುರಂದರ ದಾಸರು, ಶ್ರೀಪಾದರಾಜರು, ವ್ಯಾಸತೀರ್ಥರು, ಕನಕದಾಸರು, ವಿಜಯದಾಸರು, ಗೋಪಾಲದಾಸರು , ವಾದಿರಾಜರು ಮುಂತಾದವರು ಪ್ರಸಿದ್ಧಿ ಪಡೆದಿದ್ದಾರೆ. ಇವರಲ್ಲಿ ಹದಿನಾರನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿನ ಬಾಗಲ್ ಕೋಟೇ ಪ್ರಾಂತ್ಯಕ್ಕೆ ಸೇರಿದ ಶ್ರೀಪ್ರಸನ್ನವೇಂಕಟದಾಸರು ಸಾಕ್ಷಾತ್ತು ಶ್ರೀಹರಿಯ ಸ್ವಹಸ್ತಗಳಿಂದ, ಅವರ ನಾಲಿಗೆಯ ಮೇಲೆ **"**ಪ್ರಸನ್ನ ವೇಂಕಟೇಶ**"** ಎಂದು ಬರೆಸಿಕೊಂಡ ಮಹಾನ್ ಭಕ್ತರು. ಇವರು ಶ್ರೀಹರಿಗೆ ಮಾಡುತ್ತಿದ್ದ ಮಂಗಳಾರತಿಯನ್ನು ಹಾಡುತ್ತಾ,

**"ಮಂಗಳ ಅಂಜನಗಿರಿ ಪತಿಗೆ ಮಂಗಳಂ"** [3] ಎಂದು ಏಳುಬೆಟ್ಟಗಳಲ್ಲಿ ಮುಖ್ಯವಾದ ಅಂಜನಾದ್ರಿಯನ್ನು ಹಾಡಿಹೊಗಳಿದ್ದಾರೆ.

ಅಂಜನಾದ್ರಿಯ ವೈಭವ ಮತ್ತು ಅದರ ಪ್ರಾಮುಖ್ಯತೆಯನ್ನು ವೇಂಕಟಾಚಲಮಾಹಾತ್ಮ್ಯಂ ಗ್ರಂಥದಲ್ಲಿ ವಿವರಿಸಿದ್ದರೂ ಶ್ರೀನಿವಾಸನಿಗೆ ಇನ್ನೂ ತೃಪ್ತಿಯಾಗಿಲ್ಲವೇನೋ ಎಂಬಂತೆ ಪ್ರತೀದಿನವೂ ಮೂರುಬಾರಿ ಅಂಜನಾದ್ರಿಯ ವೈಭವಕ್ಕೆ ಸಂಬಂಧಿಸಿದ ಘಟ್ಟಗಳನ್ನು ಕಿವಿಯಾರೆ ಶ್ರವಣ ಮಾಡುತ್ತಾನೆ ! ಇದು ಹೇಗೆಂದರೆ ...................

ಶ್ರೀನಿವಾಸನ ಆಲಯದಲ್ಲಿ ಶ್ರೀಶ್ರೀನಿವಾಸನಿಗೆ ಪ್ರತಿದಿನವೂ ಪ್ರಾತಃಕಾಲದ ಆರಾಧನೆಯ ಅಂಗವಾಗಿ ಸುಪ್ರಭಾತ, ತೋಮಾಲಸೇವೆ ಕೊಲುವು(ಆಸ್ಥಾನ) ಮುಗಿದನಂತರ ಬ್ರಹ್ಮಾಂಡಪುರಾಣಾಂತರ್ಗತವಾದ ಶ್ರೀವೇಂಕಟೇಶ್ವರ ಸಹಸ್ರನಾಮಾವಳಿಯಲ್ಲಿನ 1000 ನಾಮಗಳನ್ನು ಪಠಿಸುತ್ತಿರುವಾಗ, ತುಳಸೀದಳಗಳಿಂದ ಸ್ವಾಮಿಯ ದಿವ್ಯಚರಣಾರವಿಂದಗಳಿಗೆ ಸಹಸ್ರನಾಮಾರ್ಚನೆ ನಡೆಯುತ್ತದೆ. ಈ ಸಹಸ್ರನಾಮಾವಳಿಯಲ್ಲಿ ಆಂಜನೇಯನನ್ನು, ಅಂಜನಾದ್ರಿಯನ್ನು ಕೀರ್ತಿಸಿದ 8 ನಾಮಗಳು ಇವೆ.

---

1. ಶ್ರೀವೇಂಕಟಾಚಲಮಾಹಾತ್ಮ್ಯಂ– ಮಾತೃಶ್ರೀ ತರಿಗೊಂಡ ವೇಂಗಮಾಂಬ –1–115

2. ತಾಳ್ಳಪಾಕ ಪದಸಾಹಿತ್ಯಂ–ಸಂಪುಟ–2–432 3. ತಿ.ತಿ.ದೇ ಅಮೃತೋತ್ಸವ ಸಂಚಿಕೆ–2008,ಪುಟ–126

**240. ಓಂ ಹನೂಮತ್ಪರಿತೋಷಿತಾಯ ನಮಃ ॥**

ಹನುಮಂತನ ಸೇವೆಗಳಿಂದ ಸಂತೋಷಗೊಂಡ ರಾಮನಾಗಿ ಅವತರಿಸಿದ ವಿಷ್ಣುವಿನ ಅರ್ಚಾರೂಪವಾದ ವೇಂಕಟೇಶನಿಗೆ ನಮಸ್ಕಾರ.

**245. ಓಂ ಕಪಿಸಂವೃತಾಯ ನಮಃ ॥**

ಸುಗ್ರೀವ, ಹನುಮದಾದಿ ವಾನರರಿಂದ ಪರಿವೇಷ್ಟಿತನಾದ ರಾಮರೂಪನಾದ ವೇಂಕಟೇಶನಿಗೆ ನಮಸ್ಕಾರಗಳು.

**246. ಓಂ ವಾಯುಸೂನುಕೃತಸೇವಾಯ ನಮಃ ॥**

ವಾಯುಪುತ್ರನಾದ ಹನುಮಂತನಿಂದ ಭಕ್ತಿಶ್ರದ್ಧೆಗಳಿಂದ ಸೇವಿಸಲ್ಪಟ್ಟ ವೇಂಕಟೇಶನಿಗೆ ನಮಸ್ಕಾರ

**838 . ಓಂ ತೀರ್ಥಸ್ನಾತೃಸೌಖ್ಯಪ್ರದರ್ಶಕಾಯ ನಮಃ ॥**

ವೇಂಕಟಾದ್ರಿಯಮೇಲೆ ಇರುವ ಸ್ವಾಮಿಪುಷ್ಕರಿಣಿ, ಆಕಾಶಗಂಗೆ, ಪಾಪವಿನಾಶಿನಿ ಮೊದಲಾದ ತೀರ್ಥಗಳಲ್ಲಿ ಸ್ನಾನ ಮಾಡಿದ ಭಕ್ತರಿಗೆ ಸುಖವನ್ನು ಉಂಟುಮಾಡುವ ವೇಂಕಟೇಶನಿಗೆ ನಮಸ್ಕಾರ. (ಅಂಜನಾದೇವಿ ಆಕಾಶಗಂಗ ತೀರ್ಥದಲ್ಲಿ ತಪಸ್ಸು ಮಾಡಿ ಪುತ್ರನನ್ನು ಪಡೆದಳು)

**845. ಓಂ ಕಪಿಸ್ವಾಮಿಮನೋಂತಸ್ಥಿತವಿಗ್ರಹಾಯ ನಮಃ॥**

ಹನುಮಂತನ ಹೃದಯದಲ್ಲಿ ಭದ್ರವಾಗಿ ನೆಲಗೊಂಡಿರುವ ಶ್ರೀರಾಮನ ರೂಪದಲ್ಲಿರುವ ವಿಷ್ಣು ಅರ್ಚಾರೂಪನಾದ ವೇಂಕಟೇಶನಿಗೆ ನಮಸ್ಕಾರ .

**915. ಓಂ ಅಂಜನಾಕೃತಪೂಜಾವತೇ ನಮಃ- ಅಂಜನಾದೇವಿಯಿಂದ ಅರ್ಚಿಸಲ್ಪಟ್ಟ ಸ್ವಾಮಿಗೆ ನಮಸ್ಕಾರ**

**916. ಓಂ ಆಂಜನೇಯಕರಾರ್ಚಿತಾಯ ನಮಃ- ಶ್ರೀ ಆಂಜನೇಯನಿಂದ ಅರ್ಚಿಸಲ್ಪಟ್ಟ ಸ್ವಾಮಿಗೆ ನಮಸ್ಕಾರ**

**917. ಓಂ ಅಂಜನಾದ್ರಿನಿವಾಸಾಯ ನಮಃ- ಅಂಜನಾದ್ರಿಯಲ್ಲಿ ನಿವಸಿಸುವ ಸ್ವಾಮಿಗೆ ನಮಸ್ಕಾರ.**

ಬೆಳಿಗ್ಗೆ ಸಹಸ್ರನಾಮಾರ್ಚನೆಯಲ್ಲಿ ಅಂಜನಾದ್ರಿ ವೈಭವವನ್ನು ಕೇಳಿಸಿಕೊಂಡ ಶ್ರೀಶ್ರೀನಿವಾಸ, ಅಷ್ಟಕ್ಕೇ ಸುಮ್ಮನಾಗದೇ ಮಧ್ಯಾಹ್ನದ ಆರಾಧನೆಯ ಸಮಯದಲ್ಲಿ , ರಾತ್ರಿ ಆರಾಧನೆಯ ಅಂಗವಾಗಿ ನಡೆಯುವ ಶ್ರೀವೇಂಕಟೇಶ ಅಷ್ಟೋತ್ತರ ಶತನಾಮಾರ್ಚನೆಯಲ್ಲಿಯೂ ಅಂಜನಗಿರಿಯ ವೈಭವವನ್ನು ಸಾರುವ ನಾಮಗಳನ್ನು ಶ್ರವಣಮಾಡುತ್ತಾನೆ.

**5. ಓಂ ಸದಂಜನಗಿರೀಶಾಯ ಶ್ರೀವೇಂಕಟೇಶಾಯ ನಮಃ॥**

ಉತ್ತಮವಾದ ಅಂಜನಾದ್ರಿಗೆ ಒಡೆಯನಾದ ಶ್ರೀವೇಂಕಟೇಶನಿಗೆ ನಮಸ್ಕಾರ

1. ಶ್ರೀವೇಂಕಟಾಚಲಮಾಹಾತ್ಮ್ಯಂ ತಿ.ತಿ.ದೇ ಪ್ರಕಟಣೆ 2014, ಪುಟ 564-583
2. ಶ್ರೀವೇಂಕಟಾಚಲಮಾಹಾತ್ಮ್ಯಂ (ವರಾಹ ಪುರಾಣ ಪ್ರಥಮಭಾಗಾಂತರ್ಗತ -61-36,37) ಪ್ರಥಮಭಾಗ, ಪುಟ-125 ತಿ.ತಿ.ದೇ ಪ್ರಕಟಣೆ

**೮೨. ಓಂ ಅಂಜನಾಗೋತ್ರಪತಯೇ ಶ್ರೀವೇಂಕಟೇಶಾಯ ನಮಃ॥**

ಅಂಜನಾಚಲಕ್ಕೆ ಅಧಿಪತಿಯಾದ ಶ್ರೀವೇಂಕಟೇಶನಿಗೆ ನಮಸ್ಕಾರ

**೮೩. ಓಂ ಅಂಜನಾಸುತದಾತ್ರೇ ಶ್ರೀವೇಂಕಟೇಶಾಯ ನಮಃ ॥**

ಅಂಜನಾದೇವಿಗೆ ಪುತ್ರನನ್ನು ಅನುಗ್ರಹಿಸಿದ ಶ್ರೀವೇಂಕಟೇಶನಿಗೆ ನಮಸ್ಕಾರ

ಇಷ್ಟೇ ಅಲ್ಲದೇ ಪ್ರತಿಗುರುವಾರ, ಶ್ರೀನಿವಾಸನಿಗೆ ಮಧ್ಯಾಹ್ನದ ಆರಾಧನೆಯಲ್ಲಿ ತಿರುಪ್ಪಾವಡ ಸೇವೆ ನಡೆಯುತ್ತದೆ. ಈ ಸೇವೆಯಲ್ಲಿ ಪಠಿಸುವ ಶ್ರೀನಿವಾಸ ಗದ್ಯದಲ್ಲಿಯೂ ಅಂಜನಾದ್ರಿಯ ಬಗೆಗೆ,

**"ಅಂಜನಾಚಲಾದಿ ಶಿಖರಿಮಾಲಾಕುಲಸ್ಯ"** ಎಂದು ಸ್ತುತಿಸುತ್ತಾರೆ.

ಅಲ್ಲದೇ ಆಂಜನೇಯನೊಂದಿಗೆ ಶ್ರೀಹರಿಯ ಅನುಬಂಧವನ್ನು ಕೇವಲ ಪುರಾಣಗಳು, ಸ್ತೋತ್ರಗಳು, ಅರ್ಚನೆಗಳೇ ಅಲ್ಲದೇ ಮತ್ತೊಂದು ವಿಧದಲ್ಲಿ ಮುಂದುವರೆಯುವುದು ಆಂಜನೇಯನ ವೈಭವವನ್ನು ಸಾರುತ್ತದೆ. ಪ್ರತೀದಿನವೂ ಅರ್ಚಕರು ಆಲಯಪ್ರವೇಶವನ್ನು ಮಾಡುವಾಗ, ಮೂಲವಿಗ್ರಹವನ್ನು ಸ್ಪರ್ಶಿಸಿದ ನಂತರ , ಸ್ವಾಮಿ ವಿಶ್ರಾಂತಿ ತೆಗೆದುಕೊಳ್ಳುವ ವಿಧದಲ್ಲಿ ಚಾಮರವನ್ನು ಬೀಸುತ್ತಾರೆ. ಈ ಚಾಮರವನ್ನು ಆಲಯದ ಪರಿಭಾಷೆಯಲ್ಲಿ **"ಆಲವಟ್ಟ"** ಕೈಂಕರ್ಯ ಎಂದು ಕರೆಯುತ್ತಾರೆ. ಚಾಮರವನ್ನು ಸ್ವಾಮಿ ಬೀಸಿದರೆ ತಂಗಾಳಿ ಬೀಸುತ್ತದೆ. ಪವನನಂದನನ ತಂದೆಯಾದ ವಾಯುದೇವನಿಂದ ಪ್ರತಿನಿತ್ಯವೂ ಚಾಮರ ಸೇವೆಯಲ್ಲಿ **"ಚಾಮರವ್ಯಜನೇಷು ವಾಯುಮಾವಹಯಾಮಿ"** ಎಂದು ಆವಾಹನೆ ಮಾಡುತ್ತಾರೆ. ಅಷ್ಟೇ ಅಲ್ಲದೇ ಚಾಮರವನ್ನು ಬೀಸುವ ಪ್ರತೀಬಾರಿ ಹೇಳುವ ಮಂತ್ರ ಹೀಗಿದೆ,

**ಮರುತಃ ಪರಮಾತ್ಮಾ ಪರಮಾ ಗತಿಃ ಪರಂ ಬ್ರಹ್ಮ ಪರಂ ಯೋಗಮ್** [1]

ಎಂದು ವೈಖಾನಸ ಆಗಮಶಾಸ್ತ್ರವು ತಿಳಿಸುತ್ತಿದೆ.

ಈ ಆಲವಟ್ಟ ಸೇವೆಯನ್ನು ತೋಮಾಲ ಸೇವೆಮಾಡುವಾಗ, ಜೀಯಂಗಾರ್ ಸ್ವಾಮಿಯವರು ನಿರ್ವಹಿಸುತ್ತಾರೆ. ಹಾಗೆಯೇ ರಥೋತ್ಸವದಲ್ಲಿ ಸ್ನಪನ ತಿರುಮಂಜನದಲ್ಲಿ, ಶ್ರೀವೈಷ್ಣವಪರಿಚಾರಕರಿಂದ ಆಲವಟ್ಟ ಸೇವೆ ನಡೆಯುತ್ತದೆ.

ಶ್ರೀವೈಷ್ಣವ ಸಂಪ್ರದಾಯದಲ್ಲಿ ಶಿರಿಯ ತಿರುವಡಿ ಎಂಬ ಹೆಸರನ್ನು ಸಾರ್ಥಕ ಪಡಿಸುತ್ತಾ ಪವನ ನಂದನನಾದ ಆಂಜನೇಯನು, ತಿರುಮಲೆಯ ಶ್ರೀಹರಿಯ ಪ್ರತಿಯೊಂದು ಸೇವೆಯನ್ನು ಮಾಡುತ್ತಾ, ಸಪ್ತಗಿರಿಗಳಲ್ಲಿ ಅಂಜನಾದ್ರಿಯ ಪ್ರಾಮುಖ್ಯತೆ ಎಷ್ಟಿದೆ ಎಂದು ಶ್ರೀಹರಿಯೇ ತಿಳಿಸುತ್ತಿರುವಂತೆ ಮೇಲಿನ ಸೇವೆಗಳನ್ನು ನೋಡಿದರೆ ನಾವು ಅರ್ಥಮಾಡಿಕೊಳ್ಳಬಹುದು.

ಹೀಗೆ ಸಪ್ತಗಿರಿಗಳಲ್ಲಿ ಅಂಜನಾದ್ರಿಯ ವೈಭವ ಕುರಿತು ಅದರ ಪ್ರಾಮುಖ್ಯತೆಯ ಬಗೆಗೆ ಎಷ್ಟು ವಿವರಿಸಿದರೂ ಸಾಲದಾಗಿದೆ. ಜೀವನದಿಯಲ್ಲಿ ನೀರು ಯಾವ ರೀತಿ ಸದಾ ಪ್ರವಹಿಸುತ್ತಿರುತ್ತದೋ ಹಾಗೆಯೇ ಇನ್ನೂ ಇನ್ನೂ ಹೆಚ್ಚು ಕಂಡುಬರುತ್ತದೆ.

**"ಕಲೌ ಶ್ರೀವೇಂಕಟನಾಯಕಃ"** ಎಂದು ಪುರಾಣಗಳು ಏಕಕಂಠದಿಂದ ಘೋಷಿಸುತ್ತಿವೆ. ಕಲಿಯುಗದಲ್ಲಿ ಕೂಗಿದರೆ ಓಗೊಡುವ ಮಹಿಮೆಯಿರುವ ದೈವ ಶ್ರೀವೇಂಕಟೇಶ್ವರಸ್ವಾಮಿ. ಇಂದಿನವರೆಗೂ ನಾವು ಹೇಳಿದ ವಿಷಯಗಳು, ವೇದವ್ಯಾಸರು ರಚಿಸಿದ ಪುರಾಣಗಳ ಆಧಾರದ ಮೂಲಕ ತಿಳಿದುಕೊಂಡೆವು. ಇನ್ನು ವಸಿಷ್ಠರು, ನಾರದಮಹರ್ಷಿ ನಡುವೆ ನಡೆದ ಸಂಭಾಷಣೆಯನ್ನು ಬ್ರಹ್ಮಾಂಡಪುರಾಣದಿಂದ

1. ಶ್ರೀಮದ್ಭಗವದರ್ಚಾಪ್ರಕರಣಂ-ಶ್ರೀಮಾನ್ ನೃಸಿಂಹ ವಾಜಪೇಯಯಾಜಿ-ಪುಟ-128.

ಶ್ರೀವೇಂಕಟೇಶ ಸಹಸ್ರನಾಮಾವಳಿಯಲ್ಲಿ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಶ್ರೀವೇಂಕಟೇಶ ಅಷ್ಟೋತ್ತರ ಶತನಾಮಾವಳಿಯನ್ನು ಆದಿಶೇಷನು ಕಪಿಲಮಹರ್ಷಿಗೆ ಉಪದೇಶಿಸಿದರು. ಕಪಿಲಮಹರ್ಷಿ ಸೂತನಿಗೆ ಉಪದೇಶಿಸಿದರು. ಸೂತನು ಶೌನಕಾದಿಗಳಿಗೆ ಉಪದೇಶಿಸಿದರು. ಭಗವದ್ರಾಮಾನುಜರು ಶ್ರೀವೇಂಕಟಾಚಲಮಾಹಾತ್ಮ್ಯಂ ಗ್ರಂಥದಿಂದ ಪ್ರಮಾಣಗಳನ್ನು ಉಲ್ಲೇಖಿಸುತ್ತಾ, ಹಿಂದೆ ಶ್ರೀನಿವಾಸನು ಶಿವನೇ? ವಿಷ್ಣುವೇ? ಎಂಬ ಸಂಶಯವನ್ನು ವಿಷ್ಣುವೇ ಎಂದು ನಿರ್ಧಾರ ಮಾಡಿ ತೋರಿಸಿದರು. ಇಲ್ಲಿ ಹೆಸರಿಸಿದವರೆಲ್ಲರೂ ದೈವಾಂಶ ಸಂಭೂತರು. ಇಲ್ಲಿ ನಾವು ವಿವರಿಸಿದ ಮುಖ್ಯವಿಷಯವೆಂದರೆ "ಸಪ್ತಗಿರಿಗಳಲ್ಲಿ"ಅಂಜನಾದ್ರಿಯ ವೈಭವ." ಈ ಎಲ್ಲ ವಿಶೇಷಗಳು ಅವರುಗಳಿಂದ ಗ್ರಹಿಸಿದ್ದೇ ಆಗಿದೆ. ಆದ್ದರಿಂದ ಅಂಜನಾದ್ರಿಯ ವೈಭವದ ಬಗೆಗೆ ಇದಕ್ಕಿಂತಲೂ ಉತ್ತಮವಾದ ರುಜುವಾತಾಗಲೀ, ಪ್ರಮಾಣವಾಗಲೀ ಇನ್ನೇನೂ ಇರುವುದಕ್ಕೆ ಸಾಧ್ಯವೇ ಇಲ್ಲ!

**ಓಂ ನಮೋ ವೇಂಕಟೇಶಾಯ**

***~*~*~*~***

ಹನುಮಂತನು ಸೂರ್ಯನನ್ನು ನುಂಗುತ್ತಿರುವುದನ್ನು ದೂರದಿಂದ ವೀಕ್ಷಿಸುತ್ತಿರುವ ರಾಹು ಪಕ್ಕದಲ್ಲೇ ಇಂದ್ರನು ವಜ್ರಾಯುಧದಿಂದ ಹನುಮಂತನ ಮೇಲೆ ಪ್ರಹಾರ ಮಾಡುತ್ತಿರುವುದು



# 13. ಹನುಮಂತನ ಜನ್ಮಸ್ಥಳದ ವಿಷಯದಲ್ಲಿ ಕೇಳಿಬರುತ್ತಿರುವ ವಿಭಿನ್ನವಾದ ನುಡಿಗಳು

ಭಾರತದೇಶದಲ್ಲಿ ಅಂಜನೇಯೋಪಾಸನೆಗೆ ಪ್ರಾಮುಖ್ಯತೆ ಅಧಿಕವಾಗಿದೆ. ಆಂಜನೇಯನ ದೇವಾಲಯವಿಲ್ಲದ ಹಳ್ಳಿಯಾಗಲೀ, ಪಟ್ಟಣವಾಗಲೀ ನಮ್ಮ ದೇಶದಲ್ಲಿ ಇಲ್ಲವೆಂದರೆ ಅತಿಶಯೋಕ್ತಿಯಲ್ಲ.

ಹನುಮಂತನ ಜನ್ಮಸ್ಥಳದ ವಿಷಯದಲ್ಲಿ ಭಾರತದೇಶದಲ್ಲಿನ ಬೇರೇ ಬೇರೇ ಪ್ರಾಂತಗಳಲ್ಲಿ ವಿವಿಧರೀತಿಯಲ್ಲಿ ವಿವರಗಳು ಕೇಳಿಬರುತ್ತಿವೆ. ಅದರಲ್ಲಿ ಈ ಕೆಳಕಂಡ ವಿಚಾರಗಳು ಮುಖ್ಯವಾದುವು

### 1. ಗುಜರಾತ್‌ನಲ್ಲಿನ ನವ್ ಸಾರಿ ಜಿಲ್ಲೆ-

ಡಾಂಗ್ ಪ್ರಾಂತದಲ್ಲಿರುವ ಅಂಜನೀ ಪರ್ವತ, ಅಂಜನೀಕುಂಡ್ ಮತ್ತು ಅಂಜನೀ ಗುಹ ಎಂದು ಮೂರು ಪ್ರಾಂತಗಳನ್ನು ಸ್ಥಾನಿಕರು ತೋರುತ್ತಾರೆ. ಈ ಪ್ರದೇಶಕ್ಕೆ ಅಂಜನೀ ಗ್ರಾಮ ಎಂದೇ ಕರೆಯುತ್ತಾರೆ. ಇಲ್ಲಿಗೆ ಹತ್ತಿರದಲ್ಲೇ ಶಬರಿ ಧಾಮ್, ಪಂಪಾ ಸರೋವರಗಳೂ ಇವೆ. ಈ ಡಾಂಗ್ ನಲ್ಲಿನ ಸ್ಥಾನಿಕರು ದಂಡಕಾರಣ್ಯ ಎಂದು ವ್ಯವಹರಿಸುತ್ತಾರೆ. ಇಲ್ಲಿ ಪರಿಶೀಲಿಸಿದ ವಿಷಯಗಳು ಅನೇಕವು ಇವೆ.

(ಅ) ಈ ಪ್ರಾಂತವು ಅಯೋಧ್ಯೆಗೆ ಪಶ್ಚಿಮದಿಕ್ಕಿನಲ್ಲಿ 1325 ಕಿ.ಮೀ ಅಥವಾ 822 ಮೈಲಿಗಳಷ್ಟು ದೂರದಲ್ಲಿದೆ, $20.769^0$ ಉತ್ತರ–73–$135^0$ ಪೂರ್ವ ಅಕ್ಷಾಂಶ, ರೇಖಾಂಶಗಳ ನಡುವೆ ಇದೆ. ರಾಮಾಯಣಾನುಸಾರವಾಗಿ ಅಯೋಧ್ಯೆಯಿಂದ ರಾಮನ ಮಾರ್ಗ ಪೂರ್ವ ದಿಕ್ಕಿಗೆ ಆರಂಭವಾಯಿತೆಂದು ಅದು ನಂತರ ರಾಮೇಶ್ವರದ ವರೆಗೂ ಮುಂದುವರೆಯಿತೆಂದು ಹೇಳುತ್ತಾರೆ. ರಾಮಮಾರ್ಗವೆಲ್ಲಾ 78 ಡಿಗ್ರಿಗಳು, –84 ಡಿಗ್ರಿಗಳ ರೇಖಾಂಶಗಳ ನಡುವೆ ಹಾಗೆಯೇ 27ಡಿಗ್ರಿಗಳು– 8ಡೀಗ್ರಿಗಳು ಅಕ್ಷಾಂಶಗಳ ನಡುವೆ ನಡೆದಿದೆ ಎಂದು ತಿಳಿದುಬರುತ್ತಿದೆ. ಆದ್ದರಿಂದ ಇದು ರಾಮಾಯಣಕ್ಕೆ ಸರಿಹೊಂದುವುದಿಲ್ಲ.

(ಆ) ಪುರಾಣಗಳಲ್ಲಿ ಆಗಲೀ ರಾಮಾಯಣದಲ್ಲಾಗಲೀ ಎಲ್ಲೂ ಈ ಗುಜರಾತ್ (ಪುರಾಣಗಳಲ್ಲಿ ಪ್ರಭಾಸ ಕ್ಷೇತ್ರವೆಂಬ ಹೆಸರಿತ್ತು). ಈ ಪ್ರಾಂತದಲ್ಲಿ ಶಬರಿ ಆಶ್ರಮ, ಪಂಪಾಸರಸ್ಸು ಇರುವಂತಾಗಲೀ, ಅಂಜನಾದ್ರಿ ಇರುವಂತಾಗಲೀ ಎಲ್ಲೂ ವಿವರಣೇ ಇಲ್ಲ. ಇದು ಕೇವಲ ಜನರ ಮಾತು ಅಷ್ಟೇ!

(ಇ) ಕರ್ನಾಟಕದ ಕಿಷ್ಕಿಂಧ ಹತ್ತಿರ ಪಂಪಾಸರಸ್ಸು ಇರುವುದೆಂಬ ವಿಷಯ ಲೋಕಪ್ರಸಿದ್ಧಿಯಾಗಿದೆ. ಹಾಗಾದರೆ ಗುಜರಾತ್ ನವ್‌ಸಾರಿ ಬಳಿಯೂ ಪಂಪಾ ಸರೋವರ ಇದ್ದರೆ ಗುಜರಾತ್‌ನಲ್ಲಿ ಕಿಷ್ಕಿಂಧೆ ಎಲ್ಲಿದೆ? ನವ್ ಸಾರಿ ಪಶ್ಚಿಮ ಸಮುದ್ರತೀರಕ್ಕೆ ಬಹಳ ಹತ್ತಿರದಲ್ಲಿದೆ. ಆದರೆ ಅಲ್ಲಿಂದ ರಾಮೇಶ್ವರಕ್ಕೆ ಬರಬೇಕೆಂದರೆ ಬಹಳ ಪ್ರಯಾಸದಿಂದ ಕೂಡಿದ ಪ್ರಯಾಣವಾಗುತ್ತದೆ. ಆದ್ದರಿಂದ ಈ ಪ್ರದೇಶವೂ ಹನುಮಂತನ ಜನ್ಮಭೂಮಿ ಎಂದು ಹೇಳುವುದಕ್ಕೆ ಸರಿಯಾದ ಸಾಕ್ಷ್ಯಾಧಾರಗಳು ಇಲ್ಲ. ಕರ್ನಾಟಕದಲ್ಲಿನ ಕಿಷ್ಕಿಂಧಯಿಂದ 666 ಕಿ.ಮೀ ದೂರದಲ್ಲಿ ಈ ಪ್ರದೇಶವಿದೆ.

### 2. ಎರಡನೆಯ ಪ್ರದೇಶ: ಗುಮ್ಲಾ

ಇದು ಜಾರ್ಖಂಡ್ ನಿಂದ 21 ಕಿ.ಮೀ ದೂರದಲ್ಲಿದೆ, ಇಲ್ಲಿ ಅಂಜನಾಗ್ರಾಮ, ಅಂಜನಾಧಾಮ್ ಇವೆ. ಇದು ಅಯೋಧ್ಯೆಗೆ ದಕ್ಷಿಣ –ಪೂರ್ವದಿಕ್ಕಿಗೆ 652 ಕಿ.ಮೀ ದೂರದಲ್ಲಿದೆ. 23.240 ಡಿಗ್ರಿಗಳ ಉತ್ತರಕ್ಕಿದೆ. ಗುಮ್ಲಾದಿಂದ ಕಿಷ್ಕಿಂಧಗೆ 1240 ಕಿ.ಮೀ ದೂರದಲ್ಲಿದೆ. ಈ ಪ್ರಾಂತದಲ್ಲಿ ಎಲ್ಲೂ ಶಬರಿಯ ನಿವಾಸವಾಗಲೀ, ಪಂಪಾ ಸರಸ್ಸು ಇಲ್ಲ. ರಾಮಾಯಣದಲ್ಲಾಗಲೀ, ಪುರಾಣಗಳಲ್ಲಾಗಲೀ ಇದರ ಪ್ರಸ್ತಾವನೆ ಇಲ್ಲ. ಆದ್ದರಿಂದ ಹನುಮನ ಜನ್ಮಸ್ಥಳವೆಂದು ಕೇವಲ ಸ್ಥಳೀಯರ ಅಭಿಪ್ರಾಯವಾಗಿದೆ.

**3. ಮೂರನೆಯ ಪ್ರದೇಶ- ಕೈಥಾಲ್**

ಇದು ಹರಿಯಾಣ ರಾಜ್ಯದಲ್ಲಿದೆ. ಅಯೋಧ್ಯೆಯಿಂದ 858 ಕಿ.ಮೀ ದೂರದಲ್ಲಿ–ಉತ್ತರ ವಾಯುವ್ಯ ದಿಕ್ಕಿನಲ್ಲಿ 29.8015 ಡಿಗ್ರಿಗಳ ಅಕ್ಷಾಂಶ ರೇಖಾಂಶಗಳ ನಡುವೆ ಇದೆ, ಕಿಷ್ಕಿಂದೆಯಿಂದ 1626 ಕಿ.ಮೀ ದೂರದಲ್ಲಿದೆ. ಇದಕ್ಕೆ ಕಪಿಸ್ಥಲ್ ಎಂದು ಹೆಸರಿದೆ. ಇದನ್ನು ಹನುಮಂತನು ಕಪಿ ಆದ್ದರಿಂದ ಅವನು ಹುಟ್ಟಿದ ಪ್ರದೇಶವೆಂದು ಸ್ಥಳೀಯರ ಅಭಿಪ್ರಾಯ. ಇಲ್ಲಿ ಅಂಜನೀ ತಿಲಾ ಎಂಬ ಪ್ರದೇಶದಲ್ಲಿ ಅಂಜನಾದೇವಿಯ ಮಂದಿರವೂ ಇದೆ. ಆದರೆ ಇದು ಕೂಡಾ ಅಲ್ಲಿಯ ಜನರ ವಾಡಿಕೆಯಲ್ಲಿ ಮಾತ್ರ ಹನುಮ ಜನ್ಮಸ್ಥಳವೇ ಹೊರತು ಪುರಾಣೇತಿಹಾಸಗಳ ಪುರಾವೆ ಇಲ್ಲ.

**4. ಅಂಜನೇರಿ**-

ಇದು ಮಹಾರಷ್ಟ್ರದಲ್ಲಿನ ನಾಸಿಕ್‌ನ ಹತ್ತಿರದಲ್ಲಿದೆ– ಇದು ನಾಸಿಕ್‌ನಿಂದ ತ್ರ್ಯಂಬಕ್ ಮಾರ್ಗದಲ್ಲಿ ತ್ರ್ಯಂಬಕೇಶ್ವರಕ್ಕೆ 7 ಕಿ.ಮೀ ದೂರದಲ್ಲಿದೆ. ಅಯೋಧ್ಯೆಯಿಂದ 1379 ಕಿ.ಮೀ ದೂರದಲ್ಲಿ ಪಶ್ಚಿಮ ಸಮುದ್ರ ತೀರದಲ್ಲಿ 19.55 ಉತ್ತರ–73.34 ಡಿಗ್ರಿಗಳ ಪೂರ್ವದ ಮಧ್ಯದಲ್ಲಿದೆ. ಇದು ಕರ್ನಾಟಕದಲ್ಲಿನ ಕಿಷ್ಕಿಂಧಗೆ 616 ಕಿ.ಮೀ ದೂರದಲ್ಲಿದೆ, ಇದು ಅಂಜನಾದೇವಿಯ ನಿವಾಸ ಎಂದು, ಆಂಜನೇಯ ಜನ್ಮಸ್ಥಳವೆಂದು ಸ್ಥಾನಿಕ ಪ್ರಜೆಗಳ ಅಭಿಪ್ರಾಯ ಆದರೆ ಇದಕ್ಕೆ ಎಂತಹಾ ಪುರಾವೆಗಳೂ ಇಲ್ಲ.

ರಾಮಾಯಣ, ಪುರಾಣಾಧಾರಗಳನ್ನು ಆಧಾರವಾಗಿರಿಸಿಕೊಂಡು ಶ್ರೀರಾಮನಿಗೆ, ಹನುಮ, ಸುಗ್ರೀವಾದಿಗಳಿಗೆ ಪರಿಚಯ, ಹನುಮಂತನ ಜನ್ಮಸ್ಥಳದ ಪ್ರಸ್ತಾವನೆ, ಕಿಷ್ಕಿಂಧೆಯ ವಿಶೇಷತೆಗಳು, ಅಂಜನಾದ್ರಿಯ ಇರುವಿಕೆ ಎಲ್ಲವೂ ದಕ್ಷಿಣ ಭಾರತದಲ್ಲೇ ಹೊರತು ಉತ್ತರಭಾರತದಲ್ಲಿ ಇಲ್ಲವಾದ್ದರಿಂದ ನವ್‌ಸಾರಿ, ಗುಮ್ಲಾ, ಕೈಥಾಲ್ ಅಂಜನೇರಿ ಮುಂತಾದ ಸ್ಥಳಗಳು ಲೆಕ್ಕಕ್ಕೆ ಬರುವುದಿಲ್ಲ.

**5. ಕರ್ನಾಟಕದಲ್ಲಿನ ಹಂಪೆಯ ಬಳಿ ಇರುವ ಕಿಷ್ಕಿಂದೆ**

ಇದು ಕರ್ನಾಟಕದಲ್ಲಿ 15.334022ಡಿಗ್ರಿ ಉತ್ತರ–76.468536ಡಿಗ್ರಿಗಳ ಅಕ್ಷಾಂಶ ರೇಖಾಂಶಗಳ ನಡುವೆ ಇದೆ, ಈ ಕಿಷ್ಕಿಂಧೆ ರಾಮಾಯಣದಲ್ಲಿ ಬರುವ ಕಿಷ್ಕಿಂಧೆಯೇ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಹನುಮಂತನ ಜನ್ಮಸ್ಥಾನ ಎನ್ನುವುದಕ್ಕೆ ಬೇಕಾಗುವ ಪ್ರಮಾಣಗಳು ಎಲ್ಲೂ ಸಿಕ್ಕಿಲ್ಲ. ಇದು ಅಯೋಧ್ಯೆಯಿಂದ ಸಾಕ್ಷಾತ್ತು ದಕ್ಷಿಣ ದಿಕ್ಕಿನತ್ತ 1699.4 ಕಿ.ಮೀ ದೂರದಲ್ಲಿ ಇದೆ, ಇದು ಕೆಲವು ಕಾಲ ವಾಲಿಯ ಅಧೀನದಲ್ಲಿ, ಮತ್ತೆ ಕೆಲವು ಕಾಲ ಸುಗ್ರೀವನ ಅಧೀನದಲ್ಲಿತ್ತು. ಪುನಃ ವಾಲಿಯ ಅಧೀನಕ್ಕೆ ಹೋಯಿತು., ನಂತರ ವಾಲಿಯ ವಧೆಯ ನಂತರ ಸುಗ್ರೀವನ ಅಧೀನಕ್ಕೆ ಬಂತು. ಆದ್ದರಿಂದ ಈ ಕ್ರಮದಲ್ಲಿ ನೋಡಿದಾಗ ಹನುಮಂತನು ಸುಗ್ರೀವನಿಗೆ ಸಚಿವನಾದ ಕಿಷ್ಕಿಂಧೆಯು ಆತನ ಕಾರ್ಯಕ್ಷೇತ್ರವಾಗಿತ್ತು ಎಂದು ಹೇಳಬಹುದು. ರಾಮಾಯಣಾದಿ ಗ್ರಂಥಗಳು ಆ ವಿಷಯನ್ನೇ ಸಮರ್ಥಿಸುತ್ತಿವೆ. ಆದರೆ ಜನ್ಮಸ್ಥಾನವೆಂದು ಹೇಳುತ್ತಲೇ ಇಲ್ಲ. ರಾಮಾಯಣದಲ್ಲಿ ನೋಡಿದರೆ ಕಿಷ್ಕಿಂಧೆ, ಋಷ್ಯಮೂಕ ಪರ್ವತ, ಅಂಜನಾದ್ರಿ ಬೇರೆ ಬೇರೆ ಎಂದು ತಿಳಿಸುತ್ತಿವೆ. ಹಿಂದಿನ ಲೇಖನದಲ್ಲಿ ವಿಶದವಾಗಿ ವಿವರಿಸಲಾಗಿದೆ.

**6. ತಿರುಮಲೆ ಅಂಜನಾದ್ರಿ**-

ಚಿತ್ತೂರು ಜಿಲ್ಲೆಯಲ್ಲಿನ ಶೇಷಾಚಲದಲ್ಲಿ ಪ್ರಧಾನವಾದ ಸಪ್ತಗಿರಿಗಳ ಸಮೂಹವೇ ತಿರುಮಲೆ. ಇದು 13.687ಡಿಗ್ರಿ ಉತ್ತರ–79.3509 ಡಿಗ್ರಿ ಪೂರ್ವಕ್ಕೆ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ಶ್ರೀನಿವಾಸನ ಕಲಿಯುಗ ವೈಕುಂಠವೆಂದು ಎಲ್ಲರಿಂದಲೂ ಪೂಜೆಗೊಳ್ಳುತ್ತಿದೆ. ಈ ತಿರುಮಲೆಯಲ್ಲಿನ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಾನವೆಂದು ಹೇಳುವುದಕ್ಕೆ ಬೇಕಾದಷ್ಟು ಪ್ರಮಾಣಗಳು, ರುಜುವಾತುಗಳು ದೊರೆತಿವೆ.

(ಅ). ಇಂದಿಗೂ ಸಾವಿರ ವರ್ಷಗಳ ಹಿಂದೆ ಶ್ರೀಆದಿಶೇಷನ ಅಪರಾವತಾರಮೂರ್ತಿಯೆಂದೆ ಕೀರ್ತಿಸಲ್ಪಡುತ್ತಿರುವ ಶ್ರೀರಾಮಾನುಜಾಚಾರ್ಯರು ರುಜುವಾತುಪಡಿಸಿದ ವಿವಿಧ ಪುರಾಣಗಳ ಸಂಕಲನವಾದ **"ಶ್ರೀವೇಂಕಟಾಚಲ ಮಾಹಾತ್ಮ್ಯಂ"** ಎಂಬ ಗ್ರಂಥವು (ಬ್ರಹ್ಮ, ಬ್ರಹ್ಮಾಂಡ, ಪದ್ಮ, ವರಾಹ, ಗರುಡ, ವಾಮನ. ಮಾರ್ಕಂಡೇಯ, ಭವಿಷ್ಯೋತ್ತರ, ಆದಿತ್ಯಾದಿ ಪುರಾಣಗಳ ಸಂಕಲನ).

(ಆ). ಪ್ರತ್ಯೇಕವಾಗಿ ಸ್ಕಂದಪುರಾಣ

(ಇ). ಅನೇಕ ವೈಖಾನಸ ಆಗಮ ಗ್ರಂಥಗಳಲ್ಲಿ ಶ್ರೀಭಗವದರ್ಚನಾಕ್ರಮದಲ್ಲಿ ಅಷ್ಟೋತ್ತರ, ಸಹಸ್ರನಾಮಾರ್ಚನಾದಿಗಳಲ್ಲಿ,

(ಈ). ಶ್ರೀವೇದಾಂತದೇಶಿಕರು, ಶ್ರೀವೇಂಕಟಧ್ವರಿನ್ ನಂತಹಾ ಕವಿಪುಂಗವರ ಕಾವ್ಯ, ಸ್ತೋತ್ರ ಗ್ರಂಥಗಳಲ್ಲಿ

(ಉ). ವಿವಿಧ ರಾಜರ ಕಾಲಕ್ಕೆ ಸೇರಿದ ವಿವಿಧ ಶಿಲಾಶಾಸನಗಳಲ್ಲಿ

(ಊ). ಅನ್ನಮಯ್ಯ, ಪುರಂದರದಾಸರು, ತರಿಗೊಂಡ ವೆಂಗಮಾಂಬರ ಭಕ್ತಿ ಕೀರ್ತನೆಗಳಲ್ಲಿ

(ಋ). ತಿರುಮಲೆಯ ಪರಿಸರ ಪ್ರಾಂತ್ಯಗಳಲ್ಲಿರುವ ಆಲಯಗಳ ಸ್ಥಳ ಪುರಾಣಗಳಲ್ಲಿ

(ೠ). ಆಳ್ವಾರ್ ದಿವ್ಯಪ್ರಬಂಧಾದಿ ವೈಷ್ಣವ ಭಕ್ತಿಸಾಹಿತ್ಯದಲ್ಲಿ

ಇತರ ಅನೇಕ ಆಧಾರಗಳ ಸಹಾಯದಿಂದ ತಿರುಮಲ ಬೆಟ್ಟಗಳಿಗೆ ಇರುವಂತಹಾ ಅನೇಕ ಹೆಸರುಗಳಲ್ಲಿ ಒಂದಾದ ಅಂಜನಾದ್ರಿ ಶ್ರೀ ಹನುಮಂತನ ಜನ್ಮಸ್ಥಳವೆಂದು ನಿರೂಪಿಸುತ್ತಿವೆ. ಆ ಪ್ರಯತ್ನದಲ್ಲಿನ ಒಂದು ಭಾಗವೇ ಈ ಅಂತರರಾಷ್ಟ್ರೀಯ ಅಂತರ್ಜಾಲ ಸಂಗೋಷ್ಠಿ (ಇಂಟರ್ನಾಷನಲ್ ವೆಬಿನಾರ್) ವ್ಯಾಸ ಸಮುದಾಯ ಪುಸ್ತಕ ನಿರ್ಮಾಣ ನಡೆದಿದೆ. ಈ ಪುಸ್ತಕದ ಕ್ರಮ ಈ ರೀತಿ ರಚಿಸಲಾಗಿದೆ,

*~*~*~*~*

ಇಂದ್ರನಿಂದ ಗಾಯಗೊಂಡ ಹನುಮಂತನನ್ನು ವಾಯುದೇವನು ಎತ್ತಿಕೊಂಡಿರುವುದು



# 14. ಆಂಜನೇಯನ ಚರಿತ್ರೆಯಲ್ಲಿನ ಕೆಲವು ಮುಖ್ಯ ಕ್ಷೇತ್ರಗಳು

ಆಚಾರ್ಯ ರಾಣಿ ಸದಾಶಿವಮೂರ್ತಿ

**ಅತುಲಿತ ಬಲಧಾಮಂ ಸ್ವರ್ಣಶೈಲಾಭದೇಹಂ**
**ದನುಜವನ ಕೃಶಾನುಂ ಜ್ಞಾನಿನಾಮಗ್ರಗಣ್ಯಮ್**
**ಸಕಲಗುಣನಿಧಾನಂ ವಾನರಾಣಾಮಧೀಶಂ**
**ರಘುಪತಿವರ ದೂತಂ ವಾತಜಾತಂ ನಮಾಮಿ**

ಬಂಗಾರದ ಪರ್ವತವಾದ ಮೇರುಪರ್ವತದಂತಹಾ ಮೈಬಣ್ಣವನ್ನು ಹೊಂದಿದವನು, ಸಾಟಿಯಿಲ್ಲದ ಬಲವುಳ್ಳವನು, ರಾಕ್ಷಸರೆಂಬ ಕಾರಡವಿಯನ್ನು ದಹಿಸುವಂತಹಾ ಕಾರ್ಗಿಚ್ಚು, ಜ್ಞಾನಿಗಳಲ್ಲಿ ಅಗ್ರಗಣ್ಯನೂ ಹಾಗೆಯೇ ಎಲ್ಲಾ ಸದ್ಗುಣಗಳಿಗೂ ನಿಲಯನಾಗಿರುವವನೂ, ವಾನರಶ್ರೇಷ್ಠನೂ, ಶ್ರೀರಾಮ ಪ್ರಭುವಿನ ಶ್ರೇಷ್ಠ ದೂತನೂ ಆದ ಪವನ ಕುಮಾರನಾದ ಆಂಜನೇಯನಿಗೆ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀಮಹಾವಿಷ್ಣುವಿನ ಅವತಾರವಾದ ಶ್ರೀರಾಮಚಂದ್ರನ ಭಕ್ತಾಗ್ರೇಸರನಾದ ಶ್ರೀ ಆಂಜನೇಯನು, ಲೋಕ ಪ್ರಸಿದ್ಧರಾದ ಅಶ್ವತ್ಥಾಮ, ಬಲಿಚಕ್ರವರ್ತಿ, ವ್ಯಾಸಮಹರ್ಷಿ, ವಿಭೀಷಣ,ಕೃಪಾಚಾರ್ಯ ,ಪರಶುರಾಮ ಎಂಬ ಏಳು ಜನ ಚಿರಂಜೀವಿಗಳಲ್ಲಿ ಪದಕದಂತಹಾ ಪ್ರಕಾಶಿಸುತ್ತಿರುವವನು. ಅತ್ಯಂತ ಪರಾಕ್ರಮಗಳ, ವೈಭವಗಳ ಸಾಕಾರ ಮೂರ್ತಿ ಶ್ರೀಆಂಜನೇಯ. ಆಂಜನೇಯನ ಚರಿತ್ರೆ , ಆತ ಜನ್ಮಿಸಿದ ದಿನದಿಂದಲೇ ಹೆಜ್ಜೆ ಹೆಜ್ಜೆಗೂ ಅದ್ಭುತಗಳ ಅಮೃತಭಾಂಡವಾಗಿದೆ. ಹನುಮಂತನು ನೆನೆಸಿಕೊಂಡ ಕೂಡಲೇ ಮನೋವೇಗದಿಂದಲೇ ಯಾವ ಲೋಕಕ್ಕಾದರೂ ಕ್ಷಣಮಾತ್ರದಲ್ಲಿ ಸೇರಬಲ್ಲ ಸಾಮರ್ಥ್ಯ ಹೊಂದಿರುವ ಮಹಿಮಾನ್ವಿತ ಮೂರ್ತಿ.

ಭೂಮ್ಯಾಕಾಶಗಳಲ್ಲಿನ ಎಲ್ಲಾ ಲೋಕಗಳಲ್ಲೂ ಸಂಚರಿಸಿದವನು ಇಲ್ಲಿನ ಐದು ಲೋಕಗಳಲ್ಲಿ ಆತನಿಗೆ ಬಹಳ ಸಾನ್ನಿಹಿತ್ಯ ಏರ್ಪಟ್ಟಿದೆ. ಅವುಗಳು

1. ಸುಮೇರು ಪರ್ವತದಲ್ಲಿನ ಶೇಷಾಚಲ ಪರ್ವತ ಶ್ರೇಣಿಯಲ್ಲಿರುವ ಜನ್ಮಕ್ಷೇತ್ರವಾದ ಅಂಜನಾದ್ರಿ.
2. ವಿದ್ಯಾಕ್ಷೇತ್ರವಾದ ಸೂರ್ಯನ ಮಾರ್ಗವಾದ ನಭೋಮಂಡಲ.
3. ಕಾರ್ಯಕ್ಷೇತ್ರವಾದ ಕಿಷ್ಕಿಂಧೆ.
4. ಸೇವಾಕ್ಷೇತ್ರವಾದ ಶ್ರೀರಾಮನ ಜನ್ಮಭೂಮಿಯಾದ ಅಯೋಧ್ಯೆ.
5. ಶ್ರೀರಾಮಾವತಾರದ ಸಮಾಪ್ತಿಯಿಂದ ಇಂದಿನವರೆಗೂ ಆಂಜನೇಯನ ನಿತ್ಯನಿವಾಸಸ್ಥಾನವಾದ ಗಂಧಮಾದನ ಪರ್ವತ.
6. ಇನ್ನು ಆರನೆಯದು ಭೌತಿಕವಲ್ಲದ ,ರಾಮಭಕ್ತರ ಹೃದಯಗಳೆಲ್ಲವೂ ಹನುಮಂತನ ನಿವಾಸ ಸ್ಥಾನಗಳಾಗಿವೆ.

**1. ಹನುಮಂತನ ಜನ್ಮಕ್ಷೇತ್ರ :**

ಹನುಮಂತನ ಜನ್ಮಸ್ಥಳದ ವಿಷಯದಲ್ಲಿ ವಿವಿಧ ರೀತಿಯ ಪ್ರಾಂತಗಳಲ್ಲಿನ ಪ್ರಜೆಗಳು ಹನುಮಂತನ ಮೇಲಿರುವ ಭಕ್ತಿಯಿಂದಲೋ, ಸ್ಥಾನಿಕ ಪ್ರಜೆಗಳ ವಿಶ್ವಾಸಗಳಿಂದಲೋ, ಯಾರು ಎಷ್ಟೇ ವಿಧದಲ್ಲಿ ಹೇಳಿದರೂ ಮಹತ್ತರವಾದ ರಾಮಾಯಣ, ಮಹಾಭಾರತ ಪುರಾಣ ಇನ್ನಿತರ ಉತ್ತಮವಾದ ಸಾಹಿತ್ಯ ಪ್ರಮಾಣಗಳೆಲ್ಲವೂ ಸಮರ್ಥಿಸುವ ಏಕೈಕ ಸ್ಥಾನವೆಂದರೆ ತಿರುಮಲೆಯ ಅಂಜನಾದ್ರಿ!

**2. ಶ್ರೀಮದ್ರಾಮಾಯಣದಲ್ಲಿ ಹನುಮಂತನ ಜನ್ಮದ ಬಗೆಗಿನ ವಿವರಣೆ:**

ಹನುಮಂತನ ಜನ್ಮದ ಬಗೆಗೆ ಶ್ರೀಮದ್ರಾಮಾಯಣದಲ್ಲಿನ ಕಿಷ್ಕಿಂದಾಕಾಂಡದಲ್ಲಿ ಸಮುದ್ರೋಲ್ಲಂಘನೆ ಮಾಡುವ ಸಮಯದಲ್ಲಿ ಜಾಂಬವಂತನ ಮಾತಿನಲ್ಲಿ, ಸುಂದರ ಕಾಂಡದಲ್ಲಿ ಹನುಮಂತನು ಸೀತಾಮಾತೆಯೊಂದಿಗೆ ಸ್ವತಹ ತಾನೇ ಹೇಳಿದಾಗ ಹಾಗೆ ಉತ್ತರಕಾಂಡದಲ್ಲಿ ಅಗಸ್ತ್ಯ ಮಹರ್ಷಿಯ ಮಾತಿನಲ್ಲಿ ಮೂರು ಕಡೆಗಳಲ್ಲಿ ಈ ರೀತಿ ಪ್ರಸ್ತಾವಿಸಿದ್ದಾರೆ.

1. ಕಿಷ್ಕಿಂಧಾಕಾಂಡದಲ್ಲಿ ಜಾಂಬವಂತನು, ಹನುಮಂತನನ್ನು ಸಮುದ್ರೋಲ್ಲಂಘನೆಯನ್ನು ಮಾಡುವುದಕ್ಕೆ ಪ್ರೇರೇಪಿಸುತ್ತಾ ಆತನ ಜನ್ಮ ವೃತ್ತಾಂತವನ್ನು ಈ ರೀತಿ ತಿಳಿಸಿದ.

"ಓ ಹನುಮಾ! ನಿನ್ನ ತಾಯಿ ಪುಂಜಿಕಸ್ಥಲ ಎಂಬ ಅಪ್ಸರೆ. ಶಾಪದಿಂದಾಗಿ ವಾನರ ರೂಪವನ್ನು ಹೊಂದಿ ಅಂಜನಾ ಎಂಬ ಹೆಸರಿನಿಂದ ಕೇಸರಿ ಎಂಬ ವಾನರ ವೀರನ ಪತ್ನಿಯಾದಳು. ಆಕೆ ಒಮ್ಮೆ ಪರ್ವತಾಗ್ರದಲ್ಲಿ (ಅಚರತ್ ಪರ್ವತಸ್ಯಾಗ್ರೇ ಪ್ರಾವೃಂಡಂಬುದಸನ್ನಿಭೇ ಎಂದಿದ್ದಾರಾಗಲೀ ಆ ಪರ್ವತದ ಹೆಸರನ್ನು ಹೇಳಿಲ್ಲ). ಸಂಚರಿಸುತ್ತಾ ವಾಯುದೇವನ ಅನುಗ್ರಹದಿಂದ

**"ವೀರ್ಯವಾನ್ ಬುದ್ಧಿಸಂಪನ್ನಸ್ತವ ಪುತ್ರೋ ಭವಿಷ್ಯತಿ.**
**ಮಹಾಸತ್ತ್ವೋ ಮಹಾತೇಜಾ ಮಹಾಬಲಪರಾಕ್ರಮಃ ,**
**ಲಂಘನೇ ಪ್ಲವನೇ ಚೈವ ಭವಿಷ್ಯತಿ ಮಯಾ ಸಮಃ,**
**ಏವಮುಕ್ತಾ ತತಸ್ತುಷ್ಟಾ ಜನನೀ ತೇ ಮಹಾಕಪೇ --!,**
**ಗುಹಾಯಾಂ ತ್ವಾಂ ಮಹಾಬಾಹೋ!ಪ್ರಜಜ್ಞೇ ಪ್ಲವಗರ್ಷಭ!"**.

"ವೀರ್ಯವಂತನು, ಬುದ್ಧಿವಂತನು, ಮಹಾ ಸತ್ತ್ವ ಸಂಪನ್ನನು, ಮಹಾನ್ ತೇಜಸ್ವಿ, ಅಂತ್ಯವಿಲ್ಲದ ಬಲಪರಾಕ್ರಮಗಳನ್ನು ಹೊಂದಿದ ಪುತ್ರನು ಜನ್ಮಿಸುತ್ತಾನೆ"ಎಂದು ವರವನ್ನು ನೀಡಿದ. ಆ ಅನುಗ್ರಹದಿಂದ ನಿನ್ನ ತಾಯಿಯಾದ ಅಂಜನೆಯು ನಿನ್ನನ್ನು ಆ ಪರ್ವತ ಗುಹೆಯಲ್ಲಿ ಪ್ರಸವಿಸಿದಳು. ಎಂದು ಹೇಳಿದ. ಆದರೆ ಯಾವ ಪರ್ವತದ ಗುಹೆಯಲ್ಲಿ ಎಂಬ ವಿಷಯವನ್ನು ಇಲ್ಲಿ ಪ್ರಸ್ತಾವಿಸಿಲ್ಲ.

2. ಸುಂದರಕಾಂಡದಲ್ಲಿ ತನ್ನ ಜನ್ಮವೃತ್ತಾಂತವನ್ನು ಹನುಮಂತನು ತಾನೇ ಸ್ವತಃ ಸೀತಾದೇವಿಗೆ ಹೇಳಿದನು. ಶಂಬಸಾದನನೆಂಬ ರಾಕ್ಷಸನನ್ನು ಕೊಂದ ಕೇಸರಿಯೆಂಬ ವಾನರವೀರನಿಗೆ, ಆತನ ಪತ್ನಿಯಾದ ಅಂಜನಾದೇವಿಗೆ ವಾಯುದೇವನಿಂದ ತಾನು ಜನ್ಮಿಸಿದೆನೆಂದು ಹನುಮಂತನು ತಿಳಿಸಿದ.

**ಮಾಲ್ಯವಾನ್ನಾಮ ವೈದೇಹಿ! ಗಿರೀಣಾ ಮುತ್ತಮೋಗಿರಿಃ ,**
**ತತೋ ಗಚ್ಛತಿ ಗೋಕರ್ಣಂ ಪರ್ವತಂ ಕೇಸರೀ ಹರಿಃ,**
**ಸ ಚ ದೇವರ್ಷಿಭಿರ್ದಿಷ್ಟಃ ಪಿತಾ ಮಮ ಮಹಾಕಪಿಃ,**
**ತೀರ್ಥೇ ನದೀಪತೇಃ ಪುಣ್ಯೇ ಶಂಬಸಾದನಮುದ್ಧರನ್.**
**ಯಸ್ಯಾಹಂ ಹರಿಣಃ ಕ್ಷೇತ್ರೇ ಜಾತೋ ವಾತೇನ ಮೈಥಿಲಿ.**
**ಹನೂಮಾನಿತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ.**

ಇಲ್ಲಿಯೂ "ಪರ್ವತಗಳಲ್ಲಿ ಶ್ರೇಷ್ಠವಾದ ಮಾಲ್ಯವಂತವೆಂಬ ಪರ್ವತದಿಂದ ಕೇಸರಿ ಎಂಬ ಮಹಾ ಕಪಿವೀರನಾದ ನನ್ನ ತಂದೆ ಗೋಕರ್ಣಪರ್ವತಕ್ಕೆ ಹೋಗಿ ಅಲ್ಲಿ ಇರುವ ಸಾಗರ ತೀರದಲ್ಲಿ ದೇವತೆಗಳು, ಋಷಿಗಳು ಕೇಳಿಕೊಂಡಾಗ, ಶಂಬಸಾದನನೆಂಬ

ರಾಕ್ಷಸನನ್ನು ಸಂಹರಿಸಿದ. ಆ ಸಮಯದಲ್ಲಿ ಕೇಸರಿಯ ಪತ್ನಿಯಾದ ಅಂಜನಾದೇವಿಗೆ ನಾನು ಜನ್ಮಿಸಿದೆ, ನನಗೆ ಹನುಮಂತನೆಂದು ನಾಮಕರಣ ಮಾಡಿದರು. "ಎಂದು ಹೇಳಿದ. ಇಲ್ಲಿಯೂ ಯಾವ ಪ್ರದೇಶವೆಂದು ತಿಳಿಸಿಲ್ಲ. ಅಲ್ಲಿ ಪ್ರಸ್ತಾವಿಸಲಾಗಿರುವ ಮಾಲ್ಯವಂತ ಪರ್ವತವು ಹಿಮಾಲಯದ ಮೇಲ್ಭಾಗದ ಪೂರ್ವದಿಕ್ಕಿನಲ್ಲಿ ಮಾಲೆಯ ಆಕಾರದಲ್ಲಿ ಇರುವ ಪರ್ವತ ಶ್ರೇಣಿ. ಇದು ಕೇತುಮಾಲ, ಇಲಾವೃತ ಶ್ರೇಣಿಯನ್ನು ಬೇರ್ಪಡಿಸುತ್ತಿರುವ ಪರ್ವತ. ನೀಲ, ನಿಷಧ ಪರ್ವತಗಳವರೆಗೂ ಇದು ವ್ಯಾಪಿಸಿದೆ.(ಮಾಲ್ಯಂ– ಮಾಲಾಕಾರತ ವಿದ್ಯತೇ ಅತ್ರ ಇತಿ ಮಾಲ್ಯವಾನ್. ಸ ಚ ಕೇತುಮಾಲಾ–ಇಲಾವೃತವರ್ಷಯೋಃಸೀಮಾಪರ್ವತಃ–ಎಂದು ಭಾಸ್ಕರಾಚಾರ್ಯನ ಸಿದ್ಧಾಂತ ಶಿರೋಮಣಿ) ಈ ವಿಷಯವನ್ನು ಮತ್ಸ್ಯಪುರಾಣ, ವಿಷ್ಣುಪುರಾಣ, ಮಹಾಭಾರತ, ಭಾಸ್ಕಾರಾಚಾರ್ಯನ ಸಿದ್ಧಾಂತ ಶಿರೋಮಣಿ ಮುಂತಾದ ಗ್ರಂಥಗಳಲ್ಲಿ ತಿಳಿಸಲಾಗಿದೆ. ಅಲ್ಲಿಂದ ಕೇಸರಿ ಗೋಕರ್ಣಕ್ಕೆ ಬಂದನೆಂದು ತಿಳಿಯಬೇಕು. ಅಷ್ಟೇ ಹೊರತು ಆ ಮಾಲ್ಯವಂತ ಪರ್ವತ ಆಂಜನೇಯನ ಜನ್ಮಸ್ಥಳವೆಂದು ಹೇಳುವುದಕ್ಕೆ ಸ್ಪಷ್ಟವಾದ ಆಧಾರಗಳಿಲ್ಲ.

3. ಇನ್ನು ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿನ ಉತ್ತರ ಕಾಂಡದಲ್ಲಿ ಶ್ರೀರಾಮಚಂದ್ರನಿಗೆ ಅಗಸ್ತ್ಯ ಮಹರ್ಷಿಯು ಹನುಮಂತನ ವೃತ್ತಾಂತವನ್ನು ವಿವರಿಸುತ್ತಾ ಹೀಗೆ ಹೇಳಿದ.

**ಸೂರ್ಯದತ್ತವರಸ್ಸ್ವರ್ಣಃ ಸುಮೇರುರ್ನಾಮ ಪರ್ವತಃ,**
**ಯತ್ರ ರಾಜ್ಯಂ ಪ್ರಶಾಸ್ತ್ಯಸ್ಯ ಕೇಸರೀ ನಾಮ ವೈ ಪಿತಾ.**
**ತಸ್ಯ ಭಾರ್ಯಾ ಬಭೂವೇಷ್ಟಾ ಅಂಜನೇತಿ ಪರಿಶ್ರುತಾ,**
**ಜನಯಾಮಾಸ ತಸ್ಯಾಂ ವೈ ವಾಯುರಾತ್ಮಜಮುತ್ತಮಮ್.**

ಸೂರ್ಯನಿಂದ ವರವನ್ನು ಪಡೆದ "ಸುಮೇರು" ಎಂಬ ಪರ್ವತವಿದೆ. ಇದು ಹನುಮಂತನ ತಂದೆಯಾದ ಕೇಸರಿ ತನ್ನ ಅತಿ ವಿಶಾಲವಾದ ರಾಜ್ಯದಲ್ಲಿನ ಭಾಗವಾಗಿದೆ. ಆತನಿಗೆ ಪ್ರೀತಿಪಾತ್ರಳಾದ "ಅಂಜನಾ"ಎಂಬ ಪತ್ನಿ ಇದ್ದಾಳೆ. ಆಕೆಗೆ ವಾಯುದೇವನು ತನಗೆ ಅನುರೂಪನಾದ, ಉತ್ತಮನೂ ಆದ ಪುತ್ರರತ್ನವನ್ನು ನೀಡಿದ. ಆತನೇ ಹನುಮ!

ಇಲ್ಲಿ ಒಂದು ಆಸಕ್ತಿಕರವಾದ ವಿಷಯವೇನೆಂದರೆ ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ವರ್ಣಿಸಿರುವ ಸುಮೇರು ಪರ್ವತವೇ "ವೇಂಕಟಾಚಲ"ಎಂದು ಹೇಳುವುದಕ್ಕೆ "ಶ್ರೀ ವೇಂಕಟಾಚಲಮಹಾತ್ಮ್ಯಂ ನಲ್ಲಿನ ಅನೇಕ ಪುರಾಣ ಭಾಗಗಳಲ್ಲಿ ತಿಳಿಸಲಾಗಿದೆ.

ಶ್ರೀವೇಂಕಟಾಚಲಮಾಹಾತ್ಮ್ಯದಲ್ಲಿನ ಬ್ರಹ್ಮಪುರಾಣ ಭಾಗದಲ್ಲಿ ಹೇಳಿರುವ ಪ್ರಕಾರ, ಒಮ್ಮೆ ವಾಯುದೇವನಿಗೆ ಮತ್ತು ಆದಿಶೇಷನಿಗೆ ಉಂಟಾದ ಜಗಳದಲ್ಲಿನ ಅಂಗವಾಗಿ ಮೇರು ಪುತ್ರನಾದ ಸುಮೇರು ವಾಯುವಿನ ಪ್ರಭಾವದಿಂದಾಗಿ ಸುವರ್ಣಮುಖಿ ನದಿತೀರದವರೆಗು ಆಕಾಶ ಮಾರ್ಗದಲ್ಲಿ ಲಕ್ಷಯೋಜನೆಗಳಿಗಿಂತಲೂ ಹೆಚ್ಚಿನ ದೂರ ಹಾರಿಸಲ್ಪಟ್ಟವನಾದನು. ಈ ಸುಮೇರುವಿಗೆ ವೇಂಕಟನೆಂಬ ಹೆಸರು ಇತ್ತು. ಅದಕ್ಕೇ ಇದಕ್ಕೆ ವೇಂಕಟಾದ್ರಿ, ವೇಂಕಟಾಚಲ ಎಂದು ಕರೆಯಲ್ಪಡುತ್ತಿದೆ.

ಅಷ್ಟೇ ಅಲ್ಲದೇ–

**ಅಂಜನಾದ್ರಿರ್ವೃಷಾದ್ರಿಶ್ಚ ಶೇಷಾದ್ರಿರ್ಗರುಡಾಚಲಃ.**
**ತೀರ್ಥಾದ್ರಿಃ ಶ್ರೀನಿವಾಸಾದ್ರಿಶ್ಚಿಂತಾಮಣಿಗಿರಿಸ್ತಥಾ,**
**ವೃಷಭಾದ್ರಿರ್ವರಾಹಾದ್ರಿರ್ ಜ್ಞಾನಾದ್ರಿಃ ಕನಕಾಚಲಃ,**
**ಆನಂದಾದ್ರಿಶ್ಚ ನೀಲಾದ್ರಿಸ್ಸುಮೇರುಶಿಖರಾಚಲಃ –**

-ಇತ್ಯಾದಿ ಬ್ರಹ್ಮ ಪುರಾಣದಲ್ಲಿನ ಹೆಸರುಗಳನ್ನು ಅನುಸರಿಸಿ ಈ ವೇಂಕಟಾದ್ರಿಗೆ ಸುಮೇರು ಶಿಖರಾಚಲವೆಂಬ ಹೆಸರೂಇತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತಿದೆ.

**ಆ. ಮಹಾಭಾರತದಲ್ಲಿನ ವಿವರಣೆ:**

ಇನ್ನು ಮಹಾಭಾರತದ ವಿಷಯಕ್ಕೆ ಬಂದರೆ ವನಪರ್ವದಲ್ಲಿ ಹನುಮನು ಭೀಮನೊಂದಿಗೆ ಸಂಭಾಷಿಸುವ ಸಂದರ್ಭದಲ್ಲಿ,

**"ಅಹಂ ಕೇಸರಿಣಃ ಕ್ಷೇತ್ರೇ ವಾಯುನಾ ಜಗದಾಯುಷಾ,**
**ಜಾತಃ ಕಮಲಪತ್ರಾಕ್ಷ ಹನುಮಾನ್ನಾಮ ವಾನರಃ"**

ಎಂದು ತಾನು ವಾಯುದೇವನ ಅನುಗ್ರಹದಿಂದ ಕೇಸರಿಯ ಪತ್ನಿಯಾದ ಅಂಜನಾದೇವಿಗೆ ಪುತ್ರನಾಗಿ ಜನ್ಮಿಸಿದೆನೆಂದು ಹನುಮನು ಸ್ವತಃ ಹೇಳಿದ್ದಾನೆ.

ಈ ರೀತಿ ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಾಗಲೀ. ವ್ಯಾಸಮಹಾಭಾರತದಲ್ಲಾಗಲೀ, ಹನುಮಂತನ ಜನನೀ ಜನಕರ ಬಗೆಗಿನ ವರ್ಣನೆ, ವಾಯುದೇವನ ಬಗೆಗಿನ ವಿವರಣೆ, ಸ್ಪಷ್ಟವಾಗಿ ಕಂಡುಬರುತ್ತಿವೆ. ಆದರೆ ಆತನ ಜನ್ಮಸ್ಥಳದ ಬಗೆಗಿನ ವಿವರಣೆ ಎಲ್ಲೂ ಇಲ್ಲ. ಸೂಚನಪ್ರಾಯವಾಗಿ ಸುಮೇರುಶಿಖರಾಚಲ ಎಂದು ಹೇಳಲ್ಪಟ್ಟಿದೆ. ಈ ಸುಮೇರುಶಿಖರವೇ ವೇಂಕಟಾದ್ರಿ ಎಂದು, ವೇಂಕಟಾದ್ರಿಗೇ ಅಂಜನಾದ್ರಿ ಎಂಬ ಮತ್ತೊಂದು ಹೆಸರು ಇದೆ ಎಂದು ಬ್ರಹ್ಮಪುರಾಣಭಾಗದಲ್ಲಿ ಉದಹರಿಸಲ್ಪಟ್ಟಿದೆ.

**ಇ. ಪುರಾಣಗಳಲ್ಲಿ**

ನಂತರ ಪುರಾಣಗಳನ್ನು ಪರಿಶೀಲಿಸಿದರೆ, ಸ್ಕಂದಪುರಾಣದ ವೈಷ್ಣವ ಖಂಡದಲ್ಲಿನ 39, 40 ಅಧ್ಯಾಯಗಳಲ್ಲಿ, ಹನುಮಂತನ ಜನ್ಮವೃತ್ತಾಂತವನ್ನು ವಿವರವಾಗಿ ತಿಳಿಸಿದ್ದಾರೆ. ಅದು ಸ್ಕಂದಪುರಾಣದಲ್ಲಿ ಉತ್ತರ ಭಾರತ, ದಕ್ಷಿಣಭಾರತ ಪ್ರತಿಗಳೆಲ್ಲದರಲ್ಲೂ ಇದೆ. ಅಲ್ಲಿ ಹೇಳಿರುವ ರೀತಿಯಲ್ಲಿ ಹನುಮಂತನ ಜನ್ಮ ಈ ವೇಂಕಟಾದ್ರಿಯಲ್ಲಿನ ಆಕಾಶಗಂಗೆಯ ಬಳಿ ಸಂಭವಿಸಿದೆ ಎಂದು ತಿಳಿದುಬರುತ್ತಿದೆ. ಮತಂಗ ಮಹರ್ಷಿಯ ಸೂಚನೆಯ ಮೇರೆಗೆ ಈ ಪ್ರದೇಶದಲ್ಲಿ ಅಂಜನಾದೇವಿ ತಪಸ್ಸು ಮಾಡಿದ್ದರಿಂದ ಹನುಮಂತನು ಇಲ್ಲಿ ಜನ್ಮಿಸಿದನಾದ್ದರಿಂದ , ಬ್ರಹ್ಮನ ವರದಿಂದಾಗಿ ಈ ಪರ್ವತಕ್ಕೆ ಅಂಜನಾದ್ರಿ ಎಂದು ಹೆಸರು ಬಂದಿದೆ ಎಂದೂ ಅದೇ ಲೋಕಪ್ರಸಿದ್ಧಿ ಪಡೆಯಿತೆಂದು ಈ ಪುರಾಣವು ತಿಳಿಸುತ್ತಿದೆ.

ಇಲ್ಲಿ ಗಮನಿಸ ಬೇಕಾಗಿರುವ ವಿಷಯವೊಂದಿದೆ. ಅದೇನೆಂದರೆ ಈ ಸ್ಕಂದಪುರಾಣ ಆಧಾರದ ಮೇರೆಗೆ ಅಂಜನಾದೇವಿಯ ತಂದೆ ರಾಕ್ಷಸನೂ, ಮಹಾಬಲಶಾಲಿಯೂ ಆಗಿದ್ದ. ಆತನ ಹೆಸರು ಕೇಸರಿ. ಆಕೆಯ ಪತಿ ಓರ್ವ ಕಪಿವೀರ ಆತನ ಹೆಸರೂ ಕೇಸರಿಯೇ! ಈ ವಿಷಯವನ್ನು ಈ ಕೆಳಗಿನ ಶ್ಲೋಕಗಳಲ್ಲಿ ನೋಡಬಹುದು.

**ಮತಂಗ!ಮುನಿಶಾರ್ದೂಲ! ವಚನಂ ಮೇ ಶೃಣುಷ್ವ ಹ,**
**ಪಿತಾ ಮೇ ಕೆಸರೀ ನಾಮ ರಾಕ್ಷಸಃ ಶಿವತತ್ಪರಃ (ಸ್ಕಂದ ಪುರಾಣ-ಶ್ರೀವೈಷ್ಣವ ಖಂಡ-39 -4 ರಿಂದ 6)**

ಎಲೈ ಮುನಿಶ್ರೇಷ್ಠನೇ! ಮತಂಗ ಮಹರ್ಷಿಯೇ! ನನ್ನ ತಂದೆ ಕೇಸರೀ ಎಂಬ ರಾಕ್ಷಸನು ಮತ್ತು ಪರಮ ಶಿವಭಕ್ತ!

..........................................................................................................

**ತತಃ ಕಾಲಾಂತರೇ ವಿಪ್ರಃ ಕೇಸರ್ಯಾಖ್ಯೋ ಮಹಾಕಪಿಃ**
**ಯಯಾಚೇಮಾಂ ದದಸ್ವೇತಿ ಪಿತರಂ ಮೇ ತತಃ ಪಿತಾ.**
**ತಸ್ಮೈ ಮಾಂ ದತ್ತವಾಂಶ್ಚೈವ ಪಾರಿಬರ್ಹಂ ದದೌ ಚ ಸಃ,**

ಗವಾಂ ಲಕ್ಷಸಹಸ್ರಾಣಿ ಗಜಲಕ್ಷಂ ಮಹಾಮನಾಃ(ಸ್ಕಂದ ಪುರಾಣಂ–ಶ್ರೀವೈಷ್ಣವ ಖಂಡ 39–10,11 ಶ್ಲೋಕಗಳು)

ನಂತರ ಕೇಸರಿ ಎಂಬ ಹೆಸರು ಇರುವ ಒಬ್ಬ ವಾನರವೀರನು ನನ್ನ ತಂದೆಯ ಬಳಿ ಬಂದು ನನ್ನನ್ನು ಕನ್ಯಾದಾನ ಮಾಡಬೇಕೆಂದು ಕೇಳಿಕೊಂಡನು. ನನ್ನ ತಂದೆಯು ದೊಡ್ಡ ಮನಸ್ಸು ಮಾಡಿ, ನನ್ನನ್ನು ಆತನಿಗೆ ಕೊಟ್ಟು ವಿವಾಹ ಮಾಡಿದ. ಆ ವಿವಾಹದಲ್ಲಿ ನನಗೆ ಕಾಣಿಕೆಯಾಗಿ ಕೊಟ್ಯಾಂತರ ಹಸುಗಳನ್ನು, ಒಂದು ಲಕ್ಷ ಆನೆಗಳನ್ನು, ಹತ್ತು ಕೋಟಿ ಸಂಖ್ಯೆಗಳಷ್ಟು ಕುದುರೆಗಳನ್ನು, ರಥಗಳನ್ನು, ಅನೇಕ ವಸ್ತ್ರಗಳನ್ನು, ರತ್ನಗಳನ್ನು ಸಾವಿರಾರು ದಾಸದಾಸೀ ಜನರನ್ನು ನೃತ್ಯಗೀತೆಗಳಲ್ಲಿ ನಿಪುಣರಾದ ಅಂತಃಪುರ ಸ್ತ್ರೀಯರನ್ನು, ಸಾವಿರ ವಸ್ತ್ರಗಳನ್ನು ನೀಡಿದನು.

ಇಲ್ಲಿ ಹೇಳಿರುವ ಪ್ರಕಾರ ಅಂಜನಾದೇವಿ ತಂದೆಯ ಹೆಸರು ಕೇಸರಿ. ಆತ ರಾಕ್ಷಸ! ಆಕೆಯ ಪತಿಯ ಹೆಸರೂ ಕೇಸರಿ! ಆದರೆ ಆತ ಕಪಿವೀರ!

ಇದೇ ವಿಷಯವನ್ನು ಶ್ರೀವೇಂಕಟಾಚಲ ಮಾಹಾತ್ಮ್ಯೆಯಲ್ಲಿ ಬ್ರಹ್ಮಾಂಡ ಪುರಾಣದ ಭಾಗದಲ್ಲೂ ನೀಡಲಾಗಿದೆ.

**ತ್ರೇತಾಯುಗೇಽಸುರಃ ಕಶ್ಚಿತ್ ಕೇಸರೀತ್ಯೇವ ವಿಶ್ರುತಃ**
**(ಬ್ರಹ್ಮಾಂಡಪುರಾಣೇ ತೀರ್ಥಖಂಡೇ ಭೃಗುನಾರದ ಸಂವಾದೇ 54 ಶ್ಲೋಕ)**

ತ್ರೇತಾಯುಗದಲ್ಲಿ ಕೇಸರಿ ಎಂಬ ಅಸುರನು ಬಹಳ ಪ್ರಸಿದ್ಧನಾಗಿದ್ದ.

**ತತಃ ಕಪಿವರಃ ಕಶ್ಚಿತ್ ಕೇಸರೀತಿ ಭುವಿ ವಿಶ್ರುತಃ**
**ಅಭಿಗಮ್ಯ ಯಯಾಚೇ ತಾಂ ಕನ್ಯಾಂ ಯೌವನಶಾಲಿನೀಮ್**
**(ಬ್ರಹ್ಮಾಂಡಪುರಾಣೇ ತೀರ್ಥಖಂಡೇ ಭೃಗುನಾರದಸಂವಾದೇ 68 ಶ್ಲೋಕ)**

ರಾಕ್ಷಸನಾದ ಕೇಸರಿಗೆ ಶಿವನ ವರದಿಂದ ಹುಟ್ಟಿದ ಮಗಳಾದ ಅಂಜನಾದೇವಿ ಯೌವ್ವನವತಿಯಾಗುತ್ತಲೇ ಕೇಸರಿ ಎಂಬ ಹೆಸರನ್ನು ಹೊಂದಿರುವ ಒಬ್ಬ ಕಪಿ ಶ್ರೇಷ್ಠನು ತನಗೆ ಆಕೆಯನ್ನು ನೀಡಿ ವಿವಾಹ ಮಾಡು ಎಂದು ಕೇಳಿಕೊಂಡನು. ಆಕೆಯ ತಂದೆ ಅದಕ್ಕೆ ಅಂಗೀಕರಿಸಿ ಅವರ ವಿವಾಹವನ್ನು ಮಾಡಿದನು.

ಈ ರೀತಿ ಎರಡು ಪುರಾಣಗಳಲ್ಲಿ (ಸ್ಕಂದ ಸಾಕ್ಷಾತ್ತು ಪುರಾಣವೇ) ಬ್ರಹ್ಮಾಂಡಪುರಾಣದ ಭಾಗದ ಶ್ರೀವೇಂಕಟಾಚಲಮಹಾತ್ಮ್ಯೆಯಲ್ಲಿ ಇರುವ ಭಾಗದಲ್ಲಿ ಈ ವೃತ್ತಾಂತವು ಬಹಳ ವಿವರವಾಗಿದೆ. ಹಾಗೆಯೇ ಈ ಎರಡೂ ಗ್ರಂಥಗಳಲ್ಲಿ ಹನುಮಂತನು ಹುಟ್ಟಿದ ಅಂಜನಾದ್ರಿ ತಿರುಮಲೆಯ ಗಿರಿಯಾದ ವೇಂಕಟಾದ್ರಿಯೇ ಎಂದು ಹೇಳಲಾಗಿದೆ. ಹಾಗೆಯೇ ಬ್ರಹ್ಮಾಂಡ ಪುರಾಣ ತೀರ್ಥಖಂಡೇ ಭೃಗು ನಾರದ ಸಂವಾದೇ ಐದವ ಅಧ್ಯಾಯದಲ್ಲಿ –

**ಅಂಜನೇ ತ್ವಂ ಹಿ ಶೇಷಾದ್ರೌ ತಪಸ್ತಪ್ತ್ವಾ ಸುದಾರುಣಮ್**
**ಪುತ್ರಂ ಸೂತವತೀ ಯಸ್ಮಾಲ್ಲೋಕತ್ರಯಹಿತಾಯ ವೈ.**

**ಪ್ರಸಿದ್ಧಿಂ ಯಾತು ಶೈಲೋ?ಯಮಂಜನೇ! ನಾಮತಸ್ತವ**
**ಅಂಜನಾಚಲ ಇತ್ಯೇವ ನಾತ್ರ ಕಾರ್ಯಾ ವಿಚಾರಣಾ.**
**ಇತಿ ತಸ್ಯೈವರಂ ದತ್ವಾ ದೇವಾ ಬ್ರಹ್ಮಪುರೋಗಮಾಃ,**
**ಸ್ವಂ ಸ್ವಂ ಸ್ಥಾನಂ ಸಮುದ್ದಿಶ್ಯ ಯಥಾಗತಮಥೋ ಯಯುಃ,**
**ಅಂಜನಾ ಪುತ್ರಮಾದಾಯ ಶ್ರೀವೇಂಕಟಗಿರಿಸ್ತಟಮ್,**
**ಪುನರಾಗಮ್ಯ ಸಾಮೋದಮಲಂಚಕ್ರೇ ನಿಜಾಶ್ರಮಮ್**

**– (ಬ್ರಹ್ಮಾಂಡ ಪುರಾಣ ತೀರ್ಥಖಂಡ ಭೃಗುನಾರದ ಸಂವಾದೇ 5ನೆಯ ಅಧ್ಯಾಯದಲ್ಲಿನ 68ನೆಯ ಶ್ಲೋಕ)**

"ಹೇ ಅಂಜನಾ! ನೀನು ಈ ಶೇಷಾದ್ರಿಯ ಮೇಲೆ ಘೋರವಾದ ತಪಸ್ಸನ್ನು ಮಾಡಿ ಈ ಪುತ್ರನನ್ನು ಲೋಕದ ಶ್ರೇಯಸ್ಸಿಗಾಗಿ ಜನ್ಮ ನೀಡಿದ್ದೀಯ. ಆದ್ದರಿಂದ ಈ ವೇಂಕಟ ಗಿರಿ ಅಥವಾ ಶೇಷಾದ್ರಿ ಇನ್ನು ಮುಂದೆ ನಿನ್ನ ಹೆಸರಿನಲ್ಲೇ ಅಂಜನಾದ್ರಿ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬರುತ್ತದೆ" ಎಂದು ಹೇಳಿ ಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಲೋಕಕ್ಕೆ ಹೊರಟುಹೋದರು. ನಂತರ ಅಂಜನಾದೇವಿ ಆನಂದದಿಂದ ತನ್ನ ಮಗನೊಂದಿಗೆ ಶ್ರೀವೇಂಕಟಗಿರಿಯಲ್ಲಿನ ತನ್ನ ಆಶ್ರಮವನ್ನು ತಲುಪಿದಳು.

ಈ ರೀತಿ ಶ್ರೀಸ್ಕಾಂದ ಪುರಾಣದಲ್ಲೂ, ಶ್ರೀವೇಂಕಟಾಚಲಮಾಹಾತ್ಮ್ಯ ಎಂಬ ಗ್ರಂಥದಲ್ಲಿನ ಭಾಗದಲ್ಲಿರುವ ಬ್ರಹ್ಮಾಂಡಪುರಾಣ ಭಾಗದಲ್ಲಿ ಇರುವ ಶ್ರೀಹನುಮಜ್ಜನ್ಮ ವೃತ್ತಾಂತ, ತಿರುಮಲೆಯಲ್ಲಿನ ಅಂಜನಾದ್ರಿಯೇ ಜನ್ಮಸ್ಥಳ ಎಂದು ಹೇಳುವ ವಿಶೇಷ ಸಂದರ್ಭದಲ್ಲಿ ಈ ಗ್ರಂಥದಲ್ಲೇ ಆರನೆಯದಾದ ಪೌರಾಣಿಕ ಪ್ರಮಾಣಗಳು ಎಂಬ ವ್ಯಾಸದಲ್ಲಿ ವಿವರಿಸಲಾಗಿದೆ.

ಶ್ರೀವೇಂಕಟಾಚಲಮಾಹಾತ್ಮ್ಯೆಯಲ್ಲಿನ ವರಾಹಪುರಾಣಭಾಗದಲ್ಲಿ (36ನೆಯ ಅಧ್ಯಾಯದಲ್ಲಿ 28,29 ಶ್ಲೋಕಗಳು) ಕೂಡಾ ಕಲಿಯುಗದಲ್ಲಿನ ವೇಂಕಟಾದ್ರಿಯೇ. ತ್ರೇತಾಯುಗದಲ್ಲಿ ಅಂಜನಾದ್ರಿ ಎಂಬ ವಿಷಯವನ್ನು ತಿಳಿಸಿದ್ದಾರೆ.

**ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಮ್ ಅಂಜನಾಚಲಂ,**
**ದ್ವಾಪರೇ ಶೇಷಶೈಲೇತಿ ಕಲೌ ಶ್ರಿವೇಂಕಟಾಚಲಮ್**
**ಅಂಜನಾ ಚ ತಪಃ ಕೃತ್ವಾ ಹನೂಮಂತಮಜೀಜನತ್,**
**ತದಾ ದೇವಾಸ್ಸಮಾಗತ್ಯ ದೇವಸಾಹಾಯ್ಯಕಾರಕಮ್,**
**ಯಸ್ಮಾತ್ ಪುತ್ರಮಸೂತಾಽಸೌ ಜಗುಃ ತಸ್ಮಾತ್ ಇಮಂಗಿರಿಮ್ ಅಂಜನಾದ್ರಿಮ್**

ಎಂದು ತಿಳಿಸಿದ್ದಾರೆ. ಅಂದರೆ ಅಂಜನಾದೇವಿಯು ಪುತ್ರನನ್ನು ಹೊಂದಿದ ಪರ್ವತವಾದ್ದರಿಂದ ಇದು ಅಂಜನಾದ್ರಿ ಆಗಿದೆ.

ಇಂತಹಾ ಉದಾಹರಣೆಗಳು ವಿವಿಧ ಪ್ರಾಚೀನ ಇತಿಹಾಸ, ಪುರಾಣಗ್ರಂಥಗಳಲ್ಲಿ ಇತರ ಸ್ಥಳಗಳಿಗೆ ಹನುಮಂತನ ಜನ್ಮ ಭೂಮಿಯಾಗಿ ಸಮರ್ಥಿಸುವ ರೀತಿಯಲ್ಲಿ ಕಂಡುಬರುವುದಿಲ್ಲ.

ಆದ್ದರಿಂದ ಮೇಲಿನ ಪ್ರಮಾಣಗಳ ಆಧಾರದ ಮೇಲೆ ಹನುಮಂತನ ಜನ್ಮ ಕ್ಷೇತ್ರವಾದ ವೇಂಕಟಾದ್ರಿಯಲ್ಲಿ ಆಕಾಶಗಂಗೆಯ ಪ್ರಾಂತವನ್ನು ಅಂಜನಾದ್ರಿ ಎಂದು ನಿರ್ಧರಿಸಬಹುದು.

**ಈ). ಹನುಮಂತನ ಬಾಲ್ಯ :**

ಬ್ರಹ್ಮಾಂಡ ಪುರಾಣದಲ್ಲಿ ಹೇಳಿರುವ ರೀತಿಯಲ್ಲಿ ಬ್ರಹ್ಮಾದಿ ದೇವತೆಗಳು ಹನುಮಂತನಿಗೆ ಅನೇಕ ವರಗಳನ್ನಿತ್ತು, ಹನುಮಂತನ ತಾಯಿಯಾದ ಅಂಜನಾದೇವಿಗೆ ನೀನು ಇಲ್ಲಿ ಹನುಮಂತನಿಗೆ ಜನ್ಮವನ್ನು ನೀಡಿದೆಯಾದ್ದರಿಂದ ಈ ವೇಂಕಟಾದ್ರಿ ಅಂಜನಾದ್ರಿ ಎಂಬ ಹೆಸರನ್ನು ಪಡೆಯುತ್ತದೆಂದು ವರವನ್ನಾಗಿ ನೀಡಿ ಹೊರಟಿಹೋದನು.

ನಂತರ ––

**ಅಂಜನಾ ಪುತ್ರಮಾದಾಯ ಶ್ರೀವೇಂಕಟಗಿರೇಸ್ತಟಮ್,**
**ಪುನರಾಗಮ್ಯ ಸಾಮೋದಲಂಚಕ್ರೇ ನಿಜಾಶ್ರಮಮ್** ––68

ಅಂಜನಾದೇವಿ ತನ್ನ ಮಗನನ್ನು ಕರೆದುಕೊಂಡು ಬಂದು ಆನಂದದಿಂದ ಶ್ರೀವೇಂಕಟಗಿರಿ ತಟದಲ್ಲಿರುವ ತನ್ನ ಆಶ್ರಮವನ್ನು ಸೇರಿ ಸುಖವಾಗಿ ಜೀವಿಸಿದಳು.

–ಇತಿ ಶ್ರೀಬ್ರಹ್ಮಾಂಡಪುರಾಣೇ ತೀರ್ಥಖಂಡೆ ಶ್ರೀವೇಂಕಟಾಚಲಮಾಹಾತ್ಮ್ಯ ಅಂಜನಾಚಲಾಭಿಧಾನ ಹೇತುಕಥನೇ 5ನೆಯ ಅಧ್ಯಾಯ:

ಇದರ ಪ್ರಕಾರ ಆಂಜನೇಯನ ಜನ್ಮಸ್ಥಳವೇ ಅಲ್ಲದೇ ತನ್ನ ತಾಯಿಯೊಂದಿಗೆ ಆತ ಈ ಪರ್ವತದಲ್ಲಿ ಮತ್ತಷ್ಟು ಕಾಲ ಇದ್ದನೆಂದು ವಿಷಯವನ್ನು ಗ್ರಹಿಸಬಹುದು.

**ಉ. ವೇಂಕಟಾದ್ರಿಯಲ್ಲಿನ ತೀರ್ಥಗಳೊಂದಿಗೆ ಆಂಜನೇಯನ ಸಂಬಂಧ:**

ಈ ಸಮಯದಲ್ಲೇ ಅಂದರೆ ಹನುಮಂತನ ಬಾಲ್ಯದಲ್ಲೇ –– ಬ್ರಹ್ಮಾಂಡ ಪುರಾಣದಲ್ಲಿ ಪ್ರಸ್ತಾಪಿಸಿದಂತೆ ಅಲ್ಲಿರುವ ತೀರ್ಥಗಳಲ್ಲಿ ಎರಡು ತೀರ್ಥಗಳು ಆಂಜನೇಯನಿಗೆ ಸಂಬಂಧಿಸಿದ್ದಾಗಿವೆ.

**ವಾಯುವ್ಯಾಂ ದಿಶಿ ತೀರ್ಥಾನಿ ಚೋತ್ತರಾಸ್ಯಾಂ ತಥೈವ ಚ** , 16

**ಋಷಿತೀರ್ಥಂ ಮಹಾಪುಣ್ಯಂ ಶತಾನಂದಂ, ಸುತೀಕ್ಷ್ಣಕಂ** ,

**ವೈಭಾಂಡಕಂ ಮಹಾಪುಣ್ಯಂ ಬಿಲ್ವತೀರ್ಥಮತಃಪರಮ್** 17

